START

START

MICRO FILMED
BY

KARNATAKA STATE
ARCHIVES

1991

MICRO FILMED
BY

KARNATAKA STATE
ARCHIVES

1991

ARS 38 APP 90-91

"ಪ್ರಿಯಂವದ" ಮಾಸ ಪತ್ರಿಕೆ

ಫೆಬ್ರುವರಿ 1948 ರ ಪ
289 ರಿಂದ ಮುಂದುವರಿಸಿದೆ

ARS 38 APP 90-91

"ಪ್ರಜಾಮತ" ಮಾಸಿಕ ಪತ್ರಿಕೆ

ಫೆಬ್ರುವರಿ 1948 ರಿಂದ

289 ರಿಂದ ಮುಂದುವರಿಸಲಾಗಿದೆ

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ಏಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಿಣಿ

ಮ್ಯಾನೇಜರ್
ಎಮ್. ಗೋವರ್ಧನರಾವ



ರೀಟಾ: ತಲೆಯ ಕೂದಲನ್ನು ಬೆಳೆಸುವುದು.

ರೀಟಾ ಮೆದುಳಿಗೆ ಶಕ್ತಿಯನ್ನು ಕೊಟ್ಟು, ನಿರುಗುವ ನೀಳವಾದ ಕೂದಲನ್ನು ಬೆಳೆಸಲು ಅದ್ಭುತವಾದ ಹೇರ್ ಟಾನಿಕ್.

ರೀ ಟಾ

ತಲೆಯ ಕೂದಲು ಉದುರುವದು, ನೆರೆಯುವದು, ಹೊಟ್ಟು, ಉದುರುವುದು, ಕಟ್ಟಿತಲೆ, ಹೇನಿನ ಬಾಧೆ, ಇವೇ ಮೊದಲಾದ ತಲೆಯ ಕೂದಲಿಗೆ ಸಂಬಂಧಿಸಿದ ಸಮಸ್ತ ವ್ಯಾಧಿಗಳಿಗೂ ರೀಟಾ ಅಮೋಘವಾದ ಗುಣಕಾರಿ.

ಈಗಾಗಲೆ ಸಾವಿರಾರು ಜನ ಉಪಯೋಗಿಸಿ ಗುಣವನ್ನು ಹೊಂದಿದ್ದಾರೆ, ನೀವು ಕೂಡ ಇಂದಿನಿಂದಲೇ ರೀಟಾವನ್ನು ಉಪಯೋಗಿಸಿರಿ.

RITA
HAIR TONIC

ರೀಟಾ ಹಿಂದುಸ್ತಾನದಲ್ಲೆಲ್ಲಾ ದೊರಕುವುದು. ಬೆಲೆ:— ಸೀಸೆ ೧ಕ್ಕೆ ೧೫ ಆಣೆ.

Printed by Mr. V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar.—556-47.

Союз

ಸಾದರ ಸ್ವೀಕಾರ

★

೧೫೩. **ಅಂಕುಶ** (ವಾರಪತ್ರಿಕೆ) ಧಾರವಾಡದಲ್ಲಿ ಹೊಸತಾಗಿ ಹೊರಟಿದೆ. ಸಂಪಾದಕರು: ಶ್ರೀ. ಭೀ. ಸು. ಪಾಟೀಲ, ಬಿ. ಎ., ಎಲ್‌ಎಲ್. ಬಿ. ಅಂಕುಶ ಕಾರ್ಯಾಲಯ, ಸ್ಟೇಶನ್ ರೋಡು, ಧಾರವಾಡ. ವಾ. ಚಂದಾ ೬—೦—೦. ಬಿಡಿಸಂಚಿಕೆಗೆ ೦—೨—೦.

ನಮ್ಮಲ್ಲಿ ಇರುವ ಪತ್ರಿಕೆಗಳು ಹೆಚ್ಚಾಗಿ ರಾಜಕೀಯ ಪಕ್ಷ-ಪ್ರಚಾರಕ ಪತ್ರಿಕೆಗಳಾಗಿವೆ. ರಾಜಕೀಯ ಪಕ್ಷಗಳು ಅಧಿಕಾರದ ಆಶೆಗಾಗಿ ಕಜ್ಜಾಯಪತ್ತಿವೆಯಲ್ಲದೆ, ಕೇವಲ ಶಾಂತಿಮಯ ಜೀವನವನ್ನು ಅಪೇಕ್ಷಿಸುವ ಜನತೆಯ ಸುಖ-ಸಮಾಧಾನಗಳ ವಿಚಾರವನ್ನೇ ಮಾಡುತ್ತಿರುವುದಿಲ್ಲ. ಎಲ್ಲ ಪಕ್ಷಗಳೂ ಜನತೆಯ ಸುಖ-ಸಮಾಧಾನವ ಬಯಲುಮಾತನ್ನೆ ಆಡುವುವಾದರೂ, ಆ ಮಾತು ಅಧಿಕಾರಸಾಧನೆಗಾಗಿ ಇರುವುದೆಂಬುದು ಇದುವರೆಗಿನ ಅನುಭವವಾಗಿದೆ. 'ಅಂಕುಶ' ಯಾವ ಪಕ್ಷಪ್ರಚಾರಕ್ಕಾಗಿ ಹೊರಟಂತಿಲ್ಲ. ಸರ್ವಜನರ ಸುಖಜೀವನಕ್ಕಾಗಿ ಆಡಳಿತದ ಅನೆ ಸರಿಯಾಗಿ ಸಾಗುವಂತೆ, ಈ 'ಅಂಕುಶ' ಕಾರ್ಯಮಾಡುತ್ತ ಬಹುಕಾಲ ಬಾಳಲಿ.

೧೫೪. **ಧಾರವಾಡದ ಆದರ್ಶ ವಿದ್ಯಾರ್ಥಿನಿಲಯದ ವಾರ್ಷಿಕ ವರದಿ.** (೧೯೪೬-೪೭). ನಿಲಯದ ವ್ಯವಸ್ಥಾಪಕರು ಶ್ರೀ. ಅರ್ಜುನಗಿ ರಾಮಣ್ಣ ಅವರು.

ಇಂದು ನಗರಜೀವನದಲ್ಲಿ ವಿದ್ಯಾರ್ಥಿಗಳನ್ನು ಸುಸಂಸ್ಕಾರದಿಂದ ತಪ್ಪಿಸುವ ಸಾಧನಗಳು ಬೇಕಾದಷ್ಟಿವೆ. ಉಚ್ಚಶಿಕ್ಷಣ ಪಡೆಯಬೇಕೆಂಬ ವಿದ್ಯಾರ್ಥಿ ಪಟ್ಟಣಗಳಿಗೆ ಬಾರದೆ ಗತಿಯಿಲ್ಲ. ಜೀವನಕ್ಕೆ 'ಆದರ್ಶ' ವಿರಬೇಕೆಂದು ಹೇಳುವ ಮಾತು ಈಗ ಲಜ್ಜೆಯ ಕತೆಯಂತೆ ನಗೆಗೀಡಾಗಿದೆ. ಆದರೆ ಆದರ್ಶಜೀವಿಗಳಿಲ್ಲದ ನಾಡು ಎಂದೂ ಬೆಳಕನ್ನು ಪಡೆಯಲಾರದು. ಇಂತಹ ಆದರ್ಶಜೀವಿಗಳನ್ನು ನಿರ್ಮಿಸಬೇಕೆಂಬ ಒಳ್ಳೆಯ ಉದ್ದೇಶದಿಂದ ಈ ಛಾತ್ರಾಲಯವು ಪ್ರಾರಂಭವಾಗಿ ಮೆಲ್ಲಡಿಯಿಂದ ಸಾಗಿದೆ. ಇದರ ಪ್ರಯೋಜನವನ್ನು ಅರಿತು ಕನ್ನಡ ಜನರು ಇದಕ್ಕೆ ಬೆಂಬಲಿಗರಾಗಿ ನಿಂತರೆ, ಇದರ ಹೆಜ್ಜೆ ತೀವ್ರತರದ್ದಾಗಬಹುದು. ಮುಂಬಯಿಯ ಸುಪ್ರಸಿದ್ಧ ಕನ್ನಡ ವ್ಯಾಪಾರಿಗಳಾದ ಶ್ರೀ. ಎಸ್. ಎಸ್. ಪಾಟೀಲರವರು ಈ ಸಂಸ್ಥೆಗೆ ೧೦೦೦೦ ರೂ.ಗಳನ್ನು ಕೊಟ್ಟಿರುವರು. ಇವರಂತೆಯೆ ಎಲ್ಲ ಕನ್ನಡ 'ಶ್ರೀಯುತರು ಉದಾರಿಗಳಾದರೆ' ಈ ಆದರ್ಶ ವಿದ್ಯಾರ್ಥಿನಿಲಯ, ಅನ್ವರ್ಥಕವಾಗಿ ನಿಲ್ಲಬಹುದು. ನಿಲಯಾಧಿಕಾರಿಗಳ ಸಾಹಸ ಪ್ರಶಂಸನೀಯವಾಗಿದೆ.

೧೫೫. **ಧಾರವಾಡದ ಸಮಾಜ ಪುಸ್ತಕಾಲಯದ ಕನ್ನಡ ಕ್ಯಾಲೆಂಡರು** (೧೯೪೮). ಹಿಂದೂ ತಿಥಿಗಳನ್ನೂ ತಿಳಿಸುವುದು.

೧೫೬. **ರಾಮರಾಜ್ಯ** (ಹೊಸ ಪಕ್ಷಪತ್ರಿಕೆ). ಸಂಪಾದಕರು ಶ್ರೀ ಎಚ್. ವಿ. ವರದರಾಜನ್. ಸಹಸಂಪಾದಕರು ಶ್ರೀ. ಚಕ್ರಪಾಣಿ ಎಚ್. ಪಿ. ಅವರು. ನಂ. ೪. ಡಾ. ಉಮರ್ ಶರೀಫ್ ರೋಡು, ಬಸವನಗುಡಿ— ಬೆಂಗಳೂರು ನಗರ. ಕ್ರೌ. ೧೭ ಪುಟಗಳು.

೧೫೭. **ವಿವೇಕ** (ಏಕಾಂಕ ನಾಟಕ) ಬರೆದವರು: ಶ್ರೀಮಾನ್ ವಾಪಟೀ ಚೆನ್ನಪ್ಪನವರು. ಪ್ರಕಾಶಕರು: ಶ್ರೀ. ಐ. ಆರ್. ಅಕಳವಾಡಿ ಅಂಡ್ ಸನ್ಸ್, ರಾಮಾಶ್ರಯ ಬುಕ್ ಡಿಪೊ, ಧಾರವಾಡ. ಪೂ. ೨. ೨೮ ಪುಟಗಳು. ಬೆಲೆ ೦—೪—೦

೧೫೮. **ಬಲಿದಾನ** (ಚಿಕ್ಕ ನಾಟಕ). ಬರೆದವರು: ಶ್ರೀ ಎಂ. ಎಂ. ಮರಕಟ್ಟಿ, ಸವದತ್ತಿ. ಪ್ರಕಾಶಕರು: ಶ್ರೀ. ಎಚ್ ಬಿ. ನವಲೂರ, ಹಿಂದಮಾತಾ ಪ್ರೆಸ್, ಧಾರವಾಡ. ಕ್ರೌ. ೨ ೧೬ ಪುಟಗಳು. ಬೆಲೆ ೦—೪—೦.

೧೫೯. **ಕಾಮುಶಿಕ್ಷಣ** (ಕಾಮುವಿಜ್ಞಾನ ಪರಿಚಯ) ಬರೆದವರು: ಡಾ. ದೊಡ್ಡೇರಿ ವೆಂಕಟಗಿರಿರಾವ್. ಪ್ರಕಾಶಕರು ಸಾಧನ ಪ್ರಕಟನಾಲಯ, ಸಾಗರ—ಶಿವಮೊಗ್ಗ. ಕ್ರೌ. ೨. ೬೬ ಪುಟಗಳು. ಬೆಲೆ ೧—೦—೦.

೧೬೦. **ವರ್ಧಾ ಶಿಕ್ಷಣ ಮತ್ತು ಕ್ಯಾಶ್ಪನ್ ಲಕ್ಷ್ಮೀರಾಣಿ** (ಲಾವಣಿಗಳು). ಬರೆದವರು: ಶ್ರೀ. ರೇವಣಸಿದ್ದಯ್ಯಾ ಮಲ್ಲಿಕಾರ್ಜುನಯ್ಯಾ ಪ್ಯಾಟೀಮಠ, ಸಂಗೂರು, ಜಿಲ್ಲಾ ಧಾರವಾಡ. ಲೇಖಕರೇ ಪ್ರಕಾಶಕರು. ಪೂ. ೨. ೮ ಪುಟಗಳು. ಬೆಲೆ ೦—೨—೦.

೧೬೧. **ವರ್ಧಾ ಶಿಕ್ಷಣದ ೧ನೆಯ ವರ್ಗದ ಸುಂದರ ಕವಿತೆಗಳು** (ಸಂಗ್ರಹ). ಲೇಖಕರು ಪ್ರಕಾಶಕರು ಮೇಲಿನ ಶ್ರೀ. ಪ್ಯಾಟೀಮಠ ಅವರು. ಪೂ. ೨. ೮ ಪುಟಗಳು. ಬೆಲೆ ೦—೧—೦.

೧೬೨. **ವಿಜ್ಞಾನ ಎಫಿಮೆರಿಜ್** (೧೯೪೮ನೆಯ ವರ್ಷದ ವಿಜ್ಞಾನ ನಿಶ್ಯಸ್ಫುಟ ಪಂಚಾಂಗ). ಇಂಗ್ಲಿಷ್ ಪದ್ಧತಿಯ ನಿರಯನ ಪಂಚಾಂಗವಿದು. ಜ್ಯೋತಿಷಿಗಳು ಶ್ರೀಮಾನ್ ಎಂ. ಆರ್. ಭೀಮಾಚಾರ್ಯರು, ಅಸ್ಟ್ರಾಲಾಜಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಮುಂಬಯಿ ೨೫. ಕ್ರೌ. ೨. ೩೨ ಪುಟಗಳು. ಬೆಲೆ ೧—೦—೦. ಜ್ಯೋತಿಷ ಪ್ರಿಯರಿಗೆ ತುಂಬ ಉಪಯುಕ್ತವಾಗಿದೆ.

೧೬೩. **ಮುಂಬಯಿ ಸಂಯುಕ್ತ ಕರ್ನಾಟಕ ಸಂಘದ ೭ನೆಯ ವರುಷದ ವರದಿ.** ಸಂಯುಕ್ತ ಕಾರ್ಯದರ್ಶಿಗಳು ಶ್ರೀ. ಎಚ್. ಎಸ್. ಪಾಟೀಲರು ಮತ್ತು ಶ್ರೀ. ಕೆ. ಎನ್. ಗಾಯಿತೊಂಡೆ. ಕಾರ್ಯಾಲಯ: ಪ್ರಾಸ್ಪೆಕ್ಟ್ಸ್ ಚೇಂಬರ್ಸ್, ಹಾರ್ನ್‌ಬಿ ರೋಡ್—ಮುಂಬಯಿ. ಡೆ. ಅ. ೧೬ ಪುಟಗಳು.

ಮುಂಬಯಿಯಲ್ಲಿರುವ ಎಲ್ಲ ಭಾಗದ ಕನ್ನಡಿಗರನ್ನೂ ಒಂದುಗೂಡಿಸಿ ಕಾರ್ಯಮಾಡಿಸಬೇಕೆಂಬ ಒಳ್ಳೆಯ ಉದ್ದೇಶದಿಂದ ಹೊರಟ ಸಂಸ್ಥೆಯಿದು. ಹೊರನಾಡಿನ ಕನ್ನಡಿಗರಲ್ಲಿ ಕನ್ನಡ

(ಕವ್ವರಿನ ಮೂಡನೆಯ ಪುಟದಲ್ಲಿ ನೋಡಿರಿ)



ವಾರ್ಷಿಕ ಚಂದಾ
೪—೮—೦

ಪ್ರತಿತಿಂಗಳ ೧ನೆಯ ತಾರೀಖಿಗೆ
ಪ್ರಕಟವಾಗುವುದು.

ಸಂಪುಟ ೧೦ | ೧ ನೆಯ ಫೆಬ್ರುವರಿ ೧೯೪೪ | ಸಂಚಿಕೆ ೪

ಕೂಸಿನ ಆಟ

ಶ್ರೀ. ರಂ. ರಾ. ನಿಡಗುಂದಿ, ವಿಜಾಪುರ

೧

ಚುಕ್ಕೀ ನಡುವಿನ ಚಂದಿರನ್ಹಾಂಗ
ಬಿಳಿ ಮುಗಿಲೊಳಗಿನ ದಿಂದಿರನ್ಹಾಂಗ
ಪಾತರಗಿತ್ತಿಯು ಹೂವಿನ ಬಳಗದಿ
ಕುಳಿತಕ ಹಾಂಗ । ಕೂಸು—
ಸುತ್ತಲು ಹರಡಿದ ಹಾಳಿಯ ಜೂರಲಿ ಆಡುವುದೀಗ!

೨

ಗುಳಿಗಿಯ ಗಡಣದ ವೈದ್ಯನ ಹಾಂಗ
ರೂ. ಗಳ ಮುದ್ದಿನ ಸಿರಿಧರನ್ಹಾಂಗ
ಸಕ್ಕರಿ ಹಲಗೀ ಮಾಡುತ ಕುಳಿತಿಹ
ಹರದನ ಹಾಂಗ । ಕೂಸು—
ಸುತ್ತಲು ಹರಡಿದ ಹಾಳಿಯ ಜೂರಲಿ ಆಡುವುದೀಗ!

೩

ಸಾವಿರ ಬರೆಯುವ ಸೂದೀ ಹಾಂಗ
ಶಬ್ದದ ಲೋಕದ ಸರಸತಿ ಹಾಂಗ
ರತುನಾಕರ ತಾ ರತುನದ ನಡುವೇ
ಆಡುವ ಹಾಂಗ । ಕೂಸು—
ಸುತ್ತಲು ಹರಡಿದ ಹಾಳಿಯ ಜೂರಲಿ ಆಡುವುದೀಗ!

೪

ಮಂತರಿಸೋಂದಿಹ ಮಂಕನ ಹಾಂಗ
ಮದ್ದನು ಮೆದ್ದಿಹ ಮರುಳನ ಹಾಂಗ
ದೇವರ ಮುಂಗಡೆ ದೇವನ ಭಕುತನು
ನಿಂತಕ ಹಾಂಗ । ನಾನು—
ನೋಡುತ ನಿಂತೆನು ಆದುವ ಕೂಸನ ಹುಡುಗನ ಹಾಂಗ!

೫

ಮಳೆಯನು ನೋಡಿದ ಒಣಬೆಳೆ ಹಾಂಗ
ಕತ್ತಲಿ ಹೋಗಿಹ ಬೆಳಕಿನ ಹಾಂಗ
ದಣಿದಿಹ ಮನುಜನು ತಣಿವನು ಕಾಣುತ
ಕುಣಿವ ಹಾಂಗ । ನಾನು
ಮನದಲಿ ಕುಣಿದೆನು ಮಿಸ್ಸಿದ ದಿನಪತಿ-ನವಿಲಿನ ಹಾಂಗ!

೬

ಸುಖವಿದೆ ಎಲ್ಲಿದೆ ಭೂಮೀ ಹಾಂಗ
ಹೊನ್ನಿದೆ ನೋಡಲು ಬಾನಿನ ಹಾಂಗ
ಆವರು ಅಳಲುವೆ ಬಳಲುವೆ ತೊಳಲುವೆ
ಕುರುಡನ ಹಾಂಗ । ದೇವಾ—
ಬುದ್ಧಿಯ ನೀಡೈ ಸುತ್ತಣ ಬದುಕನು ತಿಳಿಯುವ ಹಾಂಗ!

ಕಾಸರಗೋಡಿನ ಸಮ್ಮೇಳನ-ಗೋಷ್ಠಿಗಳು

ಅಖಿಲಕರ್ನಾಟಕ ಸಾಹಿತ್ಯ ಸಮ್ಮೇಳನದ ೨೦ನೆಯ ಅಧಿವೇಶನವು, ಕಳೆದ ಡಿಸೆಂಬರ್ ೨೬-೨೯-೨೦ನೆಯ ದಿನಗಳಲ್ಲಿ, ದಂಗಳೂರು ಜಿಲ್ಲೆಯ ಕಾಸರಗೋಡಿನಲ್ಲಿ ತುಂಬ ಉತ್ಸಾಹದಿಂದ ನೆರವೇರಿತು. ಕೇರಳದ ಜನರ ಆಕ್ರಮಣಾತ್ಮಕ ಚಳವಳಿಗೆ ಪಡೆಯನ್ನು ಒಡ್ಡುವ ದೃಷ್ಟಿಯಿಂದ ನದಿನಾಡಿನಲ್ಲಿಯ ನಗರವಾದ ಕಾಸರಗೋಡಿನಲ್ಲಿ ಸಾಹಿತ್ಯಸಮ್ಮೇಳನ ಸೇರಿದುದು ಯುಕ್ತೋಚಿತವಾಗಿದೆ. ಗೋಕರ್ಣದ ವರೆಗೆ ಕೇರಳವೆಂದು ಕರೆಯುತ್ತಿದ್ದ ಕೇರಳದ ಕೇಂದ್ರಪ್ಪನವರಿಗೆ, ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ಜರುಗಿಸಿದ ಕಾಸರಗೋಡು ಚೆನ್ನಾದ ಉತ್ತರಕೊಟ್ಟಿತೆಂದು ಹೇಳಬಹುದು. ಇನ್ನೊಬ್ಬರೆದಾದ ಒಂದು ಅಂಗೈಯಗಲ ಕೆಲವೂ ಬೇಡವೆಂದು ಹೇಳುವ ಧರ್ಮರಾಜರು ಕನ್ನಡಿಗರು; ಕರ್ನಾಟಕಕ್ಕೆ ಅಸ್ತಿತ್ವವೇ ಇಲ್ಲವೆಂದು ಹೇಳುವಂತೆ ಅದರ ಅಂಗಾಂಗಗಳನ್ನೇ ಹರಿದುಕೊಳ್ಳಲು ಬರುವುವ ದುರ್ಯೋಧನರು ನೆರೆಹೊರೆಯ ನಾಡಿನವರು. ಇಂತಹ ವೇಳೆಯಲ್ಲಿ ಗಡಿಯ ಕನ್ನಡಿಗರು ಎಚ್ಚತ್ತು ಭದ್ರವಾಗಿ ಗಡಿಯ ಕೋಟೆಗಳನ್ನು ಕಾಯ್ದುಕೊಳ್ಳುವುದು ಅವಶ್ಯಕವಾಗಿದೆ. ಕಾಸರಗೋಡಿನ ಕನ್ನಡಿಗರು ಎಚ್ಚತ್ತು ಕೇರಳಿಗರ ದಾಳಿಗಳಿಗೆ ಅಡ್ಡನಿಲ್ಲುತ್ತ ನಡೆದರೆ, ಸಮ್ಮೇಳನದ ಕಾರ್ಯವು ಯಶಸ್ವಿಯಾಗಿ ಸಿದ್ಧಿಸಿದಂತಾಗುವುದು.

ಈ ಸಲದ ಸಮ್ಮೇಳನಾಧ್ಯಕ್ಷರು ನಾಡಿಗರಿಗೆ ಸುಪರಿಚಿತರಾದ ಬೆಂಗಳೂರಿನ ಶ್ರೀಮಾನ್ ತಿರುಮಲೆ ತಾತಾಚಾರ್ಯ ಶರ್ಮರು. ಇತಿಹಾಸ ಸಂಶೋಧನೆಯಿಂದ ಕಾರ್ಯವನ್ನು ಪ್ರಾರಂಭಿಸಿದ ಇವರು, ದೇಶಭಕ್ತಿ ಪ್ರೇರಿತರಾಗಿ ರಾಜಕಾರಣಿಯಾಗಿ ಸಂಪಾದಕರಾಗಿ ನಾಡಿಗಾಗಿ ದುಡಿದವರು. ಮನಸ್ಸು ಮಾಡಿದ್ದರೆ ಸಾಹಿತ್ಯನಿರ್ಮಿತಿಯೂ ಸಾಕಷ್ಟು ಇವರಿಂದ ಆಗುತ್ತಿದ್ದಿತೆಂಬುದು ಇವರಿಂದ ರಚಿತವಾದ ಕೆಲವು ಸಣ್ಣಪುಟ್ಟ ಪುಸ್ತಕಗಳನ್ನು ನೋಡಿದವರಿಗೆ ಎನಿಸದಿರದು. ಜೀವನದಲ್ಲಿ ಕ್ರಾಂತಿಯನ್ನು ಅಪೇಕ್ಷಿಸುವ ಕನ್ನಡ ತರುಣರ ಕೈವಾರಿಗಳವರು. ಕಳೆದ ನಾಲ್ಕಾರು ವರ್ಷಗಳಿಂದಲೂ ಸಮ್ಮೇಳನದ ಅಧ್ಯಕ್ಷಪಟ್ಟಕ್ಕೆ ಇವರ ಹೆಸರು ಸೂಚಿತವಾಗುತ್ತಿದ್ದಿತು. ಈ ಸಲ ಸೂಚಿತವಾಗಿ ಆಯ್ಕೆಹೊಂದಿದುದು ಕನ್ನಡ ತರುಣರ ಕ್ರಾಂತಿಯ ಅಪೇಕ್ಷೆಯ ವಿಜಯವೆಂದೇ ಹೇಳಬಹುದು.

ಸಮ್ಮೇಳನದ ಪ್ರಾರಂಭೋತ್ಸವವನ್ನು ಮುಂಬಯಿಯ ನ್ಯಾಯಾಸ್ಥಾನದಲ್ಲಿ ನ್ಯಾಯಮೂರ್ತಿಗಳಾಗಿರುವ ಶ್ರೀಮಾನ್ ಆರ್. ಎ. ಜಾಗಿರದಾರ ಎಂ. ಎ, ಎಲ್ ಎಲ್. ಬಿ. ಅವರು ಜರುಗಿಸಿದರು. ಇಂಗ್ಲಿಷ್ ಉಚ್ಚ ಶಿಕ್ಷಣ ಪಡೆದು, ಸಾಕಷ್ಟು ಹಣಗಳಿಸುವ ವೃತ್ತಿಯಲ್ಲಿ ಮುಂದುತ್ತ, ಹೊರನಾಡಿನಲ್ಲಿ ಇದ್ದರೂ ಕನ್ನಡನಾಡು-ನುಡಿಗಳ ಏಳಿಗೆಗಾಗಿ ಹಪಹಪಿಸುವ ತೀರ ಕಡಿಮೆ ಜನ ಕನ್ನಡಿಗರಲ್ಲಿ ಶ್ರೀ. ಜಾಗಿರದಾರರು ಹಿರಿಯರಾಗಿರುವರು. ಪರಪ್ರಾಂತ್ಯಗಳಲ್ಲಿದ್ದು ಉಚ್ಚಪದವಿಯಲ್ಲಿ ಕೆಲಸಮಾಡುತ್ತಿರುವ ಕನ್ನಡಿಗರೆಲ್ಲರ ಮನಸ್ಸು-ಹೃದಯಗಳು ಶ್ರೀ. ಜಾಗೀರದಾರರಂತೆಯೆ ಇರುತ್ತಿದ್ದರೆ, ನಮ್ಮನಾಡಿನ್ನೆಷ್ಟೋ ಮುಂದಿಯ ಪ್ರಗತಿಗೆ ವಿಲಂಬವೆ ಆಗದು. ಇಂತಹ ಆದರ್ಶಶೀಲರಾದವರು ಸಮ್ಮೇಳನವನ್ನು ಪ್ರಾರಂಭಿಸಿದುದು ಎಲ್ಲ ರೀತಿಯಿಂದಲೂ ಕಲ್ಯಾಣಕಾರಿಯೆನಿಸುವುದು ಸ್ವಾಭಾವಿಕ. ಇವರ ಭಾಷಣ ಸ್ಫೂರ್ತಿದಾಯಕವಾಗಿದೆಯಲ್ಲದೆ ಕರ್ತವ್ಯಸೂಚನೆಗಳಿಂದಲೂ ಕೂಡಿದೆ.

ಸಮ್ಮೇಳನಾಧ್ಯಕ್ಷರಾದ ಶ್ರೀ. ತಾತಾಚಾರ್ಯ ಶರ್ಮರ ಪ್ರಾರಂಭಭಾಷಣ ೬೮ ಪುಟಗಳಲ್ಲಿ ಮುದ್ರಿತವಾಗಿದೆ. ವಿಭಾಗಿಸಿ ನೋಡಿದರೆ ಪ್ರಾಂತೀಯ ಸಾಹಿತ್ಯ, ಪ್ರಾಂತೀಯ ರಾಜಕಾರಣ ಇವೆರಡನ್ನೂ ತೆಗೆದುಕೊಂಡು ಅದು ಚರ್ಚಿಸಿದೆಯೆಂಬುದು ಕಂಡುಬರುತ್ತದೆ. ರಾಜಕಾರಣ-ಸಾಹಿತ್ಯ-ಸಮಾಜ ಜೀವನಗಳು ಪರಸ್ಪರಾವಲಂಬಿಗಳೆಂಬ ಮಾತನ್ನು ಯಾರೂ ಅಲ್ಲಗಳೆಯಲಾರರು. ಈ ಮೂರೂ ಸ್ಥೂಲದೃಷ್ಟಿಗೆ ಒಂದೆಯೆಂದು ತೋರುತ್ತಿದ್ದರೂ ಕಾರ್ಯಕರ್ತರ ಮನೋಧರ್ಮದ ಮೂಲಕ ಇವು ಪ್ರತ್ಯೇಕತೆಯನ್ನು ಪಡೆದು, ಪ್ರತ್ಯೇಕಮುಖವಾಗಿ ತಂತಮ್ಮ ಚಟುವಟಿಕೆಗಳನ್ನು ನಡೆಯಿಸಿರುತ್ತವೆ. ಸ್ಪಷ್ಟವೆಂದು ನಾಗರಿಕ ದೇಶದಲ್ಲಿಯೂ ಸಾಮಾಜಿಕ, ರಾಜಕೀಯ, ಸಾಹಿತ್ಯಿಕ ಕಾರ್ಯಕರ್ತರು ಬೇರೆ ಬೇರೆಯಾಗಿದ್ದು, ಅವರು ತಂತಮ್ಮ ವಿಭಾಗಗಳ ಏಳಿಗೆಗಾಗಿ ಬೇರೆ ಬೇರೆಯಾಗಿಯೆ ಕಾರ್ಯನಡೆಯಿಸುತ್ತಿದ್ದುದು ಪ್ರತ್ಯಕ್ಷ ಕಾಣಬಹುದಾದ ಸಂಗತಿ. ಈ ದೃಷ್ಟಿಯಿಂದ ನೋಡಿದರೆ ಈ ಸಲದ ಅಧ್ಯಕ್ಷೀಯ ಭಾಷಣವು, ಸಾಹಿತ್ಯ ಸಮ್ಮೇಳನಾಧ್ಯಕ್ಷತೆಗಿಂತ ರಾಜಕೀಯ ಸಮ್ಮೇಳನಾಧ್ಯಕ್ಷತೆಗೆ ಹೆಚ್ಚು ಒಪ್ಪಬಹುದಾಗಿ ತೋರುತ್ತದೆ. ಕನ್ನಡ ಜನತೆ ಕೊಟ್ಟ ಅನೇಕ ಬಿರುದುಗಳಲ್ಲಿ ಶ್ರೀ. ಶರ್ಮರು 'ಸ್ವಾತಂತ್ರ್ಯ ಯೋಧ' ಎಂಬುದನ್ನು ಒಪ್ಪಿಕೊಂಡಿರುವುದು ಅವರ ಒಲವನ್ನು ಪ್ರಕಟಿಸುವುದು. ಆಧ್ಯಕ್ಷೀಯ ಭಾಷಣ ಅವರ ಒಲವನ್ನು ಪೂರ್ಣವಾಗಿ ಹೊರಹೊಮ್ಮಿಸುವಂತಹದಾಗಿದೆ. ಎಂತಲೆ ಸಾಹಿತ್ಯದ ಆಧ್ಯಾತ್ಮಿಕ ವಿಚಾರಕ್ಕಿಂತ ಅದರ ಅಧಿಭೌತಿಕ ವಿಚಾರವೆ ಇದರಲ್ಲಿ ಹೆಚ್ಚಾಗಿದೆ. ಸಾಹಿತ್ಯವಿಚಾರಕ್ಕಿಂತ ರಾಜಕಾರಣವೇ ಹೆಚ್ಚು ಪುಟಗಳಲ್ಲಿ ಆವರಿಸಿದೆ.

ಸಮ್ಮೇಳನದಲ್ಲಿ ಸಾಸಾದ ಗೊತ್ತುವಳಿಗಳಲ್ಲಿ ಹೊಸವಾತೇನೆ ಇಲ್ಲ. ಕೆಲವೊಂದು ಹಳೆಯ ಮಾದರಿಯ ಗೊತ್ತುವಳಿಗಳು ಸಭೆಯಿಂದೆ ಬಂದು ಕಾಸಾಗದೆ ಹೋದುದೇ ಒಂದು ಹೊಸವಾತು.

ಮೈಸೂರು ಅರಸರಿಗೆ ಭಕ್ತಿ-ವಿಶ್ವಾಸ-ಕೃತಜ್ಞತೆಗಳನ್ನು ಅರ್ಪಿಸಬೇಕೆಂದಿದ್ದ ಗೊತ್ತುವಳಿಯು ಸಾಂಶ್ರದಾಯಿಕವಾಗಿ ಅಧ್ಯಕ್ಷರಿಂದ ಸೂಚಿತವಾದರೂ, ಪ್ರಚಂಡ ಬಹುಮತದಿಂದ ಅದು ನಿರಾಕೃತವಾಯಿತು. ಕೂಸು ಬೆಳೆದು ಪ್ರೌಢವಾದಾಗ ತನ್ನ ಕಾಲಮೇಲೆ ತಾನು ನಿಲ್ಲಲು ಶಕ್ತವಾಗಬಹುದು. ಆದರೆ ಅಂತಹ ಶಕ್ತಿಯಿಲ್ಲದಾಗ ತನ್ನನ್ನು ಸಾಕಿ ಸಲಹಿದ ಪಾಲಕರಿಗೆ ಭಕ್ತಿ-ವಿಶ್ವಾಸ-ಕೃತಜ್ಞತೆಗಳನ್ನು ಶ್ರದ್ಧೆಯಿಂದ ಸಲ್ಲಿಸುವುದು ಮಾನವಸಂಸ್ಕೃತಿಯ ಲಕ್ಷಣವೆಂದು ಇದುವರೆಗೆ ಪರಿಗಣಿತವಾಗಿದೆ. ಜನತೆಯ ಮನದಲ್ಲಿ ಸಾಹಿತ್ಯಪರಿಷತ್ತಿನ ಕಲ್ಪನೆ ಮೂಡಿ, ಅದು ಪ್ರಾರಂಭವಾಗಿ ಬೆಳೆದು ದೊಡ್ಡದಾಗುವಂತೆ ಮಾಡಿದ ಶ್ರೇಯಸ್ಸನ್ನು ಮೈಸೂರಿನ ದೊರೆಗಳಿಗೇ ಸಲ್ಲುವುದು. ಇಂದು ರಾಜಕೀಯ ದೃಷ್ಟಿಯಿಂದ ಮೈಸೂರಿನ ಅಡಳಿತ ಪ್ರಜಾಪ್ರಭುತ್ವಕ್ಕೆ ಒಳಗಾದಂತೆ ಇರಬಹುದು; ಆದರೆ ಅದು ಇಲ್ಲದಿರುವಾಗ ಮೈಸೂರಿನ ಅಡಳಿತ ಅಲ್ಲಿಯ ದೊರೆಗಳ ವಶದಲ್ಲಿಯೆ ಇರುತ್ತಿದ್ದಿತು. ಮೈಸೂರಿನ ಅಂದಿನ ದೊರೆಗಳಿಗೆ ಒಪ್ಪಿಗೆಯಿರದಿದ್ದರೆ, ಸಾಹಿತ್ಯಪರಿಷತ್ತಿಗೆ ಇಂದಿನಂತಹ ಪ್ರೌಢದಶೆ ಪ್ರಾಪ್ತವಾಗುವ ಸಂದರ್ಭವಿರುತ್ತಿರಲಿಲ್ಲ. ಈ ವಿವೇಕದ ಮೂಕ್ಷ್ಮವನ್ನರಿತು, ಸಭೆಯೆದುರು ಬಂದ ಗೊತ್ತುವಳಿಯನ್ನು ವಾಪಸು ಪಡೆದುಕೊಂಡುದು, ಸಮ್ಮೇಳನದಲ್ಲಿ ಸೇರಿದ ಕನ್ನಡಿಗರ ಕರ್ತವ್ಯವಾಗಿತ್ತು. ನಮ್ಮ ರಾಜಕೀಯ ಸಾಮಯಿಕ ಕಲ್ಪನೆಗಳು ನಮ್ಮ ಹಿರಿಯರಿಗೆ ಗೊತ್ತಿರಲಿಲ್ಲವೆಂದೋ, ಒಪ್ಪಿಗೆಯಿರಲಿಲ್ಲವೆಂದೋ, ಅವರಿಂದ ಪಡೆದ ಋಣಭಾರವನ್ನು ಮರೆಕುಬಿಡುವುದು ನಾಗರಿಕತೆಯೆನಿಸುವುದೇ?

ಅದರಂತೆಯೆ ಪಾಸಾದ ಗೊತ್ತುವಳಿಗಳಲ್ಲಿ ಹೊಸದೆಂದರೆ —ಅಧ್ಯಕ್ಷರ ಮಾತನ್ನೂ ಮೀರಿ— ಮೈಸೂರಿನ ರಾಜಕೀಯ ಹುತಾತ್ಮರ ಬಗೆಗೆ ಶೋಕವನ್ನು ಪ್ರದರ್ಶಿಸಿದ ಗೊತ್ತುವಳಿ. ಸತ್ತವರಿಗಾಗಿ ಶೋಕ ಪ್ರದರ್ಶಿಸುವುದು— ಅದರಲ್ಲಿಯೂ ದೇಶಕಾರ್ಯಕ್ಕಾಗಿ ಸಂಪೂರ್ಣತ್ಯಾಗ ಮಾಡಿದ ವೀರರಿಗಾಗಿ ವಿಷಾದವ್ಯಕ್ತಮಾಡುವುದು— ತಪ್ಪೇನೂ ಅಲ್ಲ. ಆದರೆ ಪ್ರತಿಯೊಂದಕ್ಕೂ ದೇಶ-ಕಾಲ-ಪರಿಸ್ಥಿತಿಯ ಔಚಿತ್ಯ ಬೇಕಾಗುತ್ತದೆ. ಸಂಗೀತ ಸಮ್ಮೇಳನದಲ್ಲಿ ವಿಜ್ಞಾನಿಗಳ ಸಾವಿಗಾಗಿ ಅಳುವ ಸಂಪ್ರದಾಯವಿದೆಯೆ? ನ್ಯಾಯಾಮ ಪರಿಷತ್ತಿನಲ್ಲಿ ವೇದಾಂತಿಗಳ ಸಾವನ್ನು ನೆನೆದು ಶೋಕಿಸುವ ಪದ್ಧತಿಯಿದೆಯೆ? ಸಾಹಿತ್ಯ ಸಮ್ಮೇಳನದ ವ್ಯಾಪ್ತಿ ನಾಡಿನ ಸಾಹಿತ್ಯಿಕ ಪ್ರಪಂಚದ ಪರಿಚ್ಛೆಗೆ ಮಾತ್ರ ಇರುವುದು. ಅಲ್ಲಿ ಬರಬೇಕಾದುದು ಸಾಹಿತ್ಯಿಕರ ಸಾವಿನ ಬಗೆಗೆ ಮಾಡುವ ಶೋಕಸೂಚನೆಯು ಗೊತ್ತುವಳಿಯು ಮಾತ್ರ. 'ಕ್ರಾಂತಿ ಕ್ರಾಂತಿ' ಎಂಬ ಹೆಸರಿನಿಂದ ಮೊಗಸಾಲೆಯಲ್ಲಿ ಅಡಿಗೆ ಮಾಡುವುದೂ, ಒಳಮನೆಯಲ್ಲಿ ಓಲಗ ನಡೆಯಿಸುವುದೂ, ಬೀದಿಮನೆಯನ್ನು ಅಂತಃಪುರವನ್ನಾಗಿಸುವುದೂ— ಹೊಸದೆಂದು ಎನಿಸಬಹುದಾದರೂ— ಉಚಿತವೆಂದೂ ಅನುಕೂಲವೆಂದೂ ಎನಿಸದು. ಔಚಿತ್ಯವೆಂಬುದು ಜೀವನದಲ್ಲಿಯ ಒಂದು ಯೋಗಸಾಧನ.

ಸಾಹಿತ್ಯ ಸಮ್ಮೇಳನದೊಂದಿಗೆ ಕರ್ನಾಟಕ ಏಕೀಕರಣ ಸಮ್ಮೇಲನ, ಸಾಹಿತ್ಯಗೋಷ್ಠಿ, ಮಹಿಳಾಗೋಷ್ಠಿ, ವಿಜ್ಞಾನಗೋಷ್ಠಿಗಳೂ ಬೇರೆ ಬೇರೆ ಅಧ್ಯಕ್ಷರ ನೇತೃತ್ವದಲ್ಲಿ ಜರುಗಿದುವು. ಏಕೀಕರಣ ಸಮ್ಮೇಳನ ಸದ್ಯದ ರಾಜಕೀಯ ವಾತಾವರಣದಲ್ಲಿ ಅತ್ಯಾವಶ್ಯಕವಾಗಿದ್ದಿತು. ಕರ್ನಾಟಕದ ಸರ್ವತೋಮುಖವಾದ ಪರಿಚಯವಿದ್ದ ಶ್ರೀ. ದಿವಾಕರ ರಂಗರಾಯರ ಅಧ್ಯಕ್ಷತೆ, ಏಕೀಕರಣದ ವಿಷಯಕವಾದ ಕನ್ನಡಿಗರ ಕರ್ತವ್ಯಬುದ್ಧಿಯನ್ನು ಎಚ್ಚರಿಸಿತು. ಮುಖ್ಯವರ್ತಿ ಸರಕಾರವು ಕರ್ನಾಟಕದ ಕಡೆಗೆ ಕಣ್ಣು ಬಿಟ್ಟು ನೋಡಲೆ ಬೇಕಾಗುವಂತಹ ಕಾವಿನ ಮಾತುಗಳಿಂದ ಕೂಡಿದ ಗೊತ್ತುವಳಿ ಅಲ್ಲಿ ಪಾಸಾಯಿತು.

ಸಾಹಿತ್ಯಗೋಷ್ಠಿಯ ಅಧ್ಯಕ್ಷರಾದ ಶ್ರೀರಂಗರು ಮಾಡಿದ ಭಾಷಣವು ಅವರ ವಿದ್ವತ್ತಿಗೆ ತಕ್ಕುದಾಗಿಯೆ ಇದೆ. ತಾವು ಯಾವ ಕನ್ನಡ ಸಾಹಿತ್ಯವನ್ನೂ ನೋಡಿಲ್ಲ ಓದಿಲ್ಲ— ಎಂದು ಒಪ್ಪಿಕೊಂಡು ಕನ್ನಡ ಸಾಹಿತ್ಯವನ್ನು ವಿಮರ್ಶಿಸಲು ಹೊರಟಿದ್ದಾರೆ. ಎಂತಲೆ ಅವರಿಗೆ ಕರ್ನಾಟಕದಲ್ಲಿ ಸಾಹಿತ್ಯಕರಿದ್ದಾರೆಂಬುದು ಗೊತ್ತಾಗಿದೆ, ಸಾಹಿತ್ಯವಿದೆಯೆಂಬುದು ಗೊತ್ತಿಲ್ಲ. ಕವಿಗಳಿದ್ದಾರೆ ಎಂಬುದು ಗೊತ್ತಿದೆ, ಕಾವ್ಯಕೃತಿಗಳಿವೆಯೆಂಬುದು ಗೊತ್ತಿಲ್ಲ ಕವಿಗೆ ಗೊತ್ತಿಲ್ಲದುದರಿಂದ ಅದು ಇಲ್ಲವೇ ಇಲ್ಲವೆಂಬುದು ಅವರ ತರ್ಕ. ಈ ವಿಚಿತ್ರತರ್ಕದ ಮೇಲೆ ಹೊರಟ ಅವರ ಭಾಷಣವು ಕೆಲವರಿಗೆ ವಿಚಿತ್ರವಾಗಿ ತೋರುತ್ತಿದ್ದರೂ, ಅವರು— ಸಾಹಿತ್ಯ ಸದ್ಯ ಕನ್ನಡದಲ್ಲಿ ಇಲ್ಲವೆ ಇಲ್ಲವೆಂದು ಹೇಳಿದುದನ್ನು ಮರೆತು— ಕೆಲವೊಂದು ನಿರ್ಧಾಯಕ ಸೂಚನೆಗಳನ್ನು ಮಾಡಿದ್ದಾರೆ. (ಸಾಹಿತ್ಯವಿಚಾರದಲ್ಲಿ ನೋಡಬೇಕು.)

ಈ ಸಲ ನಡೆದ ಇನ್ನೊಂದು ಕ್ರಾಂತಿಕಾರಕ ಘಟನೆಯೆಂದರೆ ಅಧ್ಯಕ್ಷ-ಉಪಾಧ್ಯಕ್ಷರಿಗೆ ಸಂಬಂಧವಾದ ಪರಿಷತ್ತಿನ ಘಟನೆಯಲ್ಲಿ ಬದಲಾವಣೆಯಾಗುದು. ಇನ್ನು ಮೇಲೆ ಸಾಹಿತ್ಯಸಮ್ಮೇಳನಕ್ಕೆ ಅಧ್ಯಕ್ಷರೆಂದು ಆಯ್ಕೆಹೊಂದುವವರೇ ಪರಿಷತ್ತಿನ ಅಧ್ಯಕ್ಷರು. ನೋಡಬೇಕು. ಈ ಹೊಸಪ್ರಯೋಗದಿಂದ ಪರಿಷತ್ತಿನ ಕಾರ್ಯನಿರ್ವಾಹಕರಕ್ಕೆ ಬೆಳೆಯುವುದೇನೊ!

—ಸಂಪಾದಕರು.

ಚಿತ್ರಕಲಾ ಶಿಕ್ಷಕ

ಬರೆದವರು: ಶ್ರೀ. ಗೋ. ಶ್ರೀ. ಹುದ್ದಾರ

ಶಾಲೆಗಳಲ್ಲಿ ಡ್ರಾಯಿಂಗ್ ಕಲಿಸುವ ಉಪಾಧ್ಯಾಯರಿಗೂ ಕಲಿಯುವ ವಿದ್ಯಾರ್ಥಿಗಳಿಗೂ ತುಂಬ ಉಪಯುಕ್ತ.

ಅನೇಕ ಪ್ರಾಯೋಗಿಕ ಚಿತ್ರಗಳಿಂದ ಕೂಡಿದೆ.

ಬೆಲೆ ೨-೦-೦. ಅಂಚೆಯ ಪೆಚ್ಚು ೦-೪-೦.

'ಜಯಂತಿ' ಕಾರ್ಯಾಲಯ, ಧಾರವಾಡ

ಸರ್ವಾಧಿಕಾರಿತ್ವದ ಸ್ವೀಕಾರ

ಸಾ. ಸರಿಪತ್ತಿನ ಘಟನೆಯಲ್ಲಿ ಬದಲಾವಣೆಯಾಗಿ, ಆ ಆ ವರ್ಷದ ಸಮ್ಮೇಳನಾಧ್ಯಕ್ಷರೇ ಮುಂದಿನ ವರ್ಷದ ಸರಿಪತ್ತಿನ ಅಧ್ಯಕ್ಷರಾಗಿರಬೇಕೆಂದು ನಿರ್ಣಯವಾಗಿದ್ದರಿಂದ ಒಗ್ಗೆ ಹಲವು ಜನ ಕನ್ನಡಿಗರು ಬೀರಣ್ಣನ ಅಭಿಪ್ರಾಯ ಕೇಳಿದ್ದಾರೆ. ಕೈಯಲ್ಲಿಯ ಕೋಲನ್ನು ಮೇಲೆತ್ತಿ ಯೋಚಿಸಿ ಯೋಚಿಸಿ ಬೀರಣ್ಣ ಹೀಗೆಂದು ತನ್ನ ಅಭಿಪ್ರಾಯ ಸ್ಪಷ್ಟಪಡಿಸಿದ್ದಾನೆ:—

"ಬರು-ಬರುತ್ತ ಜನತೆ ಸರ್ವಾಧಿಕಾರಿಯನ್ನು ಅಪೇಕ್ಷಿಸುತ್ತಿದೆಯೆಂಬುದು ಈ ನಿರ್ಣಯದಿಂದ ಸಿದ್ಧವಾದಂತಾಯಿತು. ಹಿಂದೆ ಬೇರೆ ಬೇರೆ ಅಧಿಕಾರಿಗಳು ಜನಪ್ರತಿನಿಧಿಗಳಾದ ಬೇರೆಬೇರೆ ಮೂರು ಜನರ ಕಡೆಗೆ ಇರುತ್ತಿದ್ದುವು. ಇಂದು ಮೂವರ ಅಧಿಕಾರವೆಲ್ಲ ಒಬ್ಬನ ಕಡೆಗೇ ಬಂದಿತು. ಇದು ಸರ್ವಾಧಿಕಾರಿತ್ವದ ಪ್ರೀತಿಯಲ್ಲವೆ ಇನೇನು? ಸಾಹಿತ್ಯ ರಾಜ್ಯದಲ್ಲಿಯೂ ಹಿಟ್ಲರಿಜಂ ಕಾಲಿರಿಸಿತೆನ್ನಿ!"

ತುಂಗೋಳಿಲ್ಲಾ ಪರಿಷೀ ನೇರ್ಸ
ತುದುಬನ ಕೈಲಿದ್ ಕೋಲು ಮೇಸ್ರ
ಸಾರಿದಪಿಂತು ಸಾಜಾ:
'ಕೋಲೇ ನಮ್ಮಳ ರಾಜಾ!'

* * *

ಬೀರಣ್ಣನಿಗೊಂದು ತಂತ್ರದ ಹೀಗೆ ಬಂದಿದೆ:

"ಬೀರಣ್ಣಾ, ಬುದ್ಧಿಯ ಕೊರಣ್ಣಾ! ಸಮ್ಮೇಳನಾಧ್ಯಕ್ಷರಾಗಿ ಆಯ್ಕೆ ಹೊಂದಿದವರು ಪರಿಪತ್ತಿನ ಅಧ್ಯಕ್ಷರಿಗೆ ಕೆಲಸ ನೀಗಿಸಿಕೊಂಡು ಹೋಗಬಹುದೆ? ಸಮ್ಮೇಳನಾಧ್ಯಕ್ಷರಲ್ಲಿ ಜನತೆ ನೀರೀಕ್ಷಿಸುವ ಗುಣಗಳು ಬೇರೆ; ಪರಿಪದಧ್ಯಕ್ಷೆ ರಾಗುವವರಿಗೆ ಇರಬೇಕಾದ ಗುಣಗಳು ಬೇರೆ. ಪುರೋಹಿತ ಬೇಕಾದರೆ ವೇದ-ವೇದಾಂತಗಳನ್ನು ಬಲ್ಲವನನ್ನು ಹುಡುಕಬೇಕು. ದಂಡನಾಯಕ ಬೇಕಾದರೆ ರಾಜಕಾರ್ಯವಿದನನ್ನು ಆರಿಸಬೇಕು. ಒಳ್ಳೆಯ ಪುರೋಹಿತನಿದ್ದಾನೆಂದು ದಂಡನಾಯಕತ್ವವನ್ನು ಮಾಡುವುದು ಯೋಗ್ಯವೆನಿಸೀತೆ?"

ಇದಕ್ಕೆ ಬೀರಣ್ಣನ ಉತ್ತರವು ಹೀಗಿದೆ:

"ರಾಯರೇ, ಕ್ರಾಂತಿಯ ಕಾಲಗಳಿವು. ಈ ಪಿರುಗಾಳಿ ಯಾರನ್ನೂ ಯಾವ್ದಲ್ಲಿ ಕೂರಿಸೀತೆಂಬುದರ ನಿಯಮವಿಲ್ಲ. ಹಿಂದೆ ಗೋವಾಜೀ ಕಾಸರೇ ಎಂಬ ವ್ಯಕ್ತಿಯ ಮನಸಿನ ಒಳರಿಯದ್ದಾ ತದ್ದಾ ಕಾರ್ಭಾರ ನಡೆಯಿಸಿದ ತರೆ ಕೇಳುತ್ತಿದ್ದೆವು. ಇಂದು ಕಾವಾಜೀ-ಸೋಮಾಜಿ-ಕಾಮ್ರೇಡುಗಳ ಜನರಾಶಕ್ತಿಯ ಲಹರಿ, ಆ ಕಾರ್ಭಾರ ನಡೆಯಿಸಿರುವುದನ್ನು ಕಣ್ಣಿಂದ ಕಾಣುತ್ತಿದ್ದೇವೆ. ಇನ್ನೂ ಏನೇನಾದೀತು ಗೊತ್ತಿರದು? ಈ ಕ್ರಾಂತಿ ಕಣ್ಣಿನ ಸ್ಥಳದಲ್ಲಿ ಕವಿಯನ್ನೂ ಕವಿಯ ಸ್ಥಳದಲ್ಲಿ ಮೂಗನ್ನೂ ಇರಿಸಬಹುದು. ಆಗ ನಿಮ್ಮ ಗುರುತು ನಿಮಗೇ ಸಿಕ್ಕದ ಹೋಗಬಹುದು. ಎಚ್ಚರಿಕೆ.

ಸಂಗೀತಜ್ಞದವಳೂ ರಣರಂಗಕೆ ಹೋದಾಳು
ನೋಡೀರಣ್ಣಾ!
ಗುಂಗಾಡಿ ತಾ ಪೊಡ್ಡ ಸಿಂಗನ ಗೆದ್ದೀತು
ಕೇಳೀರಣ್ಣಾ!

* * *

ಪಾರ್ಲಮೆಂಟಿನ ಪ್ರವೇಶಕ್ಕಾಗಿ

ತರುಣ ಬರೆಹಗಾರನೊಬ್ಬ ತುಂಬ ಗಾಬರಿಗೊಂಡವನಾಗಿ, ನಡುಗುವ ಕೈಗಳಲ್ಲಿ ಒಂದು ಕಾಗದ ಒದಿದ್ದಾನೆ. ಅವನ ಸಮಸ್ಯೆ ಹೀಗೆ:

"ಬೀರಣ್ಣಾ, ಈ ಸದಸ ಸಾಹಿತ್ಯಗೋಷ್ಠಿಯ ಅಧ್ಯಕ್ಷರು ಸೂಚಿಸಿದಂತೆ 'ಸಾಹಿತ್ಯ ಪಾರ್ಲಮೆಂಟು' ಸ್ಥಾಪನೆಯಾದರೆ, ನಮ್ಮಂಥವರು ತರುಣ ಲೇಖಕರ ಗತಿಯೇನು? ಆ ಪಾರ್ಲಮೆಂಟಿನ ಪ್ರವೇಶ ನಮ್ಮಂಥವರಿಗೆಹೇಗೆ ಸಿಕ್ಕಬೇಕು?"

ಬೀರಣ್ಣನೆನ್ನುತ್ತಾನೆ:

"ತರುಣ ವಾಗ್ವೀರಾ, ಹೆದರಬೇಡ. ಯುದ್ಧಕಾಲದ ಅಧಿಕಾರಿಗಳ ಲಂಚ-ಗುಳಿತನದಿಂದಲೂ ವರ್ತಕರ ಬ್ಲ್ಯಾಕ್ ಮಾರ್ಕೆಟ್‌ನಿಂದಲೂ ಸಾಹಿತ್ಯಕ ಧುರೀಣರು ಕಲಿತ ಪಾಠದ ಪರಿಣಾಮವಿದು. ಸಾಹಿತ್ಯಕ ಸಿಕ್ಕ ಕಾಗದಪತ್ರಗಳ ಪುಸ್ತಕ ಮಾಡ್ರಿಸಿ ಹಣವನ್ನು ಕಳಿಸುಕೊಂಡ್ರೆ ವ್ಯಾಲಿಡಿಟಿಯ ಕಾಗದಗಳನ್ನೇ ಪಾರ್ಲಮೆಂಟಿನ ಮೆಂಬರ್ ಆದರೆ ತೂಕಕ್ಕೆ ಸರಿಯಾಗಿ ಸೊಟ್ಟು ಗಳನ್ನು ಸಂಪಾದಿಸಿದ. ಆಗ ಕಳೆದು ಕೊಂದ ಒಬ್ಬಿಯನ್ನು ಸಾಹಿತ್ಯಕರು ಈಗ ಹುಡುಕಿ ಇಡ್ದಲ್ಲಿ ಇರಿಸಿಕೊಳ್ಳ ಬೇಕೆಂದು ಪರಿಪರಿಯಿಸುತ್ತಿದ್ದಾರೆ. ಆದಕ್ಕಾಗಿಯೇ 'ಸಾಹಿತ್ಯ ಪಾರ್ಲಮೆಂಟು' ಸ್ಥಾಪನೆಯಾ ಪಿಚಾರ ಅವರ ತಲೆಯಲ್ಲಿ ಹುಟ್ಟಿದೆ. ಕಾಗದಪತ್ರ ಮುದ್ರಣಕ್ಕೆ ವೆಚ್ಚವಾಗಬಲ್ಲದಾಗಿರುವುದರಿಂದ ನಿನ್ನ ಬಳಿ ದುಡ್ಡಿರಲಿಲ್ಲ. ಪಾರ್ಲಮೆಂಟ್ ಸದಸ್ಯರ ಪ್ರಯಾಣ ಭತ್ಯ ವೆಚ್ಚವಾಗುವು. ಎಷ್ಟು ಬೇಕು ನಿನಗೆ ಶ್ರೀಕೃಷ್ಣ? ಎಂಟಾಣೆಯಾಗಿ ಸಿಕ್ಕಬಹುದು ಈ ಬೆಲೆಗೆ ಕಾಗದದ ಕಾಪಿಯನ್ನೂ ಕೊಡ್ತೀವಿ. ಎಂಟಾಣೆಗೆ ಹೆಚ್ಚಿಗೆ ಬೇಕಾದರೆ ಹೇಳು ಕೊಡ್ತೀವಿ!

* * *

ಪಾರ್ಶ್ವ ವಿಕಾರಗಳು

ಸತ್ಯ-ಅಹಿಂಸೆಗಳು ಸಮಾಜಕ್ಕೆ ಶಕ್ತಿವರ್ಧಕ ಔಷಧಿಗಳಾಗಿರುವುದು ನಿಜ. ಆದರೆ ಪೋಜ ಕೊಟ್ಟಾದರೆ ಅವು ವಿಷಗಳಾಗಿ ಪರಿಣಮಿಸಿ, ಆ ಸಮಾಜಕ್ಕೆ ಮಾರಕಗಳಾಗುವುದು ಅಷ್ಟೇಂದು ನಿಜ—ಎಂದು ಒಬ್ಬ ಡಾಕ್ಟರು ಇತ್ತೀಚೆಗೆ ಸಂಪೋಧಿಸಿ ಕಂಡು ಹಿಡಿದಿದ್ದಾರಂತೆ.

* * *

ಬೆಳಗಾಂವಿಯ ಕಾಟ್ಜೆಯ ಕಣದಲ್ಲಿ ನಂತರ ಮಾರಾಟ ಬಿಟ್ಟಿಗಳಾದ ವೀರ ಜೇಧೇ ಶೂರ ನೋಟುಲೆ ಗದಿಗಳು, ಕನ್ನಡಿಗರನ್ನು ಕುರಿತು ಕರೆಯುತ್ತಿದ್ದಾರಂತೆ. ಬೆಳಗಾಂವಿಯ ಕನ್ನಡಾಭಿಮಾನಿ ಧುರೀಣರು, ಅವರಿಗೆ ಬೇಕಾದ ಮುದ್ರಾಕ್ಷರ ಕೊಟ್ಟು ತರಬಿಯತ್ತುಗೊಳಿಸುತ್ತಿದ್ದಾರಂತೆ.

* * *

ಜಾಫರಲ್ಲಾ ಖಾನನು ಭದ್ರತಾ ಮಂಡಲದಲ್ಲಿ ಮಾಡಿದ ಹಿಂದುಸ್ತಾನದ ಮೇಲಿನ ಆರೋಪಣಾತ್ಮಕ ಭಾಷಣವನ್ನು ಕೇಳಿ, ಸತ್ಯದೇವನೆ ಹಾಸಿಗೆ ಹಿಡಿದಿದ್ದಾನಂತೆ. ನ್ಯಾಯದೇವನೆ ಸಾಯಲು ನಿರ್ಧಾರಗಿದ್ದಾನಂತೆ. ಅಸತ್ಯ-ಅನ್ಯಾಯದ ಭೂತಗಳು ಉಲ್ಲಾಸದಿಂದ ತಾಂಡವವನ್ನು ನಡೆಯಿಸಿವೆಯಂತೆ.

ಅಮಾನುಷ

(ಒಂದು ಜೀವನಕಥೆ)

ಶ್ರೀ. ರಾಮಕೃಷ್ಣ ಹೆಗಡೆ ದೊಡ್ಮನೆ, ಕಾಶೀವಿದ್ಯಾಪೀಠ

★

ದ್ವೇಷ-ಮತ್ಸರಗಳ ದಾವಾಗ್ನಿಯಲ್ಲಿ ಪುಷ್ಪಾನಂತಹ ಎಷ್ಟು
ಪುಷ್ಪಗಳು ಬೆಂದು ಬೂದಿಯಾಗಿವೆಯೊ? ಪುಷ್ಪಾ
ಅಂತಹ ಬೆಂಕಿಯಿಂದ ಬದುಕಿದ್ದಳು; ಆದರೆ
ಆಕೆಯ ಹೃದಯ ದುಃಖಪಕ್ಷಿಯ ಪಂಜರ!

★

ಜಗತ್ತು ಪರಿವರ್ತನಾಶೀಲವು. ಪ್ರತಿಕ್ಷಣದಲ್ಲೂ ಪ್ರಕೃತಿ ಸೂಸಾಂತರಗೊಳ್ಳುತ್ತದೆ. ನಿಸರ್ಗದಲ್ಲಿ ಬದಲಾವಣೆಗಳಾಗುತ್ತವೆ. ದಿನದಿನಕ್ಕೆ ಕ್ಷಣಕ್ಷಣಕ್ಕೆ ಸ್ಥಿತ್ಯಂತರವಾಗುತ್ತಿರುತ್ತದೆ. ಇಂದು ಇದ್ದುದು ಈಗಿಲ್ಲ; ಈಗಿನದು ಇನ್ನೊಂದು ಕ್ಷಣದಲ್ಲಿ ಮಾಯ!

ಬೆಳಗಿನ ನಿರಭ್ರ ಆಕಾಶವು ಮಧ್ಯಾಹ್ನದೊಳಗಾಗಿ ಮೋಡಂದ ಕಪ್ಪಿಡುವುದೆಂಬ ಕಲ್ಪನೆಯಿದ್ದಿಲ್ಲ. ಗಾಳಿಯೂ ತಣ್ಣಾತ್ತು. ಸಮಯ ಎರಡುಗಂಟೆಯದಾಗಿದ್ದರೂ ಮುಚ್ಚಂಜಿಯಂತಿತ್ತು ಆ ನೋಟ.

ನಾನೊಂದು ಉಭಯಸಂಕಟದಲ್ಲಿ ಸಿಕ್ಕಿಕೊಂಡಿದ್ದೆ. ಯರ ಪ್ರೀತಿ ಮತ್ತು ಒತ್ತಾಯಕ್ಕಾಗಿ ಒಪ್ಪಿಕೊಂಡು, ಲಾಟೆಕ್ಕೆ ಹೆಸರನ್ನು ಕೊಟ್ಟಾಗಿತ್ತು. ಆದರೆ ತುಸುಹೊತ್ತಿನ ಸುರಿವ ಮಳೆಯಲ್ಲಿ ತೋಯಿಸಿಕೊಳ್ಳುವ ಚಿತ್ರ ಮನಸ್ಸಿನಮೂಡಿದಾಗ, ಮಾತುಕೊಟ್ಟ ಬಗ್ಗೆ ಹಳಹಳಿಕೆಯಾಗುತ್ತಿತ್ತು. ಹೆಸರನ್ನು ಬರೆಯಿಸಿದ್ದರಿಂದ ಬಿಡಲು ಬರುವಂತಿರಲಿಲ್ಲ. ಯ ಕಿರಿಕಿರಿಯನ್ನು ನೆನೆದು ಹೋಗಲು ಮನಸ್ಸಿಲ್ಲ.

ಸೆಪ್ಟಂಬರಿನ ಕೊನೆಯ ದಿನವಾಗಿತ್ತದು. ಕಾಶಿಯ ಚರಕಾಸಂದವರು ಗಾಂಧೀ ಜಯಂತಿಯ ಮೂಲಕ ಅಥವಾ ಂಧೀಜಿಯ ಹೇಳಿಕೆಯಂತೆ ಚರಕಾ ಜಯಂತಿಯ ನಿಮಿತ್ತ ಪ್ರಯಜ್ಞವೇ ಮೊದಲಾದ ಅನೇಕ ಕಾರ್ಯಕ್ರಮಗಳನ್ನು ಮಾಡಿಕೊಂಡಿದ್ದರು. ಅವುಗಳಲ್ಲಿ ನೂಲುವ ಸ್ಪರ್ಧೆಯೂ ಒಂದಾಗಿತ್ತು. ನಾನು ವರ್ಧಾದಲ್ಲಿ ಕೆಲವುಕಾಲ ಕಳೆದದ್ದನ್ನೇ ಅರ್ಹತೆಯೆಂದು ಪರಿಗಣಿಸಿ, ನನ್ನ ಕೆಲವು ಗೆಳೆಯರು ಈ ಸ್ಪರ್ಧೆಯಲ್ಲಿ ಭಾಗವಹಿಸಲು ಒತ್ತಾಯಮಾಡಿದರು. ಅವರ ಒತ್ತಾಯವನ್ನು ನೋಡಿ, ಸಂಘದ ಕಾರ್ಯದರ್ಶಿಗಳೂ ಸಹ ನನ್ನ ಹೆಸರನ್ನು ಲಿಸ್ಟಿನಲ್ಲಿ ಸೇರಿಸಿ ಬಿಟ್ಟಿದ್ದರು.

ಹೋಗಲೇಬೇಕಾಯಿತು. ಕಾರ್ಯಕ್ರಮ ಹಾಲಿನಲ್ಲಿ ೩-೩೦ಕ್ಕೆ ಪ್ರಾರಂಭವಾಗುವುದಿತ್ತು. ವಾಜು ದೆ. ಎರಡುವರೆ ಗಂಟೆ.

ಮಳೆಯು ಈಗ ಬರುತ್ತದೆಯೋ ಇನ್ನೊಂದು ಕ್ಷಣದಲ್ಲೋ ಎನ್ನುವ ಸ್ಥಿತಿಯಲ್ಲಿ ಒಂದು ಕೈಯಲ್ಲಿ ಚರಕ, ಮತ್ತೊಂದರಲ್ಲಿ ಛತ್ರಿ ಹಿಡಿದು ಹಾಸ್ಟೆಲಿನಿಂದ ಹೊರಬಿದ್ದೆ. ವಿದ್ಯಾಪೀಠದ ಗೇಟನ್ನು ದಾಟುತ್ತಲೇ ಪುಣ್ಯಕ್ಕೆ ಒಂದು ರಿಕ್ಷಾವೂ ಸಿಕ್ಕಿತು. ರಿಕ್ಷಾಸವಾರಿ ನನಗೆ ಸೇರದಾಗಿದ್ದರೂ ಗತ್ಯಂತರವಿದ್ದಿಲ್ಲ. ಕ್ಷಣ ತಡೆದರೆ ತೊಯ್ಯಬೇಕಾದ ಪ್ರಸಂಗ! ಎಮ್ಮೆ ಬಣ್ಣದ ಕೊಡೆಯುದೇನು ಭರವಸೆ?

ಟೌನ್‌ಹಾಲನ್ನು ಸೇರುವುದಕ್ಕೂ ಮಳೆಯ ಮುಸಲಧಾರೆಯು ಸುರಿಯಲಾರಂಭಿಸುವುದಕ್ಕೂ ಗಂಟೇ ಬಿದ್ದಿತು! 'ಬಚಾವ ಆದೆ' ಎಂದುಕೊಳ್ಳುತ್ತ ಒಳಗೆ ಹೋಗಿ ನೋಡುತ್ತೇನೆ: ಜವಾನನ ಹೊರತು ಒಂದು ಹುಳುವೂ ಕಣ್ಣಿಗೆ ಬೀಳಲಿಲ್ಲ. ತಯಾರಿಯು ಮಾತಂತೂ ದೂರ ಉಳಿಯಿತು. ಆಗಲೇ ಮೂರು ಹೊಡೆದಿತ್ತು. ಜವಾನನನ್ನು ವಿಚಾರಿಸಲಾಗಿ, ಮಳೆಯ ದೆಸೆಯಿಂದ ಜನರು ಬರುವುದು ತಡವಾಗಬಹುದೆಂದು ಕಾರ್ಯಕ್ರಮವನ್ನು ನಿಶ್ಚಿತ ವೇಳೆಗೆ ಒಂದು ತಾಸು ಲೇಟಿನಿಂದ ಸುರುಮಾಡಲಾಗುವುದೆಂದು ತಿಳಿದು ಬಂತು. ಅಷ್ಟು ವೇಳೆಯನ್ನು ಕಳೆಯಲು ಏನು ಮಾಡಬೇಕೆಂಬುದನ್ನು ತಿಳಿಯಲಾರದೆ, ಕೊನೆಗೆ ಖಾದೀಭಾಂಡಾರದ ದಾರಿ ಹಿಡಿದೆ.

ತಿರುಗಿ ಬರುವಷ್ಟರಲ್ಲಿ ತುಂಬ ಜನ ಕೂಡಿದ್ದರು. ಸ್ಪರ್ಧೆಯಲ್ಲಿ ಮಕ್ಕಳ ವಿಭಾಗವೂ ಬೇರೆ ಇತ್ತು. ದೊಡ್ಡವರ ಗ್ರುಪ್ಪಿನಲ್ಲಿ ಸುಮಾರು ೭೦-೮೦ ಜನರಿದ್ದರು—ಸ್ತ್ರೀಯರನ್ನೂ ಸೇರಿಸಿ. ಬನಾರಸದ ೭-೮ ಲಕ್ಷ ಜನಸಂಖ್ಯೆಯೊಡನೆ ಈ ಸಂಖ್ಯೆಯನ್ನು ತುಲನೆಮಾಡಿ ಆಚ್ಚರಿಗೊಳ್ಳುವ ಸಂಭವ ಸಹಜವಾಗಿದ್ದರೂ, ಹಾಗೇ ಸಮಾಧಾನ ಮಾಡಿಕೊಳ್ಳಲು ದಾರಿಯೂ ಸುಲಭವಾಗಿದೆ. ಹೇಗೆಂದರೆ, 'ಇಲ್ಲಿ ಸೇರಿದವರು ಬರೀ ನೂಲುವವರಲ್ಲ; ನೂಲುವ ನಿಪುಣರು; ಅತಿರಥ-ಮಹಾರಥರು' ಎಂದು ತಿಳಿದುಕೊಂಡರಾಯಿತು!

ಹಾಸಿದ ಕರಿಯ ಜಮಖಾನೆಯ ಮೇಲೆ ಸಾಲುಹೊಡೆದು ಕುಳಿತುಕೊಳ್ಳಲಾಯಿತು. ಹೆಂಗುಸರದೊಂದು ಸಾಲು; ಗಂಡುಸರೊಂದು ಸಾಲು. ನನ್ನದು ನನ್ನ ಸಾಲಿನ ತುದಿಯ ಜಾಗವಾಗಿತ್ತು. ಜಾಗದ ಅಡಚಣೆಯು ಮೂಲಕ ನಾನು ತುಸು ಅಡ್ಡವಾಗಿ ಕುಳಿತಿದ್ದೆ. ನನ್ನ ಎದುರಿನ ಸಾಲಿನ ಕೊನೆಯಲ್ಲಿ ಒಬ್ಬ ಹುಡುಗಿಯು ಕುಳಿತಳು. ಅವಳಿಗೂ ಜಾಗದ ಕೊರತೆಯಿಂದ ತುಸು ಅಡ್ಡ ಕೂಡಬೇಕಾಯಿತು. ಅರ್ಥಾತ್ ನಮ್ಮಿಬ್ಬರದೇ ಒಂದು ಸಾಲಾಯಿತು.

ವ್ಯವಸ್ಥೆಯೆಲ್ಲಾ ಮುಗಿಯಿತು. ಪೂನೀ ಕೊಟ್ಟು, ಕದರಿಗೆ ಗುರುತುಹಾಕಿ, ಬಂದವರಿಗೂ ಕೊಟ್ಟ ಹಸರಿಗೂ ತಾಳೆನೋಡಿ, ಹಾಜರಿ ತೆಗೆದುಕೊಳ್ಳಬಹುದಾದ ವ್ಯವಸ್ಥಾಪಕ ..... 'ಪುಷ್ಪಾ ಟೀರಿ. ಕೌನ ಹೈ?'.....'ಜೀ. ಮೈ ಹುಂ' ನನ್ನ ಹತ್ತಿರ ಕುಳಿತ ಹುಡುಗಿಯ ಸ್ವರ. ಮೃದು. ಬಹುಮೃದು.

ನಾನು ನೋಡಿದೆ. ಪುಷ್ಪಾ. ಅಹುದು. ಹೂವೇ. ಇನ್ನೂ ಪೂರ್ಣ ಅರಳಿರಲಿಲ್ಲ. ಅದೇ ಅರಳುತ್ತಿದೆ. ಹತ್ತರ ಮೇಲ್ಪೈದರ ವಯಸ್ಸು. ಹದವಾದ ಮೈ ಬಿಳಿಯದಾದ ಬಣ್ಣ. ಚೆಂದವಾದ ಮೋರೆ. ಆದರೆ ಅದು ಬಾಡಿತ್ತು. ಹೂವಿಗೆ ಬಿಸಿ ತಾಗಿತ್ತು. ಮೇಲಿನಿಂದ ನೀರು ಚಿಮುಕಿಸಿದಂತೆ ತೋರಿದರೂ ಜಳಹೊಡೆದದ್ದು ಮುಚ್ಚುವಂತಿರಲಿಲ್ಲ.

ಅವಳು ಇಲ್ಲಿಯವಳಿದ್ದಂತೆ ತೋರಲಿಲ್ಲ. ಬಂಗಾಲಿಗಳ ಒನಪು-ಒಯ್ಯಾರಗಳೂ ಆಕೆಯಲ್ಲಿರಲಿಲ್ಲ. ಅವಳ ರೂಪವೇ ಬೇರೆ. ಮಾಟವೇ ಬೇರೆ. ನಿರೋಗಶರೀರ. ನಿಷ್ಪಾಪಮುಖ— ಮಧುರಮುಗುಳನೋಡನೆ. ಕಣ್ಣುಗಳು ನೀಲ ನೀಲ. ವಿಶಾಲವಾದ ಹಣೆಯ ಮೇಲೆ ಸರಳ ಬೈತಲೆಯನ್ನು ಮುಚ್ಚಿ ಹಾರಾಡುವ ಮುಂಗುರುಳುಗಳು. ಹಿಂದೆ ಬೆನ್ನ ಮೇಲೆ ಇಳಿಬಿದ್ದ ಎರಡು ನೀಳ್ಜಡೆಗಳು. ಒಟ್ಟಿ ಖಾದಿಯುಡುಪು. ಆಡಂಬರರಹಿತ. ಉಟ್ಟದ್ದೊಂದು ಪಂಜಾಬಿ ಪಾಯಜಾಮೆ. ಹಾಕಿದ್ದೊಂದು ಶೇರವಾನಿ. ತೆಳ್ಳನ್ನ ಸೆಲ್ಲೆಯೊಂದು ಉಬ್ಬಿದ ಎದೆಯನ್ನು ಮುಚ್ಚುವ ಪ್ರಯತ್ನದಲ್ಲಿ ಎರಡೂ ಹೆಗಲಿನ ಮೇಲೆ ಹಾಯ್ದು ಹಿಂಬದಿಯಲ್ಲಿ ಇಳಿಬಿದ್ದಿತ್ತು. ಆಭರಣ ಹೆಸರಿಗೂ ಇದ್ದಿಲ್ಲ. ನಿರಾಭರಣಸುಂದರಿ..... ನಿಸರ್ಗಸೌಂದರ್ಯ... ...

'ಹಾಂ. ಇನ್ನು ಪ್ರಾರಂಭಿಸಿರಿ!' ವ್ಯವಸ್ಥಾಪಕ ನೂಲಲು ನಿರ್ದೇಶವಿತ್ತ. ನನ್ನ ಚರಕ ಜೆನ್ನಾಗಿತ್ತು. ದಿನಾಲು ನೂಲುವುದರಿಂದ ತುಸು ಪ್ರವೀಣತೆಯೂ ನನ್ನಲ್ಲಿತ್ತು. ಪಂದ್ಯಾಟದ ಕಣದಲ್ಲಿ 'ಸಡ್ಡು' ಹೊಡೆದು, ಹಾಗೆಯೇ ಏಕೆ ಬಿಡಬೇಕೆಂದು ಮನಸ್ಸನ್ನು ಕೆಲಸದಲ್ಲಿ ಕೇಂದ್ರೀಕರಿಸುವ ಪ್ರಯತ್ನವನ್ನು ಮಾಡತೊಡಗಿದೆ.

'ಸರ್.....ಸರ್.....ಸರ್.....ಸರ್' ಚರಕಗಳ ರಾಗ. ತಾಳಬದ್ಧವಾಗಿ ಶಬ್ದ. ಠಸ್! ನಾನು ಕಣ್ಣೆತ್ತಿದೆ. ಆಕೆಯ ಚರಕದ 'ನೂಲ' ಹರಿದು, ಕದಿರು ಸಿಡಿದು ನನ್ನ ಒಳಿ ಬಿದ್ದಿತ್ತು. ಅವಳು ಹರಿದ ನೂಲವನ್ನು ಜೋಡಿಸಹತ್ತಿದಳು. ನಾನು ಮೌನವಾಗಿ ನನ್ನ ಹತ್ತಿರ ಇದ್ದ 'ಸ್ಪೇರ್' ನೂಲುಂಡೆಯನ್ನು ಕೆಗೆದುಕೊಟ್ಟೆ. ತುಸು ವಿಸ್ಮಿತಳಾಗಿ ಆಕೆ ಸ್ವೀಕರಿಸಿದಳು. ಮೌನವಾಗಿ; ಆದರೆ ಅವಳ ಕಣ್ಣುಗಳು ಹಾಗಿರಲಿಲ್ಲ.

ನೂಲುವುದರಲ್ಲಿ ನನಗಿಂತ ಅವಳೇನೂ ತೀರಾ ಕಡಿಮೆ ಇಲ್ಲವೆಂದು ನಾನು ಅರಿತೆ. ಅಲ್ಲದೆ ಅವಳ ಚರಕ ಜೆನ್ನಾಗಿಲ್ಲವೆಂಬುದೂ ನನ್ನ ದೃಷ್ಟಿಗೆ ಬೀಳದಿರಲಿಲ್ಲ.

ಮತ್ತೊಂದು ಪ್ರಸಂಗ: ಒಂದು ಕದಿರು ತುಂಬಿ ಇನ್ನೊಂದನ್ನು ಹಾಕಿದ ಕೂಡಲೆ ಅವಳ ಚರಕವು 'ಗೊರ್ರ, ಗೊರ್ರ' ಎಂದು ಅರಚತೊಡಗಿತು. ಆ ಕದಿರು ಕೆಟ್ಟಿತ್ತು. ನೂಲೂ ಚೆನ್ನಾಗಿ ಸೂರಡುತ್ತಿರಲಿಲ್ಲ. ಆದರೆ ಅವಳ ಹತ್ತಿರ ಬೇರೆಯದಿಲ್ಲವೆಂಬುದನ್ನೂ ನಾನು ಅರಿತೆ. ನನ್ನದೊಂದು ಕದಿರನ್ನು ಕೆಗೆದುಕೊಟ್ಟೆ ಪುನಃ ಮೊದಲಿನಂತೆ.

ಸರೀ...

ಎಣಿಕೆಯಾಗಬೇಕಿತ್ತು. ಅಕ್ಕಪಕ್ಕದವರು ಒಬ್ಬರದನ್ನೊಬ್ಬರು ಎಣಿಸಬೇಕೆಂದು ಗೊತ್ತಾಯಿತು. ಅದರಂತೆ ನನ್ನದು ಆಕೆಗೂ ಆಕೆಯ ನೂಲು ನನ್ನ ಪಾಲಿಗೂ ಬಂದಿತು.

ಎಣಿಕೆಯಾಗಿ, ನೂಲನ್ನು ಒಪ್ಪಿಸಿದೆವು. ಅವಳದು ೩೫೦ ಸುತ್ತುಗಳು; ನನ್ನದು ೩೪೮ ಸುತ್ತುಗಳು. ಬೇರೆಯವರದು ಅವರವರ ಯೋಗ್ಯತೆಯಂತೆ.

"ತಮ್ಮ ನೂಲು ಬಹು ಸುಂದರವಿದೆ" ಸ್ಮಿತ ಮತ್ತು ಸ್ನಿಗ್ಧ ದೃಷ್ಟಿಯಿಂದ ಅವಳೆಂದಳು. "ಇಷ್ಟು ಜಿನುಗುನೂಲು ನೋಡಲು ಕಡಿಮೆ ಸಿಗುತ್ತದೆ."

ಹೆಮ್ಮೆಯನ್ನು ಅಡಗಿಸುತ್ತಾ ನಾನೆಂದೆ: "ತಮ್ಮದೂ."

ಎರಡು ದಿನಗಳ ಮೇಲೆ, ನೂಲಿನ ಪರೀಕ್ಷೆಯಾಗಿ— ತೂಕ, ನಂಬರು, ಉದ್ದ ಮೊದಲಾದ ಪರಿಣಾಮ ತಿಳಿಯುವುದೆಂದು ಹೇಳಿ, ಅಂದಿನ ಕಾರ್ಯಕ್ರಮವನ್ನು ಮುಗಿಸಲಾಯಿತು.

ನಾನು ಹೊರಡಲನುವಾದೆ. ಹೊರಗೆ ಬಂದು ನೋಡುತ್ತೇನೆ, ಮಳೆಯು ಕಣ್ಣು ಮುಚ್ಚಿಕೊಂಡು ಸುರಿಯುತ್ತಿದೆ! ಇದರಲ್ಲಿ ಹೋಗಿ ಒದ್ದೆಯಾಗುವುದಕ್ಕಿಂತ ಕೆಲ ನಿಮಿಷ ನಿಂತು ನೋಡೋಣವೆಂದು ಎನಿಸಿತು.

"ತಮಗೆ ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸಲು ಮರೆಯಲಾರೆ" ಎನ್ನುತ್ತ ಪುಷ್ಪಾ ಬಂದು ನನ್ನ ಪಕ್ಕದಲ್ಲಿ ನಿಂತಳು. "ಇಂದು ನಿಮ್ಮ ಸಹಾಯವಿಲ್ಲದಿದ್ದರೆ ನೂಲುವಾಗ ಆರೆಂಟು ನಿಮಿಷ ನನ್ನದು ಹಾಳಾಗುತ್ತಿತ್ತು." ಅವಳ ಕಣ್ಣು ನನ್ನ ಕಣ್ಣಲ್ಲಿ. ದೃಷ್ಟಿ ಕೃತಜ್ಞತೆಯಿಂದ ಕೂಡಿದುದು.

"ಏನು ಮಹಾ....." ನಾನು ನಸುನಗೆಯೊಡನೆ ಸಭ್ಯತೆಯನ್ನು ಪ್ರದರ್ಶಿಸಿದೆ. "ತಮ್ಮ ಹತ್ತಿರ ಛತ್ರಿ ಇದ್ದಂತೆ ತೋರುವುದಿಲ್ಲ.....ನಾನು ಒಂದು ರಿಕ್ಷಾ ಕರೆತರಲೇನು?"

"ಛೇ, ಬೇಡ ಬೇಡ.....ಹಾಗಿದ್ದರೆ ಒಂದು ಕೆಲಸಮಾಡಿರಿ ನನ್ನನ್ನೇ ಅಲ್ಲಿಯವರೆಗೆ ಮುಟ್ಟಿಸಿರಿ!"

ನಾನು ಕೊಡೆಯರಳಿಸುತ್ತ "ನಿಮ್ಮ ಚರಕವೆಲ್ಲಿ?" ಎಂದೆ.

"ಅದು ನನ್ನದಲ್ಲ. ಇಲ್ಲಿಯದೇ ಆಗಿತ್ತು. ಅದುದರಿಂದ ಅಷ್ಟು ತೊಂದರೆಯಾಯಿತು." ಆಕೆ ನಿಸರ್ಗಸಂಕೋಚದಿಂದ ನನ್ನೊಡನೆ ನಡೆಯಲು ಸಿದ್ಧಳಾದಳು. ಮಳೆಯಲ್ಲಿ ಮೊದಲೇ ರಭಸವಿರದಿದ್ದರೂ ಸಣ್ಣಗಾಗಿರಲಿಲ್ಲ. ಕೊಡೆ ಸಣ್ಣದಾಗಿತ್ತು. ಆಕೆ ನನ್ನ ಬಲಪಕ್ಕದಲ್ಲಿ ಕೂಡಿ ನಡೆದರೂ ಮೈಗೆ ನೀರು ತಾಗುತ್ತಿತ್ತು. ನಾನು ಅತ್ಯಂತ ಮರೆಗುಳಿಯೆಂದು ಹೆಸರಾಗಿದ್ದರೂ ಈ ಸಂದರ್ಭದಲ್ಲಿ ವಸಂತಸೇನೆಯಲ್ಲಿಯ ದೃಶ್ಯ ನೆನಪಾಗದಿರಲಿಲ್ಲ.

ಒಬ್ಬ ರಿಕ್ಷಾವಾಲನನ್ನು ಕರೆದೆ. ರಿಕ್ಷಾದಲ್ಲಿ ಅವಳನ್ನು ಕುಳ್ಳಿರಿಸಿ, ನನಗಾಗಿ ಬೇರೆಯದನ್ನು ಹುಡುಕುವುದರಲ್ಲಿದ್ದೆ.

"ನಿಮಗೆಲ್ಲಿ ಹೋಗಬೇಕಾಗಿದೆ?" ಅವಳ ದನಿ. 'ನನಗೆ.... ಗೊತ್ತಿಲ್ಲ.' ನಾನೆಂದೆ.

"ನೀವು ಏನೂ ತಿಳಿದುಕೊಳ್ಳದಿದ್ದರೆ ಇದರಲ್ಲೇ ಕುಳಿತುಕೊಳ್ಳಬಹುದು. ನಾನೂ ಅಲ್ಲೇ ಹೋಗುವುದು!"

ನಾನು ಪುಳಕಿತನಾದೆ. ರಿಕ್ಷಾದಲ್ಲಿ ಇಬ್ಬರು ಕುಳಿತರೆ ತ್ರಿಫಲ್ ಆಗುತ್ತದೆ!

ಹನಿ ಕಡಿಯಹತ್ತಿತ್ತು. ದಾರಿಯಲ್ಲಿ ಸ್ತಬ್ಧ. ನಾನು ಸಂಕೋಚವಶ; ಆದರೂ ಕೊನೆಗೆ ಸಾಹಸಮಾಡಿದೆ. "ನೀವು ಇಲ್ಲಿಯವರಲ್ಲವೆಂದು ತೋರುತ್ತದೆ. ಅಷ್ಟೇ ಅಲ್ಲ, ಇಲ್ಲಿಗೆ ಹೊಸಬರೂ ಆಗಿರಬೇಕು."

ತಾನು ಹೊತ್ತು ಪುನಃ ಮೌನ. "ಯಸ್. ಯು ಆರ್ ರೈಟ್. ವಿ ಆರ್ ಫ್ರಮ್ ಪಂಜಾಬ್." ಒಂದು ನಿಟ್ಟುಸಿರೊಡನೆ ಈ ಶಬ್ದಗಳು! ನನಗೆ 'ಶಾಕ್' ಆದಂತಾಯಿತು.

".....ಹಾಗಾದರೇನೀಕೆ.....ರಿಫ್ಯೂಜೀ.....?" ಬೆರಗಾಗಿ ಅವಳನ್ನೇ ನೋಡತೊಡಗಿದೆ.

* * *

ಪರಿಣಾಮ ತಿಳಿಯಿತು. ಸ್ಥಾನೀಯ ದೈನಿಕವೊಂದರ ಮಾರ್ನಿಂಗ್ ಎಡಿಶನ್‌ನಲ್ಲಿ 'ಪ್ರಾಜ್‌ವಿನ್ನರ್ಸ್' ರ ಹೆಸರು ಪ್ರಕಟವಾಗಿತ್ತು. ನನ್ನ ಊಹೆ ತಪ್ಪಾಗಲಿಲ್ಲ, ಗಂಡುಸರಲ್ಲಿ ಮೊದಲನೆಯವನು ನಾನಾಗಿದ್ದೆ. ಹೆಂಗುಸರಲ್ಲಿ ಪುಷ್ಪಾ ಬೇರಿ ಎರಡನೆಯ ನಂಬರು.

ಸಂಜೆಗೆ ೪ ಗಂಟೆಗೆ ಟೌನ್‌ಹಾಲಿನಲ್ಲಿ ಸೇರಿದ ಸಭೆಯಲ್ಲಿ ಭಾಷಣ-ಗೀಷಣಗಳಾದ ಮೇಲೆ, ಅಭಿನಂದನೆಯೊಡನೆ ನಮಗೆ ಇನಾಮುಗಳು ದೊರೆತುವು. ನನಗೆ ಚರಕವೊಂದು. ಅಕೆಯುದನ್ನು ನೋಡಿದೆ: ರಾಧಾಕೃಷ್ಣನ್ನರು ಸಂಪಾದಿಸಿದ ಗಾಂಧೀಜೀಯವರನ್ನು ಕುರಿತ ಒಂದು ಪುಸ್ತಕ.

ನನಗೊಂದು ಯೋಚನೆಹೊಳೆಯಿತು. ಅಕೆಯನ್ನು ಗಲಾಟೆಯೊಳಗಿಂದ ಹೊರಗೆ ಕರೆದೆ. ಬರುತ್ತಲೇ ಗೆಲುವಿನ ನಗುವಿನೊಡನೆ, 'ಸಫಲತೆಯ ಬಗ್ಗೆ ಅಭಿನಂದನೆ' ಎಂದು ಕೈ ಕುಲುಕಿದಳು.

"ಅದಿರಲಿ. ನನ್ನದೊಂದು ಮಾತನ್ನು ಒಪ್ಪಬೇಕು" ನಾನೆಂದೆ.

"ಅದೇನು ಮಾತು?"

"ಮತ್ತೇನಿಲ್ಲ; ನನ್ನ ಹತ್ತಿರ ಚರಕವೊಂದಿದೆ. ನಿಮ್ಮಹತ್ತಿರ ಇಲ್ಲ. ಆದುದರಿಂದ ಈ ಚರಕ ನಿಮಗಿರಲಿ." ಅಕೆ ಮರುಮಾತನ್ನಾಡಲಿಲ್ಲ. ತನ್ನ ಪುಸ್ತಕದ ಮೇಲೆ ನನ್ನ ಹೆಸರನ್ನು ಬರೆದು "ಹಾಗಾದರಿದು ನಿಮ್ಮ ಹತ್ತಿರ ಇರಲಿ. ಕೇವಲ ನೆನಪಿಗಾಗಿ" ಎಂದಳು.

ನಾನು ನೋಡಿದೆ. ನಿರ್ನಿಮೇಷ ದೃಷ್ಟಿಯಿಂದ. ಅದೇ-ಸುಂದರ ಮುಖ. ಅಕರ್ಷಕ ಕಣ್ಣುಗಳು. ಮೃದು-ಮಧುರ ಮುಗುಳ್ನಗೆ ತುಟಿಯಲ್ಲಿ ಇಲ್ಲ., ಮೊನ್ನೆನಂತದು ಬಾಡಿರಲಿಲ್ಲ. ಚಿಗುರಿತ್ತು. ಉಲ್ಲಾಸಪೂರಿತವಾಗಿತ್ತು.

ತಿಳಿಯದೆಯೆ ನಾವು ಗೇಟಿನ ಬಳಿ ಬಂದಿದ್ದೆವು. ಕತ್ತಲಾಗುತ್ತಿತ್ತು. ಬೀದಿಯ ದೀಪಗಳು ಆಗಲೇ ಹೊತ್ತಿಕೊಂಡಿದ್ದುವು.

"ಇಂದೇನು, ಉಲ್ಲಾಸದ ಝರಿ ಒಡೆದಿದೆಯಲ್ಲ? ಕಾರಣ-ತಿಳಿಯಬಹುದೆ?" ನಾನು ಕೇಳಿದೆ. ಅಕೆ ನಾಚಿದಳು. ಆದರೆ ಕೂಡಲೇ "ನನ್ನ ತಾಯಿಗೆ ಕೆಲಸದೊರೆಯಿತು, ಹಿಂದೂ ಗರ್ಲ್ಸ್‌ಸ್ಕೂಲಿನಲ್ಲಿ" ಎಂದು ನುಡಿದಳು.

"ಓ. ತುಂಬ ಆನಂದದ ಸಂಗತಿ." ನಾನು ತುಸು ತಡೆದು ಕೇಳಿದೆ, "ನಿಮ್ಮ ಪೂರಾ ಕಥೆಯನ್ನು ಈಗ ಕೇಳಬಹುದೆ?"

ಟೌನ್‌ಹಾಲಿನ ಎದುರಿಗೇ ಇದೆ ಒಂದು 'ಬಾಗ್'. ಹೆಸರಿನ ಬಾಗದು. ಬನಾರಸವು ಇಷ್ಟು ದೊಡ್ಡ ನಗರವಾಗಿದ್ದರೂ ಜೆನ್ನಾದ ಬಾಗೊಂದೂ ಇಲ್ಲ. ಇದ್ದುದರಲ್ಲೇ ಜೆನ್ನಾಗಿದೆ ಎಂದು ಇದರ ಪ್ರಸಿದ್ಧಿಯಾದರೂ ಕಾರಂಜಿ, ಹೂ, ಮಂಟಪ ಮೊದಲಾದುವು ನಾಸ್ತಿ. ಆದರೂ ಸಮಾಧಾನ 'ಕುರುಡುಗಣ್ಣಿಗೆ ಮೇಗಣ್ಣೇ ಮೇಲು' ಎಂಬಂತೆ!

ರೇಡಿಯೋ ಹಚ್ಚಿದ ಸ್ಥಳವನ್ನುಳಿದು ಉಳಿದೆಡೆ ವಿಶೇಷ-ಜನಸಂದಣಿ ಇರಲಿಲ್ಲ. ನಾವು ಯಾರಿಲ್ಲದ ಒಂದು ಮೂಲೆಯಲ್ಲಿ ಹೋಗಿ ಕುಳಿತೆವು. ಆದರೆ ಕೂಡಲೆ ಏಳಬೇಕಾಯಿತು, ಆ ಸ್ಥಾನವನ್ನು—ಇರುವೆಗಳು ಆಕ್ರಮಿಸಿದ್ದುವು. ಮತ್ತೊಂದು ಸ್ಥಾನವನ್ನು ಹುಡುಕಿದೆವು.

ಐದಾರು ನಿಮಿಷ ಮೌನ. ಬೆಳಕು ದೂರದಲ್ಲಿತ್ತು. ಆ ಮಂದ ಪ್ರಕಾಶದಲ್ಲೂ ಅಕೆಯ ವದನದ ಗಾಂಭೀರ್ಯವೂ ಅದರಲ್ಲಡಗಿದ ದಾರುಣ ಕ್ಷುಬ್ಧತೆಯೂ ಸ್ಪಷ್ಟವಾಗಿ ಅನುಭವವಾಗುತ್ತಿತ್ತು. ಪುಷ್ಪಾ ಹೇಳಿದುದರ ಮುಕ್ತಿತಾರ್ಥವಿದು:

ಶಾಂತಿಸ್ವರೂಪ ಬೇರಿಯವರು ಪಂಜಾಬದ ವಿಶ್ವವಿದ್ಯಾಲಯವೊಂದರ ಪ್ರೊಫೆಸರು. ಲಾಹೋರದಲ್ಲಿ ಅವರು ಒಂದು ಕಾಲೇಜಿನಲ್ಲಿ ಇಂಗ್ಲಿಷ್ ಪ್ರೊಫೆಸರು. ಮತ್ತು ನಗರದ ಹೆಸರಾದ ಕಾಂಗ್ರೆಸ್ ಕಾರ್ಯಕರ್ತರು. ಅವರ ಪತ್ನಿಯೂ ಹೈಸ್ಕೂಲೊಂದರಲ್ಲಿ ಟೀಚರು. ಇವರಿಗೆ ಮೂವರು ಮಕ್ಕಳು. ಹಿರಿಯವ ಅಮರನಾಥ; ಬಿ.ಎ. ಫೈನಲ್ಲಿನಲ್ಲಿ ಓದುತ್ತಿದ್ದ. ನಡುವಿನವಳು ಶಾಂತಿ. ಇಂಟರ್ ವಿದ್ಯಾಡಿಯೇಟ್ ಪಾಸ್. ಕಿರಿಯವಳೇ ಪುಷ್ಪಾ. ಇಂಟರ್ ಫಸ್ಟ್ ಇಯರ್. ಮನೆಯಲ್ಲಿ ಇವರ ಹೊರತಾಗಿ ಶಾಂತಿಸ್ವರೂಪರ ಮುದಿತಾಯಿ. ಮತ್ತು ಅಳುಮಗ ಜಿನ್ನು. ಅಂತು ಇರು ಮತ್ತೊಂದು ಮಂದಿಯ ಕುಟುಂಬ. ಸುಖ-ಶಾಂತಿಯಿಂದ ಸಮೃದ್ಧವಾದುದು.

ಅನೇಕ ದಿನಗಳಿಂದ ಒಳಗಿಂದೊಳಗೇ ಗಮಿಯುತ್ತಿದ್ದ ದಂಗೆಯ ಬೆಂಕಿಯು, ಆಗಸ್ಟ್ ೧೫ ರ ದಿನ ಭುಗಿಲ್ಲೆಂದಿತು. ಇತ್ತ ಸ್ವಾತಂತ್ರ್ಯ ಮಹೋತ್ಸವದ ಸಿದ್ಧತೆ. ಅಲ್ಲಿ ಜಾತೀಯ ವಿದ್ವೇಷದ ರುದ್ರತಾಂಡವ! ಗೂಂಡಾಗಳ ವಾತವ ನಗ್ನ

ನರ್ತನ!! ದಿನ ಕಳೆದಂತೆ ಪರಿಸ್ಥಿತಿ ಕರಾಳವಾಗುತ್ತಿತ್ತು. ಕಾಡ್ಗಿಚ್ಚಿನ ಭೀಕರಜ್ವಾಲೆ ನಾಲ್ಕೂ ನಿಟ್ಟಿಗೆ ಪಸರಿಸಿತು. ಲೂಟಿ.....ಕೊಳ್ಳೆ.....ಸುಲಿಗೆ.....ಅಲ್ಪಸಂಖ್ಯಾಕರ ಗೋಳು..... .....ಅಬಲೆಯರ ಮೇಲೆ ಅತ್ಯಾಚಾರ,.....ಮಾನ ಭಂಗ.....ಬಲಾತ್ಕಾರಮತಪರಿವರ್ತನೆ.....ಜೀವಂತ ಸುಡುವುದು .....ಕಡಿ .....ಕೊಚ್ಚು .....

ತಾರೀಖು ೨೩ ರ ರಾತ್ರಿ. ಅನೇಕದಿನಗಳಿಂದ ಲಾಹೋರವು ಉರಿಯುತ್ತಿತ್ತು. ನಗರದಲ್ಲಿ ದೀರ್ಘವಾದ ಕರ್ಫ್ಯೂ ಇತ್ತು. ವಾತಾವರಣ ಇಂದು ತುಸು ಶಾಂತವಿತ್ತು. ಸ್ಮಶಾನಶಾಂತಿ. ನಿರ್ಜನ. ನಿಃಶಬ್ದ. ನೀರವ.

ಮನೆಯಲ್ಲಿ ಎಲ್ಲರೂ ಮಲಗಿದ್ದರು, ನಿದ್ದೆ ಬಂದಿದೆಯೋ ಇಲ್ಲವೋ ಅವರವರಿಗೇಗೊತ್ತು. ಒಮ್ಮೆಲೇ ಕೂಗು : 'ಬೆಂಕಿ. ಬೆಂಕಿ-. ಅಯ್ಯೋ ಬೆಂಕಿ.!'

ಧಡಾಧಡಿ. ಧಡಾಧಡಿ. ಗಡಬಡಿಸಿ, ಗಾಬರಿಯಿಂದ, ಎಲ್ಲರೂ ಎದ್ದರು, ಹಾರಿದರು, ಓಡಿದರು.

ನಾಲ್ಕೂ ಕಡೆಗಳಲ್ಲಿ ಬೆಂಕಿ ಉರಿಯುತ್ತಿದೆ!

ಎಲ್ಲರೂ ಹೊರಬಂದಿದ್ದರು—ಮನೆಯ ಹಿಂಬದಿಯಲ್ಲಿ; ಆದರೆ ಮುದುಕಿ ಇಲ್ಲ. ಶಾಂತಿ ಸ್ವರೂಪರು ಪುನಃ ಒಳಗೆ ನುಗ್ಗಿದರು.

ಎದೆಗುದಿಯ ಐದು ನಿಮಿಷ. ಕರಾಳಜ್ವಾಲೆ. ಚಟ ಚಟ ಕಿಡಿ. ಧಡ್'.....ಅಟ್ಟವು ಕಡಕೊಂಡು ಬಿತ್ತು.

ಶಾಂತಿಸ್ವರೂಪರು ಬಾಗಿಲವರೆಗೆ ಬಂದರು. ಹೆಗಲ ಮೇಲೆ ತಾಯಿಯ ಶರೀರವಿತ್ತು. ಸುತ್ತಲೂ ಬೆಂಕಿ. ಅಮರನಾಥ ಸಹಾಯಕ್ಕೆ ಧಾವಿಸಿದ.

ಧಂ....ಶಾಂತಿಸ್ವರೂಪರು ತಾಯಿಯ ಶರೀರದೊಡನೆ ಉರುಳಿದರು.

ಅಮರ ತಿರುಗಿ ನೋಡಿದ. ಚೆಟ್ಟನೆ ರಿವಾಲ್ವರನ್ನು ಹಿಗೆದ. 'ಧಂ....ಧಂ....ಡಂ....'

ತಂದೆಗೆ ಗುಂಡು ಹಾಕಿದವನ ಬಲಿಯಾಗಿತ್ತು. ಅವನು ನೆರೆಮನೆಯವನಾಗಿದ್ದ. ಒಮ್ಮೆ ತಂದೆಯ ಅಪ್ತಗೆಳೆಯನಾಗಿದ್ದ.

ಮತ್ತೇನಾಗುವುದಿತ್ತೋ. ಅಷ್ಟರಲ್ಲಿ ಕೆಲ ಸೀಖ ಸೈನಿಕರು ಆಗಮಿಸಿದರು. ಆದ ಸಂಗತಿಗೆ ಸಂತಾಪ ವ್ಯಕ್ತಮಾಡಿದರು. ಗುಂಡರನ್ನು ಹುಡುಕಾಡಿದರು. ಕೆಲವರು ಇವರನ್ನು, ರಿಫ್ಯೂಜೀ ಕ್ಯಾಂಪಿಗೆ ಮುಟ್ಟಿಸಿದರು.

ನಿರಾಶ್ರಿತರ ಶಿಬಿರದಲ್ಲಿ ಆರುದಿನ ಇದ್ದು ಮಾಡಬೇಕು, ಎಲ್ಲಿ ಹೋಗಬೇಕು? ಪತ್ತೆಯಿಲ್ಲ. ಕೊನೆಗೆ ಬನಾರಸದಲ್ಲಿಯ ನಿಕಟ ಪರಿಚಿತರೊಬ್ಬರಲ್ಲಿಗೆ ಹೋಗಬೇಕೆಂದು ಮಾಡಿದರು.

ಗಾಡಿಯು ಕಿಕ್ಕಿರಿದು ತುಂಬಿತ್ತು. ಎಲ್ಲರೂ ನಿರಾಶ್ರಿತರು. ಎಲ್ಲರೂ ಸರ್ವಸ್ವವನ್ನು ಕಳೆದುಕೊಂಡವರು. ಎಲ್ಲರೂ ಜೀವದಾಶೆಯಿಂದ ಓಡುವವರು. ಒಂದೇ ಜಾತಿ, ಒಂದೇ ರೀತಿ.

ಲಾಹೋರದಿಂದ ಎರಡನೆಯ ಸ್ಟೇಶನ್ನು. ಟ್ರೇನು ಅಗತ್ಯ. ಎಲ್ಲದಿದ್ದರೂ ನಿಂತಿತು. ನಿಲ್ಲುತ್ತಲೇ ಕಾಯುತ್ತಿದ್ದ ನೂರಾರು ಗೂಂಡಾಗಳು ಗಾಡಿಯ ಮೇಲೆ ಬಿದ್ದರು.

ಹೊಡೆದಾಟ.. .. ಎಳೆದಾಟ.. ..ಚೀರುವ ಸದ್ದು.... ಅರಚುವ ಕೂಗು ..... ಆರ್ತನಾದ ..... ಅದರೆಲ್ಲ ಅರಣ್ಯರೋದನ.

ಗುಂಡರು ಗಾಡಿಯಲ್ಲಿಯ ತರುಣಿಯರನ್ನು ಹೊತ್ತರು. ಗಟ್ಟುಮೊಟ್ಟಿಗಳನ್ನು ಸುಲಿದರು. ಆತಂಕ ಮಾಡಿದರೆ ಬಡಿತ.

ಒಬ್ಬ ಟೊಣಪ ಶಾಂತಿಯ ಕೈಯನ್ನು ಹಿಡಿದು, ದರದರ ಎಳೆದ. ಅಳಿ ಅಡ್ಡಿಮಾಡಲು ಎದೆಯ ಮೇಲೆ ಗುದ್ದು ಬಿತ್ತು. ತುರು. ಬನ್ನು ಹಿಡಿದ. ಪುಪ್ಪಾ ಮೂಲೆಯಲ್ಲಿ ಮುಚ್ಚಿಕೊಂಡು ಮುದುಡಿ ಕುಳಿತಿದ್ದಳು. ಅವರ ಕಣ್ಣಿನಿಂದ ಪಾರಾದಳು ಅಮರನಾಥ ಎದ್ದ. ಗಾಡಿಯ ಹೊರಗೆ ಹಾರಿದವನೇ ಆ ಟೊಣಪನನ್ನು ಎಳೆದು ನಿಲ್ಲಿಸಿ, ಮೂಗಿನ ಮೇಲೆ ಬಲವಾಗಿ ಗುದ್ದಿ, ತಂಗಿಯನ್ನು ಬಿಡಿಸಿದ. ಆದರೆ ಅಷ್ಟರಲ್ಲಿ ಹಿಂದಿನಿಂದ ಅವನ ತಲೆಯ ಮೇಲೆ ಬಲವಾದ ಡೊಣ್ಣೆಯ ಏಟು ಬಿತ್ತು. ಅದರ ಬೆನ್ನಿಗೆ ಮತ್ತೊಂದು. ಕೂಡಲೇ ಉರುಳಿದ ಹಾಯ್! ಸೀಟಿಯಾಯಿತು..... ಗಾಡಿ ಹೊರಟಿತು. ಕಣ್ಣು ನೋಡುತ್ತಿತ್ತು. ಆದರೆ ಕೈಯಲ್ಲೇನೂ ಇರಲಿಲ್ಲ. ತಾಯಿಯ ಹೃದಯ ಬೆಂದು ಹೋಯಿತು ನೋಡುವ ಕಣ್ಣನ್ನು ಕೀಳಬೇಕೆಂದೆನಿಸಿತು.....

ಅಂತು ಅನೇಕ ಕುತ್ತು—ಗಂಡಾಂತರಗಳನ್ನು ಕಳೆದು, ಸರ್ವಸ್ವವನ್ನು ಕಳೆದುಕೊಂಡು, ಬನಾರಸಕ್ಕೆ ಜೀವಂತ ಮುಟ್ಟಲು ಏಳುದಿನ ಹಿಡಿದುವು. ಕೂಳಿಲ್ಲ ನೀರಿಲ್ಲ. ಬದುಕಿದ ಜೀವ ಹೊರೆಯಾಗಿತ್ತು.

ಬನಾರಸಿನಲ್ಲಿ ಜನರ ಪರಿಚಿತರು ತಾಯಿ-ಮಗಳನ್ನು ತುಂಬ ಪ್ರೀತಿ-ಸಹಾನುಭೂತಿಯೊಡನೆ ಕಂಡರು. ತುಂಬ ಉಪಚಾರ ಮಾಡಿದರು, ಸಾಂತ್ವನವಿತ್ತರು. ಆದರೆ ಅದು ಮಾಯುವ ಬರೆಯೇ?

ಒಮ್ಮೊಮ್ಮೆ ಎಲ್ಲವನ್ನೂ ಮರೆಯುವ ಪ್ರಯತ್ನಮಾಡುತ್ತಾರೆ. ಆದರೆ ವಿಫಲ. ಶಾಂತಿ ಮತ್ತು ಅಮರರ ಬಗ್ಗೆ ಕ್ಷೀಣ ಆಶೆಯೊಂದು ಇನ್ನೂ ಜೀವಿಸಿದೆ. ದಿನವೂ 'ಹಿಂದುಸ್ತಾನ್ ಟೈಮ್ಸ್'ನ್ಲಿಯ 'ಬ್ಯಾ ಎಂಡ್ ಎಬೌಟ್ ರಿಫ್ಯೂಜೀಸ್' ಕಾಲಮ್ ನೋಡುತ್ತಾರೆ.

ಇದ್ದುದರಲ್ಲಿಯೇ ಒಂದು ಒಳ್ಳೆಯ ಸಂಗತಿ. ಅದರಿಂದಲೇ ಆಕೆಯ ಬೊಗ ಅರಳಿದುದು. ಆಕೆಯ ತಾಯಿಗೆ ಇಲ್ಲಿಯ ಶಾಲೆಯೊಂದರಲ್ಲಿ ನೌಕರಿ ದೊರೆತಿದೆ. ಮತ್ತು ಕ್ಷಿಪ್ರದಲ್ಲಿಯೇ ಅವರು ತಮ್ಮ ಸ್ವಂತ ಮನೆಯನ್ನು ಮಾಡಿಕೊಳ್ಳುವರು!

(೨೦೬ನೆಯ ಪುಟ ನೋಡಿರಿ)

ಕಾರಂತರ 'ಮರಳಿ ಮಣ್ಣಿಗೆ'

(ವಿಮರ್ಶಾತ್ಮಕ ಪರಿಚಯ)*

ಪ್ರೊ. ರಂ. ಶ್ರೀ. ಮುಗಳಿ, ಎಂ.ಎ., ಬಿ.ಟಿ. ಸಾಂಗಲಿ

★

ಮಿತ್ರರೆ,

ಈವೊತ್ತು 'ಸಾಹಿತಿಯೂ ಅವನ ಲೋಕಪ್ರಿಯ ಕೃತಿಯೂ' ಎಂಬ ಮಾಲಿಕೆಯಲ್ಲಿ, ಮೊದಲನೆಯದಾಗಿ ಕಾರಂತರ 'ಮರಳಿ ಮಣ್ಣಿಗೆ' ಎಂಬ ಕಾದಂಬರಿಯನ್ನು ಕುರಿತು ನಾನು ಮಾತಾಡಲಿದ್ದೇನೆ. ಹೇಳಬೇಕಾದದ್ದು ಬಹಳ, ಹೊತ್ತು ಕಡಿಮೆ. ಓಡುವ ಹೊತ್ತಿನ ಬೆನ್ನು ಹತ್ತಿ ನಾನು ಹೇಳುವ ಮಾತು, ಹೇಳದೆ ಉಳಿದ ಮಾತಿನ ಪರಿವಾರವನ್ನು ಹಿಂದೆ ಬಿಟ್ಟು ಹೂಂಟೆದೆ ಎಂದು ನೀವು ತಿಳಿಯಬಲ್ಲಿರಿ

ಕಾರಂತರು ಎಂದರೆ ಯಾರಿಗೆ ಗೊತ್ತಿಲ್ಲ? ಕನ್ನಡ ನಾಡಿನಲ್ಲಿ ಇಷ್ಟೇ ಯಾಕೆ, ಅವರು ದಿಗಂತ ವಿಖ್ಯಾತರು—ಎಂದು ಬಣ್ಣಿಸುವ ರೂಢಿಯುಂಟು. ಅದು ಬಣ್ಣನೆಯ ರೀತಿ. ನಿಜವಾಗಿ ನೋಡಿದರೆ ಕಾರಂತರು ಅಂದರೆ ಯಾರಿಗೆ ಗೊತ್ತಿದೆ? ಎಷ್ಟು ಜನಕ್ಕೆ ಅವರ ಜೀವಾಳ ತಿಳಿದಿದೆ? ಅಧುನಿಕ ನಾರದರಂತೆ, ಮುಗಿಲಲ್ಲಿಲ್ಲ, ನೆಲದ ಮೇಲೆ ಅವರು ತಿರುಗಿಯೇ ತಿರುಗಿದ್ದಾರೆ. ಕನ್ನಡ ಜನ ಅವರನ್ನು ಕಂಡಿದೆ, ಕೇಳಿದೆ. ಆದರೆ ಅವರ ವ್ಯಕ್ತಿಸ್ವರೂಪವನ್ನೂ ಕೃತಿಯ ಸಿರಿಮೆಯನ್ನೂ ತಿಳಿದ ಜನ ಕಡಿಮೆ. ಅವರ ಉದ್ದ ಕೂದಲಿನ ಕಪ್ಪು ಹಿನ್ನೆಲೆಯಲ್ಲಿ ಹೊಳೆಯುವ ಅಗಲವಾದ ಕೆಂಪು ಮುಖವನ್ನು ಬಿಗಿಯಲ್ಲಿ ನೋಡಿದರೆ ಹೆದರಿಕೆ ಬರುತ್ತದೆ, ನಗೆಯಲ್ಲಿ ನೋಡಿದರೆ ಮನಸ್ಸು ಅರಳುತ್ತದೆ. ಕೆಲವರಿಗೆ ಅವರು ನಾಟಕ ಕಂಪನಿಯ ನಟನಂತೆಯೂ ಹಲವರಿಗೆ ಊದುಕಡ್ಡಿ ಮಾರುವವನಂತೆಯೂ ಕಂಡಿರಬಹುದು. ಎರಡೂ ಒಂದರ್ಥದಲ್ಲಿ ನಿಜವೇ. ಪ್ರಪಂಚದ ಕೊನೆ-ಮೊದಲಿಲ್ಲದ ನಾಟಕದಲ್ಲಿ ಅವರು ನಟನಂತೆ ಬಾಳುತ್ತಿದ್ದಾರೆ, ಬದುಕಿನಲ್ಲಿ ಕಂಪು ಹರಡಲಿ ಎಂದು ತಮ್ಮ ಬಾಳುವೆಯನ್ನು ಊದುಕಡ್ಡಿಯಂತೆ ಸದ್ದಿಲ್ಲದೆ ಸುರಿಸುತ್ತಿದ್ದಾರೆ. ಶಿವರಾಮರೆಂಬುದು ಅವರ ಸಾರ್ಥಕ ಹೆಸರು. ಅವರ ಇರುವಿಕೆಯಲ್ಲಿ, ಕಲಾಕೃತಿಯಲ್ಲಿ ಶಿವನ ಸಂಹಾರಕ ಶಕ್ತಿ ಇದೆ, ರಾಮನ ನಿರ್ಮಾಪಕ ನೀತಿಯಿದೆ. ಬೀಳಲಾದ ಮನೆಯನ್ನು ಅವರು ಕೆಡುಹಿ ಬಯಸುತ್ತಾರೆ, ಹೊಸ ಮನೆಯನ್ನು ಕಟ್ಟಲು ಹೆಣಗುತ್ತಾರೆ. ತಾವು ತಿರುಗಿದಲ್ಲೆಲ್ಲ ಬಾಳನ್ನು ಹೆಣ್ಣೆಟ್ಟು ನೋಡಿ, ಇದ್ದಂತೆ ಇರುವ ಸತ್ಯ ಎಷ್ಟೇ ದಾರುಣವಾಗಿರಲಿ ಅದನ್ನು ಅನುಭವಿಸಿ, ಭೂಮಂಡಲವು ಮುನಿದರೂ ಸರಿ ಕಂಡದ್ದನ್ನಾಡುವ ಸರ್ವಜ್ಞನ ಧೈರ್ಯವನ್ನು ಪಡೆದಿದ್ದಾರೆ. ಕೆಲಸಕ್ಕೆ ಬಾರದ ಧ್ಯೇಯವಾದ, ಹುಚ್ಚು ಭಾವನೆಯೆಂದರೆ ಅವರಿಗೆ ಸೇರದು. ತಮ್ಮ ಅಣಕದ ನಗೆಯ ಸಮೃದ್ಧಿಯಿಂದ ಅದನ್ನು ಕೆಣಕುವುದೆಂದರೆ ಅವರಿಗೊಂದು ಆಟ. ಅವರು ಅದೆಷ್ಟೋ ಪ್ರಯೋಗಗಳನ್ನು ಮಾಡಿ ಗೆದ್ದಿರುತ್ತಾರೆ, ಸೋತಿದ್ದಾರೆ. ಗೆಲುವಿನಿಂದ ಹುರುಪುಗೊಂಡಿರುವುದಕ್ಕಿಂತ ಸೋಲಿನಿಂದ ಕಹಿಯಾಗಿರುವುದೇ ಹೆಚ್ಚೆಂದು, ಅವರ ಚುಚ್ಚುಮಾತು ಆಗಾಗ ಸಾರುತ್ತದೆ. ಅದೇನೇ ಇರಲಿ, ತಮ್ಮ ಜೀವನವನ್ನೇ ಒಂದು ಕಲೆಯಾಗಿ ಮಾಡಹೊರಟ, ನಮ್ಮ ನಾಡಿನ ಕಲಾವಿದರಲ್ಲಿ ಅವರೊಬ್ಬರು. ಅವರು ಬರೆದ ಕೃತಿಗಳಲ್ಲಿ 'ಮರಳಿ ಮಣ್ಣಿಗೆ' ಎಂಬುದು ಅರಳಿ ಹಣ್ಣಿಗೆ ಬಂದ ಕೃತಿ. ಕನ್ನಡ ಕಾದಂಬರಿಗಳಲ್ಲಿ ಅದು ಹಿರಿಯದು. ಅದು ಹೇಗೆ ಎಂಬುದನ್ನು ಈಗ ನೋಡೋಣ.

'ಮರಳಿ ಮಣ್ಣಿಗೆ'ಯ ಕಥೆ ಬಹಳ ದೊಡ್ಡದು. ಮಂಗಳೂರು-ಕರ್ನಾಟಕದ ಸಮುದ್ರತೀರದ ಒಂದು ಹಳ್ಳಿಯಲ್ಲಿ ಬ್ರಾಹ್ಮಣಕುಟುಂಬವೊಂದು, ಮೂರು ಪೀಳಿಗೆಯಲ್ಲಿ ಅಂದರೆ ಸುಮಾರು ನೂರು ವರ್ಷಗಳ ವರೆಗೆ ಬಾಳಿದ ಬಡತನದ ಬಾಳುವೆಯ ಕತೆ ಇದರಲ್ಲಿದೆ. ಮೊದಲನೆಯ ಪೀಳಿಗೆಯಲ್ಲಿ ರಾಮಐತಾಳರು, ಎರಡರಲ್ಲಿ ಅವರ ಮಗ ಲಚ್ಚ, ಮೂರರಲ್ಲಿ ಲಚ್ಚನ ಮಗ ರಾಮರಾಯ ಈ ಮೂವರು ಮೂರು ಪೀಳಿಗೆಯ ಗುರುತುಗಂಬವಾಗಿ, ಈ ಕಾದಂಬರಿಯ ಮೂವರು ನಾಯಕರಾಗಿದ್ದಾರೆ. ಒಬ್ಬನೇ ಒಬ್ಬ ಕಥಾನಾಯಕನಿಲ್ಲದಿರುವುದು ಇದರ ವಿಶೇಷ. ರಾಮ ಐತಾಳರು ತಮ್ಮ ಹೆಂಡತಿ ಸಾರೋತಿ, ಬಾಲವಿಧವೆಯಾಗಿ ತಮ್ಮಲ್ಲಿಯೆ ಹೊಂದಿಕೊಂಡು ಬಾಳಿದ ತಂಗಿ ಸರಸೋತಿ ಇವರೊಡನೆ ಕೋಡಿ ಎಂಬ ಹಳ್ಳಿಯಲ್ಲಿ ಪುರೋಹಿತವೃತ್ತಿ ಮಾಡಿ ಹೇಗೊ ಹೊರೆಯುತಲಿದ್ದರು. ಅವರಿಗೆ ಮಕ್ಕಳಾಗಲಿಲ್ಲ. ಮಕ್ಕಳಿಲ್ಲದೆ ಸದ್ಗತಿಯಿಲ್ಲ ಎಂದು, ಸತ್ಯಭಾಮೆ ಎಂಬ ಎರಡನೆಯ ಹೆಂಡತಿಯನ್ನು ಮನೆಗೆ ತಂದರು. ಅದರಿಂದ

---

*ಮುಂಬಯಿ ಆಕಾಶವಾಣಿಯಲ್ಲಿ ಪಾಠಶಾಲೆಗಳಿಗಾಗಿ ನಿರ್ವಹಿಸಿದ ಕಾರ್ಯಕ್ರಮದಲ್ಲಿ ತಾ. ೨೬-೧೧-೬೭ನೆಯ ದಿನ ಮಾಡಿದ ಭಾಷಣವಿದು. ಸಂಬಂಧಪಟ್ಟ ಅಧಿಕಾರಿಗಳ ಅನುಮತಿ ಪಡೆದು ಪ್ರಕಟಿಸಲಾಗಿದೆ.

—ಸಂ. ಜ.

ಅಸೂಯೆ ಹುಟ್ಟಿತು, ಆ ಮೇಲೆ ಕರಗಿತು. ಎಲ್ಲಕ್ಕೆ ಹೆಚ್ಚಾಗಿ ಲಚ್ಚ, ಸುಬ್ಬಿ ಎಂಬ ಮಕ್ಕಳು ಹುಟ್ಟಿದರು. ಲಚ್ಚನು ತಂದೆಯ ವೃತ್ತಿ ಬಿಟ್ಟು ಇಂಗ್ಲಿಶ ವಿದ್ಯೆ ಕಲಿತನು. ಜೊತೆಗೆ ದುಶ್ಚಟಗಳನ್ನೂ ಕಲಿತನು. ಅದರ ಸೊಗಡು ಅವನ ಜಾಣ ಹೆಂಡತಿ ನಾಗವೇಣಿಗೆ ತಾಗಿ, ಅವಳು ಬೇನೆಗೆ ಬಲಿಯಾದಳು. ಲಚ್ಚನು ಕೆಡುವುದರಲ್ಲಿ ಮಾತ್ರ ಪ್ರಗತಿ ತೋರುತ್ತ ಊರೂರು ಅಲೆದನು. ನಾಗವೇಣಿ ಮಕ್ಕಳನ್ನು ಹೆರುತ್ತ ಅವು ಸಾಯುವುದನ್ನು ನೋಡಿ ಮರುಗುತ್ತ ಕಣ್ಣೀರಿನ ಮಡುವಿನಲ್ಲಿ ಮುಳುಗಿದ್ದಳು. ಅದರೆ ಮನೆತನಕ್ಕೆ ಹಿರಿಯಾಸೆಯಾಗಿ ಅವಳಿಗೆ ಹುಟ್ಟಿದ ಮಗ ರಾಮು ಬೆಳೆದು ಕಲಿತು ಪದವೀಧರನಾದನು; ಪಿಟೀಲು ಬಾರಿಸಿ, ಚಿತ್ರ ಬರೆದು ಕಲಾವಿದನಾದನು. ಹೊಟ್ಟೆಪಾಡಿಗಾಗಿ ಪಟ್ಟಣಗಳಲ್ಲಿ ನಿಂತು ಅಲ್ಲಿಯ ಬದುಕಿಗೆ ಹೇಸಿ ಮತ್ತೆ ಕೋಡಿಗೆ ಬಂದು ಶಾಲೆಯ ಮಾಸ್ತರನಾಗಿ ರೈತನಾಗಿ ತಾಯಿಯೊಡನೆ ಇರಹತ್ತಿದನು, ಮದುವೆ ಮಾಡಿಕೊಂಡು ಜೀವನರಥವನ್ನು ಮುಂದೆ ಸಾಗಿಸಿದನು. ಹೀಗೆ ರಾಮು ಐತಾಳರ ಮದುವೆಯಿಂದ ಮೊದಲಾದ ಈ ಕಥೆ ಅವರ ಹೆಸರಿನ ನೊಮ್ಮಗನ ಮದುವೆಯಲ್ಲಿ ಕೊನೆಗೊಳ್ಳುತ್ತದೆ. ಅಲ್ಲದೆ ಕಟ್ಟಿಯ ಕಲ್ಲು ಕಟ್ಟಿಗೆ ಕೂತಿತು ಎಂಬಂತೆ, ರಾಮು ಐತಾಳರು, ತಮ್ಮ ಮಗ ಲಚ್ಚನಲ್ಲಿ ಕಳೆದುಕೊಂಡ 'ಸ್ವಧರ್ಮ'ವನ್ನು ಮೊಮ್ಮಗ ರಾಮನಲ್ಲಿ ಮತ್ತೆ ಗಳಿಸಿ, ಸತ್ತರೂ ಚಿರಂಜೀವಿಯಾಗಿರುವಂತೆ ತೋರುತ್ತದೆ ಅವರ ಮೊಮ್ಮಗನು ಎಷ್ಟು ಕಲಿತು ಹೊಸ ಮನುಷ್ಯನಾದರೂ ಮರಳಿ ತನ್ನ ಹಳ್ಳಿಗೆ ಬಂದು ಬದುಕಿಗಾಗಿ ಮಣ್ಣಿನ ಆಸರೆ ಪಡೆದನೆಂಬುದು 'ಮರಳಿ ಮಣ್ಣಿಗೆ' ಎಂಬುದರ ಅರ್ಥ. ಇದರಲ್ಲಿ ಹಳೆಯ ಸಂಪ್ರದಾಯದ ಗೆಲುವಿದೆ ಎಂದಲ್ಲ, ಹೊಸ ವಿನೇಕದಲ್ಲಿ ಹಳೆಯದರ ತಿರುಳಿಗೆ ಎಡೆಯಿದೆ ಎಂಬ ಮಾತಿನ ಗೆಲವು ಈ ಕಥೆಯಲ್ಲಿ ಅಡಕವಾಗಿದೆ.

ಈ ಕಥೆಯನ್ನು ಕಾರಂತರು ಎಷ್ಟು ಚೆನ್ನಾಗಿ ಹೇಳಿದ್ದಾರೆಂದರೆ, ಇದರ ಸಾರವನ್ನು ಕೂಡ ಯಾರೂ ಚೆನ್ನಾಗಿ ಹೇಳಲಾರರು. ಯಾಕೆಂದರೆ ಇದು ಜಟಿಲ ಜೀವನದ ಜೀವಂತ ಚಿತ್ರ. ಕಲ್ಪಿತ ಕಥೆಯಲ್ಲ. ದಕ್ಷಿಣ ಕನ್ನಡದ ಜೀವನ ಮತ್ತು ಭಾಷೆ ಗೊತ್ತಿಲ್ಲದ ವಾಚಕರಿಗೆ ಇದು ಮೊದಲಿಗೆ ತಲೆಬೇಸರನ್ನು ತರುವಂತೆ ಕಂಡರೂ ಓದುತ್ತ ಹೋದಂತೆ ಆ ಬೇಸರನ್ನು ಕಳೆದು ಮರುಳುಗೊಳಿಸುವ ಮೋಹಿನೀಮಂತ್ರ ಇದರಲ್ಲಿ ದೊರೆಯುತ್ತದೆ. ಅರಾಬು, ಓಡ್ಲು, ಅಳುವೆ, ಗರ್ನಾಲು, ಬೊಬ್ಬರ್ಯ ಮುಂತಾಗಿ ಒಂದೇ ಎರಡೇ ನೂರಾರು ವಿಚಿತ್ರ ಶಬ್ದಗಳು ಕಿವಿಯ ಮೇಲೆ ಬಿದ್ದಾಗ ಹೇಗಾಗುವುದೆಂದರೆ, ರಾಕ್ಷಸನೊಬ್ಬನು ನಮ್ಮನ್ನು ಎತ್ತಿ ಒಯ್ದು ಒಂದು ದಟ್ಟಡವಿಯಲ್ಲಿ ಇಳಿಸಿದರೆ ಎಡವುತ್ತ ಬೀಳುತ್ತ ಹೋಗುವಂತೆ. ಆದರೆ ಆ ಪಶ್ಚಿಮದ ಸಮುದ್ರ, ಅದರ ದಂಡೆಯ ಮೇಲಿನ ತಾಳೆ-ತೆಂಗುಗಳ ಹಸಿರು, ಆ ಸಮುದ್ರಕ್ಕಿಂತ ಅಗಾಧವಾಗಿದ್ದ ಜನಜೀವನದ ಸಮುದ್ರ— ಅದರಲ್ಲಿ ಪ್ರೀತಿ, ಅಸೂಯೆ, ದುಃಖ, ಸಹನೆಯ ತರತರದ ತೆರೆಗಳು— ಮೊರೆಯುತ್ತ ಏರೇರಿ ಬರೇ ನಾವು ಮುಗ್ಧರಾಗಿ, ಮುಗ್ಧರಿಸುತ್ತಲೂ ಮುಂದುವರೆಯುತ್ತೇ ಕಾರಂತರು ಈ ಕಾದಂಬರಿಯ ಕತೆ ಹೇಳುವುದರಲ್ಲಿ ತೋರಿ ದೊಡ್ಡ ಗುಣ ಏನು ಎಂದರೆ, ತಾವು ಸ್ವತಃ ಎಲ್ಲಿಯೋ ದೂ ನಿಂತು, ತಮ್ಮ ಕಲೆಯ ಕಣ್ಣನ್ನು ಮಾತ್ರ ಸೂರ್ಯಕಿರಣದ ಬಾಳಿನ ಮೇಲೆ ಚುರುಕಾಗಿ ಚೆಲ್ಲಿ, ಕಂಡದ್ದನ್ನು ಕಂಡ ಇದ್ದಂತೆ ಕಾಣಿಸಿದ್ದಾರೆ. ಅಂತೇ ಕನ್ನಡದಲ್ಲಿ ಕಲಾವಿ ಸಾಕ್ಷಿತನದ ದಿಗ್ವಿಜಯವೆಂದರೆ 'ಮರಳಿ ಮಣ್ಣಿಗೆ' ಕಾದಂಬ ಹಾಗೆ ನೋಡಿದರೆ 'ಮರಳಿ ಮಣ್ಣಿಗೆ' ಕಾದಂಬರಿಯೇ ಆ ಎಂದರೆ ಅದ್ಭುತರಮ್ಯ ಕಲ್ಪನಾಕೃತಿಯಲ್ಲ. ಇದರಲ್ಲಿ ಇ ಜೀವನವೇ ಸಾಕಷ್ಟು ಅದ್ಭುತರಮ್ಯ ಎಂಬುದು ತಿಳಿಯುತ್ತ 'ಹೀಗಾಗಬಹುದೆ?' ಎಂದು ಕೇಳಲಿಕ್ಕೆ ಇಲ್ಲಿ ಅಸ್ಪದವೇ ಇ 'ಬಾಳು ಹೀಗಿದೆ.' ಎಂದು ಇಲ್ಲಿಯ ಪ್ರತಿಯೊಂದು ಪುಟ ಸಾರುತ್ತದೆ. ಮೊದಲ ಭಾಗದಲ್ಲಿ ರಾಮ್ಮೈತಾಳರ ಸಂಸಾ ದಿನದಿನದ ಕಾರ್ಯಕ್ರಮ, ಎಲ್ಲ ಋತುವಿನಲ್ಲಿಯ ಜೀವನರಿ ಇದನ್ನು ಬಿಡಿಬಿಡಿಸಿ ಹೇಳಿದ ಕಾರಣ, ಕತೆ ಬೇಗನೆ ಸಾಗು ದಿಲ್ಲ. ಮುಂದೆ ಅದು ಧಾವಿಸಿ ಹರಿಯುವ ಹೊಳೆಯಂತೆ ಓ ಗರನ್ನು ನಗಿಸುತ್ತ ಅಳಿಸುತ್ತ ಸಾಗುತ್ತದೆ. ಹೀಗೆ ಅವೆ ಸಂಗತಿಗಳು, ಅವೆಷ್ಟು ತರದ ವ್ಯಕ್ತಿಗಳು ಇಲ್ಲಿ ಬಂದಿ ಇಷ್ಟಾದರೂ ಸುಮ್ಮನೆ ಮಾತು ಬೆಳೆದು ಜಾಬಾಳವಾಗಿಲ್ಲ. ಹಿಡಿತದಲ್ಲಿಯೂ ಹದವು ಕೈಬಿಟ್ಟಿಲ್ಲ. ಇದೇ ಇದರ ದೊಡ್ಡತ ಓಡುವಂತೆ ಕಾಣುವ ಬರವಣಿಗೆಯಲ್ಲಿಯೂ ಮಾತಿನ ಮಿ ಯೆಂದರೆ ಎಷ್ಟು ಬೇಕೋ ಅಷ್ಟು. ಸಂವಾದ, ವರ್ಣನೆ, ಎಲ್ಲ ಹಿತಮಿತವಾಗಿದೆ. ಹೀಗೆಂದು ಚಿತ್ರ ಮಸುಕಾಗಿಲ್ಲ, ಭ ಮೊಟಕಾಗಿಲ್ಲ. ಈ ಸಮೃದ್ಧಿ, ಈ ನಿಗ್ರಹ ಇದರಲ್ಲಿಯೇ ಕಾರಂ ಕಲೆಯು ಸಿದ್ಧಿ ತಲೆದೋರಿದೆ.

ಉದಾಹರಣೆಗೆಂದು ಒಂದೆರಡು ಸಂದರ್ಭ ನೋಡೋ ರಾಮ್ಮೈತಾಳರು ಎಡನೆಯ ಮದುವೆ ಗೊತ್ತುಮಾಡಿ ಕಾ ಯಾತ್ರೆಯ ಶಾಸ್ತ್ರಕ್ಕೆ ಸಜ್ಜಾಗುವರು. ಆಗ ಒಂದು ವಾಕ್ಯ ಅವರ ವೇಷ ಹೇಗಿತ್ತು ಎಂಬುದರ ಸ್ಪಷ್ಟ ಚಿತ್ರವನ್ನು ಬರೆ ಮುಂದೆ ಮೊದಲ ಹೆಂಡತಿ ಪಾರೋತಿ ಅದನ್ನು ನೋಡಿ ಏನ ನೆನೆದಳು ಎಂಬುದರ ಮನಶ್ಚಿತ್ರವಿದೆ. ಅವಳ ಆ ನೆನವು, ಸಂಕ ಆಮೇಲೆ ದುಃಖವನ್ನು ಮರೆಮಾಡಿ ಸಂತೋಷದ ಮುಖವ ತಿರುಗಿದ ಬಗೆ ಎಲ್ಲವೂ ಯಥಾವತ್ತಾಗಿ ಬಣ್ಣನೆಹೊಂದಿ ಬಣ್ಣನೆ ಎಂದರೆ ಉಪ್ಪುಕಾರ ಹಚ್ಚಬೇಕು ಎಂಬ ಮಾತೇ ಇ ಸುಳ್ಳು. ಪಾರೋತಿಯು ಮರಣಸಮಯದಲ್ಲಿ ಹೀಗೇ ಒಂ ಕರುಳಿರಿಯುವ ನೋಟವಿದೆ. ಆಗ ರಾಮ್ಮೈತಾಳರು, ಸತ್ಯಭಾ ಸರಸೋತಿ, ಕೊನೆಗೆ ಪಾರೋತಿ ಇವರೆಲ್ಲರ ಭಾವಗಳನ್ನು ಸವ ರ್ಪಕವಾಗಿ ಅದರೂ ಸಂಗ್ರಹವಾಗಿ ನಿರೂಪಿಸಲಾಗಿದೆ. ಈಗ ದರೂ 'ತನ್ನಿಂದ ಏನು ಕಷ್ಟವಾಯಿತೋ' ಎಂದು ರಾಮ್ಮೈತಾಳ

ಕೊರಗುತ್ತಾರೆ. 'ಅವರು ನನ್ನ ತಲೆ ತೊಡೆಯ ಮೇಲೆ ಇರಿಸಿಕೊಂಡಾರೇ?' ಎಂದು ಪಾರೋತಿ ತನ್ನ ಕೊನೆಯ ಹಂಬಲನ್ನು ತಿಳಿಸುತ್ತಾಳೆ. ಇಂಥ ನೂರಾರು ಸಂದರ್ಭಗಳಲ್ಲಿ ಜನದ ಮಾತು ಸಂಪನ್ನವಾಗಿ ತಿಳಿಯಾಗಿ ಮಿತವಾಗಿ ಬಂದಿದೆ. ನಾವು ಒಂದು ಬರೆದ ಕಾದಂಬರಿಯನ್ನು ಓದುವುದಿಲ್ಲ, ನಡೆದ ಜೀವನ ದೃಶ್ಯವನ್ನು ನೋಡುತ್ತಿದ್ದೇವೆ, ಆಡುವ ಮಾತನ್ನು ಕೇಳುತ್ತಿದ್ದೇವೆ—ಎಂದು ಅನಿಸುತ್ತದೆ. ಇಲ್ಲಿ ತಲೆದೋರಿದ ಈ ಉಜ್ವಲ ಜೀವಂತಿಕೆ ಇದರ ಹಿರಿಮೆಯನ್ನು ಸಾರಿಸಾರಿ ಹೇಳುತ್ತದೆ. ನುಂದಿನ ಬಹುಭಾಗದಲ್ಲಿ ನಾಗವೇಣಿಯೇ ಮುಖ್ಯಪಾತ್ರವಾಗುತ್ತಾಳೆ. ಅವಳ ಹಾಗೂ ಲಚ್ಚನ ದಾಂಪತ್ಯದ ವಿರಸ ಪ್ರಸಂಗಗಳು ಆಗಾಗ ಸುಳಿಯುತ್ತವೆ. ಹೆಚ್ಚಾಗಿ ಮಗು ರಾಮ ಹುಟ್ಟಿದ ಮೇಲೆ, ತಾಯಿ-ಮಕ್ಕಳ ಬಾಳಿನ ಕಷ್ಟಪರಂಪರೆಯೆ ಉದ್ದಕ್ಕೂ ಹರಡುತ್ತದೆ. ಬಾಲಕನಾಗಿದ್ದಾಗಿನಿಂದ ಅವನಲ್ಲಿ ಕಡಲನ್ನು ನೋಡಬೇಕೆಂಬ ಹುಚ್ಚು ಸೇರಿದ್ದು ಅದು ಬೆಳೆಯುತ್ತ ಹೋಗಿ, ಅದರ ಸುಂದರ ಚಿತ್ರವನ್ನು ಬರೆಯುವುದರಲ್ಲಿ ಪರಿಣತನಾಗುತ್ತದೆ. ಕಡಲಿನ ದಂಡೆಯಲ್ಲಿ ಕೂತು ತಾಯಿ-ಮಕ್ಕಳು ತೋಡಿಕೊಂಡ ದುಃಖ, ಪಟ್ಟ ಸಮಾಧಾನ ಅದೆಷ್ಟೋ ಸಲ, ಬೇರೆ ಯಾರೂ ಗತಿಯಿಲ್ಲದಾಗ ಸಾಗರವೇ ಅವರಿಗೆ ಕರುಣೆಯ ಸಾಗರವಾಗುತ್ತದೆ. ಈ ರೀತಿಯಾಗಿ ಈ ಕಾದಂಬರಿಯಲ್ಲಿಯ ಸೃಷ್ಟಿ ಮನುಷ್ಯಜೀವನದೊಡನೆ ಸಹಭಾವದಿಂದ ಇರುವಂತೆ ವರ್ಣಿತವಾಗಿದೆ.

ಇಲ್ಲಿ ಬಂದಿರುವ ಜನರದೆಷ್ಟೋ ಇದ್ದರೂ ಮುಖ್ಯ ವ್ಯಕ್ತಿಗಳು ಏದಾರು ಮಾತ್ರ. ಈ ವ್ಯಕ್ತಿಗಳೆಲ್ಲ ಜೀವನದಲ್ಲಿ ಇರುವಂತೆ ಇದ್ದಾರೆ, ಜೀವಂತ ಮನುಷ್ಯರಾಗಿದ್ದಾರೆ. ಇವರಿಗೆ ಬಡತನದ ಕಷ್ಟದಿಂದ ಬರುವ ದುಃಖವಿದೆ, ಹೆರವರ ಸುಖದಿಂದ ಬರುವ ಹೊಟ್ಟೆಕಿಚ್ಚಿದೆ, ಎಲ್ಲವನ್ನೂ ನುಂಗಿ ಹೋರಾಡಿ ಬಾಳಬೇಕೆಂಬ ಸಹನೆಯಿದೆ, ಆಶೆಯಿದೆ. ಪಾರೋತಿ 'ಪುಣ್ಯಾತ್ಗಿತ್ತಿ'ಯಾದಳು. ಸರಸೋತಿ ತ್ಯಾಗಮೂರ್ತಿಯಾದಳು. ನಾಗವೇಣಿ 'ಸೊಸೆದೇವತೆ'ಯಾದಳು. ಆದರೆ ಇದು ಅವರ ಸಂಪೂರ್ಣ ಚಿತ್ರವಲ್ಲ. ನಮ್ಮ ಸಂಸ್ಕೃತಿಯ ಗುಣ-ದೋಷವೆರಡನ್ನೂ ಒಳಗೊಂಡ ಜಟಿಲ ಜೀವಂತ ಮನುಷ್ಯರು ಅವರು. ಇವರನ್ನು ಚಿತ್ರಿಸಿ ಒಂದು ಪ್ರದೇಶದ ಒಂದು ಹಳ್ಳಿಯ ಕೆಲವು ಜನರನ್ನು ಮಾತ್ರವಲ್ಲ, ನಮ್ಮ ವಿಶಾಲವಾದ ಭಾರತದೇಶದ ಎಲ್ಲ ಹಳ್ಳಿಯ ಎಲ್ಲ ಜನವನ್ನು ಕಾರಂತರು ಇಲ್ಲಿ ಸೂಚ್ಯವಾಗಿ ಚಿತ್ರಿಸಿದ್ದಾರೆ. ದೊಡ್ಡ ಗುಣದ ಬರೆವಣಿಗೆಯ ಲಕ್ಷಣ ಇದು. ಇಲ್ಲಿ ಬಂದಿರುವುದು ಒಂದು ಬಡಕುಟುಂಬವು ಬದುಕಿನೊಡನೆ ಹೋರಾಡಿದ ಚಿತ್ರವಿಷ್ಟೇ ಅಲ್ಲ; ಲಕ್ಷಾವಧಿ ಕುಟುಂಬಗಳು ನಮ್ಮ ದೇಶದಲ್ಲಿ ಹೊಸ ನಾಗರಿಕತೆಯ ಕೂಡ ಹೋರಾಡಿದ ಚಿತ್ರ, ಈ ಚಿತ್ರದ ಮರೆಯಲ್ಲದೆ. ಮೂರು ತಲೆಮಾರುಗಳೆಂದರೆ ಈ ಹೋರಾಟದಲ್ಲಿಯ ಮೂರು ಅವಸ್ಥೆಗಳಾಗಿ ತೋರುತ್ತವೆ. ಒಂದು, ಹೊಸ ವಿದ್ಯೆ-ಹೊಸ ನಾಗರಿಕತೆ ಇದರ ಸಂಪರ್ಕಕ್ಕಿಂತ ಮೊದಲಿನ ಹಳೆಯ ಸಂಸ್ಕೃತಿಯ ಮತ್ತು ಸಂಪ್ರದಾಯದ ಗುಣ. ಎರಡು, ಹೊಸದರ ಹುಚ್ಚು ಹಂಬಲಿನಿಂದ ಅದನ್ನು ಅಪ್ಪಿಕೊಂಡ ಮೂಲಕ ಉಂಟಾದ ದುಃಖರಾಶಿ. ಮೂರು, ಹೊಸದರ ಗುಣವನ್ನು ಗೃಹಿಸಿ ಹಳೆಯದರ ತಿರುಳಿಗೆ ಮತ್ತೆ ಶರಣಾದದ್ದು. ಅಲ್ಲದೆ ಯಾವುದೇ ಒಂದು ಉತ್ತಮ ಕಾದಂಬರಿಯಲ್ಲಿ ಕಾಲದೇಶಕ್ಕೆ ಸಂಬಂಧಿಸಿದ್ದು, ಅದನ್ನು ಮೀರಿದ್ದು ಇವೆರಡೂ ಇರುತ್ತವೆ. 'ಮರಳಿ ಮಣ್ಣಿಗೆ'ಯಲ್ಲಿಯೂ ಹಾಗಿರುವುದೆಂಬುದೇ ಅದರ ಹಿರಿಮೆಗೆ ಗುರುತಾಗಿದೆ. ದೇಶಕಾಲದ ಚಿತ್ರದೊಡನೆ ಯಾವ ಕಾಲದಲ್ಲಿಯೂ ಯಾವ ದೇಶದಲ್ಲಿಯೂ ಕಾಣುವ ಜೀವನದ ಕಥೆ ಇದರಲ್ಲಿದೆ.

ಕಾರಂತರು ನೂರು ಪ್ರಯೋಗ ಮಾಡಿ ಕೊನೆಗೆ ತನ್ನು ಬಾಳಿನ ದಾರಿಯನ್ನೂ ಕಲೆಯ ಸಿದ್ಧಿಯನ್ನೂ ಕಂಡರು. ಉಳಿದೆಲ್ಲ ದಾರಿಗಿಂತ ಕಲಾವಿದನಾಗಿ ಬಾಳುವುದೆ ಅವರ ಬಾಳಿನ ದಾರಿ. ಉಳಿದೆಲ್ಲ ರೂಪಗಳಿಗಿಂತ ಕಾದಂಬರಿಯ ರೂಪವೆ ಅವರ ಕಲೆಯ ಸಿದ್ಧಿಗೆ ವಾಹಕ. ಈ ದಾರಿಗುಂಟ ಸಾಗಿ ಈ ಸಿದ್ಧಿಯನ್ನು ಪಡೆದು ಹಲವಾರು 'ಮರಳಿ ಮಣ್ಣಿಗೆ'ಗಳನ್ನು ರಚಿಸಿ ಅವರು ಕನ್ನಡ ನಾಡಿಗಿಷ್ಟೆ ಯಾಕೆ, ಭಾರತದೇಶಕ್ಕೇ ಹೆಮ್ಮೆಯ ವಸ್ತುವಾದ ಶ್ರೇಷ್ಠ ಕಾದಂಬರಿಕಾರರಾಗಲಿ; ಅವರ ಕಲೆ ಈಗ ತೋರಿದ ಗುಣವನ್ನು ಫಳಗಿಸಿ ತೋರದ ಗುಣವನ್ನು ಬೆಳಗಿಸಿ, ಕನ್ನಡ ಸರಸ್ವತಿಯ ಮುಂದಿರಕ್ಕೆ ಕಳಸವಿಡಲಿ.

ಬಿಡುಗಡೆ

★

ಶ್ರೀ ಸಿ. ಕೆ. ದೀಕ್ಷಿತ, ಧಾರವಾಡ

ಹೆಂಡತಿ—

"ಇಂದೇನು ಹರಿ-ಹಬ್ಬ ನಲ್ಲ? ಮುಂಜಾವದೊಳು;
ಮಂಗಲದ ವಾದ್ಯ ಮೊಳಗು?
ಕುಂಚಿ ರೆಂಬೆಗಳಲ್ಲಿ ಚಕ್ರಬಿಂಬಿತ ಪಟವು;
ಸಿಂಗರದ ಸೀಮೆ ಬೆಳಗು!"

ಗಂಡ—

"ನಲ್ಲೆ, ಇದು ನಾಡ ಕಡುಸಂಕೋಲೆ ಕಿತ್ತೆಸೆದ
ಗಳಿಗೆಸಿರಿ; ದೇವಮನುತೆ!
ಅಲೆವ ಆ ಬಾವುಟದ ಅಡಿಯ ಅಣು-ಕಣಕೆಲ್ಲ,
ಕಾದಿಹುದು ಬಾಳ ಸಮತೆ!"

ಹೆಂಡತಿ—

"ಅಹಹ, ದೊರೆ! ಸೊಗಸು-ದಿನ! ನೆರೆಮನೆಯ
ಸರಸೋತಿ,
ಅರುಹಿದಳು ಇದನೆ ಬಿಡದೆ;
ಪೇಟೆಯಲಿ ರಂಗಾದ ನಿಬ್ಬಣವ ಕಾಂಬಾಸೆ;
ಅವಳೊಡನೆ ಹೋಗಬಹುದೆ?"

ಗಂಡ—

"ಛಿಹಿ, ಮರುಳೆ! ಇದನರಿಯೆ, ಹುರುಡಿರದ ಗಾಳಿಕತೆ,
ಅಲ್ಲೇನು ಬಹುದು ಘನವು?
ಹೆಂಗುಸಿಗೆ ಸರಿಬರದ ಗೊಂದಲವು ಬರಿ; ಇದೆಕೊ,
ಹಾಳೇನು ಇದ್ದ ಮನೆಯು?"

* * *

ಮರುಜಣಕೆ ಪತಿರಾಯ ಸತಿಯ ಒಳಗೆಯೆ ಕಳುಹಿ
ಅಡಿಯಿತ್ತ ಬೀದಿ ಕಡೆಗೆ;
ಹುಡುಗಲಾರದ ಆಶೆ ಹುಗಿದು ಕುಳಿತಿರಲಾಕೆ—
ನಡೆದ ಬಿಡುಗಡೆಯ ಪಡೆಗೆ!

ನಮ್ಮ ಬಾವುಟ

★

ಶ್ರೀ. ಅಕ್ಕಿಹೆಬ್ಬಾಳ ನಾರಾಯಣರಾವ್, ಬನಾರಸ

೧

ಮೂರು ಬಣ್ಣದೀ ಮುಂಗಳ ಬಾವುಟ
ಎಂದೆಂದೂ ಮೇಲಾಡುತಲಿರಲಿ;
ಧರ್ಮಚಕ್ರದೀ ಸುಂದರ ಬಾವುಟ
ಹಿರಿಮೆಯುಲೆಂದೂ ಮೆರೆಯುತಲಿರಲಿ!

೨

ಪುಣ್ಯ ಪುರಾತನ ನಾಡಿನ ಕೋಟೆಯ
ಬಿಡುಗಡೆ ತೀರ್ಥದಿ ಪಾವನ ಮಾಡಿದೆ;
ಮಾನವ ಮಂಡಲದಲಿ ಮಯರ್ಯಾದೆಯ
ಮೇಲ್‌ಪಙ್ಕ್ತಿಗೆ ನಮ್ಮನು ಸೇರಿಸಿದೆ.

೩

ಇದರಲೆಕದ ಗಾಳಿಯೆ ನಮ್ಮುಸಿರು,
ಈ 'ಪಟಪಟ'ವೇ ನಮ್ಮೆದೆ ಬಡಿತ
ಈ ಬಾವುಟವಿರೆ ನಮ್ಮದು ಬಾಳ್ವೆ,
ಇದರ ವಿಜಯಕೇ ಜೀವನ ದುಡಿತ!

೪

ಕೆಚ್ಚೆದೆ ಕಲಿಗಳು ನೆತ್ತರ ಬಸಿದು
ನಮಗಿತ್ತಿಹುದಿದು ಈ ಸಿರಿಲಾಂಛನ;
ಇದರಡಿ ಹೋರಾಡುವೆವಸು ತೊರೆವೆವು,
ಎಂದೆಂದಿಗು ಕೆಳಗಿಳಿಸಲು ಬಿಡೆವು!

೫

ಮೂರು ಬಣ್ಣದೀ ಮುಂಗಳ ಬಾವುಟ
ಎಂದೆಂದೂ ಮೇಲಾಡುತಲಿರಲಿ;
ಭಾರತದೇಶದ ಕೀರ್ತಿಯ ವಾರ್ತೆಯ
ಎಲ್ಲೆಲ್ಲೂ ಜನ ಹಾಡುತಲಿರಲಿ!

ತಪ್ಪುತಿಳಿವಳಿಕೆ

(ಲಲಿತಪ್ರಬಂಧ) *

ಶ್ರೀ. ಬಿ. ಜಿ. ಕುಲಕರ್ಣಿ, ಬಿ ಎ. (ಆನರ್ಸ್) ಹುಬ್ಬಳ್ಳಿ

★

ಜಗತ್ತಿನಲ್ಲಿಯ ಯಾವ ದುರ್ಘಟನೆಗಳಿಗೂ ಮಾನವನ ತಪ್ಪುತಿಳಿವಳಿಕೆಯೆ ಮೂಲ. ತಪ್ಪುತಿಳಿವಳಿಕೆಯೊಂದು ಇಲ್ಲದಂತಾದರೆ ಮಾನವಕುಲವೆಲ್ಲ ಸುಖ-ಶಾಂತಿಗಳಿಂದ ಬದುಕಬಲ್ಲದು. ಆದರೇನು ? ಮನುಷ್ಯ ಯಾವಾಗಲೂ ತಪ್ಪುತಿಳಿವಳಿಕೆಯ ದಾಸ !

★

"ಪೇಟೆಯಲ್ಲಿ ಅತ್ಯುತ್ತಮ ಮಲೆಯಾಳಿ ಕಸಬರಿಗೆಗಳು ಬಂದಿವೆಯಂತೆ. ಇತ್ತ ತೆಂಗಿನ ಹಿಡಿಯಂತೆ, ಇತ್ತ ಮೆದೆ ಕಸಬರಿಗೆಯಂತೆ— ಉಪಯೋಗವಾಗುವುವಂತೆ; ಒಂದೆರಡು ತರುವುದಾಗಬೇಕು." ಎಂದು, ಒಂದು ದಿವಸ ಮುಂಜಾನೆ ನಮ್ಮ ಮನೆಯಲ್ಲಿ ಬಿನ್ನಹದ ರೂಪದಲ್ಲಿ ಒಂದು ಆಜ್ಞೆ-ಯಾಯಿತು.

ಮಲೆಯಾಳಿ ಕಸಬರಿಗೆಗಳ ಮಹತ್ತ್ವವನ್ನು ಒತ್ತಿಹೇಳುವ ದೃಷ್ಟಿಯಿಂದಲೊ ಅಥವಾ ಅವುಗಳ ಅವಶ್ಯಕತೆಯನ್ನು ಸ್ಪಷ್ಟಪಡಿಸುವ ಉದ್ದೇಶದಿಂದಲೊ ಮೇಲಿನ ಆಜ್ಞೆಯು ತೀರ ಹೊಡ್ಡಧ್ವನಿಯಲ್ಲಿ ವಿಧಿಸಲ್ಪಟ್ಟಿತು. ಅದು ಕೇವಲ ನನಗಷ್ಟೇ ಅಲ್ಲದೆ, ನಮ್ಮ ಅವಾರದಲ್ಲಿದ್ದ ಪ್ರತಿಯೊಂದು ಮನೆಗೂ ತಿಳಿಸಿತು. ಮತ್ತು ಇದರ ಪರಿಣಾಮವು ಕೂಡಲೆ ಕಂಡು ಬಂದಿತು.

ಐದಾರು ನಿಮಿಷಗಳಲ್ಲಿಯೆ ನೆರೆಮನೆಯ ಜೋದಣ್ಣ ಮಾಸ್ತರರ ಹಿರಿಯ ಮಗಳು, ನಮ್ಮ ಮನೆಗೆ ಓಡುತ್ತಲೆ ಬಂದಳು; ನನ್ನ ಕೈಯಲ್ಲಿ ಹದಿನಾಲ್ಕು ಆಣೆ ರೊಕ್ಕವನ್ನಿಟ್ಟು ಅವಳು, ತಮಗೆರಡು ಮಲೆಯಾಳಿ ಕಸಬರಿಗೆಗಳನ್ನು ತರಬೇ-ಕೆಂದು ಅವ್ವ ಹೇಳಿದ್ದಾಳೆ— ಎಂದು ತಿಳಿಸಿದಳು. ಹದಿನಾಲ್ಕು ಆಣೆಗೆ ಎರಡು ಕಸಬರಿಗೆಗಳು ಬರುತ್ತವೆಯೋ ಇಲ್ಲವೋ ಎಂದು ಮನಸ್ಸಿನಲ್ಲೆಯೆ ಲೆಕ್ಕಹಾಕುತ್ತ ನಾನು, ಕೈಯಲ್ಲಿಯ ರೊಕ್ಕವನ್ನು ಎಣಿಸತೊಡಗಿದ್ದೆ. ಅಷ್ಟರಲ್ಲಿ ಅಜಯ ಮನೆಯ ಬೆಟ್ಟದೂರವರ ಶ್ಯಾಮಲೆ ನನ್ನ ಕಡೆಗೆ, ಮಾಸಿದ ಒಂದು ರೂಪಾಯಿಯ ನೋಟನ್ನು ಕೊಟ್ಟು ಹೀಗೆ ಹೇಳಿದಳು:— "ಮನೆಯಲ್ಲಿ ಯಾರೂ ಇಲ್ಲವಂತೆ, ಆದ್ದರಿಂದ ಅಕ್ಕ ನಿಮಗೆ ಎರಡು ಮಲೆಯಾಳಿ ಕಸಬರಿಗೆಗಳನ್ನು ತರಹೇಳಿದ್ದಾಳೆ. ಗಿರಣಿಗೆ ಕೊಡಲು ಬೇಕಾದ್ದರಿಂದ ಉಳಿದ ರೊಕ್ಕವನ್ನು ಈಗಲೆ ಕೊಡಬೇಕಂತೆ!' ನಮ್ಮ ಮನೆಯಿಂದ ನಾಲ್ಕನೆಯ ಮನೆಯ-ಲ್ಲಿದ್ದ ಹೂವಿನಬಳ್ಳಿ ವಕೀಲರ ಚಿಕ್ಕ ಮಗು, ತನಗೆ ಬಂದಷ್ಟು ಮಾತಿನಲ್ಲಿ, ತಮಗೂ ಎರಡು ಕಸಬರಿಗೆಗಳು ಬೇಕೆಂದೂ ಮತ್ತು ಅಪ್ಪ ಬಂದ ಬಳಿಕ ಹಣ ಕೊಡಲಾಗುವುದೆಂದೂ ತಿಳಿಸಿ ಹೋಯಿತು.

ಇನ್ನೂ ಹೆಚ್ಚು ಬೇಳೆ ಮನೆಯಲ್ಲಿ ನಿಂತರೆ ಹೆಚ್ಚೆಚ್ಚು ಬೇಡಿಕೆ-ಗಳು ಬರಬಹುದೆಂದು, ನಾನು ಕೂಡಲೆ ಕೋಟು ಹಾಕಿ-ಕೊಂಡು ಮನೆಯ ಹೊರಗೆ ಕಾಲಿಟ್ಟೆ.

ಮಲೆಯಾಳಿ ಕಸಬರಿಗೆಯವನು ಜೋಣಿಗೆಗಾಗಿ ಆ ಎಂದು ಬಾಯಿತೆರೆದು ಕುಳಿತಿದ್ದ. ಹಾಯ್ದುಹೋಗುವವರನ್ನೆಲ್ಲ ಕೇಳಿ ಕೇಳಿ ಬೇಸತ್ತಿದ್ದನೊ ಏನೊ; ನಾನು ಒಮ್ಮೆಲೆ ಎಂಟು ಹಿಡಿಗಳನ್ನು ಬೇಡಲು ಆಶ್ಚರ್ಯದಿಂದ "ಏನ್ರಿ ಸ್ವಾಮೀ, ನೀವು ಖಾನಾವಳಿ ಗೀನಾವಳಿ ಇಟ್ಟಿದ್ದೀರಾ ?" ಎಂದು ಕೇಳಿದ.

ಮಲೆಯಾಳಿಯವನ ಮಾತುಗಳಿಂದ ಅಪಮಾನವಾದಂತೆ ಎನಿಸಿತು; ಆದರೆ ವಿಶೇಷ ಮಾತನಾಡದೆ ನಾನು, ಅವನ ಮಾತುಗಳನ್ನೂ ಎಂಟು ಕಸಬರಿಗೆಗಳನ್ನೂ ಹೊತ್ತುಕೊಂಡು, ಮುಖ್ಯಬೀದಿಯಿಂದ ಹೇಗೆ ಹೋಗುವುದು?— ಮೊಸರನ್ನೂ ಬೆಣ್ಣೆಯನ್ನೂ ಕೂಡ ತರಲು ನಾಚಬೇಕಾದ ಈ ದಿವಸಗಳಲ್ಲಿ ಹಿಡಿಗಳನ್ನು ಹೇಗೆ ಹೊತ್ತುಕೊಂಡುಹೋಗುವುದು?— ಎಂದು ಮುಂತಾಗಿ ವಿಚಾರಮಾಡುತ್ತ ಸಂದಿ-ಗೊಂದಿಗಳೊಳಗಿಂದ ಮನೆಯ ಕಡೆಗೆ ಸಾಗಿದೆ. ಇದರಿಂದ ಪರಿಚಯಸ್ಥರನ್ನು ತಪ್ಪಿಸಿದೆನೇನೊ ನಿಜ. ಆದರೆ ಇಬ್ಬರು 'ಭಾರಿ ಜರದ ವಾರಿ ರುಮಾಲ'ದವರು ಗಂಟುಬಿದ್ದರು. ಅವರಲ್ಲಿ ಒಬ್ಬನು ನನ್ನನ್ನು ಕೈಸನ್ನೆಯಿಂದ ನಿಲ್ಲಿಸಿ, ಕಣ್ಣುಸನ್ನೆಯಿಂದ 'ಹೇಗೆ ಕೊಟ್ಟೆ ?' ಎಂದು ವಿಚಾರಿಸಿದ. ನಾನು ಏನೂ ಮಾತಾಡದೆ, ಏನೂ ಗೊತ್ತಿಲ್ಲದವರಂತೆ ಮೋರೆಮಾಡಿಕೊಂಡು ಮುಂದೆ ಹೆಜ್ಜೆ ಹಾಕಿದೆ. ತನ್ನ ಸಂಜ್ಞೆಯಿಂದ ಕಾರ್ಯವಾಗಲಿಲ್ಲ ಎಂದು ಮನಗಂಡ ಅವನು "ಏ ಹ್ಯಾಂಗ ಕೊಟ್ಯೋ ಹಿಡಿ?" ಎಂದು ಒದರಿದ. "ಮಾರಾಟಕ್ಕೆ ತಂದಿಲ್ಲ" ಎಂದವನೇ ಮುಂದೆ ಸಾಗಿದೆ.

"ಇವರಿಗೆ ರೊಕ್ಕದ ಕಿಮ್ಮತ್ತಿಲ್ರೀ" ಎಂದ ರುಮಾಲ ನಂಬರು ಎರಡು.

"ರೊಕ್ಕದ ಕಿಮ್ಮತ್ತೂ ಇಲ್ಲ, ಮುಂದಿಯ ಕಿಮ್ಮತ್ತೂ ಇಲ್ಲ!" ಎಂದು ಮೊದಲಿನವ ದನಿಗೂಡಿಸಿದ.

ಹಿಡಿಗಳ ಭಾರಕ್ಕಿಂತ ಅವಮಾನದ ಭಾರದಿಂದಲೆ ಹೆಜ್ಜೆ ಬಳಲಿ ಮನೆಗೆ ಬಂದೆನು.

---

* ಈ ಪ್ರಬಂಧವು ಈ ಮೊದಲು 'ಸಂಯುಕ್ತ ಕರ್ನಾಟಕ'ದ ದಿ. ೧೦-೧೧-೪೭ ರ ವಿಶೇಷಸಂಚಿಕೆಯಲ್ಲಿ ಪ್ರಕಟವಾಗಿದೆ. ಲೇಖಕರ ಅಪೇಕ್ಷೆಯಂತೆ ಇಲ್ಲಿ ಅಚ್ಚಿಗೆ ಕೊಡಲಾಗಿದೆ. —ಸಂ. ಜ.

ಆದರೆ ಮುಂದೊಂದು ತಾಸಿನಲ್ಲಿ ನನಗೆ ಚೆನ್ನಾಗಿ ಬುದ್ಧಿ ಬಂದಿತು. ಅದೇನೆಂದರೆ ತಪ್ಪುತಿಳಿವಳಿಕೆಯನ್ನು ಬಗೆಹರಿಸಿದ್ದರೆ ಎಲ್ಲವೂ ಸರಿಹೋಗಬಹುದಾಗಿತ್ತು. ನಾನು ನಿಜ ಸಂಗತಿಯನ್ನು ಅರುಹಿಬಿಟ್ಟಿದ್ದರೆ ಕಸಬರಿಗೆಯವನು ನನಗೆ ಖಾನಾವಳಿಯವನೆನ್ನುತ್ತಿದ್ದಿಲ್ಲ, ಒಂದು ನಿಮಿಷ ನಿಂತು 'ಭಾರಿ ಜರದ ವಾರಿ ರುಮಾಲ'ಗಳಿಗೆ ನನ್ನ ನಿಲುವನ್ನು ಸ್ಪಷ್ಟಪಡಿಸಿದ್ದರೆ ಅವಮಾನವಾಗುತ್ತಿರಲಿಲ್ಲ— ಎಂದು ಮುಂತಾಗಿ ಎನಿಸತೊಡಗಿತು. ಇದಕ್ಕೊಂದು ಸಣ್ಣ ಕಾರಣವಾಯಿತು. ಅದೂ ತಪ್ಪುತಿಳಿವಳಿಕೆಯ ಮೂಲಕವೆ.

ಯಾವುದೋ ಒಂದು ಪತ್ರಿಕೆಯ ವಿಶೇಷ ಸಂಚಿಕೆಯ ಪುಟಗಳನ್ನು ತಿರುವುತ್ತ ಕುಳಿತಿದ್ದೆ. ಅಷ್ಟರಲ್ಲಿ ಹಳ್ಳಿಯ ಮುದುಕಿಯೊಬ್ಬಳು ನಮ್ಮ ಮನೆಗೆ ಬಂದು 'ಒಂದೀಟು ಕಾಯದೆ ಹೇಳರಿ' ಎಂದು ಕೇಳಿಕೊಂಡಳು. ನಾನು ಈ ನಮ್ಮ ಮನೆಗೆ ಬರುವ ಮೊದಲು ವಕೀಲರೊಬ್ಬರು ಇಲ್ಲಿ ಬಾಡಿಗೆಯಿಂದ ಇದ್ದರಂತೆ. ಅವರೇ ನಾನೆಂದು ಮುದುಕಿಯ ತಪ್ಪುತಿಳಿವಳಿಕೆ!

'ಕಾಯಿದೆಯಲ್ಲೇನಿದೆ, ವ್ಯವಹಾರಜ್ಞಾನವೇ ಕಾಯದೆ!' ಎಂದು ಒರ್ವ ಮಹಾನುಭಾವರು ಜೋಳಿದುದು ಚೆನ್ನಾಗಿ ನೆನಪಿನಲ್ಲಿತ್ತು. ಆದ್ದರಿಂದ ನಾನು ವಕೀಲನಲ್ಲವಿದ್ದರೂ ಆ ಮುದುಕಿಗೆ ಕಾಯದೆ ಹೇಳಲು ಒಪ್ಪಿಕೊಂಡೆ.

ಆ ಮುದುಕಿಗೆ ಸಲಹೆ ಬೇಕಾದ ಕಾರಣ ಹೀಗಿದ್ದಿತು: ಅವಳ ಅಳಿಯನು ಅವಳ ಮಗಳನ್ನು ಬಿಟ್ಟು ಒಂದು ವರ್ಷವಾಗಿದ್ದಿತು. ನಾಲ್ಕು ಜನ ದುಷ್ಟರ ಮಾತುಕೇಳಿ ಅವನು ಅವಳನ್ನು ಬಿಟ್ಟಿದ್ದನಂತೆ. ಅವನು ಅವಳನ್ನು ಕರೆದೊಯ್ಯುವಂತೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ಕಾಯಿದೆ ಹೇಳುತ್ತದೆಯೆಂಬುದೆ ಅವಳ ಪ್ರಶ್ನೆ. ನನಗೆ ಪ್ರಶ್ನೆ ತೀರ ಸುಲಭವಾಗಿ ಕಂಡಿತು. ಒಂದು ಪತ್ರಿಕೆಯಲ್ಲಿ ನೋಡಬೇಟೆ ನೋಟೀಸನ್ನು ಕೊಡುವುದು, ಅವನು ಕರೆದುಕೊಂಡು ಹೋಗದಿದ್ದರೆ ಅದೇ ನೋಟೀಸಿನಿಂದಲೆ ಎರಡನೆಯ ಮದುವೆಗೆ ನೇರವಾದ ಮಾರ್ಗವಾಗುವುದು— ಎಂದು ನನಗೆ ಗೊತ್ತಿತ್ತು. ಅದನ್ನೇ ನಾನು ಅವಳಿಗೆ ಹೇಳಿದೆ.

ಅವಳು ಒಪ್ಪಲಿಲ್ಲ. ತನ್ನ ಮಗಳನ್ನು ಬಿಟ್ಟು ಒಂದು ವರ್ಷವಾಯಿದರೂ ಅವನು ಬೇರೊಂದು ಹೆಣ್ಣಿನ ನಾದಿಗೆ ಹತ್ತಿಲ್ಲವಾದ್ದರಿಂದ, ತನ್ನ ಮಗಳ ಮೇಲೆ ಅವನ ಪ್ರೇಮವಿದೆಯೆಂದು ಅವಳ ವಿಶ್ವಾಸ. ನೋಡಬೇಟೆಯನ್ನು ಕೊಟ್ಟರೆ ತೀರ ಹೋಯಿತು, ತನ್ನ ಮಗಳಿಗೆ ಕುಂಕುಮ ಹಚ್ಚಿಕೊಳ್ಳುವ ಅಧಿಕಾರ ಹೋಗುವುದೆಂದು ಅವಳ ಆಂಜಿಕೆ. ಏನೋ ಯಾವುದೋ ವಿಷಯದಲ್ಲಿ ಅವನ ತಪ್ಪು ತಿಳಿವಳಿಕೆಯಾಗಿರಬೇಕು; ಅದನ್ನು ಹೋಗಲಾಡಿಸಿ ಬಿಟ್ಟರೆ, ತನ್ನ ಮಗಳ ಒಗ್ಗಾಲಿಯಾದ ಸಂಸಾರರಥ ಮತ್ತೆ ಸಾಗುವುದೆಂದು ಅವಳ ನಂಬಿಗೆ. ಕಡೆಯ ಮಾತನ್ನು ಕೇಳಿ ನನಗೂ ಮನದಟ್ಟಾಯಿತು; 'ತಪ್ಪುತಿಳಿವಳಿಕೆಯನ್ನು ಹೋಗಲಾಡಿಸಿಬಿಟ್ಟರೆ ಈ ಜಗತ್ತಿನಲ್ಲಿ ಎಲ್ಲವೂ ಸರಿ ಹೋಗುತ್ತದೆ. ನಮ್ಮ ಕಷ್ಟ-ನಷ್ಟಗಳು, ಅಸಂತೋಷ-ದುಃಖಗಳು ಕೇವಲ ತಪ್ಪುತಿಳಿವಳಿಕೆಯಿಂದಲುದ್ಭವವಾದುವು' ಇತ್ಯಾದಿ ಇತ್ಯಾದಿ— ವಿಚಾರಗಳು ಹೊಳೆದುವು.

ಆದರೆ ತಪ್ಪುತಿಳಿವಳಿಕೆಯನ್ನು ಹೋಗಲಾಡಿಸಲು ಯತ್ನಿಸುವುದೇ ತಪ್ಪುತಿಳಿವಳಿಕೆಗೆ ಕಾರಣವಾಗುವುದೆಂದು ನನಗೆ ತಿಳಿದಿದ್ದಿಲ್ಲ. ಆ ಮುದುಕಿಗೂ ಹೊಳೆದಿದ್ದಿಲ್ಲ. ಅನುಭವದಿಂದಲೇ ನಾನು ಇದನ್ನು ಕಲಿಯಬೇಕಾಯಿತು.

ನಿತ್ಯದಂತೆ ಒಂದು ದಿನ ಮುಂಜಾನೆ, ಬಲಗೈಯಲ್ಲಿ ತಂಬಿಗೆಯನ್ನೂ ಎಡಗೈಯಲ್ಲಿ ಎಂಟಾಣೆ ರೊಕ್ಕವನ್ನೂ ತೆಗೆದುಕೊಂಡು ಹೊರಗೆ ಕೂರಟಿದ್ದೆ. ಮನೆಯಿಂದ ಹತ್ತು ಹದಿನೈದು ಹೆಜ್ಜೆ ಹೋಗುವಷ್ಟರಲ್ಲಿಯೇ ಆಚೆಯಿಂದ ಬರುತ್ತಿದ್ದ ಹೊಸ ಸ್ನೇಹಿತರೊಬ್ಬರು ನನ್ನನ್ನು ಒದರಿ ನಿಲ್ಲಿಸಿದರು:

"ಸುಶಿಕ್ಷಿತರಾದರೂ ನಿಮ್ಮಲ್ಲಿ ನೀರು ಇಲ್ಲ; ಶಕ್ತಿ ಇಲ್ಲ, ನೀವು ಬಳೆಗಳನ್ನು ಏಕೆ ತೊಡಬಾರದು? ನಿಮ್ಮ ಹಕ್ಕು-ಬಾಧ್ಯತೆಗಳು ನಿಮಗೆ ಗೊತ್ತಿಲ್ಲ. ಸ್ವತಂತ್ರದೇಶದ ನಾಗರಿಕರಾಗಲು ನೀವು ಅಯೋಗ್ಯರು!" ಎಂದು ಮುಂತಾಗಿ ಅವರು ಪ್ರಾರಂಭಿಸಿದರು.. ಮಿಂಚು-ಮೋಡಗಳಿಲ್ಲದೆ ಮಳೆ.

ಯಾವ ನಾಟಕದ ನಾಂದಿ ಇದು ಇರಬಹುದೆಂಬ ವಿಚಾರದಲ್ಲಿ ನಾನು ಮುಗ್ಧನಾದುದರಿಂದ, ನನ್ನ ಮುಖದ ಮೇಲೆ ಆ ಸ್ನೇಹಿತರಿಗೆ ಒಂದು ದೊಡ್ಡ ಪ್ರಶ್ನಾರ್ಥಕ ಚಿಹ್ನೆ ಕಂಡಿರಬೇಕು. ಯಾಕೆಂದರೆ ಅವರು ತಮ್ಮ ಚಿಕ್ಕ ಭಾಷಣವನ್ನು ಕೂಡಲೆ ಪೂರ್ವಾಪರ ಸಂದರ್ಭದೊಡನೆ ತಾವಾಗಿಯೆ ಸ್ಪಷ್ಟೀಕರಿಸತೊಡಗಿದರು:

"ಅಲ್ರೀ, ನೀವು ಮನೆಬಾಡಿಗೆ ಕೊಡುತ್ತೀರಿ; ಪ್ರತಿಫಿಂಗಳೂ ತೆರುತ್ತೀರಿ. ನಿಮ್ಮ ಮನೆಯ ಮಾಲಕನು ಮುನಸಿಪಾಲಿಟಿಗೆ ಕರ ಕೊಡುತ್ತಾನೆ. ಮುನಸಿಪಾಲಿಟಿ ನಮ್ಮ-ನಿಮ್ಮಂಥವರ ದುಡ್ಡಿನ ಮೇಲೆಯೇ ನಡೆಯುವುದು. ಇದಲ್ಲ ಗೊತ್ತಿದ್ದ ನೀವು ಕೂಡ ನಿಮ್ಮ ಹಕ್ಕುಗಳನ್ನು ಪ್ರತಿಪಾದಿಸಬಾರದೆಂದರೇನಿದು?"

ನನ್ನ ಮುಖದ ಮೇಲಿನ ಪ್ರಶ್ನಾರ್ಥಕ ಚಿಹ್ನೆವು ಮತ್ತಷ್ಟು ದೊಡ್ಡದಾಯಿತೋ ಏನೋ! ಯಾಕೆಂದರೆ ನನ್ನ ಮಿತ್ರರು ಮುಂದುವರಿಯುತ್ತ ಮತ್ತೆ ಹೀಗೆ ಹೇಳಿದರು:

"ಪ್ರತಿಯೊಂದು ಮನೆಗೂ ಒಂದು ಶೌಚಕೂಪವಿರಲೇಬೇಕು. ಮನೆಯ ಬಾಡಿಗೆಕೊಡುವ ಪ್ರತಿಯೊಬ್ಬರಿಗೂ ಈ ಸೌಕರ್ಯ ಬೇಡುವ ಜನ್ಮಸಿದ್ಧ ಹಕ್ಕು ಇರುವುದು. ಈ ನಿಮ್ಮ ಹಕ್ಕನ್ನು ಪ್ರತಿಪಾದಿಸುವುದನ್ನು ಬಿಟ್ಟು, ನೀವು ಹೀಗೆ ಮುಂಜಾನೆ ಎದ್ದೊಡನೆ ಬೈಲಿನ ಕಡೆಗೆ ಇಲ್ಲವೆ ಮಲದಿಂದ

ಹೊರಸೂಸುವ ದುರ್ಗಂಧಮಯ ಸಾರ್ವಜನಿಕ ಶೌಚಕೂಪ ಗಳ ಕಡೆಗೆ ಸಾಗುವುದನ್ನು ನೋಡಿದರೆ, ನನಗೆ ನಿಜವಾಗಿಯೂ ಸುಶಿಕ್ಷಿತರ ಬಗ್ಗೆ ಕನಿಕರ ಬರುತ್ತದೆ. ಕ್ಷಮಿಸಿರಿ, ನನ್ನ ನಿಮ್ಮ ಪರಿಚಯ ಅಷ್ಟೊಂದಿಲ್ಲ; ಆದರೂ ಕಠೋರ ಸತ್ಯವನ್ನು ನಿಮಗೆ ಹೇಳಿದೆ. ಕ್ಷಮಿಸಿರಿ!''

ನಾನು ನನ್ನ ಮಿತ್ರರಿಗೆ ಇಷ್ಟೇ ಉತ್ತರಕೊಟ್ಟೆ : '' ನೀವು ಹೇಳಿದುದು ಅಕ್ಷರಶಃ ನಿಜವಾಗಿದೆ; ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಸುದೈವದಿಂದ ನನ್ನ ಮನೆಗೆ ಒಂದು ಶೌಚಕೂಪವಿದೆ. ಭಂಗೀ ಜನರ ಸಂಪಿಗೂ ಮಣಿಯದ ಹಗೆಯ ಶೌಚಕೂಪವಿದೆ. ಆದರೆ ನಾನು ಸದ್ಯ ಹೊರಟದ್ದು ಸಾರ್ವಜನಿಕ ಶೌಚಕೂಪಕ್ಕೆ ಅಲ್ಲ ; ಸಾರ್ವಜನಿಕ ಪಾಲಿನ ಪೇಟಿಗೆ.''

ನನ್ನ ಮಾತನ್ನು ಸ್ಪಷ್ಟಪಡಿಸಲು ಕೈಯಲ್ಲಿದ್ದ ತಂಬಿಗೆಯನ್ನು ಡಬ್ಬು ಹಿಡಿದೆ; ಎಡಗೈಯಲ್ಲಿಯ ಎಂಟಾಣೆಗಳನ್ನು ಅವರಿಗೆ ತೋರಿಸಿದೆ. ಇದರಿಂದ ನನ್ನ ಮಿತ್ರನ ತಪ್ಪು ತಿಳಿವಳಿಕೆ ಅಳಿದು ಹೋಗಿ ಎಲ್ಲವೂ ಸರಿಯಾಗಿ ಸಾಗುವುದೆಂದು ನನ್ನ ತಿಳಿವಳಿಕೆ; ಆದರೆ ಈ ತಿಳಿವಳಿಕೆ ತಪ್ಪು ತಿಳಿವಳಿಕೆಯಾಗಿ ಪರಿಣಮಿಸಿತು. ಶುಕ್ಲಪಕ್ಷದ ಚಂದ್ರನಂತೆ ಬೆಳೆಯುತ್ತ ನಡೆದಿದ್ದ ನಮ್ಮೀರ್ವರ ಸ್ನೇಹವು ಅಂದೇ ಮುಕ್ತಾಯ ಹೊಂದಿತು.

ತಪ್ಪು ತಿಳಿವಳಿಕೆಯನ್ನು ಉಳಿಯಗೊಟ್ಟರೂ ಕಷ್ಟ; ಹೋಗಲಾಡಿಸಿದರೂ ಕಷ್ಟ ! ಅದು ವಾಮನಾವತಾರವನ್ನು ಬಿಟ್ಟು ಪ್ರವಿಕ್ರಮಾವತಾರವನ್ನು ತಾಳಿ ಬಿಟ್ಟರಂತೂ ತೀರಿಯೆ ಹೋಯಿತು. ಮುಂಬಯಿಯಲ್ಲಿ ಮೊನ್ನೆ ಸಿಂಧದಿಂದ ಬಂದ ನಿರಾಶ್ರಿತರ ಉಡುವು ನೋಡಿ ತಪ್ಪು ತಿಳಿವಳಿಕೆ ಮಾಡಿಕೊಂಡು ಬಂದು ಜಾತಿಯವರು ಅವರಲ್ಲಿ ಕೆಲವರನ್ನು ಕೊಂದು ಹಾಕಿದರಂತೆ. ಅದೇಕೆ ಮೊನ್ನೆ ಹುಬ್ಬಳ್ಳಿಯಲ್ಲಿ ತೀರ ಸಣ್ಣ ಸ್ವರೂಪದ ಗಲಭೆಯಾದರೂ,ಯಾರೋ ಹಾರಿಸಿದ ಧಡಲ್‌ಬಾಜಿಯ ಸಪ್ಪಳ ದಿಂದ ಕೆಲವರು ' ಪೋಲೀಸರೆ ಗೋಳೀಬಾರು ಮಾಡಿದರು; ಗಲಭೆ ಭಯಂಕರ ಸ್ವರೂಪದ್ದಿರಬೇಕು'ಎಂದು ತಪ್ಪು ತಿಳಿವಳಿಕೆ ಮಾಡಿಕೊಂಡಿದ್ದರಂತೆ. ಕಳ್ಳಪೇಟೆ, ಲಂಚಗುಳಿತನ, ಹೈದರಾಬಾದಿನ ಸಮಸ್ಯೆ, ಕರ್ನಾಟಕ ಏಕೀಕರಣ, ಕಾಶ್ಮೀರದ ಮೇಲೆ ನಡೆದ ದಾಳಿ, ರಶಿಯಾ—ಅಮೇರಿಕಾ—ಫೋಟೊಕಾಯಿದೆ ಇವುಗಳನ್ನೆಲ್ಲ ಬಗೆಹರಿಸುವ ಮೊದಲು ತಪ್ಪು ತಿಳಿವಳಿಕೆಗೆ ಕೈಹಾಕಿದರೆ, ಜಗತ್ತಿನ ಒಂದು ದೊಡ್ಡ ಸಮಸ್ಯೆಯನ್ನು ಬಗೆಹರೆಸಿದಂತಾಗುವುದು. ಮತ್ತು ಅದರಿಂದ ಮೇಲೆ ವಿವರಿಸಿದ ಸಮಸ್ಯೆಗಳೂ ವಿಡಬಹುದೋ ಏನೋ— ಎಂದೆನಿಸುತ್ತದೆ. ಆದೇ ಕಾಲಕ್ಕೆ ತಪ್ಪು ತಿಳಿವಳಿಕೆಯನ್ನು ಹೋಗಲಾಡಿಸಲು ಯತ್ನಿಸಿದರೆ ಈ ಸಮಸ್ಯೆಗಳು ಮತ್ತಿಷ್ಟು ಜಟಿಲವಾಗುವ ಭಯವು ತಲೆದೋರುತ್ತದೆ

(೨೯೬ ನೆಯ ಪುಟದಿಂದ ಮುಂದೆ ಸಾಗಿದ್ದು)

ಕತೆ ಮುಗಿಯಿತು. ದಾರುಣ ಮತ್ತು ಭಯಂಕರ.

ಆಕೆಯ ನೀರುದುಂಬಿದ ಕಣ್ಣುಗಳು ಶೂನ್ಯವನ್ನು ನೋಡುತ್ತಿದ್ದುವು.

ನನ್ನ ಭಾರವಾದ ಹೃದಯವು ತುಂಬಿದ ಕಂಠದಿಂದ ಅಸ್ಪಷ್ಟವಾಗಿ ನುಡಿಯಿತು :

'ಅ..ಮಾ....ನು...ಷ..'

ಕೃಷ್ಣಪಕ್ಷ,..ಏಕಾಂತ....ನೀಶಬ್ದ.. ಆಗಸದಲ್ಲಿ ಛಿನ್ನ-ವಿಚ್ಛಿನ್ನ ಮೋಡಗಳು.

ಮಿನುಗುವ ಚಿಕ್ಕೆಯೊಂದನ್ನು ಕರಿಯ ಮೋಡವೊಂದು ಮುಚ್ಚಿತು. ಗಾಳಿಯು ಮೆಲ್ಲಗೆ ಸುಳಿಯುತ್ತಿತ್ತು. ದೂರದಿಂದ ಅಸ್ಪಷ್ಟವಾಗಿ ಕೇಳಿಸಿತು : " ಸೋಚಾಥಾ ಕ್ಯಾ, ಕ್ಯಾ ಹೋಗಯಾ, ಕ್ಯಾ ಹೋಗಯಾ ? "

ಭಾರತದ ಸ್ವಾತಂತ್ರ್ಯರಕ್ಷಣೆಗೆ ಆರೋಗ್ಯಶಾಲಿ ಜನರು ಬೇಕು!
ಜನತೆಯ ಆರೋಗ್ಯ-ಆನಂದಗಳೇ ನಮ್ಮ ಆದರ್ಶ !

ಬಾಂಬೇ ರೆಸ್ಟೋರೆಂಟ್, ಧಾರವಾಡ

ಇಲ್ಲಿಯ ಸುವ್ಯವಸ್ಥೆ-ಸಮಾಜೀನಾದ ಚಂಡಿ-ತಿನಿಸುಗಳನ್ನು ಯಾವ ಹಿರಿಯ-ಕಿರಿಯರು ಮನಗಂಡಿಲ್ಲ ?

ಬರಿಯೆ ಸ್ವಲ್ಪ ಕಾಲ ಇಲ್ಲಿ ಬಂದು ಕುಳಿತು ಹೋದರೂ ಎಂತಹ ಮಾನಸಿಕ ತಾಪವನ್ನೂ ಪರಿಹರಿಸಬಹುದು !

ಉತ್ತರ ಕನ್ನಡಿಗರ ಆಧಿರುಚಿಗೆ ತಕ್ಕುದಾದ ಉತ್ತಮ ಜಹಾ !
ದಕ್ಷಿಣಕನ್ನಡಿಗರನ್ನು ಮೆಚ್ಚಿಸಬಹುದಾದ ಕಮ್ಮನೆಯ ಕಾಫಿ !!
ಸ್ವಚ್ಛತೆ-ಸವಿರುಚಿಗಳು ನಮ್ಮ ತಿಂಡಿ-ತಿನಿಸುಗಳ ವೈಶಿಷ್ಟ್ಯ !!!

ಲಾಭದಾಶೆಯಿಂದ ಜನತೆಯ ಆರೋಗ್ಯವನ್ನು ಅಲಕ್ಷಿಸುವ ಸ್ವಾರ್ಥ ವ್ಯವಹಾರ ನಮ್ಮಲ್ಲಿಲ್ಲ!

ಒಮ್ಮೆ ಇಲ್ಲಿಗೆ ಬಂದವರು ಮತ್ತೆ ಮತ್ತೆ ಇಲ್ಲಿಗೇ ಬರಬೇಕೆಂದು ಬಯಸದಿರರು !

ಬನ್ನಿರಿ ! ಸ್ವಾಗತ ! ಬನ್ನಿರಿ !

ಬಾಂಬೇ ರೆಸ್ಟೋರೆಂಟ್, ಧಾರವಾಡ

'ಕನ್ನಡ' ರೂಪದ ಸಾಧುತ್ವ

(ಲೇಖನ ೧)

ಶ್ರೀ. ದ. ರಾ. ಬೇಂದ್ರೆ ಎಂ. ಎ. ಸೊಲ್ಲಾಪುರ

★

'ಕಂನ್ನಾಡು—ಕಂನಾಡು' ಪ್ರಯೋಗವು 'ಕನ್ನಡ'ದಷ್ಟು ಪ್ರಾಚೀನವಲ್ಲ. 'ಕಂನಾಡು' ಎಂಬುದೇ ಪ್ರಾಚೀನ ರೂಪ—ಎಂಬ ತಿಳಿವಳಿಕೆಯು ಅನೇಕ ಅರಕಳಿ ವಿಚಾರಗಳ ಸಧಪಳಿ!

★

"'ಕನ್ನಡ' ಈ ರೂಪವು 'ಕಂನ್ನಾಡು' ಇದರ ಸವಕಳಿ. ಸುಸಂಸ್ಕೃತರು ಅದನ್ನು ದೇಶವಾಚಿಯಾಗಿ ಬಳಸಬಾರದು."

"'ಕಂನ್ನಾಡು' ಇದು ಹೇಗೆ ಶುದ್ಧರೂಪು?"

"ಕಂನ್ನರ ನಾಡು=ಕಂನ್ನಾಡು."

"ಕಂನ್ನರು ಯಾರು?"

"ಕಂಮೆ, ಕಂನ್ನೆನಾಡಿನವರು."

"ಈ ನಾಡೆಲ್ಲಿದೆ?"

"ಶ್ರೀಶೈಲದ ಬಳಿಯಲ್ಲಿ!"

"ಇದೆಲ್ಲ ಐತಿಹಾಸಿಕ ಸತ್ಯವೊ?"

"ಕಾಗದ-ಬರೆಹಗಳಿರಲಿ, ಇದೆಲ್ಲಕ್ಕೂ ಕಲ್ಬರೆಹಗಳ ಆಧಾರವಿದೆ. ಮತ್ತೇನು ಬೇಕು?"

"ಈ ಪ್ರಮಾಣಗಳು ಎಷ್ಟು ಹಳೆಯವು?"

"ನೃಪತುಂಗನಿಗಿಂತ ಪ್ರಾಚೀನ ಕಾಲ; ಗಂಗರಾಜ ಭೂವಿಕ್ರಮನ ಕಾಲ: ಕ್ರಿ. ಶ. ೬೩೦ ರಷ್ಟು ಹಳೆಯದು."

"'ಕನ್ನಡ' ಎಂಬ ರೂಪ ಪ್ರಾಚೀನವಲ್ಲವೊ?"

"ಎಲ್ಲಿಯದು, ಮಹಾಸ್ವಾಮಿ! ಅದು ತೀರ ಇತ್ತೀಚಿನದು. ಅದು ರೂಪವೂ ಅಲ್ಲ. ವಿರೂಪ—ಕುರೂಪ—ಎನ್ನಬಹುದು. ಸಾಧುರೂಪವು ಸಂಶೋಧನೆಯಿಂದ ಸಿಕ್ಕಿರುವಾಗ, ಕುರೂಪವನ್ನೆ ಬಳಕೆಯಲ್ಲಿಡುವುದು ಕಗ್ಗಜನರ ಲಕ್ಷಣವೆಂದು ಆಂಗ್ಲ ಮಹಾಕವಿ ಮಿಲ್ಟನಿನ ಶಾಪವಿದೆ. ಇನ್ನು ಮುಂದೆ 'ಕಂನ' ರೆಲ್ಲರೂ ತಮ್ಮ ದೇಶದ ಹೆಸರು 'ಕಂನ್ನಾಡು' ಎನ್ನಬೇಕು. ಅವರು 'ಕನ್ನಡಿಗ'ರಲ್ಲ, 'ಕನ್ನಡ' ರೂಪವೆ ಅಸಾಧು. 'ಕನ್ನಡ ನಾಡು' ಎನ್ನುವುದಂತೂ ಹಾಸ್ಯಾಸ್ಪದ!"

"ಇದಕ್ಕೆ ವಿದ್ವಾಂಸರ ಬೆಂಬಲ ಉಂಟೆ?"

"ಕರ್ನಾಟಕ ಕವಿಚರಿತ್ರ ಪ್ರಣಿತಾಮಹರಾದ ದಿವಂಗತ ನರಸಿಂಹಾಚಾರ್ಯರೆ ೧೯೩೦ ರ ಪೂರ್ವದಲ್ಲಿ, ತಮ್ಮ ಊಹಾ ಬಲದಿಂದ ಈ ರೂಪವನ್ನು ಸೂಚಿಸಿದರು. ಇತ್ತೀಚೆ ಒಂದು-ವರೆ ತಪದಲ್ಲಿ ಅದು ಪ್ರಮಾಣಸಿದ್ಧವಾಗಿದೆ."

"ಇರಲಿ, 'ಕಂನ್ನಾಡು' ಯಾರ ನಾಡು?— ಎಂದು ನಾದರೂ ಅವರು ಸೂಚಿಸಿದ್ದರೆ? ಯೋಚಿಸಿದ್ದರೆ?"

"ಅಯ್ಯೋ, ಅದೆಲ್ಲಿಯದು! ಇದರ ಪೂರ್ವಪದವು ಜನವಾಚಕ ಎಂಬ ಸಂಶಯವೂ ಬಹಳ ಜನರಿಗೆ ಬಂದಿರಲಿಲ್ಲ."

"ಹಾಗಾದರೆ ಅದು ವಿದ್ವಜ್ಜನರಿಗೆ ಮಾನ್ಯವಿಲ್ಲ!"

"ಹಾಗಲ್ಲ; ಶ್ರೀ. ಎನ್. ವೆಂಕಟರಮಣಯ್ಯ ಎಂಬ ಆಂಧ್ರ ಸಂಶೋಧಕರು ಈ ವಿಚಾರವನ್ನು ಸೂಚಿಸಿ ಶ್ರೀಶೈಲದ ಸುತ್ತಿನಲ್ಲಿ ಕನ್ನಡದ ನೆಲೆ—ಎಂದು ಮಂಡಿಸಿದರು. ಆದರೆ ಅದರ ಸರ್ವಾಂಗ ಊಹಾಪೋಹವು ಇತ್ತೀಚೆ ನಡೆದು ಅದು ಸರ್ವಸಂಮತವಾಗುವ ಮಟ್ಟಕ್ಕೆ ಬಂದಿದೆ."

"ಹಾಗಾದರೆ ಕಂನ್ನಾಡಿನ ಎಲ್ಲ ವಿಚಾರವಂತರು ಇನ್ನೊಪ್ಪಿದ್ದಾರೆ!"

"ಬಹಳ ಜನರು 'ಮೌನಂ ಸಮ್ಮತಿ ದರ್ಶನಂ' ಎಂಬ ನ್ಯಾಯದಿಂದ; ಕೆಲವರು ಈ ಪದವನ್ನು ತಾವೂ ಆಗೀಗ ಬಳಸುವುದರಿಂದ; ಮತ್ತೆ ಕೆಲವರು ಈ ಸಂಶೋಧನೆಗೆ ಬೇಕಾದ ಸಾಮಗ್ರಿ ಒದಗಿಸಿಕೊಟ್ಟು—ಅಂತೂ ಏನು? ಒಪ್ಪಿದ್ದಾರೆ ಎನ್ನುವಂತೆ ತೋರುತ್ತದೆ."

"ಇನ್ನೂ 'ತೋರುತ್ತದೆ' ಏಕೆ?"

"ಹೌದು; ಕಂನ್ನಾಡಿನ ಸ್ವಾಗತ ನಡೆದಿದೆ. 'ಕನ್ನಡ' ವಿಸರ್ಜನವಾಗಿಲ್ಲ. 'ಕನ್ನಡ' ಶಬ್ದವು ಮುಳುಗುವುದೆ ಇದ್ದರೆ ಸದ್ದಿಲ್ಲದೆ ಮುಳುಗಗೊಡುವುದೇ ಸೂಕ್ತವಲ್ಲವೆ?"

"ಮುಳುಗುವುದೇ ಇದ್ದರೆ, ಬಹಳ ದಿವಸದ ಈ ಪದಾರ್ಥ ಹಣೆಬರೆಹವು ಅದೇ ಆಹುದೊ ಅಲ್ಲವೊ—ಇನ್ನೊಮ್ಮೆ ವಿಚಾರ ಮಾಡುವುದು ಒಳಿತು. ವರುಷ-ವರುಷವೂ ಬರುವ ಗಣೇಶ ಕೂಡ, ವಿಸರ್ಜನೆಯ ಪೂರ್ವದಲ್ಲಿ ಮನೆಯ ಕಡೆಗೆ ಹೊರಳಿ ನೋಡುತ್ತಾನೆ!"

"ಈ ಸಂಪ್ರದಾಯ ಪಾಲಿಸುವುದಕ್ಕಾಗಿ ಈ ಬರೆಹವೆ?"

"ಅಷ್ಟೇ ಅಲ್ಲ!" "ಮತ್ತೇನು?"

"'ಕಂನ್ನಾಡು'ಎಂಬ ರೂಪವು ಪ್ರಾಚೀನವೆಂದಿಟ್ಟುಕೊಂಡರೂ, ಅದನ್ನು ಪಟ್ಟದಿಂದ ತಳ್ಳಿ ಇದುವರೆಗೂ 'ಕನ್ನಡ' ಪದವು ಮನ್ನಣೆ ಪಡೆದಿತ್ತು. 'ಕಂನ್ನಾಡು' ಪ್ರಾಣಪ್ರತಿಷ್ಠೆ ಪಡೆಯಬೇಕಾಗಿದೆ. ಇಂಥ ಸಮಬಲದ್ವಂದ್ವದಲ್ಲಿ, ಬೀಳಬಹುದೆಂದು ತೋರುವ 'ಕನ್ನಡ'ಕ್ಕೆ ಇದ್ದ ಬೆಂಬಲ ಕೊಡುವುದು ಯೋಗ್ಯ. ಯಾರು ಬಲ್ಲರು, 'ಕನ್ನಡ'ವೇ ಪ್ರಾಚೀನ, ಶುದ್ಧ—ಎಂದೂ ಸಿದ್ಧವಾದೀತು; ಅಥವಾ, ಹಾಗಾಗದಿದ್ದರೆ, 'ಕಂನ್ನಾಡು' ಎಂಬ ಪದಕ್ಕೆ ಇನ್ನಷ್ಟು ಪುಷ್ಟಿ ಕಳೆ ಬಂದೀತು.. ವಿಚಾರಾನಂತರದಲ್ಲಿ ಸ್ವೀಕೃತವಾದರೆ. ಏನಿದ್ದರೂ 'ಕಂನ್ನಾಡು' ಪಕ್ಷವು 'ಕನ್ನಡ'ದ ಪೂರ್ವಪಕ್ಷವನ್ನು ತಾನೇ ಕಲ್ಪಿಸಿ ತಾನೇ ಖಂಡಿಸಿದೆ. 'ಕನ್ನಡ'ದ ಪಕ್ಷವಾಗಿ ಕೂಲಂಕಷವಾದ ವಿಚಾರ ಅಗತ್ಯ!"

'ಕಂನ್ನಾಡು' ಎಂಬುದು ಶುದ್ಧ, ಸಿದ್ಧ ಎಂದು ಜೊಕ್ಕ ನಿರ್ಣಯಕ್ಕೆ ಕರುವ ಸಾಹಸವು, ವಿದ್ವತ್ತು, ಪರಿಶ್ರಮ, ಶ್ರೇಯಸ್ಸು ಸಂಪೂರ್ಣವಾಗಿ ನನ್ನ ಗೆಳೆಯರಾದ ಶ್ರೀಯುತ ಶಂ. ಬಾ. ಜೋಶಿಯವರಿಗೆ ಸಲ್ಲಬೇಕು. ಹೋದ ಹನ್ನೆರಡು ವರ್ಷದ ಅವರ ತಪಸ್ಸಿನ ಫಲಗಳಾದ ಅನೇಕ ಗ್ರಂಥಗಳನ್ನು ಕನ್ನಡನಾಡು ಮೆಚ್ಚಿದೆ; ಆದಕ್ಕಾಗಿ ಅವರು 'ಕನ್ನಡ'ದ ಮೂಲೆ ಮೂಲೆಗೂ ಹೋಗಿಬಂದಿದ್ದಾರೆ. 'ಕಂನ್ನಾಡು' 'ಕನ್ನಡ'ವನ್ನು ತಳ್ಳಲಿ, ಬಿಡಲಿ, ಆ ನಿಮಿತ್ತದಿಂದ ಅವರು ಈ ನಾಡಿನ ಜನರ ಪ್ರಾಚೀನ, ಸ್ಥಿತಿ, ಗತಿ, ಆಚಾರ, ವಿಚಾರ, ವ್ಯಾಪ್ತಿಗಳನ್ನು ಕುರಿತು ಇದುವರೆಗು ನಡೆಸಿದ, ಇನ್ನು ಮೇಲೂ ಯಥಾಪ್ರಕಾರ ನಡೆಸುವ ಸಂಶೋಧನವು, ಅದಕ್ಕಾಗಿ ಶೇಖರಿಸುವ ಸಾಮಗ್ರಿಯು, ನಮ್ಮ ನಾಡಿನ ಸಾಮಾಜಿಕ ಇತಿಹಾಸದಲ್ಲಿ ಒಂದು ಹೊಸ ದೃಷ್ಟಿಯನ್ನು ಉಂಟುಮಾಡುವಂತಿದೆ. ಆ ದೃಷ್ಟಿಯು ಹೆಚ್ಚಿನ ತಿಳಿವು, ಅರಿವು, ಹೂಪುಗಳನ್ನು ಪಡೆದು, ಅನೇಕಮುಖ ಸಹಕಾರವನ್ನು ಗಳಿಸಿ, ದೇಶ-ಕಾಲ-ಪಾತ್ರ-ಭಾಷೆಗಳ ಚೌಕಟ್ಟಿನಲ್ಲಿ ಕ್ರಮಸರಿಣತಿಯಿಂದ, ಆವಿರ್ಭಾವ-ತಿರೋಭಾವಗಳ ವಿಲಾಸದಲ್ಲಿ ರೂಪುಗೊಳ್ಳುವ ಮಾನವಚಾರಿತ್ರ್ಯದ ಒಂದು ಮೈಯನ್ನು ಕನ್ನಡವೂ ಪ್ರಕಾಶಗೊಳಿಸುವುದೆಂದು ಭಾರತಕ್ಕೂ ಪ್ರಪಂಚಕ್ಕೂ ಪ್ರಮಾಣಿಸಿಕೊಡಲು ಸಮರ್ಥವಾಗುವಂತೆ, ನಮ್ಮ ಜನರಲ್ಲಿ ವಿವರ್ಧಮಾನವಾಗಿ ನೆಲೆಗೊಳ್ಳಲಿ. ಆ ಹೃದಯಾಕಾಂಕ್ಷೆಯಿಂದ, ವಿಜ್ಞಾನಸಾಮಾನ್ಯಕ್ಕೆ ಸಹಜವಾದ ಬಾಂಧವ್ಯದಿಂದ, ಈ ಲೇಖನಮಾಲೆಯನ್ನು ನಾನು ಪ್ರಾರಂಭಿಸಿದ್ದೇನೆ. ನಾಡಿನ ವಿದ್ವಾಂಸರು ಶ್ರೀ. ಶಂ. ಬಾ. ಜೋಶಿಯವರ ಬರೆವಣಿಗೆಯನ್ನು ತಿರಸ್ಕಾರ-ಪುರಸ್ಕಾರಭಾವದಿಂದ ನೋಡದೆ, ಆ ಹಾದಿಯಲ್ಲಿ ತಮ್ಮ ನೋಟಕ್ಕೆ ಕಾಣುವ ಹೊಸ ಪದಾರ್ಥಗಳನ್ನು ಜನರಿದಿರು ತಂದಿರಿಸಬೇಕು— ಎಂದು ಪ್ರಾರ್ಥಿಸುತ್ತೇನೆ.

'ಕನ್ನಡ' ಶಬ್ದರೂಪದಲ್ಲಿ ಎರಡು ಜನವಾಚಕ ಶಬ್ದಗಳು ಇವೆಯೆಂದು ನಾನು ಅನೇಕ ವರ್ಷಗಳಿಂದ ಕಾಣುತ್ತಿದ್ದೇನೆ. ಅದೇ ಪ್ರಕಾರ ನಮ್ಮ ನೆರೆನಾಡಾದ 'ಮಹಾರಾಷ್ಟ್ರ'ದ ಹೆಸರಿನಲ್ಲಿಯೂ ಎರಡು ಜನ ಸೇರಿಕೊಂಡಿದ್ದಾರೆ ಎಂದು ನನ್ನ ದೃಷ್ಟಿಗೆ ಕಾಣುತ್ತಿದೆ ಈ ಮಾತನ್ನು ನಾನು ಶ್ರೀ. ಶಂ. ಬಾ. ಜೋಶಿಯವರ 'ಮಹಾರಾಷ್ಟ್ರದ ಮೂಲ' ಎಂಬ ಪುಸ್ತಕವನ್ನು ಕನ್ನಡ ಸಾಹಿತ್ಯಪರಿಷತ್ ಪತ್ರಿಕೆಯ ಸಾಹಿತ್ಯಾವಲೋಕನ ವಿಭಾಗದಲ್ಲಿ ವಿಮರ್ಶಿಸುವಾಗ ನಮೂದಿಸಿದ್ದೇನೆ. ಇದನ್ನು ಗುರುತು ಹಾಕಿಕೊಂಡು ಪ್ರೊ. ಮುಗಳಿಯವರು ತಮ್ಮ 'Heritage of Karnataka' ಎಂಬ ಸಂಗ್ರಾಹ್ಯ ಮತ್ತು ಸಂಗ್ರಾಹಕ ಗ್ರಂಥದಲ್ಲಿ 'ಕನ್ನಡ'ದ ಮೂಲವನ್ನು ಕುರಿತಿರುವ ಈ ದ್ವಿವಿಧ ದೃಷ್ಟಿಕೋನಗಳನ್ನು ವಿಭೇದಿಸಿ, ಎರಡಕ್ಕೂ ಪ್ರಮಾಣಸಾಲದು ಎಂದು ಸೂಚಿಸಿದ್ದಾರೆ. ಆದಕಾರಣ 'ಕನ್ನಡ' : ಕಂನ್ನಾಡು' ಜರ್ಜಿಯಲ್ಲಿ ಯಾವ ವಿತಂಡವಾದವೂ ಆಗದಂತೆ, ತತ್ತ್ವಬೋಧದ ಹಾದಿಯಾಗುವ ಶಾಸ್ತ್ರೀಯ ವಾದಸರಣಿಯನ್ನು ಅನುಸರಿಸಲು ಪ್ರಯತ್ನಿಸುತ್ತೇನೆ. ವಾದವು ನೀರಸವಾಗಬಾರದೆಂದು ಪ್ರಶ್ನೋತ್ತರದ ನಾಟಕ ಶೈಲಿಯಲ್ಲಿಯೂ ಹಾಸ್ಯದ ಗೌರವವನ್ನು ಕಾಪಾಡಿಕೊಳ್ಳಲು ಎಚ್ಚರವಹಿಸುತ್ತಿದ್ದೇನೆ. ಇರಲಿ.

"ಇನ್ನು, 'ಕನ್ನಡ' ಮತ್ತು 'ಕಂನ್ನಾಡು'. ಯಾವ ರೂಪ ಪ್ರಾಚೀನ?"

"ಪ್ರಮಾಣಪನ್ನೆ ಆನಲಂಬಿಸಿ ಮಾತನಾಡುವುದಾದರೆ, ಇವೆರಡಕ್ಕಿಂತ 'ಕರ್ಣಾಟ' 'ಕರ್ನಾಟಕ' ಎಂಬ ರೂಪಗಳೆ ಪ್ರಾಚೀನ. 'ಕನ್ನಡ-ಕಂನ್ನಾಡು' ಪ್ರಾಚೀನವಿರಲಾರವು ಎಂದಲ್ಲ; ಇರಬಹುದು. ಆದರೆ ಸಂಸ್ಕೃತ ವಾಙ್ಮಯದಲ್ಲಿ ಈ ರೂಪಗಳ ರೂಢಿಯಿಲ್ಲ; ಮತ್ತು ಸಂಸ್ಕೃತ ವಾಙ್ಮಯಕ್ಕಿಂತ ಪ್ರಾಚೀನವಾದ, ಕನ್ನಡ ತಮಿಳು ಗ್ರಂಥಗಳಾಗಲಿ, ಶಿಲಾಶಾಸನಗಳಾಗಲಿ ಉಪಲಬ್ಧವಿಲ್ಲ. ಈ ಕಾರಣದಿಂದ ಕರ್ಣಾಟ-ಕರ್ಣಾಟಕಗಳೆ ಸಂಸ್ಕೃತ, ಪ್ರಾಕೃತ, ಅಪಭ್ರಂಶ ಮಾರ್ಗವಾಗಿಯೂ ಕರ್ಣಾಟಕಾಂಧ್ರ ದ್ರಾವಿಡಗಳ ಶಿಲಾಶಾಸನಗಳಲ್ಲಿ ವಿವಿಧ ವಿಕಾರ-ಪ್ರಕಾರಗಳನ್ನು ಪಡೆದಿವೆ ಎಂಬುದನ್ನು ಇತಿಹಾಸ ಅಲ್ಲಗಳೆಯಲಾರದು ಪ್ರಾಕೃತ ಶಾಸನಗಳ ಒಂದು ಕಾಲವು ದಕ್ಷಿಣ ದೇಶಗಳಲ್ಲಿ ಆಗಿಹೋಗಿದೆ. ಅದಕ್ಕೂ ಪೂರ್ವದಲ್ಲಿ, ಬುದ್ಧ-ಮಹಾವೀರರ ಕಾಲದಿಂದ ಪ್ರಾಕೃತಭಾಷೆಗಳು ದಕ್ಷಿಣ ದೇಶದಲ್ಲಿ ತಮ್ಮ ದವಲತ್ತು ನಡೆಸಿವೆ ಎಂಬುದೂ ಅಷ್ಟೇ ಐತಿಹಾಸಿಕ!"

"ಹೀಗಿರುವಾಗ, 'ನಡ' 'ನಾಡು'ಗಳಲ್ಲಿ 'ನಾಡು' ಇದೇ ಸಂಸ್ಕೃತದ ನಾಟ-ನಾಡು ಮಾರ್ಗದಿಂದ ಬಂದಿದೆಯೊ? 'ನಾಡು' ಸವಕಳಿಗೊಂಡು 'ನಡ'ವಾಗಿದೆಯೊ? 'ನಡ'ವೇ ವಿಸ್ತಾರಗೊಂಡು 'ನಾಡು' ಆಗಿದೆಯೊ? 'ನಡ' 'ನಾಡು'

ಎರಡೂ ಶುದ್ಧ ರೂಪಗಳೆ ಇರಬಹುದೆಂದರೂ, ಅವುಗಳ ಮೂಲ, ಬೀಜ, ಧಾತು ಯಾವುದು ? "

" ಕನ್ನಡ ಧಾತುಪಾಠದಲ್ಲಿ, ನಡು, ನುಡಿ, ನೀಡು, ನೆಡು, ನಡೆ, ನೋಡು—ಏನೇನೋ ಇದೆ ; ನಾಡು ಇಲ್ಲ. ' ನಾಡು '-' ನಡು-ನೆಡು ' ಗಳಿಂದ ಬಂದಿದ್ದರೆ, ' ನಾಡು ' ಇದಕ್ಕಿಂತ ' ನಡ ' ರೂಪವೇ ಪೂರ್ವದ್ದಾದೀತು ! "

" ' ಹಾಗಲ್ಲ, ನಾಡು ' ಇದು ' ನಾಟು-ನಾಂಟು ' ಇದರಿಂದ ಬಂದಿರಬೇಕು."

"ಹಾಗೂ ಆಗಲಿ, ' ನಾಟು-ನಾಂಟು ' ' ನಡು-ನೆಡು ' ಈ ಜೋಡಿಗಳಲ್ಲಿ ಪೂರ್ವದ್ದಾವುದು ? ' ನ ಡು ' = ಊರು (ಊರಿಕೊಂಡಿರು) (' ನಾಡು ', ' ಊರು ' ಗಳಲ್ಲಿ ಭೇದವಿದೆ, ಆ ಮಾತು ಮತ್ತೆ ಮುಂದೆ.) ಇದೇ ಬೀಜವಾಗಿ ಸದ್ಯಕ್ಕೆ ತೋರುವುದು. ಕಾಲ್ಡ್‌ವೆಲ್, ಕಿಟ್ಟೆಲ್‌ರೂ ಇದನ್ನೆ ಎತ್ತಿ ಹಿಡಿಯುವರು. (ಹಾಗಲ್ಲ ಎಂದು ಪ್ರತಿಪಾದಿಸಿದರೆ, ಆ ವಿಚಾರ ವಿಸ್ತಾರವನ್ನು ಪ್ರಸಂಗ ಬಂದರೆ ನೋಡುವಾ.) ' ನಡ ' ಎಂಬುದು ' ನಡು ' ಇದರಿಂದ ಸಾಧಿತವಾಗಿದೆ. ಕನ್ನಡ ಬೀಜಶಬ್ದಗಳು ಬಹುತರವಾಗಿ ವ್ಯಂಜನಾಂತವಾಗಿವೆ ಎಂದಾದರೂ, ' ನಡ ' ವೇ ಪೂರ್ವದ್ದಾದೀತು ' ನಾಡು ' ಅಲ್ಲ !"

" ' ನಡು-ನಾಟು ' ಗಳನ್ನು ಸದ್ಯಕ್ಕೆ ಬಿಡಿರಿ, ' ಕರ್ನಾಡು ' ಎಂಬ ಪ್ರಯೋಗ ಕ್ರಿ ಶ ೬೫೪ ರಷ್ಟು ಹಳೆಯದಿದೆಯಲ್ಲ—ಎಂದರೆ ! "

" ' ಕನ್ನಡರ್ ' ಎಂಬ ಶಿಲಪ್ಪಾದಿಕಾರಂ ಪ್ರಯೋಗವೂ, ' ಕನ್ನಡದ ' ಒಂದು ನೆಲೆಯಾದ ನೀಲಗಿರಿ ಭಾಷೆಯೊಂದರಲ್ಲಿ ' ಗಾಳಿ ಕನ್ನಡ ಮಾತನಾಡುವುದು ' ಎಂಬ ನಾಣ್ನುಡಿಯೂ, ಕ್ರಿ. ಶ. ೫೦೦ಯ ಶತಮಾನಕ್ಕಿಂತ ಹಿಂದೆ ಒಯ್ಯುತ್ತಿದೆ ' ಕನ್ನಡ ' ವನ್ನು ! "

"ಅನಿಶ್ಚಿತ ಕಾಲದ ನಿನ್ನು ಶಿಲಪ್ಪಾದಿಕಾರಂ ಅತ್ತ ಇರಲಿ, ಕಂನ್ನಾಡಿಗರ ಒಂದು ನೆಲೆಯಾದ ' ಕರ್ಮರಾಷ್ಟ್ರ ' ದ ಉಲ್ಲೇಖವು ೩೫೦ಯ ಶತಮಾನದಷ್ಟು ಹಳೆಯ ಕಾಲದ ಶಿಲಾಶಾಸನದಲ್ಲಿ ಬರುವುದು—ಎಂದರೇ ! "

" ಈ ಶೋಧಮಾಡಿದ ಸಂಶೋಧಕರಾದ ಶ್ರೀ. ದೇಸಾಯಿ ಪಾಂಡುರಂಗರಾಯರೇ ಕರ್ಮರಾಷ್ಟ್ರ—' ಕನ್ನಾಡು ' ಇವು ಬೇರೆ ಬೇರೆ ಎಂದು ಒತ್ತಿ ಹೇಳುತ್ತಾರೆ. ಇದಲ್ಲದೆ ಕಮ್ಮೆ-ಕನ್ನಡ ಬ್ರಾಹ್ಮಣಭೇದವಿದೆ; ಮತ್ತು ; ' ಕಮ್ಮೆ-ಕನ್ನಡ ' ಎಂಬ ಕುಲಭೇದವನ್ನು ಸಾರುವ ಜೆನ್ನಬಸವೇಶ್ವರ, ನಿಜಗುಣರ ವಚನಗಳು ' ಕಮ್ಮೆ — ಕನ್ನಡ ' ಒಂದಾಗಿರಲಿಲ್ಲ ಎಂದುದರ ಗತಿಯೇನು ? "

"ಅದಿರಲಿ, ' ಕಮ್ಮೆ-ಕನ್ನಡ ' ಬೇರೆಯಾಗಲಿ ಬೇಕಾದರೆ, ' ಕಂನ್ನೆನಾಡು, ' ' ಕಂನಾಡು ' ಎರಡೂ ಕರ್ನೂಲು ಪ್ರಾಂತದಲ್ಲಿಯೆ ಇರುವುದರಿಂದ, ಕಣ್ಣ ವಿಷಯವೂ ಬಹಳ ದೂರಿಲ್ಲ, ಆದಕಾರಣ, ಈ ಕಂ-ಕಂನ್ನೆ-ಕಣ್ಣ-ಕರ್ಣ ಜನವೇ ಕರ್ನೂ ರಾಷ್ಟ್ರದ ಬುಡಕಟ್ಟಿಗೂ ಇರಬೇಕು—ಎಂದರೆ."

" ಬುಡಕಟ್ಟಿನ ಜನರ ವಿಷಯ ಇನ್ನೂ ಚರ್ಚೆಯಿಂದ ನಿರ್ಣಯವಾಗಬೇಕು."

" ಅದೂ ನಮ್ಮ ಮಟ್ಟಿಗೆ ಆಗಿಬಿಟ್ಟಿದೆ—ಎಂದರೆ ! "

" ಹಾಗಾದರೂ ಕೂಡ, ' ಕರ್ಮರಾಷ್ಟ್ರ ' ಪ್ರಾಚೀನ ವಾದೀತೇ ಹೊರತು, ' ಕಂನ್ನಾಡು ' ಪ್ರಯೋಗವು ಪ್ರಾಮಾಣಿಕವಾಗಿ ಪ್ರಾಚೀನವಾಗಲಾರದು. ಶ್ರೀಶೈಲ—ಕರ್ನೂಲು ಪ್ರಾಂತದ ಯಾವ ' ಕಂನ್ನಾಡು ' ಪ್ರಯೋಗವೂ ನೃಪತುಂಗನ ' ಕನ್ನಡ ' ದಷ್ಟು ಪ್ರಾಚೀನವಿಲ್ಲ."

" ಅಬ್ಬಬ್ಬ ! ಅದೇಕೆ, ' ಕಂನ್ನೆ ' ನಾಡಿನ ಪ್ರಯೋಗ, ೪೦೦, ೫೫೦, ೧೫೦, ೧೪೭೬ರಲ್ಲಿ ಬಂದಿದೆ. ನೋಡಿಲ್ಲವೇ ನೀವುಗಳು ? "

" ಹೌದು, ಓದಿದ್ದೇವೆ, ಅವು ಶಿಲಾಶಾಸನಗಳ ನಂಬರುಗಳಲ್ಲದೆ ಶತಮಾನದ ಅಂಕೆಗಳಲ್ಲ."

" ಹೀಗೋ ! ಅದಿರಲಿ. ಕರ್ನೂಲು ಪ್ರಾಂತದಲ್ಲಿ ' ಕಂನಡ ' ಪ್ರಯೋಗಕ್ಕಿಂತ ' ಕಂನ್ನಾಡು ' ' ಕಂನೆ ' ಪ್ರಯೋಗಗಳ ಹೆಚ್ಚಾಗಿರುವುದರಿಂದಲೂ, ಪ್ರಾಚೀನವಾಗಿರುವುದರಿಂದಲೂ ಕಂನೆ=ಕಂನ್ನಾಡು=ಕಂನಡ ಒಂದೇ ಎಂದು ಒಪ್ಪುವಿರಾ ?—ಎಂದರೆ ! "

" ' ಕಂನೆ ' ನಾಡು ಯಾವಾಗಲೂ ' ೩೦೦ ' (ಮುನ್ನೂರು) ಇರುವುದರಿಂದಲೂ ' ಕಂನ್ನಡ ' ೪೦೦೦ (ನಾಲ್ಕು ಸಾವಿರ) ಇರುವುದರಿಂದಲೂ ' ಕಂನೆ ' ' ಕಂನಡ ' ದ ಹೊಟ್ಟೆಯಲ್ಲಡಗೀತಲ್ಲದೆ, ' ಕಂನಡ ' ವು ' ಕಂನೆ ' ಯಲ್ಲಿ ಹಿಡಿಸಲಾರದು. "

"ಕಂನೆ ಮುನ್ನೂರನ್ನು ಬಿಟ್ಟುಬಿಡಿ, ಕರ್ನೂಲು ಪ್ರಾಂತವನ್ನೆ ವ್ಯಾಪಿಸುವಂತೆ ತೋರುವ ' ಕಂನಾಡು ', ' ಕಂನಡ ' ವನ್ನು ಅಡಗಿಸಲಾರದೆ— ಎಂದರೆ ! "

"ಹೌದು, ಆ ನಾಡಿಗೆ ಕರ್ಣಾಟ-ಸೀಮಾ ಎಂದೂ ಎಂದಿರಬಹುದು. ಕರ್ಣಾಟ=ಕಂನಾಡು ಒಂದೇ ಇರಬಹುದು. (ಕರ್ಣಾಟದ ತದ್ಭವವೆ ಕಂನಾಡು ಇರಬಹುದು. ಛೀ, ಶಾಂತಂ ಪಾಪಂ !) ಅದರೆ ಆ ಣಾಟ-ನಾಟ-ನಾಡು-ನಡ ಪದವು, ಶ್ರೀಶೈಲವೇ ಯಾವುದರ ಭಾಗವಾಗಿದೆಯೊ ಆ ನಲ್ಲ. ಮಲೆಯನ್ನೆ ನೆಲೆಯಾಗಿಸಿದ ' ನಳ ' ' ನಡ ' ರ ಕುರುಹಾಗಿದೆ. ಚಾಲುಕ್ಯರ ಪುಲಕೇಶಿಯು ಗೆದ್ದ ರಾಜರಲ್ಲಿ ಈ ' ನಳ ' ರಿದ್ದಾರೆ ಕರ್ನೂಲು ಪ್ರಾಂತದಲ್ಲಿ ' ನಳವಾಡಿ ' ಚಾಚಿಕೊಂಡಿದೆ."

"ಇರಲಿ, ನಳ-ನಡರು ಅಲ್ಲಿದ್ದರು ಎಂದು ತಿಳಿದರೂ ನಾಡವ = ರಾಷ್ಟ್ರಿಕ=ರಡ್ಡಿ=ಕಮ್ಮೆ= ಕಂ-ಕನ್-ಕಣ್-ಕಣ ಎಂಬುದು ನಿಜವಲ್ಲವೆ ? "

" ಇಂಥ ಸಮೀಕರಣದ ಆದ್ಯೈತವು ಸಂಶೋಧನೆ ಇನ್ನೂ ಸಾಲದು ಎಂದು ಸಾರುತ್ತದೆ. ಇತಿಹಾಸ ದೃಷ್ಟಿಯಲ್ಲಿಯು ಐಕ್ಯದಷ್ಟೆ ಭೇದಕ್ಕೂ ಸತ್ಯತೆ ಇದೆ."

"ಅಲ್ಲ, ಸ್ವಾಮಿ, ಮನುಸ್ಮೃತಿಯಲ್ಲಿ :

ಝಲ್ಲೋ ಮಲ್ಲಶ್ಚ ರಾಜನ್ಯಾತ್
ವ್ರಾತ್ಯಾನ್ನಿಚ್ಛಿವಿರೇವಚ ||
ನಟಶ್ಚ ಕರಣಶ್ಚೈವ
ಖಸೋ ದ್ರವಿಡ ಏವಚ || ೧೦–೨೨.

ಎಂದು ಸ್ಪಷ್ಟವಾಗಿ ಹೇಳಿದೆಯಲ್ಲ–ಎಂದರೆ''

"ಹೌದು ಸ್ಪಷ್ಟವಾಗಿ 'ಚ' ಹಾಕಿ, ಅವರು ಬೇರೆ ಇವರು ಬೇರೆ ಎಂದು ಹೇಳಿದೆ."

"ಪಾಪ! ನೀವು ಕುಲ್ಲೂಕಭಟ್ಟರ ವ್ಯಾಖ್ಯಾನ ನೋಡಿಲ್ಲ. 'ಏತಾನ್ಯಪ್ಯೇಕಸ್ಯೈವ ನಾಮಾನಿ' ಎಂದು ಖಡಾಖಂಡಿತವಾಗಿ ಹೇಳಿದ್ದಾರೆ."

"ಹೌದು, ಅದರ ಅರ್ಥ ಕರ್ಣ=ಕರಣನೊಬ್ಬನೆ ನಿಜವಾದ ವಸ್ತು, ಉಳಿದವರೆಲ್ಲ ಅದರ ಹೊಟ್ಟೆಯಲ್ಲಿ ಬರುತ್ತಾರೆ– ಎಂದು ಅಲ್ಲ. ಅವೆಲ್ಲ ವ್ರಾತ್ಯಜಾತಿಯ ಬೇರೆ ಬೇರೆ ಹೆಸರುಗಳು. ಅದರಲ್ಲಿ ಜನ್ಮಭೇದ, ದೇಶಭೇದಗಳು ಇವೆ– ಎಂದು ಅವನೇ ಸ್ಪಷ್ಟಪಡಿಸುತ್ತಾನೆ. ಹಾಗಲ್ಲದಿದ್ದರೆ ಈ ವಿಪರೀತಾರ್ಥದಿಂದ ನಟ=ಕರಣ ಎಂದೂ ಆಗಬಹುದು, ನಟ=ದ್ರವಿಡ ಎಂದೂ ಆಗಬಹುದು. ದ್ರವಿಡ=ಕರಣ ಎಂದೂ ಆಗಬಹುದು."

"ಇರಲಿ, ಇರಲಿ, ದಕ್ಷಿಣದ ತುರ್ವಸು ಸಂತತಿಯವರನ್ನು ಹೇಳಬೇಕಾದಾಗ, ಮತ್ಸ್ಯಪುರಾಣವು 'ಕರ್ಣ'ರನ್ನು ಜೋಳ-ಪಾಂಡ್ಯರೊಡನೆ ಹೇಳುವುದು. ನಿಮ್ಮ 'ನಟ'ರ ಮಾತೇ ಇಲ್ಲ"

"ಮೇಲಿನ ಮನುಸ್ಮೃತಿವಚನದಂತೆಯೆ ಈ ಮತ್ಸ್ಯವಚನದ ಶೇಷವೂ ಆಗಲೇ ಬೇಕು."

"ಏನು? ಈ ವಚನ ತೆಗೆದುಕೊಟ್ಟವರು ಸಂಶೋಧಕರಾದ ಡಾ. ಕರಮರಕರವರು.... ಗೊತ್ತಿದೆಯೋ ನಿಮಗೆ?"

"ಹೌದು, ಅವರು ನನ್ನ ವಿದ್ಯಾರ್ಥಿಗಳಾಗಿದ್ದರು, ಮಿತ್ರರಾಗಿದ್ದಾರೆ. ಆದರೆ ನನ್ನ ವಿಮರ್ಶೆ, ಕರ್ಣ–ನಟರ ಪ್ರಾಚೀನತೆ ಮತ್ತು ಭೇದವನ್ನು ಕುರಿತು ಇದೆ. ಇದನ್ನು ಸ್ಪಷ್ಟಪಡಿಸುವಾಗ ಡಾ. ಕರಮರಕರವರ ಸದ್ಯದ ಪುರಾಣಸಂಶೋಧನವೂ, ದ್ರಾವಿಡರ ಆಚಾರ-ವಿಚಾರಗಳ ಸಾಂಗೋಪಾಂಗ ಅಭ್ಯಾಸವೂ ಉಪಯೋಗವಾದೀತೆಂದು ನಂಬಿದ್ದೇನೆ. ಇರಲಿ, ಆದು ಮುಂದಿನ ಮಾತು."

"ನೀವು 'ಕಂನ್ನಾಡು=ಕನ್ನಡ' ಇದು ಮೂಲತಃ ದೇಶವಾಚಕವೆಂದಾದರೂ ಒಪ್ಪಿಕೊಳ್ಳುವಿರಾ?"

"ಹೇ! ವೇತಾಳ ಪ್ರಶ್ನೆಯೆ! ಮತ್ತೆ ಸ್ಪಷ್ಟಪಡಿಸುತ್ತೇನೆ: 'ಕನ್ನಡ'ದಲ್ಲಿ ಎರಡು ಜನವಾಚಕ ಪದಗಳು ಇವೆ. ಅವರು ಯಾರೋ ಅದನ್ನು ಸಾಧ್ಯವಿದ್ದಷ್ಟು ಸ್ಪಷ್ಟಪಡಿಸುವೆ. ಈ ವಿಶ್ವಕ್ಷತ್ರಿಯರಿಂದಲೆ ಅವರು ನೆಲಸಿದ ದೇಶವಿಭಾಗಕ್ಕೆ 'ಕನ್ನಡ' ಎಂಬ ಹೆಸರು. ಅಲ್ಲಿ ಬಳಕೆಯಲ್ಲಿರುವ ಭಾಷೆ, ಪ್ರಾಕೃತ, ಅಪಭ್ರಂಶ, ಪೈಶಾಚಿ, ಮ್ಲೇಚ್ಛ ಯಾವುದೇ ಇರಲಿ, ಅದು ಮೂಲದಲ್ಲಿ ಕನ್ನಡ. ಜನರಿಂದಲೆ ಜಾನಪದನಾಮ, ಜನ-ಜಾನಪದಗಳಿಂದಲೆ ಭಾಷಾನಾಮ."

"ಇದೇನು, ನಿಮ್ಮ 'ಕನ್ನಡ' ದ ಮಟ್ಟಿಗೊ?"

"ಛಪ್ಪನ್ನ (೫೬) ದೇಶಗಳ, ಜನ, ಭಾಷೆಗಳ ವಿಷಯದಲ್ಲಿ ವ್ಯಾಕರಣ, ಸಂಗೀತ, ಛಂದಸ್ಸು ಮೊದಲಾದ ಶಾಸ್ತ್ರದವರೂ ನಾಮಕರಣ ವಿಚಾರ ಮಾಡುವಾಗ 'ಜನ-ದೇಶ-ಭಾಷಾ' ತ್ರಿಮೂರ್ತಿಯನ್ನು ಅನುಲಕ್ಷಿಸುವರು. ಇದು ಹೊಸದೂ ಅಲ್ಲ, ಹಳೆಯದೂ ಅಲ್ಲ. ಚಿರಂತನ!"

"ಹಾಗಾದರೆ, ನೀವು ನಟ-ನಡರು ಬೇರೆ ಜನರೆಂದೂ, ಅವರು ಕರ್ಣರನ್ನೊ, ಆಂಧ್ರವರನ್ನೊ ಕೂಡಿ ಅಲ್ಲಲ್ಲಿ 'ಕನ್ನಡ–ಕರ್ನಾಟ-ಕಂನಾಡು' ಜನಪದಗಳನ್ನು ಸ್ಥಾಪಿಸಿದರೆಂದೂ ತಿಳಿದಿರುವಿರಾ?"

"ಹೌದು, ಆ ವಿಷಯವನ್ನೇ ಮುಂದಿನ ಲೇಖನದಲ್ಲಿ ವಿವರಿಸುವೆನು."

"ಹಾಗಾದರೆ, ಈ ಲೇಖನದಲ್ಲಿ ಏನು ಹೇಳಿದಂತಾಯಿತು?"

'ಕಂನ್ನಾಡು–ಕಂನಾಡು' ಪ್ರಯೋಗವು 'ಕನ್ನಡ' ದಷ್ಟು ಪ್ರಾಚೀನವಲ್ಲ, ಶಿಲಪ್ಪಾದಿಕರಮ್ಮನಲ್ಲಿಯು 'ಕನ್ನಡ ಪ್ರಯೋಗವು ಜಬಾಧಿತವಾಗಿ ನಿಂತಿದೆ—ಎಂದು. ಮತ್ತು 'ಕಂನಾಡು' ಇದು ಪ್ರಾಚೀನ ರೂಪ ಎಂಬ ತಿಳಿವಳಿಕೆಯು ಅನೇಕ ಆರಕಳಿ ವಿಚಾರಗಳ ಸರಪಳಿ–ಎಂಬುದನ್ನು ಸ್ಪಷ್ಟಪಡಿಸಿದ್ದಾಯಿತು."

೫೬ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು.
ಬಾಟ್ಲಿಗೆ ೧–೮–೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:—
ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ
ಗಿರಗಾಂವ, ಮುಂಬಯಿ.

ನರಕಾಸುರನ ವಧೆ

(ಒಂದು ಸತ್ಯಚಿತ್ರ)

ಶಂಕರಭಟ್ಟ ಪುರಾಣಿಕ, ಬಿ.ಎ. (ಆನರ್ಸ್) ಬಿ.ಟಿ. ಗೋಕಾಕ

★

ಹಬ್ಬ-ಹುಣ್ಣಿವೆಗಳೆಲ್ಲ ಹಣವಿದ್ದವರಿಗೆ; ಬಡವರು ಬರಿ ದುಡಿತಕ್ಕೆ. ದುಡಿತಕ್ಕೆ ನಸುವೆ ವಿಲಂಬವಾದರೆ,
ದಿನದಿನವೂ ಅವರು ಹೋಳಿಯ ಹಬ್ಬವನ್ನೇ ಮಾಡಬೇಕು.

★

೧

" ಅಪ್ಪಾ, ನನಗೊಂದು ಆಕಾಶಬುಟ್ಟಿ ಬೇಕೋಽ " ಎಂದಿತು ಐದು ವರುಷದ ಮಗು. ತಂದೆಗೆ ಅದನ್ನು ಕೊಂಡುಕೊಡುವ ಸಾಮರ್ಥ್ಯವಿಲ್ಲ. ಆ ದಿನದ ಉತ್ಪನ್ನ ಆಕಾಶಬುಟ್ಟಿಯ ಬೆಲೆಯಷ್ಟೆ. ಅದನ್ನಷ್ಟೂ ವೆಚ್ಚ ಮಾಡಿದರೆ ಹೊಟ್ಟೆಗೇನು? ಆದರೂ ಹಬ್ಬವೆಂದು ಹಂಬಲಿಸುವ ಮಗುವನ್ನು ಸಮಾಧಾನ ಮಾಡುವುದೆಂತು? ಅವನಿಗೊಂದು ಉಪಾಯ ಹೊಳೆಯಿತು:

" ಬೇಡ ಮಗೂ, ಆಕಾಶ ಬುಟ್ಟಿಯನ್ನು ಹಾಕಿದರೆ, ನೊನ್ನೆ ಹೇಳಿದ್ದೆನಲ್ಲಾ, ಆ ನರಕಾಸುರ...! ಅಂವ ಆ ದೀಪದಗುಂಟ ಬಂದು, ನಮ್ಮನ್ನೆಲ್ಲಾ ನುಂಗಿ ಬಿಡ್ತಾನೆ. ನಾಳೆ ಅವನ ವಧೆ. ನಿನಗೆ ಗೊತ್ತಿಲ್ಲವೆ?"

" ಹಾಗಾದರೆ ವಸಂತ ಯಾಕೆ ಕೊಂಡಿದ್ದಾನೆ?" ಎಂದು ಮಗುವು ಮರುಸವಾಲನ್ನಿಕ್ಕಿತು. " ಅವನಿಗದು ಗೊತ್ತಿಲ್ಲ. ಆ ರಾಕ್ಷಸನಿಗೆ ಕೋರೆಹಲ್ಲು, ದಪ್ಪನ್ನ ಕೈಕಾಲುಗಳು....ಆ ಎಂದು ಬಾಯಿತೆಗೆದು ಬಂದಾಂದ್ರೆ...." ಕೂಸಿಗೆ ಗಾಬರಿಯಾಯಿತು: " ಅಪ್ಪಾ, ಹಾಗಾದರೆ ನಾನು ವಸಂತನಿಗೆ ಹೇಳಲೆ?"

" ಹೇಳು ಮಗೂ" ಎಂದು ಏನೋ ಅದ್ಭುತವಾದ ಕತೆಯಿಂದ ಮಗುವನ್ನು ಸುಮ್ಮನಿರಿಸಿದ. ಅವನ ಹೃದಯದಲ್ಲಿ ಮಗುವಿನ ಮುದ್ದುಮಾತುಗಳನ್ನು ಕೇಳಿ ಹೇಳಲಾರದಷ್ಟು ಸಂಕಟ.

೨

" ಏಳು, ಏಳು ಮಗೂ ಹೊತ್ತಾಯಿತು! ವರ್ತಮಾನ ಪತ್ರದ ಗಂಟು ಹಾಗೇ ಬೀಳ್ತವೆ....ನಾ...."

" ಎಷ್ಟು ಬಡಕೋತೀರಿ, ಇಂದೊಂದುದಿನ ಹಬ್ಬ. ಎಲ್ಲೆ ಹೋಗ್ತದ....ನಿಮ್ಮ ವರ್ತಮಾನಪತ್ರ?" ಎಂದಳು ಹೆಂಡತಿ.

" ಹಾಗಲ್ಲ, ಗಾಡೀ ಆರು ಘಂಟೆಗೆ ಬಂದು ಹೋಗ್ತವೆ. ನನ್ನ ದಾರೀ ನೋಡೋದಿಲ್ಲ. ಗಿರಾಕಿಗಳು ಹೋಗಿಬಿಟ್ಟೆರೆ.."

"ಏನು ಹೋಗ್ತವೆಯೋ" ಎನ್ನುತ್ತ ಅವಳು ಮಗುವಿಗೆ ಹೊಸ ಉಡುಪನ್ನು ಹಾಕಿದಳು. ಆಗಲೇ ಐದುವರೆ ಗಂಟೆ. ಅವನು ಗಡಬಡಿಸಿದ.

" ನಾನು ತಡಮಾಡಿದರೆ ಹೊಟ್ಟೆಗೇನು? ರಾಯರು ನನ್ನನ್ನು ಕೆತ್ತಿ ಹಾಕ್ತಾರೆ" ಎಂದು ಕೂಗಿದ.

" ಅವರಿಗೇನು ಹಬ್ಬಾ ಹುಣ್ಣಿವಿ ಇಲ್ಲವೆ? ಈಗೇಕೆ ಬರ್ತಾರೆ ಸ್ಟೇಶನ್ನಿಗೆ?" ಅಷ್ಟರಲ್ಲಿ ಮಗೂ ಬಂದು, "ಅಪ್ಪಾ, ನರಕಾಸುರನ ವಧೆ ಯಾವಾಗ?" ಎಂದಿತು. " ಇದೇ ಈಗ; ಇನ್ನೊಂದು ತಾಸಿನಲ್ಲಿ" ಎಂದ ತಂದೆ.

ಆರು ಹೊಡೆಯಿತು. " ಆಯಿತೇ ಆರತಿ? ಆರು ಹೊಡೆಯಿತು!" ಎಂದು ಕೂಗಿದ. ಅವಳು ಆರತಿ ತಟ್ಟೆ ತೆಗೆದುಕೊಂಡು ಬಂದಳು. ಆರತಿಯ ಕಾರ್ಯವನ್ನು ಮುಗಿಸಿದಳು.

೩

ಒಂದೇ ಸವನೆ ಓಡಿದ. ಸ್ಟೇಶನನ್ನು ತಲ್ಪಿದ. ಗಾಡಿ ಹೋಗಿತ್ತು. ಅಲ್ಲಿ ವರ್ತಮಾನಪತ್ರಗಳ ಗಂಟು ಇದ್ದಿಲ್ಲ. ಅತ್ತಿತ್ತ ನೋಡಿದ. ಯಾರೂ ಕಾಣಿಸಲಿಲ್ಲ. ಅಷ್ಟರಲ್ಲಿ ಪೋರ್ಟರನು, " ಏನು?" ಎಂದು ಕೇಳಿದ. ದಿನದ ಇವನ ವ್ಯವಹಾರ ಅವನಿಗೆ ಗೊತ್ತು. ಅಲ್ಲಿಯೇ ಸ್ಟೇಶನ್ ಮಾಸ್ತರರ ಜೊತೆಯಲ್ಲಿ ಹರಟೆ ಹೊಡೆಯುತ್ತಿದ್ದ ರಾಯರ ಕಡೆಗೆ ಕೈಮಾಡಿದ. ಇವನು ಅವರನ್ನು ನೋಡಿದ. ಅವರು ಇವನನ್ನು ನೋಡಿ, ಹಾಗೆಯೆ ಹರಟೆ ಹೊಡೆಯತೊಡಗಿದರು. ಹತ್ತು ನಿಮಿಷಗಳು ಕಳೆದುವು. ಹಾಗೆಯೆ ನಿಂತುಬಿಟ್ಟ. ರಾಯರು ಅವನ ಕಡೆಗೆ ದೃಷ್ಟಿಯನ್ನು ಚೆಲ್ಲಲಿಲ್ಲ. ತಮ್ಮ ಹರಟೆಯಲ್ಲಿಯೇ ತಲ್ಲೀನರಾದಂತೆ ತೋರಿಸಿದರು.

" ರಾಯರೇ.. " ಎಂದ.

" ಏನೋ?" ಎಂದು ಗಡುಸುದನಿಯಲ್ಲಿ ಕೇಳಿದರು.

" ನನ್ನ ಪಾಲಿನ ಗಂಟು....?"

" ನಿನ್ನ ಪಾಲಿಗೆ ಗಂಟಿಲ್ಲ, ಗಂಟಿಯಿದೆ. ಜೀಕಾದಾಗ ಬಂದರೆ ಎಲ್ಲವೂ ಗಂಟಿಯೇ! " ಎಂದು ಸಿರಿವಂತಿಕೆಯ ದರ್ಪದಿಂದ ಅಪಹಾಸ್ಯ ಮಾಡಿದರು.

" ಇಂದು ಹಬ್ಬ.. "

" ನಾನೇನು ಮಾಡಲಿ? ಹಬ್ಬಾಗಿಬ್ಬಾ ನಾ ಏನೂ ಕೇಳೋದಿಲ್ಲ. ನಿನ್ನ ಹಬ್ಬ ಆಗೋದರೊಳಗೆ, ಗಿರಾಕೀ ಕಳೆದುಕೊಂಡು ಜನರ ಕೈಯಿಂದ ಬೈಸಿಕೊಳ್ಳಬೇಕಾದೀತು! "

" ಇದೊಂದು ತಪ್ಪು ಹೊಟ್ಟೆಯಲ್ಲಿ ಹಾಕಿಕೊಂಡು ನಾಳೆಯಾದರೂ ಕೊಡಿರಿ! "

" ಅದೆಲ್ಲಾ ಸುಳ್ಳು. ಇನ್ನೊಬ್ಬನಿಗೆ ಕೊಟ್ಟಿದ್ದೀನೆ. ನೀನು ಮತ್ತೆಲ್ಲಿಯಾದರೂ ನೌಕರಿ ಹುಡುಕು! " ಎಂದು ಅಂದವರೇ ಬಾಯಲ್ಲಿ ಸಿಗರೇಟನ್ನಿಟ್ಟುಕೊಂಡು ಕೂಗಿ ಬಿಡುತ್ತ ಹೊರಟು ಹೋಗಿಬಿಟ್ಟರು. ಇವನೂ ಹೊರಟ.

ದಾರಿಯುದ್ದಕ್ಕೂ ವಿಚಾರಗಳ ತಾಕಲಾಟ: 'ಒಂದು ಸ್ವಲ್ಪ ತಪ್ಪಾದರೆ ಈ ಶಿಕ್ಷೆಯೇ? ನಾಲ್ಕು ವರುಷಗಳ ನನ್ನ ಪ್ರಾಮಾಣಿಕ ದುಡಿತಕ್ಕೆ ಬೆಲೆಯೆ ಇಲ್ಲವೇ? ದಯೆ ಬೇಡವೆ? ನನಗೆ ಗೊತ್ತು ಅವನು ರಾಕ್ಷಸನೆಂದು! ಮಗುವಿನ ಮುಖ, ಹೆಂಡತಿಯ ಸಂಭ್ರಮಕ್ಕಾಗಿ ನನ್ನ ನೌಕರಿಗೆ ಚಕ್ರ. ಅವರದೇನು ತಪ್ಪು? ನನ್ನ ಬದುಕಿನ ... ಮುಂದೇನು?' ಎಂದು ಏನೇನೋ ಯೋಚಿಸುತ್ತ ಹೊರಟಿದ್ದ. ಪಾಕಿಟೋನವರೊಬ್ಬರು 'ಏ ನನ್ನ ವರ್ತಮಾನಪತ್ರ?' ಎಂದು ಕೂಗಿದರು. ಇವನು ಅವರನ್ನು ನೋಡಿದ; ಮುಂದೆ ಹೊರಟ.

"ಏನು? ಎಷ್ಟು ಕೊಬ್ಬು? ಮಾಲೀನ ಮುಂದೆ ಹೇಳ್ತೀನಿ! " ಎಂದರು.

ಇವನು ಅಗಾಧವಾದ ಯೋಚನೆಯಲ್ಲಿ ಅವರನ್ನು ತಿರುಗಿ ಕೂಡ ನೋಡಲಿಲ್ಲ. ಹಾಗೆಯೆ ಹೊರಟ. ನಾಲು ನಿಂತು. ಓದರುವ ಕೂಟಕ್ಕೆ ಬಂದ. ಆ ವಿಚಾರದಲ್ಲಿಯೇ 'ಟಾಯಿಮ್ಸ್, ಸಂಯುಕ್ತಕರ್ನಾಟಕ' ಎಂದು ಕೂಗಿದ. ಎಚ್ಚರವಾಯಿತು.

ಕೈಯಲ್ಲಿ ಏನೂ ಇಲ್ಲ ಎಂಬುದರ ಅರಿವಾಯಿತು. ಕಳವಳಪಟ್ಟ. ಹಾಗೆಯೆ ನಾಗಿದ. ನಡುಪೇಟೆಗೆ ಬಂದ. 'ಟಾಯಿಮ್ಸ್, ಸಂಯುಕ್ತಕರ್ನಾಟಕ' ಎಂಬುವ ದನಿ ಕೇಳಬಂದಿತು. ಕಣ್ಣೆತ್ತಿ ನೋಡಿದ. ಅವನಿಗೆ ಇಲ್ಲಿಯ ನೆನಪು.... ಅಗಾಧವಾದ ನೋವು; 'ಮಗುವಿಗೆ ಹಬ್ಬಕ್ಕಾಗಿ ಏನು ಕೊಡಲಿ?' ಎಂಬ ಚಿಂತೆ. ಒಂದು ಸಿವಿಷ ಕೂಡ ಅಲ್ಲಿ ಸಿಲ್ಲಲಿಲ್ಲ. ಮುಂದೆ ಹೊರಡುವಷ್ಟರಲ್ಲಿ 'ಇಲ್ಲಿ ಸಿಲ್ಲೋ, ನನ್ನ ಬೆಲ್ಲಿದ ಬಾಕಿ ಸಿಕಾಲ ಮಾಡು!' ಎಂದ ವ್ಯಾಪಾರಿ. 'ಹೂಂ' ಎಂದು ಮುಂದೆ ಹೊರಟ. ಎದೆಯಲ್ಲಿ ಮತ್ತೆ ಅಳುಕು. ಮನೆಗೆ ಬಂದ. ಪೊಸರಿನವಳು ಒಂದೇ ಸವನೆ ಕೂಗಾಡ್ತಾ ಇದ್ದಳು. ಒಳಗೆ ಹೋದ. ಮಗು ಬಂದು 'ಅಪ್ಪಾ ನರಕಾಸುರನ ಪರ್ವ ಆಯಿತೆ?' ಎಂದು ಕೇಳಿತು.

'ಆಯಿತಲ್ಲ ಮಗೂ!' ಎಂದು ನೆಲಕ್ಕೆ ಕುಸ್ಸಳಿಸಿದ.



ಯೋಗಾಭ್ಯಾಸಕ್ಕೆ ಯೋಗ್ಯ ಅಧಿಕಾರಿಗಳಾರು

ಶ್ರೀಸುಕ್ಷೇತ್ರ ಬಂಥನಾಳ ಶಿವಯೋಗಿಗಳು

★

ಯೋಗಾಭ್ಯಾಸವು ಲೌಕಿಕರಿಗೇಕೆ?— ಎಂದು ಎಲ್ಲರೂ ಇಂದು ಕೇಳುತ್ತಾರೆ; ಆದರೆ ದೀರ್ಘಾಯುಷ್ಯವನ್ನೂ ಮನಶ್ಶಾಂತಿಯನ್ನೂ ಬಯಸುವ ಪ್ರತಿಯೊಬ್ಬ ಲೌಕಿಕನಿಗೂ ಯೋಗಾಭ್ಯಾಸ ಅವಶ್ಯವಾಗಿರುವುದು.

★

'ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ' ಎಂಬ ಭಗವದ್ಗೀತೋಕ್ತಿಯಂತೆ, ಹಿಂದೂ ಜನರ ಪ್ರಮಾಣಗ್ರಂಥಗಳಾದ ಪೂರ್ವಮೀಮಾಂಸಾ, ಉತ್ತರಮೀಮಾಂಸಾ, ಸಾಂಖ್ಯ, ನ್ಯಾಯ, ವೈಶೇಷಿಕ, ಯೋಗ ಈ ಷಡ್‌ದರ್ಶನಗಳಲ್ಲಿ, ಪಾತಂಜಲಿ ಋಷಿಕೃತವಾದ ಯೋಗದರ್ಶನವು ಅತ್ಯಂತ ಮಹತ್ತ್ವದುದೆಂಬ ಸಂಗತಿಯು ಈಗ ಬಹುಜನರ ಲಕ್ಷ್ಯವನ್ನು ತನ್ನತ್ತ ಎಳೆಯತೊಡಗಿದೆ. ಉಳಿದ ಶಾಸ್ತ್ರಗಳು ಕೇವಲ ಬುದ್ಧಿ, ವಿಕಾರ, ವಿವಾದ, ವಿಚಾರಗಳಲ್ಲಿಯೆ ಪರ್ಯವಸಾನವಾಗುತ್ತಿದ್ದು, ಯೋಗಶಾಸ್ತ್ರವು ಮಾತ್ರ ದೇಹ, ಮನ, ಬುದ್ಧಿ, ಭಾವನಾದಿಗಳೆಲ್ಲವುಗಳ ಬೆಳೆವಣಿಗೆಗಳಿಗೆ ಪ್ರತ್ಯಕ್ಷ ಕಾರಣವಾಗಿದ್ದುದರಿಂದಲೂ ಭೌತಿಕ ಶಾಸ್ತ್ರದಂತೆ ಇದು ಪ್ರತ್ಯಕ್ಷಪ್ರಮಾಣಕ್ಕೆ ಗಮ್ಯವಾದುದರಿಂದಲೂ, ಸದ್ಯದ ಹಿಂದೂ ದೇಶದ ಪರಿಸ್ಥಿತಿಗೆ ಯೋಗಶಾಸ್ತ್ರದ ಅಭ್ಯಾಸವು ಬಹು ಅಗತ್ಯವಾದುದೆಂದು, ಮೈಸೂರಿನ ವಿದ್ಯಾಮಂತ್ರಿಗಳಾಗಿದ್ದ ರಾವಬಹದ್ದೂರ್ ಡಾ. ಟಿ. ಸಿ. ಎಂ. ರಾಯನ್ನರವರು, ಮೈಸೂರಿನ ಯೋಗಶಾಲೆಯ ಹದಿನೈದನೆಯ ವಾರ್ಷಿಕೋತ್ಸವದ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿರುವುದು ವಿಚಾರಪೂರಿತ ವಿಷಯವಾಗಿದೆ. ಹೀಗೆ ಜನೋಪಯುಕ್ತವಾದ ಯೋಗಾಭ್ಯಾಸವು ಜನಾನುಷ್ಠಾನಕ್ಕೆ ಬಾರದಿರಲು ಇರುವ ಅನೇಕ ಕಾರಣಗಳಲ್ಲಿ 'ಯೋಗಸಾಧನೆಯನ್ನು ಮಾಡತಕ್ಕವರು ಸಂಸಾರಬಲ್ಲರಬಾರದು; ಹೆಂಡಿರು-ಮಕ್ಕಳು ಮನೆ-ಮಾರುಗಳನ್ನು ತೊರೆದು ಸಂನ್ಯಾಸಿಯಾಗಿರಬೇಕು ಅಥವಾ ಬಾಲಬ್ರಹ್ಮಚಾರಿಗಳಾಗಿರಬೇಕು; ಅಂಥವರಿಗಾಗಿಯೇ ಯೋಗವಿದ್ಯೆಯು ಸಾಧ್ಯವು, ಗೃಹಸ್ಥರಿಗೆ ಎಂದಿಗೂ ಸಾಧ್ಯವಿಲ್ಲ!' ಎಂಬ ವಿಚಾರವು ಬಹುಜನರಲ್ಲಿ ಪ್ರಸಾರವಾಗಿರುವುದೂ ಒಂದು ಮುಖ್ಯ ಕಾರಣವಾಗಿದೆ. ಈ ವಿಚಾರವು, ಯೋಗಗ್ರಂಥಗಳನ್ನು ತೆರೆದು ನೋಡುವ ಅಧಿಕಾರವೂ ಪ್ರಪಂಚದಲ್ಲಿರುವವರಿಗೆ ಇಲ್ಲವೆನ್ನುವಷ್ಟು ಜನಸಾಮಾನ್ಯರಲ್ಲಿ ದೃಢವಾಗಿ ಬೇರುಬಿಟ್ಟು ಹೋಗಿದೆ. ಆದರೆ ಪ್ರಾಚೀನ ಯೋಗಗ್ರಂಥಗಳನ್ನು ಪಕ್ಷಪಾತವಿಲ್ಲದೆ ಸೂಕ್ಷ್ಮದೃಷ್ಟಿಯಿಂದ ಅವಲೋಕನ ಮಾಡಿದರೆ, ಯೋಗಾಭ್ಯಾಸಕ್ಕೆ ಸಂನ್ಯಾಸಿಗಿಂತ ಪ್ರಪಂಚದಲ್ಲಿರುವವರೇ ಅಧಿಕಾರಿಗಳಾಗಲು ಹೆಚ್ಚು ಅನುಕೂಲವೆಂಬುದು, ನಿಃಸಂದೇಹವಾಗಿ ತಿಳಿದುಬರುವುದು.

ಆದಿಯೋಗಿಯಾದ ಭಗವಾನ್ ಶಂಕರನು ಸತೀಸಹಿತನಾಗಿದ್ದಾನೆ. ಯೋಗಸಿದ್ಧನಾದ ನಾರಾಯಣನೂ ಲಕ್ಷ್ಮೀಸಹಿತನಾಗಿದ್ದಾನೆ. ಸದಾಪದ್ಮಾಸನನಾದ ಬ್ರಹ್ಮನೂ ಸರಸ್ವತೀಸಹಿತನಾಗಿದ್ದಾನೆ. ರಾಮ-ರಾವಣಾದಿಗಳೂ ಸತೀಸಹಿತರಾಗಿದ್ದರೂ ಯೋಗಿಗಳಾಗಿದ್ದರೆಂಬುದು ಅವರ ಚರಿತ್ರೆಯಿಂದ ಕಂಡು ಬರುವುದು. 'ಯತ್ರಯೋಗೇಶ್ವರಃ ಕೃಷ್ಣಃ' ಎಂದು ಹೇಳಿಸಿಕೊಳ್ಳುವ ಕೃಷ್ಣನೂ, ಒಬ್ಬರಲ್ಲದೆ ಅನೇಕ ಸ್ತ್ರೀಯರಿಂದ ಕೂಡಿಕೊಂಡಿದ್ದನೆಂದು ಭಾಗವತವು ಸಾರಿಹೇಳುತ್ತದೆ. ಸ್ತ್ರೀಯರು ಯೋಗಕ್ಕೆ ವಿಘ್ನಕಾರಿಣಿಯರಾಗಿದ್ದರೆ, ಯೋಗಿಸಮ್ರಾಟನಾದ ಮಹಾದೇವನು— ದಾಕ್ಷಾಯಣಿಯು ದಕ್ಷನ ಸಂಬಂಧವಾದ ದೇಹವನ್ನು ದಕ್ಷನ ಯಜ್ಞದಲ್ಲಿ ಬಿಟ್ಟಬಳಿಕ— ಪುನಃ ಪಾರ್ವತಿಯನ್ನು ಲಗ್ನವಾಗುತ್ತಿರಲಿಲ್ಲ. ವಸಿಷ್ಠ ಯಾಜ್ಞವಲ್ಕ್ಯ, ಅತ್ರಿ, ಗೌತಮ, ವ್ಯಾಸಾದಿ ಮುನಿಗಳೂ ಗೃಹಸ್ಥಾಶ್ರಮಿಗಳಾಗಿಯೂ ಯೋಗಿಗಳಾಗಿದ್ದರೆಂಬುದು ಅವರೆಲ್ಲರ ಚರಿತ್ರಗಳಿಂದ ತಿಳಿದುಬರುತ್ತದೆ. ಬಸವಾದಿ ಪ್ರಮಥರು ಕೂಡ ಗೃಹಸ್ಥಾಶ್ರಮಿಗಳಿದ್ದರು. ಅವರೂ ಯೋಗಾಭ್ಯಾಸ ಮಾಡಿದವರಾಗಿದ್ದರೆಂಬುದು ಅವರ ವಚನಗಳ ಮೇಲಿಂದ ಕಂಡುಬರುತ್ತದೆ. ಎಷ್ಟೋ ಸ್ತ್ರೀಯರು ಕೂಡ ಯೋಗಿನಿಗಳಾಗಿದ್ದರೆಂಬುದು ಗಾರ್ಗಿ, ಮೈತ್ರಿ, ಅಕ್ಕಮಹಾದೇವಿಯವರ ಜೀವನೇತಿಹಾಸದಿಂದ ಕಾಣಬಹುದಾಗಿದೆ. ಅಧುನಿಕ ಯೋಗಿಗಳಲ್ಲಿ ಅಗ್ರಗಣ್ಯರಾದ ಶ್ರೀರಾಮಕೃಷ್ಣ ಪರಮಹಂಸರಿಗೆ ನಿಜವಾದ ಯೋಗಾನುಭವವಾದುದು ಒಬ್ಬ ಯೋಗಿನಿಯಿಂದಲೇ ಎಂಬುದು ಅವರ ಗ್ರಂಥಗಳಲ್ಲಿದೆ. ಹೀಗೆ ಯೋಗಾನುಭವವು ಸ್ತ್ರೀ, ಪುರುಷ, ಪ್ರಾಪಂಚಿಕ ವ್ಯವಹಾರಮಾರ್ಗಿಗಳೆಲ್ಲರಿಗೂ ಸಾಧ್ಯವಾಗಲು ಅನುಕೂಲವಿರು

ವಾಗ, ಅದು ಕೇವಲ ಸಾಧು-ಸಂನ್ಯಾಸಿ-ಬಾಲಬ್ರಹ್ಮಚಾರಿಗಳಿಗೇ ಸಾಧ್ಯವೆಂದು ಬಹುಜನರ ಅಭಿಪ್ರಾಯವಾಗಿರುವುದು ಶೋಚನೀಯವು.

ಸಂನ್ಯಾಸಿಗಿಂತ ಸಂಸಾರಿಗಳಿದ್ದವರಿಗಾಗಿಯೇ ಯೋಗಾಭ್ಯಾಸವು ಹೆಚ್ಚು ಅನುಕೂಲವೆಂದು ಹಿಂದೆ ಹೇಳಿದೆಯಲ್ಲವೆ? ಅದು ಹೇಗೆಂಬುದನ್ನು ಈಗ ನೋಡುವ:

ಯೋಗಾಭ್ಯಾಸವನ್ನು ಮಾಡುವುದರಲ್ಲಿ ಎಲ್ಲದಕ್ಕಿಂತ ಮುಖ್ಯವಾದ ಸಂಗತಿ ಯಾವುದೆಂದರೆ, ಅಭ್ಯಾಸವು ಪ್ರತಿನಿತ್ಯ ವೇಳೆಗೆ ಸರಿಯಾಗಿ ನಡೆಯುತ್ತಿರಬೇಕು. ಯೋಗ್ಯಸಮಯಕ್ಕನುಸರಿಸಿ ದಿವಸದ ಇಪ್ಪತ್ತುನಾಲ್ಕು ತಾಸುಗಳಲ್ಲಿ—ಒಂದು ಸರಿಗೆ ಅತಿ ಸ್ವಲ್ಪ ವೇಳೆಯೆಂದರೆ— ಎರಡು ತಾಸುಗಳಾದರೂ ಸಾಧನೆಯು ಸಾಗಬೇಕು. ಪ್ರಾತಃಕಾಲದ ನಾಲ್ಕು ಅಥವಾ ಐದು ಗಂಟೆಯಿಂದ ಎರಡು ತಾಸು, ಸಾಯಂಕಾಲ ಆರು ಗಂಟೆಯಿಂದ ಎರಡು ತಾಸು—ಇದು ಸಾಧನೆಗೆ ಸರ್ವೋತ್ತಮ ವೇಳೆಯೆಂದು ಎಲ್ಲ ಯೋಗಿಗಳ ಅಭಿಪ್ರಾಯವಿರುತ್ತದೆ. ಒಂದುವೇಳೆ ಸಾಧಕನು ತನ್ನ ಅನುಕೂಲತೆಗನುಸರಿಸಿ ಬೇರೆ ಕಾಲವನ್ನು ಗೊತ್ತುಪಡಿಸಿಕೊಂಡರೂ ಯಾವ ಹಾನಿಯೂ ಇಲ್ಲ. ಅಂತೂ ಗೊತ್ತುಮಾಡಿದ ವೇಳೆಗೆ ಕಿಂಚಿತ್ ಕೂಡ ವ್ಯತ್ಯಾಸವಿಲ್ಲದೆ ಅಭ್ಯಾಸವು ಸಾಗಬೇಕು. ಸಮಯಕ್ಕನುಸರಿಸಿ ನಿದ್ರೆ-ಜಾಗರಣೆಗಳಾಗಬೇಕು, ಜಲ-ಮಲಾದಿಗಳಾಗಬೇಕು. ಯೋಗಾಭ್ಯಾಸಕ್ಕನುಕೂಲವಾಗಿರುವ ಆಹಾರ ಹಾಗೂ ವಿಹಾರಗಳು ಆಗಬೇಕು. ಯೋಗಾಭ್ಯಾಸವು ಏಕಾಂತವಾದ ಪವಿತ್ರವಾದ ಸ್ವಚ್ಛ ಸುಗಂಧಮಯವಾದ ಕ್ರಿಮಿ-ಕೀಟಕಾದಿಗಳಿಲ್ಲದ ಸ್ವತಂತ್ರವಾದ ಸ್ಥಳದಲ್ಲಿ ಮಾಡಲ್ಪಡಬೇಕಾಗುವುದು. ಅದಿಲ್ಲದೆ ಯೋಗವಿದ್ಯೆಯು ಸಾಧಿಸುವುದಿಲ್ಲ. ಆದರೆ ಇಷ್ಟೆಲ್ಲ ಅನುಕೂಲತೆಗಳು ಮನೆಮಾರು ಬಿಟ್ಟು ಅತ್ತಿತ್ತ ತಿರುಗಾವಲಂಬಿಯಾಗಿ ತಿರುಗುತ್ತಿರುವ ಸಾಧು-ಸಂನ್ಯಾಸಿಗಳಿಗೆ ದೊರೆಯುವುದು ಹೇಗೆ ಸಾಧ್ಯವು? ಹಚ್ಚಿಗಿದ್ದಲ್ಲಿ ಮೇದು ಹಿಚ್ಚಿಗಿದ್ದಲ್ಲಿ ಮಲಗುವ ಸ್ವೇಚ್ಛಾಪಶುವಿನ ವೃತ್ತಿಯನ್ನಿಟ್ಟುಕೊಂಡು, ಬಿಕ್ಕೆ ಬೇಡುತ್ತ ತಿರುಗುತ್ತಿರುವವರಿಗೆ ಸಮಯಕ್ಕನುಸರಿಸಿ ಊಟವಿಲ್ಲ; ಒಂದು ವೇಳೆ ಊಟ ಸಿಕ್ಕರೂ ಯೋಗಾಭ್ಯಾಸಕ್ಕನುಗುಣವಾದ ಊಟವಿರುವುದಿಲ್ಲ. ಊಟ ವೇಳೆಗನುಸರಿಸಿ ಆಗದಿದ್ದರೆ ನಿದ್ರೆಯೂ ಸಕಾಲಕ್ಕಾಗುವುದಿಲ್ಲ. ಆದ್ದರಿಂದಾಗಿ ಯೋಗಾಭ್ಯಾಸದ ಪ್ರಾರಂಭದಲ್ಲಿಯೆ ಈ ರೀತಿಯ ತೊಡಕುಗಳುಂಟಾದ ಬಳಿಕ, ಯೋಗಸಾಧನೆಯು ಮುಂದುವರೆಯಲು ಸಾಧ್ಯವಿಲ್ಲ. ಸಾಧನೆಯೆ ಸಾಗಲು ಶಕ್ಯವಿಲ್ಲದ್ದಾಗ, ಸಾಧ್ಯ ಸಿದ್ಧಿಸುವುದಂತೂ ಅತ್ಯಂತ ಅಸಂಭವನೀಯವು.

ಇದೇ ವಿಷಯವನ್ನು ಭಗವದ್ಗೀತೆಯಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಿರುತ್ತದೆ: "ನಾತ್ಯಶ್ನತಸ್ತು ಯೋಗೋಸ್ತಿ ನ ಚೈಕಾಂತಮನಶ್ನತಃ। ನ ಚಾತಿ ಸ್ವಪ್ನಶೀಲಸ್ಯ ಜಾಗ್ರತೋ ನೈವ ಚಾರ್ಜುನ ॥೧೬॥ ಯುಕ್ತಾಹಾರ ವಿಹಾರಸ್ಯ ಯುಕ್ತ ಚೇಷ್ಟಸ್ಯ ಕರ್ಮಸು। ಯುಕ್ತ ಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥೧೭॥ ಅಧ್ಯಾಯ (೬) ಎಂದರೆ: ಅತಿಯಾಗಿ ಊಟ ಮಾಡುವವನಿಗೂ ಸ್ವಲ್ಪವು ಕೂಡ ಊಟಮಾಡದೆ ಇರುವವನಿಗೂ ಅತಿ ನಿದ್ರೆ ಮಾಡುವವನಿಗೂ ಸ್ವಲ್ಪವು ಕೂಡ ನಿದ್ರೆಮಾಡದವನಿಗೂ ಯೋಗವಿದ್ಯೆಯು ಸಾಧಿಸುವುದಿಲ್ಲ. ಯುಕ್ತವಾದ ಆಹಾರ ಯುಕ್ತವಾದ ವಿಹಾರ, ಯುಕ್ತವಾದ ನಿದ್ರೆ ಯುಕ್ತವಾದ ಜಾಗರಣೆ ಮಾಡುವವನಿಗಾಗಿಯೆ ಸರ್ವ ದುಃಖವಿನಾಶಕವಾದ ಯೋಗವು ಸಿದ್ಧಿಸುವುದು. ಹೀಗೆಯೇ ಅನೇಕ ಪ್ರಾಚೀನ ಯೋಗಗ್ರಂಥಗಳು ಹೇಳಿರುವುವಲ್ಲದೆ, ಹಿಂದಿನ ಇಂದಿನ ಮಹಾನುಭಾವಿಗಳಾದ ಎಲ್ಲ ಯೋಗಿಗಳೂ ಯೋಗಾಭ್ಯಾಸದ ಕಾಲದಲ್ಲಿ ಸಾತ್ತ್ವಿಕ ಆಹಾರವೇ ಇರಬೇಕಾದುದವಶ್ಯವೆಂದು ಹೇಳಿರುತ್ತಾರೆ. ಹಟಯೋಗದಲ್ಲಿ "ಅಭ್ಯಾಸಕಾಲೇ ಪ್ರಥಮಂ ಕುರ್ಯಾತ್ ಕ್ಷೀರಾಜ್ಯ ಭೋಜನಂ" ಎಂದರೆ ಅಭ್ಯಾಸದ ಆರಂಭದಲ್ಲಿ ಕೆಲಕೆಲವು ದಿವಸಗಳ ವರೆಗೆ ಕೇವಲ ಹಾಲು-ತುಪ್ಪಗಳ ಮೇಲೆಯೆ ಇರಬೇಕಾಗುವುದು. ಯೋಗಾಭ್ಯಾಸವನ್ನು ಪ್ರಾರಂಭಮಾಡಿದ ಹತ್ತು ದಿವಸಗಳನಂತರ ಯೋಗಿಯ ರುಚಿಯಲ್ಲಿ ಬದಲಾವಣೆಯಾಗುವುದು. ಯೋಗಿಯು ಕಹಿ, ಖಾರ, ಅತಿ ಸಿಹಿ, ಹುಳಿ ಮೊದಲಾದುವುಗಳನ್ನು ಬಿಡಬೇಕಾಗುವುದಲ್ಲದೆ, ಚಹಾ-ತಂಬಾಕಾದಿ ವ್ಯಸನಗಳನ್ನೂ ಬಿಡಬೇಕಾಗುವುದು. ಸಾಮಾನ್ಯ ಮನುಷ್ಯನು ಊಟದಲ್ಲಿ ಉಪಯೋಗಿಸುವ ಉಪ್ಪಿಗಿಂತ ಅತಿ ಸ್ವಲ್ಪ ಅಥವಾ ಪೂರ್ಣ ಲವಣವರ್ಜಿತವಾಗಿಯೆ ಆಹಾರ ತಕ್ಕೊಳ್ಳಬೇಕಾಗುವುದು. ಹೀಗೆ ಸಾಮಾನ್ಯ ಮನುಷ್ಯನಿಗಾಗಿ ನಿತ್ಯದಲ್ಲಿ ಉಪಯೋಗಿಸುವ ಆಹಾರವು ಯೋಗಾಭ್ಯಾಸಿಗೆ ಯಾವಕಾಲದಲ್ಲಿಯೂ ಅನುಕೂಲವಾಗಲಾರದು. ಎಂದ ಬಳಿಕ ಗೃಹಹೀನ, ಧನಹೀನ, ಜನಸಹಾಯಹೀನರಾದ ಸಂನ್ಯಾಸಿ, ಸಾಧು, ಭೈರಾಗಿ, ಗೋಸಾಯಿ ಮೊದಲಾದ ಭಿಕ್ಷೆ ಬೇಡಿ ಹೊಟ್ಟೆ ತುಂಬಿಕೊಳ್ಳುವವರಿಗೆ ದೊರೆಯುವ ಆಹಾರವು, ನಿಜವಾಗಿ ಯೋಗಾಭ್ಯಾಸಕ್ಕೆ ಅನುಕೂಲವಲ್ಲದ ಆಹಾರವಾಗಿರುವುದರಿಂದ, ಅವರಿಗೆ ಯೋಗ ಸಿದ್ಧಿಸುವುದು ಅತ್ಯಂತ ಕಠಿಣವಾಗುವುದು. ತಾನು ನ್ಯಾಯವಾದ ರೀತಿಯಲ್ಲಿ ದುಡಿದ ಸಂಪಾದನೆಯಿಂದ ಮಾಡಿದ ಆಹಾರದಿಂದ ಯೋಗವು ತೀವ್ರ ಸಿದ್ಧಿಸುವುದೆಂದು ಕೆಲವರು ಹೇಳುತ್ತಾರೆ. ಆದರೆ ಏನೂ ಪ್ರಯತ್ನಪಡದೆ ಬಿಕ್ಕೆ ಬೇಡಿ ತಂದು ತಿಂದು ತಿರುಗುವ ಆಲಸ್ಯಗಾರರಿಗೆ ಯೋಗವೆಂತು ಸಿದ್ಧಿಸುವುದು?

ಯೋಗಾಭ್ಯಾಸಕ್ಕಾಗಿ ಸ್ವತಂತ್ರವಾದ ಒಂದು ಸ್ಥಾನವಿರಬೇಕೆಂದು ಹಿಂದೆ ಹೇಳಿದೆಯಷ್ಟೇ; ಅದೇ ವಿಷಯವನ್ನೇ ಕುರಿತು ಸ್ವಾಮಿ ವಿವೇಕಾನಂದರು ಹೇಳಿರುವುದೇನೆಂದರೆ:

'ಯೋಗಾಭ್ಯಾಸಕ್ಕಾಗಿ ಏಕಾಂತವಾದ ಶುದ್ಧ ಜಾಗೆಯಾಡುವ ಕೋಣೆ ಒಂದು ದೊರೆಯುತ್ತಿದ್ದರೆ ಬಹಳ ಅನುಕೂಲವಾಗುವುದು. ಆ ಕೋಣೆಯಲ್ಲಿ ಯಾರೂ ಮಲಗಬಾರದು. ಅದನ್ನು ಪವಿತ್ರವಾಗಿಟ್ಟಿರಬೇಕು. ಸ್ನಾನ ಮಾಡದೆ ಯಾರೂ ಆ ಕೋಣೆಯಲ್ಲಿ ಪ್ರವೇಶಿಸಬಾರದು. ಅಲ್ಲಿ ಯಾವಾಗಲೂ ಸುವಾಸನೆಯುಳ್ಳ ಪುಷ್ಪಗಳನ್ನಿಟ್ಟಿರಬೇಕು. ಮತ್ತು ಮಹಾನುಭಾವಿಗಳಾದ ಯೋಗಿಗಳ—ಮಹಾತ್ಮರ ಚಿತ್ರಪಟಗಳನ್ನು ಹಚ್ಚಿರಬೇಕು. ಮುಂಜಾನೆ ಸಂಜೆಗೆ ಸುಗಂಧಮಯವಾದ ಧೂಪವನ್ನು ಸುಡುತ್ತಿರಬೇಕು. ಆ ಕೋಣೆಯಲ್ಲಿದ್ದಾಗ ಸಿಟ್ಟು ಸಿಡುಕು, ಹೊಟ್ಟೇಕಿಚ್ಚು, ವಿಷಯವಾಸನೆ ಮೊದಲಾದ ಹೊಲಸು ವಿಷಯಗಳನ್ನೆಂದೂ ಮನದಲ್ಲಿ ತರಬಾರದು. ತನ್ನಂತೆಯೆ ಆಚಾರ-ವಿಚಾರವುಳ್ಳವರನ್ನು ಮಾತ್ರ ಅಲ್ಲಿ ಹೋಗಗೊಡುತ್ತಿರಬೇಕು. ಹೀಗೆ ಮಾಡುವುದರಿಂದ ಕೆಲವು ದಿವಸಗಳಲ್ಲಿ ಆ ಕೋಣೆಯಲ್ಲಿಯ ವಾತಾವರಣವೇ ಮಂಗಲಮಯ ಹಾಗೂ ಪವಿತ್ರಮಯವಾಗುವುದು. ಒಬ್ಬೊಮ್ಮೆ ಸಾಧಕನಿಗೆ ಉದಾಸೀನತೆ, ತಾಮಸ, ತಾಪ, ಮನಸ್ಸಿನ ಚಂಚಲತೆಯುಂಟಾದ ಕಾಲಕ್ಕೆ, ಸಹಜವಾಗಿ ಆ ಕೋಣೆಯಲ್ಲಿ ಹೋಗೋಣದರಿಂದಲೇ ಮನಸ್ಸಿಗೆ ನಿಜವಾದ ಶಾಂತಿ ಹಾಗು ಪ್ರಸನ್ನತೆಗಳು ಲಭಿಸುವುವು. ದೇವಾಲಯಗಳೂ ಮಠಗಳೂ ಆಶ್ರಮಗಳೂ ಉಂಟಾದ ಉದ್ದೇಶವಾದರೂ ಇದೇ ಆಗಿರುತ್ತದೆ.'

ಯೋಗಸಾಧನಕ್ಕಾಗಿ ಮೇಲೆ ಕಾಣಿಸಿದ ಎಲ್ಲ ಸಲಕರಣೆಗಳು ಗೃಹಸ್ಥನಿಗನುಕೂಲವಿರುವಷ್ಟು ಸಂನ್ಯಾಸಿ-ಸಾಧುಗಳಿಗಿರುವುದಿಲ್ಲ. ಆದುದರಿಂದ ಯೋಗಸಾಧನೆಗೆ ಸಂನ್ಯಾಸಿಗಳಿಗಿಂತ—ಮನಸ್ಸು ಮಾಡಿದರೆ—ಗೃಹಸ್ಥನೇ ಯೋಗ್ಯ ಅಧಿಕಾರಿಯೆಂದು ಸಿದ್ಧವಾಗುವುದಿಲ್ಲವೇ?

'ಹಾಗಾದರೆ ಯೋಗಿಯಾಗಲು ಬಾಲಬ್ರಹ್ಮಚಾರಿ—ಸಾಧು—ಸಂನ್ಯಾಸಿಗಳಿಗೆ ಶಕ್ಯವಿಲ್ಲವೆಂದೇ ತಾವು ಹೇಳಿದಂತಾಗಲಿಲ್ಲವೇ?' ಎಂದು ಕೇಳಿದರೆ, ಹಾಗೇನು ಇಲ್ಲ ಅವರೂ ಕೂಡ ಮಹಾ ಮಹಾ ಯೋಗಿಗಳಾಗಿರುವರೆಂಬುದು ಎಲ್ಲರೂ ತಿಳಿದುಕೊಂಡ ಮಾತಾಗಿದೆ; ಆದರೆ ಇಷ್ಟು ಮಾತ್ರ ನಿಜ: ಅವರು ಯೋಗಿಗಳಾಗಬೇಕಾದರೆ ಗೃಹಸ್ಥಾಶ್ರಮಿಗಳಾದ ರಾಜ—ಮಹಾರಾಜ—ಶ್ರೀಮಂತ ಜನರ ಸಹಾಯದಿಂದಲೇ ಆಗಿರುವರು. ಯೋಗಾಭ್ಯಾಸಕ್ಕೆ ಬೇಕಾಗಿರುವ ಎಲ್ಲ ಸಾಹಿತ್ಯಗಳನ್ನೂ ಗೃಹಸ್ಥರೇ ಪೂಜ್ಯಬುದ್ಧಿಯಿಂದ ಅವರಿಗೆ ಒದಗಿಸಿ ಕೊಟ್ಟಿದ್ದರಿಂದಲೆ ಅವರು ಯೋಗಿಗಳಾಗಿರುವರು.

ಮಹಾಭಾರತದಲ್ಲಿಯ ಒಂದು ಸಂಗತಿ: ಒಮ್ಮೆ ಧರ್ಮರಾಜನೂ ಶ್ರೀಕೃಷ್ಣನೂ ತಿರುಗಾಡುತ್ತ ನದಿಯ ಕಡೆಗೆ ಹೋದಾಗ, ನದಿಯಲ್ಲಿ ಸ್ನಾನ ಮಾಡಿದ ಯೋಗಸಾಧಕರು, ಯೋಗಶಕ್ತಿಯಿಂದ ತಮ್ಮ ಹಸಿಯ ಬಟ್ಟೆಗಳನ್ನು ಮೇಲಕ್ಕೆ ಹಾರಿಸಿ, ಮಧ್ಯಾಹ್ನದ ಬಿಸಿಲಿನ ತಾಪವಾಗುವಂತೆ ಛತ್ತರಿಗೆ. ಯಂತೆ—ಅವು ಅಂತರದಿಂದಲೇ ತಮ್ಮೊಡನೆ ಬರುವಂತೆ ಮಾಡಿಕೊಂಡು ಬರುತ್ತಿರುವುದನ್ನು ಧರ್ಮರಾಜನು ನೋಡಿ, 'ಮುರಾರಿಯೇ ನೋಡು, ನನ್ನ ರಾಜ್ಯದಲ್ಲಿ ಇಂತಹ ಯೋಗಸಮರ್ಥರು ಇದ್ದುದರಿಂದಲೇ ನನ್ನ ಆಳಿಕೆಯು ದೇವಲೋಕದ ಆಳುವಿಕೆಯಂತೆ ಹೊಗಳಲ್ಪಡುವುದು. ಧನ್ಯ ಧನ್ಯ ಯೋಗಿಗಳೇ, ನೀವೇ ಧನ್ಯರು!' ಎಂದು ಸ್ತುತಿಸುವುದನ್ನು ಕಂಡು ಶ್ರೀಕೃಷ್ಣನು— 'ಅಯ್ಯಾ ಸಂತಶಿರೋಮಣಿಯಾದ ಧರ್ಮರಾಜನೇ, ಈ ಸಾಮರ್ಥ್ಯವು ನಿನ್ನ ಔದಾರ್ಯದಿಂದಲೇ ಅವರಿಗೆ ಬಂದಿರುವುದಲ್ಲದೆ ಕೇವಲ ಅವರೇ ಆ ಸಾಮರ್ಥ್ಯಕ್ಕೆ ಕಾರಣರಲ್ಲ! ನಿತ್ಯದಲ್ಲಿ ಅವರಿಗೆ ಸಲ್ಲತಕ್ಕ ಹಾಲು, ತುಪ್ಪ, ಹಿಟ್ಟು, ಅಕ್ಕಿ ಮೊದಲಾದ ಸದಾವೃತ್ತಿಯನ್ನು ನಿಲ್ಲಿಸಿ ಬಿಡು; ಆಮೇಲೆ ನೋಡು!' ಎಂದನು. ಅದರಂತೆ ಮಾಡಲು ಸಾಧಕರಿಗೆ ಹಸಿವೆಯ ಪೀಡೆಯಿಂದ ಯೋಗಸಾಧನೆ ಮಾಡುವುದನ್ನು ಬಿಡಬೇಕಾಯಿತಲ್ಲದೆ, ಹೊಟ್ಟೆ ತುಂಬಿಕೊಳ್ಳುವ ಚಿಂತೆಯೇ ಮುಖ್ಯವಾಯಿತು. ಹೀಗಾಗಿ ಯೋಗಶಕ್ತಿಯೇ ಇಲ್ಲದಾದ ಮೇಲೆ, ಸ್ನಾನಕ್ಕೆ ಹೋದಾಗ ಹಾರಿಸಿದ ಬಟ್ಟೆಗಳು ನೆಲಕ್ಕೆ ಬೀಳಹತ್ತಿದುವಂತೆ? ಒಟ್ಟಿನ ಮೇಲೆ ಈ ಎಲ್ಲ ವಿವೇಚನೆಯಿಂದ ಸಿದ್ಧವಾಗುವುದೇನೆಂದರೆ: ಕೇವಲ ಬಾಲಬ್ರಹ್ಮಚಾರಿ, ಸಾಧು, ಸಂನ್ಯಾಸಿ, ಮೊದಲಾದವರೇ ಯೋಗಾಭ್ಯಾಸಕ್ಕೆ ಅಧಿಕಾರಿಗಳಾಗಿರದೆ, ಗೃಹಸ್ಥಾಶ್ರಮಿಗಳೂ ಅಧಿಕಾರಿಗಳಾಗಿರುತ್ತಾರೆ. ಇಷ್ಟೇ ಅಲ್ಲದೆ ಯಾವ ಜಾತಿಯವರಿದ್ದರೂ ಯೋಗಕ್ಕೆ ಅಧಿಕಾರಿಗಳಾಗಿರುತ್ತಾರೆ; ಆದರೆ ಸಾಧಕರು ಮಾತ್ರ ಯೋಗದ ನಿಯಮದಂತೆ ನಡೆಯಲು ಹೃದಯಪೂರ್ವಕ ಸಿದ್ಧರಿರಬೇಕು. ಆರೋಗ್ಯವನ್ನೂ ಅಮರತ್ವವನ್ನೂ ಅನುಮಾನವಿಲ್ಲದೆ ಕೊಡುವ ಇಂತಹ ಯೋಗವಿದ್ಯೆಯು, ಸ್ವತಂತ್ರವಾಗಿದ್ದರೂ ಅತ್ಯಂತ ಅವನತ ಸ್ಥಿತಿಯಲ್ಲಿರುವ ಹಿಂದುಸ್ಥಾನದ ಪ್ರತಿಯೊಂದು ವ್ಯಕ್ತಿಗೆ ಈಗ ಅತ್ಯಗತ್ಯವಲ್ಲವೇ?

ಗೋಕಾವಿಯಲ್ಲಿ ನಮ್ಮ ಏಜಂಟರು:
ಶ್ರೀ ಪಿ. ಎಂ. ಶಿರಗಾಂವಕರ್
ನ್ಯೂಜ್ ಏಜಂಟ್

ಸವದತ್ತಿಯಲ್ಲಿ ನಮ್ಮ ಏಜಂಟರು:
ಶ್ರೀ. ಜಿ. ಎಲ್. ದೊಡ್ಡಮನಿ
ನ್ಯೂಜ್ ಏಜಂಟ್

ಮುಂದಿನ ಗಾಡಿ

(ಸಣ್ಣ ಕತೆ)

ಕು. ಪ್ರವಿಮಾಳಾ ಸಿಡೇನೂರ, ಧಾರವಾಡ

★

ಪ್ರಳಯದಲ್ಲಿ ಸಿಕ್ಕ ಪಂಜಾಬದ ತಾಯಿಯೊಬ್ಬಳ ಕರುಳಿರಿಯುವ ಕತೆಯಿದು. ಇಂದಿನ ನಿರಾಶ್ರಿತರಲ್ಲಿ ಅಜಿತ–ರಣಜಿತರಂತಹರ ಅಹುತಿಯೆಷ್ಟೋ! ಅವರ ತಾಯಿಯಂತಹ ಕರುಣಾಮೂರ್ತಿಗಳೆಷ್ಟೋ!

★

"ಅಮ್ಮಾ ಅಮ್ಮಾ" ರಣಜಿತ ಹೊರಗಿನಿಂದ ಕೂಗುತ್ತಲೇ ಒಳಗೆ ಬಂದ ತಾಯಿ ಒಳಗಿನಿಂದ 'ಏನು ರಣಜಿತ' ಎನ್ನುತ್ತಲೇ ಬಂದಳು. 'ಅಮ್ಮಾ ಅಜಿತ ಎಲ್ಲಿ?' ಎಂದು ರಣಜಿತ ತೇಕುತ್ತಾ ಕೇಳಿದ. "ಏಕೆ ಮಗು? ಇಷ್ಟೇಕೆ ಗಾಬರಿಯಾಗಿರುವೆ? ಏನಾಯಿತು ಹೇಳು ರಣಜಿತ! ಹೊರಗಿನಿಂದಲೇ ಅಜಿತನನ್ನು ಏಕೆ ಕೇಳುತ್ತ ಬರುತ್ತಿರುವೆ?" ಎಂದು ಒಂದೇ ಉಸುರಿನಲ್ಲಿಯೇ ತಾಯಿ ಕೇಳಿದಳು. ರಣಜಿತ ಯಾವ-ಮಾತನ್ನೂ ಆಡಲೇ ಇಲ್ಲ; ಎರಡೂ ಕೈಗಳ ಮೇಲೆ ತಲೆಯನ್ನೂರಿಕೊಂಡು ಮಂಚದ ಮೇಲೆ ಕುಳಿತ. ತಾಯಿ ಸ್ವಲ್ಪ ಹೆದರಿದಳು. 'ಏನಾಯಿತು ಹೇಳು ಅಜಿತ! ಹಿಂಜರಿಯು ಬೇಡ!" ಎಂದು ಸಂತಯಿಸುತ್ತಾ ಕೇಳಿದಳು. ರಣಜಿತನು ಮುಖವನ್ನು ಮೇಲಕ್ಕೆ ಎತ್ತಿ ನುಡಿದ: " ಅಮ್ಮಾ, ನಾವು ಈ ಊರನ್ನು ಬಿಡುವ ಪ್ರಸಂಗ ಬರಬಹುದು! ಈ ಹಳ್ಳಿಯಲ್ಲೆಲ್ಲಾ ಮುಸಲ್ಮಾನರೇ ಹೆಚ್ಚಾಗಿದ್ದಾರೆ. ಈ ಜಾತೀಯ ದಂಗೆಯ ಮೂಲಕ ನಮಗೆ ಇದೇನೂ ಸುರಕ್ಷಿತ ಸ್ಥಳವಲ್ಲ."

ತಾಯಿ ಸ್ವಲ್ಪ ಗಂಭೀರಳಾಗಿಯೇ ಹೇಳತೊಡಗಿದಳು: 'ಇಲ್ಲ ಮಗು, ನೀನು ತಪ್ಪಾಗಿ ತಿಳಿದಿರುವೆ. ನಮಗೆ ಇದೇನು ಹೊಸ ಸ್ಥಳವೇ? ನಿನ್ನ ತಂದೆ ಅಜ್ಜ ಮುತ್ತಜ್ಜಂದಿರೆಲ್ಲ ಇಲ್ಲಿಯೇ ಹುಟ್ಟಿ ಇಲ್ಲಿಯೇ ಬೆಳೆದರು. ನಾವೇನು ಹೊರಗಿನವರೆ? ಎಷ್ಟೋ ವರುಷಗಳಿಂದಲೂ ಇಲ್ಲಿಯೇ ಈ ಭೂಮಿಯ ಅನ್ನವನ್ನು ಉಂಡು ಇರುವೆವಲ್ಲವೇ? ನಾವ್ರ ಯಾರಿಗೂ ಕೇಡನ್ನು ಬಗೆದಿಲ್ಲ ರಣಜಿತ! ಇಲ್ಲಿಯ ವರೆಗೂ ನಮಗೆ ಯಾರೂ ಕೇಡು ಬಗೆದಿಲ್ಲ. ಜಾತಿ ಬೇರೆಯಾದರೇನು ಮಗು? ನಾವೆಲ್ಲ ಒಂದೇ ಮನೆತನದವರಂತೆ ಇಲ್ಲವೆ? ರಣಜಿತ, ನೀನೆ ನೋಡಲಿಲ್ಲವೆ? ಆ ಕುಂಟ ರಹಮಾನ್ ನಿನ್ನ ಪಕ್ಷವನ್ನೆ ಸೆದು ಇಮಾಮನೊಡನೆ ಜಗಳವಾಡಲಿಲ್ಲವೆ? ನಮಗೆ ಯಾರೂ ಏನೂ ಮಾಡಲಾರರು ಮಗು! ನೀನೇನು ಹೆದರಬೇಡ."

ರಣಜಿತ ವಿಷಣ್ಣತೆಯಿಂದ ಹೇಳಿದ: "ಅಮ್ಮಾ,—ಆಗಿನ ಪರಿಸ್ಥಿತಿ ಬೇರೆಯಾಗಿತ್ತು. ಈಗಿನ ಮುಸಲ್ಮಾನರು, ನಮ್ಮನ್ನು ಕಂಡರೆ ವಿಷಕಾರುತ್ತಿದ್ದಾರೆ. ಅವರಿಗೆ ಮುಸಲ್ಮಾನರನ್ನು ಬಿಟ್ಟು ಬೇರೆಯವರು ಯಾರೂ ತಮ್ಮ ದೇಶದಲ್ಲಿ ಇರಬಾರ. ದೆಂಬ ಇಚ್ಛೆ ಹುಟ್ಟಿದೆ. ಇದನ್ನೆಲ್ಲಾ ಹೊರಗಿನಿಂದ ಯಾರೋ ಬಂದು ಇಲ್ಲಿಯವರ ಕಿವಿಯಲ್ಲಿ ಊದಿದ್ದಾರೆ. ನಾವೆಲ್ಲ ದುಷ್ಟರಂತೆ! ನಮ್ಮನ್ನೆಲ್ಲಾ—ನಾವೆಲ್ಲ ಕಾಫರರಂತೆ—ಕೊಂದರೆ ಅವರ ಮೇಲೆ ಅಲ್ಲಾ ಸುಪ್ರೀತನಾಗುತ್ತಾನಂತೆ. ಈ ರೀತಿಯಾಗಿ ಯಾವ ಧರ್ಮಗ್ರಂಥದಲ್ಲಿ ಬರೆದಿದೆಯೋ ದೇವರೇ ಬಲ್ಲ!" ರಣಜಿತ ಸ್ವಲ್ಪ ಹೊತ್ತು ಶಾಂತನಾಗಿ ಕುಳಿತಿದ್ದು ಮತ್ತೆ ಹೇಳತೊಡಗಿದ: "ಅಮ್ಮಾ, ದೇವರು ನನ್ನನ್ನು ಈ ಹೊತ್ತು ಕಾಪಾಡಿದ. ನಾನೀಗ ಬರುತ್ತಿರುವಾಗ, ಆ ಪುಂಡರ ಗುಂಪೊಂದು ಸೆರೆಕುಡಿದು, ಅದೇನೇನೊ ಒದರುತ್ತಾ ಇದ್ದರು. ನಾನು ಅವರನ್ನು ದೂರದಿಂದಲೇ ನೋಡಿ, ಆ ಕುಂಟ ರಹಮಾನನ ಬಣವೆಯ ಮರೆಗೆ ಅಡಗಿ ಕುಳಿತುಕೊಂಡೆ; ಅವರಾರೂ ನನ್ನನ್ನು ನೋಡಲೇ ಇಲ್ಲ. ಅವರು ದೂರ ಹೋದನಂತರ ಮನೆಗೆ ಬಂದೆ." ಮತ್ತೆ ಹೇಳಿದ:

"ಅಮ್ಮಾ, ಮಂಗಲಸಿಂಗನನ್ನು ಪುಂಡರು ಕೊಂದರಂತೆ; ನಿನಗೆ ಗೊತ್ತಿಲ್ಲವೇ?"

"ಯಾರು ಮಂಗಲಸಿಂಗನನ್ನೆ?" ಎಂದು ತಾಯಿ ವಿಸ್ಮಿತಳಾಗಿ ಕೇಳಿದಳು.

"ಹೌದು ಅಮ್ಮಾ, ಅವನನ್ನೂ ಅವನ ಮಗುವನ್ನೂ ಕೊಂದು ಬಿಟ್ಟಿದ್ದಾರೆ. ಹೆಂಡತಿಯನ್ನು ತಮ್ಮೊಡನೆ ಕರೆದುಕೊಂಡು ಹೋಗಿಬಿಟ್ಟರಂತೆ!"

ತಾಯಿ ಈಗ ಮಾತ್ರ ಏನನ್ನೋ ನೆನೆದು, ಅಡಿಯಿಂದ ಮುಡಿಯ ವರೆಗೂ ನಡುಗಿದಳು. "ಮಂಗಲನ ಹೆಂಡತಿಯನ್ನು ಒಡಿಸಿಕೊಂಡು ಹೋದರೆ? ಅಯ್ಯೋ ದೇವಾ! ಏನನ್ಯಾಯ? ಹೆಂಗುಸರು ಮಕ್ಕಳ ಮೇಲೂ ಇವರ ಕಣ್ಣೆ? ದೇವಾ, ಏನನ್ನು ನೋಡುತ್ತಿರುವಿ?" ಎನ್ನುತ್ತಾ ಬೆರಳುಗಳನ್ನು ಲಟಲಟನೆ ಮುರಿಯುತ್ತ ಒಳಗೆ ಹೊರಟಳು. ರಣಜಿತ ಮತ್ತೆ ಕೇಳಿದ: "ಅಮ್ಮಾ, ಅಜಿತ ಎಲ್ಲಿ ಇದ್ದಾನೆ?"

"ಅಲ್ಲಿಯೆ ಕೋಣೆಯಲ್ಲಿಯೇ ಏನನ್ನೋ ಮಾಡುತ್ತಾ ಇದ್ದ. ಊಟಕ್ಕೆ ಒಳಗೆ ಕರೆದುಕೊಂಡು ಬಾ ರಣಜಿತ!"

ರಣಜಿತ ಕೋಣೆಯಲ್ಲಿ ಹೋದವನೇ ಚಿಟ್ಟನೇ ಚೀರಿದ. ತಾಯಿ ಅಡಿಗೆಯ ಮನೆಯಿಂದ ಓಡಿಬಂದಳು. ಅಜಿತ ಕಿಟಕಿಯಿಂದ ಹೊರಗೆ ಚಾಚಿದ ಕಾಲು ಕಳಚಿ ಕೆಳಗೆ ಬಿದ್ದಿತ್ತು. ಪುಂಡರ ಕಠಾರಿಯ ಪ್ರಭಾವಕ್ಕೆ ಈಡಾಗಿತ್ತು. ಮಗು ಪ್ರಜ್ಞೆ-

ತಪ್ಪಿ ಕೆಳಕ್ಕೆ ಉರುಳಿದ್ದ. ತಾಯಿ ಓಡಿಬಂದು ಹುಡುಗನನ್ನು ಎತ್ತಿ ತೊಡೆಯ ಮೇಲೆ ಹಾಕಿಕೊಂಡು, ದೊಡ್ಡ ಧ್ವನಿಯಿಂದ ಅಳಲಾರಂಭಿಸಿದಳು. ರಣಜಿತ ಅಜಿತನ ಕಲೆಗೆ ನೀರನ್ನು ತಟ್ಟಿ ಗಾಳಿಹಾಕಲಾರಂಭಿಸಿದ. ಕಾಲಿನಿಂದ ರಕ್ತಸೋರುತ್ತಿತ್ತು. ತಾಯಿಯು ಸೀರೆ ಮಗನ ಕಾಲಿನ ರಕ್ತದಿಂದ ತೊಯ್ಯುತ್ತಿತ್ತು. ರಣಜಿತ ಕೂಡಲೆ ಧೈರ್ಯತಂದುಕೊಂಡು ಹೇಳಿದ: "ಅಮ್ಮಾ, ಅಳಬೇಡ, ಧೈರ್ಯ ತಂದುಕೊ! ಈ ದಿನವೇ ನಾವು ಈ ಊರನ್ನು ಬಿಡೋಣ. ಪುಂಡರ ಹಾವಳಿ ದಿನದಿನಕ್ಕೂ ಹೆಚ್ಚಾಗುತ್ತಿದೆ. ದಿನದಿನಕ್ಕೂ ಪರಿಸ್ಥಿತಿ ಭೀಕರವಾಗುತ್ತಲಿದೆ. ಹೇಗಾದರೂ ನಾನು ಬಡಿಗತನವನ್ನು ಬಲ್ಲೆ. ಬಡಿಗತನದಿಂದ ಮೂವರ ಹೊಟ್ಟೆ ತುಂಬಲಾರದೆ? ಅಜಿತನ ಜೀವಕ್ಕೇನೂ ಅಪಾಯವಿಲ್ಲ. ಅವನನ್ನು ನಾನು ಸಂಜೆಯ ಮುಂದೆ ಲಾಯಲ್‌ಪುರ ಹಾಸ್ಪಿಟಲಿಗೆ ಸೇರಿಸಿ ಬರುವೆ. ನೀನು ಅವಶ್ಯವಿರುವ ಸಾಮಾನನ್ನು ಕಟ್ಟಿಡು." ರಣಜಿತನು ಎದ್ದು ಹೊರಗೆ ಹೊರಟ. ತನಗೆ ಬರಬೇಕಾದ ಹಣ ತರಲು ತನ್ನ ಸಾವುಕಾರರ ಮನೆಗೆ ಹೊರಟು ನಡೆದ

* * * *

ಸಂಜೆಯ ಮಬ್ಬುಗತ್ತಲಲ್ಲಿ ರಣಜಿತ ಅಜಿತನನ್ನು ಹೆಗಲಮೇಲೆ ನುಲಗಿಸಿ, ಶುಶ್ರೂಷಾಲಯದೆಡೆಗೆ ನಡೆದಿದ್ದ. ಯಾವ ದಿಕ್ಕಿನಿಂದ ಪುಂಡರು ಬರುವರೊ ನಿಶ್ಚಿತವಿಲ್ಲ. ಎಂತಲೇ ಅದಷ್ಟು ಊರ ಹೊರಗಿನ ಬೀದಿಯಿಂದಲೇ ಹೋಗುತ್ತಿದ್ದ. ಅವನು ತಾಯಿಯನ್ನು ದಿಲ್ಲಿಯ ಗಾಡಿಯಲ್ಲಿ ಕುಳ್ಳಿರಿಸಿ, ತಾನು ಅಜಿತನನ್ನು ಹಾಸ್ಪಿಟಲಿಗೆ ಸೇರಿಸಿ ಬರುವೆನೆಂದು ಮಾತು ಕೊಟ್ಟು ಬಂದಿದ್ದ. ದಾರಿಯಲ್ಲಿ ಅವನಿಗೆ ತನ್ನ ತಮ್ಮ, ತಾಯಿ ಇವರ ವಿಚಾರವೇ ವಿಚಾರ: ತನ್ನ ತಾಯಿಗೆ ದಾರಿಯಲ್ಲಿ ಏನಾದರೂ ಆದರೆ....? ಒಮ್ಮೆಲೆ ಮೈಯಲ್ಲಿ ವಿದ್ಯುತ್‌ಸಂಚಾರವಾದಂತೆ ಆಯಿತು. ತಾನು ಒಬ್ಬನೇ ಹೇಗೆ ಈ ಜಗತ್ತಿನಲ್ಲಿ ಬಾಳುವುದು?— ಎಂದು ವಿಚಾರಿಸುತ್ತಲೆ ನಡೆದ ಊರ ಹೊರಗೆ. ತನ್ನ ತಂದೆಯಿಂದ ಬಂದ ಹೊಲವನ್ನು ನೋಡಿದ. ಹಾಲುಗಾಳುಗಳಿಂದ ತುಂಬಿದ ಹೊಲವು ರಣಜಿತನನ್ನು ಬಾಗಿ ಕರೆಯುತ್ತಿತ್ತು. ರಣಜಿತ ಒಮ್ಮೆಲೆ ವಿಚಾರಿಸತೊಡಗಿದ: 'ನಾನು ಇದನ್ನೆಲ್ಲಾ ಬಿಟ್ಟು ಹೋಗಬೇಕಲ್ಲವೇ? ನಾನು ಬೆವರು ಸುರಿಸಿ ಬೆಳೆಯಿಸಿದ ಬೆಳೆಯನ್ನು ಆ ಪುಂಡರ ಪಾಲಿಗೆ ಬಿಟ್ಟು ಹೋಗಬೇಕೆ? ಇದನ್ನು ಉಣ್ಣುವವರಾರು? ಅಜಿತನ ಕಾಲನ್ನು ಕೊಯ್ದು ಮುಸಲ್ಮಾನರೆ? ಬೇಡ ಬೇಡ! ಇದನ್ನು ನಾನು ನನ್ನ ವೈರಿಗೆ ಉಣ್ಣಲು ಬಿಡಲಾರೆ!" ಎಂದು ಅಜಿತನನ್ನು ಗಿಡದ ಬುಡದಲ್ಲಿ ಮಲಗಿಸಿ, ಕಣ್ಣುಗಳನ್ನು ಅರಳಿಸಿ ತನ್ನ ಹೊಲವನ್ನು ಸ್ನಿಗ್ಧದೃಷ್ಟಿಯಿಂದ ನೋಡಿದ. ಕಣ್ಣಿನಿಂದ ಹನಿಗಳು ಉದುರಿದುವು. ಆ ಕೊನೆಯ ನೋಟದಿಂದ ತನ್ನ ಹೊಲದ ಆ ಸುಂದರ ಚಿತ್ರವನ್ನು ಒತ್ತಿ ಮೂಡಿಸಿಕೊಳ್ಳಲು ಪ್ರಯತ್ನಿಸಿದ. ಆದರೆ ಅವನು ಅದರಲ್ಲಿ ಎಷ್ಟು ಯಶಸ್ವಿಯಾದನೋ ಯಾರು ಬಲ್ಲರು? ಆವೇಶದಿಂದ ಅಜಿತ ಕಿಸೆಯಿಂದ ಕಡ್ಡಿಯನ್ನು ತೆಗೆದು, ಹೊಲಕ್ಕೆ ಉರಿಹಚ್ಚಿದ ಮತ್ತೆ ಅಜಿತನನ್ನು ಎತ್ತಿಕೊಂಡು, ಹೊಲ ಉರಿಯುವ ಬೆಳಕಿನಲ್ಲಿ ಮಾರ್ಗವನ್ನು ಹುಡುಕಿಕೊಂಡು ಮುಂದೆ ನಡೆದ. ಹೊಲವು ಬೆಂದು ಬೂದಿಯಾದಾಗ ಅಜಿತ ಎಲ್ಲಿಯೋ ದೂರ ಹೋಗಿದ್ದ

* * *

ದಿಲ್ಲಿಯ ನಿಲ್ದಾಣದಲ್ಲಿ ಗಾಡಿ ಕೂಗಿದಾಗಲೇ ಅಜಿತನ ತಾಯಿಗೆ ಎಚ್ಚರವಾದದ್ದು. ಪೂರ್ವದಿಕ್ಕಿನಲ್ಲಿ ಸೂರ್ಯನ ಆಗಮನವನ್ನು ಸೂಚಿಸಲು ಕೆಂಪು ಛಾಯೆ ಮೊದಲೆ ಕ್ಷಿತಿಜದಲ್ಲಿ ಕಾಣುತ್ತಿತ್ತು. ರಣಜಿತನ ತಾಯಿ ಒಂದು ಕ್ಷಣ ಎಲ್ಲವನ್ನೂ ಸ್ಮರಿಸಿಕೊಂಡು, ವಿಷಣ್ಣಮುಖದಿಂದ ಕೆಳಗಿಳಿದಳು. ಎಲ್ಲಿಗೆ ಹೋಗಬೇಕೆಂಬುದು ಗೊತ್ತಾಗದೆ ಸುಮ್ಮನೆ ನಿಂತುಬಿಟ್ಟಳು. ಸ್ವಲ್ಪ ಹೊತ್ತಿನ ನಂತರ ಧೈರ್ಯ ತಂದುಕೊಂಡು, ಹಮಾಲನನ್ನು ಕರೆದು, ವೇಟಿಂಗ್‌ರೂಮಿನಲ್ಲಿ ತನ್ನ ಸಾಮಾನುಗಳನ್ನು ಇರಿಸಲು ಹೇಳಿ, ತಾನೂ ಒಳಗೆ ಕುಳಿತುಕೊಂಡಳು. ಆದೇ ಕೋಣೆಯಲ್ಲಿ ಕುಳಿತ ಹೆಂಗುಸರನ್ನು, ಅವ್ಯತಸರದಿಂದ ದಿಲ್ಲಿಗೆ ಬರುವ ಗಾಡಿ ಯಾವಾಗ ಬರುವುದೆಂದು ವಿಚಾರಿಸಿದಳು; ಆದರೆ ಅವರು ತಮಗೊತ್ತಿಲ್ಲವೆಂದು ತಿಳಿಸಿದರು. ಆದರೂ ಅವಳಿಗೆ ಸಮಾಧಾನವಾಗಲಿಲ್ಲ. ಅಲ್ಲಿಂದಲೇ ಹಾಯ್ದು ಹೋಗುತ್ತಿದ್ದ ಕೂಲಿಯವನನ್ನು ಕರೆದು ಕೇಳಿದಳು. ಅವನು 'ಮಧ್ಯಾಹ್ನ ಮೂರಕ್ಕೆ ಮತ್ತು ರಾತ್ರಿ ಹತ್ತುಗಂಟೆಗೆ' ಎಂದು ಉತ್ತರಿಸಿದ. ಆಚತನ ತಾಯಿ ಅಲ್ಲಿಯೇ ಕುಳಿತಳು. ಹೊರಗೆ ಓಡಾಡುವವರನ್ನೆಲ್ಲ ನೋಡುತ್ತ ಕುಳಿತಳು. ತಲೆಯಲ್ಲಿ ಅಜಿತನ ವಿಚಾರ ಹಾಗೆಯೆ ಸುತ್ತುತ್ತಿತ್ತು. ಅವಳ ದೇಹ ದಿಲ್ಲಿಯ ಸ್ಟೇಶನಿನಲ್ಲಿದ್ದರೂ ಮನಸ್ಸು ಅಜಿತನ ಸುತ್ತುಮುತ್ತು ತಿರುಗುತ್ತಿತ್ತು! "ಅವನು ಮತ್ತೆ ಹುಟ್ಟಾರಾಗಬಹುದೆ? ಆದರೂ ಕುಂಟ ರಹಮಾನನಂತೆ ಕಟ್ಟಿಗೆಯನ್ನೂರಿ ನಡೆಬುಬೇಕೆ? ಅಯ್ಯೋ ದೇವಾ, ಅಜಿತನನ್ನು ನಾನು ಆಗ ಹೇಗೆ ನೋಡಲಿ?" ಎಂದು ಒಂದೇ ಸವನೆ ಕಳವಳಪಟ್ಟಳು.

ಮಧ್ಯಾಹ್ನ ಮೂರಕ್ಕೆ ರಣಜಿತ ಬರುವನೆಂದು ತಾಯಿ ಊಟವನ್ನೆ ಮಾಡಲಿಲ್ಲ. ಮಧ್ಯಾಹ್ನ ಮೂರರ ಗಾಡಿ ನಿಲ್ದಾಣದಲ್ಲಿ ಬಂದು ನಿಂತಿತು. ಅಜಿತನ ತಾಯಿ ಎದ್ದು ಹೊರಗೆ ಬಂದಳು. ನಿಲ್ದಾಣದಲ್ಲಿ ಅತ್ತಿತ್ತ ಓಡಾಡಿದಳು. ಗಾಡಿಯಿಂದ ಇಳಿದವರೊಬ್ಬರೂ ರಣಜಿತನಂತಿರಲಿಲ್ಲ. ತಾಯಿ ನಿರಾಶೆಯಿಂದ ಮತ್ತೆ ಒಳಗೆ ಒಂದು ಕುಳಿತಳು. ಮನಸ್ಸು ಬಹಳ ನೊಂದುಕೊಂಡಿತು. 'ರಣಜಿತ ಏಕೆ ಬರಲಿಲ್ಲ?' ಎಂಬ ಪ್ರಶ್ನೆ ಅವಳನ್ನು ಕೆಣಕತೊಡಗಿತು. 'ಮುಂದಿನ ಗಾಡಿಗೆ ಬರಬಹುದು, ಇಷ್ಟರಲ್ಲಿಯೇ ಅವನಿಗೆ ಅಷ್ಟುದೂರ ಹೋಗಿ ಬರಲು ಆಗಿರಲಿಕ್ಕಿಲ್ಲ...

ನಿಲ್ದಾಣ ಸೇರಿದಾಗ ಗಾಡಿ ಹೊರಟು ಹೋಗಿಬಿಟ್ಟಿರಬಹುದು..' ಎಂದು ಸಮಾಧಾನ ಪಟ್ಟುಕೊಂಡು ಹಾಗೆಯೆ ಕುಳಿತಳು. ನಾಲ್ಕುಗಂಟೆಯಾಯಿತು, ಐದಾಯಿತು, ಎಂಟಾಯಿತು; ನಿಲ್ದಾಣದ ಗಡಿಯಾರ ಹತ್ತು ಗಂಟೆ ಬಾರಿಸಿತು. ಹೊರಗೆಲ್ಲಾ ಅತಿಶಯ ಚಳಿ. ಹಾಸಿಗೆಯಿಂದ ಹೊದ್ದಿಕೆಯನ್ನೆಳೆದು ಹೊತ್ತುಕೊಂಡಳು. ಗಾಡಿಯ ಜೀತ್ಕಾರ ಕೇಳಿ ಹೊರಗೆ ಓಡಿ ಬಂದಳು. ಗಾಡಿಯಿಂದ ಇಳಿದ ಎಲ್ಲರ ಮುಖವನ್ನೂ ನೀರೀಕ್ಷಿಸತೊಡಗಿದಳು; ದೂರದಿಂದ ರಣಜಿತನಂತೆ ಕಾಣಿಸಿದವರೆಲ್ಲ ಹತ್ತಿರ ಹೋದಾಗ ಬೇರೆಯವರಾಗಿದ್ದರು. ಈಗ ಮಾತ್ರ ಅವಳು ಹೆದರಿದಳು.ಕೆಟ್ಟ ಕಲ್ಪನೆಗಳು ಅವಳ ಹೃದಯದಲ್ಲಿ ಕಾಲಿಟ್ಟುವು. ಚಳಿಯಿಂದಲೊ ಅಥವಾ ಹೆದರಿಕೆಯಿಂದಲೊ ಅವಳ ಅಂಗಾಂಗಗಳು ಕಂಪಿಸತೊಡಗಿದುವು. ಅಷ್ಟರಲ್ಲಿಯೆ ಮತ್ತೆ ಸಮಾಧಾನ ತಂದುಕೊಳ್ಳಲು ಪ್ರಯತ್ನಿಸಿದಳು. "ನಾನೇಕೆ ಅನಿಷ್ಟವನ್ನು ಚಿಂತಿಸಬೇಕು? ಅಜಿತ ಅಣ್ಣನಿಗೆ ಹೋಗಬೇಡವೆಂದು ಹಟಮಾಡಿ ಅಲ್ಲಿಯೆ ಇರಿಸಿಕೊಂಡಿರಬಹುದು. ಮುಂದಿನ ಗಾಡಿಗೆ ಬರಬಹುದು!" ಎಂದು ಸಮಾಧಾನವಮಾಡಿಕೊಳ್ಳಲು ಪ್ರಯತ್ನಿಸಿದರೂ, ಯಾವುದೋ ಒಂದು ಅನಿಷ್ಟ ವಿಚಾರ ಮೂಲೆಯಲ್ಲಿ ಕುಳಿತು ಮನಸ್ಸನ್ನು ಕೊರೆಯುತ್ತಿತ್ತು. ರಾತ್ರಿ ನಿದ್ರೆ ಬಾರದೆ ಹೋಯಿತು. ಸ್ವಲ್ಪ ಹೊತ್ತು ತೂಕಡಿಸುತ್ತ; ಮತ್ತೆ ಒಮ್ಮೆಲೆ ಹೆದರಿ ಎಚ್ಚರುಗೊಂಡು ಯೋಚಿಸಿ, ಏನುಮಾಡಬೇಕೆಂಬುದು ತಿಳಿಯದಂತಾಗಿ ಸುಮ್ಮನಾಗಿಬಿಡುತ್ತಿದ್ದಳು. ಚಳಿ ಮೈಯನ್ನು ಕೊರೆಯುತ್ತಿತ್ತು. ತಾನು ತಂದಿದ್ದ ಎಲ್ಲ ಅರಿವೆಯನ್ನೂ ಹೊದ್ದುಕೊಂಡು ಮಲಗಿದಳು. ಮುಂಜಾನೆ ಗಾಡಿ ಕೂಗಿದಾಗ ಚಿಟ್ಟನೆ ಎದ್ದಳು. ಮತ್ತೆ ಎಲ್ಲರ ಮುಖವನ್ನೂ ನೋಡುತ್ತ ತಿರುಗಾಡಿದಳು. ಅವಳನ್ನು ಹುಚ್ಚಿಯೆಂದು ತಿಳಿದು ಎಲ್ಲರೂ ನಕ್ಕು ಮುಂದೆ ನಡೆದರು. ತಾಯಿಗೆ ತನ್ನ ಆ ಅನಿಷ್ಟ ವಿಚಾರ ನಿಜವೆಂಬಂತೆ ತೋರತೊಡಗಿತು. ಅವಳು ತೀರ ಹತಾಶಳಾದಳು. ಬಲ ಕುಂದಿಹೋಯಿತು. ಒಮ್ಮೆಲೆ ರಣಜಿತನ ಧ್ವನಿ ಕೇಳಿದಂತಾಗಿ ಹೊರಗೆ ಓಡಿ ಬರುತ್ತಿದ್ದಳು. ಆದರೆ ಅಲ್ಲಿ ರಣಜಿತನು ಇಲ್ಲದಾಗಲು ಒಳಗೆ ಬಂದು ಬಿದ್ದು ಬಿದ್ದು ಅಳುತ್ತಿದ್ದಳು. ಈಗ ಅವಳಿಗೆ ಏನುಮಾಡಬೇಕೆಂಬುದೇ ತಿಳಿಯದಂತಾಯಿತು. "ತಾನು ಒಬ್ಬಳೇ ಒರಬಾರದಾಗಿತ್ತು; ರಣಜಿತನನ್ನು ಬಿಟ್ಟು ನನ್ನ ಜೀವವನ್ನು ಉಳಿಸಿಕೊಂಡು ಇಲ್ಲಿಗೆ ಬಂದುದು ತಪ್ಪು" ಎನಿಸತೊಡಗಿತು. 'ಆಗ ಈ ಬುದ್ಧಿ ತನಗೆ ಬರಲಿಲ್ಲವಲ್ಲ' ಎಂದು ಹಳಹಳಿಸಿದಳು. ಆದರೆ ಈಗ ವಿಚಾರಮಾಡಿದರೆ ಪ್ರಯೋಜನವೇನು?

ಸಂಜೆಯಾಗುತ್ತ ಬಂದಿತು. ಪಕ್ಷಿಗಳು ಗೂಡನ್ನು ಸೇರುತ್ತಿದುವು. ಕತ್ತಲೆ ತನ್ನ ಛಾಯೆಯನ್ನು ಪಸರಿಸುತ್ತಿತ್ತು. ಚಳಿ ಸುತ್ತಲ್ಲಾ ಆವರಿಸುತ್ತಿತ್ತು. ನರನರಗಳನ್ನೆಲ್ಲಾ ಅಲುಗಿಸುತ್ತಿತ್ತು. ತಾಯಿ ಆ ಚಳಿಯನ್ನು ತಾಳಲಾರದೆ ಹೋದಳು. ಎಷ್ಟು ಅರಿವೆ ಸುತ್ತಿದರೂ ಚಳಿ ಬಾಧಿಸದೆ ಇರಲಿಲ್ಲ. ಇನ್ನು ರಾತ್ರಿಯನ್ನೆಲ್ಲಾ ಹೇಗೆ ಕಳೆಯಬೇಕೊ! ಹಲ್ಲು ನಡುಗತೊಡಗಿದುವು. ಆದರೆ ಅದಕ್ಕೆ ಉಪಾಯವೇನಿದೆ? ಸುಮ್ಮನೇ ಬಿದ್ದುಕೊಂಡು ಬಿಟ್ಟಳು. ಎರಡು ದಿನಗಳಿಂದಲೂ ಇವಳನ್ನು ನೋಡುತ್ತಲಿದ್ದ ಸ್ಟೇಶನ್ ಮಾಸ್ತರು ಸೀಖನಾಗಿದ್ದುದರಿಂದ, ಇವಳನ್ನು ಕೇಳಿ ಸುದ್ದಿಯನ್ನರಿತ. ತನ್ನ ಮನೆಗೆ ಬರಬೇಕೆಂದು ಹೇಳಿದ. ತಾಯಿ ಒಪ್ಪಲಿಲ್ಲ. ತಾನು ಅಪರ ಮನೆಗೆ ಹೋದರೆ, ರಣಜಿತನು ಬಂದದ್ದು ತನಗೆ ಹೇಗೆ ಗೊತ್ತಾಗಬೇಕು? ಮುಂದಿನ ಗಾಡಿಗೆ ಬರಬಹುದೆಂಬ ಆ ಆಶೆ ಈಗ ಕರಗಿದ್ದರೂ, ಚಿಕ್ಕದಾಗಿ ಉಳಿದುಕೊಂಡಿತ್ತು. ಅದೇ ಅವಳನ್ನು ಅಲ್ಲಿಯೇ ಇರುವಂತೆ ಪ್ರೇರೇಪಿಸಿತು.

ಅಜಿತನ ತಾಯಿ ತಿರುಗಿ ತನ್ನ ಊರಿಗೆ ಹೋಗಬೇಕೆಂದು ಇಚ್ಛಿಸಿದಳು. ಆದರೆ ಅವಳ ಮೈಯಲ್ಲಿ ಸ್ವಾಸ್ಥ್ಯವಿರಲಿಲ್ಲ. ಮತ್ತು ಕೈಯಲ್ಲಿ ಹಣವಿರಲಿಲ್ಲ. ತಂದ ಆಹಾರವೆಲ್ಲ ಕರಗಿ ಹೋಗಿತ್ತು. ಹಸಿವೆಯು ಬಾಧೆ ಶಕ್ತಿಹೀನಳನ್ನಾಗಿ ಮಾಡಿತ್ತು. ಚಳಿ ಮೈಯನ್ನು ಕೊರೆಯುತ್ತಿತ್ತು. ಮುಂಜಾನೆ ಗಾಡಿ ಬಂದಾಗ ಅವಳು ಏಳಲು ಪ್ರಯತ್ನಿಸಿದಳು; ಆದರೆ ಅವಳಿಗೆ ಅದು ಸಾಧ್ಯವಾಗಲಿಲ್ಲ. ಕೈಕಾಲುಗಳು ಅಲುಗಾಡಿಸಲು ಬಾರದಂತೆ ಆಗಿದ್ದುವು. ಮೈ ಬಿಸಿಯಾಗಿತ್ತು. ಅದೇ ಅವಳಿಗೆ ಸ್ವಲ್ಪ ಸುಖವನ್ನು ಕೊಟ್ಟಿತು. ಮಧ್ಯಾಹ್ನದ ಗಾಡಿ ಬಂದಿತು; ಮತ್ತೆ ಹೊರಟು ಹೋಗಿಬಿಟ್ಟಿತು. ಅವಳಿಗೆ ಇದಾವುದೂ ಗೊತ್ತಾಗುವಂತಿರಲಿಲ್ಲ ಮತ್ತೆ ರಾತ್ರಿಯು ತನ್ನ ಪ್ರಭಾವವನ್ನು ಪಸರಿಸಿತು. ತಾಯಿಯ ರಕ್ತ ಚಳಿಯಿಂದ ಹೆಪ್ಪುಗಟ್ಟಿದಂತಾಗಿದ್ದಿತು. ಮೈ ಕಾದು ಕೆಂಡವಾಗಿತ್ತು. ಸ್ಟೇಶನ್ ಮಾಸ್ತರು ಅವಳನ್ನು ಎತ್ತಿ ಮನೆಗೆ ಕರೆದುಕೊಂಡು ಹೋದರು. ಆದರೆ ಅವಳ ಪ್ರಾಣವನ್ನು ಉಳಿಸಲಕ್ಕೆ ಸಾಧ್ಯವಾಗಲಿಲ್ಲ. ಮುಂದಿನ ಗಾಡಿ ಬಂತು ಮತ್ತೆ ಹೋಯಿತು. ಆದರ ಮುಂದಿನ ಗಾಡಿ ಬರುತ್ತಿತ್ತು ಹೋಗುತ್ತಿತ್ತು. ಯಾವ ಮುಂದಿನ ಗಾಡಿಯೂ ರಣಜಿತನನ್ನು ತನ್ನೊಡನೆ ತರಲೇ ಇಲ್ಲ.

ಬೆಳಗಾಂವಿಯಲ್ಲಿ ನಮ್ಮ ಏಜಂಟರು:
ಶ್ರೀ. ಎನ್. ಎಸ್. ಹ್ಯಾಟಿ
ಕಥಾಕುಂಜ ಪುಸ್ತಕ ಭಾಂಡಾರ

ಹುಬ್ಬಳ್ಳಿಯಲ್ಲಿ ನಮ್ಮ ಏಜಂಟ್:
ಶ್ರೀ. ವಿ. ಕೆ. ಗೋಖಲೆ
ಕಂಬೈಂಡ್ ನ್ಯೂಜ್ ಏಜನ್ಸಿ

ಗೋವಾಯಾತ್ರೆ ಹಾಗೂ ಇತರ ಪ್ರಬಂಧಗಳು

ಲೇಖಕರು ಶ್ರೀಮಾನ್ ಎನ್. ಎಸ್. ಗದಗಕರರು, ಪೂರಾಟಿಗಾರರು,
ಭಾರತ ಬುಕ್ಡಿಪೊ, ಧಾರವಾಡ.

ಈ ಚಿಕ್ಕ ಹೊತ್ತಿಗೆಯಲ್ಲಿ ಹನ್ನೊಂದು ಹರಟೆಗಳನ್ನು ಸೇರಿಸಲಾಗಿದೆ. ಎಲ್ಲವುಗಳೂ ಪೂರ್ಣ ಹರಟೆಯ ಜಾತಿಗೆ ಸೇರಿರದಿದ್ದರೂ ಕೆಲವು ಅತ್ಯುತ್ತಮ ಹರಟೆಗಳೇ ಆಗಿವೆ. ಶ್ರೀಮಾನ್ ಗದಗಕರರು ಅನೇಕ ಹರಟೆಗಳನ್ನು ಬರೆದು ಈಗಾಗಲೇ ಕನ್ನಡ ಜನಕ್ಕೆ ಪರಿಚಿತರಾಗಿದ್ದಾರೆ. ಇವರ ಶೈಲಿಯು ಹದವಾಗಿದೆ. ವ್ಯಂಗ್ಯವು ಮೇಲಿಂದ ಮೇಲೆ ಕಣ್ಣು ಚಿವುಟುವುದರಿಂದ ಓದುಗರಿಗೆ ಹರಟೆಗಳನ್ನು ಓದುವಾಗ ಬೇಸರವೆನಿಸುವುದಿಲ್ಲ. ಇಂಗ್ಲೀಷ್ ಸಾಹಿತ್ಯದ ಸಂಪರ್ಕದಿಂದ ಹೊಸಗನ್ನಡವು ಬಹುಮುಖವಾಗಿ ಹಬ್ಬುತ್ತಿದೆ ಎಂಬ ಮಾತನ್ನು ಒಪ್ಪಿದಾಗ, ಹರಟೆ ನಮ್ಮ ಸಾಹಿತ್ಯಕ್ಕೆ ಇನ್ನೂ ಅಷ್ಟು ವಶವಾಗಿಲ್ಲವೆಂದು ಹೇಳಬೇಕಾಗುತ್ತದೆ. ಗದಗಕರರು ಆಂಗ್ಲ ಸಾಹಿತ್ಯದಲ್ಲಿಯ ಉತ್ತಮವಾದ ಹರಟೆಗಳನ್ನು ಅರಗಿಸಿಕೊಂಡು, ಕನ್ನಡಕ್ಕೆ ತಮ್ಮ ಅನುಭವದ ಫಲವಾಗಿ ಅನೇಕ ಹರಟೆಗಳನ್ನು ನೀಡಿದ್ದಾರೆ. ವ್ಯಂಗ್ಯವು ಹರಟೆಯ ಜೀವಾಳವೆಂದೇ ಹೇಳಬಹುದು. ಇಲ್ಲವಾದರೆ ಅದು ಕಾರಕೂನನ ನೋಟೀಸಾದೀತು. ವಿಷಯಗಳ ಆಯ್ಕೆಯು ಬರೆಹಗಾರನ ವ್ಯಕ್ತಿತ್ವವನ್ನೇ ಎತ್ತಿ ತೋರಿಸುತ್ತದೆ. ಒಬ್ಬ ಪ್ರಸಿದ್ಧ ಆಂಗ್ಲ ಹರಟೆಗಾರನ ಮಾತಿನಲ್ಲಿ ಹೇಳಬೇಕೆಂದರೆ, "Any pey will do to hang the hat on" ಎಂಬಂತೆ ಯಾವ ಕ್ಷುಲ್ಲಕ ವಿಷಯವನ್ನಾದರೂ ತೆಗೆದುಕೊಂಡು ಬರೆಹಗಾರನು ತನ್ನ ಅನುಭವ ಹಾಗೂ ವ್ಯಕ್ತಿತ್ವದ ಪ್ರಭಾವದಿಂದ ಒಳ್ಳೇ ಸುಂದರವಾದ ಶೈಲಿಯನ್ನು ನಿರ್ಮಿಸಬಲ್ಲ. ಮಣ್ಣಿನ ಮುದ್ದೆ ಎಂದು ನಾವು ತಾತ್ಸಾರ ಮಾಡಿದರೆ, ಜೇನಗಾರ ಅದರಿಂದಲೇ ಸುಂದರವಾದ ಬೊಂಬೆ ಮಾಡಬಲ್ಲ. ಅದು ಅವನ ಸೊತ್ತು! ಅದರಂತೆಯೇ ಸಾಹಿತಿಯೆಂದು ಒಪ್ಪಬಹುದಲ್ಲವೆ?

ಈ ಪುಸ್ತಕದಲ್ಲಿ 'ಗೋವಾಯಾತ್ರೆ' ಎಂಬುದೊಂದು ಪ್ರವಾಸಪ್ರಬಂಧವೆಂದು ನಾವು ತಿಳಿದುಕೊಂಡರೂ ಅದನ್ನು ಹೇಳುವ ರೀತಿಯು ಮೋಹಕವಾಗಿದೆ. ಆದರೆ ವಸ್ತುಸ್ಥಿತಿಯು ಅಷ್ಟು ಸೊಗಸಾಗಿಲ್ಲ. ಗೋವೆಯ ಬಗ್ಗೆ ಭೌಗೋಲಿಕ ಜ್ಞಾನ ಮಾಡಿಕೊಡಲು ಹೊರಟಂತೆ ಎನಿಸುತ್ತದೆ. ಇನ್ನು 'ಆಶೆ', 'ಸೇಡು' ಮತ್ತು 'ಅಗಲಿಕೆ' ಇವುಗಳೆಲ್ಲ ವಿಶೇಷವಾಗಿ ವಿಚಾರ ಪ್ರಚೋದಕ ಪ್ರಬಂಧಗಳು. ಅಗಲಿಕೆಯಲ್ಲಿಯ ವಿಷಯ ವಿಸ್ತಾರವೂ ಹಾಗೂ ಅನುಭವದ ಉದಾಹರಣೆಗಳೂ ಓದುಗರ ಮನಸ್ಸನ್ನಾಕರ್ಷಿಸಿಕೊಳ್ಳುತ್ತವೆ. ಈ ಸಂಕಲನದಲ್ಲಿ ಇದು ಒಂದು ಉತ್ತಮ ಪ್ರಬಂಧ. "ಆಶೆ" ನಿರಾಶೆಯನ್ನುಂಟುಮಾಡುತ್ತದೆ, ನೀರಸವಾಗಿದೆ. ಸೇಡು ತನ್ನಷ್ಟಕ್ಕೆ ತಾನೆ ನಿಂತುಕೊಂಡಿದೆ. ಅದರಲ್ಲಿ ಭಾವೆಯು ಒಟವಾಗಲಿ ಭಾವನೆಗಳ ಹರಿದಾಟವಾಗಲಿ ಕಂಡು ಬರುವುದಿಲ್ಲ. ಈ ಪ್ರಬಂಧಗಳಲ್ಲಿಯ ಭಾಷೆ-ವಿಚಾರ ಒಂದನ್ನೊಂದು ಹೊಂದಿಕೊಳ್ಳುವುದರಿಂದ, ಹೊಸ ಸಂಗತಿ ಏನೂ ತೋರುವುದಿಲ್ಲ. 'ಮೂಗು', ಒಳ್ಳೇ ಪ್ರಬಂಧ. ಸುಲಲಿತವಾದ ಭಾಷೆ, ಮೋಜಿನ ಮಿಂಚು, ವ್ಯಂಗ್ಯದ ಕುಣಿತ,--ಇವೆಲ್ಲ ಇವೆ. ಮೂಗಿನ ಅನುಕರಣವೇ ಕವಿಯಲ್ಲಿ ಇಳಿದು ಬಂದುದರಿಂದಲೂ, ಕವಿಯ ಮಹತ್ವದ ಬಗ್ಗೆ ಕೇಳಿ ಕೇಳಿ ಸಾಕಾಗುವುದರಿಂದಲೂ— ಈ ಪ್ರಬಂಧ ಬೇಸರವನ್ನುಂಟು ಮಾಡುತ್ತದೆ. ಇಪ್ಪತ್ತನೆಯ ಶತಮಾನದಲ್ಲಿ ಸಲೂನಿಗೆ ಮನ್ನಣೆ ಬರದೆ, ಇನ್ನಾವುದಕ್ಕೆ ಬರಬೇಕು? ಎನ್ನುವ ರೀತಿಯಾಗಿ 'ಸಲೂನು' ತನ್ನ ಮಹತ್ವವನ್ನು ಸಮಾಜಕ್ಕೆ ತಿಳಿಸಿಕೊಟ್ಟಿದೆ. ಸಲೂನಿನಲ್ಲಿಯ ಮಾಲಕನ ವ್ಯಕ್ತಿ ಚಿತ್ರವು ಸುಂದರವಾಗಿದೆ. 'ತಿರಸ್ಕಾರ', 'ಸಮಾಜ ಸಪ್ತರಂಗ' ಈ ಹರಟೆಗಳಲ್ಲಿ ಬರುವ ವಿಚಾರಗಳು ಅಷ್ಟು ಮನಸ್ಸನ್ನಾಕರ್ಷಿಸುವುದಿಲ್ಲ. 'ಸಮಾಜ ಸಪ್ತರಂಗ'ದಲ್ಲಿ ವ್ಯಕ್ತಿಗಳ ರೀತಿ ನೀತಿಗಳನ್ನು ಹೇಳಹೊರಟರೂ, ಅದರಲ್ಲಿ ಬರೆಹಗಾರನಿಗೆ ಸೇಡು ತೀರಿಸಿಕೊಳ್ಳುವ ಹಟವೇ ಇದಕ್ಕೆ ಮೂಲಕಾರಣವೆಂದು ಎನಿಸದಿರದು. 'ತಿರಸ್ಕಾರ'ದ ರೀತಿ ಅಸಂಬದ್ಧವೆನಿಸುವುದು. 'ಭಾಷಣವೊ ಕಂಠಶೋಷಣವೊ?' ಇದು ಒಂದು ಮೋಜಿನ ವಿಷಯವೆಂದು ಹೇಳಬೇಕು. ಇಲ್ಲಿ ಅವರ ಸೂಕ್ಷ್ಮ ನಿರೀಕ್ಷಣೆ, ಸಮಾಜದ ಹುಚ್ಚನ್ನು ಬಯಲಿಗೆಳೆಯುವ ಗುಟ್ಟು ಚೆನ್ನಾಗಿ ಸಾಧಿಸಿದೆ. ಕೊನೆಯ ಪ್ರಬಂಧವಾದ "ನಾನು ಟಾಂಗಾ ಸವಾರಿಯಲ್ಲಿದ್ದಾಗ" ಎಂಬದು ಒಂದು ಸುಂದರ ರೂಪಕ. ಜೀವನ ಯಾತ್ರೆಯಲ್ಲಿ ಅನೇಕ ಸಿಹಿ ಕಹಿ ಅನುಭವಗಳು ಬರಬಹುದು. ವ್ಯಕ್ತಿಯು ಪರಿಸ್ಥಿತಿಯ ಕೈಗೊಂಬೆ. ಕ್ಷುಲ್ಲಕರು, ಹೀನರು, ಎಂದು ನಾವು ಅಲ್ಲಗಳೆಯುವ ತೀರ ಸಾಮಾನ್ಯ ಜನಗಳಲ್ಲಿಯೂ ಒಂದು ಬಾಳುವೆಯ ತಂತ್ರವನ್ನು ಕಂಡು—ಸಹಾನುಭೂತಿಯನ್ನು ತೋರಿಸುವ ಈ ರೂಪಕವು ಬರೆಹಗಾರರ ವ್ಯಕ್ತಿತ್ವವನ್ನೂ ಎತ್ತಿ ತೋರಿಸುತ್ತದೆ. ಒಟ್ಟಿನ ಮೇಲೆ ಶ್ರೀಮಾನ್ ಗದಗಕರರು ಬಳಸಿಕೊಳ್ಳುವ ಭಾಷೆ, ಹೇಳುವ ರೀತಿ, ಸಾಮಾನ್ಯ ಜನಜೀವನದಲ್ಲಿ ಕಂಡು ಬರುವ ಹುರುಪು ಹುಮ್ಮಸಗಳನ್ನೇ ಸುಂದರವಾಗಿ ಕಣ್ಣಿದುರು ಹಿಡಿಯುವ ಕೌಶಲ—ಇವೆಲ್ಲ ಅವರ ಬರೆಹದ ಬಗ್ಗೆ ಆದರವನ್ನುಂಟು ಮಾಡುವುದರಲ್ಲಿ ಸಂದೇಹವಿಲ್ಲ.

—ಪಿ. ಆರ್. ಪಾಡಪ್ಪ

ಅ. ನ. ಕೃ.

ಬರೆದವರು : 'ತ. ರಾ. ಸು.'

ಪ್ರಕಾಶಕರು : ಸಾಹಿತ್ಯಾಲಯ, ಹತ್ರದುರ್ಗ, ಕ್ರಾ. ಜಿ. ಕೃ. ೨೧೦. ಬೆಲೆ : ೩-೪-೦.

ವಿಮರ್ಶಾತ್ಮಕ ಗ್ರಂಥಗಳೇ ಕಡಿಮೆಯಾಗಿರುವ ಕನ್ನಡ ಸಾಹಿತ್ಯದಲ್ಲಿ ಆಧುನಿಕ–ಜೀವಂತ– ಸಾಹಿತಿಗಳ ಕೃತಿವಿಮರ್ಶೆ "ಇದೆ" ಎನ್ನಲಿಕ್ಕೆ ಮಾತ್ರ ಒಂದೆರಡು ಹೊರಟಿವೆ. ಕನ್ನಡದ "ಸಿದ್ಧ ಪ್ರಸಿದ್ಧ" ಸಾಹಿತಿಗಳಾದ ಅ. ನ. ಕೃ. ಅವರ ನಾಟಕ, ಕಥೆ, ಕಾದಂಬರಿ ಸಾಹಿತ್ಯವ್ಯಕ್ತಿತ್ವದ ರಸವಿಮರ್ಶೆಮಾಡಲೆಳಸಿದ ಈ ಪುಸ್ತಕ ಅಂತಹವುಗಳಲ್ಲೊಂದಾಗಿದೆ. ಸುಂದರ ಮುದ್ರಣ, ಅ. ನ. ಕೃ. ಮತ್ತು ತ. ರಾ. ಸು. ಅವರ, ಅ.ನ.ಕೃ. ಅನರ ಭಾವಚಿತ್ರಗಳಿಂದ ಆಕರ್ಷಕವಾಗಿದೆ.

ಅ. ನ. ಕೃ. ಅವರ ಕೃತಿಗಳ ಸಂಖ್ಯೆ, ಕೆಲವು ಕೃತಿಗಳು ಪಡೆದ ಮೆಚ್ಚಿಗೆ, ಶ್ರೀಯುತರು ಕನ್ನಡಕ್ಕೆ ಸಲ್ಲಿಸಿದ ಇನ್ನಿತರ ಉಪಾರ ಸೇವೆ— ಇವುಗಳನ್ನೆಲ್ಲ ನೋಡಿದಾಗ ಅಭಿಮಾನ ಆಶ್ಚರ್ಯ-ಗಳುಂಟಾಗಿ, ಅವರನ್ನು ಕುರಿತು ಒಂದು ಗ್ರಂಥ ಬರೆಯ-ಬೇಕೆಂದು ಅವರ ಸಮೀಪದ ವಿಮರ್ಶಕರಿಗೆ ತೋರಿಬರುವುದು ಸಹಜ. ಅಂತೆಯೇ ಅ. ನ. ಕೃ. ಅವರ ಪರಿಚಯ ಇನ್ನೂ ಚೆನ್ನಾಗಿ ಆಗದೆ ಇದ್ದಾಗ, ಜವರೂಡನೆ ಒಮ್ಮೆ "ಮಾನವನಂತೆ ಪರ್ಫೆಕ್ಟಲಲ್ಲ" ಎಂದನಿಸಿಕೊಂಡ (ಪು. ೨೦೨) ತ. ರಾ. ಸು. ಅವರು, "ನಾಲ್ಕಾರು ವರ್ಷ ಅವರ ಸ್ನೇಹವಾಗಿ, ಪರಿಚಯ, ಆತ್ಮೀಯತೆಯಲ್ಲಿ ಮೂಡಿದಾಗ" ಶ್ರೀಯುತರ ಗುಟ್ಟನ್ನೆಲ್ಲ ಅರಿತುಕೊಂಡು, ಇಂಥ ಪುಸ್ತಕ ಬರೆದುದು ಅವರು ಪಟ್ಟ ಪರಿಶ್ರಮವನ್ನೂ ಅವರ ವಿಮರ್ಶೆಯ ಬಗೆಯನ್ನೂ ತೋರಿಸಿ ಕೊಡುತ್ತದೆ.

ಈ ಆತ್ಮೀಯತೆ, ಪರಿಚಯದ ಮೂಲಕವೇ 'ವ್ಯಕ್ತಿ' ಎಂಬ ಕೊನೆಯ ಪ್ರಕರಣವೂ 'ಕನ್ನಡಿಗ'ದ ಕೆಲವು ಭಾಗವೂ ಕಸ್ಟು ಉಜ್ವಲವಾಗಿವೆಯೆಂದು ಹೇಳಬಹುದು. "ಇಂದಿಲ್ಲ ನಾಳೆ ಈ ಜಗತ್ತನ್ನು ನಾನು ಗೆದ್ದೇಗೆಲ್ಲುತ್ತೇನೆ" ಎಂಬ ಮಾತಿನಲ್ಲಿಯ "ಅವನ ಅಜೇಯ ಆಶಾವಾದ" ಕನ್ನಡದಲ್ಲಯೇ ಜೀವಕ್ಕೆ ತೃಪ್ತಿ, ಶಾಂತಿ, ಮುಕ್ತಿಗಳನ್ನು ಕಾಣುವ ರಾಯರ ಕನ್ನಡದ ಅಭಿಮಾನ— ಇವು ಅ. ನ. ಕೃ ಅವರ ಭವ್ಯವ್ಯಕ್ತಿತ್ವ-ವನ್ನು ನಮ್ಮ ಕಣ್ಣೆದುರು ನಿಲ್ಲಿಸುತ್ತವೆ.

ಅ. ನ. ಕೃ. ಕತೆಗಾರರು, ನಾಟಕಕಾರರು, ವಿಮರ್ಶಕರು, ಎಲ್ಲಕ್ಕೂ ಹೆಚ್ಚಿನದಾಗಿ ಕಾದಂಬರಿಕಾರರು. ಸುಮಾರು ೦ ಪುಟಗಳಲ್ಲಿ ಇವರ ಕಾದಂಬರಿಗಳ ರಸವಿಮರ್ಶೆ ಹರಿದಿದೆ. ಅ. ನ. ಕೃ. ಅವರ ಕಾದಂಬರಿಗಳೆಲ್ಲ ಮೆಚ್ಚಿಗೆಯಾದವರಿಗೆ ಈ ಭಾಗ ನಿಜವಾಗಿಯೂ ಎಷ್ಟು ಮಹತ್ವದ್ದೆನ್ನುವುದು ತೋರಿ-ಬರದಿರದು. ಇದರಂತೆ "ಕನ್ನಡದಲ್ಲಿ ನಾಟಕಗಳ ಹೊಳೆ-ಯನ್ನೇ ಹರಿಸಿ" ಬಡಲಿರುವ ನಾಟಕಕಾರ ಅ. ನ. ಕೃ. "ತಮ್ಮ ನಾಟಕಗಳಲ್ಲಿ ವಿವೇಚನೆ ಮಾಡಿದಷ್ಟು ವಸ್ತು, ಸಮಸ್ಯೆಗಳನ್ನು ಕನ್ನಡದ ಮತ್ತಾವ ನಾಟಕಕಾರರೂ ಮಾಡಿಲ್ಲ...." ಎಂದು ತೋರಿಸಿ ಹೊರಟ ಒಗೆ ಬಹಳ ಸೂಕ್ಷ್ಮ-ವಾಗಿದೆ. ಇದೇ ರೀತಿ "ಕಲೆಯ ಯಾವುದೇ ದೃಷ್ಟಿಯಿಂದ ನೋಡಿದರೂ ಕೃಷ್ಣರಾಯರ ಕಥೆಗಳು ಪರಿಪೂರ್ಣವಾಗಿವೆ" ಎಂಬ ಒಂದೇ ಮಾತಿನಿಂದ ರಾಯರ ಕತೆಗಾರಿಕೆಯ ಈವು ಹತ್ತಬಹುದು.

ತ. ರಾ. ಸು. ಅವರು ತಮ್ಮ ಆಳವಾದ—ಅ. ನ. ಕೃ. ರಷ್ಟೇ ವಿಶಾಲವಾದ—ಅಭ್ಯಾಸದಿಂದ, ರಾಯರು ಸದಾ ಹೇಳುತ್ತಿರುವ ಬಾ, ಹೆಚ್ಲೆ, ಷೆಕ್ಸ್‌ಪಿಯರ್ ಮುಂತಾದ ಮಹಾ ಮಹಾ ಸಾಹಿತಿ-ಗಳ ಸಾಲಿನಲ್ಲಿ ಅವರನ್ನು ನಿಲ್ಲಿಸಲು ಪಟ್ಟ ಶ್ರಮ ಸ್ತುತ್ಯವಾಗಿದೆ. ಒಟ್ಟಿನಲ್ಲಿ ಇದು 'ಕನ್ನಡ ಕಾದಂಬರಿಗೊಬ್ಬರೇ ಕೃಷ್ಣ-ರಾಯರು' ಎಂದು ಸಾರಹೊರಟ 'ಪ್ರಶಸ್ತಿ'; ನಿಜವಾದ ವಿಮರ್ಶೆಯಲ್ಲ. ೨೧೦ ಪುಟಗಳನ್ನು ಮುಗಿಸಿದ ಮೇಲೆ ಹಿಂದೆ ನಾಲ್ಕೈದನೆಯ ಪುಟದಲ್ಲೆಲ್ಲೋ ಓದಿದ ಸಾಲು ನೆನಪಾ-ಗುತ್ತದೆ :

' ಪುಸ್ತಕ, ಪುಸ್ತಕ, ಬರೀ ಪುಸ್ತಕ!"

"ಅದಾವುದೂ ಸ್ಪಷ್ಟವಾಗಿ ಕಾಣದಂತೆ ಸಿಗರೇಟಿನ ಕೆಳು ನೀಲಿಯ ಹೊಗೆಯ ತೆರೆ" ಲೇಖಕರು 'ಪ್ರಥಮದರ್ಶನ' ದಲ್ಲಿಯೇ ನತ್ಯವನ್ನು ಕಂಡಿರುವಾಗ ಇಷ್ಟೆಲ್ಲ..... ಎನಿಸುತ್ತದೆ.

"ಪರಿಚಯ, ಆತ್ಮೀಯತೆ"ಗಳ ಮೂಲಕ ಅ. ನ. ಕೃ. ಅವರ ಕೃತಿಗಳ ಒಳ್ಳೆಯ ಭಾಗವನ್ನಷ್ಟೇ ಎತ್ತಿ ತೋರಿಸಿದ ತ. ರಾ. ಸು. ಅವರಿಗೆ ಸೂಕ್ಷ್ಮವಾದ ವಿಮರ್ಶಾಶಕ್ತಿ ಇದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಇದಕ್ಕೆ ಅವರ ಬರೆಹದ ಕ್ರಮ, ಸ್ಪಷ್ಟತೆ, ಗುಣಕ್ಕೆ ಮನ್ನಣೆ ಪಡೆದ ಹೃದಯ,— ಇವೇ ಸಾಕ್ಷಿ. ಅವರು ಇನ್ನಾವನಾದರೂ ಒಬ್ಬ— ಪರಿಚಯ ಅಷ್ಟಿರದ— ಸಾಹಿತಿಯ ಕೃತಿಗಳನ್ನು ಇಷ್ಟೇ ದೀರ್ಘವಾಗಿ ವಿಮರ್ಶಿಸಿದಾಗ, ಅವರ ಶಕ್ತಿ ಚೆನ್ನಾಗಿ ಕಂಡುಬಾರದೆ ಹೋಗಲಿಕ್ಕಿಲ್ಲ.

—ವಿ. ಜಿ. ಭ.

ವಿಧಿ ಹಂಪ ವಧು

ಸಾಮಾಜಿಕ ಕಾದಂಬರಿ. ಮೂಲ ಲೇಖಕರು : ಶ್ರೀ. ಗುಡಿಪಾಟಿ ವೆಂಕಟಾಚಲಂ, ಬಿ. ಎ. ಎಲ್. ಟಿ., ಅನುವಾದಕರು : ಶ್ರೀ. ಪಿ. ವೆಂಕೋಬಾಚಾರ್ಯ ಬಿ. ಎ., ಬಿ. ಟಿ.

ಶ್ರೀ. ಗುಡಿಪಾಟಿ ವೆಂಕಟಾಚಲಂರು ತೆಲುಗಿನಲ್ಲಿ ಪ್ರ... ಸಾಹಿತಿಗಳು. ಈಗಾಗಲೇ ಅವರು ೨೫ ಕ್ಕೆಂಟಲೂ ಹೆಚ್ಚಾಗಿ ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದಾರೆ. ಅವರ 'ದೈವವಿಚ್ಛಿನ ಭಾರ್ಯ' ಇದೀಗ ಕನ್ನಡಕ್ಕೆ ಅನುವಾದವಾದುದು.

ಈಗ ಕನ್ನಡದಲ್ಲಿ ಸ್ವತಂತ್ರ ಕಾದಂಬರಿಗಳ ಯುಗ ಆರಂಭವಾಗಿದೆ. ಆದರೂ ಅನ್ಯಭಾಷೆಗಳಿಂದ ನಮಗೆ ಅನುವಾದಗಳು ಬೇಕೇಬೇಕು. ಈ ಕೆಲಸ ವ್ಯವಸ್ಥಿತ ರೀತಿಯಿಂದ ಇದೀಗ ನಡೆಯುವ ಕಾಲ ಬಂದಿದೆ. ಆರಂಭದಲ್ಲಿ ಪರಭಾಷೆಯ ಎಂತಹ ಕೃತಿಗಳನ್ನು ಅನುವಾದಿಸಿದರೂ ಕನ್ನಡ ವಾಚಕರು ಓದುತ್ತಿದ್ದರು. ಈಗ ಹಾಗಿಲ್ಲ. ಆದುದರಿಂದ ಅನುವಾದಕರು ಹೆಚ್ಚು ಜಾಗೃತಿ ವಹಿಸಬೇಕಾಗುವುದು. ಕನ್ನಡಕ್ಕೆ ಹೊಸವೆನಿಸುವ—ಹೊಸ ಬೆಳಕನ್ನೀಯುವ— ಕೃತಿಗಳನ್ನಷ್ಟೇ ಸುಂದರವಾಗಿ ಅನುವಾದಮಾಡಿಕೊಡಬೇಕಾಗುವುದು.

ಇದೊಂದು ತೆಲುಗಿನ ಜನತೆಯ ಜೀವನವನ್ನು ಚಿತ್ರಿಸುವ ಕಾದಂಬರಿಯು. ಆದರೂ ವಸ್ತುವಿರಹನೆಯಲ್ಲಿ ವಿಸ್ತಾರ ಕಾಣದು. ರಾಧಾಕೃಷ್ಣನೆಂಬ ಸುಶಿಕ್ಷಿತ ಯುವಕನು ಪದ್ಮಾವತಿ ಎಂಬ ತರುಣಿಗೆ ಮರುಳಾಗಿ, ಅವಳ ಪ್ರೇಮಸಂಪಾದನೆಗಾಗಿ ಬೇಕಾದ ಸಾಹಸಕ್ಕೂ ಹೇಯ ಕೃತ್ಯಗಳಿಗೂ ಇಳಿಯುವುದೇ ಇಲ್ಲಿಯ ಕಥಾಸೂತ್ರ. ಆ ತರುಣ ಅವಳನ್ನು ಅಷ್ಟು ಮೋಹಿಸುವಂತೆ ಅಕೆಯ ಸೌಂದರ್ಯವಿತ್ತು. ಅದನ್ನು ಲೇಖಕರು ಚೆನ್ನಾಗಿ ವರ್ಣಿಸಿದ್ದಾರೆ. ಇಂದ್ರಿಯಸುಖ ಲಾಲಸೆಯನ್ನು ತಡೆದು ಉದಾತ್ತ ಧ್ಯೇಯದತ್ತ ಮನಸ್ಸನ್ನು ಹಚ್ಚುವುದು ಸಂಸ್ಕೃತಿಯ ಲಕ್ಷಣ. ಆ ಲಕ್ಷಣ ಇಲ್ಲಿಯ ಎರಡೂ ಪಾತ್ರಗಳಲ್ಲಿ ಕಂಡುಬರುವುದಿಲ್ಲ. ಸಮಾಜ ಸುಧಾರಕರಾದ ಲೇಖಕರು, ಇಂದಿನ ಯುಗದ ತರುಣ ತರುಣಿಯರ—ಆ ಪ್ರಾಯದ—ವಿಶೃಂಖಲವೃತ್ತಿಗೆ ರೋಸಿಕೊಂಡು ಬರೆದಂತಿದೆ ಈ ಕೃತಿ. ಲೇಖಕರು ಒಂದು ನೈಜವಾದ ಚಿತ್ರವನ್ನು ಇಲ್ಲಿ ಕೊಟ್ಟುಬಿಟ್ಟಿದ್ದಾರೆ. ಯಾವ ಜೋಧೆಗೂ ಅವರು ಇಳಿದಿಲ್ಲ. ಜನ ಓದಿ ಅರ್ಥಮಾಡಿಕೊಳ್ಳಬೇಕು, ಪಾಠ ಕಲಿತುಕೊಳ್ಳಬೇಕೆಂಬುದೇ ಅವರ ಉದ್ದೇಶ. ಕಲೆಗಾರಿಕೆಯಲ್ಲಿ ಈ ರೀತಿಯೊಂದು ಕುಶಲ ಕಲೆ ಎನ್ನಿಸಿಕೊಳ್ಳುವುದು; ಆದರೆ ಅದನ್ನು ಅರ್ಥಮಾಡಿಕೊಳ್ಳದೆ ಹೋದರೆ, ಜನತೆಯ ಮೇಲೆ ವಿಪರೀತ ಪರಿಣಾಮವಾಗುವುದೂ ಸ್ವಾಭಾವಿಕ.

ಇದರಲ್ಲಿ ರಾಧಾಕೃಷ್ಣನ ಬಾಲ್ಯ, ಒಲ್ಲದವರು ಬಡವರನ್ನು ತಿರಸ್ಕರಿಸುವ ರೀತಿ, ರಾಧಾ ಪದ್ಮಾವತಿಯರಲ್ಲಿಯ ಪ್ರಣಯ ಪ್ರಸಂಗಗಳು ಚೆನ್ನಾಗಿ ಚಿತ್ರಿತವಾಗಿವೆ. ಕೆಲವೆಡೆಯಲ್ಲಿ ಉದ್ರೇಕಗೊಳಿಸುವಂತೆಯೂ ಇವೆ. ಆಗ ಕನ್ನಡ ದೃಷ್ಟಿಗೆ ಸ್ವಲ್ಪ ಅತಿರಂಜಿತ ವರ್ಣನೆಗಳೆಂದೂ ತೋರಬಹುದು. ಆದರೂ ಕೆಲವು ಪ್ರಸಂಗಗಳಿಗೆ ಹೆಣ್ಣಲೆಯಾಗಿ ಬರುವ ನಿಸರ್ಗದ ರಮಣೀಯ ವರ್ಣನೆಯು ಯಾರ ಮನಸ್ಸನ್ನೂ ಸೆಳೆಯುವಂತಿದೆ.

ಅನುವಾದಕರ ಭಾಷೆ ಸರಳ ಸುಂದರವಾಗಿದೆ. ಅಚ್ಚಿನ ದೋಷಗಳಾಗದಂತೆ ಗ್ರಂಥ ಮುದ್ರಣವಾಗಿದ್ದರೆ ಇನ್ನೂ ಚೆನ್ನಾಗಿತ್ತು.

—ಮಿರ್ಜಿ ಅಣ್ಣಾರಾಯರು

ಲೇಖನ ಕಲೆ

ಲೇಖಕರು : ಶ್ರೀ. ಮಿರ್ಜಿ ಅಣ್ಣಾರಾಯರು ಕನ್ನಡ ಸಾಹಿತ್ಯ ಶಂತ್ರ ಪರಿಚಯ - ಗ್ರಂಥಮಾಲೆ.

ಒಳಪಿಡಿಯಲ್ಲಿ ವಿವೇಚಿಸಿದಂತೆ ಇಲ್ಲಿ ೨೧ ವಿಷಯಗಳು ಅಡಕವಾಗಿವೆ. ಮೊದಲನೆಯದಾದ ಲೇಖನಕಲೆಯು ಪ್ರಕರಣವು ಪ್ರಸ್ತುತ ಗ್ರಂಥಕ್ಕೆ ತಲೆಬರೆಹವಾಗಿ ಪರಿಣಮಿಸಿದೆ. ಕನ್ನಡದಲ್ಲಿ ಈ ಬಗೆಯ ಆಧಾರ ಗ್ರಂಥಗಳು ಅಪರೂಪವಾಗಿ ಕಣ್ಣಿಗೆ ಬಿದ್ದರೂ ಆಂಗ್ಲಭಾಷೆಯಲ್ಲಿ ಎ. ಟಿ. ಕ್ವಿಲರಕೂಚ್ ಎಂಬ ಪ್ರತಿಭಾವಂತ ಲೇಖಕನ The Art of Reading, The Art of Writing ಎಂಬ ಸರ್ವಮಾನ್ಯವಾದ ಗ್ರಂಥಗಳಂತಹವು ಇವೆ. ಅವುಗಳನ್ನೋದಿದವರಿಗೆ ತಂತ್ರಗ್ರಂಥ ಬರೆಯುವವರ ಯೋಗ್ಯತೆ ಎಂತಹುದಿರಬೇಕೆಂಬುದು ಸ್ಪಷ್ಟವಾಗದಿರದು. ಮಿರ್ಜಿಯವರ ಈ ಗ್ರಂಥವಾದರೂ ಆ ಮಾದರಿಯ ಗ್ರಂಥಗಳ ಮಾಲಿಕೆಗೆ ಸೇರಬೇಕು.

ಲೇಖನ ಒಂದು ಕಲೆ. ಅದಕ್ಕೆ ಸ್ಫೂರ್ತಿ ಒಂದು ಅಂಶವೆಂದು ಹೇಳುತ್ತ ಲೇಖಕರು ಶಬ್ದರಚನೆ, ಅಲಂಕಾರ, ಶೈಲಿಯನ್ನು ಕಡೆಗಣಿಸಲಾಗದೆಂದು ಹೊಸ ಲೇಖಕರಿಗೆ ಪ್ರಾರಂಭಕ್ಕೇ ಎಚ್ಚರ ಕೊಡುವರು. ಏನೂ ಗೊತ್ತಿದ್ದರೂ ಅನುಭವಗಳ ಆಯ್ಕೆಗೆ ಮಹತ್ತ್ವದ ಸ್ಥಾನವಿದೆ ಎಂದು ಸುಂದಿಸುವಾಗ 'ಅಶಾಂತಿಪರ್ವ'ದ ಪಾತ್ರಪಾರಿಪೋಷಣೆಯ ರೀತಿ ಬಂದಿರುವುದು.

'ಸಾಮಾನ್ಯಸ್ವರೂಪ'ವೆಂಬ ಭಾಗದಲ್ಲಿ ಶುದ್ಧ ಬರೆಹದ ಉಹಾಪೋಹವಿದ. ಗ್ರಾಮ್ಯಶಬ್ದಗಳಿಗೂ ಅಶುದ್ಧ ಪ್ರಯೋಗಗಳಿಗೂ ಸ್ಥಾನವಿರಬಾರದೆಂದಾಗ ಯಾರೂ ಒಪ್ಪುವರು. 'ಸಮುಚಿತ ಶೈಲಿ' ಎಂದರೆ ಅಲಂಕಾರದ್ದಲ್ಲ. ಆದರೆ ಸಮರ್ಪಕವಾದುದು ಅಥವಾ ಕೊರತೆಯಿಲ್ಲದ್ದು ಎಂದು ಗ್ರಂಥಕಾರರು ಅರ್ಥ ಹೇಳುವರು. ಲೆಕ್ಕಣಿಕೆ ಹಿಡಿಯುವಾಗ ಎಲ್ಲಕ್ಕೂ ಮೊದಲು ವಿಚಾರದ ಸ್ಪಷ್ಟತೆ ಬೇಕು. ಮುಖ್ಯವಾಗಿ ಹೋರಾಟವಿಲ್ಲದಿದ್ದರೆ ಕಲಾಕೃತಿ ಸಪ್ಪೆಯಾಗುವುದು. 'ಕಥನಕಲೆಯ' ವಿಭಾಗದಲ್ಲಿ — ಕುತೂಹಲ ಹುಟ್ಟಿಸಿ ಕೊನೆಯವರೆಗೂ ಒಯ್ಯುವ ಸಾಮರ್ಥ್ಯ ಅವಶ್ಯವೆಂದು ಹೇಳಿದೆ. ಅಲ್ಲದೆ ಜಿಜ್ಞಾಸೆ, ಉತ್ಕಟತೆ, ವಿಸ್ಮಯ ಈ ಮೂರು ಭಾವನೆಗಳ ಮೇಲೆ ಕಥಾನಕವಿರಬೇಕೆಂಬುದು ನಿಜ.

ನಾಟಕದ ಪ್ರಶ್ನೆ ಹೊರಟಾಗ ಅದರ ಪಾತ್ರರಚನೆಯಲ್ಲಿ ಹೊಸತನವಿರಬೇಕು ಎಂದು ಲೇಖಕರ ಮತ. ಅದಕ್ಕೆ ಶ್ರೀ ರಂಗರ 'ಮನೆಯಲ್ಲಿ ಮಹಾಸಭೆ'ಯ ಉದಾಹರಣೆ ಉಂಟು. ಅಲ್ಲಲ್ಲಿ ಸ್ವಗತ ಭಾಷಣಗಳಿದ್ದರೆ—ಕಂಪನಿ ನಾಟಕದಂತೆ—ರಸಭಾವ ತಳೆಯಲು ಓದುಗರಿಗೆ ಶಕ್ಯವಿಲ್ಲ.

(೨೨೨ನೆಯ ಪುಟ ನೋಡಿರಿ)

ಸಾಹಿತ್ಯವಿಚಾರ ★

'ವಿಚಾರಿ'ಯ
ಕಚೇರಿಯಿಂದ

ನಮ್ಮ ವಿಮರ್ಶಾವಿಷಯಕ ಅನಾಸ್ಥೆ

ಕಾಸರಗೋಡಿನ ಸಾಹಿತ್ಯ ಸಮ್ಮೇಳನದಲ್ಲಿಯ ಸಾಹಿತ್ಯಗೋಷ್ಠಿಯ ಅಧ್ಯಕ್ಷೀಯ ಭಾಷಣ ಸಾಮಾನ್ಯವಾಗಿ ಸಾಹಿತಿಗಳನ್ನು ಕೆರಳಿಸುವಂತಹದಾಗಿತ್ತು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇಂದಿನ ಕನ್ನಡ ಸಾಹಿತ್ಯಪ್ರಪಂಚವನ್ನು, ಸ್ಥೂಲವಾಗಿಯೂ, ಕೂಲಂಕಷವಾಗಿಯೂ ಪರಿಶೀಲಿಸಿ, ಅದರ ಆಗು-ಹೋಗುಗಳನ್ನು, ಕುಂದು-ಕೊರತೆಗಳನ್ನು, ನಿರ್ದಾಕ್ಷಿಣ್ಯವಾಗಿ ಅದು ನಿರ್ದೇಶಿಸುವಂತಹದಾಗಿದೆ ಎಂಬುದನ್ನು ಹೇಳಿದರೆ ಅದೆಷ್ಟು ಜನರು ಒಪ್ಪಿಕೊಳ್ಳಬಹುದೊ! ಆ ಭಾಷಣದಲ್ಲಿ ಅಧ್ಯಕ್ಷರು ಮಾಡಿದ ಎಲ್ಲ ವಿಧಾನಗಳನ್ನು ಎಲ್ಲರೂ ಒಪ್ಪಲೇಬೇಕೆಂದಿಲ್ಲ. ಕೆಲವು ಭಾಗವನ್ನು ಕೆಲವು ಜನ ಒಪ್ಪಬಹುದು. ಇದುವರೆಗೆ ಅಲ್ಲಿಯ ಅಭಿಪ್ರಾಯಗಳನ್ನು ಟೀಕಿಸಿಯಾಗಲಿ, ಖಂಡಿಸಿಯಾಗಲಿ ಯಾವ ಉಲ್ಲೇಖವೂ ಬಾರದೆ ಇದ್ದುದನ್ನು ನೆನೆದಾಗ, ಅಲ್ಲಿಯ ನಿಕೃಷ್ಟವಾದ ಅಭಿಪ್ರಾಯಗಳನ್ನು ಕನ್ನಡ ಸಾಹಿತಿಗಳು ತಮ್ಮ ಮೌನದಿಂದ ಒಪ್ಪಿರಬಹುದೇ ಎಂಬ ಸಂಶಯಕ್ಕೂ ಆಸ್ಪದ ಉಂಟಾಗಿದೆ. ಅಥವಾ ಯಾವ ವಿಮರ್ಶಕ ಯಾವ ಮಾತನ್ನು ಹೇಳಿದರೇನು, ಎಷ್ಟು ಕಟುವಾಗಿ ಟೀಕಿಸಿದರೇನು—ಎಂಬ ಆತ್ಮಗೌರವಕ್ಕಾಗಿಯೊ, ಮಾಡಿದ ಟೀಕೆಯನ್ನು ಎದುರಿಸಿ ಎದುರಾಗಿ ಮಾತುಹೇಳುವ ಧೈರ್ಯವಿಲ್ಲದ್ದಕ್ಕಾಗಿಯೊ, ಹೇಳಿದರೇನು ಹೇಳದಿದ್ದರೇನು ಎಂಬ ಅನಾಸ್ಥೆಗಾಗಿಯೂ, ಯಾವ ಪ್ರತಿಘಟನೆಯೂ ಬರಲಿಲ್ಲ. ಈ ಪರಿಸ್ಥಿತಿ ವಿಚಿತ್ರವಲ್ಲದಿದ್ದರೂ ನಿಜಸ್ವರೂಪದರ್ಶಕವಾಗಿದೆಯೆಂದು ಹೇಳಬಹುದಾಗಿದೆ. ಆ ಪರಿಸ್ಥಿತಿಯನ್ನೇ ಕೂಲಂಕಷವಾಗಿ ನೋಡಿ ಶ್ರೀರಂಗರು ಮಾಡಿದ ಅಪಾದನೆಗಳು ಯಾವ ಮಟ್ಟಿಗೆ ಯಥಾಯೋಗ್ಯವಾಗಿವೆ, ಅಂಥ ಪರಿಸ್ಥಿತಿ ಉಂಟಾಗಲಿಕ್ಕೆ ಇನ್ನಾವ ಬೇರೆಯಾದ ಕಾರಣಗಳಿರಬಹುದೆ— ಎಂದು ಕೇಳಿಕೊಳ್ಳಲೂ ಬಹುದಾಗಿದೆ.

ತಮ್ಮ ಭಾಷಣದಲ್ಲಿ ಶ್ರೀರಂಗರು ಮೂರು ವಿಧಾನಗಳನ್ನು ಸ್ಪಷ್ಟವಾಗಿ ಮಾಡಿದ್ದಾರೆ: ಇಂದು ನಮ್ಮಲ್ಲಿ ಓದುವವರಿಗಿಂತಲೂ ಬರೆಯುವವರು ಹೆಚ್ಚಾಗುವಂತಹ ಪೂರ್ವಸೂಚನೆ ನಮ್ಮ ಸಾಹಿತ್ಯಕ್ಷೇತ್ರದಲ್ಲಿ ಒಡಮೂಡುತ್ತಿದೆ. ಕವಿಗಳಿದ್ದರೂ ಕಾವ್ಯವಿಲ್ಲ, ಸಾಹಿತಿಗಳಿದ್ದರೂ ಸಾಹಿತ್ಯವಿಲ್ಲ ಎನ್ನುವ ಹೀನಾಯದ ಮಾರ್ಗದಲ್ಲಿ ಸಾಹಿತ್ಯ ಮುಂದು (ಹಿಂದು)ವರೆಯುತ್ತಿದೆ. ಅವರ ಹೇಳಿಕೆಯಂತೆ ಈ ದುಃಸ್ಥಿತಿಗೆ ಕಾರಣ. ವೆಂದರೆ ನಮ್ಮಲ್ಲಿ ನಿಜವಾದ ವಿಮರ್ಶೆಯ ಅಭಾವ. ಇದು ಶ್ರೀರಂಗರ ಎರಡನೆಯ ವಿಧಾನ. ಇಂದು ನಮ್ಮಲ್ಲಿ ವಿಮರ್ಶೆಯೊಂದು ತತ್ತ್ವ, ಅದೊಂದು ಶಾಸ್ತ್ರ ಎಂಬ ಮಾತನ್ನು ತತ್ತ್ವದ ದೃಷ್ಟಿಯಿಂದ ಕೆಲಜನರು ಒಪ್ಪಬಹುದಾದರೂ, ವಿಮರ್ಶೆಯ ಅಭ್ಯಾಸಕ್ಕೆ ತತ್ತ್ವಶಾಸ್ತ್ರಗಳ ಮನ್ನಣೆಕೊಟ್ಟು ಅದನ್ನು ಯೋಗ್ಯವಾದ ರೀತಿಯಲ್ಲಿ ವ್ಯಾಸಂಗಮಾಡಬೇಕು, ಮಾಡುವುದು ಅವಶ್ಯವೆಂಬುದನ್ನು ಯಾರೂ ಒಪ್ಪುತ್ತಿಲ್ಲ. ಇಂಥ ತಾತ್ತ್ವಿಕ ಅನಾಸ್ಥೆ ಒಂದೆಡೆಯಾದರೆ, ಗುಂಪುಗೇಡಿಗಳ ಸಂಕುಚಿತದೃಷ್ಟಿ ಇನ್ನೊಂದೆಡೆ. ಹೀಗಾಗಿ ಯಾವುದೊಂದು ಹೊಸ ಕೃತಿಯ ಬಗ್ಗೆ ನಿಕೃಷ್ಟವಾದ ಅಭಿಪ್ರಾಯವಾಗಲಿ, ಸಮಗ್ರವಾದ, ಕೂಲಂಕಷವಾದ, ಮಾರ್ಗದರ್ಶಿಯಾದ ವಿಮರ್ಶೆಯಾಗಲಿ, ಅಸಾಧ್ಯವಾಗಿದೆ. ವಿಮರ್ಶೆಯ ಅಭಾವದ ಮೂಲಕ ಸಾಹಿತ್ಯದ ಬೆಳೆವಣಿಗೆ ಕುಂಠಿತವಾಗುವುದು ಅನಿವಾರ್ಯ. ಹಿರಿದಾದ ಕೃತಿಗೆ ಮನ್ನಣೆಯಿಲ್ಲ. ಹಿರಿಯನಲ್ಲದ ಕೃತಿಗೆ ಸಲ್ಲದ ಮಹತ್ತ್ವ ಸಿಕ್ಕುವುದು ಸಾಧ್ಯವಾಗುವಷ್ಟು ಅರಾಜಕತೆ ಸಾಹಿತ್ಯಪ್ರಪಂಚದಲ್ಲಿ ನಡೆದಾಗ, ಆ ಪ್ರಪಂಚದಲ್ಲಿ ಸ್ವಾಸ್ಥ್ಯವೂ ಸಾಧ್ಯವಿಲ್ಲ; ಪ್ರಗತಿಯೂ ಸಾಧ್ಯವಿಲ್ಲ. ಶ್ರೀರಂಗರ ಮೂರನೆಯ ವಿಧಾನವೆಂದರೆ ನಮ್ಮಲ್ಲಿಯ ಯಾವ ಸಾಹಿತ್ಯಸಂಸ್ಥೆಯೂ ಪ್ರಚಾರದ ಕೆಲಸವನ್ನು ಪರಿಣಾಮಕಾರಕವಾಗಿ ಮಾಡಿಲ್ಲವಾದ್ದರಿಂದ ನಮ್ಮ ಸಾಹಿತ್ಯದ ಪ್ರಗತಿ ಹೊರಗಿನವರಿಗೆ ತಿಳಿಯದೆ ಇದ್ದುದರಿಂದ, ಆಂತರ ಪ್ರಾಂತೀಯ ರಂಗದಲ್ಲಿ ಕನ್ನಡ ಸಾಹಿತ್ಯಕ್ಕೆ, ಕನ್ನಡ ಸಾಹಿತಿಗಳಿಗೆ ಯಾವ ಮನ್ನಣೆಯೂ ಇಲ್ಲವಾಗಿದೆ. ಈ ಎಲ್ಲ ಕೊರತೆಗಳನ್ನು ಹೋಗಲಾಡಿಸಲು ಸಮರ್ಥವಾದಂತಹ ಸಾಹಿತ್ಯದ 'ಪಾರ್ಲಮೆಂಟು' ನಮ್ಮಲ್ಲಿ ಯೋಗ್ಯವಾದ ಅಧಿಕಾರ-ಗೌರವಗಳಿಂದ ಕೂಡಿಕೊಂಡು ಏರ್ಪಾಡಾಗಬೇಕು—ಎಂಬ ಸೂಚನೆಯನ್ನು ಕೊಟ್ಟಿದ್ದಾರೆ. ಲೇಖಕನ ಹಕ್ಕು-ಹೊಣೆಗಾರಿಕೆಗಳನ್ನು ತಿಳಿಸಿಹೇಳುವ, ಸಾಹಿತ್ಯರಾಜ್ಯದಲ್ಲಿ ಗೆರೆನಿಲ್ಲಬೇಕಾದ ಮೂಲ್ಯಗಳನ್ನು ಎತ್ತಿತೋರಿಸುವ, ಯೋಗ್ಯವಾದ ಮಾರ್ಗದರ್ಶಕರ ಮೂಲಕ ಪ್ರಗತಿಯನ್ನು ಸಾಧಿಸಲು ಸಮರ್ಥವಾಗಬಹುದಾದಂತಹ ಅಸ್ಥಾನ ಅಗತ್ಯ, ಅದರ ಹೊರತು ನಾಳಿನ ಬಗೆಯಲ್ಲಿ ಯಾವ ಆಶೆಯನ್ನು ಇಟ್ಟುಕೊಳ್ಳಲು ಸಾಧ್ಯವಿಲ್ಲವೆಂದೂ ಸೂಚಿಸಿದ್ದಾರೆ.

ಸ್ಥೂಲವಾಗಿ ಶ್ರೀರಂಗರ ಈ ಆಪಾದನೆಗಳನ್ನು ಎಲ್ಲರೂ ಒಪ್ಪಬೇಕಾಗುವುದೇನೊ! ಇಂದಿನ ದುರವಸ್ಥೆಗೆ ವಿಮರ್ಶೆಯ ಅಭಾವದ ಜೊತೆಯಲ್ಲಿ ಇನ್ನೂ ಒಂದು ಕಾರಣವನ್ನು ಹೇಳಬಹುದೆಂದು ತೋರುತ್ತದೆ. ಅದೆಂದರೆ ಇಂದಿನ ನಮ್ಮ ಸಾಹಿತಿಗಳಲ್ಲಿ ಕಂಡುಬರುವ ಪರಸ್ಪರ ದ್ವೇಷಾಸೂಯೆಗಳು; ಅನ್ಯೋನ್ಯಸಂಪರ್ಕದ ಅಭಾವ; ಒಂದೆಡೆಸೇರಿ ಭಿನ್ನಾಭಿಪ್ರಾಯಗಳನ್ನಾಗಲಿ ಪ್ರಗತಿಗೆ ಅಗತ್ಯವಾದ ಧೋರಣೆಗಳನ್ನಾಗಲಿ ಚರ್ಚಿಸುವ ಬಗೆಯಲ್ಲಿ ಎಲ್ಲರೂ ವ್ಯಕ್ತಪಡಿಸುವ ಅಸ್ಪಷ್ಟವಾದ ಅಸಮ್ಮತಿ. ಸಾಹಿತ್ಯ ಸಮ್ಮೇಳನದಂತಹ ಸಂದರ್ಭಗಳಲ್ಲಿ ಇಂತಹ ಕೆಲಸ ನಡೆಯಬೇಕು ಎನ್ನುವುದು ಆಶೆ. ಆದರೆ ಇಂದು ನಮ್ಮ ಸಾಹಿತ್ಯ ಸಮ್ಮೇಳನ ಕೂಡ ಹೆಸರಿನಲ್ಲಿ ಮಾತ್ರ 'ಸಾಹಿತ್ಯ ಸಮ್ಮೇಳನವಾಗಿ' ಉಳಿದಿದೆ' ಎಂಬುದು ಅನುಭವದ ಕಟುಸತ್ಯವಾಗಿದೆ. ಕನ್ನಡ ಏಕೀಕರಣ, ಪ್ರಾಂತೀಕರಣ, ಕ್ರಾಂತೀಕರಣ, ಭ್ರಾಂತೀಕರಣದ ಸಾವೀಸಮಸ್ಯೆಗಳನ್ನೊಳಗೊಂಡ ಅಧ್ಯಕ್ಷೀಯ ಭಾಷಣದ ಹಿರಿಹಿರಿಹಿಗ್ಗಿಗಳನ್ನು ಓದಿದ್ದನ್ನು ಕೇಳಬೇಕಾಗಬಹುದಾದ ದುರ್ಧರಪ್ರಸಂಗಕ್ಕೆ ಹೆದರಿಕೊಂಡೇ ಎಷ್ಟೋಜನ ಸಮ್ಮೇಳನದಿಂದ ದೂರವಿದ್ದಿರಲು ಸಾಕು. ಇದೂ ಅಲ್ಲದೆ, ಸಾಹಿತ್ಯಸಮ್ಮೇಳನಗಳಲ್ಲಿ ಸಾಹಿತ್ಯಗೋಷ್ಠಿಯೊಂದನ್ನು ಹೊರತುಪಡಿಸಿದರೆ, ಉಳಿದ ಎರಡು ಎರಡೂವರೆ ದಿವಸದ ಕಾರ್ಯಕ್ರಮ ಯಾವ ಉದ್ದೇಶಸಾಧನೆಗಾಗಿ ನಡೆಯುತ್ತದೆಯೋ ಎಂಬುದನ್ನು ಅದರ ಸಂಚಾಲಕರೇ ಹೇಳಬಹುದು. ಸಮ್ಮೇಳನದಂತಹ ಒಂದೇ ಒಂದು ಸಂದರ್ಭ, ಸಾಹಿತಿಗಳು ಒಂದೆಡೆ ಕಲೆತು ಒಬ್ಬರೊಬ್ಬರ ಪರಿಚಯವಾಗಲಿಕ್ಕೆ, ಹತ್ತು ವಿಷಯಗಳನ್ನು ತಿಳಿದುಕೊಳ್ಳಲಿಕ್ಕೆ, ತಿಳಿಸಲಿಕ್ಕೆ ಉಪಯುಕ್ತವಾಗುವುದು ವಿಹಿತನೆಂಬ ಮಾತನ್ನೂ ನಾವು ಮರೆಯುತ್ತಿದ್ದೇವೆ. ಸಾಹಿತಿಗಳ ಅನ್ಯೋನ್ಯ ಸಂಪರ್ಕ-ಸೌಹಾರ್ದಗಳು, ಪರಸ್ಪರ ವಿಚಾರವಿನಿಮಯ, ಸಾಧ್ಯವಾದ ಹೊರತು ಸಾಹಿತ್ಯಕ್ಕೆ ಪ್ರಗತಿ ಸಾಧ್ಯವೆಂದು ಕಾಣುವದಿಲ್ಲ. ಇಂದು ನಮ್ಮ ಸಾಹಿತಿಗಳು ತಮ್ಮ ಎಲ್ಲ ವೈಮನಸ್ಯಗಳನ್ನೂ ಮರೆತು, ಶುದ್ಧ ಹೃದಯದ ತಳಹದಿಯನ್ನೇಲೆಯೆ ನಿಲ್ಲಬೇಕಾದ ಸಾಹಿತ್ಯದ ನಿರ್ಮಾತೃಗಳು ತಾವು—ಎಂಬ ಹೆಮ್ಮೆಯಿಂದ ಪ್ರೇರಿತರಾಗಿ, ಒಂದು ನಾಡಿನ ಜೀವನದ ಛುರಿಯನ್ನು ನಿರ್ಮಲಗೊಳಿಸುವ ಹೊಣೆಗಾರಿಕೆಯನ್ನು ಹೊತ್ತವರೆಂಬ ತಿಳಿವಿನಿಂದ ಒಟ್ಟುಗೂಡುವಂತಾದರೆ ಮಾತ್ರ, ಜನಜೀವನದ ಜೀವಾಳವನ್ನು ಹೊಸದಾದ ಜೀತನದಿಂದ ಜೀತಬಿಸುವಂತೆ ಮಾಡಬಲ್ಲ ಸಾಹಿತ್ಯನಿರ್ಮಿತಿ ಸಾಧ್ಯ. ಇಂದು ಬಹುಭಾಗದ ಸಾಹಿತ್ಯ, ಸಾಹಿತಿಯ ಕೂಪಮಂಡೂಕವೃತ್ತಿಯ ಪರಿಣಾಮವಾಗಿ ಜೀತನ ವೈಯಕ್ತಿಕ ಸೊತ್ತಾಗಿದೆ. ಜನಜೀವನದೊಡನೆ ಅದರ ಸಂಬಂಧ ತಪ್ಪಿಹೋಗಿದೆ.

ಸಾಹಿತ್ಯ ಪ್ರಪಂಚವನ್ನು ಹದಗೆಡಿಸುವ ಗುಂಪುಗೇಡಿತನದ ವಿಷಯದಲ್ಲಿ ಹೆಚ್ಚಿಗೆ ಬರೆಯಬೇಕಿಲ್ಲ. ನಮ್ಮಲ್ಲಿ ಸ್ಪಷ್ಟವಾಗಿಯಾಗಲಿ, ಅಸ್ಪಷ್ಟವಾಗಿಯಾಗಲಿ ಗುಂಪುಗಳಿವೆ ಎಂಬ ಮಾತನ್ನು ನಿರ್ದಾಕ್ಷಿಣ್ಯವಾಗಿ ಒಪ್ಪೋಣ ಸರಿಯಾದ ರೀತಿಯಲ್ಲಿ ಗುಂಪುಗಳನ್ನು ಕಟ್ಟಿಕೊಂಡು ಕೆಲಸಮಾಡಿದರೆ ಸಾಹಿತ್ಯಕ್ಕೆ ಯಾವ ಬಾಧಕವೂ ಇಲ್ಲ. ಹಿಂದುಸ್ತಾನದ ಯಾವ ಪ್ರಾಂತೀಯ ಸಾಹಿತ್ಯದ ಪರಂಪರೆಯನ್ನು ನೋಡಿದರೂ ಒಂದಿಲ್ಲೊಂದು ಬಗೆಯ ಗುಂಪುಬುರುಕುತನ ಎಲ್ಲೆಲ್ಲಿಯೂ ಕಣ್ಣಿದುರು ನಿಲ್ಲಬಹುದು. ಕೆಲವೊಂದು ಮೂಲತತ್ತ್ವಗಳ ವಿಚಾರದಲ್ಲಿ ಭಿನ್ನಾಭಿಪ್ರಾಯವಿದ್ದಲ್ಲಿ, ಗುಂಪುಗಳು ಹುಟ್ಟಿಕೊಳ್ಳುವುದು ಅನಿವಾರ್ಯ. ಪ್ರಾಮಾಣಿಕವಾದ ಮತಭೇದಗಳನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡು ತಂತಮ್ಮ ಒಲವು, ಆಶೆ, ಆಪೇಕ್ಷೆಗಳಿಗೆ ಸಹಿಯಾಗಿ ಕೆಲಸಮಾಡಬೇಕಿದ್ದವು ಗುಂಪುಗಳು ಯಾವಾಗಲೂ ಅಪೇಕ್ಷಣೀಯವಾದುವುಗಳು. ಆದರೆ ಗುಂಪುಗೇಡಿತನ ಸಾಧಿಸಬೇಕಾದ ಉದ್ದೇಶವನ್ನೇ ಹಾಳುಮಾಡುವಂತಾದಾಗ ತಾತ್ಕ್ಷಣಿಕವಾದ ತಳಹದಿಗಳನ್ನು ಬಿಟ್ಟು ಕೇವಲ ಪರಸ್ಪರ ಪ್ರಶಂಸೆಗಾಗಿ ಗುಂಪುಗಳು ಬೆಳೆದು ನಿಲ್ಲತೊಡಗಿದಾಗ, ಹಾನಿಯು ಹೊರತು ಜೀರೆ ಯಾವ ಪರಿಣಾಮವೂ ಸಾಧ್ಯವಿಲ್ಲ. ಇಂತಹ ಪರಿಸ್ಥಿತಿಯಿಂದ ಸಾಹಿತ್ಯಕ್ಕೆ ಅನ್ಯಾಯ. ಸಾಹಿತಿಗೆ ಅವಮಾನ ಕೆಲವೊಂದು ದೃಷ್ಟಿಯ, ರೀತಿಯ, ಧ್ಯೇಯದ ಅನುಯಾಯಿಗಳು ಆಯಾ ಮಾರ್ಗವನ್ನು ಹಿಡಿದು ಮುಂದುವರೆದ ಸಾಹಿತಿಗಳನ್ನು ಅನುಸರಿಸುವುದೂ, ಅವರ ಬಗೆಯಲ್ಲಿ ಆದರಭಾವವನ್ನು ತಾಳುವುದೂ ತಪ್ಪೆಂದು ಯಾರೂ ಹೇಳಲಾರರು. ಅದು ಅವರವರ ಅರಿವು, ಶ್ರದ್ಧೆ, ವಿಶ್ವಾಸಗಳ ಪರಿಣಾಮ. ಆದರೆ ಎಲ್ಲ ಸಾಹಿತ್ಯದ ದಾರಿಯೂ ತಮ್ಮದೇ ಎಂದಾಗಲಿ, ಎಲ್ಲರೂ ಅದನ್ನೇ ಅನುಕರಿಸಬೇಕೆಂದಾಗಲಿ, ಬೇರೆಯಾದ ದಾರಿಯಲ್ಲಿ ಮುಂದುವರೆಯುತ್ತಿರುವವರು ತಮ್ಮ ವೈರಿಗಳೆಂದು ಭಾವಿಸುವುದಾಗಲಿ ಸಂಕೋಚದ ವೃತ್ತಿ. ಈ ಸಂಕುಚಿತವೃತ್ತಿಯೇ ಬೆಳೆಯುತ್ತಾ ಬಂದ ರೀತಿಯಲ್ಲಿ ಗುಂಪುಗಳನ್ನು ಕಟ್ಟುವ ವಿಷಮಶಕ್ತಿಯಾಗಿ ಪರಿಣಮಿಸುವುದುಂಟು.

ಎಲ್ಲಕ್ಕೂ ಮಿಗಿಲಾಗಿ ಈ ಪರಿಸ್ಥಿತಿಯೇ ನಮ್ಮಲ್ಲಿಯ ದುಃಸ್ಥಿತಿಗೆ ಕಾರಣವಾಗಿದೆ ಎಂದೂ ಹೇಳಬಹುದು. ನಮ್ಮಲ್ಲಿ ಒಳ್ಳೆಯ ವಿಮರ್ಶೆಯ ಅಭಾವವಾದರೂ ಇದರ ಪರಿಣಾಮವೇ. ಯಾವುದಾದರೊಂದು ಹೊಸದಾದ ಕೃತಿಯ ವಿಷಯದಲ್ಲಿ ಬಂದ ವಿಮರ್ಶೆಯನ್ನು ಅದರ ಕರ್ತೃವು ಯಾವಾಗಲೂ ಸಂಶಯಿತ ದೃಷ್ಟಿಯಿಂದಲೇ ನೋಡುತ್ತಾನೆ. ವಿಮರ್ಶೆಯು ಮುಖ್ಯ ಅಂಶಗಳು ಯಾವುವು ಎನ್ನುವುದಕ್ಕಿಂತ ಹೆಚ್ಚಾಗಿ ಅದನ್ನು ಬರೆದವರು ಯಾರು? ಎನ್ನುವುದರ ಕಡೆಗೆಯೇ ಈ ಜತನ ಲಕ್ಷ್ಯವಿರುತ್ತದೆ. ಒಂದುವೇಳೆ ಬಂದ ವಿಮರ್ಶೆ ಸಮರ್ಪಕವಾಗಿದ್ದರೂ ಅತ್ಮಸಮರ್ಥನೆಗೆಂದು ಒಂದಿಲ್ಲೊಂದು ಕಾರಣ ಹೇಳಿ

ವಿಮರ್ಶೆಯನ್ನು ಅಲ್ಲಗಳೆಯಲು ಯತ್ನಿಸುತ್ತಾನೆ. ತನ್ನಲ್ಲಿಯ ಪೂರ್ವಗ್ರಹಗಳನ್ನು ಇನ್ನೊಬ್ಬರಲ್ಲಿರಬಹುದಾದ—ಇದ್ದೇ ಇದೆ ಎಂದು ಆಪಾದಿಸಿದ—ಪೂರ್ವಗ್ರಹಗಳ ಮೂಲಕ ಸಮರ್ಥಿಸಿಕೊಳ್ಳಲೆಳಸುತ್ತಾನೆ. ಇಂಥವನಲ್ಲಿ ನಿಕೃಷ್ಟವಾದ, ನಿರ್ದಾಕ್ಷಿಣ್ಯವಾದ ವಿಮರ್ಶೆಯನ್ನು ಎದುರಿಸುವ ಧೈರ್ಯವಾದರೂ ಇರುವುದಿಲ್ಲ; ಅಥವಾ ಸಲ್ಲದ ಆತ್ಮಪ್ರಾಥಿನಿ ಅಡ್ಡಬರುವುದುಂಟು. ಮಾನವನಾಗಿದ್ದ ಸಾಹಿತಿ ಸರ್ವಥಾ ಸರ್ವಜ್ಞನಲ್ಲ. ವಿಮರ್ಶಕ ಕೇವಲ ಹುಳುಕು ಹುಡುಕುವ ಕೀಳುವೃತ್ತಿಯವನಲ್ಲ. ಉತ್ತಮ ವಿಮರ್ಶಕನ ಯೋಗ್ಯತೆ ಉತ್ತಮ ಸಾಹಿತಿಯ ಯೋಗ್ಯತೆಗಿಂತ ಯಾವ ವಿಧದಲ್ಲಿಯೂ ಕಡಮೆಯದಲ್ಲವೆಂಬ ಮಾತನ್ನು ನಮ್ಮ ಸಾಹಿತಿಗಳು ಮನಗಾಣಬೇಕಾಗಿದೆ. ಸಾಹಿತ್ಯದಲ್ಲಿಯ ಒಳ್ಳೆಯ ಗುಣಗಳನ್ನು ತಿಳಿದುಕೊಂಡು, ಸಹಾನುಭೂತಿಯಿಂದ ಅರ್ಥಮಾಡಿಕೊಂಡು, ತಾನು ಕಂಡ ಗುಣಗಳನ್ನು ತಾನು ಗೃಹಿಸಿದ ಅರ್ಥವನ್ನು ಇನ್ನೊಬ್ಬರಿಗೆ ತಿಳಿಸಿಕೊಡುವುದೇ ವಿಮರ್ಶಕನ ಆದ್ಯಕರ್ತವ್ಯವೆಂಬುದನ್ನು ವಿಮರ್ಶಕರೆಂಬುವವರಂತೆ ಸಾಹಿತಿಗಳೂ ತಿಳಿದುಕೊಳ್ಳಬೇಕಾದ ಅಗತ್ಯ ಬಂದಿದೆ. ಗುಣಗಳನ್ನು ಎತ್ತಿ ತೋರಿಸುವುದು ವಿಮರ್ಶಕನ ಕರ್ತವ್ಯವಾಗಿದ್ದರೂ, ತನ್ನ ಗಮನಕ್ಕೆ ಬಂದ ದೋಷಗಳನ್ನು ಬಯಲಿಗೆಳೆಯುವುದೂ ಅತನ ಕರ್ತವ್ಯ ಹೌದು. ಆದರೆ ಸಹಾನುಭೂತಿಯ ಮೂಲಕ ಲೇಖಕನ ಮೂಲ ಉದ್ದೇಶವನ್ನೂ, ಅತ ಅನುಸರಿಸಿದ ರೀತಿಯನ್ನೂ ತಿಳಿದುಕೊಂಡನಂತರವೇ ಆ ರೀತಿಯ ಅಥವಾ ಉದ್ದೇಶದ ದೋಷವಿಮರ್ಶೆಯನ್ನು ಮಾಡುವ ಅಧಿಕಾರ ವಿಮರ್ಶಕನಿಗೆ ಪ್ರಾಪ್ತವಾದೀತು.

ತತ್ತ್ವದ ಮಾತುಬಂದಾಗ ಈ ಎಲ್ಲ ವಿಷಯವನ್ನೂ ನಮ್ಮ ಸಾಹಿತಿಗಳೂ ವಿಮರ್ಶಕರೂ ಒಪ್ಪುತ್ತಾರೆ. ಕೃತಿಯೊಂದನ್ನೆತ್ತಿಕೊಂಡು ವಿಮರ್ಶೆಯೊಂದನ್ನು ಬರೆಯುವಾಗ ಮಾತ್ರ ಸರ್ವಕಾಲದಲ್ಲಿಯೂ ಅಗತ್ಯವಾದ ಸಹಾನುಭೂತಿ ಎಲ್ಲಿಯೋ ಮಾಯವಾಗುತ್ತದೆ. ಇದಕ್ಕೆ ಕಾರಣ ಮೇಲೆ ವಿವರಿಸಿದ ಗುಂಪುಗೇಡಿತನದ ಪರಿಣಾಮವಾದ ಪೂರ್ವಗ್ರಹವಿರಬಹುದು, ವಿಮರ್ಶಕನ ಸ್ವಭಾವಗತವಾದ ದೋಷವಿರಬಹುದು. ಯಾವುದೆ ಆದರೂ ಅದರಿಂದ ವಿಮರ್ಶೆಯ ತಳಹದಿಯೇ ಬುಡಮೇಲಾಗುವುದುಂಟು. ಇದಲ್ಲದೆ ನಮ್ಮಲ್ಲಿಯ ವಿಮರ್ಶೆಯ ಅಭಾವಕ್ಕೆ ಇನ್ನೊಂದು ಕಾರಣವನ್ನೂ ಹೇಳಬಹುದಾಗಿದೆ ಅದೆಂದರೆ ಕನ್ನಡದಲ್ಲಿ ವಿಮರ್ಶೆಯನ್ನು ತಾತ್ತ್ವಿಕದೃಷ್ಟಿಯಿಂದ ಪರಿಶೀಲಿಸಿ, ಅದರ ಸ್ವರೂಪವ್ಯಾಪ್ತಿ ಕಾರ್ಯಗಳನ್ನು ನಿರೂಪಿಸುವಂತಹ ಗ್ರಂಥಗಳ ಅಭಾವ. ಸಾಹಿತ್ಯದ ಸ್ವರೂಪವೆಂತಹದು, ಅದರ ರೀತಿ ಯಾವುದು, ಅದರ ಕೊನೆಯ ಉದ್ದಿಷ್ಟವೇನು, ಅದರ ಪರಿಣಾಮ ಓದುಗನ ಮನಸ್ಸಿನ ಮೇಲೆ ಯಾವ ಕಾರಣಗಳ ಮೂಲಕ ಆಗುವುದು—ಮುಂತಾದ ಹಲವು ಪ್ರಶ್ನೆಗಳನ್ನು ಕೂಲಂಕಷವಾಗಿ ನೋಡಿ, ಆಳವಾಗಿ ಯೋಚಿಸಿದ ವಿಮರ್ಶಕರ ಕೃತಿಗಳು ನಮ್ಮಲ್ಲಿ ಎಷ್ಟಿವೆ? ಕೆಲವು ವಿದ್ವಾಂಸರು ಆಗಾಗ ಸಾಹಿತ್ಯದ ಕೆಲವು ಅಂಶಗಳನ್ನು ಕುರಿತು ಬರೆದ ಲೇಖನಗಳನ್ನು ಅಲ್ಲಲ್ಲಿ ನಾವು ನೋಡಬಹುದಾದರೂ, ಸರ್ವ ಸಮ್ಮತವಾದ ಮೂಲತತ್ತ್ವಗಳ ನಿರೂಪಣೆಯನ್ನು ಒಂದೆಡೆ ನೋಡಲಿಕ್ಕೆ, ಅಭ್ಯಸಿಸಲಿಕ್ಕೆ ಅನುಕೂಲವಾಗಿಲ್ಲ. ಪ್ರತಿಯೊಬ್ಬ ಸಾಹಿತಿಯೂ ತನ್ನ ದೃಷ್ಟಿಗೆ ಸರಿಯಾಗಿ ತನ್ನ ವ್ಯಾಖ್ಯೆಗಳನ್ನೊ, ತನ್ನ ರೀತಿ ನೀತಿ ನಿಯಮಗಳನ್ನೊ, ಸ್ಪಷ್ಟವಾಗಿಯೇ ಆಗಲಿ, ಅಸ್ಪಷ್ಟವಾಗಿಯೇ ಆಗಲಿ ಗೊತ್ತುಮಾಡಿಕೊಂಡು, ತಾನು ಕಂಡ ದಾರಿಯಲ್ಲಿಯೇ ಮುಂದುವರಿಯುತ್ತಿದ್ದಾಗ, ನಮ್ಮ ವಿಮರ್ಶಾಪ್ರಪಂಚದಲ್ಲಿ ಅರಾಜಕತೆ ನೆಲೆ ನಿಂತಿದ್ದರೆ ಆಶ್ಚರ್ಯವಿಲ್ಲ, ಆದುದರಿಂದ ಇಂದು ಎಲ್ಲಕ್ಕೂ ಮೆಚ್ಚಾಗಿ ಸಾಹಿತ್ಯ ಸತ್ತ್ವದ ಮೂಲ ಸ್ವರೂಪವನ್ನು ಕುರಿತು, ಜನ ಜೀವನಕ್ಕೂ ಸಾಹಿತ್ಯಕ್ಕೂ ಇದ್ದ ನಿಕಟಸಂಬಂಧವನ್ನು ಕುರಿತು, ರೀತಿ-ನೀತಿಗಳ ಉತ್ಪತ್ತಿ ಬೆಳವಣಿಗೆಗಳನ್ನು ಕುರಿತು ಕೂಲಂಕಷವಾದ ತಾತ್ತ್ವಿಕ ವಿವೇಚನೆ ಬೇಕಾಗಿದೆ. ಇಂಥ ವಿವೇಚನೆ ಈಗ ವಿಮರ್ಶಕರೆನ್ನಿಸಿಕೊಂಡು ಸರಿಯಾದ ದಾರಿಯಲ್ಲಿ ಕೆಲಸ ನೂಡದಿದ್ದವರಿಗೆ ಎಚ್ಚರದ ಮಾತಾದೀತು. ಹೊಸದಾಗಿ ವಿಮರ್ಶಕರೆಂದು ಸೇವೆ ಸಲ್ಲಿಸಬೇಕೆಂದವರಿಗೆ ಕೈದೀಪವಾಗಿ ಸಹಾಯಕಾರಿಯಾದೀತು. ಇದೂ ಅಲ್ಲದೆ ವಿಮರ್ಶೆಯಾದರೂ ಒಂದು ಶಾಸ್ತ್ರ, ಒಂದು ತತ್ತ್ವ, ಆದ್ದರಿಂದ ಆ ವಿಷಯದಲ್ಲಿಯೂ ಕನ್ನಡ ಜನ ತಮ್ಮ ಬುದ್ಧಿವಂತಿಕೆಯನ್ನೂ, ಸೂಕ್ಷ್ಮಪರಿಶೀಲನೆಯ ದೃಷ್ಟಿಯನ್ನೂ ಮುಂದೋಡಿಸಿ, ಕನ್ನಡದಲ್ಲಿ ಮಾತ್ರವಲ್ಲದೆ ಇಡೀ ಸಾಹಿತ್ಯವಿಮರ್ಶೆಯ ಪ್ರಪಂಚಕ್ಕೆಯೇ ತನ್ನ ಕಾಣಿಕೆಯನ್ನು ಸಲ್ಲಿಸುವ ನಂಧಿಯೂ ಪ್ರತಿಯೊಬ್ಬ ವಿಚಾರವಂತನೆದುರು ಇದೆ ಎಂಬುದನ್ನು ನೆನೆದರೆ, ನಮ್ಮ ವಿಚಾರಕ್ಷೇತ್ರವನ್ನು ಬೆಳೆಯಿಸಿಕೊಂಡಂತಾದೀತು.

ವಿಮರ್ಶೆಯ ಅಭಾವಕ್ಕೆ ಶ್ರೀರಂಗರು ಹೇಳಿದ ಇನ್ನೊಂದು ಕಾರಣ ವಿಚಾರಾರ್ಹವಾಗಿದೆ. ನಮ್ಮಲ್ಲಿ ಇದ್ದಬಿದ್ದ ವಿಮರ್ಶೆ ಇಂಗ್ಲಿಷ್ ಸಾಹಿತ್ಯವನ್ನೂ ವಿಮರ್ಶಾ ತತ್ತ್ವಗಳನ್ನೂ ತಿಳಿದುಕೊಂಡವರು ಬರೆದದ್ದಾಗಿರುತ್ತದೆ. ನಮ್ಮ ಸಾಹಿತ್ಯದ ಜಾಯಮಾನಗಳಿಗೆ ಆ ತತ್ತ್ವಗಳಾಗಲಿ, ಆ ವಿಧಾನಗಳಾಗಲಿ, ಅನ್ವಯಿಸಬಹುದೇ ಅಥವಾ ಇಲ್ಲವೆ ಎಂಬ ಪ್ರಶ್ನೆಗಳನ್ನು ಲೆಕ್ಕಿಸದೆ ಬರೆಯಲ್ಪಡುತ್ತಿದ್ದ ವಿಮರ್ಶೆ ನಮ್ಮ ಸಾಹಿತ್ಯದ ಪ್ರಗತಿಯ ದೃಷ್ಟಿಯಿಂದ ನಿಷ್ಪ್ರಯೋಜಕವೆಂಬುದೇ ಶ್ರೀರಂಗರ ಅಭಿಪ್ರಾಯ. ನಮ್ಮ ಕವಿಗಳನ್ನು ವರ್ಡ್ಸ್‌ವರ್ತ್‌ನಿಗೊ, ಬರ್ನ್‌ಸ್‌ನಿಗೊ, ಶೆಲ್ಲಿಗೊ ಇನ್ನಾರಿಗೋ ಆಸಂಬದ್ಧವಾಗಿ ಹೋಲಿಸಿ, ತನ್ನ ಆರಣ್ಯಪಾಂಡಿತ್ಯದ ಪ್ರದರ್ಶನದ ಹೊರತು ಬೇರೆ ಏನನ್ನೂ ಸಾಧಿಸಲಾಗದ ವಿಮರ್ಶೆಗಳನ್ನು ಅನುಲಕ್ಷಿಸಿಯೇ ಶ್ರೀರಂಗರು ಮೇಲಿನ ಮಾತನ್ನು ಹೇಳಿರಬಹುದೆಂದು ಊಹಿಸಬಹುದಾಗಿದೆ. ಮೂಲ ತತ್ತ್ವಗಳ ವಿಚಾರದಲ್ಲಿ

ಎಲ್ಲಿಯೂ ಭಿನ್ನಾಭಿಪ್ರಾಯವಿರುವುದು ಸಾಧ್ಯವಿಲ್ಲ. ಆದುದರಿಂದ ವಿಮರ್ಶೆಯ ತತ್ತ್ವಗಳನ್ನು, ಹೊಸದಾದ ದೃಷ್ಟಿಯನ್ನು, ಇಂಗ್ಲೀಷ್ ಸಾಹಿತ್ಯದ ಮತ್ತು ವಿಮರ್ಶೆಯ ರೀತಿಗಳಿಂದ ನಾವು ಪಡೆಯುವಂತಾದರೆ ಯಾವ ಅಭ್ಯಂತರವೂ ಇಲ್ಲ; ತತ್ತ್ವದ ವಿಚಾರದಲ್ಲಿ ಯಾವ ಭಾಷೆಯೂ ಅಡ್ಡಿಯಾಗಿ ನಿಲ್ಲಬೇಕಿಲ್ಲ. ಕನ್ನಡದ ಮುನ್ನಡೆಯನ್ನು ಸಾಧಿಸಬೇಕೆಂದವರಿಗೆ ಇಂತಹ ದೇಶ ಇಂತಹ ಭಾಷೆ ಎಂಬ ಯಾವ ನಿರ್ಬಂಧವೂ ಇಲ್ಲದೆ, ಯಾವ ಸಂಕೋಚವೂ ಇಲ್ಲದೆ, ಎಲ್ಲೆಡೆಯಿಂದಲೂ ನಾವು ತಿಳಿದುಕೊಳ್ಳಬೇಕಾದ ವಿಷಯಗಳ ಸಂಗ್ರಹವನ್ನು ಮಾಡಬೇಕಾಗಿದೆ. ಆದರೆ ಈ ಸಂಗ್ರಹದ ಕಲಸವನ್ನು ಕೈಕೊಳ್ಳುವಾಗ, ನಮ್ಮ ವಾತಾವರಣವೆಂತಹದು, ನಮ್ಮ ಆಗತ್ಯಗಳು ಎಂಥವು, ನಮಗೆ ಉಪಯುಕ್ತ ಯಾವುದು ಎಂಬ ಸಾಮಾನ್ಯ ವಿಚಾರಗಳಿಗೆ ಎಡೆ ಕೊಟ್ಟು ನಮ್ಮಲ್ಲಿಯದನ್ನು ಬೆಳೆಯಿಸಿಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ಇಂಗ್ಲಿಷ್ ವಿಮರ್ಶೆಯಿಂದ ನಾವು ಕಲಿಯಬೇಕಾದದ್ದು ಬೇಕಾದಷ್ಟಿದೆ ಎಂಬ ಮಾತನ್ನು ಒಪ್ಪಲಾರದಷ್ಟು ಸಂಕುಚಿತಬುದ್ಧಿ ಶ್ರೀರಂಗದಲ್ಲವೆಂಬ ಭರವಸೆ ನನಗಿದೆ.

(೩೦೬ ನೆಯ ಪುಟದಿಂದ ಮುಂದೆಸಾಗಿದ್ದು)

ಇನ್ನು ಕಾದಂಬರಿಯ ವಿಷಯ. ಅದರ ಮುಖ್ಯ ಲಕ್ಷಣವೆಂದರೆ ಓದಲಿಕ್ಕೆ ಪ್ರಾರಂಭಿಸಿದರೆ ಕೊನೆಯವರೆಗೂ ಕೆಳಗಿಡದಂತಾಗಬೇಕೆಂಬುದು. ಅಲ್ಲಿ ಪಾತ್ರಪ್ರಸಂಗಗಳು ಪ್ರಮಾಣಬದ್ಧವಿದ್ದು ಸ್ಪಟವಾಗಿರಬೇಕು. ಶೈಲಿ ಸರಳವಾಗಿರಬೇಕು. ಇದಕ್ಕೆ ಉದಾಹರಣೆಗಳೆಂದು ಕನ್ನಡ ಮರಾಠಿ ಸಾಹಿತ್ಯಗಳಿಂದ ಮಿರ್ಜಿಯವರು ಸನ್ನಿವೇಶಗಳನ್ನು ಆಯ್ದು ತೋರಿಸಿದ್ದಾರೆ. ಪ್ರಕರಣದ ಪ್ರಾರಂಭದ ರೀತಿಗಳೂ ಇವೆ ಈ ಗ್ರಂಥದಲ್ಲಿ.

ಸಣ್ಣಕತೆಯ ಲಕ್ಷಣಗಳನ್ನು ಗ್ರಂಥಕಾರರು ಪ್ರಸಿದ್ಧ ಕತೆಗಾರರ ಕೃತಿಗಳ ಮುಖಾಂತರ ಮುಂಡಿಸಿದ್ದಾರೆ. ಸುಂದರ ಆರಂಭ, ಪ್ರಧಾನರಸವಸ್ತು ಒಳ್ಳೆ ಸಂಸ್ಕಾರ ಮೂಡುವಿಕೆ, ಹೋರಾಟರ ಪ್ರಖರತೆ, ಸಂಪೂರ್ಣತೆ— ಹೀಗೆ ಕೆಲವು ಗುಣಗಳನ್ನು ಈ ಪ್ರಕರಣದಲ್ಲಿ ವಿವೇಚಿಸಲಾಗಿದೆ. ದೊಡ್ಡ ನಾಟಕದ ಮಾತು ಬಂದಾಗ— ಜೀವಂತಪಾತ್ರ, ಚುರುಕಾದ ಸಂವಾದ, ಸಮಾಜದ ಜ್ಞಾನ, ಪ್ರತಿ ಅಂಕಿನ ಕಲಾಪೂರ್ಣ ಹೆಣಿಕೆ— ಅವಶ್ಯ ಎಂದು ಲೇಖಕರು ವಿವರಿಸುವರು. ಕೊನೆಯ ಪ್ರಕರಣಗಳಲ್ಲಿ ಪ್ರಬಂಧ, ಭಾವಗೀತೆಯ ಲಕ್ಷಣಗಳ ಚರ್ಚೆ ಇದೆ.

ವ್ಯಕ್ತಿತ್ವ ಮೂಡಿಸುವುದೇ ಪ್ರಬಂಧದ ಹಿರಿಗುರಿ. ಛಂದೋನಿಯಮಗಳೊಡನೆ ಭಾವಗೀತೆ ಹೃದಯೋದ್ರೇಕ ಉಂಟು ಮಾಡಬೇಕು ಸಂಶ್ಲೇಷತೆ, ಸರಲತೆ ಇದ್ದೇ ಇವೆ.

'ವಿಮರ್ಶಕನಾರು?' ಎಂಬಲ್ಲಿ ಅವನು ಕಲೋಪಾಸಕ, ಆದರೆ ವಿಶೇಷದೃಷ್ಟಿ ಇದ್ದವ—ಎಂದು ಗ್ರಂಥಕಾರರ ಅಭಿಪ್ರಾಯ. 'The critic of poetry is a poet but not a very good one' ಎಂಬ ಆಂಗ್ಲನುಡಿ ಇದೇ ಮಾತನ್ನು ಎಷ್ಟೋಮಟ್ಟಿಗೆ ಎತ್ತಿ ಹಿಡಿಯುವುದು.

ಅನುಬಂಧ, ಆಧಾರಸಾಹಿತ್ಯ ಗ್ರಂಥಗಳನ್ನು ನೋಡಲಾಗಿ, 'ಲೇಖನಕಲೆ' ಬರೆಯುವಲ್ಲಿ ಗ್ರಂಥಕಾರರು ಎಷ್ಟು ತಾಳ್ಮೆ ವಹಿಸಿ, ಅಭ್ಯಾಸಬಲ ಮುಂದೆಮಾಡಿ ಕಾರ್ಯನಿರ್ವಹಿಸಿರುವರೆಂಬುದು ಎಲ್ಲರಿಗೂ ಹೊಳೆಯುವುದು. ಹೊಸಲೇಖಕರಿಗೆ ಅಭ್ಯಾಸದರ್ಪಣವೆಂಬ ದೃಷ್ಟಿಯಿಂದ ಈ ಹೊತ್ತಿಗೆ ಅತ್ಯುಪಯುಕ್ತ. ಸಾಹಿತ್ಯತಂತ್ರದ ಪರಿಚಯ ಮಾಡಿಕೊಟ್ಟು, ನಿಶ್ಚಿತವಾಗಿ ಲಕ್ಷಣಗಳನ್ನು ವಿವರಿಸುವಾಗ ಮಿರ್ಜಿಯವರು ಒಳ್ಳೆಯ ಜಾಣ್ಮೆಯಿಂದ ಶಕರಾಗಿ ತಮ್ಮ ವಿದ್ವತ್ತ್ವೆಯನ್ನು ತೋರ್ಪಡಿಸಿರುವರು. ವಿವಿಧ ಗ್ರಂಥಕಾರರ ಕಲಾಕೃತಿಗಳಿಂದ ಸನ್ನಿವೇಶಗಳನ್ನು ಉದಾಹರಿಸುವಾಗಲೂ ಲೇಖಕರ ಜಾಣ್ಮೆ, ರಸಿಕತೆ ವ್ಯಕ್ತವಾಗಿವೆ. ವಿಷಯ ನಿರೂಪಣೆಯ ಶೈಲಿ ಉಚಿತವಾಗಿದೆ. ತಂತ್ರಗ್ರಂಥವಾದರೂ ಸ್ಪಷ್ಟತೆ ಕಾಣುವುದು.

ಲೇಖಕರಿಗೆ ಇಷ್ಟೊಂದು ಬಹುಮುಖ ಜ್ಞಾನವಿದ್ದರೂ ಇಂತಹ ಗ್ರಂಥದಲ್ಲಿ ಕೆಲವು ಕುಂದು-ಕೊರತೆಗಳು ಕಾಣಬರುವುದು ಸಹಜ. ಭಾವಗೀತೆ, ಪ್ರಬಂಧ ಸಣ್ಣಕತೆ, ವಿಮರ್ಶೆಯ ಲಕ್ಷಣಗಳು ಇಲ್ಲಿ ವಿವೇಚಿಸಲಾದುವಕ್ಕಿಂತಲೂ ಹೆಚ್ಚಾಗಿವೆ. ಪಾಶ್ಚಾತ್ಯ ಭಾಷೆಗಳಿಂದ ಇನ್ನೂ ಸಹಾಯ ಬಳಸುವದಗತ್ಯವಿತ್ತು. ಅಂತೆ ವಿಷಯ ತುಂಬಿಬಂದಿಲ್ಲವೆನಿಸುವುದು. ಅಲ್ಲದೆ ಸಾಮಾನ್ಯರಿಗೆ ಅತಿಕಷ್ಟವೆನಿಸಬಹುದಾದ ಮೂರುನಾಲ್ಕು ಪ್ರಕರಣಗಳನ್ನು ಲೇಖಕರು ಬಿಡಬಹುದಾಗಿತ್ತು. ಸಾಹಿತ್ಯನಿರ್ಮಾಪಕರಿಗೆ ಇಲ್ಲಿಯ ಸೂಚನೆಗಳು ಸಾಧುವಿದ್ದರೂ ಮೈಗೂಡಿಸಿಕೊಳ್ಳಲು ಕಠಿಣ ಅಂತೇ ಕೊಂಚ ನಿರಾಶೆ. ಈ ಮಾತು ಎಲ್ಲ ಲಕ್ಷಣಗ್ರಂಥಗಳಿಗೆ ಅನ್ವಯಿಸುವುದು.

'ಲೇಖನಕಲೆ' ಮಿರ್ಜಿಯವರ ಹೊಸಮಾದರಿಯ ಕೃತಿ. ಅಲ್ಲಿ ಹೀಗೆ ಒಂದೆರಡು ದೋಷಗಳು ಕಂಡರೂ ಅವು ಹೊತ್ತಿಗೆಯ ಬೆಲೆಯನ್ನು ಕಡಿಗಾಣಿಸಲಾರವು. ತಂತ್ರಗ್ರಂಥಕ್ಕೆ ಎಂದೂ ವಿಶಿಷ್ಟ ಸ್ಥಾನ ಮಾನ ಇದ್ದೇ ಇವೆ. ಸಾಹಿತ್ಯಪ್ರೇಮಿಗಳೆಲ್ಲರೂ ಈ ಗ್ರಂಥವನ್ನು ಆಸ್ಥೆಯಿಂದ ಸಂಗ್ರಹಿಸಿ ಓದಬೇಕೆಂದು ಕೊನೆಹೇಳಬಹುದು.

—ಎನ್. ಎಸ್. ಗಡಗಕರ, ಧಾರವಾಡ

ರಾಜಕೀಯ ಲೋಕದ ಅವಲೋಕನ

'ರಾಯರ ಅಪ್ಪಾಜಿ'ಯಿಂದ

ಬ್ರಿಟಿಶ್ ರಾಜನೀತಿಗೆ ಜಯ

'ಬ್ರಿಟಿಶರು ಹಿಂದುಸ್ತಾನದಿಂದ ಹೊರಟು ಹೋದರೆ ಸಾಕು ಎಲ್ಲವೂ ಸರಿಹೋಗುವುದು, ಹಿಂದುಸ್ತಾನದಲ್ಲಿಯ ಜಾತೀಯ ಗಲಭೆಗಳು ತೃತೀಯಪಕ್ಷದ ಮೂಲಕವೆ' ಎಂದು ಹಿಂದುಸ್ತಾನದ ಮುಖಂಡರು ಜಗತ್ತಿಗೆ ಅನೇಕ ಸಲ ಸಾರಿ ಹೇಳಿದ್ದರು. ಆದರೆ ಬ್ರಿಟಿಶರು ಹೊರಟುಹೋದ ವಿಶಿಷ್ಟ ಪದ್ಧತಿಯ ಮೂಲಕವಾಗಲಿ, ಅಥವಾ ಒಟ್ಟಿನ ಮೇಲೆ ಅವರ ರಾಜನೀತಿಯ ಮೂಲಕವಾಗಲಿ, ಹಿಂದುಸ್ತಾನವು ಸ್ವಾತಂತ್ರ್ಯದಿನೋತ್ಸವದ ಆನಂದವನ್ನು ಅನುಭವಿಸಿದ ದಿನವೇ ಶಾಂತತೆಯ ಸೂತಕವನ್ನೂ ಪಾಲಿಸಿತು. 'ಬ್ರಿಟಿಶರು ಹಿಂದುಸ್ತಾನದಿಂದ ಹೊರಟು ಹೋದರೆ ಎಲ್ಲವೂ ಸರಿಹೋಗುತ್ತದೆಂಬ ಮಾತು ತಪ್ಪು' ಎಂದು ಜಗತ್ತಿಗೆ ಮನಗಾಣಿಸಲೊ ಏನೋ ಎನ್ನುವಂತೆ, ಹಿಂದುಸ್ತಾನ ಸರಕಾರವು ಕಾಶ್ಮೀರ ಸಮಸ್ಯೆಯನ್ನು ಯುಕ್ತರಾಷ್ಟ್ರಗಳ ಸಂಘದ ಭದ್ರತಾಮಂಡಳಿಕ್ಕೆ ಎಳೆದು ನ್ಯಾಯ ಕೇಳಿದೆ. ಇದು ಬ್ರಿಟಿಶ್ ರಾಜನೀತಿಯ ಜಯವಲ್ಲವೆ?

ಭದ್ರತಾಮಂಡಳಿಕ್ಕೆ ಭಾರತದ ಪೂರು

ಕಾಶ್ಮೀರದಲ್ಲಿ ನಡೆದ ದುರ್ಘಟನೆಗಳನ್ನೂ ಕಾಶ್ಮೀರವು ಹಿಂದುಸ್ತಾನದ ಒಕ್ಕೂಟದಲ್ಲಿ ಏಕೆ ಮತ್ತು ಹೇಗೆ ಸೇರಿದೆ. ಯೆಂಬುದನ್ನೂ ನಾನು ಈ ಮೊದಲೆ ವಿವರಿಸಿದ್ದೇನೆ. (ಜಯಂತಿ, ಡಿಸೆಂಬರ್ ೪೭) 'ಕಾಶ್ಮೀರದಲ್ಲಿ ದುರ್ಘಟನೆಗಳನ್ನು ನಡೆಯಿಸಿದವರು ಗಡಿಪ್ರಾಂತದ ಆಜೆಯ ಗುಡ್ಡಗಾಡು ಪ್ರದೇಶದವರು; ಆದುದರಿಂದ ಅವರ ಕೃತ್ಯಕ್ಕೆ ತಾನು ಹೊಣೆಯಲ್ಲ' ಎಂದು ಪಾಕಿಸ್ತಾನವು ಹಾರಿಸಿಕೊಂಡಿತು. ಆದರೆ ಕಾಶ್ಮೀರದ ಗಡಿಯಿಂದ ಹೊಡೆದೋಡಿಸಿದ ಕೂಡಲೆ ಈ ಗುಡ್ಡಗಾಡು ಜನರು ಪಾಕಿಸ್ತಾನದ ಪ್ರದೇಶದಲ್ಲಿ ಆಶ್ರಯ ಹೊಂದುವರು. ಕಾಶ್ಮೀರದಿಂದ ಇವರನ್ನು ಹೊಡೆದೋಡಿಸುತ್ತಿರುವ ಹಿಂದೀ ಸೈನಿಕರಿಗೆ ಪಾಕಿಸ್ತಾನದ ಪ್ರದೇಶದಲ್ಲಿ ಹೊಕ್ಕು ಅವರನ್ನು ಬಗ್ಗುಬಡಿಯಲಿಕ್ಕೆ ಬರಲಾಗದು. ಯಾಕೆಂದರೆ ಹಾಗೆ ಮಾಡಿದರೆ ಆಂತರರಾಷ್ಟ್ರೀಯ ಕಾನೂನನ್ನು ಭಂಗಿಸಿದಂತಾಗುವುದು. ಇನ್ನೊಂದೆಂದರೆ ಪಾಕಿಸ್ತಾನ ಪ್ರದೇಶದಲ್ಲಿ ಹೊಕ್ಕು ಅವರನ್ನು ಬೇರುಸಹಿತ ಕಿತ್ತೊಗೆಯದ ಹೊರತು ಕಾಶ್ಮೀರ ಯುದ್ಧವು ಮುಗಿಯುವುದಶಕ್ಯ. ಆದುದರಿಂದ ಗುಡ್ಡಗಾಡು ಜನರನ್ನು ಬಗ್ಗುಬಡಿಯಲು ಪಾಕಿಸ್ತಾನವು ಸಹಕರಿಸಬೇಕು, ಇಲ್ಲವೆ ದಾಳಿಗೆ ಈಡಾಗಬೇಕು ಇವೆರಡೇ ಶಕ್ಯತೆಗಳು ಉಳಿದುವು. ಪಾಕಿಸ್ತಾನವು ಸಹಕರಿಸುವ ಮಾತಂತೂ ಎಂದೊ ಮುಗಿದುಹೋದುದರಿಂದ, ದಾಳಿಮಾಡುವುದೊಂದೇ ಮಾರ್ಗ ಹಿಂದುಸ್ತಾನಕ್ಕೆ ಉಳಿಯಿತು. ಅಂತೆಯೆ ಹಿಂದುಸ್ತಾನವು, ಭದ್ರತಾಮಂಡಳದ ಮಧ್ಯಸ್ಥಿಯಿಂದ ಶಾಂತತೆ ಉಳಿಯುಲೆಂದು ಭದ್ರತಾಮಂಡಳಿಕ್ಕೆ ಒಂದು ಅರ್ಜಿಯನ್ನು ಹಾಕಿತು. ಇದರಲ್ಲಿ ಅದು ಪಾಕಿಸ್ತಾನದ ವಿರುದ್ಧ ಕೆಳಗಿನ ಆರೋಪಗಳನ್ನು ಕಾಣಿಸಿದೆ. (ಅ) ದಾಳಿಗಾರರಿಗೆ ಕಾಶ್ಮೀರದಲ್ಲಿ ಮಾರ್ಗ ದೊರೆಯಿತು. (ಆ) ಪಾಕಿಸ್ತಾನ ಪ್ರದೇಶವನ್ನು ತಮ್ಮ ತಾಣ್ಯಗಳನ್ನಾಗಿ ಉಪಯೋಗಿಸಲು ದಾಳಿಗಾರರಿಗೆ ಅನುವು ಸಿಕ್ಕಿತು. (ಇ) ದಾಳಿಗಾರರಲ್ಲಿ ಪಾಕಿಸ್ತಾನದ ನಾಗರಿಕರೂ ಇರುವರು. (ಈ) ಪಾಕಿಸ್ತಾನದಿಂದ ದಾಳಿಗಾರರಿಗೆ ಶಸ್ತ್ರಾಸ್ತ್ರಸಾಮಗ್ರಿ, ವಾಹನಸೌಕರ್ಯ (ಪೆಟ್ರೋಲ ಕೂಡ) ಮತ್ತು ಅನ್ನವಸ್ತ್ರಗಳು ಸಿಗುತ್ತಿವೆ. (ಉ) ಪಾಕಿಸ್ತಾನ ಸೈನ್ಯಾಧಿಕಾರಿಗಳು ದಾಳಿಗಾರರಿಗೆ ಸೈನ್ಯಶಿಕ್ಷಣ ಕೊಟ್ಟು ಅವರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಭದ್ರತಾಮಂಡಳವು ಈ ವಿಷಯದಲ್ಲಿ ಕೈಹಾಕಿ— ಪಾಕಿಸ್ತಾನವು ದಾಳಿಗಾರರಿಗೆ ಮೇಲಿನ ಸಹಾಯ ಸಲ್ಲಿಸದಂತೆ ನೋಡಿಕೊಳ್ಳಬೇಕೆಂದು ಕೇಳಿದೆ. (ಪರಿಸ್ಥಿತಿಯು ಗಂಭೀರವಿರುವುದೆಂದು ಹೇಳಿ ಹಿಂದುಸ್ತಾನವು, ಪ್ರಸಂಗ ಬಂದರೆ— ಪಾಕಿಸ್ತಾನದ ಕೂಡ— ಯುದ್ಧ ಹೂಡುವ ಅಧಿಕಾರವನ್ನು ಕಾಯ್ದಿಟ್ಟುಕೊಂಡಿದೆ)

ಪಾಕಿಸ್ತಾನದ ಪ್ರತಿದೂರು

ಪಾಕಿಸ್ತಾನ ಹಿಂದುಸ್ತಾನದ ಕಲಹವು ಈಗ ಯಾದವಿಯಲ್ಲ, ಅದೊಂದು ಆಂತರರಾಷ್ಟ್ರೀಯ ಸಮಸ್ಯೆ. ಮತ್ತು ಎಷ್ಟೋ ವಿದೇಶೀ ರಾಜಕಾರಣಿಗಳು ಮತ್ತು ಬ್ಯಾ. ಜಿನ್ನಾದು ಹೇಳುವಂತೆ ಜಾಗತಿಕ ಶಾಂತಿಯೂ ಈ ಸಮಸ್ಯೆಯನ್ನವಲಂಬಿಸಿದೆ.

ಇನ್ನು ಪಾಕಿಸ್ತಾನದ ನಿಲುಮೆ ಇಂತಿದೆ:— ಪಾಕಿಸ್ತಾನವು ಹಿಂದುಸ್ತಾನದ ಎಲ್ಲ ಆರೋಪಗಳನ್ನು ಖಂಡಿಸುತ್ತದೆ. ಕಾಶ್ಮೀರದಲ್ಲಿ ಪಾಕಿಸ್ತಾನ ನಾಗರಿಕರ ಅಂಗವಿಲ್ಲ, ಪಾಕಿಸ್ತಾನದ ಸೈನ್ಯದಲ್ಲಿ ನೌಕರಿಗಿದ್ದ ಸೈನಿಕರು ರಜೆಯ ಮೇಲೆ ತಮ್ಮ ಕಾಶ್ಮೀರದಲ್ಲಿಯ ಮನೆಗೆ ಹೋದಾಗ, ಅಲ್ಲಿ ಹೊಗ್ರಾ ಸೈನಿಕರು

ಮತ್ತು ಶೇಖರು ನಡೆಯಿಸಿದ ಅತ್ಯಾಚಾರಗಳನ್ನು ತಡೆಯಬೆ ತಾವು ಹಿಂಸೆಗೆ ಕೈಹಾಕಿರಬಹುದು ಅಷ್ಟೆ. ಇನ್ನು ಗುಡ್ಡಗಾಡು ಜನರು ಪಾಕಿಸ್ತಾನದವರಲ್ಲ. ಅವರನ್ನು ತಡೆಯಲು ಪಾಕಿಸ್ತಾನವು ಯತ್ನಿಸಿತು; ಆದರೂ ಸಾಧ್ಯವಾಗಲಿಲ್ಲ. ಅವರು ಮಾಡಿದುದಕ್ಕೆ ನಾವು ಹೊಣೆಯಲ್ಲ. ಇದು ಸಮರ್ಥನೆಯಾಯಿತು. ಇನ್ನು ಪ್ರತ್ಯಾರೋಪವೆಂದರೆ ಕಾಶ್ಮೀರ ಸಮಸ್ಯೆಯನ್ನು ಪ್ರತ್ಯೇಕವಾಗಿ ವಿಚಾರಮಾಡುವುದು ತಪ್ಪು. ಹಿಂದುಸ್ತಾನವು ಮುಸಲ್ಮಾನರಿಗೆ ಮಾಡಿದ ಅನ್ಯಾಯದ ಇತರ ವಿಷಯಗಳನ್ನು (ಜುನಾಗಡದ ನವಾಬರನ್ನು ಹೊಡೆದೋಡಿಸಿದುದು ಇತ್ಯಾದಿ) ಅದರೊತನೆಯೆ ಚರ್ಚಿಸಬೇಕು. ಕಾಶ್ಮೀರದಲ್ಲಿ ಮುಸಲ್ಮಾನರು ಬಹುಸಂಖ್ಯಾಕರಿದ್ದರೂ ಅದು ಒತ್ತಾಯದಿಂದ ಅದರ ಜನಾಭಿಪ್ರಾಯದ ವಿರುದ್ಧ ಹಿಂದುಸ್ತಾನದ ಒಕ್ಕೂಟದಲ್ಲಿ ಸೇರಿದೆ.

ಭದ್ರತಾಮಂಡಳದ ನಿರ್ಣಯ ನೀತಿ

ಈ ವರದಿಯನ್ನು ಬರೆಯುವ ಕಾಲಕ್ಕೆ ಭದ್ರತಾಮಂಡಳದಲ್ಲಿ ಕಾಶ್ಮೀರದ ವಿಷಯಕ್ಕೆ ಪ್ರಾಸ್ತಾವಿಕ ಚರ್ಚೆ ಮಾತ್ರ ಪ್ರಾರಂಭವಾಗಿದೆ. ಆದ್ದರಿಂದ ಫಲಿತಾಂಶವೇನು ಹೊರಬೀಳಬಹುದೆಂಬುದನ್ನು ಹೇಳಲಾಗುವುದಿಲ್ಲ. ಆದರೆ ಒಂದೆರಡು ಮಾತುಗಳನ್ನು ಹೇಳಬಹುದು: ಯುಕ್ತರಾಷ್ಟ್ರಗಳ ಸಂಘವೆಂದರೆ ಅದೊಂದು ನ್ಯಾಯಮಂಡಳವೆಂದು ತಿಳಿಯುವುದು ತಪ್ಪು. ಅದೊಂದು ಕುಸ್ತಿಯ ಕಣ. ಅಧಿಕಾರ ವ್ಯಾಮೋಹಕ್ಕೊಳಗಾದ ರಾಷ್ಟ್ರಗಳು ಅದರಲ್ಲಿ ಆಗಾಗ ಸಡ್ಡು ಹೊಡೆಯುವುದನ್ನು ಕೇಳಬಹುದು. ಜಗತ್ತಿನಲ್ಲಿ ಯಾವುದೊಂದು ಸಮಸ್ಯೆ ಉದ್ಭವಿಸಿದರೆ, ಅದು ಹೇಗಾದರೆ ತನಗನುಕೂಲವೆಂಬಂಬೆ ಪ್ರತಿಯೊಂದು ರಾಷ್ಟ್ರದ ಲೆಕ್ಕ. ಹೀಗಾದಲ್ಲಿ ನ್ಯಾಯವನ್ನು ಹೇಗೆ ಸಿಕ್ಕಬಲ್ಲದು? ಇನ್ನು ಕಾಲವ್ಯಯ. ನಮ್ಮ ಕೋರ್ಟು-ಕಚೇರಿಗಳಲ್ಲಿ ಖಟ್ಲೆಗಳು ಕೊಳೆಯುತ್ತ ಬಿದ್ದಂತೆಯೇ ಭದ್ರತಾ ಮಂಡಳದಲ್ಲಿ ಸಮಸ್ಯೆಗಳು ಕೊಳೆಯುವವು. ಇನ್ನು ಇಷ್ಟು ಕಾಲಹರಣವಾದರೂ ಸಮಸ್ಯೆಯು ಬಗೆಹರಿಯುವುದೆಂದು ಹೇಳಲಾಗುವುದಿಲ್ಲ. ಭದ್ರತಾ ಮಂಡಳಕ್ಕೆ ಹೋದ ಇತರ ಸಮಸ್ಯೆಗಳ ಹಣೆಬರಹವನ್ನು ನೋಡಿದರೆ ಇದು ಸ್ಪಷ್ಟವಾಗುವುದು. ಸ್ಪೇನಿನ ಮಾತು ಮೂಲೆಗುಂಪಾಯಿತು. ಪಾಲಿಸ್ತಾನದ ವಿಭಜನೆಯಾಗಿ ಅದರ ಮೂರಾಬಟ್ಟೆಯಾಯಿತು. ಇಂಡೋನೇಶಿಯದಲ್ಲಿ ಎಷ್ಟೋ ಕಾಲಹರಣವಾದರೂ ಒಂದು ಸಮಾಧಾನಕರ ಒಡಂಬಡಿಕೆಯು ಪ್ರಜಾರಾಜ್ಯದ ಕೊರಳಿಗೆ ಬಿದ್ದಿತು. ಕಾಶ್ಮೀರದ ಭವಿತವ್ಯವು ಏನಿದೆಯೆಂದು ಹೇಳಲಾಸಲ್ಲ. ಸಾರ್ವತ್ರಿಕ ಮತಗಣನೆ ನಡೆಯಬಹುದು. ಇದರಲ್ಲಿ ಗಡಿಪ್ರಾಂತದಲ್ಲಿ ಆದಂತೆ ಹಸಿರು ಕೆಂಪು ಪೆಟ್ಟಿಗೆಗಳ ಪದ್ಧತಿಯೆ ನಡೆಯುವುದು. ಎಂದರೆ ಜಾತೀಯತೆಗೇ ಪ್ರಾಧಾನ್ಯಸಿಕ್ಕುವುದು— ಎಂದರೆ ಕಾಶ್ಮೀರವು ಹಿಂದುಸ್ತಾನದ ಕೈಬಿಡುವುದು. ಇಲ್ಲಿಯವರೆಗೆ ಪರಿಶ್ರಮವು ಹೊಳೆಯಲ್ಲಿ ಹುಣಿಸೆಯಹಣ್ಣನ್ನು ತೊಳೆದಂತಾಗುವುದು. ಕೆಲವರು ಸೂಚಿಸಿದಂತೆ ಕಾಶ್ಮೀರದ ವಿಭಜನೆ ಕೂಡ ಆಗಬಹುದು! ಆದ್ದರಿಂದ ಹಿಂದುಸ್ತಾನವು ಭದ್ರತಾಮಂಡಳಕ್ಕೆ ಹೋಗುವುದರ ಬದಲು ದಾಳಿಗಾರರಿಗೆ ಇನ್ನೂ ಹೆಚ್ಚು ಕಠೋರ ಪಾಠವನ್ನು ಕಲಿಸುವುದರಲ್ಲಿ ತೊಡಗಿದ್ದರೆ ಒಳಿತಾಗುತ್ತಿತ್ತು— ಎಂದೆನಿಸುವುದು.

ಮಹಾತ್ಮರ ಉಪವಾಸ

ಮಹಾತ್ಮರು ಉಪವಾಸಮಾಡಿ ಒಂದು ಕಾಲನ್ನು ಈ ಜಗತ್ತಿನಲ್ಲಿಯೂ ಇನ್ನೊಂದು ಕಾಲನ್ನು ಆ ಜಗತ್ತಿನಲ್ಲೂ ಇಟ್ಟಾಗ, ಅವರ ಉಪವಾಸದ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತ ಮಾಡುವುದು ಒಂದು ಸಾಹಸದ ಕೆಲಸವೆ ಆಗಿತ್ತು. ಆದರೆ ಸುದೈವದಿಂದ ಅವರ ಉಪವಾಸವು ಮುಕ್ತಾಯವಾಗಿ ಅವರು ಸುರಕ್ಷಿತರಾಗಿದ್ದಾರೆ. ಉಪವಾಸವು ಆಕಸ್ಮಿಕವಾಗಿ ಪ್ರಾರಂಭವಾಗಿ ಅಷ್ಟೇ ಆಕಸ್ಮಿಕವಾಗಿ ಮುಗಿಯಿತು.

ಮಹಾತ್ಮಾ ಗಾಂಧೀಯವರು ಯಾಕೆ ಉಪವಾಸ ಮಾಡಿದರು? ದಿಲ್ಲಿಯಲ್ಲಿ ಶಾಂತತೆಯುಂಟಾಗಲೆಂದು! ಒಳ್ಳೇದು, ಅವರು ಉಪವಾಸ ಕೈಕೊಂಡ ಕಾಲಕ್ಕೆ ದಿಲ್ಲಿಯಲ್ಲಿ ಗಲಭೆಗಳೇನಾದರೂ ಎದ್ದಿದ್ದುವೊ? ಇಲ್ಲ. ಹಾಗಾದರೆ ಏಕೆ ಉಪವಾಸ? ಇದಕ್ಕೆ ಮಹಾತ್ಮರ ಉತ್ತರವಿಂತಿದೆ: ದಿಲ್ಲಿಯಲ್ಲಿ ಶಾಂತತೆಯಿದೆ ನಿಜ, ಆದರೆ ಅದು ತೋರಿಕೆಯ ಶಾಂತತೆ. ಪೋಲೀಸ ಹಾಗೂ ಸೈನಿಕರ ಶಸ್ತ್ರಾಸ್ತ್ರಗಳ ಬಲದಿಂದ ಸ್ಥಾಪಿತವಾದುದು. ಅದರಲ್ಲಿ ಹುರುಳಿಲ್ಲ. ನಿಜವಾದ ಶಾಂತತೆಯ ಸ್ಥಾಪನೆಗಾಗಿ ಉಪವಾಸಮಾಡುತ್ತೇನೆ— ಅನಿಶ್ಚಿತ ಅವಧಿಯ ಎಂದಿದೆ ಆಮರಣ ಉಪವಾಸ. ಆದರೆ ಮುಂದೆ ಮಹಾತ್ಮರು ಉಪವಾಸ ಮುರಿಯಲು ಹಾಕಿದ ಏಳು ಶರ್ತುಗಳಲ್ಲಿ ಈ ನೈಜವಾದ ಶಾಂತಿಯ ಉಲ್ಲೇಖವಿಲ್ಲ. ದಿಲ್ಲಿಯು ಹತ್ತಿರ ನಡೆಯುತ್ತಿದ್ದ ಊರುಸು ನಡೆಯಬೇಕು, ದಿಲ್ಲಿಯಲ್ಲಿಯ ಮುಸಲ್ಮಾನರ ವಸತಿಯಲ್ಲಿ ಮುಸಲ್ಮಾನರಿಗೆ ಶಾಂತವಾಗಿ ಇರಲು ಅನುಕೂಲತೆ ದೊರೆಯಬೇಕು— ಇತ್ಯಾದಿಗಳಿವೆ. ಇದನ್ನು ಶಸ್ತ್ರಾಸ್ತ್ರಗಳಿಂದ ಸಾಧಿಸಬಹುದಲ್ಲವೆ? ಶಸ್ತ್ರಾಸ್ತ್ರಗಳ ಬಲದಿಂದ ಇವೆಲ್ಲವುಗಳನ್ನು ಸಾಧಿಸಬಾರದೆಂದು ಮಹಾತ್ಮರ ಕರಾರಿಲ್ಲ. ಉಪವಾಸದ ಕಾಲಕ್ಕೆ ಅಲಹಾಬಾದದಲ್ಲಿ ಒಂದು ಶೇಖರ ಸೆರೆವಣಿಗೆ ಹೊರಟಿತ್ತು. ಅದರೊಳಗಿನ ಕೆಲವರು ಅಲ್ಲಿಯ ಅಲ್ಪಸಂಖ್ಯಾಕರ ಅಂಗಡಿಗಳನ್ನು ಲೂಟಿಮಾಡಿ ಕೆಲವರನ್ನು ಇರಿದರು. ಈಗ ಅಲ್ಲಿ ಕರ್ಫ್ಯೂ ಹೇರಿ, ಸಾಮೂಹಿಕ ದಂಡಹಾಕಿ ಗಲಭೆಯನ್ನು ಶಾಂತಮಾಡಲಾಗಿದೆ. ದಿಯಲ್ಲಿಯೂ ಕೂಡ ಒಂದು ಸಮುದಾಯವು (ಪಾಕಿಸ್ತಾನದಲ್ಲಿ ಎಲ್ಲವನ್ನೂ ಕಳೆದುಕೊಂಡು ಕಾಂಗ್ರೆಸ್ ಮುಖಂಡರನ್ನು

(ಕವರಿನ ಮೂರನೆಯ ಪುಟ ನೋಡಿರಿ)

ೀಶದ ವಿಧಜನೆಯನ್ನೂ ೧೨ ತಿಂಗಳು ತಳ ತಾಸು ಶಪಿಸುವ ಜನ ಲ್ಲಿಯಲ್ಲಿ ಸಾಕಷ್ಟು ಬಂದಿವೆ) ಮುಸಲ್ಮಾನರ ವಸತಿಯಲ್ಲಿ ುಗ್ಗಿ ಕೊಲೆ-ಸುಲಿಗೆಗಳನ್ನು ನಡೆಯಿಸಿದರೆ ಪೋಲೀಸರು ಸೈನಿರು ಅವರ ಮೇಲೆ ಏರಿ ಹೋಗಬಾರದೆ? ಸಿಂಧದಲ್ಲಿ ಮನೆಬಿಟ್ಟು ಂದೆರಡು ತಾಸು ಹೊರಗೆ ಹೋದರೆ ಹಿಂದುಗಳ ಮನೆಯಲ್ಲಿ ಪೂರ್ವಪಂಜಾಬದ ಮುಸಲ್ಮಾನ ನಿರಾಶ್ರಿತರು ಬಂದು ಸೇರುರು. ಆದರೆ ದಿಲ್ಲಿಯನ್ನು ಬಿಟ್ಟು ಪಾಕಿಸ್ತಾನಕ್ಕೆ ಹೋದವರ ನೇಕ ಮನೆಗಳು ತೆರವಿದ್ದರೂ ಅವುಗಳಲ್ಲಿ ನಿರಾಶ್ರಿತರು ಪ್ರವೇಸಬಾರದೆಂದರೆ ಎಲ್ಲಿಯ ನ್ಯಾಯ?

ಈ ಉಪವಾಸವು ಪ್ರಾರಂಭವಾಗಿ ಮುಗಿದುಬಿಟ್ಟಿದ್ದರಿ ಅದರ ಮಾಚಾರವನ್ನು ತೆಗೆದುಕೊಳ್ಳುವದು ಅವಶ್ಯವಾಗುತ್ತಿರಲಿಲ್ಲ. ದರೆ ರಾಷ್ಟ್ರದ ಗೌರವಕ್ಕೆ ಕುಂದು ಬರುವಂತಹ ಒಂದು ದುರ್ಘನೆ ಸಂಭವಿಸಿತು. ಆರ್ಥಿಕ ಒಡಂಬಡಿಕೆಯ ಪ್ರಕಾರ ಹಿಂದುಸ್ತಾನ ಸರಕಾರವು ಪಾಕಿಸ್ತಾನಕ್ಕೆ ಶಿಲುಕಿನ ಹಣದಲ್ಲಿಂದ ೫೫ ಕೋಟಿ ರೂಪಾಯಿ ಕೊಡಲೊಪ್ಪಿಕ್ಕಿತ್ತು. ಆದರೆ ಈ ಹಣವು ತನ್ನ ವಿರುದ್ಧ (ಎಂದರೆ ಕಾಶ್ಮೀರ ದಾಳಿಯಲ್ಲಿ) ಉಪಯೋಗಿಸಲ್ಪಡುವುದೆಂದು ತಿಳಿದು ಹಿಂದುಸ್ತಾನವು ಅದನ್ನು ಕೊಡುವುದನ್ನು ತಡೆದು ಹಿಡಿಯಿತು. ಆದರೆ ಮಹಾತ್ಮರು ಈ ಜಗತ್ತಿನಲ್ಲೊಂದು ಕಾಲು ಆ ಜಗತ್ತಿನಲ್ಲೊಂದು ಕಾಲು ಇಟ್ಟು ಪಾಕಿಸ್ತಾನಕ್ಕೆ ಹಣ ಸಲ್ಲಿಸಬೇಕೆಂದು ಕೇಳಿದರು. ಮತ್ತು ಅದರಿಂದ ಜಾತೀಯ ಸೌಹಾರ್ದ ಉತ್ಪನ್ನವಾಗುವುದೆಂದು ಹೇಳಿದರು. ಮುಖಂಡರು ಅವರ ಮಾತಿಗೆ ತಲೆವಾಗಿ ಪಾಕಿಸ್ತಾನಕ್ಕೆ ಹಣ ಕೊಡಮಾಡಿದರು. ಆದರೆ ಸೌಹಾರ್ದವೊತ್ತಟ್ಟಿಗಿರಲಿ, ಕೃತಜ್ಞತೆಯನ್ನು ಸೂಚಿಸಿ ಕೂಡ ಪಾಕಿಸ್ತಾನವು ಈ ಹಣವನ್ನು ಸ್ವೀಕರಿಸಲಿಲ್ಲ. ಇದು ರಾಷ್ಟ್ರದ ಗೌರವಕ್ಕೆ ದೊಡ್ಡ ಹಾನಿ. ವ್ಯಕ್ತಿ ಎಷ್ಟೇ ದೊಡ್ಡವನಿದ್ದರೂ ಅವನ ಇಚ್ಛೆಯಂತೆ ಮಹತ್ತ್ವದ ವಿಷಯುಗಳನ್ನೆಲ್ಲ ಮಾರ್ಪಡಿಸುವುದು ಅಕೀರ್ತಿಕರ. ಆದರೂ ಉಪವಾಸದಿಂದ ಮಹಾತ್ಮರು ಪಾರಾದರೆಂಬುದು ದೊಡ್ಡ ಸಂಗತಿ. ಮಹಾತ್ಮರು ಅಂಥ ಇಂಥ ವ್ಯಕ್ತಿಗಳಲ್ಲ. ನಿಜವಾಗಿಯೂ ಅವರು ಮಹಾತ್ಮರು, ದೇಶದ ಸಿತಾಮಹರು. ಅವರ ತತ್ತ್ವ ದೊಡ್ಡದು, ಉದಾತ್ತವಾದದ್ದು. ಆದರೆ ದೊಡ್ಡ ತತ್ತ್ವಗಳನ್ನಿಟ್ಟುಕೊಳ್ಳುವುದು ಒಮ್ಮೊಮ್ಮೆ ಅನೆ ಸಾಕಿದಂತೆ ಭಾರವಾಗುವುದು.

ತನದ ಎಚ್ಚರನ್ನು ಕಾಪಾಡಿ, ಅವರಲ್ಲಿ ಸಂಘಟನೆಯನ್ನುಂಟುಮಾಡುವಂತೆ ಅನೇಕ ಸಾಂಸ್ಕೃತಿಕ ಚಟುವಟಿಕೆಗಳನ್ನಿದು ನಡೆಯಿಸಿರುವುದು. ಆದರ್ಶ ಸಾಧಿಸಿ ಚಿರಕಾಲ ಬಾಳಲಿ.

೧೬೪. **ಸ್ವಾಮಿಜಿಯ ಪತ್ರಗಳು** (ಶ್ರೀಸ್ವಾಮಿ ವಿವೇಕಾನಂದರ ಪತ್ರ ಸಂಗ್ರಹದ ಅನುವಾದ). ಅನುವಾದಕರು: ಶ್ರೀ. ಕೋ. ಚೆನ್ನಬಸಪ್ಪ, ಬಳ್ಳಾರಿ. ಪ್ರಕಾಶಕರು: ಎಸ್. ಎಸ್. ಎನ್. ಪುಸ್ತಕ ಪ್ರಕಟನಾಲಯ, ಹೊಸ ಮಾರ್ಕೆಟ್, ಬೆಂಗಳೂರು. ಕ್ರೌ. ಅ. ೧೪೦ ಪುಟಗಳು. ಬೆಲೆ ೧—೮—೦.

೧೬೫. **ಕನ್ನಡ ಸಾಹಿತ್ಯ ಮತ್ತು ರಾಜಾತ್ರಯ** (ಸಾಹಿತ್ಯಚರಿತ್ರೆ) ಬರೆದವರು: ಶ್ರೀ. ಡಿ. ಎನ್. ರಾಮು, ಎಂ. ಎ. ಪ್ರಕಾಶಕರು ಮೇಲಿನ ಎಸ್. ಎಸ್. ಎನ್. ಪುಸ್ತಕ ಪ್ರಕಟನಾಲಯದವರೆ ಕ್ರೌ. ಅ. ೫೪ ಪುಟಗಳು. ಬೆಲೆ ೦—೧೦—೦.


AYURVEDASHRAM
PHARMACY LTD.
AHMEDNAGAR
ಆಯುರ್ವೇದ ಕ್ಷೇತ್ರದಲ್ಲಿ ಈಗ ಆಯುರ್ವೇದಾಶ್ರಮ ಮಂದಿರ ತಯಾರಿಕೆಗಳು ಜನತೆಯ ಅಧಿಕ ವಿಶ್ವಾಸಕ್ಕೆ ಪಾತ್ರವಾಗಿ ಅತಿಶಯ ಗೌರವ ಪಡೆದಿವೆ. ಈ ಉತ್ಕೃಷ್ಟ ಗುಣಕಾರಕ ಮತ್ತು ಭರವಸೆಯ ಔಷಧಗಳು ಪುಧ್ಯಹಿಂದುಸ್ತಾನದ ಪ್ರಮುಖ ಕೆಮಿಸ್ಟರಲ್ಲಿಯೂ ಸಹ ಈಗ ದೊರೆಯುತ್ತವೆ.
THE SEAL
YOU CAN
TRUST
AYURVEDASHRAM PHARMACY LTD.,
AHMEDNAGAR

ಮಹಾತ್ಮರ

ಸಂಚಿಕೆ

ಶಾರದೆ

ಾಬರ್ಗಿ
ಗಳಲ

ಖ್ಯ ಲೇಖಕರು

ರಾ. ಜೇಂದ್ರೆ
ೀಕಾಕ
ಹನುಮಂತರಾವ್
ಶ್ರೀ. ಮುಗುಳಿ
ಸ್. ಜಿ. ಜೇಂದ್ರೆ
ಪಾಲಕೃಷ್ಣರಾವ್
ಎ. ಎನ್. ರಾವ್
ಸಿ ಅಣ್ಣಾರಾಯರು
ಚೆನ್ನಬಸಪ್ಪ

ಇತ್ಯಾದಿ.

ಯ ಸಂಚಿಕೆ

ಆಣೆ

ಸಂಪಾದಕರು : ಬೆಟಗೇರಿ ಕೃಷ್ಣಶರ್ಮರು

ಸಂಪುಟ ೧೦ | ಮಹಾತ್ಮರ ಸಂಚಿಕೆ. ೭ನೆಯ ಮಾರ್ಚ್ ೧೯೪೮ | ಸಂಚಿಕೆ ೮

ಮುಖ್ಯ ವಿಷಯಗಳು

ಶ್ರದ್ಧಾಂಜಲಿ (ಕವನ)	'ಅಂಬಿಕಾತನಯದತ್ತ'	೩೭
ಮಹಾತ್ಮರಿಗೆ : (ಕವನ)	'ಆನಂದಕಂದ'	೩೭
ಸಂಪಾದಕೀಯ (ಮಹಾತ್ಮರ ನಿಯೋಗ)	ಸಂಪಾದಕರು	೩೮
ಅಮರಕೀರ್ತಿ ಗಾಂಧೀಜಿ	ಪ್ರೊ. ವ. ರಾ. ಜೋಶಿ ಎಂ. ಎ., ಸೊಲ್ಲಾಪುರ	೩೮
ಮಹಾತ್ಮಾಜಿಯವರ ಜೀವನದ ಮಾಹಾತ್ಮ್ಯ	ಶ್ರೀ. ಎಸ್. ಕೆ. ಕುಲಕರ್ಣಿ ಎಂ.ಎ., ಬಿ. ಟಿ ಮುಂಬಯಿ	೩೮
ಮಹಾತ್ಮಾ ಗಾಂಧಿ (ಕವನ)	ಶ್ರೀ. ಡಿ. ವಿ. ಗುಂಡಪ್ಪನವರು ಬೆಂಗಳೂರು	೩೯
'ಬಾಪು'ವಿಗೆ (ಕವನ)	ಶ್ರೀ. ಎ. ಎನ್. ರಾಮಕೃಷ್ಣ, ಕಾರಕಳ	೩೯
ಮಹಾತ್ಮರನ್ನು ಕಂಡ ನೆನಪು	ಶ್ರೀ. ವಿಜಿ ಅಣ್ಣಾರಾಯರು, ಧಾರವಾಡ	೩೯
ಸ್ಥಿತಪ್ರಜ್ಞ ಗಾಂಧೀಜಿಯವರು	ಪ್ರೊ. ರಂ. ಶ್ರೀ. ಮುಗಳಿ ಎಂ.ಎ., ಬಿ.ಟಿ. ಸಾಂಗಲಿ	೩೯
ಸಾಕ್ರೆಟೀಸ್, ಏಸುಕ್ರಿಸ್ತ ಮತ್ತು ಮಹಾತ್ಮಾ ಗಾಂಧಿ	ಶ್ರೀ. ಜಿ. ಹನುಮಂತರಾವ್ ಎಂ.ಎ., ಮೈಸೂರು	೩೯
ಉತ್ಪಾತ (ಕವನ)	ಶ್ರೀ. ಸಾಲಿ ರಾಮಚಂದ್ರರಾಯರು ಬಿ.ಎ., ಧಾರವಾಡ	೪೪
ಅಹಿಂಸೆ (ಕವನ)	'ಗೀತಾಪ್ರಿಯ' ಧಾರವಾಡ	೪೪
ಅಮರಜ್ಯೋತಿ (ಕವನ)	ಶ್ರೀ. ಕೃಷ್ಣಮೂರ್ತಿ ಪುರಾಣಿಕ, ಬಿ.ಎ.,ಬಿ.ಟಿ. ಗೋಕಾಕ	೪೪
ಒಂದು ನೆನಪು	ಶ್ರೀ. ಜೋಶ್ರಿ ಲಕ್ಷ್ಮಣರಾಯರು, ಧಾರವಾಡ	೪೪
ಮಹಾತ್ಮರೂ ಆಯುರ್ವೇದವೂ	ಆ. ವಿದ್ವಾನ್ ಮ. ಗೋಪಾಲಕೃಷ್ಣರಾವ್ ಧಾರವಾಡ	೪೪
ಮಹಾತ್ಮಾಜಿಯವರ ಜೀವನದ ಘಟನೆಗಳು	ಪ್ರಿನ್ಸಿಪಾಲ್ ವಿ. ಕೃ. ಗೋಕಾಕ ಬಿ.ಎ. (ಆಕ್ಸ್ಫನ್)	೪೪
ಭಾಗ್ಯವದು ಬಯಲಾಯಿತೆ ? (ಕವನ)	ಶ್ರೀ. ಪಾಲಿ ಗಂಗಪ್ಪನವರು, ಹುಬ್ಬಳ್ಳಿ	೪೪
ಬಾಪೂಜಿಯವರ ನತ್ಸಂಗದಲ್ಲಿಯ ನೆನಪುಗಳು	ಶ್ರೀ. ಗೋನಾವಿ ಕೃಷ್ಣರಾಯರು 'ಭಾರತ ಸಂಚಾರಿ'	೪೪
ಮಹಾತ್ಮರ ಕೊಲೆ ಅಥವಾ ಹಿಂ. ಮು. ಬಕ್ಷ	ಶ್ರೀ. ವೀ. ಗೋ. ಕುಲಕರ್ಣಿ ಧಾರವಾಡ	೪೪
ಮಗನ ಮನದಳಲು (ಅನುವಾದಿತ ಲೇಖನ)	ಶ್ರೀ. ಆರ್. ವಿ. ಕುಲಕರ್ಣಿ ಎಂ.ಎ., ಧಾರವಾಡ	೪೪
ಸೋಲರಿಯದ ಶಕ್ತಿ	ಪ್ರೊ. ಎನ್. ಆರ್. ಮಳಗಿ ಎಂ.ಎ., ಧಾರವಾಡ	೪೪
ರಾಜಕೀಯ ಲೋಕದ ಅವಲೋಕನ	'ರಾಯರ ಅವ್ವಾಜಿ'	೪೪
ನಾದರ ಸ್ವೀಕಾರ	....	೪೪

ಶ್ರೀಉರವಕೊಂಡ ಜಗದ್ಗುರುಗಳವರ

ಜಯಂತಿಯ ಯೋಗಕ್ಷೇಮದ ಚಿಂತನೆ — ಆಶೀರ್ವಾದ

"ನಿಮ್ಮ ಬರುವಿಕೆಯನ್ನು ಬಹಳ ನಿರೀಕ್ಷಿಸಿದೆವು....ಜಯಂತಿಯು ಈಗಿನ ತನ್ನ ಘೋರಣೆಯನ್ನೆ ಮುಂದುವರಿಸಿಕೊಂಡು, ಅದು ಅತ್ಯಗತ್ಯವಾಗಿ ನಾಡಿಗೆ ಮಾರ್ಗದರ್ಶಕವಾಗಬೇಕಿದೆ. ಹಿಂದಿನ ನಿಮ್ಮ ಕಷ್ಟದ ಸ್ಥಿತಿಯ ಅರಿಕೆಯನ್ನು ಓದಿದಾಗಿನಿಂದ ಮನಸ್ಸಿಗೆ ತುಂಬ ದುಃಖವಾಗಿದ್ದು, ಕಷ್ಯವಾದ ಮಟ್ಟಿಗೆ ಆರ್ಥಿಕ ರೀತಿ ಸ್ಥಿರವಾಗಲು ಹೇಗೆ ಪ್ರಯತ್ನಿಸಬೇಕೆಂಬುದೇ ನಮ್ಮ ಇಚ್ಛೆಯಾಗಿದೆ.....

.....ನಿಮ್ಮ ಆದರ್ಶ ಬಹಳ ಶ್ರೇಷ್ಠವಾಗಿದೆ. ನ. ಜಿ. ಕೇಳ್ಕರರ ಸ್ಮಾರಕಕ್ಕೆ ಕರ್ನಾಟಕದ ಹಣ ಅನವಶ್ಯ-ವೆಂದವರು ನೀವು ಒಬ್ಬರೆ. ಆ ಧೈರ್ಯ ಬೇರೆಯವರಿಗೆ ಬರಲಿಲ್ಲ. ಆತ್ಮಸಾಕ್ಷಿಗೆ ವಿರುದ್ಧವಾಗಿ ಜನ ವರ್ತಿಸುತ್ತಿದೆ. ಒಟ್ಟಿನಲ್ಲಿ ಜಯಂತಿ ನ್ಯಾವಲಂಬಿಯಾಗುವಂತೆ ಪ್ರಯತ್ನಿಸಲೇ ಬೇಕು. ನಿಮಗೆ ಗೆಲುವಾಗಲಿ. **ಇತಿ** ಶುಭಾಶಿಃ"

(ಶ್ರೀ ಶ್ರೀ ಜಗದ್ಗುರುಗಳವರು ಅನುಗ್ರಹಿಸಿ ಸಂಪಾದಕರಿಗೆ ಬರೆದ ಪತ್ರವಿದೊಂದು)

ವಾರ್ಷಿಕ ಚಂದಾ
೪—೮—೦

ಪ್ರತಿತಿಂಗಳ ೧ನೆಯ ತಾರೀಖಿಗೆ
ಪ್ರಕಟವಾಗುವುದು.

ಶ್ರದ್ಧಾಂಜಲಿ

'ಅಂದಿಕಾತನಯದತ್ತ'

೧

ಹಿಂಸೆ ಕೊನೆಗಹಿಂಸೆಯನ್ನು ಗುಂಡುಹಾಕಿ ಕೊಂದಿತೋ ?
ತನ್ನ ಕೊಲೆಯ ಕೊನೆಗಾಣಿಸೆ ಇವಗೆ ಶರಣು ಬಂದಿತೋ ?
'ಅಯ್ಯೋ ಇವನು ಅಮರ, ನಾನೆ ತಾನೆ ಸತ್ತೆ' ಎಂದಿತೋ—
'ನಾನೆ ಸತ್ತೆ' ಎಂದಿತೋ ?

೨

ಗಾಂಧಿದೇಹ ಸುಟ್ಟ ಬೆಳಕು ಜಗನ ತಮವ ಕಳೆದಿದೆ,
ಗಾಂಧಿ ಹೋದರೆಂಬ ಸುದ್ದಿ ಬಾನ ತುಂಬಿ ಉಳಿದಿದೆ,
ಗಾಂಧಿಗಂಧ ದಿಗ್-ದಿಗಂತ ಕೀರ್ತಿರೂಪ ತಳೆದಿದೆ—
ಕೀರ್ತಿರೂಪ ತಳೆದಿದೆ!

೩

ತೀರ್ಥಗಳ ಪವಿತ್ರ ಮಾಡಿದಂಥ ತೀರ್ಥರೂಪನು
ಯಜ್ಞವಾದ ಬಾಳಿನಲ್ಲಿ ತಾ ಸುಖಸ್ವರೂಪನು—
ಸೋಲನೆಲ್ಲ ಗೆಲವುಗೊಳಿಸಿ ಮುಕ್ತನಾದ ಭೂಪನು—
ಮುಕ್ತನಾದ ಭೂಪನು.

೪

ಬತ್ತಿ ಸುಟ್ಟು ಹೋದರೇನು ಬೆಳಕು ನಂದಿತೆಂಬರೆ ?
ಹಾಕೆ ಬತ್ತಿ ದೀಪವೆತ್ತಿ ಇರುವ ಜ್ಯೋತಿ ಕಾಂಬರೆ !
ಎಣ್ಣೆ ತೀರಿತೆನ್ನ ಬೇಡಿ ಬೇರೆ ನೇಹ ತುಂಬರೆ—
ಬೇರೆ ನೇಹ ತುಂಬರೆ ?
ಹಿಂಸೆ ಕೊನೆಗಹಿಂಸೆಯನ್ನು ಗುಂಡುಹಾಕಿ ಕೊಂದಿತೊ ?
ತನ್ನ ಕೊಲೆಯ ಕೊನೆಗಾಣಿಸೆ ಇವಗೆ ಶರಣು ಬಂದಿತೊ ?

ಮಹಾತ್ಮನಿಗೆ:

'ಆನಂದಕಂದ'

ನಮನವಿದೋ ನಮನವಿದೋ ನಮನ ಸಹಜಯೋಗಿ,
ಸಮತೆಗಾಗಿ ಬಾಳ್ವೆಯನೇ ಬೇಳ್ದ ನವ-ವಿರಾಗಿ !
ಕತ್ತಲೆಯು ಗುರಿಯ ದಾರಿ ಕಾಂಬ ಕಣ್ಣು ನಿನ್ನದೊ—
ತತ್ತ್ವಮಾತೆಯಶ್ರುತ ರವ ಕೇಳ್ವ ಕಿವಿಯು ನಿನ್ನದೊ ;
ನಿಗಡ ರಜದೊಳಿದ್ದು ಸೊನಡು ತಗಲದ ಮನ ನಿನ್ನದೊ—
ಜಗದ ಸೌಖ್ಯಕೆಂದೆ ಬೆರಳನೆಣಿಪ ಬುದ್ಧಿ ನಿನ್ನದೊ ! ೧

ನಿನ್ನ ಉಸಿರದೊಂದೊಂದೂ ಜಡಕೆ ಜೀವವಿತ್ತಿತೊ—
ನಿನ್ನ ಧಮನಿ-ಮಿಡಿತವಹಹ ಚೈತನ್ಯವ ಬಿತ್ತಿತೊ ;
ನಿನ್ನ ವಾಣಿ ದಿಗ್ದೇಶಕೆ ನನ್ನಿಯ ನೆಲೆ ತಿಳುಹಿತೊ—
ನಿನ್ನ ಗೆಯ್ಮೆ ಸಾವ ಜೀವಜಂಗುಳಿಯನ್ನು ಳುಹಿತೊ ! ೨

ಸ್ಫೈತ್ರಿಯಿಂದೆ ಶತ್ರುಗಳನು ಸೋಲಿಸಿರುವ ವೀರ—
ಮೃತ್ಯುವನೂ ಮಿತ್ರನಂತೆ ಸ್ವಾಗತಿಸಿದ ಧೀರ ;
ನಿನ್ನ ನೌಕೆ ನಂಬಿದವರನು ತಲ್ಪಿಸಿತೈ ತೀರ—
ನೀನು ನಡೆದ ದಾರಿಯದೇ ಸತ್ಯಧರ್ಮಸಾರ ! ೩

ಬಲುಮೆ ಮೋಸಗಳನು ಹಣೆಯೆ ಕಲಹಗೈದೆ ರಾಜ,
ಕಲಿಸಿದೆ ಜೀವನವ ಜೆಲ್ವುಗೊಳಿಪ ಕಲೆಯನೋಜ ;
ನಿಲಿಸಿದೆ ನಾಡಿಗರ ಹೃದಯದೊಳಗೆ ದಿವ್ಯ ತೇಜ—
ಸಲಿಪುದೆಂತು ಶ್ರದ್ಧಾಂಜಲಿ ಎಲ್ಲರಂತೆ ಸಾಜ ? ೪

ನಮನವಿದೋ ನಮನವಿದೋ ನಮನ ಸಹಜಯೋಗಿ,
ಸಮತೆಗಾಗಿ ಸರ್ವಸ್ವವ ತೆತ್ತ ಮಹಾತ್ಯಾಗಿ !

ಮಹಾತ್ಮರ ವಿಯೋಗ

ಕೊಲೆಗಾರನ ಸಂಚಿನಲ್ಲಿ ಸೇರಿದ ಕೆಲವು ಜನರನ್ನುಳಿದರೆ, ಮಹಾತ್ಮರ ವಿಯೋಗದ ವಿಚಾರವನ್ನು ಭಾರತದಲ್ಲಿ ಮಿಕ್ಕವರಾರೂ ಕನಸಿನಲ್ಲಿ ಕೂಡ ಭಾವಿಸಿರಲಾರರು. ಮುಗಿಲಿಂದ ಬಿದ್ದ ಮಚ್ಚಿನಂತೆ, ಮಹಾತ್ಮರ ಕೊಲೆಯ ಸುದ್ದಿ ನಮ್ಮೆಲ್ಲರ ಹೃದಯದ ಮೇಲೆ ಅಪಹನೀಯವಾದ ಆಘಾತವನ್ನು — ಅಕಸ್ಮಾತ್ತಾಗಿ— ಉಂಟು ಮಾಡಿತು. ಮಹಾತ್ಮರೆಂದರೆ ನಮಗೆಲ್ಲ ಹೆಮ್ಮೆಯ ಹಿರಿಯರಾಗಿದ್ದಂತೆಯೆ ಧೈರ್ಯದ ಖನಿಯೂ ಆಗಿದ್ದರು. ಭಾರತೀಯರಿಗೆಲ್ಲ ಭಾಗ್ಯವಿಧಾತರಾಗಿ ಗಾಂಧೀಜಿಯವರಿದ್ದಾರೆಂದು, ಇದುವರೆಗೆ ನಾವು ಲೋಕದೆದುರು ಅಭಿಮಾನದಿಂದ ಹೇಳಿ, ತಲೆಯೆತ್ತಿ ತಿರುಗುತ್ತಿದ್ದೆವು. ಇಂದು ನಮ್ಮ ತಪ್ಪಿನಿಂದ ನಾವೆ ಅವರನ್ನು ಕಳೆದುಕೊಂಡು, ಅವಮಾನದಿಂದ ತಲೆತಗ್ಗಿಸಿ ತಿರುಗುವ ಸಂದರ್ಭ ತಂದುಕೊಂಡಿದ್ದೇನೆ. ಸರಿಯಾಗಿ ವಿಚಾರಮಾಡಿ ನೋಡೋಣ : ಗಾಂಧೀಜಿಯವರನ್ನು ಗೋಡಸೆಯೆಂಬ ವ್ಯಕ್ತಿಯೊಂದೇ ಕೊಂದಿತೆ? ಇಲ್ಲ. ಗಾಂಧೀಜಿಯವರ ದೇಸಮಾನತೆಯ ಹಿರಿಮೆಯನ್ನು ಅರಿಯದೆ, ಅಜ್ಞಾನ-ನ್ಯಾರ್ಧ-ದುರಭಿಮಾನಗಳಿಂದ ಅವರನ್ನು ಕಂಡ ಭಾರತೀಯರೆಲ್ಲರೂ ದೇಶದಲ್ಲಿ ಒಂದು ದುಶ್ಶಕ್ತಿಯನ್ನು ಹುಟ್ಟಿಸಿದರು; ಕೊಲೆಗಾರ ಗೋಡಸೆ ಈ ದುಶ್ಶಕ್ತಿಯ ವ್ಯಕ್ತಿನಿಧಿಯಾಗಿ ಕೆಲಸಮಾಡಿದನಿಷ್ಟೆ. ಈ ದುಶ್ಶಕ್ತಿನಿರ್ಮಾಪಕರಲ್ಲಿ ಹಿಂದುಗಳಿದ್ದಾರೆ; ಅಹಿಂದುಗಳೂ ಇದ್ದಾರೆ. ಕಾಂಗ್ರೆಸ್ಸಿಗರಿದ್ದಾರೆ; ಕಾಂಗ್ರೆಸ್ಸಿಗರಲ್ಲದವರೂ ಇದ್ದಾರೆ. ಸರಕಾರದ ಅಧಿಕಾರಿಗಳಿದ್ದಾರೆ; ಸಾಮಾನ್ಯ ಜನರೂ ಇದ್ದಾರೆ. ಸಾಜವಾದಿಗಳಿದ್ದಾರೆ; ಸಮತಾವಾದಿಗಳಿದ್ದಾರೆ; ಸರ್ವಾಧಿಕಾರಿ ವಾದಿಗಳಿದ್ದಾರೆ. ಎಲ್ಲರಲ್ಲಿಯೂ ಉಲ್ಬಣಸ್ಥಿತಿಗೇರಿದ್ದ ಅಧಿಕಾರವ್ಯಾಮೋಹ, ಅದಕ್ಕಾಗಿ ಅವತಾರ ತಾಳಿದ್ದ ಜಾತಿದ್ವೇಷ ಇವೆರಡೂ ಸೇರಿ, ದೇಶದಲ್ಲಿ ಭಸ್ಮಾಸುರ ಶಕ್ತಿಯನ್ನು ನಿರ್ಮಿಸಿದುವು. ಆ ಭಸ್ಮಾಸುರ, ಭಾರತದ ಭಾಗ್ಯಶಕ್ತಿಯನ್ನೆ ಸುಟ್ಟುಬಿಟ್ಟ. ಕಳೆದುಕೊಂಡ ಮೇಲೆ ಬುದ್ಧಿ ಬಂದವರಂತೆ ಇಂದು. ಎಲ್ಲರೂ ಮಹಾತ್ಮರಿಗಾಗಿ ದುಃಖಿಸುತ್ತಿದ್ದಾರೆ. ಈ ದುಃಖಿಗಳಲ್ಲಿ ನಿಜವಾಗಿ ಅಳುವವರೆಷ್ಟೊ, ಸಂಪ್ರದಾಯಕ್ಕಾಗಿ ಅಳುವವರೆಷ್ಟೊ, ಅಳುವುದರ ನಟನೆ ಮಾಡುವವರೆಷ್ಟೋ....ಅವರವರ ಆತ್ಮಸಾಕ್ಷಿಗೆ ಗೊತ್ತು. ಮಹಾತ್ಮರ ಅಗಲಿಕೆಗಾಗಿ ನಾವೆಲ್ಲರೂ ನಿಜವಾಗಿಯು ಅಳುತ್ತಿದ್ದರ, ಅವರ ಕೂಲಯು ಆಗುತ್ತಿರಲ ಇಲ್ಲ; ಸಂಕಲ್ಪದಂತೆ ಅವರು ೧೫೦ವರ್ಷ ಬದುಕಿ, ಮಾಡಬೇಕಾಗಿದ್ದ ತಮ್ಮಹಲವು ಲೋಕಕಲ್ಯಾಣ ಕಾರ್ಯವನ್ನು ಮಾಡಿ ಕೃತಾರ್ಥರಾಗುತ್ತಿದ್ದರು. ನಮ್ಮ ಜನರ ಸ್ವಾರ್ಥಮೂಲಿವಾದ ಅಜ್ಞಾನ-ಪಶುತನಗಳು ದುಡುಕಿದುವು. ಇದರಿಂದ ಮಹಾತ್ಮರದೇನೂ ಹಾನಿಯಾಗಲಿಲ್ಲ; ಲೋಕದ—ಅದರಲ್ಲಿಯೂ ಭಾರತದ—ಹಾನಿಮಾತ್ರ ಹೇಳಕೂಡದಷ್ಟಾಯಿತು. ಮರಣವೂ ಮಹಾತ್ಮರನ್ನು ದೊಡ್ಡವರೆಂದು ಒಪ್ಪಿಕೊಂಡಿತು. ಬದುಕೂ ಇಂದು ನಮ್ಮನ್ನು ಕೀಳರಿಗಿಂತ ಕೀಳರನ್ನು ಮಾಡಿ ಜಿಲ್ಲಿದೆ. ಮಹಾತ್ಮರಿಂದಂತೆ ನಡೆದು ಕೊಳ್ಳದ ನಮ್ಮಜನತೆಗೆ ಇಂದು ಅಳುವುದಕ್ಕೂ ಅಧಿಕಾರವಿಲ್ಲ. ಅವರ ಆತ್ಮಕ್ಕೆ ಶಾಂತಿಯನ್ನು ಹಾರಯಿಸುವ ಅಧಿಕಾರವೂ ಇಲ್ಲ. ಅವರೆಂದುದನ್ನು ತಿಳಿದು ನಾವೆಲ್ಲ ನಡೆಯತೊಡಗಿದರೆ, ಅಂದು ನಿಜವಾಗಿಯೂ ಮಹಾತ್ಮರ ವಿಯೋಗಕ್ಕಾಗಿ ಅಳಲು ಅಧಿಕಾರ ದೊರೆವುದು; ಶ್ರದ್ಧಾಂಜಲಿಯನ್ನು ಸಮರ್ಪಿಸುವ ಅಧಿಕಾರ ದೊರೆವುದು. ಅಂದೆಯೆ ದಿವ್ಯಾತ್ಮರಾದ ಮಹಾತ್ಮರಿಂದ ನಮಗೆ ಹೊಸಬೆಳಕು ದೊರೆತು, ಮುಂದುವರಿವ ದಾರಿ ಅಖಂಡವಾಗಿ ಕಾಣತೊಡಗುವುದು.

ಮಹಾತ್ಮರ ಸಂಚಿಕೆ

ಫೆಬ್ರುವರಿ ಸಂಚಿಕೆ ಮಹಾತ್ಮರ ಅಗಲಿಕೆಗೆ ಮೊದಲೇ ಪ್ರಕಟವಾಗಿ ಹೋಗಿಬಿಟ್ಟಿದ್ದಿತು. ಆದುದರಿಂದ ಅದರಲ್ಲಿ ಮಹಾತ್ಮರ ನಿಧನದ ವಿಚಾರವನ್ನೇನೂ ಬರೆಯಲಿಕ್ಕಾಗಲಿಲ್ಲ. ಮಾರ್ಚ್ ಸಂಚಿಕೆಯನ್ನು ' ಮಹಾತ್ಮರ ಸಂಚಿಕೆ 'ಯನ್ನಾಗಿ ಹೊರಡಿಸಬೇಕೆಂದು ಸಂಕಲ್ಪಿಸಲಾಯಿತು. ಕನ್ನಡ ಸಾಹಿತ್ಯಿಕರ ಹೃದಯದಲ್ಲಿ ಮಹಾತ್ಮರಿಗೆ ದೊರೆತಿರುವ ಸ್ಥಾನವಾವುದೆಂಬುದನ್ನು ಈ ಸಂಚಿಕೆಯ ಮೂಲಕ ಪ್ರಕಟಿಸಬೇಕೆಂಬ ಉದ್ದೇಶದಿಂದ, ಇರುವ ಸ್ವಲ್ಪ ಅವಧಿಯಲ್ಲಿಯೆ ಕೆಲವು ಜನ ಲೋಕಪ್ರಿಯ ಸಾಹಿತಿಗಳಿಗೆ ಲೇಖನ-ಕವನಗಳನ್ನು ಬರೆದು ಕಳುಹಲಿಕ್ಕೆ ಬಿನ್ನವಿಸಿಕೊಂಡು ಆಯಿತು. ಜಯಂತಿಯ ಪುಟಸಂಖ್ಯೆಗಳ ಪರಿಮಿತಿಯನ್ನು ಲಕ್ಷ್ಯದಲ್ಲಿ ಇರಿಸಿಕೊಂಡು, ಬಹಳ ಜನ ಲೇಖಕರಿಗೆ ಲೇಖನಗಳಿಗಾಗಿ ಬರೆಯಲಿಕ್ಕೆ ಧೈರ್ಯವಾಗಲಿಲ್ಲ. ಇಬ್ಬರು ಮೂವರನ್ನು ಬಿಟ್ಟರೆ, ಕೇಳಿದವರೆಲ್ಲ ಲೇಖನಗಳನ್ನು ಕಳುಹಿ, ಸಂಚಿಕೆಯ ಪುಟಗಳ ಬೆಲೆಯನ್ನು ಹೆಚ್ಚಿಸಿದರು. ಅದಕ್ಕಾಗಿ ಈ ಸಂಚಿಕೆಯ ಲೇಖಕ ವರ್ಗಕ್ಕೆಲ್ಲ ಕೃತಜ್ಞತೆಯ ಪಂದನೆಗಳು.

ಛಾಯಾಚಿತ್ರಗಳನ್ನು ತರಿಸಿ ಹೊಸ ಪಡಿಯಚ್ಚುಗಳನ್ನು ಮಾಡಿಸುವ ಅನುಕೂಲವೂ ಅವಕಾಶವೂ ನಮಗೆ ಇರಲಿಲ್ಲ. ಹೆಚ್ಚಿನ ಪಡಿಯಚ್ಚುಗಳೆಲ್ಲ ಹುಬ್ಬಳ್ಳಿಯ ' **ನವಯುಗ** ' ಡೈನಂದಿನಪತ್ರಿಕೆಯ ಸಂಚಾಲಕರ ಔದಾರ್ಯದಿಂದ ದೊರೆತುವು. ಶ್ರೀ. ಭಾಲಚಂದ್ರ ಘಾಣೇಕರರಿಂದಲೂ ಶ್ರೀ. ಬುರ್ಲಿ ಬಿಂದುಮಾಧವ

(೫೬ನೆಯ ಪುಟಕ್ಕೆ ಮುಂದೆಸಾಗಿದೆ)

ಅಮರಕೀರ್ತಿ ಗಾಂಧೀಜಿ

ಪ್ರೊ. ಡ. ರಾ. ಬೇಂದ್ರೆ ಎಂ. ಎ.
ಸೊಲ್ಲಾಪೂರ

★

ಗಾಂಧೀಜಿಯವರ ಜೀವನವು ಬರಲಿರುವ ಭಗವಜ್ಜೀವನದ ಪ್ರಸ್ತಾವನೆ ಮಾತ್ರ. ಅವರ ದೇಹವು ಜ್ವಾಲೆಯಾಗಿ ಮುಂದಿನ ಬೆಳಕಾಗಿ ನಿಂತಿದೆ.

★

ನಾನು ಅವರನ್ನು ಕಂಡದ್ದು ನಾಲ್ಕು ಸಲ. ಮೊದಲನೆಯ ಸಲ ಪೂನಾದಲ್ಲಿ ಕಂಡೆ. ನಾನು ಆಗ ಕಾಲೇಜಿನ ವಿದ್ಯಾರ್ಥಿ. ಗಾಂಧಿಯವರು ಆಫ್ರಿಕೆಯಿಂದ ಬಂದು ಭಾರತಸಂಚಾರ ಕೈಕೊಂಡಿದ್ದರು. ಅವರ ಜೊತೆಗೆ ಕಸ್ತೂರಿಬಾಯಿಯವರೂ ಇದ್ದರು. ಗಾಂಧಿಯವರ ಆಗಿನ ವೇಷ ಮತ್ತು ಭಾಷೆ, ಸಾಮಾನ್ಯತೆಯ ಮರೆಗೆ ಒಂದು ಅಸಾಮಾನ್ಯತೆಯನ್ನು ಪ್ರಕಾಶಿಸಿದುವು; ಅವರು ದೊಡ್ಡವರು. ಟಿಳಕ, ಗೋಖಲೆಯವರ ಇಬ್ಬಣದ ಉಬ್ಬಣವನ್ನು ಪೂನಾ-ಜೀವನದಲ್ಲಿ ಕಂಡ ನನಗೆ ಅದರ ವಿಚಾರ-ಸರಣಿ ಹೇಗೆ ಸಮ್ಮತವಾಗಲಿಲ್ಲವೋ ಹಾಗೆಯೇ, ಗಾಂಧಿಯವರ ತ್ಯಾಗದ ಸಾತ್ತ್ವಿಕಕ್ಷಾತ್ರವು ನನ್ನಂಥವರಿಗೆ ನಿಲುಕದ್ದು—ಎಂದು ತೋರಿತು. ಆಗ ನನ್ನ ಮನಸ್ಸು ಟಾಗೋರ, ಇಮರ್ಸನ್‌ರನ್ನು ಅರಗಿಸಿಕೊಂಡು, ಅರವಿಂದರ ವಿಚಾರಗಂಧವನ್ನು ಮೂಸಿ ನೋಡುತ್ತಿತ್ತು. ಮುಂದೆ ಒಂದುವರೆ ವರ್ಷದಲ್ಲಿ ಶ್ರೀ. ವಿನೋಬಾ ಭಾವೆಯವರ ಸಹವಾಸ ಒಂದು ದಿನದ ಮಟ್ಟಿಗೆ ಆಗಿ, ಗಾಂಧಿಯವರ ಸಹವಾಸದಿಂದ ಸಿದ್ಧನಾದ ಒಬ್ಬ ತರುಣನ ಕೆಚ್ಚು, ಒಗರು ಯಾವ ಬಗೆಯವಿರುತ್ತವೆ ಎಂಬುದನ್ನು ಅರಿತುಕೊಂಡೆ. ಆ ಕಾಲಕ್ಕೆ ನಾನು ನೀಟ್ಸೆಯ 'Thus spoke Zarathustra' ವನ್ನು ಓದಿ, ಶ್ರೀ. ಅರವಿಂದರ superman ದ ಅರ್ಥ ತಿಳಿದುಕೊಳ್ಳಲು ಹವಣಿಸುತ್ತಿದ್ದೆ. ಈ ಸ್ಥಿತಿಯಲ್ಲಿ ನಾನು ಧಾರವಾಡಕ್ಕೆ ಬಂದೆ.

ವಿಕ್ಟೋರಿಯಾ ಹೈಸ್ಕೂಲಿನೊಳಗಿನ ಮಹತ್ತ್ವದ ಜೀವನವು ಮೂರು ವರ್ಷಗಳಲ್ಲಿಯೆ ಮುಗಿತಾಯಕ್ಕೆ ಬರುವ ವಿಷಮ ಸಂಧಿಕಾಲದಲ್ಲಿ ಗಾಂಧಿಯವರ ಬಿರುಗಾಳಿ ಬೀಸಿತು. ಗಾಂಧಿಯವರು ಧಾರವಾಡಕ್ಕೆ ಬಂದೇ ಬಿಟ್ಟರು. ಏನವರ ಭಾಷಣ! ಏನಾ ಉನ್ಮಸನಮುದಾಯ!! ಏನು ಉತ್ಸಾಹ!!! ಗಾಂಧಿಘಂಡಿಗೆ—ಮದುವೆಯ ಕಾಲಕ್ಕೆ ಕೈಯಲ್ಲಿ ಹಾಕಿದ—ಉಂಗುರವನ್ನು ಅರ್ಪಿಸಿ, ಮುಂದೆ ಬೇಗನೆ ಹೊಸ ವರುಷದ ಪ್ರಾರಂಭದಲ್ಲಿ! ಧಾರವಾಡದ ರಾಷ್ಟ್ರೀಯ ವಿದ್ಯಾಲಯದ ನಾಮಧಾರಕ ಸಂಸ್ಥಾಪಕರಲ್ಲಿ ಒಬ್ಬನಾದೆ. ಆಗ ಕೂಡ ನನ್ನ ಮನಸ್ಸು ಹಳೆಯ ಜೀವನಕ್ಕೆ ಹೇಸಿಕೊಂಡಿತ್ತು; ಹೊಸ ಜೀವನವನ್ನು ಮೆಚ್ಚಿ ಕೂಡಿರಲಿಲ್ಲ. ಆದರೂ ಗಾಂಧೀಜಿಯವರ ಜ್ವಲಂತ ವಿಚಾರಗಳು ರವೀಂದ್ರರ ರಸಮಯ ವಿಚಾರಗಳಂತೆಯೂ, ಶ್ರೀ. ಅರವಿಂದರ ಜ್ಯೋತಿರ್ಮಯ ಸೂಕ್ತಿಗಳಂತೆಯೂ ಪಟ್ಟುಹಿಡಿದುವು. ಗಾಂಧೀಜಿ-ರವೀಂದ್ರರ ವಾದ-ಪ್ರತಿವಾದಗಳಲ್ಲಿಯೂ, ಅವರಿಬ್ಬರ ಬಗ್ಗೆ ಇರುವ ಭಕ್ತಿ ಹೊಯ್ದಾಡಲಿಲ್ಲ. ಆಗಿನ 'ಕರ್ಮವೀರ'ದಲ್ಲಿ ಗಾಂಧಿಯವರ ವಿಚಾರಗಳನ್ನು ಹದಗೊಳಿಸಿ ಬರೆಯುವುದು ಹೃದಯದ ವಿನೋದವಾಗಿತ್ತು. ೧೯೩೧ ರಲ್ಲಿ ನಾನು ರಾಮೇಶ್ವರದ ಯಾತ್ರೆಗೆ ಹೋಗಿಬಂದೆ. ದೇಶದುದ್ದಕ್ಕೂ ಅವರ ಪ್ರಭಾವ ನೋಡಿದೆ. "ಅಹಿಂಸಾವ್ರತದ ತರುಣ ತಪಸ್ವಿ" ಎಂಬ ನನ್ನ ಕವನವು, ಗಾಂಧೀಜಿಯವರು ನನ್ನ ಹೃದಯದಲ್ಲಿ ತಮ್ಮ ಬಿಂಬ ಮೂಡಿಸಿದ್ದಕ್ಕೆ ಸಾಕ್ಷಿ. ೧೯೩೪ ರಲ್ಲಿ ನನ್ನ ರಾಷ್ಟ್ರೀಯ ಶಾಲಾಜೀವನವು ಮುಗಿದುಹೋಯಿತು. ನನ್ನ ಸ್ಥಳಕ್ಕೆ ನಾಮಮಾತ್ರಕ್ಕೂ ಖಾದಿಯನ್ನು ಕೂಡ ಧರಿಸದ ಒಬ್ಬ ಶಿಕ್ಷಕನ ಯೋಜನೆಯಾಯಿತು. ಶೈಕ್ಷಣಿಕ ವ್ಯವಹಾರದ ರಾಜಕೀಯವೂ ಏನು ಮಾಡಬಲ್ಲದು?—ಎಂಬುದನ್ನು ಕಂಡೆ.

ನಾನು ಮತ್ತೆ ಹಳೆಯ ವಿಕ್ಟೋರಿಯಾ ಹೈಸ್ಕೂಲಿನ ಮೈಯಲ್ಲಿಯೇ ಹುಟ್ಟಿದ ನ್ಯೂ ಇಂಗ್ಲೀಷ್ ಸ್ಕೂಲನ್ನು ಸಾಮಾನ್ಯ ಶಿಕ್ಷಕನಾಗಿ ಪ್ರವೇಶಿಸಿ, ಅದಕ್ಕೆ ಮತ್ತೆ 'ವಿಕ್ಟೋರಿಯಾ ಹೈಸ್ಕೂಲ್' ಎಂಬ ನಾಮಕರಣವಾಗುವುದರ ಒಡನೆ, ಮುಂಜಿ, ಮತ್ತೆ ಆಜೀವ ಶಿಕ್ಷಕನಾದೆ. ಆದರೆ ಆ ಜೀವನವು ಶಾಲೆಯ ಜೀವನದಂತೆಯೇ ಅಸ್ಥಿರವಿತ್ತು. ಆ ಮಧ್ಯಕಾಲದಲ್ಲಿ ಗೆಳೆಯರೊಡನೆ ಶ್ರೀಅರವಿಂದರ ತತ್ತ್ವಸ್ರಣಾಲಿಯೊಡನೆ ಹೆಚ್ಚು ಸಮರಸವಾಗಹತ್ತಿದೆ. 'ಜಯಕರ್ನಾಟಕ'ದ ಮೊದಲುವರ್ಷದ ಜೀವನ, ನಾಡಹಬ್ಬ ಮೊದಲಾದ ಕನ್ನಡ ಹಬ್ಬಗಳ ಹುಟ್ಟು, ಪ್ರಚಾರ, ಸ್ವಧರ್ಮದ ಎರಡು ಮೂರು ವರುಷದ ಜೀವನ ಕಳೆಯಿತು. ಗಾಂಧೀ ಚಳವಳಿಗೆ ಪ್ರತಿಯಾಗಿ ಹುಟ್ಟಿದ ದಬ್ಬಾಳಿಕೆಗೆ—'ದಬ್ಬಾಳಿಕೆಗೆ' ಎಂಬ ಎರಡು ಸೀಸಪದ್ಯಗಳು ಆಗ ಮುಂದೆಬಂದುವು. ಬೇಗನೆ ಗೆಳೆಯರು 'ಜಯಕರ್ನಾಟಕ'ವನ್ನು ಕೈಕೊಂಡರು. ಕೆಲವು ಗೆಳೆಯರು ಶಾಂತಿನಿಕೇತನಕ್ಕೂ ಹೋಗಿದ್ದರು. ರಾಷ್ಟ್ರೀಯ ಶಾಲೆಯ ಕೆಲವು ವಿದ್ಯಾರ್ಥಿಗಳು ಮತ್ತೆ ವಿಕ್ಟೋರಿಯಾ ಹೈಸ್ಕೂಲಿಗೆ ಬಂದಿದ್ದರು. ಪ್ರತಿಯೊಂದು ಹದಿನೈದನೆಯ ಆಗಸ್ಟಿಗೂ ಗೆಳೆಯರು ಶ್ರೀಅರವಿಂದರ ಜನ್ಮತಿಥಿಯನ್ನು ಪಾಲಿಸುತ್ತಿದ್ದರಲ್ಲದೆ, ಅವರ ತತ್ತ್ವಗಳನ್ನು ಕುರಿತು ಲೇಖನಗಳನ್ನು ಪ್ರಕಟಿಸುತ್ತಿದ್ದರು. ಜಯಕರ್ನಾಟಕದ ಸಂಪಾದಕೀಯ ಲೇಖನಗಳಂತೂ ಗಾಂಧೀ ಯುಗ-ಪ್ರಚಾರಕ್ಕೆ ಮೀಸಲಾಗಿದ್ದುವು. 'ನರಬಲಿ' ಎಂಬ ನನ್ನ ಕವನ ಈ ಕಾಲದಲ್ಲಿ 'ಜಯಕರ್ನಾಟಕ'ದಲ್ಲಿ ಪ್ರಸಿದ್ಧವಾಯಿತು. ಅದಕ್ಕೆ ಆದ ಅಪಾರ್ಥವೂ ಒಂದು ಕಾರಣವಾಗಿ, ಒಂದು ವರ್ಷ-

ದಿಂದ ನನ್ನ ಬೇರೆ ಕೆಲವು ಗೆಳೆಯರೊಡನೆ ಭೋಗಿಸುತ್ತಿದ್ದ ಸ್ಥಾನ ಬದ್ಧತೆಯು, ನನ್ನ ಪಾಲಿಗೆ ಹಂಡಲಗಿ ಜೇಲಿಗೆ ಹಾದಿಯಾಯಿತು. ಈ ಕಾಲದಲ್ಲಿ ಗಾಂಧಿಯವರನ್ನು ಕುರಿತು 'ಜಯಕರ್ನಾಟಕ'ದಲ್ಲಿ ಬರೆದ ಕೆಲ ಲೇಖನಗಳಲ್ಲಿ ಒಂದನ್ನು ' ವಿಚಾರಮಂಜರಿ ' ಯಲ್ಲಿ ('ಅಹಿಂಸೆ') ಮತ್ತೆ ಪ್ರಕಟಿಸಿದೆ. ಹೀಗೆ ಮಹಾತ್ಮರ ಜೀವನಾವಲೋಕನವೂ; ತತ್ತ್ವಮನನವೂ ನಡೆದಾಗಲೂ ಕೂಡ, ನನ್ನ ಆಂತರಿಕ ಜೀವನವು ಕನ್ನಡ ಭವಿಷ್ಯಜೀವನ, ಜಾಗತಿಕ ನೂತನ ಜೀವನ, ಶ್ರೀಅರವಿಂದ ಪ್ರಣೀತ ಭಾಗವತ ಜೀವನ ಈ ಮುಮ್ಮೊನೆಜೀವನದ ಮನನದಲ್ಲಿ ಮುಂಪೆ ಸಾಗಿತ್ತು. ಗಾಂಧಿಯವರೂ ಅವರ ತತ್ತ್ವಗಳೂ ನನ್ನ ತಟಸ್ಥ ವಿಚಾರಪ್ರವೃತ್ತಿಗೆ ಗುರಿಯಾದುವು. ಈ ಕಾಲದಲ್ಲಿ ಗಾಂಧಿಯವರ ರಾಜಕೀಯ ಸಾಮಾಜಿಕ ಜೀವನದಲ್ಲಿ ಸಮಭಾಗಿಗಳಾಗಿ ತೊಡಗಿಕೊಂಡೂ, ' ಗಾಂಧಿಯವರು ಜಗತ್ತು ತಿಳಿದುಕೊಂಡಷ್ಟು ನಿಷ್ಪಕ್ಷಪಾತಿಗಳಾಗಿಲ್ಲ ' ಎಂದು ಸಾರುವವರೊಡನೆ ಅನೇಕ ಸಲ ವಿಚಾರದ ಹೋರಾಟ ಮಾಡಬೇಕಾಗಿ ಬಂತು. ಪ್ರತ್ಯಕ್ಷ ಕಾರ್ಯದಲ್ಲಿ ಅಂಥ ಜನರು ಗಾಂಧಿಯವರೊಡನೆ ಹೆಜ್ಜೆ ಒಂದಾಗಿರಬಹುದು; ಆದರೆ ಅವರ ತತ್ತ್ವಪ್ರಾಮಾಣಿಕತೆಯನ್ನೇ ಶಂಕಿಸುವ ಜನರನ್ನು ಕಂಡಾಗ ನನ್ನ ಹೃದಯಕ್ಕೆ ವ್ಯಥೆಯಾಗುತ್ತಿತ್ತು. ಬುದ್ಧಿಯ ಮಾತು ಬಿರುಸಾಗುತ್ತಿತ್ತು. ಹೀಗಿದ್ದೂ ಗಾಂಧಿಯವರ ಜೀವನ ತತ್ತ್ವ ನನಗೆ ಗುರುನೆನಿಸಲಿಲ್ಲ. ಅವರ ವಾಕ್ಯಸರಣಿಯಲ್ಲಿ ವಿಶ್ವಾಮಿತ್ರರಂತೆ ಕೈಯೆತ್ತಿ ನಿಂತ ' If 'ನ 'ರೆ' ರಾಜ್ಯವು, ಗಾಂಧಿಯವರೂ ಅವರ ವಿಚಾರಾನುವಾದಕರೂ ತಮ್ಮ ಕಾರ್ಯಪ್ರಚಾರಕ್ಕಾಗಿ ಬಳಸುವ ಉಪಮೆ, ದೃಷ್ಟಾಂತ, ನಿದರ್ಶನಗಳ ದ್ವಿಮುಖ ಅಭಾಸವು ನನ್ನನ್ನು ಅವರಿಂದ ಅಗಲಿಸುತ್ತಿತ್ತು. ಅವರ ತಾತ್ತ್ವಿಕ ಧರ್ಮಸಂಕಟದಲ್ಲಿ God–ದೇವನಿಗೆ ಇರುವ ಸ್ಥಾನವು ಕಾರ್ಯಸಾಗಿದಂತೆ ಎತ್ತೋ ಮಾಯವಾಗಿ, God ಎಂದರೆ ಸತ್ಯ—; ಸತ್ಯವು ಅಹಿಂಸೆಯ ದೃಷ್ಟಿಗೆ ಕಾಣುವುದು-; ಅಹಿಂಸೆಯ ಶುದ್ಧಪ್ರಚಾರಕರೆಂದರೆ ತಾವು ಒಬ್ಬರೆ. ತಮಗೂ ಕೂಡ ಈ ದೃಷ್ಟಿ ಮತ್ತು ಆಚಾರಗಳು ಶಾಸ್ತ್ರಜ್ಞರಿಗೆ ಕ್ರಮಕ್ರಮವಾಗಿ ಅಭಿವ್ಯಕ್ತವಾಗುವ ತತ್ತ್ವದಂತೆ ಪ್ರಾಪ್ತವಾಗುವವು ಎಂಬ ಅವರ ವಾದವು, ನನ್ನನ್ನು ಮತ್ತಷ್ಟು ಸಾಕ್ಷೀಭಾವಕ್ಕೆ ನೂಕಿಸಿತು. ಅವರ ತತ್ತ್ವದ ವಿಡಂಬನೆಯು ಮಹಾರಾಷ್ಟ್ರದ ಬೌದ್ಧಿಕರಿಂದ ನಡೆದಾಗಲೂ, ಆ ಕಾಲಕ್ಕೆ ಎರಡು ವರುಷ ಕಾಲ ಸತತ ಪೂನಾದಲ್ಲಿರಬೇಕಾಗಿ ಬಂದರೂ, ಗಾಂಧಿಯವರ ಹಾರ್ದಿಕ ಪ್ರಾಮಾಣಿಕತೆಯ ಬಗ್ಗೆ ನನಗೆ ಸಂಶಯ-ಹುಟ್ಟಲಿಲ್ಲ. ಸಶಸ್ತ್ರರೇ ಇರಲಿ, ನಿಶ್ಶಸ್ತ್ರರೇ ಇರಲಿ ಅವರಂಥ ವೀರ-ಧೀರರೂ ರಾಜಕೀಯ ರಣಾಂಗಣದಲ್ಲಿ ಬೇರೆ ಯಾರೂ ತೋರಿಬರಲಿಲ್ಲ. 'ಮೈ-ತಳೆದ ಕರುಣೆ' ಎಂಬ ನನ್ನ ಕವನ, ಅವರ ನಿಶಾಂತ ಕರುಣಾಧ್ಯಾನ ಮೂರ್ತಿಯನ್ನು ಕುರಿತು ಬರೆದದ್ದಾಗಿದೆ. ' ಬುದ್ಧಮೂರ್ತಿಯ ಅಮೃತಸ್ಮಿತ' ಎಂಬ ಕವನವು, ಮಹಾತ್ಮರು ಯರೋಡಾ ಕಾರಾಗೃಹದ ಆವಾರದೊಳಗಿನ ಮಾವಿನ ಮರದಡಿಯಲ್ಲಿ, ತಮ್ಮ ಉಪವಾಸಾನಂತರದಲ್ಲಿ, 'ಯಾವ ಶಾಂ ಗಾಂಭೀರ್ಯದಿಂದ ಕಂಗೊಳಿಸುತ್ತಿರಬಹುದು—ಎಂದು ನೆನಸಿದಾ ಹೊಳೆದಿತು.

ಗಾಂಧಿಯವರನ್ನು ನಾನು ಮೊದಲು ಕಂಡುದು ಪೂನಾದ ಎರಡನೆಯ ಸಲ ಧಾರವಾಡದಲ್ಲಿ. ಆ ಭೆಟ್ಟಿಯ ತತ್‌ಕ್ಷಣ ಫಲವಾ ನನ್ನ ಮಿತ್ರರಾದ ಸತ್ಯವಂತರಾವ್ ಮಳೆಬೆನ್ನೂರ ಅವರೊಡ ನಾವಿಬ್ಬರೇ ಗಾಂಧಿಯವರನ್ನು ಸಂದರ್ಶಿಸಿದೆವು. ನಾನು ಅವರನ್ ಮೌನದಿಂದಲೇ ಕಂಡೆ ; ಮೌನವಾಗಿಯೇ ಬಂದೆ. ಪೂನಾದ ಮತ್ತೆ ನಾನು ಅವರನ್ನು ನೋಡಲೂ ತವಕಪಡಲಿಲ್ಲ; ಆದರೆ ಕವ ಸ್ಫೂರ್ತಿ ತಡೆಯಲಿಲ್ಲ. ನಾನು ನಾಲ್ಕನೆಯ ಸಲ ಮಹಾತ್ಮರನ್ ಕಂಡದ್ದು ಪೂನಾದಲ್ಲಿ. ೪೩–೪೪ರಲ್ಲಿ. ನಾನು ಮಹಾತ್ಮರನ ಕಾಣಬೆ ೨೦–೨೨ ವರುಷಗಳಾಗಿದ್ದುವು. ನನ್ನ ಪಾಲಿಗೆ ಆ ಕೊನೆಯ ದರ್ಶನ. ಪೂನಾ ಕ್ಯಾಂಟೋನ್‌ಮೆಂಟ್ ಭಾಗದಲ್ಲಿ ಅವ ಸಾಯಂ ಪ್ರಾರ್ಥನೆಯಿತ್ತು. ಆ ವೃದ್ಧತಪಸ್ವಿಯನ್ನು ನೋಡಿದಾಗ ದಧೀಚಿಯ ನೆನಪಾಯಿತು. ಮತ್ತೆ ಅವರನ್ನು ನೋಡಿದಂ ಆಗಿದ್ದು ಎಂದರೆ ಅವರ ದಹನಚಿತ್ರವನ್ನು ತೋರಿಸಿದ ಚಿತ್ರಪಟ ದಲ್ಲಿ. ಏನು ಆ ಮಹಾಜ್ವಾಲೆ ! ಮಹಾಜನ ಸಂದೋಹ !! ಮಹ ಪ್ರಯಾಣ !!!

ಮಹಾತ್ಮರ ಸ್ಮೃತಿಬೀಜ ನನ್ನಲ್ಲಿ ಅಮೃತವಾಗಿ ಉಳಿಯುವುದ ಎಂದರೆ ಅವರ ಭಗವದ್ಭಾವ. ಆ ಬೀಜವನ್ನು ಸಫಲವಾದ ವೃಕ್ಷ ವನ್ನಾಗಿ ಮಾಡುವ ಮಹಾಕಾರ್ಯ ಶ್ರೀಅರವಿಂದರನು ಶ್ರೀತಾಯಿಯವರನ್ನೂ ಕೂಡಿದೆ. ಗಾಂಧಿಯವರ ವೈಯಕ್ತಿಕ ಜೀವ ದಲ್ಲಿ ಭಗವಂತನಿಗೆ ಅಚಲಸ್ಥಾನವಿತ್ತು. ಅವರ ಕಾರ್ಯಜಂಜಾ ದಲ್ಲಿ ಅದು ಗೌಣವಾಗುತ್ತಿತ್ತು. ಟಿಳಕರ ಸ್ವರಾಜ್ಯಮಂತ್ರ ಗಾಂಧಿಯವರ ಸ್ವಾತಂತ್ರ್ಯಮಂತ್ರವಾಯಿತು. " A Satya grahi has no power he can call his own. All th power he may seen to possess is from and o God "—1930. " The leader depends not on hi own strength, but on that of God. He acts as th voice within guides him ' — 1928. August 1 ಇವು ಗಾಂಧಿಯವರ ವಚನಗಳು. ಶ್ರೀ. ಅರವಿಂದರು ೧ ಜನವರಿ ೧೯೨೪ ರಲ್ಲಿ ಹೀಗೆ ಹೇಳಿದ್ದರು :—" God is doing everything, we are not doing any thing." " He has a work for His great and ancient nation. There fore He has been born again to do it." " You must first realise Him in yourselves. You must shape your lives, you must shape the lives of this great nation so that it may be fit to reveal Him. And then your task will be done." ಗಾಂಧಿಯವರ ಜೀವನವು ಬರಲಿರುವ ಭಗವಜ್ಜೀವನದ ಪ್ರಸ್ತಾವನೆ ಮಾತ್ರ

(ಸಂಚಿಕೆಯ ಕೊನೆಯಿಂದ ಮುಂದುವರಿಸಿದ್ದು)

ಮಹಾತ್ಮಾಜೀಯವರ ಜೀವನದ ಮಾಹಾತ್ಮ್ಯ

ಡಿ. ಎನ್. ಕೆ. ಕುಲಕರ್ಣಿ ಎಂ. ಎ., ಬಿ.ಟಿ. ಮುಂಬಯಿ

★

ಮಹಾತ್ಮರ ಮಹಾತ್ಮ್ಯ ಪವಾಡಗಳಿಂದ ಕೂಡಿದುದಲ್ಲವಾದರೂ, ಪವಾಡಪುರುಷರಿಗಿಂತ ಹೆಚ್ಚಿನ ಲೋಕಕಲ್ಯಾಣವನ್ನು ಅವರು ಸಾಧಿಸಿದರು. ಜೀವನದಲ್ಲಿಯೆ ಮೋಕ್ಷವನ್ನು ಕಾಣಬೇಕೆಂಬುದು ಅವರ ಆದರ್ಶದ ತಿರುಳು.

★

ಪ್ರಾಚೀನಭಾರತದ ಆಧ್ಯಾತ್ಮಿಕಶಕ್ತಿಸಂಪತ್ತು, ಮಹಾತ್ಮಾಜಿಯವರ ಜೀವನದ ಸೊತ್ತಾಗಿತ್ತು.

"ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ
ವೀತರಾಗ ಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ"

ತತ್ತ್ವಗಳನ್ನು ತಿಳಿಯ
ಬಲ್ಲವರು ನಮ್ಮಲ್ಲಿ
ಸೇಕರಿರಬಹುದು;
ಜರಣೆಯಲ್ಲಿ ತರಬಲ್ಲ-
ರು ಕಡಿಮೆ. ಮಹಾ-
ತ್ಮಾಜಿಯವರ ವಿಷಯ
ಲ್ಲಿ ತಿಳಿದ ತತ್ತ್ವವು
ಜೀವನದಲ್ಲಿ ಇಳಿದು-
ರುತ್ತಿತ್ತು. ಅನೇಕರಿಗೂ
ಕಮೇವ ಮಹಾತ್ಮಾ-
ಯವರಿಗೂ ಇರುವ
ಂತರ ಇದು.

ಮಹಾತ್ಮರಾಗಿ ಸಾಧಿ-
ಸಿದ್ದುದನ್ನು ಗಾಂಧೀಜಿ
ಇಪರು ಹುತಾತ್ಮರಾಗಿ
ಧಿಸಬಹುದು, ಸಾಧಿ-
ದರು ಎನ್ನದಿದ್ದರೂ
ಶೇಷವೇ ಮಹಾತ್ಮಾ-
ಯವರ ದುಃಖಮಯ

ಭಾರತವನ್ನು ಮುಕ್ತಗೊಳಿಸಲು ನಿತ್ಯವೂ ನಡಾಡುತ್ತಿದ್ದ ಪಾದಾರವಿಂದ ಸೂತ್ರಯಜ್ಞ.

ರಣವಾರ್ತೆಯನ್ನು ಕೇಳಿ ಲೋಕಸಾಗರದಲ್ಲಿ ಮುಳುಗಿ, ಅಖಿಲ
ಶವೇ ಸೂತಕವನ್ನಾಚರಿಸಿ ಹದಿಮೂರನೆಯ ದಿನ ಎಲ್ಲ ಕಡೆಗೆ
ಪವಿತ್ರ ಜಲದಲ್ಲಿ ಅವರ ಚಿತಾಭಸ್ಮ ವಿಸರ್ಜನೆ ನಡೆದ
ತಿಗಳು ಮಹಾತ್ಮಾಜಿಯವರನ್ನು ಪವಾಡವುರುಷರೆಂದು
ಲು ಹೊರಟಂತಿವೆ.

ಅಹಿಂಸಾಮೂರ್ತಿಯಾದ ಮಹಾತ್ಮಾಜಿಯಂಥವರು ಅತಿಹಿಂಸೆಯ ಅಮಾನುಷ ಕೊಲೆಗೆ ಪುತ್ತಾಗಬೇಕಾಯಿತೆ?— ಎಂಬ ನೋವಿನ ಮಾತು ನಮ್ಮ ಪೂಜ್ಯಭಾವನೆಯನ್ನು ಇನ್ನೂ ಹೆಚ್ಚಿಸಿ, ನಮ್ಮ ಶೋಕಸಂತಾಪಭಾವನಾವೇಗವನ್ನು ಅತಿರೇಕಕ್ಕೆ ಒಯ್ದಿದ್ದರೆ ಅದು ಅತಿಶಯೋಕ್ತಿಯಲ್ಲ. ಈ ಭಾವನಾತಿಶಯದ ದೃಷ್ಟಾಂತದಿಂದ ಮಾತ್ರವೆ ನಾವು ಮಹಾತ್ಮರ ಯೋಗ್ಯತೆಯನ್ನು ನಿರ್ಣಯಿಸಬೇಕಾಗಿಲ್ಲ. ಮಹಾತ್ಮಾಜಿಯವರ ಯೋಗ್ಯತೆಯನ್ನು ನಿರ್ಣಯಿಸಬೇಕಾದರೆ, ಅವರ ಜೀವಮಾನವೇ ಜೀವಂತ ಸಾಕ್ಷಿ.

ಮಹಾತ್ಮಾಜಿಯವರ ಜೀವನ ಮಹಾತ್ಮ್ಯೆಯ ಗುಟ್ಟು ಯಾತರಲ್ಲಿದೆ? ದೇಹದ ಸುಖಕ್ಕಿಂತ ದೇಶದ ಸುಖ ಹೆಚ್ಚಿನದು ಎಂಬುದೇ ಈ ಗುಟ್ಟು. ಹೀಗೆ ನಂಬಿ ದೇಶಹಿತಕ್ಕಾಗಿ ದೇಹದಂಡನೆಗೆ ಸಿದ್ಧರಾದರು. ಈ ದೇಹದಂಡನೆಯೇ ಸತ್ಯಾಗ್ರಹದ ಸ್ವರೂಪ ತಾಳಿತು. ಸತ್ಯದ ಸಲುವಾಗಿ ಇನ್ನೊಬ್ಬರಿಗೆ ನೋವು ಮಾಡದೆ, ತನ್ನನ್ನೆ ತಾನು ದಂಡಿಸಿಕೊಂಡು ಇನ್ನೊಬ್ಬರ ಅಂತಃಕರಣವನ್ನು ಕರಗಿಸುವುದು.

ಹೀಗೆ ದೇಹದ ಸುಖಕ್ಕಿಂತ ದೇಶದ ಸುಖವನ್ನು ಬಗೆದಂತೆ

'ದೈಹಿಕ ಸುಖಕ್ಕಿಂತ ದೈವಿಕ ಭಾವನೆ ಹೆಚ್ಚಿನದು' ಎಂದು ಬಗೆದುದು ಮತ್ತೊಂದು ಮಹತ್ತ್ವದ ವಿಷಯ. ಇಂದಿನ ಭೌತಿಕಮಯ ಜಗತ್ತಿನಲ್ಲಿ ಅಳಿದುಹೋಗುತ್ತಿರುವ ಪ್ರಾಚೀನಭಾರತದ ಆಧ್ಯಾತ್ಮಿಕ ಸಂಸ್ಕೃತಿಯನ್ನು ಎತ್ತಿಹಿಡಿದವರೆಂದರೆ ಒಬ್ಬ ಮಹಾತ್ಮರು ಎಂದು ಹೇಳಬಹುದು. ಸರ್ ರಾಧಾಕೃಷ್ಣನ್‌ರೂ ಇದೇ ಅಭಿಪ್ರಾಯ ತಳೆದಿದ್ದಾರೆ. "ರಾಜಕಾರಣವು ನನಗೆ ಗೌಣ. ಧರ್ಮವೇ ಪ್ರಧಾನ. ಧರ್ಮವನ್ನುಳಿದ ರಾಜಕಾರಣವು ಸಾವಿನ ಜಾಳಿಗೆ. ಅದು ಆತ್ಮವನ್ನೇ ಕೊಲ್ಲುತ್ತದೆ"— ಎಂದು ಮಹಾತ್ಮಾಜಿಯವರೆ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಹೇಳಿದ್ದಾರೆ.

ದೇಹದ ಸುಖವನ್ನು ತ್ಯಾಗಮಾಡುವುದು ಬಹುಜನರಿಗೆ ಸಾಧ್ಯವಿಲ್ಲ. ಯಾಕೆ? ಯಾರಿಗೂ ಸಾಧ್ಯವಿಲ್ಲವೆಂದು ಹೇಳಬಹುದು. ದೇಹದ ಸುಖಕ್ಕಿಂತ ಹೆಚ್ಚಿನದೊಂದು ಸುಖವಿದೆ. ಬೌದ್ಧಿಕಸುಖ, ಅದಕ್ಕೂ ಹೆಚ್ಚಿನ ಸುಖವೊಂದಿದೆ— ಆಧ್ಯಾತ್ಮಿಕಸುಖ ಎಂದು ತಿಳಿದು ದೈಹಿಕಸುಖವನ್ನು ಗೆದ್ದ ಯೋಗಿಗಳು, ಇಂದಿನ ಜಗತ್ತಿನಲ್ಲಿ ಮಹಾತ್ಮರಂತಹರು ಲಕ್ಷಕ್ಕೊಬ್ಬರಾದರೂ ಇಲ್ಲವೆಂದೇ ಮಹಾತ್ಮರು ಮಹಾತ್ಮರೆನಿಸಿಕೊಂಡರು. ಮೂವತ್ತಾರನೆಯ ವಯಸ್ಸಿನಲ್ಲಿಯೆ ಮಹಾತ್ಮರು ಬ್ರಹ್ಮಚರ್ಯವನ್ನು ಕೈಕೊಂಡು, ಸಾಯುವವರೆಗೂ ಪಾಲಿಸಿದರು.

ಸದಾಚಾರವೇ ಮಹಾತ್ಮರ ಪ್ರಥಮ ಲಕ್ಷಣ. ಇಂದ್ರಿಯ ಸುಖವನ್ನು ಜಯಿಸಿ ಸತ್ಯವನ್ನು ಆಚರಿಸತೊಡಗಿದ ಮಹಾತ್ಮಾಜಿಯವರು, ಅನೇಕ ಮೂಲೆಗಳಿಂದ ಬರುತ್ತಿದ್ದ ವ್ಯಂಗ್ಯ, ಚಾಟೂಕ್ತಿಗಳಿಗೆ ಧೈರ್ಯವಾಗಿ ಉತ್ತರಕೊಟ್ಟರು : 'ಸ್ತ್ರೀಸಹವಾಸದಲ್ಲಿ ನಾನು ಇಂದ್ರಿಯಭೋಗಕ್ಕೆ ಬಲಿಬಿದ್ದಿಲ್ಲ. ಹಾಗೇನಾದರೂ ನನ್ನಲ್ಲಿ ಸ್ಖಾಲಿತ್ಯವುಂಟಾದರೆ ಅದನ್ನು ಬಹಿರಂಗವಾಗಿ ಒಪ್ಪಿಕೊಳ್ಳುವ ಧೈರ್ಯ ನನ್ನಲ್ಲಿದೆ' ಎಂದು. ಸುಳ್ಳುಹೇಳುವುದೆಂದರೇನೆ ಅವರಿಗೆ ಅಸಹ್ಯ, ಹೇಸಿಕೆ. ರಾಜಕಾರಣದಲ್ಲಿ 'End Justifies the means' ಸಿದ್ಧಿಯು ಸಾಧನೆಯ ಮಾರ್ಗವನ್ನು ಸಮರ್ಥಿಸುವುದು ಎಂಬ ತತ್ತ್ವವನ್ನು ಎಲ್ಲ ಕಾರಸ್ಥಾನಿಗಳೂ ಅನುಸರಿಸುವುದುಂಟು. ಮಹಾತ್ಮರಿಗೆ ಸಿದ್ಧಿಯಷ್ಟೆ ಸಾಧನವೂ ಮಹತ್ತ್ವದ್ದು. ಅಸ್ಪಾವಾಣಿಕರೀತಿಯಿಂದ ಜಯಸಂಪಾದಿಸುವುದೆಂದರೆ ಅವರ ಪ್ರಭಾವಕ್ಕೆ ವಿರೋಧವಾಗಿತ್ತು. ಅಂತೇ ಅವರ ಸ್ವಾತಂತ್ರ್ಯಸಾಧನೆಯು ಹಾದಿ ಸಿದ್ಧಿಯನ್ನು ಪಡೆಯಲು ಇಷ್ಟು ವಿಲಂಬವಾಯಿತು. ವಿಲಂಬವಾದರೂ ಮಹಾತ್ಮರಿಗೆ ತಮ್ಮ ಸಾಧನಮಾರ್ಗವು ಅನ್ಯಾಯದಿಂದಾಗಿಲ್ಲವೆಂಬುದೇ ಹೆಚ್ಚಿನ ಸುಖವಾಗಿತ್ತು.

ಸತ್ಯ-ಸದಾಚಾರಗಳೇ ಮಹಾತ್ಮರನ್ನು ಆಚಾರ್ಯವುರುಷರನ್ನು ಚರಿತ್ರವುರುಷರನ್ನು—ಮಾಡಿದುವು. ಸುಳ್ಳು, ಅನ್ಯಾಯ ಎಲ್ಲಿದೆ ಅಲ್ಲಿ ಅವರ ಸತ್ಯಾಗ್ರಹ ಇದ್ದೆದ್ದೆ. ದಕ್ಷಿಣ ಆಫ್ರಿಕೆಯಲ್ಲಿ ಹಿಂದೂ ಜನರಿಗೆ ನಡೆದ ಅನ್ಯಾಯ-ಹೀನಾಯಗಳು ಮಹಾತ್ಮರನ್ನು ಕೆರಳಿಸಿದುವು. ಹಿಂದೂ ಜನರಿಗೆ ಮತಾಧಿಕಾರವಿಲ್ಲ. ಹಿಂದೂ ಜನರು ವರು ೩೫ ಪೌಂಡು ತಲೆಪಟ್ಟಿ ಕೊಡಬೇಕು. ಹಿಂದೂ ಜನರು ರೊ ಕೊಟ್ಟರೂ ಪ್ರಥಮವರ್ಗದಲ್ಲಿ ಪ್ರಯಾಣಮಾಡಬಾರದು. ಹಿಂದ ಜನರು ರುಮಾಲಸುತ್ತಿಕೊಂಡು ನ್ಯಾಯಕಚೇರಿಯನ್ನು ಪ್ರವೇಶಿ ಲಾರರು. ಒಟ್ಟಿನು, ಹಿಂದೂ ಜನರು ಸಾಮಾನ್ಯಮನುಷ್ಯರಂತ ಎಂಬ ಮಟ್ಟಿಗೆ ನಡೆದ ಈ ಹಿಂಸೆಯನ್ನು ಖಂಡಿಸಲು ಮಹಾತ್ಮ ಲೇಖನಿ ಹಿಡಿದರು. ನಾಲಗೆ ಮಸೆದರು. ಜನರನ್ನು ಜಾಗೃ ಗೊಳಿಸಲು ಸಂಘಕಟ್ಟಿದರು, ಪತ್ರಿಕೆ ಹೊರಡಿಸಿದರು. ಆಫ್ರಿಕ ಯಿಂದ ಹಿಂದುಸ್ತಾನಕ್ಕೆ ಮರಳಿದ ಮೇಲೆ ಅಖಿಲಭಾರತೀಯ ಕೈವಾರಿಯಾಗಿ ಶಸ್ತ್ರ ಎತ್ತಿದರು— ಅಹಿಂಸಾಶಸ್ತ್ರ. ಶಸ್ತ್ರಹಿಡಿ ಯಲು ಭಾರತೀಯರಿಗೆ, ಬಂದಿ ಇರುವ ಕಾಲದಲ್ಲಿ, ಇಂತ ಅದ್ವಿತೀಯ ಶಸ್ತ್ರದ ಹೊರತು ಇನ್ನಾವ ಶಸ್ತ್ರ ಸಾಮರ್ಥ್ಯವುಳ್ಳ ದಾದೀತು ? ಇಲ್ಲಿಯೆ ಸತ್ಯಾಗ್ರಹದ ಅವತಾರವಾಯಿತು. ಬ್ರಿಟಿ ರೊಡನೆ ಅಸಹಕಾರ, ಪರದೇಶೀ ಅರಿವೆಯ ಹೋಳಿ, ಖಾದಿ ಪ್ರಚಾರ, ಉಪ್ಪಿನ ಸತ್ಯಾಗ್ರಹ, ಕೊನೆಯದಾಗಿ 'ದುಡಿಯಿ ಇಲ್ಲವೆ ಮಡಿಯಿರಿ' ಇವೇ ಮಹಾತ್ಮರ ಅಹಿಂಸೆಯ ಬತ್ತಳಿಕೆಯಿಂ ಹೊರಬಿದ್ದ ಬಗೆಬಗೆಯ ಬಾಣಗಳು.

ಹೋರಾಟದ ದಾರಿಯಲ್ಲಿ ಅವರಿಗೆ ನಡುನಡುವೆ ಸೋಲು ಗಳುಂಟಾದುವು. ಸೋಲಿಗೆ ಪ್ರಾಯಶ್ಚಿತ್ತವೆಂದು ಉಪವಾಸಮಾಡಿ ದೇಹದಂಡನೆಗೆ ತಮ್ಮನ್ನು ತಾವೇ ಗುರಿಮಾಡಿಕೊಳ್ಳುವುದು. ಉಪ ವಾಸವೊಂದು ಅಶ್ವತ್ಥಾಮನ ನಾರಾಯಣಾಸ್ತ್ರವಾಗಿತ್ತು. ಈ ಮಹಾಸ್ತ್ರದಿಂದಲೆ ಮೊನ್ನೆ ಮೊನ್ನೆ ಕಲಕತ್ತೆ, ದಿಲ್ಲಿಯಲ್ಲಿ ಸಂಪೂರ್ಣ ಶಾಂತಿಸ್ಥಾಪನೆಮಾಡಲು ಸಮರ್ಥರಾಗಿದ್ದರು.

ಜೀವನವೆ ಒಂದು ತಪಶ್ಚರ್ಯವೆಂದು ತಿಳಿದು, ಸಾಯುವರೆಗೂ ದೇಹವನ್ನು ಸವೆಯಿಸಿ, ಸೋಲು ಒದಗಿದಾಗ ಪ್ರಾಯಶ್ಚಿತ್ತದಿಂದ ಶುದ್ಧೀಕರಣಮಾಡಿಕೊಂಡು ಆತ್ಮಹುತಿಮಾಡಿ ಮಹಾತ್ಮರ ಜೀವನಮಾಹಾತ್ಮ್ಯ ಎರಡು ಶಬ್ದಗಳಲ್ಲಿದೆ— ಸತ್ಯ ಅಹಿಂಸೆ. ಸತ್ಯವೆಂದರೆ ಸತ್ಯವನ್ನು ಬೋಧಿಸುವುದಲ್ಲ, ಆಚರಿಸುವುದು. ಸದಾಚಾರ. ಅಹಿಂಸೆಯೆಂದರೆ ಅಹಿಂಸಾವ್ರತ. ತಮ್ಮ ಆಶ್ರಮದಲ್ಲಿ, ಯಾರಾದರೂ ಹಿಂಸೆಗೆ ಕೈಕೊಂಡಾರು ಎಂ ಅನುಮಾನದಿಂದ ಉಳಿದವರು ಭಯಗೊಂಡರೆ, ಮಹಾತ್ಮರಿಗೆ ಭಯವಿರಲಿಲ್ಲ. ತಮ್ಮ ಮೇಲೆ ಶಸ್ತ್ರ ಎತ್ತಿದವರನ್ನೂ ಅಭಯ ಹಸ್ತದಿಂದ 'ಕಲ್ಯಾಣಮಸ್ತುತೇ' ಎಂದು ಆಶೀರ್ವದಿಸು ಹಿಮಾಲಯದ ಮಟ್ಟದ ಔದಾರ್ಯ ಮಹಾತ್ಮಾಜಿಯವರದು.

ಮಹಾತ್ಮರನ್ನು ಮಹಾತ್ಮರನ್ನಾಗಿ ಮಾಡಿದ ಮತ್ತೊಂದು ಗುಣವೆಂದರೆ ವಿಶ್ವಬಂಧುತ್ವ. ಗೀತೆಯಷ್ಟೆ ಕುರಾನ್-ಬೈಬಲ್‌ಗಳೂ ಅವರಿಗೆ ಪೂಜ್ಯ. ಹಿಂದೀಯರಷ್ಟೆ ಮುಸಲ್ಮಾನ್, ಕ್ರೈಶ್ಚನರ ಮೆಚ್ಚಿನವರು. ಹರಿಜನರಂತೂ ಅವರಿಗೆ ಬೆನ್ನಿಲೆಬಿದ್ದ ಸೋದರ ಸಮಾನ. ಹರಿಜನರ ಹೆಗಲಿಗೆ ಹೆಗಲುಹಚ್ಚಿ ಭಂಗಿಯ ಕೆಲ

ನಾಡಲಿಕ್ಕೂ ಅವರ ಮನಸ್ಸು ಅಸಹ್ಯಪಡದು. 'ಭಾರತದ ದಾರಿದ್ರ್ಯದ ಕರುಣಾಜನಕ ಪ್ರತಿಮೆಗಳವರು' ಎಂದು ಹರಿಜನರ ವಿಷಯಕ್ಕೆ ಹೇಳುತ್ತಿದ್ದರು.

ಇಂದಿನ ಹಿಂದುಸ್ತಾನಕ್ಕೆ, ಪ್ರಾಚೀನಧರ್ಮದ ವೈದಿಕಸಂಸ್ಕಾರ-ಹಿಂದಿಗೆ ಧಾರ್ಮಿಕ ಅಂಧಶ್ರದ್ಧೆಗಳನ್ನು ಕಳೆದು ವಿಶ್ವಬಂಧುತ್ವದ ಹೊಸಧರ್ಮದ ತಿರುಳನ್ನು ಬೋಧಿಸಿದ ಶ್ರೇಯಸ್ಸು ಮಹಾತ್ಮರದು. ಇತರ ದೇಶಗಳಂತೆ ಬರಿ ಭೌತಿಕದೃಷ್ಟಿ ಇವರದಾಗಿದ್ದಿಲ್ಲ. ಭಗವಂತನಲ್ಲಿ ಅಚಲಶ್ರದ್ಧೆ. ಭಗವಂತನ ಪ್ರೇರಣೆಯಿಂದಲೆ ತಾವು ಮಾಡುವುದನ್ನೂ ಆಚರಿಸುತ್ತಿದ್ದೇವೆ—ಎಂದು ಹೇಳುವರು. ಭಗವಂತನಲ್ಲಿ ಶ್ರದ್ಧೆ; ಧರ್ಮದಲ್ಲಿ ವಿಶ್ವಾಸ, ಆದರೆ ಮಡಿವಂತಿಕೆಯ ಕುರುಹುತನವಿಲ್ಲ. ವೈದಿಕಧರ್ಮದ ಸಂಕೋಚವೃತ್ತಿಯಿಲ್ಲ. ಭಾರತೀಯ ಧರ್ಮಕ್ಕೆ ವಿಶ್ವವಿಶಾಲದೃಷ್ಟಿಯನ್ನು ದಯಪಾಲಿಸಿದವರು. ಗೀತೆಯ ಗುಟ್ಟಿನಲ್ಲಿ ಕುರಾಣ, ಬೈಬಲ್‌ಗಳ ತತ್ತ್ವದ ಹೊಸೆರಳನ್ನು ಕಂಡುಕೊಂಡು, ತಮ್ಮದೇ ಒಂದು ಹೊಸಧರ್ಮವನ್ನು ಸಂಸ್ಥಾಪಿಸಿದರು. ಅದು ವಿಶ್ವಬಂಧುತ್ವ; ಅನಾಸಕ್ತಿ ಯೋಗ ಅಹಿಂಸಾಮಾರ್ಗ; ಸತ್ಯಶೀಲತೆ.

ದೇವರು ಯಾರು, ದೇವರ ಸ್ವರೂಪವೆಂಹದು, ಜೀವ-ಪರಮಾತ್ಮ-ಎಂದರೆ ದ್ವೈತವೊ, ಅದ್ವೈತವೊ ?— ಎಂಬ ಆಚಾರ್ಯಪಂಥ ಮಹಾತ್ಮಾಜಿಯವರದಾಗಿರಲಿಲ್ಲ. ದೇವನೊಬ್ಬನಿದ್ದಾನೆಯೆಂದು ನಂಬಿ ತಾನು ಮಾಡುವ ಪ್ರತಿಯೊಂದು ಕೃತಿಯೂ ಆತನಿಗೆ ಅರ್ಪಣವೆಂಬ ಬುದ್ಧಿಯಿಂದ ಕರ್ಮವನ್ನಾಚರಿಸುವುದು ಮಹಾತ್ಮರ ಧರ್ಮವಾಗಿತ್ತು. ಧರ್ಮದ ಒಣ ಚರ್ಚೆಯನ್ನುಳಿದ ಧರ್ಮದ ಲೋಕೋಪಯೋಗ, ಕಲ್ಯಾಣದೃಷ್ಟಿ ಮಾತ್ರ ಅವರದಾಗಿತ್ತು. ನಾತನಿಗಳ ಕಣ್ಣಿಗೆ ಮಹಾತ್ಮರೊಬ್ಬರು ಸುಧಾರಕರು; ಪಾಶ್ಚಾತ್ಯವಿಚಾರಿಗಳ ಕಣ್ಣಿಗೆ ಅವರೊಬ್ಬ ಋಷಿಗಳು.

ಋಷಿಯೆಂದ ಮೇಲೆ ನಿತ್ಯಕರ್ಮಗಳನ್ನು ನಿಷ್ಠೆಯಿಂದಾಚರಿಸುವ ಮನೋನಿಗ್ರಹ ಬೇಡವೆ ? ಮಹಾತ್ಮಾಜಿಯವರಲ್ಲಿ ಮನೋನಿಗ್ರಹವಿಂದಿಲ್ಲದಿದ್ದರೆ ಅವರು ಈ ಮಟ್ಟಕ್ಕೆ ಏರುತ್ತಿದ್ದರೋ ಇಲ್ಲೊ. ಮನಸ್ಸನ್ನು ಗೆಲ್ಲುವುದೆಂದರೆ ಎಂಥ ಮಹಾಯೋಧನಿಗೂ ಅಸಾಧ್ಯ. ಮಹಾಯುದ್ಧದಲ್ಲಿ ವಿಜಯಶಾಲಿಯಾದ ಮಹಾಯೋಧನು ಮನಸ್ಸನ್ನು ಗೆಲ್ಲುವಲ್ಲಿ ಸೋಲನೊಪ್ಪಿಕೊಂಡು ಮನಸ್ಸಿನ ಗುಲಾಮನಾಗಿರುವಲ್ಲೇ ಲೋಲುಪತೆ ಪಡಬಹುದು.

ಮನೋನಿಗ್ರಹವನ್ನು ಸಾಧಿಸಿದ ಮಹಾತ್ಮರಿಗೆ ತಮ್ಮ ಗುರಿ-ಯ ಜೀವನದತ್ತಲೆ ಮುನ್ನಡೆಯುವುದು ಕಠಿಣವಾಗಲಿಲ್ಲ. 'ಅರೆ-ಬತ್ತೆ ಫಕೀರ'ನೆಂದು ಬಿಳಿಯ ಜನರು ಹಾಸ್ಯ ಮಾಡಿದಾಗಲೂ ಹಾಸ್ಯ ಭಾರತೀಯನ ಸಾದಾ ವೇಷವನ್ನು ಧರಿಸಲು ಹೇಳಿಸಿದ ಮಹಾತ್ಮಾಜಿಯವರು, ಅದನ್ನು ಸಮುದ್ರದಾಚೆಗೆ ಹೋಗಿಯೂ ಬೀಸಿ ಒಗೆಯಲಿಲ್ಲ. ಮನೋನಿಗ್ರಹದೊಂದಿಗೆ ಸಂಕಲ್ಪವನ್ನು ಸಾಧಿಸಿಯೇ ತೀರುವ ಹಟವೂ ಅವರಲ್ಲಿ ಅಚಲ ದಂತಿತ್ತ. ವೈದ್ಯರು ಆರೋಗ್ಯಕ್ಕಾಗಿ ಹೇಳಿದ ಸೇವನೆಯು ಅವರ ತತ್ತ್ವಕ್ಕೆ ಅಡ್ಡ ಬಂದರೆ, ಜೀವ ಹೋದರೂ ಅವರು ಯಾವುದೊಂದು ತ್ಯಾಜ್ಯ ಸೇವನೆಯನ್ನು ಸ್ವೀಕರಿಸುವವರಲ್ಲ. ಜೀನಿಸಬೇಕೆಂಬ ಸಬಲ ಇಚ್ಛೆ ಇದ್ದರೆ, ತಾವು ನೂರಾಇಪ್ಪತ್ತೈದು ವರುಷ ಬದುಕುವ ವಿಶ್ವಾಸ ಅವರಲ್ಲಿತ್ತು.

'ಸ್ವಭಾವೋ ದುರತಿಕ್ರಮಃ' ಎಂಬುದು ವಾಡಿಕೆಯ ಮಾತು. ಮಹಾತ್ಮರು ತಮ್ಮ ಯೋಗಬಲದಿಂದ ತಮ್ಮ ಸ್ವಭಾವವನ್ನು ಗೆದ್ದು ತೋರಿಸಿದರು. ಸಂಕಲ್ಪಿಸಿದುದನ್ನು ಸಾಧಿಸುವ ಸಬಲ ಇಚ್ಛೆಯಿಂದ ವಿಷನ್ನು ಸಾಧಿಸಬಹುದೆಂಬುದನ್ನು ಲೋಕಕ್ಕೆ ತಿಳಿಸಿಕೊಟ್ಟರು. ಅವರ ಸಂಕಲ್ಪ ಯಾವಾಗಲೂ ಸತ್ಯಸಂಕಲ್ಪವಾಗಿರುತ್ತಿತ್ತು. ಅಂತೇ ಅವರ ಹೆಸರು ಇಂದು ಮಹಾತ್ಮರ ಎಣಿಕೆಯಲ್ಲಿ ಬಂದಿದೆ. ಮಹಾತ್ಮಾಜಿಯವರ ಜೀವನ ಮಹಾತ್ಮ್ಯೆಯ ಗುಟ್ಟು ಎರಡೇ ಶಬ್ದಗಳಲ್ಲಿದ್ದರೂ, ೭೯ ವರುಷದ ಸಾಧನೆಯಿಂದ ಅವರನ್ನು ಮಹಾತ್ಮರ ಮಟ್ಟಕ್ಕೆ ಒಯ್ದು ಮುಟ್ಟಿಸಿತು. ಮಹಾತ್ಮರ ಸ್ಥಾನ ತೆರವಾಗಿ ಭಾರತದ ಅಭಿಮಾನ ಸಂಪತ್ತು ಅಡಗಿದಂತಾಗಿದೆ. ಅವರ ಸ್ಥಾನಕ್ಕೆ ಇನ್ನೊಬ್ಬ ಮಹಾತ್ಮ ಬಂದಾನೆ ?

ಮಹಾತ್ಮ ಗಾಂಧಿ

ಶ್ರೀ. ಡಿ. ವಿ. ಗುಂಡಪ್ಪನವರು, ಬೆಂಗಳೂರು

ಅವಾತಂ ಜೀವಿಸಿರಲ್ ।
ಜೀವಿತನೆನುಗಾದರಾರ್ಹನೆನಿಸಿತೊ ಅವನಂ ॥
ದೈವನೆ ಕಸಿದೊಯ್ದಿರಲೀ ।
ಭೂವಲಯದೊಳಿನ್ನದೆತ್ತ ಸತ್ತ್ವಕೆ ಶರಣಂ ॥ ೧ ॥

ಜೀವಿಸಿಯೆ ಮುಕ್ತನಾಗಿ- ।
ರ್ದಾ ವಿಶ್ವಾತ್ಮೈಕ್ಯ ಸಂಸ್ಥಿತುಗೇಂ ಮರಣಂ ॥
ದೀನಿಗೆ ನೊಂದಿವ ಮನೆಯಾ ।
ಬೇವಸಮಿನ್ನಲ್ತಿ ನಮಗೆ ಕಾಡಿನ ನಿಶಿಯೊಳ್ ॥ ೨ ॥

ನರನೃತ್ತದ ವಿಸ್ತರದೊಳ್ ।
ನಿರುಪಮನುನೀ ಗಾಂಧಿನಾಧು ನಿಜಯಾಖ್ಯಾನಂ ॥
ಚಿರವಾ ವಿಭೂತಿ ಮಹಿಮಾ ।
ಸ್ಮರಣೆಯೆ ನನುಗಿರ್ಪ ಸರ್ವರಕ್ಷಾ ಕವಚಂ ॥ ೩ ॥

ಭಾರತಕುಲತಾತಪದಂ ।
ಧಾರಿಣಿಯಾ ಸಕಲ ಕುಲ ಸಮಷ್ಟಿಯ ಮುಕುಟಂ ॥
ಶ್ರೀರಾಮರಾಜ್ಯವಿಹರಂ ।
ಪೌರುಷಸೌಜನ್ಯವೃದ್ಧಿಸೀಮಾಶಿಖರಂ ॥ ೪ ॥

ಹಿಮಶೈಲೋನ್ನತನಜಲಂ ।
ಶಮದೊಳ್ ಸತ್ತ್ವೈಕನಿಷ್ಠೆಯೊಳ್ ಸಂಯಮದೊಳ್ ॥
ನುಮತಾನಿರ್ಮೂಲನದೊಳ್ ।
ಸಮದರ್ಶನದೊಳ್ ಸಮಷ್ಟಿ ಶುಭಪೇಕ್ಷಣೆಯೊಳ್ ॥ ೫ ॥

ನರಮಾತ್ರನಲ್ತು ಲೋಕೋ ।
ತ್ತರವೆಸಗಲ್ ಬಂದ ವಜ್ರಹಸ್ತಂ ವಿಜ್ಯ- ।
ಜ್ಞರಿಯಂ ಜಾಲಿಸಿ ಜನಕೆಯ ।
ನೆರೆಯಿಸಿದನದೊಂದಪೂರ್ವ ತೇಜೋದ್ಭುತಮಂ ॥ ೬ ॥

ಚೇತನ ಕುಸುಮ ವಿಕಾಸಂ ।
ಸ್ವಾತಂತ್ರ್ಯ ರವಿಪ್ರಕಾಶದಿಂದೆನುತೀಶಂ ॥
ಸಾತತ್ಯವ ತನದಿಂ ವಿ- ।
ಖ್ಯಾತಕ್ರಿಯನಾದನಾ ಭಗೀರಥ ಸದೃಶಂ ॥ ೭ ॥

ಪರತಂತ್ರವ ಮುರಿಯಲನಂ ।
ನಿರವಿಸಿದನದೊಂದಪೂರ್ವ ಸಾತ್ತ್ವಿಕ ಬಲಮಂ ॥
ಪುರುಷತೆಯಂ ಕ್ಲೀಬರ್ಗಿ- ।
ತ್ತರುಧಿರ ರಣದಿಂ ವ್ರಜಾಸ್ಪರಾಜ್ಯವ ತಂದಂ ॥ ೮ ॥

ಪಂಚಮಹಾಭೂತಂಗಳ ।
ಸಂಚಿನೊಳಿನ್ನೊಂದು ಷಷ್ಠತತ್ತ್ವಂ ಕೂಡಲ್ ॥
ಮಿಂಚಹುದು ನರನ ಬರಿಬಾಳ್ ।
ಚಂಚುರದಾ ತತ್ತ್ವನಾತ್ಮವೆಂದೊರೆದನವಂ ॥ ೯ ॥

ಆ ಶುದ್ಧಾತ್ಮದ ಬಲವೇ ।
ವೈಶಿಷ್ಟ್ಯಂ ವೈಧವಿವೇಕಿಯ ವ್ಯವಹೃತಿಯೊಳ್ ॥
ಆಶೆಯದೊಂದೇ ಕಲಹಾ ।
ದೇಶಗಳೊಳ್ ಮನುಜನುಳಿವಿಗೆಂದೊರೆದನವಂ ॥ ೧೦ ॥

ಅಂತಸ್ಸತ್ತ್ವೋನ್ನತಿಯಿನೆ ।
ಸಂತತದಾತ್ಮೀಯ ಶುದ್ಧಿಯಿನೆ ಸತ್ಯದಿನೇ ॥
ಶಾಂತವ್ರತದಿನೆ ಸೋದರ ।
ಸಾಂತ್ವನದಿನೆ ಸಿದ್ಧಿಯೆಂದು ತಾರಿದನಾತಂ ॥ ೧೧ ॥

ಹಿಂದುವದಾರ್ ಮುಸ್ಲಿಮನಾರ್ ।
ನಂದೀಯರ್ ಸಿಕ್ಖ ಕ್ರಿಸ್ತ ಝಾರೋಷ್ಟ್ರಿಯರಾರ್ ॥
ಒಂದೇ ನೆಲನೊರ್ವನೆ ವಿಭು ।
ನಂದಿಹುದೊಂದೇ ಚರಿತ್ರೆ ಹಿಂದುಂ ಮುಂದುಂ ॥ ೧೨ ॥

ಬಲವೈಕಮತ್ಯವೆಂಬುದ ।
ಕಲಿಸಲವಂ ತನ್ನ ತಾನೆ ಬಲಿಯಾಗಿಸಿದಂ ॥
ತಲೆಯೆತ್ತೀ ನಾಡ ಜನಂ ।
ನಿಲುವೊಲವನಿತ್ತನಾತ್ಮ ಗೌರವ ವರಮಂ ॥ ೧೩ ॥

ಜನಪದ ಪಾತಕ ಭಾರವ ।
ನನುಕಂಪಾಭರದಿ ತನ್ನ ದೆನುವೊಲ್ ತಳೆಯು ॥
ತ್ತನುಭವಿಸಿದ ಸ್ವಶಿಕ್ಷೆಯಿ ।
ನನುನಯಿಸಿದನೆಮ್ಮನ್ ಆತ್ಮಪರಿಶೋಧನೆಯೊಳ್ ॥ ೧೪ ॥

ಮನೆಮನೆಯೊಳಮಾ ಬಾಲಕ ।
ಜನದೊಳನೋರೊರ್ವನಂತರಂಗಮನುಮುದಾರ್ ॥
ವಿನಯ ಸ್ಪರ್ಶನದಿಂ ಪಾ ।
ವನಗೊಳಿಸಿದರಿವನಂತೆ ಲೋಕಸಖ್ಯದ ಕಥೆಯೊಳ್ ॥ ೧೫ ॥

ಲೋಕ ಸಮಸ್ತದಿ ಧರ್ಮ ।
ಕ್ಕೇಕಾಶ್ರಯನಾದನೀತನಿವನಿಲ್ಲದಿರಲ್ ॥
ಕಾಕೋಲೂಕಿಕ ಸಮರ ।
ವ್ಯಾಕುಲಮಿಂದಾಗದಿಹುದೆ ಜನಪದ ರಂಗಂ ॥ ೧೬ ॥

ಧರ್ಮವೆ ಸಕಲ ಶರಣ್ಯಂ ।
ನಿರ್ಮಮಸುಖಮದುವೆ ತಾನನಾಸಕ್ತಧನಂ ॥
ಕರ್ಮಾಯತಿಯೆಂತಿರೆಯುಂ ।
ಧರ್ಮವೆ ವರಲಾಭವೆಂಬರಿನ್ನಾರಿಳೆಯೊಳ್ ॥ ೧೭ ॥

ಜಗಮೀಶವಾಸಮದರಿಂ ।
ವಿಗತಾಹಂತೆಯಲಿ ವಿಶ್ವಜೀವನದೊಳ್ ತಾಂ ॥
ಪುಗುತಾತ್ಮವ ವಿಸ್ತರಿಸಲ್ ।
ಭಗವದ್ದರ್ಶನಮದೆಂದು ಬಾಳ್ದವನಾತಂ ॥ ೧೮ ॥

ಪಾರುವುನೆಲ್ಲಂ ಜಗದೊಳ್ ।
ಜಾರದೆ ನಿಂದಿಹುವೆ ರಾಜಕೀಯದಿ ಬೆಲೆಗಳ್ ॥
ಪೌರುಷಕೆಂದುಂ ಬೆಲೆಯಹ ।
ಸಾರಾರ್ಥವ ಪಿಡಿದು ಜಗಕೆ ತೋರ್ದವನೀತಂ ॥ ೧೯ ॥

ಮೌಲಿಕ ಸತ್ಯಂ ದೇವಂ ।
ಬಾಳಿಲ್ಲಂ ದೇವ ನಿತ್ಯಲೀಲಾ ನಿಭವಂ ॥
ಓಲಗಿಪೊಡೆ ದೇವನ ನೀ ।
ಮೀಲೋಕವ ಸೊಗಸುಗೊಳಿಪುದೆಂದವನೀತಂ ॥ ೨೦ ॥

ದೈವಶ್ರದ್ಧಾಧಾರಂ ।
ಜೀವಿತರಸವತ್ಕವಿತ್ವಧಾರಾಕಾರಂ ॥
ಭೂವಿಸ್ತರ ಸಂಸಾರಂ ।
ಕೈವಲ್ಯಸಹ ಪ್ರದೀಪ ಚರಿತೋದಾರಂ ॥ ೨೧ ॥

ಮನುಜಾತ್ಮ ಜ್ಯೋತಿಯವಂ ।
ಮುನಿ ಋಷಿ ತಪಸಿ ಪ್ರಸಾದಿತ ಸ್ಫೂರ್ತಿಯವಂ ॥
ಜನ ಹೃದ್ರಸಮೂರ್ತಿಯವಂ ।
ಅನವಧಿ ಜಗದಂತರಾತ್ಮವಿಭು ಸಾಕ್ಷಿಯವಂ ॥ ೨೨ ॥

ಈಶ್ವರ ಪದದಿಂ ಬಂದಾ ।
ಭಾಸ್ವರ ಕಲೆ ಮರಳಿ ಸೇರ್ದುದಾ ಸನ್ನಿಧಿಯಂ ॥
ಶಾಶ್ವತಮೆಮ್ಮೊಳ್ ನಿಲುಗಾ ।
ನಿಶ್ಚಪ್ರೀತಿಯ ವಿಶಾಲ ನೀತಿಯ ವಿಭವಂ ॥ ೨೩ ॥

ಅನಾಗತಾನುಮಾ ಗುರು ।
ಪಾಗಸದಿಂ ಪೆಮಗೆ ತೋರನೇಂ ಕೆಳೆಸಗುವಂ ॥
ತ್ಯಾಗವ ತೋರ್ಪೆವೆ ಸತತೋ ।
ದ್ಯೋಗವ ನಾಂ ಬಂಧುಯೋಗಮುಂ ಮೆಚ್ಚಹವೋಲ್ ॥೨೪॥

'ಬಾಪು'ವಿಗೆ :

ಶ್ರೀ. ಎ. ಎಸ್. ರಾಮಕೃಷ್ಣ, ಕಾರಕಳ

ಸ್ವಾತಂತ್ರ್ಯ ಸಿರಿಯುಳ್ಳ ರಾಷ್ಟ್ರದಲಿ ಜನಿಸವಲೆ
ಪರತಂತ್ರ ಭಾರತದಿ ಬೆಳಕ ಕಂಡೆ,
ದರ್ಪಕ್ಕೆ ತಲೆಬಾಗಿ ದಾಸ್ಯಕ್ಕೆ ತೊತ್ತಾದ
ನಿರ್ಭಾಗ್ಯ ನಾಡಿದಕೆ ಬೆಳಕ ತಂದೆ ! ॥ ೧ ॥

ಯೌವನದ ಹೊಸತಿಲೊಳು ಮೊವಲು ಕಾಲಿಟ್ಟಾಗ
ಅಳ್ವವರ ದುರ್ಮದವ ಕಹಿಯನುಂಡೆ,
ನಾಡನಾವರಿಸಿದ್ದ ದುರ್ಗತಿಯ ಕಂಡು ನೀ
ಅಸಹಾಯಕತೆಯಿಂದ ನೊಂದು ನಿಡುಸುಯ್ದೆ ॥ ೨ ॥

ಇಂತಿರಲು— ವಿಧಿ ನಿನ್ನ ಆಫ್ರಿಕಕೆ ಎಳೆದೊಯ್ದು
ಅಲ್ಲಿ ಭಾರತ ಜನರ ದುಸ್ಥಿತಿಯ ತೋರೆ—
ಪಡಬಾರದೆಲ್ಲ ಸಂಕಷ್ಟಗಳನನುಭವಿಸಿ
ನಾಡಿಗರನುಳಿಸೆ ತನುವನ್ನೆರೆದೆ ಧಾರೆ. ॥ ೩ ॥

ನಾಡ ಭಾಗ್ಯೋದಯವು ಸನ್ನಿಹಿತವಾಗಿರಲು
ಕಾರ್ಯರಂಗಕ್ಕಿಳಿದೆ ಭಾರತಕೆ ಮರಳಿ,
ಸಾಮ್ರಾಜ್ಯ ಶಾಸನವು ನಗ್ನನೃತ್ಯದೊಳಿರಲು
ಕಿಡಿಸೂಸತೊಡಗಿತ್ತು ಜನತೆ ಕೆರಳಿ. ॥ ೪ ॥

ಭಾರತದಿ ಹಬ್ಬಿಸಿದೆ ಸ್ವಾತಂತ್ರ್ಯ ತೃಷೆಯನ್ನು
ಆತ್ಮವಿಶ್ವಾಸವನು ಜಾಗೃತಕ್ಕೆಳೆದು
ಸ್ವಾತಂತ್ರ್ಯಸಮರವನು ಹಿಂಸೆಯಲಿ ಹೂಡವಲೆ
ಸಹನೆ-ಸತ್ಯ-ಅಹಿಂಸೆ ಮಾರ್ಗಕೆಳೆದೆ. ॥ ೫ ॥

ಕಾಲುಶತಮಾನವಲಿ ಮಾರ್ಗದರ್ಶಿಯ ತೆರದಿ
ಬಿಡುಗಡೆಯ ಮಾರ್ಗದಲಿ ನಮ್ಮ ನಡೆಸಿ,
ನಿನ್ನತುಲ ಸಾಧನೆಯ ನೆರವಿಂದ ಭಾರತಿಯ
ಹಿಡಿದೆತ್ತಿ ನಿಲ್ಲಿಸಿದೆ ಬಂಧನವ ಬಿಡಿಸಿ. ॥ ೬ ॥

ಭರತ ಭೂಮಿಯ ಜ್ಯೋತಿ ನೀನಿಂದು ಅರಿರಲು
ಕಗ್ಗತ್ತಲಾಯ್ತಯ್ಯೊ ನಮ್ಮ ಪಾಲು !
ಭಾರತದ ಜೀವಾಳ, ನಿನ್ನುಸಿರಿನೊಂದಿಗೇ
ಇಲ್ಲವಾಯಿತೆ ನಮಗೆ ಊರೆಗೋಲು ! ॥ ೭ ॥

ನಿನ್ನ ಮಾರ್ಗದಿ ನಡೆವ ಸ್ಫೂರ್ತಿಯನು ನಮಗಿತ್ತು
ನಿನ್ನ ಸ್ಮರಣೆಯ ಸುಧೆಯ ಬೀರು ಸತತ;
ನಿನ್ನ ಮರವಾಣಿಯನು ನಮ್ಮೆಲ್ಲರೆದೆಯಲ್ಲಿ
ಮೊರೆಯಿಸೈ ಭಾರತದ ಭಾಗ್ಯದಾತ ! ॥ ೮ ॥

ಮಹಾತ್ಮರನ್ನು ಕಂಡ ನೆನಪು

ಡಿ. ನಿರ್ಜರ ಅಣ್ಣಾರಾಯರು, ಧಾರವಾಡ

★

ಮಹಾತ್ಮರ ವ್ಯಕ್ತಿತ್ವ ಲೋಕದ ಆಬಾಲವೃದ್ಧರ ಕುತೂಹಲಕ್ಕೂ ಪಾತ್ರವಾಗುವಂತಹದು; ತನ್ನೆಡೆಗೆ ಆಕರ್ಷಿಸುವಂತಹದು. ಒಂದೆ ಒಂದು ಸಲ ನೋಡಿದ್ದರಾಯಿತು. ಮರೆಯಲಾರದಂತಹ ನೋಟವೆನಿಸುತ್ತಿದ್ದಿತದು.

★

ಇಂದಿಗೆ ಸುಮಾರು ಹನ್ನೆರಡು ವರ್ಷಗಳ ಹಿಂದಿನ ಒಂದು ಸಂದರ್ಭ. ಆಗ ನಾನಿನ್ನೂ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ. ಅಂದು ಮಹಾತ್ಮರು ನಮ್ಮೂರಿಗೆ ಬರುವರೆಂದು ತಿಳಿಯಿತು. ಅದರಲ್ಲೂ ನಮ್ಮೂರಿನ ರೇಲ್ವೆ ನಿಲ್ದಾಣದಲ್ಲಿಯೇ ಒಂದಿರುಳನ್ನು ಕಳೆಯುವರೆಂಬ ಸುದ್ದಿ. ಎಂದ ಮೇಲೆ ಕೇಳುವುದೇನು! ನನ್ನ ಆನಂದಕ್ಕೆ ಮಿತಿಯೇ ಇಲ್ಲವಾಯಿತು. ಪೇಟೆಯಲ್ಲಿ ಕಾಂಗ್ರೆಸ್ಸಿನ ಕಾರ್ಯಕರ್ತರೊಬ್ಬರಿಂದ ಈ ಸಂಗತಿಯನ್ನು ಕೇಳಿ, ಉತ್ಸಾಹದಿಂದ ಶಾಲೆಗೆ ಓಡಿ ಬಂದು ಹೇಳಿದವನೂ ನಾನೇ. ಎಷ್ಟು ಜನರಿಗೆ ಹೇಳಿದರೂ ನನಗೆ ಸಮಾಧಾನವಿಲ್ಲ. ಅದರಲ್ಲೂ ಒಬ್ಬ ಗೆಳೆಯ ನುಡಿದ:

"ಕರ್ನಾಟಕದ ಅಗಸೆಯ ಬಾಗಿಲಿದ್ದಂತೆ ನಮ್ಮೂರು. ಇಲ್ಲಿ ನಿಲ್ಲದೆ ಹೇಗೆ ಹೋಗ್ತಾರ ಬಿಡೋ!"

"ಬರತಾರ ಅನ್ನೋದನ್ನೇ ಹೇಳಿದೆನಲ್ಲ ನಾನೂ!"

"ಮೊದಲು ಬರುವವರಿರಲಿಲ್ಲ. ಈಗ ಒಪ್ಸಿದ್ದಾರೆ....ತಂತಿಯ ಮೇಲೆ ತಂತಿ ಹೋದ ಮೇಲೆ!" ಸೊಟ್ಟ ನೋರೆ ಮಾಡಿ ನುಡಿದನಾತ. ಅವನ ಮುಖದ ಮೇಲೆ ಹೊಡೆಯುವಷ್ಟು ಸಿಟ್ಟು ಬಂದಿತೆನಗೆ. ಆದರೂ ತಡೆದುಕೊಂಡು ಹೇಳಿದೆ:

"ಮಹಾತ್ಮರವರು! ಹಾಗೆ ಭೇದಭಾವ ಮಾಡತಾರೇನು? ಕೆಲಸ ಹೆಚ್ಚಿಗಿದ್ದುದಕ್ಕೆ ನೆಟ್ಟಗೆ ಹೋಗುತ್ತೇನೆ—ಎಂದಿರಬೇಕು." ಎಂದು ಅಲ್ಲಿಂದೆ ಕಾಲ್ತೆಗೆದೆ. ನನಗಿತ್ತಲ್ಲ ಉದ್ಯೋಗ: ಮಹಾತ್ಮರು ಬರುವ ಸುದ್ದಿಯನ್ನು ಹರಡುವುದು!

ಇನ್ನೂ ಮೂವತ್ತು ಗಂಟೆ ಕಳೆಯಬೇಕು ಮಹಾತ್ಮರು ಬರಲಿಕ್ಕೆ. ಆದರೂ ಈಗಿನಿಂದಲೇ ಶಾಲೆಯಲ್ಲಿ ಮನಸ್ಸು ನಿಲ್ಲದು. ದೇಹದಲ್ಲಿ ಒಂದು ಹೊಸ ಹುರುಪೂ ಸಂಚರಿಸಿದಂತೆ ಆಗಿದ್ದಿತು. ಸುಮ್ಮನೆ ಶಾಲೆ ಬಿಟ್ಟು ಊರಲ್ಲಿ ಪಿರಿ ಪಿರಿ ತಿರಗುವುದು. ಕಂಡವರೆದುರಿಗೆ ಮಹಾತ್ಮರ ವಿಷಯ ಹೇಳುವುದು. ಎಲ್ಲರಿಗೂ ಗೊತ್ತಿದ್ದ ಸಂಗತಿಯೇ. ಆದರೂ ಹೇಳುವುದು, ಕೇಳುವುದು.

ಆ ದಿನ ಮನೆಯಲ್ಲಿ ಜಿನ್ನಾಗಿ ಊಟವನ್ನೂ ಮಾಡಲಿಲ್ಲ. ಆನಂದದಿಂದ ಹೊಟ್ಟೆ ತುಂಬಿದಂತಿತ್ತು. ಇರುಳಿ ಕಣ್ಣಿಗೆ ನಿದ್ರೆಯಿಲ್ಲ. ಅರೆನಿದ್ರೆಯಲ್ಲಿ ಮಹಾತ್ಮರನ್ನು ಕಂಡದ್ದೇ ಕಂಡದ್ದು. ಬೆಳಗಾಯಿತು. ಇನ್ನೂ ಸಂಜೆಯ ಎಂಟು ಗಂಟೆಗೆ ಮಹಾತ್ಮರು ಬರುವನವರು! ಸ್ವಲ್ಪ ಮನಸ್ಸಿಗೆ ಬೇಜಾರೆನಿಸಿತು. ಶಾಲೆಗೆ ಹೋದೆ. ವಿಷಯದಲ್ಲಿ ಮನಸ್ಸಿಲ್ಲ. ವರ್ಗ-ವರ್ಗಗಳಲ್ಲಿ ಸುತ್ತಾಡಿದೆ. ಗೆಳೆಯರನ್ನು ಗುಂಪುಗೂಡಿಸಿಕೊಂಡು ಮಹಾತ್ಮರ ವಿಷಯ ಹೇಳಿದೆ. ಅಂದು ಸೂರ್ಯ ಬೇಗ ಬೇಗ ಸರಿಯದಿದ್ದುದಕ್ಕೆ ಅವನ ಮೇಲೆ ಸಿಟ್ಟು ನನಗೆ.

ಮಧ್ಯಾಹ್ನ ತಿರುಗಿತು. ಸಾಯಂಕಾಲ ಸಮೀಪಿಸಿತು. ಬಾಲಕರ ಚಂಚಲ ಸ್ಥಿತಿಯನ್ನು ಕಂಡು ಶಿಕ್ಷಕರೂ ಶಾಲೆಯನ್ನು ಬೇಗನೆ ಬಿಟ್ಟುಬಿಟ್ಟರು! ಗೆಳೆಯರ ಗುಂಪನ್ನು ಕಟ್ಟಕೊಂಡೇ ಮನೆಗೆ ಗಂಟು-ಪಾಟಿ ಇಡಲಿಕ್ಕೆ ಹೋದೆ. ಹುಡುಗರನ್ನು ನೋಡಿ,—

"ಇವರೆಲ್ಲ ಏಕೆ ಬಂದಿದ್ದಾರೆ?" ಎಂದರು ತಾಯಿ.

"ಮಹಾತ್ಮರನ್ನು ನೋಡಲಿಕ್ಕೆ ಸ್ಟೇಶನಿಗೆ ಹೋಗತೀವೆ." ಎಂದು ಹೇಳಿ ಹೊರಗೆ ಹೊರಟೆ. ತಾಯಿ ತಡೆದು ಹೇಳಿದರು.

"ಅವರು ಕೂಡತಾರೆ; ನೀನು ಊಟ ಮಾಡಲ್ಲ?"

"ನನಗೆ ಹಸಿವಿಲ್ಲ!"

ಎಂದು ಅಂಗಳಕ್ಕೆ ಹಾರಿದೆ. ನನ್ನ ಮನಃಸ್ಥಿತಿಯನ್ನು ಅರಿತರು ತಾಯಿ. ಕರೆದು ನಾಲ್ಕಾಣೆಗಳನ್ನು ಕೈಯಲ್ಲಿ ಹಾಕಿದರು. ಅವುಗಳನ್ನು ಕಂಡು ಗೆಳೆಯರಲ್ಲಿ ಹಲವರಿಗೆ ಹರುಷವಾಯಿತು. ನನಗೆ ಯಾವುದರ ಕಡೆಗೂ ಲಕ್ಷ್ಯವಿರಲಿಲ್ಲ. ನಿಲ್ದಾಣದ ದಾರಿ ಹಿಡಿದು ಸಾಗಿದೆವು.

ಇಷ್ಟೆಲ್ಲ ಹೊರಗೆ ಉಬ್ಬಿನಲ್ಲಿ ಇದ್ದೆನಾದರೂ ಮನದಲ್ಲಿ ಒಳಗೊಳಗೇ ಒಂದು ಪ್ರಶ್ನೆ ಕೊರೆಯುತ್ತಿದ್ದಿತು: "ಇವರು ಮಹಾತ್ಮರಾದುದು ಹೇಗೆ? ಇವರ 'ಸತ್ಯ ಶೋಧನೆ'ಯಲ್ಲಿ ಅಂಧದೇನೂ ಕಾಣುವುದಿಲ್ಲವಲ್ಲ! 'ಲೋಕಮಾನ್ಯ ತಿಲಕರ ಕಳೆದ ಎಂಟುವರ್ಷ'ಗಳೊಡನೆ ತೂಗಿ ನೋಡಿದರೆ ಏನೂ ಅರ್ಥವಿಲ್ಲ." ಎನಿಸುತ್ತಿದ್ದಿತು. ಈ ಎರಡೂ ಪುಸ್ತಕಗಳನ್ನು ಕೆಲವು

ದಿನಗಳ ಮುಂಚೆಯೇ ಮರಾಠಿಯಲ್ಲಿ ಓದಿದ್ದೆ. ತಿಲಕರ ಕ್ರಾಂತಿಕಾರಕ ಚರಿತ್ರೆ ಮನಸ್ಸಿಗೆ ಹಿಡಿದಷ್ಟು ಮಹಾತ್ಮರ ಆತ್ಮಕಥೆ ಹಿಡಿದಿರಲಿಲ್ಲ. ಸಪ್ಪಗಿನ ಜೀವನವೆನಿಸಿತ್ತು. ಅಂದಿನ ವಯಸ್ಸು, ಅಂದಿನ ಮನಃಸ್ಥಿತಿ, ಅಂದಿನ ಒಲವು ಹಾಗಿತ್ತು. ಆದರೂ ಅವರ ಚರಿತ್ರೆಯಲ್ಲಿ ಗುರುತಿಸದ ಮಹಾತ್ಕೃತ್ಯ ಅವರಲ್ಲಿ ನೋಡಲಿಕ್ಕೆ ಸಿಕ್ಕೀತೆಂದು ಹಂಬಲು ಒಳಗೆ. ಅದಿಲ್ಲದಿದ್ದರೆ ಇಷ್ಟು ಜನರೆಲ್ಲ ಮಹಾತ್ಮರೆನ್ನುವುದು ಸುಮ್ಮನೆಯೇ?—ಎಂಬ ಪ್ರಶ್ನೆಯೂ ಮನದೆದುರಿಗೆ ಸುಳಿಯುವುದು.

ಈ ತೂಗಾಟದಲ್ಲಿಯೇ ನಿಲ್ಮನೆ ಸೇರಿದೆ. ಇದೀಗ ಸೂರ್ಯ ತನ್ನ ಹೊಂಬಣ್ಣದ ಕಿರಣಗಳನ್ನು ಬೀರುತ್ತ ಪಶ್ಚಿಮ ದಿಕ್ಕಿನಲ್ಲಿ ಇಳಿಯುತ್ತಿದ್ದಾನೆ. ರೆಸ್ಟ್ ಹೌಸಿನಲ್ಲಿ ಮಹಾತ್ಮರನ್ನು ಇಳಿಸುವ ವ್ಯವಸ್ಥೆ ಮಾಡಲಾಗಿತ್ತು. ಒಳಗೆ ಯಾರನ್ನೂ ಬಿಡುತ್ತಿರಲಿಲ್ಲ. ದಾರಿಯ ಮೇಲೆ ಜನ ಗುಂಪುಗುಂಪಾಗಿ ತಿರುಗಾಡುತ್ತಿದ್ದರು. ಸುತ್ತಲಿನ ಹಳ್ಳಿಗಳಿಂದ ಹಲವರು ಬಂದಿದ್ದರು. ಅಲ್ಲಲ್ಲಿ ಬಂಡಿಗಳನ್ನು ಬಿಟ್ಟಿದ್ದರು. ಅಂದು ನಮ್ಮ ಸೇಡಬಾಳ ಸ್ಟೇಶನ್ ಒಂದು ಜಾತ್ರೆಯಂತೆ ತೋರುತ್ತಿದ್ದಿತು. ಆಗ ಎಲ್ಲರಿಗಿಂತಲೂ ಹೆಚ್ಚಿಗೆ ಹುರುಪನ್ನು ನಾನು ಕಂಡುದು ಹೊಟೇಲಿನ ಹುಡುಗರಲ್ಲಿ.

ರೆಸ್ಟ್ ಹೌಸಿನ ಅಂಗಳದಲ್ಲಿ ನಾಲ್ಕೆಂಟು ಜನ ಪೋಲೀಸರೂ ನಮ್ಮೂರ ಗೌಡರೂ ತಿರಗಾಡುತ್ತಲಿದ್ದರು. ಅವರನ್ನು ಕಂಡು ನನ್ನ ಹುಡುಗಬುದ್ಧಿ ಸ್ವಲ್ಪ ಕೆರಳಿತು. ಅವರೆಲ್ಲ ಬ್ರಿಟಿಷರ ಪಾರ್ಟಿಯವರು. ಗುಪ್ತ ರಿಪೋರ್ಟು ಬರೆದು ಕಳಿಸಲಿಕ್ಕೆ ಬಂದಿರುವರೆಂಬ ತಿಳುವಳಿಕೆಯೇ ಆಗಿನ ಸಂತಾಪಕ್ಕೆ ಕಾರಣ.

ವೇಳೆ ಕಳೆದಂತೆ ಕಾಂಗ್ರೇಸ್ ಕೆಲಸಗಾರರ ಓಡಾಟ ಹೆಚ್ಚಾಯಿತು. ನೆರೆಯ ನಗರಗಳಲ್ಲಿಯ ಸ್ಕೂಲು-ಕಾಲೇಜಿನ ವಿದ್ಯಾರ್ಥಿಗಳೆಲ್ಲ ಸ್ವಯಂಸೇವಕರಾಗಿ ಬಂದಿದ್ದಾರೆ. ಸಮವಸ್ತ್ರದಲ್ಲಿ ಮುಂದೆ ನಿಂತಿದ್ದಾರೆ. ನಮಗೆ ಮುಂದೆ ಹೋಗಲಿಕ್ಕೆ ಅವಕಾಶವಿಲ್ಲ. ಹೊಟ್ಟೆಯಲ್ಲಿ ಕಳವಳವಾಗಹತ್ತಿತು. ಅಸೂಯೆ ಹುಟ್ಟಹತ್ತಿತು.

ರೆಸ್ಟ್‌ಹೌಸಿನ ಮುಂದೆ, ರಾಜಮಾರ್ಗದ ಎರಡೂ ಮಗ್ಗುಲಿಗೆ ಹೊಂದಿ ಸ್ವಯಂಸೇವಕರು ಸಾಲಾಗಿ ನಿಂತಿದ್ದಾರೆ. ಅವರ ನಡುವಿನಿಂದಲೇ ಮಹಾತ್ಮರ ಕಾರು ಹಾಯ್ದು ಬರತಕ್ಕುದು. ಜನವೆಲ್ಲ ಅವರ ಹಿಂದೆ. ಸ್ವಯಂಸೇವಕರಿಗೂ ಒಂದಿಷ್ಟು ಹೆಮ್ಮೆ, ಉಳಿದವರಿಗಿಂತ ತಾವೇ ಸಮೀಪದಿಂದ ಮಹಾತ್ಮರನ್ನು ಕಾಣುವೆವೆಂದು. ಈಗ ಕಾರಿನ ಹಾರ್ನ್ ಕೇಳಿಸಿತು. 'ಬಂದಾರು, ಈಗ ಬಂದಾರು' ಎಂದು ನಾವೆಲ್ಲ ಆತುರದಿಂದ ದಾರಿಕಾಯುತ್ತಿದ್ದೆವು. ಶಾಂತರಾಗಿದ್ದೆವು. ಸೂಜಿಬಿದ್ದರೂ ಸದ್ದಾಗುವಷ್ಟು ಶಾಂತರಾಗಿದ್ದೆವು. ಆಗ ಕ್ಷಣವೆಂದರೆ ಯುಗವಾಗಿತ್ತು.

ಎಂಟು ಹೊಡೆಯಿತು. ಆಗ ಬಂತು! ಬಂತು! ಕಾರು ಬಂದಿತು! "ಮಹಾತ್ಮಾ ಗಾಂಧೀಮಹಾರಾಜಕೀ ಜೈ! ಭಾರತಮಾತಾಕೀ ಜೈ!!" ಎಂಬ ಜಯಘೋಷದ ಸ್ವಾಗತಗೈದೆವು. ಕಾರು ಮುಂದೆಬಂದಂತೆ ಹಿಂದಿನ ಸ್ವಯಂಸೇವಕರೆಲ್ಲ ಸಾಲು ಮುರಿದರು. ಕಾರಿನ ಬೆನ್ನುಹತ್ತಿದರು. ನಾವೂ ಕುತೂಹಲದಿಂದ ಗದ್ದಲದಲ್ಲಿ ನುಗ್ಗಿದೆವು. ಆದರೆ ಆ ಕಾರು ಮಹಾತ್ಮರದಾಗಿರಲಿಲ್ಲ. ಅದರಲ್ಲಿ ಒಂದಿಬ್ಬರು ಯುರೋಪಿಯನರಿದ್ದರು. ಮನಸ್ಸು ನಿರಾಶೆಗೊಂಡಿತು.

ಹಿಂದಿನಿಂದಲೇ ಮಹಾತ್ಮರ ಕಾರು ಬರಲಿದೆ,—ಎಂದು ಕೇಳಿದ ಸೇವಕಪಳಕದ ನಾಯಕನು, ಮತ್ತೆ ಶಿಸ್ತುಗೊಳಿಸತೊಡಗಿದ. ಮತ್ತೆ ನಮ್ಮನ್ನು ಹಿಂದೆ ನೂಕಿದರು. ಅಷ್ಟರಲ್ಲಿ ಬಂತು! ಈ ಸಲ ಬಂದೇ ಬಿಟ್ಟಿತು ಮಹಾತ್ಮರ ಕಾರು! ಕಾರಿನಲ್ಲಿ ಮುಂದೆ ಮಹದೇವ ಭಾಯಿ ದೇಸಾಯಿ ಕುಳಿತಿದ್ದಾರೆ. ಹಿಮ್ಮಗ್ಗಲು ಮಹಾತ್ಮರು ಮುಗುಳುನಗೆ ಬೀರುತ್ತಲಿದ್ದಾರೆ. ಉಟ್ಟದ್ದೊಂದು ಲಂಡ ಪಂಜೆ, ಹೊತ್ತುಕೊಂಡದ್ದೊಂದು ಖಾದಿ ದೋತರ. ಕಾರು ಸ್ವಯಂಸೇವಕರ ಸಾಲಿನೊಳಗೆ ಬಂದೊಡನೆಯೆ ಜಯ ಜಯಕಾರ ಮಾಡಿದೆವು. ಮುಗಿಲುಮುಟ್ಟುವ ಧ್ವನಿಯದು. ಎಲ್ಲರೂ ಮಹಾತ್ಮರಿಗೆ ಕೈಮುಗಿದರು. ನಾನೂ ಮುಗಿದೆ. ಅವರಂತೂ ಮೊದಲೇ ಕೈ ಜೋಡಿಸಿದ್ದರು!

ಅವರ ವಿನಯ ಕಂಡು ನನ್ನ ಮನಸ್ಸು ಅರಳಿತು. ನಾನು ಇಂದು ಕಣ್ಣುಪಡೆದುದಕ್ಕೆ ಸಾರ್ಥಕವಾಯಿತೆಂದುಕೊಂಡೆ. ಮೈ ಪುಳಕಗೊಂಡಿತು. ಹಲವರು ಮಹಾತ್ಮರ ಕೊರಳಲ್ಲಿ ಹೂವಿನ ಹಾರಗಳನ್ನೂ ಕೈನೂಲಿನ ಹಾರಗಳನ್ನೂ ಹಾಕಿದರು. ಅಂಥದೇನನ್ನೂ ನಾನು ಒಯ್ದಿರಲಿಲ್ಲ. ದೂರದಲ್ಲಿ—ಒಂದು ಮೈಲುಗಲ್ಲಿನ ಮೇಲೆ ಏರಿನಿಂತು— ಕಣ್ತುಂಬ ನೋಡಿ ನನ್ನ ಹೃದಯವನ್ನೇ ಅರ್ಪಿಸಿದೆ.

ಮಹಾತ್ಮರು ವಿಶ್ರಾಂತಿಗೆ ತೆರಳಿದರು. ಬೆಳಗಿನ ಐದು ಗಂಟೆಗೆ ಸಾಮೂಹಿಕ ಪ್ರಾರ್ಥನೆ—ಎಂದು ತಿಳಿಯಿತು. ಇರುಳೆಲ್ಲ ಗೆಳೆಯರೊಡನೆ ನಿಲ್ವಾಣದಲ್ಲಿ ಅಡ್ಡಾಡಿಯೆ ಕಳೆದೆವು. ಮಹಾತ್ಮರ ವಿಷಯಕ್ಕೆ ಹಲವು ಮಾತುಗಳನ್ನು ಆಡಿದೆವು. ಎಲ್ಲರ ಮಾತಿನಲ್ಲಿ ಭಕ್ತಿಭಾವ ವ್ಯಕ್ತವಾಗುತಲಿತ್ತು.

ಮನೆಯಿಂದ ಒಯ್ದ ದುಡ್ಡಿನಿಂದ ಹೋಟಲಿನೊಳಗಿನ ತಿನಿಸುಗಳನ್ನು ಕೊಂಡು ತಿಂದೆವು. ಯಾರೂ ಚಹ ಪಾತ್ರ ಕುಡಿಯಲಿಲ್ಲ. ಚಹ ಕುಡಿಯಲಿಕ್ಕೆ ಮಹಾತ್ಮರ ಒಪ್ಪಿಗೆ ಇಲ್ಲವೆಂದು ನಮ್ಮ ಭಾವನೆ.

ಬೆಳಗಿನ ಮೂರು ಗಂಟೆಗೇನೇ ನಿಲ್ಮನೆಯನ್ನು ಬಿಟ್ಟು, ಗೆಳೆಯರನ್ನು ಕರೆದುಕೊಂಡು ರೆಸ್ಟ್‌ಹೌಸಿನ ಕಡೆಗೆ ನಡೆದೆ. ಅಂಗಳದಲ್ಲಿ ಒಂದೆರಡು ಗ್ಯಾಸುಗಳು ಉರಿಯುತ್ತಿದ್ದುವು. ಆವಾರದ ಬಾಗಿಲಿಗೆ ಪೋಲೀಸರ ಕಾವಲಿತ್ತು. ಒಳಗೆ ಬಿಡಲಿಲ್ಲ. ರೆಸ್ಟ್‌ಹೌಸಿನ ಹಿಮ್ಮಗ್ಗಲಿಗೆ ಹೋಗಿ ಮುಳ್ಳಿನ ತಂತಿಯನ್ನು ಹಾರಿ ಒಳಗೆ ಬರಬೇಕೆಂಬ ಯೋಚನೆಯೊಂದು ಸುಳಿಯಿತು. ಹಾಗೆಯೇ ಮಾಡಲಿಕ್ಕೆ ಗೆಳೆಯರೆಲ್ಲ ಮುಂದುವರಿದೆವು. ನಮಗೆಲ್ಲ ಪ್ರಾರ್ಥನೆಯ ಕಾಲಕ್ಕೆ ಮುಂಚೆಯೆ ಕುಳ್ಳಿರಬೇಕೆಂಬ ಹಂಬಲ. ಅದಕ್ಕಾಗಿ ಏನು ಮಾಡಲೂ ಸಿದ್ಧರು ನಾವು. ಆದರೂ ಪೋಲೀಸರ ಬೆದರಿಕೆ ಏನನ್ನೂ ಮಾಡಗೊಡಲಿಲ್ಲ ನಮಗೆ.

೫೩ ವರ್ಷಗಳಿಂದ ಅನುಭವಪಟ್ಟ

ಕರ್ಕ ಮತ್ತು ಕಂಪನಿಯ

ಜ್ವರದ ಗುಳಿಗೆ.

ಬಾಟ್ಲಿಗೆ ೧-೮-೦

ಎಲ್ಲಬಗೆಯ ಜ್ವರಗಳ ಮೇಲೆ ದಿವ್ಯೌಷಧ.

ವಿಳಾಸ:—

ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ

ಗಿರಗಾಂವ, ಮುಂಬಯಿ.

ಪೋಲೀಸರನ್ನು ಬೈಯುತ್ತ ನಿಲ್ಮನೆಯತ್ತ ಮತ್ತೆ ಮರಳಿದೆವು. ನಡುದಾರಿಯಲ್ಲಿಯೆ—ನಿರ್ಮಾಣದ ಬಯಲಿನಲ್ಲಿ— ಚಿಕ್ಕ ಚೆಪ್ಪರವೊಂದನ್ನು ಕಟ್ಟಿದ್ದರು. ತಳಿರು-ತೋರಣಗಳು ಈಗಾಗಲೇ ಮಂಟಪವನ್ನು ಅಲಂಕರಿಸಿದ್ದುವು. ಪ್ರಾರ್ಥನೆಯಾದ ನಂತರ ಅಲ್ಲಿ ಸಭೆಯಾಗುವುದಿತ್ತು. ಸಭೆ, ಏಳುಗಂಟೆಗೆಂದಿದ್ದರೂ ಹಲವರು ಈಗಾಗಲೇ ಅಲ್ಲಿಗೆ ಬಂದು ಸ್ಥಳಹಿಡಿದುಕೊಂಡು ಕುಳಿತಿದ್ದಾರೆ. ಅನೇಕ ಜನ ಒಕ್ಕಲಿಗರು 'ಮಹಾತ್ಮರು ಯಾವಾಗಾದರೂ ಇಲ್ಲಿಯೇ ಬರುವರಲ್ಲ!' ಎಂದುಕೊಂಡು, ರಾತ್ರಿಯೇ ಹೋಗಿ, ಕಂಬಳಿಮುಸುಕು ಹಾಕಿಕೊಂಡು ಅಲ್ಲಿಯೆ ಮಲಗಿದ್ದರು. ನಾವು ಹೋಗಿ ಅವರನ್ನು ಎಬ್ಬಿಸಿದೆವು. ಮಹಾತ್ಮರ ಪ್ರಾರ್ಥನೆಗೆ ನಡೆಯಿರೆಂದು ಕರೆದೆವು. ಬಹಳ ಜನರು— ಹಿರಿಯರು— ಕೂಡಿಕೊಂಡು ಹೋದರೆ, ಪೋಲೀಸರು ನಮ್ಮನ್ನು ಒಳಗೆ ಬಿಡುವರೆಂದು ಕಲ್ಪನೆ. ಇಷ್ಟೆಲ್ಲ ಸಿದ್ಧತೆಮಾಡಿಕೊಂಡು ಹೋಗುವಷ್ಟರಲ್ಲಿ, ಪ್ರಾರ್ಥನೆಯ ಸಮಯ ಸಮೀಪಿಸಿದ್ದಿತು. ಒಳಗೆ ಸುಲಭವಾಗಿ ಪ್ರವೇಶ ದೊರೆಯಿತು. ನಮ್ಮ ಸೌಭಾಗ್ಯದಿಂದ ಸ್ವಲ್ಪ ಮುಂಭಾಗದಲ್ಲಿಯೆ ಸ್ಥಳವೂ ಸಿಕ್ಕಿತು.

ಪ್ರಾರ್ಥನೆಗೆ ಆರಂಭವಾಯಿತು.

'ಏವಂ ಸತತಯುಕ್ತಾ ಯೇ ಭಕ್ತಾಸ್ತ್ವಾಂ ಪರ್ಯುಪಾಸತೇ ।
ಯೇ ಚಾಪ್ಯಕ್ಷರಮವ್ಯಕ್ತಂ ತೇಷಾಂ ಕೇ ಯೋಗವಿತ್ತಮಾಃ ॥ ೧ ॥

ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ
ಶ್ರದ್ಧಯಾ ಪರಯೋಪೇತಾಸ್ತೇ ಮೇ ಯುಕ್ತತಮಾಮತಾಃ ॥ ೨ ॥

ಯೇ ತ್ವಕ್ಷರಮನಿರ್ದೇಶ್ಯಮವ್ಯಕ್ತಂ ಪರ್ಯುಪಾಸತೇ ।
ಸರ್ವತ್ರಗಮಚಿಂತ್ಯಂ ಚ ಕೂಟಸ್ಥಮಚಲಂ ಧ್ರುವಮ್ ॥ ೩ ॥

ತುಲ್ಯ ನಿಂದಾಸ್ತುತಿರ್ಮೌನೀ ಸಂತುಷ್ಟೋ ಯೇನ ಕೇನಚಿತ್ ।
ಅನಿಕೇತಃ ಸ್ಥಿರಮತಿರ್ಭಕ್ತಿ ಮಾನೇ ಪ್ರಿಯೋ ನರಃ ॥ ೪ ॥

ಯೇ ತು ಧರ್ಮ್ಯಾಮೃತಮಿದಂ ಯಥೋಕ್ತಂ ಪರ್ಯುಪಾಸತೇ
ಶ್ರದ್ಧಧಾನಾ ಮತ್ಪರಮಾ ಭಕ್ತಾಸ್ತೇಽತೀವ ಮೇ ಪ್ರಿಯಾಃ ॥ ೫ ॥

(ಗೀತಾ ಅ. ೧೨)

ಹೀಗೆ ಪ್ರಾರ್ಥನೆ ಮುಂದುವರೆಯಿತು. ಇಂದಿಗೂ ಗೀತೆಯ ಈ ಭಾಗವನ್ನು ಓದುವಾಗ ಕೇಳಿದಾಗ, ಆ ಸನ್ನಿವೇಶ ನೆನಪಾಗುವುದು. ಹೃದಯ ಅರಳುವುದು.

ಗಾಂಧೀಜಿಯವರ ಆಶ್ರಮವಾಸಿಗಳೊಬ್ಬರು ಅಂದು ಪ್ರಾರ್ಥನೆಯನ್ನು ಹೇಳುತ್ತಿದ್ದರು. ಇನ್ನುಳಿದವರು ಅನ್ನುತ್ತಿದ್ದರು. ಅಂತಃಕರಣವನ್ನು ಅರಳಿಸುವ, ಶಾಂತಿಯನ್ನು ಕುದುರಿಸುವ ಪ್ರಾರ್ಥನೆಯ ಮೊದಲ ಪಲ್ಲವಿಯನ್ನು ಕೇಳಿದೊಡನೆ, ನಸುಬೆಳಕು ಮುಂಬೆಳಗಿನಲ್ಲಿ ಬೆಳತನಕ ಜಾಗರಣೆ ಗೈದ ಜನತೆಯ ಮುಖದ ಮೇಲೆ ಒಂದು ಅಪೂರ್ವಶಾಂತಿ ವ್ಯಾಪಿಸಿತು.

ಮೇಲೆ ನೀಲವರ್ಣದ ಬಾಂಬೋಲ. ಅಲ್ಲಲ್ಲರಳಿದ ಮಲ್ಲಿಗೆಗಳು. ಕೆಳಗೆ ಅಕೃತ್ರಿಮವಾದ ನೆಲದಾಯಿ, ತಿಳಿಬೆಳಗು, ತಂಗಾಳಿ. ಮತ್ತೆ ಲೋಕದ ಆತ್ಮಸರಿತೆಯು ಪರಮಾತ್ಮನ ಪೀಠದ ಕಡೆಗೆ—ಗಮ್ಯದ ಕಡೆಗೆ—ಜಿಮ್ಮುತ್ತಿರುವಂತೆ ಸ್ವರವು ಹೊರಡುತ್ತಿದೆ.

'ರಘುಪತಿ ರಾಘವ ರಾಜಾರಾಮು
ಪತಿತ ಪಾವನ ಸೀತಾರಾಮ'

ಆಗಲೆ ಗಾಂಧೀಜಿಯವರ ಮಹಾತ್ಮ್ಯವನ್ನು ನನ್ನ ಹೃದಯ ಗುರುತಿಸಿದುದು. ಆ ಹೊತ್ತೇ ಸಭೆಯಲ್ಲೊಮ್ಮೆ ದೂರದಿಂದ ಅವರನ್ನು ಕಂಡೆ. ಆ ಹನ್ನೆರಡು ತಾಸಿನ ಅವಧಿಯಲ್ಲಿ ಆ ಮಹಾತ್ಮನ ಪೂರ್ಣದರ್ಶನವನ್ನು ಮೂರು ಸಲ ಪಡೆದು ಪುನೀತನಾದೆ.

ಮರಳಿ ಇನ್ನೊಮ್ಮೆ ಕಾಣುವ ಭಾಗ್ಯ ನನ್ನ ದೈವದಲ್ಲಿರಲಿಲ್ಲ!

ಬೆಳಗಾಂವಿಯಲ್ಲಿ ನಮ್ಮ ಎಜಂಟರು:
ಶ್ರೀ. ಎಸ್. ಎಸ್. ಹ್ಯಾಟಿ
ಕಥಾಕುಂಜ ಪುಸ್ತಕ ಭಾಂಡಾರ

ಹುಬ್ಬಳ್ಳಿಯಲ್ಲಿ ನಮ್ಮ ಎಜಂಟ್:
ಶ್ರೀ. ವಿ. ಕೆ. ಗೋಖಲೆ
ಕಂಬೈಂಡ್ ನ್ಯೂಜ್ ಏಜನ್ಸಿ

ಸ್ಥಿತಪ್ರಜ್ಞ ಗಾಂಧಿಜಿಯವರು

ಪ್ರೊ. ರಂ. ಶ್ರೀ. ಮುಗಳಿ, ಎಂ. ಎ., ಬಿ. ಟಿ. ಸಾಂಗಲಿ

ಶ್ರೀಕೃಷ್ಣನ ಗೀತೆಯಲ್ಲಿ ಕಾಣುವ ಆದರ್ಶಮಾನವ—ಸ್ಥಿತಪ್ರಜ್ಞ, ಮಹಾತ್ಮರ ಜೀವನದಲ್ಲಿ ಪ್ರತ್ಯಕ್ಷವಾಗಿ ಕಾಣಿಸಿಕೊಂಡಿರುವ. ಅವರ ಜೀವನವು ಈ ಶತಮಾನದ ಒಂದು ಮಹಾಕಾವ್ಯ !

ಗಾಂಧಿಜಿಯವರ ವ್ಯಕ್ತಿತ್ವವು ಜೀವನದಷ್ಟೆ ವಿಶಾಲವಾಗಿದೆ, ಅನಂತವಾಗಿದೆ. ನಿಜವಾದ ಜೀವನ ಇಲ್ಲವೆ ಜೀವನದ ಸಾರವೆಂದರೆ ಗಾಂಧಿಜಿ. ಇಂದಿನ ಯುಗದಲ್ಲಿ ಮನುಷ್ಯ ತುಂಬುಬಾಳನ್ನು ಹೇಗೆ ಬದುಕಬೇಕು? ಎಂಬ ಪ್ರಶ್ನೆಗೆ ಜನನ-ಮರಣಗಳನ್ನು ವಿಚಾರಿಸಿಂತ ಗಾಂಧಿಜಿಯವರ ಜೀವನವೆ ಉತ್ತರ. ಗಾಂಧಿಜಯವರ ತತ್ತ್ವ, ರಾಜಕಾರಣ, ಸಮಾಜದರ್ಶನ, ದೇಶಸೇವೆ ಇವುಗಳನ್ನು ಎಷ್ಟು ಮೆಚ್ಚಿದರೂ ಎಲ್ಲರೂ ಇವನ್ನು ಒಪ್ಪಲಾರರು, ಇವುಗಳಂತೆ ನಡೆಯಲಾರರು.

ಜೀವನದ ಹುರುಳನ್ನರಿತು ಹುಂದುವರಿದ ಮಹಾತ್ಮರು

ಗಾಂಧಿವಾದಕ್ಕಿಂತ ಗಾಂಧಿ ಚರಿತ್ರೆಗಿಂತ ಗಾಂಧಿಜೀವನ ಎಷ್ಟೊ ದೊಡ್ಡದು. ವ್ಯಕ್ತಿ-ವ್ಯಕ್ತಿಗೂ ತನ್ನ ತನ್ನ ಸಂಸ್ಕಾರವಿದೆ, ಸಿದ್ಧಿಯಿದೆ, ವೈಶಿಷ್ಟ್ಯವಿದೆ. ಹಾಗೆ ಗಾಂಧಿಜಿಯವರ ವ್ಯಕ್ತಿತ್ವಕ್ಕೇ ಒಂದು ಅಪೂರ್ವವಾದ ವೈಶಿಷ್ಟ್ಯವಿದೆ. ಅದಕ್ಕಿಂತ ಹೆಚ್ಚಾಗಿ ಎಲ್ಲ ವ್ಯಕ್ತಿಗಳೂ ಈ ಪ್ರಪಂಚದ ಪರಿಸರದಲ್ಲಿ ಉತ್ತಮವಾಗಿ ಹೇಗೆ ಬದುಕಬೇಕು ಎಂಬ ಒಂದು ದಿವ್ಯ ದರ್ಶನ, ಅದರಂತೆ ನಿತ್ಯಜೀವನ ಇವೆಂದರೆ ಗಾಂಧೀಜಿಯವರು. ಇದಕ್ಕಾಗಿ ಎಲ್ಲರೂ ಗಾಂಧಿಜಿಯವರಿಗೆ ತಲೆಬಾಗಬೇಕು, ಎಲ್ಲರೂ ಅವರಿದಿರು ನಿಲ್ಲಬೇಕು. ಇಪ್ಪತ್ತನೆಯ

ಶತಮಾನದಲ್ಲಿ ಆಗಿಹೋದ ಶ್ರೇಷ್ಠ ಭಾರತೀಯ, ಶ್ರೇಷ್ಠ ಮಾನವ ಎಂದು ಬಲ್ಲವರು ಅವರನ್ನು ಕರೆಯುತ್ತಿರುವುದು ಇದಕ್ಕಾಗಿಯೆ.

ತಮ್ಮ ಜೀವನವಲ್ಲಿಯ ಪ್ರಯೋಗ–ಅನುಭವಗಳಿಂದಲೂ ಜಗತ್ತಿನ ಪ್ರಮುಖ ಧರ್ಮಗ್ರಂಥಗಳಿಂದಲೂ ಗಾಂಧಿಜಿಯವರು ತಮ್ಮ ಈ ಜೀವನದರ್ಶನವನ್ನು ಪಡೆದರು. ಎಲ್ಲಕ್ಕಿಂತ ಹೆಚ್ಚಾಗಿ ಭಗವದ್ಗೀತೆ ಅವರಿಗೆ ದರ್ಶನವನ್ನು ಒದವಿಸಿತು, ಪ್ರತಿನಿತ್ಯವೂ ಸ್ಫೂರ್ತಿಯನ್ನು ಕೊಡುವ ಶಕ್ತಿಕೇಂದ್ರವಾಯಿತು. ತಮ್ಮ ಪ್ರಾರ್ಥನೆಗಳಲ್ಲಿ ಭಗವದ್ಗೀತೆಯ ಪಾರಾಯಣವನ್ನು ಅವರು ದಿನಾಲು ಮಾಡುತ್ತಿದ್ದರು. ಏಕೀಷವಾಗಿ ಅದರ ಎರಡನೆಯ ಅಧ್ಯಾಯದ ಕೊನೆಗಿದ್ದ ಸ್ಥಿತಪ್ರಜ್ಞನ ವರ್ಣನೆಯುಳ್ಳ ಭಾಗವನ್ನು ಪಠಿಸುತ್ತಿದ್ದರು. ಅವರ ಜೀವನದರ್ಶನದ ಉಗಮವು ಇಲ್ಲಿದೆ. ಅದನ್ನು ಅನುಸರಿಸಿ ಬಾಳುತ್ತ ಹೋದಂತೆ ಅದರ ಸತ್ಯತೆ ಅವರಿಗೆ ಹೆಚ್ಚು ಹೆಚ್ಚಾಗಿ ಕಂಡಿರಬೇಕು. ಅದರ ಸಂಪೂರ್ಣ ಅರ್ಥವನ್ನು ಅವರೇ ಹೆಚ್ಚಾಗಿ ಅರಿತವರಾದರು. ಯಾಕೆಂದರೆ ಗೀತೆಯ ಸಾರವನ್ನರಿಯಲು ವಿದ್ವತ್ತಿಗಿಂತ ಜೀವನನಿಷ್ಠೆ ಬೇಕು.

ಸ್ಥಿತಪ್ರಜ್ಞನ ವರ್ಣನೆಯಲ್ಲಿ ಉತ್ತಮಮಾನವನ ವರ್ಣನೆಯಿದೆ. ಇದನ್ನರಿತು ಗಾಂಧಿಜಿಯವರು ಸ್ಥಿತಪ್ರಜ್ಞರಾಗಲು ವ್ರತಸ್ಥರಾದರು. 'ಸ್ಥಿತಪ್ರಜ್ಞನೆಂದರೆ ಎಲ್ಲ ಮನೋಗತವಾದ ಕಾಮಗಳನ್ನು ಬಿಟ್ಟು ತನ್ನಲ್ಲಿ ತಾನು ಸಂತುಷ್ಟನಾದವನು. ದುಃಖದಲ್ಲಿ ಉದ್ವಿಗ್ನನಾಗದೆ ಸುಖದಲ್ಲಿ ನಿಸ್ಪೃಹಿಯಾಗಿ ಮೋಹ, ಭಯ, ಕ್ರೋಧಗಳನ್ನು ತೊರೆದವನು. ಒಳಿತು ಕೆಡಕು ಯಾವುದೇ ಬರಲಿ, ಅದರಲ್ಲಿ ತೊಡಕಿಕೊಳ್ಳದೆ ಹಿಗ್ಗದೆ ಹಳಿಯದೆ ಬಾಳಿದವನು.' ಈ ಮುಂತಾಗಿ ಗೀತೆ ಸ್ಥಿತಪ್ರಜ್ಞನನ್ನು, ಆದರ್ಶಕರ್ಮಯೋಗಿಯನ್ನು ವರ್ಣಿಸಿದೆ. ಸಂಸ್ಕಾರಹೊಂದದೆ ಬದುಕುವ ಸಾಮಾನ್ಯ ಮನುಷ್ಯನು ಎಲ್ಲ ಕಾಮಗಳ ಎಂದರೆ ದೇಹ ಮನ ಪ್ರಾಣಗಳ ಎಲ್ಲ ಕೆಳಗಿನ ಪ್ರೇರಣೆಗಳ ವಶನಾಗಿ, ಸುಖದಿಂದ ಹಿಗ್ಗುತ್ತ ದುಃಖದಿಂದ ಕುಗ್ಗುತ್ತ ಸಾಗಿರುತ್ತಾನೆ. ಸ್ಥಿತಪ್ರಜ್ಞನ ಆದರ್ಶವು ಅವನ ತಲೆಗೆ ಹತ್ತುವುದು ಕಷ್ಟ. ಕೆಲಮಟ್ಟಿಗೆ ಸಂಸ್ಕಾರ ಹೊಂದಿದ ಹಾಗೂ ಪಾಂಡಿತ್ಯದ ಶಿಖರವನ್ನೇರಿದ ಕೆಲವು ಮನುಷ್ಯರ ಬುದ್ಧಿಗೆ ಸ್ಥಿತಪ್ರಜ್ಞನ ಈ ಧ್ರುವತಾರೆ ಕಾಣುತ್ತದೆ. ಅದನ್ನು ಅವರು ತಿಳಿಸಿ ಹೇಳಬಲ್ಲರು, ಆದರೆ ಅದರಂತೆ ಬಾಳಲಾರರು, ಬಾಳಿದಂತೆ ತೋರಬಲ್ಲರು. ಹಿಂದಿನಂತೆ ಇಂದಿನ ನಾಗರಿಕತೆಯಲ್ಲಿ ಇಂಥ ಸುಸಂಸ್ಕೃತರು ಕಣ್ಣಿಗೆ ಬೀಳುತ್ತಾರೆ. ನಿಜವಾಗಿ ಇವರು ಸುಸಂಸ್ಕೃತರಲ್ಲ, ಅರ್ಧ ಸುಸಂಸ್ಕೃತರು. ಇಂಥವರಲ್ಲಿ ದ್ವಿಮುಖ ವ್ಯಕ್ತಿತ್ವವು ಹಲವುಸಲ ಕಂಡುಬರುತ್ತದೆ. ಸ್ಥಿತಪ್ರಜ್ಞನ ಅಸಿಧಾರಾವ್ರತವನ್ನೂ ಪಾಲಿಸುವ ಧೈರ್ಯದಿಂದ ಮುಂಬರಿದು ಬಹುಮಟ್ಟಿಗೆ ಗೆದ್ದ ಗಾಂಧಿಜಿಯಂಥವರೇ ನಿಜವಾದ ಸುಸಂಸ್ಕೃತರು. ಯಾಕೆಂದರೆ ಬದುಕಿನ ಸೂತ್ರ ಅವರಿಗೆ ಗೊತ್ತಾಗಿದೆ. ಆ ಸೂತ್ರ ಹಿಡಿದು ಅವರು ಬದುಕಲು ಹತ್ತಿದ್ದಾರೆ. ಸೋಲು-ಗೆಲವನ್ನೂ ಸಾವು-ನೋವನ್ನೂ ಲೆಕ್ಕಿಸದೆ ಜೀವನದ ಸತ್ಯವನ್ನು ಅವರು ಇದಿರಿಸುತ್ತಿದ್ದಾರೆ. **ಎಲ್ಲ ಮನೋಗತವಾದ** ಕಾಮಗಳ ತ್ಯಾಗವೆಂದರೇನು, ತನ್ನಲ್ಲಿ ತಾನು ಸಂತುಷ್ಟಿಯಾಗುವುದೆಂದರೇನು, ದುಃಖದಲ್ಲಿ ಕುಗ್ಗದೆ ಸುಖದಲ್ಲಿ ಹಿಗ್ಗದೆ ಇರುವುದೆಂದರೇನು ಎಂಬುದಕ್ಕೆ ಅವರ ಬಾಳೇ ನಿದರ್ಶನವಾಗುತ್ತದೆ. ಗೀತೆಯ ತತ್ತ್ವಕ್ಕೆ ಈ ರೀತಿಯಾಗಿ ಗಾಂಧಿಜಿಯವರು ಇಂದಿನ ಯುಗದ ಉತ್ತಮ ಭಾಷ್ಯವಾದರು. ಎಲ್ಲಿಯೋ ಗವಿಯ ಮೂಲೆಯಲ್ಲಿ ಕುಳಿತ ಮುನಿಯಾಗಿ ಇಲ್ಲವೆ ಆಶ್ರಮವಾಸಿಯಾಗಿ ಅವರು ಸ್ಥಿತಪ್ರಜ್ಞತೆಯನ್ನು ಸಾಧಿಸಲಿಲ್ಲ. ಪರತಂತ್ರ ದೇಶವನ್ನು ದಾಸ್ಯದಿಂದ ಮುಕ್ತಗೊಳಿಸುವ ಹವ್ಯಾಸ–ಹೋರಾಟಗಳಲ್ಲಿ, ದೇಶೋದ್ಧಾರದ ವಿವಿಧ ಚಟುವಟಿಕೆಗಳಲ್ಲಿ ತಮ್ಮ ಆ ನಿಲುವನ್ನೂ ಅವರು ಉಳಿಸಿಕೊಂಡರು. ಬೆಟ್ಟದೆರೆಗಳಿಂದ ಪ್ರತಿಕ್ಷಣವೂ ಮುತ್ತಿಗೆ ಹಾಕುವ ಕಡಲಿನ ಮಧ್ಯದಲ್ಲಿ ಅವರು ಬೆಟ್ಟದ ಜೀವವಾಗಿ ತೋರಿದರು. ಜ್ಞಾನ–ಭಕ್ತಿ–ಕರ್ಮಗಳ ಸಮರಸದಿಂದ ಅವರ ಜೀವನವು ತುಂಬಿ ಹರಿಯುವ ಹೊಳೆಯಂತೆ ಆಯಿತು. ಪರಮಾತ್ಮನಲ್ಲಿ ಶ್ರದ್ಧೆ, ಅವನಲ್ಲಿ ಸಮರ್ಪಣ, ಅವನ ಇಚ್ಛೆಗನುಸರಿಸಿ ನಿಷ್ಕಾಮಕರ್ಮ ಇವು ಅವರ ಮಾಗಿದ ಜೀವನದ ಲಕ್ಷಣಗಳಾದುವು. ಅವರು ಪೂರ್ಣ ಮಾನವರಾದರೇ, ಸ್ಥಿತಪ್ರಜ್ಞತೆಯ ಕಳಸ ಮುಟ್ಟಿದರೇ—ಎಂಬುದಕ್ಕೆ, ಅವರಿಗಿಂತ ಹಿರಿಯರೇ ಉತ್ತರಕೊಡಬೇಕು. ನಮಗೆ ಮಾತ್ರ ಅವರು ನಿಲುಕದ ಎತ್ತರವನ್ನೇರಿದ ಹಿರಿಯ ಜೀವನವಾಗಿ ತೋರುತ್ತಾರೆ. ಅವರ ಜೀವನವೊಂದು ಈ ಶತಮಾನದ ಮಹಾಕಾವ್ಯವಾಗಿ ತನ್ನ ತತ್ತ್ವಸೋತಂತಾದರೂ ತಾನು ಸೋಲದೆ ಧೀರವಾಗಿ ಮುಕ್ತಾಯಗೊಂಡಿತು. ಅವರ ಮರಣದಿಂದ ಎದೆಗುಂದದೆ ಅವರ ಜೀವನದಿಂದ ಸ್ಫೂರ್ತಿಗೊಂಡು ನಂನಮ್ಮ ಬಾಳನ್ನು ನಾವು ಧೀರರಾಗಿ ಬಾಳಬೇಕು.



ಜಾತಿಹೀನನೆ ಮನೆಯ ಹೆಣ್ಣೀತಿ ತಾ ಹೀನಜೆ?
ಜಾತಂಗೆ ಜಾತಜೆನಲೇಕೆ, ಅಜಮುಖಿನಿ
ಜಾತನೇ ಜಾತ ಸರ್ವಜ್ಞ ||

ಸತ್ಯವಂತರ ನೀಸು ಸತ್ಯರಿಂದಲಿಯೇಸ
ಹೆತ್ತಮ್ಮ ಮಗನ ಕರೆವಂತೆ ನಿಜಸು ನಾ
ಎತ್ತಿಕೊಂಬುವನು ಸರ್ವಜ್ಞ

ಸಾಕ್ರೇಟೀಸ್, ಏಸುಕ್ರಿಸ್ತ ಮತ್ತು ಮಹಾತ್ಮಾ ಗಾಂಧಿ

ಡಾ. ಜಿ. ಹನುಮಂತರಾವ್ ಎಂ. ಎ. ಮೈಸೂರು

★

ಸಾಧುತ್ವ ಯೋಧತ್ವಗಳಿರಡನ್ನೂ ಸಮನ್ವಯಮಾಡಿ, ತನ್ನ ವ್ಯಕ್ತಿತ್ವವನ್ನು ಮುಗಿಲುಮುಟ್ಟುವಷ್ಟು ಬೆಳೆಯಿಸಿಕೊಂಡುದು ಮಹಾತ್ಮರ ವೈಶಿಷ್ಟ್ಯ.

ಮಹಾತ್ಮಾ ಗಾಂಧಿಯವರನ್ನು ಸಾಕ್ರೇಟೀಸನಿಗೂ ಏಸುಕ್ರಿಸ್ತನಿಗೂ ಅನೇಕರು ಅನೇಕ ಸಲ ಹೋಲಿಸಿದ್ದಾರೆ. ಆದರೆ ಅವರಂತೆಯೇ ಗಾಂಧಿಯವರೂ ಕೊನೆಗಾಣುತ್ತಾರೆಂಬ ಯೋಚನೆ ಯಾರ ಮನಸ್ಸಿನಲ್ಲೂ ಸುಳಿದಿರಲಿಲ್ಲ. ಆ ಸುದ್ದಿಯನ್ನು ಕೇಳಿದಾಗ ಅದನ್ನು ಯಾರೂ ನಂಬಲಿಲ್ಲ. ಸಾಧು-ಸಂತರನ್ನು ಕೊಲೆಮಾಡದಿದ್ದುದು ಹಿಂದೂಮತದ ಹಿರಿಮೆ—ಎಂದು ನಾವೆಲ್ಲರೂ ಹೆಮ್ಮೆಪಡುತ್ತಿದ್ದೆವು. ಆ ಹೆಮ್ಮೆ ಇಂದು ಹಾಳಾಗಿದೆ. ಅದನ್ನು ಉಳಿಸಿಕೊಳ್ಳುವ ಅಭಿಮಾನದಿಂದ ನಮ್ಮ ಸ್ನೇಹಿತರಲ್ಲಿ ಕೆಲವರು 'ಸಾಕ್ರೆಟೀಸನನ್ನು ಅಥೆನ್ಸ್ ನಗರದ ಪೌರರು ಕೊಂದರು, ಯೇಸುಕ್ರಿಸ್ತನನ್ನು ರೋಮನ್ ಚಕ್ರಾಧಿಪತ್ಯದ ಅಧಿಕಾರಿಗಳು ಕೊಂದರು, ಹಿಂದೂ ಜನಾಂಗ ಮಹಾತ್ಮರನ್ನು ಕೊಲ್ಲಲಿಲ್ಲ" ಎಂದು ವಾದಿಸಹೊರಟಿದ್ದಾರೆ. ಆ ವಾದಕ್ಕೆ ಸಮರ್ಥನೆ ದೊರೆಯುವುದು ಕಷ್ಟ, ದೊರೆತರೂ ಅದು ನಮ್ಮ ಹೃದಯಕ್ಕೆ ಸಮಾಧಾನತರುವ ಸಮರ್ಥನೆಯಲ್ಲ.

ನಮ್ಮ ಜನಾಂಗದ ಹೆಮ್ಮೆಹಾಗಿರಲಿ. ಅದು ಅಲ್ಪ ವಿಷಯ. ನಮ್ಮ ಅಲ್ಪತನವನ್ನು ಮರೆತು ಮಹಾತ್ಮರ ಕಡೆಗೆ ತಿರುಗಿ ಅವರ ಮಹಿಮೆಯನ್ನು ಮನನಮಾಡಿದರೆ, ಬಹುಶಃ ನಮ್ಮ ಉದ್ಧಾರಕ್ಕೆ ಅವಕಾಶ ದೊರೆಯಬಹುದು.

ಗಾಂಧಿಯವರಿಗೂ ಸಾಕ್ರೆಟೀಸನಿಗೂ, ಗಾಂಧಿಯವರಿಗೂ ಯೇಸುಕ್ರಿಸ್ತನಿಗೂ ಹೋಲಿಕೆ ಇದ್ದರೂ, ಸೂಕ್ಷ್ಮವಾಗಿ ಪರಿಶೀಲಿಸಿದರೆ ಆ ಹೋಲಿಕೆಯ ಪ್ರಮಾಣ ಅತ್ಯಲ್ಪವೆಂದು ತೋರುತ್ತದೆ. ಹೀಗೆ ಹೇಳಿದಾಗ ಸಾಕ್ರೆಟೀಸನ ಮಹತ್ತ್ವವನ್ನಾಗಲಿ ಯೇಸುಕ್ರಿಸ್ತನ ಮಹತ್ತ್ವವನ್ನಾಗಲಿ ಕಡಿಮೆಮಾಡುವ ಉದ್ದೇಶ ನಮಗಿಲ್ಲ. ನಮ್ಮ ಉದ್ದೇಶ ಮಹಾತ್ಮರ ವ್ಯಕ್ತಿತ್ವದ ನಿಜಪ್ರಮಾಣವನ್ನು ತಿಳಿಯಬೇಕೆಂಬುದು ಮಾತ್ರವೇ.

ಸಾಕ್ರೆಟೀಸನು ತತ್ತ್ವದ ಆವರಣದಲ್ಲಿ ಅದ್ವಿತೀಯ. ಆ ಆವರಣದಲ್ಲಿ ಅವನ ಬಳಿಯಲ್ಲಿ ಮಹಾತ್ಮಾ ಗಾಂಧಿಯವರನ್ನು ನಿಲ್ಲಿಸಿದರೆ, ತತ್ತ್ವಜಿಜ್ಞಾಸೆಯಲ್ಲಿ ಅವರು ತೀರ ಸಾಮಾನ್ಯರಾಗಿ ಕಾಣಬಹುದು. ಹಾಗೆಯೇ ಯೇಸುಕ್ರಿಸ್ತನ ದೈವಿಕಭಾವನೆಯನ್ನು, ತನ್ನ ತಂದೆಯನ್ನು ಕುರಿತು ಅವನು ಆಡಿದ ಅಮರವಾದ ಮಾತುಗಳನ್ನು, ಮಹಾತ್ಮಾ ಗಾಂಧಿಯವರು ದೇವರ ವಿಚಾರವಾಗಿ ಕೊಟ್ಟಿರುವ ಹೇಳಿಕೆಯೊಡನೆ ಹೋಲಿಸಿದರೆ, ಮಹಾತ್ಮರ ಮಾತು ತೀರ ಸಾಮಾನ್ಯವಾದುದೆಂದೆನ್ನಿಸುತ್ತದೆ. ಮಹಾತ್ಮರು ದೇವರ ವಿಚಾರದಲ್ಲಿ ಹೊಸವಾದುದನ್ನಾಗಲಿ ಹೊಳಪುಳ್ಳದ್ದನ್ನಾಗಲಿ ಹೆಚ್ಚಿನದನ್ನಾಗಲಿ ಹೇಳಹೋಗಲಿಲ್ಲ. ಉಪನಿಷತ್ತುಗಳನ್ನು ಗೀತೆಗಳನ್ನು ಅವರು ಮೀರಿಸಹೊರಟವರಲ್ಲ.

ತಾವು ಬಯಿಬಲ್, ಗೀತೆ, ಖುರಾನ್ ಇವುಗಳಿಂದ ಸ್ಫೂರ್ತಿಪಡೆದರೆಂದು ಅವರು ಸ್ಪಷ್ಟವಾಗಿ ಹೇಳಿರುತ್ತಾರೆ. ಆದರೆ ಅವುಗಳಲ್ಲಿರುವ ಜೋಳೆಯನ್ನು ಅವು ನಿರೀಕ್ಷಿಸದ ರೀತಿಯಲ್ಲಿ ವಿಶಾಲಪಡಿಸಿ, ಅನುಷ್ಠಾನಕ್ಕೆ ತಂದು, ಅವರು ಹಿಂದಿನಕಾಲದ ಪ್ರವಾದಿಗಳನ್ನೆಲ್ಲ ಮೀರಿಸಿದ್ದಾರೆ. ಬಯಿಬಲ್‌ನಲ್ಲಿ, ಖುರಾನಿನಲ್ಲಿ, ಉಪನಿಷತ್ತುಗಳಲ್ಲಿ ಹೇಳಿರುವಂತೆ ಈ ವಿಶ್ವಕ್ಕೆಲ್ಲಾ ಒಬ್ಬನೇ ತಂದೆ ಎಂದು ನಂಬುವುದಾದರೆ, ಅವೆಲ್ಲವರಲ್ಲೂ ಉಕ್ತವಾಗಿರುವ ಅವನಿಂದ ಪ್ರಚೋದಿತವಾದ ಮಾತು ಎಲ್ಲ ಮತದವರಿಗೂ ಪ್ರಿಯವಾಗಬೇಕಲ್ಲವೆ? ದೇವರು ವಿಶ್ವದ ತಂದೆಯಾವರೆ ಮಾನವರೆಲ್ಲರೂ ಸೋದರರಾಗಲಿಲ್ಲವೆ?— ಇವರಲ್ಲಿ ಯಾರೇ ಆಗಲಿ ಕಷ್ಟಕ್ಕೀಡಾದರೆ, ಅನ್ಯಾಯದಿಂದ ನರಳುತ್ತಿದ್ದರೆ, ದೇವರು ವಿಶ್ವದ ತಂದೆ ಎಂಬುವ ಎಲ್ಲ ಮತದವರೂ ಅಂಥವರಿಗೆ ಭೇದಭಾವವಿಲ್ಲದೆ ಸಹಾಯನೀಡಬೇಡವೆ? ಹೀಗೆ ಕೇಳಿ ಅವರು ಏಕದೇವೋಪಾಸಕ ಮತವನ್ನು ಒಂದು ಹೊಸ ಅಂತಸ್ಥಿಗೆ ಏರಿಸಿರುತ್ತಾರೆ. ಈ ಮತಭಾವನೆಯನ್ನು ಅನುಷ್ಠಾನಕ್ಕೆ ತಂದ ಗಾಂಧಿಯವರ ವ್ಯಕ್ತಿತ್ವ, ನೈಶಾಲ್ಯದಲ್ಲೂ ವೈವಿಧ್ಯದಲ್ಲೂ ಉಳಿದೆಲ್ಲರದಕ್ಕಿಂತ ಹಿರಿದಾಗಿ ತೋರುತ್ತದೆ.

ಮಹಾತ್ಮರ ದೃಷ್ಟಿ ನಿಜವಾದ ವಿಶ್ವದೃಷ್ಟಿ, ಅವರ ಮತ ನಿಜವಾದ ನಿಶ್ಚಮತ. ಅವರ ಪ್ರೀತಿ ವಿಶ್ವಕುಟುಂಬಿಯ ಪ್ರೀತಿ. ಇವರು ನಮ್ಮವರು ಇವರು ಪರಜನ ಎಂದು ಹೇಳುವರು ಅಲ್ಪಮತಿಗಳು. ಗಾಂಧಿಯವರು ವಸುಧೆ ಎಲ್ಲ ಒಂದು ಕುಟುಂಬ * ಎಂದು ತಿಳಿದು ನಡೆದ ಮಹಾತ್ಮರು. ಅವರು ಬೋಧಿಸಿದುದು ಪರಮತದಲ್ಲಿ ಸಹನೆ ಮಾತ್ರವಲ್ಲ-ಪ್ರೀತಿ. ಪ್ರತಿಯೊಬ್ಬನ ಪ್ರೌಢ ವಿದ್ಯಾಭ್ಯಾಸ ಪೂರ್ಣವಾಗಬೇಕಾದರೆ; ಅವನು ಪ್ರಪಂಚದ ಎಲ್ಲ

* ಅಯಂನಿಜಃ ಪರೋವೇತ್ತಿ ಗಣನಾ ಲಘುಚೇತಸಾಂ
ಉದಾರಚರಿತಾನಾಂತು ವಸುಧೈವ ಕುಟುಂಬಕಮ್ ॥

ಮತಗಳ ಪರಿಚಯ ಮಾಡಿಕೊಳ್ಳಬೇಕು. ಕ್ರಿಸ್ತರೇ ಆಗಲಿ, ಮುಸ್ಲಿಮರೇ ಆಗಲಿ, ಹಿಂದೂಗಳೇ ಆಗಲಿ ಅವರು ದೇವರು ಒಬ್ಬನೇ ಎಂದು ನಿಜವಾಗಿ ನಂಬುವುದಾದರೆ, ಅಂಥ ದೇವರ ಗುಣಗಾನ, ಸ್ತೋತ್ರ ಬಯಿಬಲ್ಲಿನಲ್ಲಿರಲಿ ಖುರಾನಿನಲ್ಲಿರಲಿ, ಉಪನಿಷತ್ತುಗಳಲ್ಲಿರಲಿ, ಗೀತೆಯಲ್ಲಿರಲಿ—ಎಲ್ಲೇ ಇರಲಿ, ಅದು ಅವರಿಗೆ ಒಂದೇ ಸಮನಾಗಿ ಪ್ರಿಯವಾಗಬೇಕು. ಹಾಗೆ ಪ್ರಿಯವಾಗದವನಿಗೆ ವಿಶ್ವಕುಟುಂಬಿ ಎಂಬ ಭಾವ ಹೇಗೆ ಬರಬೇಕು? ಅವನಲ್ಲಿ ಆಂತರರಾಷ್ಟ್ರೀಯ ಭಾವನೆ ಹೇಗೆ ಬೆಳೆಯಬೇಕು ? ನಿಜವಾದ ಆಂತರರಾಷ್ಟ್ರೀಯ ಭಾವನೆ ಎಂದರೆ ಮಹಾತ್ಮರೊಬ್ಬರದೇ. ಅವರ ಪ್ರಾರ್ಥನೆಯ ಸಭೆ ವಿಶ್ವಮತದ ಸಭೆಯಾಗಿತ್ತು. ಅವರು ತೀರಿಕೊಂಡ ದಿನದಿಂದ ಅವರ ಅಂತ್ಯಕ್ರಿಯೆ ಮುಗಿದ ಇಂದಿನವರೆಗೆ ಭಾರತೀಯರು ಬಯಿಬಲ್, ಖೊರಾನ್, ಭಗವದ್ಗೀತೆ, ಉಪನಿಷತ್ತುಗಳ ಪಾರಾಯಣ ನಡೆಸಿ ಅವರ ಸಂದೇಶವನ್ನು ನಡೆಸಿರುತ್ತಾರೆ. ಅದೇ ರೀತಿಯಾಗಿ ನಾವು ಮುಂದೆಯೂ ಅರ್ಥವತ್ತಾಗಿ ಆತ್ಮನಾಕ್ಷಿಯಾಗಿ ನಡೆಸುತ್ತ ಹೋದರೆ, ಮಹಾತ್ಮರು ಆಶಿಸಿದಂತೆ ಭಾರತವು ಆಂತರರಾಷ್ಟ್ರೀಯ ಸೌಹಾರ್ದಕ್ಕೆ, ಆಂತರರಾಷ್ಟ್ರೀಯ ಶಾಂತಿಗೆ ಕಾರಣವಾಗುವುದರಲ್ಲಿ ಸಂಶಯವಿಲ್ಲ.

ಮಹಾತ್ಮರ ವ್ಯಕ್ತಿತ್ವ ಹಿರಿದಾದುದಕ್ಕೆ ಇನ್ನೊಂದು ಕಾರಣವಿದೆ. ಅವರು ಹೊತ್ತಷ್ಟು ಭಾರವಾದ ಹೊರೆ ಪ್ರಪಂಚದಲ್ಲಿ ಬೇರೆ ಯಾವ ಮಹಾಪುರುಷನೂ ಹೊತ್ತಿರಲಿಲ್ಲ. ನಾಕ್ರೆಟೀಸನು ತನ್ನ ಭಾರವನ್ನು ನೂತ್ಯ ತಾನು ಹೊತ್ತ. ಮಹಾತ್ಮರ ಶ್ರಮವ ಮುಂದೆ ಸಾಕ್ರೆಟೀಸನ ತತ್ತ್ವಭೋದೆ ಒಂದು ವಿನೋದವ ವ್ಯಾಯಾಮ. ಅವನ್ನು ಬೀದಿಯಲ್ಲಿ ಸಂಧಿಸಿದವರ ಮುಂದೆ, ಅವನನ್ನು ಊಟಕ್ಕೆ ಕರೆದ ಸ್ನೇಹಿತರ ಮುಂದೆ ನಡೆಸಿ, ನಿಶ್ಚಿಂತೆಯಾಗಿ ಮನೆಗೆ ಹೋಗಿ ಮಲಗುತ್ತಿದ್ದ. ತನ್ನ ಹೆಂಡತಿಯನ್ನು ತಿದ್ದಿ ಅವಳನ್ನು ಉದ್ಧರಿಸುವ ಭಾರ ಕೂಡ ಅವನು ಹೊರಲಿಲ್ಲ. ಕ್ರೈಸ್ತನು ಹೊತ್ತ ಹೊರೆ ನಿಜವಾಗಿ ಜೊಡ್ಡದು. ಆದರೂ ಅವನ್ನು ಐವತ್ತು ವರ್ಷಗಳು ಮಹಾತ್ಮರು ಹೊತ್ತ ಹೊರೆಯೊಂದಿಗೆ, ಪಟ್ಟ ಶ್ರಮದೊಂದಿಗೆ ಹೋಲಿಸಿದರೆ, ಅದಕ್ಕೂ ಇವರದಕ್ಕೂ ಅಜಗಜಾಂತರ. ಕ್ರಿಸ್ತನಿಗೆ ಹೆಂಡತಿ ಮಕ್ಕಳಿರಲಿಲ್ಲ; ಒಂದು ನಾಡಿನ ಜನರ ಹೊಣೆಗಾರಿಕೆಯ ಚಿಂತೆ ಇರಲಿಲ್ಲ. ಹಿರಿಯ ವಂಶದಲ್ಲಿ ಹುಟ್ಟಿ, ಸೀಮೆಯಲ್ಲಿ ಆಂಗ್ಲವಿದ್ಯೆ ಕಲಿತು, ಸಮಾಜದಲ್ಲಿ ಪ್ರತಿಷ್ಠೆಗಳಿಸುವ ಅವಕಾಶವಿದ್ದು, ಅನೇಕ ಆಶೆಗಳ ಪಾಶಕ್ಕೆ ಸಿಕ್ಕಿ ದಾರಿತಪ್ಪಬಹುದಾದ ಗಾಂಧಿಯವರು ತಮ್ಮ ಜೀವನವನ್ನು ತಿದ್ದಿಕೊಂಡದ್ದಲ್ಲದೆ, ತಮ್ಮನ್ನು ತಾವೇ ಉದ್ಧರಿಸಿಕೊಂಡದ್ದಲ್ಲದೆ, ತಮ್ಮ ಹೆಂಡತಿಯನ್ನು ಉದ್ಧರಿಸಿದುದಲ್ಲದೆ, ಭಾರತದ ಹೊರೆಯನ್ನು ಹೊತ್ತು ಅದನ್ನು ಉದ್ಧರಿಸಿದ್ದು ಅವರು ಮಾಡಿದ ಒಂದು ಅದ್ಭುತ ಸಾಧನೆ.

ಸಾಧುತ್ವವನ್ನು ಯೋಧತ್ವದೊಡನೆ ಸಮನ್ವಯಪಡಿಸಿ ಅವರು ತಮ್ಮ ವ್ಯಕ್ತಿತ್ವವನ್ನು ಮುಗಿಲುಮುಟ್ಟುವಷ್ಟು ಬೆಳೆಯಿಸಿಕೊಂಡರು, ಈ ಅಂಶದಲ್ಲಿ ಮಹಾತ್ಮಾ ಗಾಂಧಿಯವರಿಗೆ ಸಮಾನರಾದವರು ಬೇರೊಬ್ಬರಿಲ್ಲ. ಇವರು ಹೊಡಿದ ಸತ್ಯಯುದ್ಧ ಅ ಸ್ವಂತ ಸೃಷ್ಟಿ. ಅದನ್ನು ಕಂಡುಹಿಡಿದವರೂ ಅವರೇ, ಅದ "ಸಾರಂಗತರಾದವರೂ ಅವರೇ. ಐವತ್ತು ವರ್ಷಗಳಷ್ಟು ದೀಘ ಕಾಲ ಅಹರು ಹೂಡಿದಂಥ ಧರ್ಮಯುದ್ಧವನ್ನು ಪ್ರಪಂಚ ಯಾವ ನಾಯಕನೂ ಹೂಡಿಲ್ಲ. ಶಸ್ತ್ರಸಜ್ಜಿತನಾದ ಸೈನ್ಯದ ಮು ನಿಶ್ಶಸ್ತ್ರರಾಗಿ– ಒಂದು ಸಲವಲ್ಲ, ಎರಡು ಸಲವಲ್ಲ, ಸಾವಿರ ಸ ತಮ್ಮ ಎದೆಯನ್ನೊಡ್ಡಿದಂಥ ಇನ್ನೊಬ್ಬ ರಣಧೀರನನ್ನು ನಾ ಬೇರೆಲ್ಲಿ ಕಾಣಬಹುದು ? ದೇವರು ಅವರಿಗೆ ಸಾವಿರ ಜೀವಗಳ ಕೊಟ್ಟಿದ್ದರೂ ಅವೆಲ್ಲ ಕೆಲವು ವರ್ಷಗಳಲ್ಲಿ ಮುಗಿದುಹೋಗಬಹ ದಾಗಿತ್ತು. ಕೊಲೆಗೆ ಅವರು ಅಷ್ಟು ಸುಲಭರು. ಆದ ಅವರಿಗಿದ್ದ ಒಂದು ಪುಟ್ಟ ಪ್ರಾಣ, ಐವತ್ತು ವರ್ಷಗಳ ಯುದ್ಧವ ಕಳೆದು ಉಳಿದದ್ದು ಒಂದು ಪರಮಾಶ್ಚರ್ಯ. ಇಂಥವರು ಸಶರೀ ವಾಗಿ ಈ ಭೂಮಂಡಲದಲ್ಲಿ ಬಾಳಿದ್ದರು ಎಂದಾಗ ಮುಂದಿ ಜನಕ್ಕೆ ನಂಬಲು ಕಷ್ಟವಾಗಬಹುದೆಂದು ಐನ್‌ಸ್ಟೈನರು ಹೇಳಿರು ತ್ತಾರೆ. ಅವರ ವ್ಯಕ್ತಿತ್ವ ಅಷ್ಟು ಅಪೂರ್ವವಾದುದು. ಭಾರತದ ಅಂಥ ಮಹಾತ್ಮರು ಜನಿಸಬೇಕಾದರೆ ಬುದ್ಧನ ಕಾಲದಿಂ ಎರಡೂವರೆ ಸಾವಿರವರ್ಷ ಕಾಯಬೇಕಾಯಿತು. ಇನ್ನೊಬ್ಬ ಅಂ ಮಹಾತ್ಮರನ್ನು ಸಡೆಯಲು ನಾವು ಇನ್ನೆಷ್ಟು ಸಾವಿರ ವರ್ಷ ಕಾಯಬೇಕು ?

WHILE AT DHARWAR—

For Clean & Tasty Meals

THE CITY CENTRAL LODGE
OPP. REGAL TALKIES,
DHARWAR
Will be the right Selection
VISIT ONCE...AND...BE SATISFIED.

●

ಸ್ವಚ್ಛ ಮತ್ತು ಆರೋಗ್ಯಕರವಾದ ಊಟ–ತಿಂಡಿ
ಗಳಿಗಾಗಿ ಅತ್ಯುತ್ತಮ ವಿಹಾರ್ ಡು !

ದಿ ಸಿಟಿ ಸೆಂಟ್ರಲ್ ಲಾಜ್,
(ರೀಗಲ್ ಟಾಕೀಜಿನ ಎದುರು)
ಧಾರವಾಡ

ವಿದ್ಯಾರ್ಥಿಗಳೇ ಆಗಲಿ, ಪ್ರವಾಸಿಕರೇ ಆಗಲಿ ಊಟಕ್ಕಾಗಿ
ತೊಂದರೆ ಪಡಬೇಕಾಗಿಲ್ಲ. ಶುಚಿಕರವಾದ
ವಿಹಾರ್ ಡು; ಒಮ್ಮೆ ಬಂದು ಒಳ್ಳೆಯ
ಅನುಭವ ಪಡೆಯಿರಿ.

ಉತ್ಪಾತ !

ಶ್ರೀ. ಸಾಲಿ ರಾಮಚಂದ್ರರಾಯರು, ಧಾರವಾಡ

(ರಾಗ:— ಕಾನಡಾ)

ಏನಿದೇನಿದು ನೀನು ಮಾಡಿದುದು, ಮನುಜಾ ! ।
ಮಾನವತೆಯನೆ ಮರೆತೆಯೋ, ಪಿಶಾಚೀ ! ॥ ಪಂ. ॥

ಕಾಲ ಧೂಲಿಯನು ಮಾನವನ ಮಕ್ಕಳು ಕುಡಿವ
ಹಾಲೊಳಗೆ ಬೆರೆಯಿಸಿದೆಯೆಲೆ ಆತತಾಯೀ ! ॥
ಶೀಲವನು ತುಳಿದಿಕ್ಕಿ ನೀನು ವಿಶ್ವದ ಜೀವ-
ನಾಲವನೆ ಕೊಯ್ಯಲಯ್ದಿದೆಯೊ, ಪಾಪೀ ! ॥ ೧ ॥

ಭೂತದಯೆಯಾಗರಕೆ ಕೊಳ್ಳಿಯಿಡುವುದೆ ಧರ್ಮ-
ನೀತಿಯಾಯ್ತಲೆ, ಧರ್ಮಮೂಢ, ನಿನಗೆ ! ॥
ಭ್ರಾತೃಭಾತಕನೆ, ಬಿರುಗಾಳಿಯಾದೆಯೊ ಜಗ-
ಜ್ಜ್ಯೋತಿಯನು ನಂದಿಸಲು, ಧರ್ಮಶತ್ರೂ ! ॥ ೨ ॥

ಶಾಂತಿ ಜೀವನದ ತಿರುಳಹುದದುವೆ ವಿಶ್ವದಲಿ
ಸಂತಸದ ನೆಲೆಯೆಂಬ ನಲ್ನುಡಿಯನು ॥
ಎಂತು ಮರೆತುತ್ಪಾತ, ಕೆಯ್ಯತ್ತಿದೆಯೊ ಕೊಲಲು
ಶಾಂತಿಮಂತ್ರವನೊರೆವ ಮುನಿನರನನು ? ॥ ೩ ॥

ಅಹಿಂಸೆ

' ಗೀತಾಪ್ರಿಯ ' ಧಾರವಾಡ

ಎಲ್ಲಿ ಇಲ್ಲವೊ ಹಿಂಸೆ—ಅದು ' ಅ-ಹಿಂಸೆ ' !
ಇಲ್ಲವೇ ಬೇರೆ ಪದ? ಏಕೆ ಹಿಂಸೆ ?
ಪದವೇನು ಗಾಳಿಗೋಪುರವೆಂದೆಯಾ ?
ಗಾಳಿಗೋಪುರದಿರವ ಇಲ್ಲಿನುವೆಯಾ ?
ಊಹೆನಾಡೊಂದುಂಟು ಈ ನಾಡಿನಂತೆ
ಊಹೆ ನಿಜ ನಿಜನಹುದು ನಾಡ ನಿಜದಂತೆ
ಊಹಿಸಲು ಬಂದದ್ದೆ ಊಹೆಯಾ ಸತ್ಯ
ಊಹಿಸದೆ ಇರು ನೀನು ಇಲ್ಲ ಇದು ಮಿಥ್ಯ.
ಇರುವುದನು ಇರಿಸುವುದೆ ಪದದ ಕೆಲಸ.
ಬರದವಕೆ ಇಲ್ಲದುದ ಹೆಸರ ಇರಿಸ.
ಪದವ ಮೀರಿದ ಇರವು ಇಹುದೆ ಕೊನೆಗೆ ?
ಪದವೆಂತು ಹೇಳೀತು ಇದನು ನಮಗೆ !
ಈ 'ಅಹಿಂಸೆ'ಯ ಪದವು ಬಂದಿತೆಂತು ?
ಆ 'ಅ'ವ ನಿರಿಸುತಲೆ ಅಹಿಂಸೆ ಬಂತು.
ಹಿಂಸೆಯಂತದಕೆ ಅಸ್ತಿತ್ವವಿಲ್ಲೆ ?
ಹಿಂಸೆ ಹೋಗದಹಿಂಸೆ ಏನು ಬಲ್ಲೆ ?
ಪದವ ಮೀರಿದ ನಾಡು ಜೀರೆ ಉಂಟೆ ?
ಪದವರಿತು ನುಡಿಸೆ. 'ಅಹಿಂಸೆ' ಆ ಗಂಟೆ !

ಅಮರಜ್ಯೋತಿ

ಶ್ರೀ. ಕೃಷ್ಣಮೂರ್ತಿ ಪುರಾಣಿಕ, ಗೋಕಾಕ

೧

ಶತಕೋಟಿ ಜೀವಿಗಳ ಕಣ್ಣೀರ ಧಾರೆಯೊಳು
ನನ್ನೊಂದು ಹನಿ ನಿನಗೆ ಪುಣ್ಯಾ ಪುರುಷ !
ನೊಂದೆದೆಯ ಗರ್ಭದೊಳು ಬಿಸಿಯುಸಿರೆ ಮಿಡುಕುವೊಲು
ಕಣ್ತುಂಬಿ ಸೂಸುತಿದೆ ಪುಣ್ಯಪುರುಷ.

೨

ಕೋಟಿ ಮನೆಗಳ ಬೆಳಗಿ ಶತಕೋಟಿ ಹೃದಯಗಳ
ಹಣತೆಯೊಳು ಚಾಚಿರುವ ಅಮರಜ್ಯೋತಿ
ಕಣ್ಣೀರ ನೇಹದೊಳು ಹಚ್ಚಿ ಪಾಸಿರ ದೀಪ
ಬೆಳಗುತಿಹುದಮಲಾತ್ಮ ದಿವ್ಯ ಜ್ಯೋತಿ.

೩

ಗಾಳಿಗೊಡ್ಡಿದ ಸೊಡರು ನನೆಯ ಬೆಳಕನ್ನೊಮ್ಮೆ
ಕತ್ತಲೆಗೆ ಕೈಮೂಡಿ ನಿಲ್ಲಬಹುದು;
ವಿಶ್ವಕೊಡ್ಡಿದ ಸೊಡರು ನಂದೀತೆ ಹೇಳೊಮ್ಮೆ
ಆವ ಗಾಳಿಯ ಹೊಡೆತ ಗೆಲ್ಲಬಹುದು ?

೪

ಮನೆಯ ಬೆಳಗುವ ದೀಪನೆಂದಾರೆ ಆರಿವರೆ
ಹೃದಯ ಬೆಳಗುವ ದೀಪವಾರಬಹುದೆ ?
ಬಾಳ ಹಣತೆಯನೊಡೆದು ಬಾಳ ಕೈ ಬೀಸಿದರೆ
ವಿಶ್ವಬಾಳಿನ ದೀಪ ನಂದಬಹುದೆ ?

ಒಂದು ನೆನಪು

ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

★

ಮಾಡಿದ್ದ ಸಂಕಲ್ಪ ಮುರಿಯವುದೆಂದರೆ ಅದೊಂದು ದೊಡ್ಡ ಪಾಪವೆಂದು ಮಹಾತ್ಮರು ಭಾವಿಸುತ್ತಿದ್ದರು. ಸಂಕಲ್ಪ ಮುರಿದ ಅಪರಾಧಕ್ಕೆ ಇನ್ನಾರೇ ಕಾರಣರಾದರೂ ತಾವು ಅದರ ಪ್ರಾಯಶ್ಚಿತ ಅನುಭವಿಸುತ್ತಿದ್ದರು.

●

೧೯೩೩ರ ಸುಮಾರು; ನಾನು ಸೊಂಡೂರು ಸಂಸ್ಥಾನದಲ್ಲಿ ಆಗ ಅರಮನೆಯ ಅಧಿಕಾರಿಯಾಗಿದ್ದೆ. ರಾಜಾಸಾಹೇಬರು ಕರೆದು ನನ್ನ ಕಿವಿಯಲ್ಲಿ ಹೇಳಿದರು:—"ಮುಂದಿನ ವಾರ ನಮ್ಮ ಸಂಸ್ಥಾನಕ್ಕೆ ಗಾಂಧೀಜಿಯವರು ಬರುತ್ತಾರೆ. ಒಂದು ರಾತ್ರಿ ಇಲ್ಲಿ ತಂಗಿ ಮುಂದೆ ಹೋಗುತ್ತಾರೆ. ಅವರನ್ನು ಖುದ್ದಾಗಿ ಸತ್ಕರಿಸುವ ಭಾಗ್ಯ ನನಗಿಲ್ಲ. ಅದು ನೀಲಿನವರ ವೃಷ್ಟಿಯಿಂದ ಆಕ್ಷೇಪಕ್ಕೆ ಕಾರಣವಾದೀತು. ಆದರೆ ಗಾಂಧೀಜಿಯವರಿಗೂ ಅವರ ಪರಿವಾರಕ್ಕೂ ಬೇಕಾಗುವ ಎಲ್ಲ ಅನುಕೂಲಗಳನ್ನೂ ನಾವು ಮಾಡಿಕೊಡಬೇಕು. ಇನಿಲ್ಲ ನಮ್ಮ ವೆಚ್ಚದಿಂದ ಆಗಬೇಕು. ಆದರೆ ಯಾರ ಕಿವಿಗೂ ಈ ಮಾತು ಹೋಗದಿರಲಿ—ನಾನು ಮಾತ್ರ ಆ ಹೊತ್ತಿನಲ್ಲಿ ಊರಲ್ಲಿರಬಾರದೆಂದೇ ಯೋಚಿಸಿದ್ದೇನೆ. ಆದುದರಿಂದ ನೀವೇ ಈ ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸಬೇಕು."

ಗಾಂಧೀಜಿಯವರಿಗೆ ಆತಿಥ್ಯ-ಸತ್ಕಾರ ಕೊಡುವ ವ್ಯವಸ್ಥೆ ನನ್ನ-ಕಡೆಗೆ! ಅದೊಂದು ನನ್ನ ಜೀವನದೊಳಗಿನ ಅತ್ಯಂತ ಶುಭಯೋಗ: ಒಂದು ದಿನವನ್ನಾದರೂ ಮಹಾತ್ಮರ ಸೇವೆಯಲ್ಲಿ ಕಳೆಯುವ ಭಾಗ್ಯ ನನಗೆ ದೊರಕುವುದಲ್ಲಾ—ಎಂದು!

ಸಿದ್ಧತೆ ನಡೆಯಿತು. ನಾನಿದ್ದ ಮನೆ ಆ ಊರಲ್ಲಿಯೇ ಒಳ್ಳೆಯ ಮನೆ. ಮೇಲಾಗಿ ಅದು ಸುಂದರವಾದ ಒಂದು ದೇವಾಲಯದ ನೆರೆಯಲ್ಲಿದ್ದಿತು. ಅದನ್ನೇ ತೆರವು ಮಾಡಿದೆವು. ಅರಮನೆಯ ಉತ್ತಮೋತ್ತಮ ವಸ್ತುಗಳಿಂದ ಅದು ಅಲಂಕರಿಸಲ್ಪಟ್ಟಿತು. ಮುಂಬಯಿಯಿಂದ ತರತರದ ಹಣ್ಣುಗಳು, ಬೆಂಗಳೂರಿಂದ ಬಗೆಬಗೆಯ ಅಗರುಬತ್ತಿ ಹೂಮಾಲೆಗಳು ಬಂದುವು. ಗಾಂಧೀಜಿಯವರು ಇಲ್ಲಿರುವುದೇ ಒಂದು ರಾತ್ರಿ—ಅಷ್ಟೇ ಸಮಯದಲ್ಲಿ ಅವರಿಗೆ ರಾಜವೈಭವದ ಆತಿಥ್ಯವನ್ನು ಸಲ್ಲಿಸಬೇಕು ಎಂಬ ಹಿರಿಯಾಸೆ! ಅದರಂತೆ ವ್ಯವಸ್ಥೆ ಇಡಲಾಗಿತ್ತು.

ಮಹಾತ್ಮರು ಸಾಯಂಕಾಲ ಊರ ಜನರಿಂದ ಹರಿಜನ ನಿಧಿಯನ್ನು ಸ್ವೀಕರಿಸಿ, ಸಭೆಯನ್ನು ಮುಗಿಸಿಕೊಂಡೇ ಬಿಡಾರಕ್ಕೆ ಬಂದರು. ನಾವು ಮಾಡಿರುವ ರಾಜೈಶ್ವರ್ಯದ ವ್ಯವಸ್ಥೆಯನ್ನು ನೋಡಿ ಅವರಿಗೆ ಸಂತೋಷವಾಗಬಹುದೆಂದು ನಾವು ಎಣಿಸಿದ್ದೆವು. ಒಮ್ಮೆ ಎಲ್ಲಕಡೆಗೂ ಅವಲೋಕಿಸಿದರು; ಕೂಡಲೆ ಆ ವೈಭವವನ್ನೂ ತೆಗೆಯಿಸಿಬಿಡಲು ಮಿರಾಬೇನ್ ಅವರಿಗೆ ಹೇಳಿದರು! ಅಲ್ಲಿ ಎರಡನೆಯ ಮಾತೇ ಇಲ್ಲ. ಸಾದಗುಡಾರ-ಚಾಪೆಗಳು, ಖಾದಿಯ ಲೋಡು-ಗಾದೆಗಳು ಆ ಜಾಗದಲ್ಲಿ ಬಂದುವು. ಶ್ರೀ. ಪ್ಯಾರೆಲಾಲ್, ಮಿರಾಬಿಹೆನ್, ಹಾಗು ಜಮನಾಲಾಲ ಬಜಾಜರ ಮಗಳು ಗಾಂಧೀಜಿಯವರ ಹತ್ತಿರ ಉಳಿದರು; ಮಿಕ್ಕ ಸುಮಾರು ೪೦ ಜನರನ್ನು ಸಮೀಪದ ಒಂದು ಛತ್ರದಲ್ಲಿ ಇಳಿಸಲಾಯಿತು.

ಗಾಂಧೀಜಿಯವರಿಗೆ ಆ ದಿನವೆಲ್ಲ ಊಟಮಾಡಲು ಅವಕಾಶವನ್ನೆ ಸಿಕ್ಕಿರಲಿಲ್ಲ. ಇಡಿಯ ದಿನ ಮೋಟರಿನಲ್ಲಿ ಪ್ರವಾಸ, ಊರೂರಿನ ಸಭೆಗಳು, ವ್ಯಾಖ್ಯಾನ, ಸತ್ಕಾರ, ನಿಧಿಸಂಗ್ರಹ ಇವೇ ನಡೆದಿದ್ದುವು. ಊಟ ಸಿದ್ಧಪಡಿಸಲು ಮಿರಾಬೇನಳಿಗೆ ಅಪ್ಪಣೆಯಾಯಿತು: ಹಿಂದಿನ ಊರಲ್ಲಿ ಒಬ್ಬರು, ತಮ್ಮ ತೋಟದಲ್ಲಿ ಬೆಳೆದ ಹಣ್ಣುಗಳನ್ನು ಗಾಂಧೀಜಿಯವರಿಗೆ ಪ್ರೀತಿಯಿಂದ ಅರ್ಪಿಸಿದ್ದರಂತೆ. ಅವನ್ನು ತಾವೇ ತಿನ್ನುವುದಾಗಿ ಗಾಂಧೀಜಿಯವರು ನಂಬಿಕೆ ಕೊಟ್ಟಿದ್ದರಂತೆ. ಆ ಹಣ್ಣಿನ ರಸವನ್ನೇ ತರಲು ಮಿರಾಬೇನ್‌ಗೆ ಹೇಳಿದರು. ಹಣ್ಣಿನ ಕರಡಿಗೆಯ ಶೋಧ ನಡೆಯಿತು. ಆ ಕರಡಿಗೆಯನ್ನು ಪರಿವಾರದ ಜನ ಕುಳಿತಿರುವ ಮೋಟರಿನಲ್ಲಿಯೇ ಇಡಲಾಗಿತ್ತು. ಯಾರೋ ಹೋಗಿ ವಿಚಾರಿಸಿಕೊಂಡು ಬಂದು ಹೇಳಿದರು: 'ಹಣ್ಣು ಇಲ್ಲ, ಬರಿದಾದ ಕರಡಿಗೆ ಮಾತ್ರ ಇವೆ!' ಎಂದು. ಆ ಮೋಟರಿನಲ್ಲಿ ಕುಳಿತವರು ಅವನ್ನು ತಿಂದುಹಾಕಿದ್ದರು. ತಿಂದವರು ತಾವು ತಿಂದೆನೆಂದು ಒಪ್ಪಿಕೊಳ್ಳುವುದಕ್ಕೂ ಸಿದ್ಧರಾಗಲಿಲ್ಲ!

ನಾವು ತರಿಸಿದ ಹಣ್ಣು ಬೇಕಾದಷ್ಟು ಇದ್ದುವು. ಅವನ್ನು ಕೊಡಲು ಮಿರಾಬೇನ್‌ನನ್ನು ಕೇಳಿಕೊಂಡೆವು. ಮಿರಾಬೇನ್ ಅಂಜಂಜುತ್ತಲೇ ಹಾಗೆ ಸೂಚಿಸಿದಳು. ಅಷ್ಟರಲ್ಲಿ ಗಾಂಧೀಜಿಯವರು ನಿರ್ಣಯವನ್ನೇ ಮಾಡಿಕೊಂಡಿದ್ದರು: 'ಈ ರಾತ್ರಿ ನಿರಾಹಾರಿಯಾಗಿ ಕಳೆಯುವುದು' ಎಂದು! ಅವರ ನಿರ್ಣಯವೆಂದರೆ ಹಿಮಾಚಲದಷ್ಟೇ ಅಚಲ! ಕಾರಣ ಹಿರಿಯದೇ ಇರಲಿ, ಕಿರಿಯದೇ ಇರಲಿ! ಜನರು ತಪ್ಪಿ ನಡೆದರೂ ತಮ್ಮನ್ನೇ ದಂಡಿಸಿಕೊಳ್ಳುವರು! ತಮ್ಮನ್ನು ವಂಚಿಸುವ ಬುದ್ಧಿ ಜನರಿಗುಂಟಾಗಬೇಕಾದರೆ, ಆ ದೋಷ ಜನರದಲ್ಲ, ತಮ್ಮದು! ತಾವೇ ಇನ್ನೂ ಪರಿಪೂರ್ಣವಾಗಿ ಶುದ್ಧಾತ್ಮರಾಗಿಲ್ಲ— ಎಂಬುದು ಅವರ ನೀತಿ.

ರಾತ್ರಿ ಸುಮಾರು ೧೧ ಘಂಟೆಗೆ ಅವರು ಮಲಗಲು ಹೋದರು. ಅದೂ ಮಾಳಿಗೆಯ ಮೇಲೆ—ಬಟ್ಟೆ ಬಯಲಲ್ಲಿ! ನಿರಭ್ರವಾದ ಆಗಸದಲ್ಲಿ ಅನಂತ ತಾರೆಗಳು, ಮಧ್ಯದಲ್ಲಿ ಚಂದಿರನು, ಸುತ್ತಲೂ

ಕೋಟೆಯಂತೆ ಆವರಿಸಿರುವ ಗುಡ್ಡಗಳು, ಎದುರಿಗೆ ಇನ್ನೂರಡಿ ಎತ್ತರದ ಮಂದಿರದ ಗೋಪುರ! ಅದನ್ನು ನಿರೀಕ್ಷಿಸುತ್ತಿರುವಾಗಲೇ ಅವರಿಗೆ ನಿದ್ರೆಹತ್ತಿತು.

ನಾನು ತುಂಬ ದಣಿದಿದ್ದೆ. ಗಾಂಧೀಜಿಯವರಿಗಾಗಿ ಕೂಡಲು ಏರ್ಪಡಿಸಿದ್ದ ಕೋಣೆಯಲ್ಲಿಯೇ, ತಕ್ಕೈಯನ್ನು ತಲೆಗಿಂಬಾಗಿ ಮಾಡಿ ಒರಗಿದೆ. ಕ್ಷಣದಲ್ಲಿ ನಿದ್ದೆ ನನ್ನನ್ನಾವರಿಸಿತು. ೫ ಗಂಟೆಯ ಸುಮಾರಿಗೆ ನನಗೆ ಎಚ್ಚರಾಯಿತು. ಮಿಂಚಿನ ದೀಪ ಧಾಳಾಗಿ ಉರಿಯುತ್ತಿತ್ತು. ಕಣ್ತೆರೆದು ನೋಡಿದೆ—ಗಾಂಧೀಜಿಯವರು ಒಬ್ಬರೇ ಬರೆಯುತ್ತ ಕುಳಿತಿದ್ದಾರೆ! ಅವರ ಕಡೆಗೆ ಕಾಲು ಮಾಡಿಕೊಂಡು ನಾನು ನಿದ್ದೆ ಹೋಗಿದ್ದೇನೆ! ಅವರು ಆ ಕೋಣೆಯಲ್ಲಿ ಬಂದು ಕುಳಿತು ಒಂದು ಘಂಟೆಯಾಗಿದ್ದರೂ ನನಗೆ ಎಚ್ಚರವಾಗಿರಲಿಲ್ಲ. ತುಂಬ ನಾಚಿಕೆಯಾಯಿತು ನನಗೆ! ಜಿಟ್ಟನೆ ಎದ್ದು ಒಳಗೆ ಬಂದೆ. ಹಾಸಿಗೆಯ ಮೇಲೆ ಕುಳಿತು ಶ್ರೀ. ಪ್ಯಾರೆಲಾಲರು ಪತ್ರಿಕೆಗಾಗಿ ಲೇಖನವನ್ನು ಬರೆಯುತ್ತಲೇ ಇದ್ದರು. ಗಾಂಧಿಜಿಯವರು ಅದನ್ನು ತಿದ್ದಿತಿದ್ದಿ ಕೊಡುತ್ತಿದ್ದರು. ಅವರು ಮೂರು ಗಂಟೆಗೇ ಎದ್ದು ಕೆಳಗೆ ಬಂದಿದ್ದರು. ಪ್ಯಾರೆಲಾಲರು ಮಾತ್ರ ಕುಳಿತವರು ಹಾಗೇ ಕುಳಿತುಬಿಟ್ಟಿದ್ದರು!

ಮಂದಿರದಲ್ಲಿ ಬೆಳಗಿನ ಪ್ರಾರ್ಥನೆ ಮುಗಿದ ಮೇಲೆ ಮಾತ್ರ ಮಹಾತ್ಮಾಜಿ ಟೊಮ್ಯಾಟೊ ರಸವನ್ನು ತೆಗೆದುಕೊಂಡರು. ೭-೩೦ಕ್ಕೆ ಅಲ್ಲಿಂದ ಬಳ್ಳಾರಿಗೆ ಹೊರಡುವುದು—ಎಂದು ಅವರ ಪ್ರವಾಸದ ಕಾರ್ಯಕ್ರಮವು ಮೊದಲೇ ನಿರ್ಧಾರವಾಗಿತ್ತು. ಅದರಂತೆ ಸರಿಯಾಗಿ ಹೊರಡತಕ್ಕದ್ದು ಎಂದು ಗಾಂಧೀಜಿಯವರೂ ಧೃಢನಿಸಿಕೊಂಡಿದ್ದರು. ಆದರೆ ಅವರನ್ನು ಕರೆದೊಯ್ಯಲು ಬಂದ ಬಳ್ಳಾರಿಯ ಕಾರ್ಯಕರ್ತರು 'ಅರ್ಧಗಂಟೆ ಮೊದಲೇ ಹೊರಡುವುದು' ಎಂದು ಹೇಳಹತ್ತಿದರು. ಕಾರಣ ಕೇಳಿದಾಗ, ದಾರಿ ಸರಿಯಾಗಿಲ್ಲವೆಂದು ಹೇಳಿದರು. ಅವನ್ನು ಲಕ್ಷ್ಯಕ್ಕೆ ತಂದೇ ಈ ಪೇಚಿ ಗೊತ್ತುಮಾಡಿದೆ—ಎಂದು ಗಾಂಧೀಜಿಯವರು ಎಂದಾಗ, ಬಳ್ಳಾರಿ ೩೦ ಮೈಲಿಗಿಂತ ದೂರವಿದೆಯೆಂದೂ ಬಳ್ಳಾರಿಯವರು ಹಾದಿಸಿದರು. ಗಾಂಧೀಜಿಯವರು ಅಲ್ಲಿಗೇ ಬಿಡಲಿಲ್ಲ. ಆ ಜಿಲ್ಲೆಯ 'ಗ್ಯಾಜಿಟಿಯರ್' ತರಿಸಿ ನೋಡಿದರು. ಅಂತರವು ೩೦ ಮೈಲೇ ಇದ್ದಿತು! ಆಗ ನಿಜವಾದ ಕಾರಣವು ಬಯಲಿಗೆ ಬಿದ್ದಿತು: ನಡುವೆ-ಒಂದು ಹಳ್ಳಿಯವರ ಆಗ್ರಹಕ್ಕಾಗಿ ಅಲ್ಲಿಗೆ ಗಾಂಧೀಜಿಯವರನ್ನು ಕರೆತರಲು ಒಪ್ಪಿದ್ದರೆಂದೂ, ಅಲ್ಲಿ ಸಾಕಷ್ಟು ಸಿದ್ಧಿಕೂಡುವ ಭರವಸೆ ಕೊಡಲಾಗಿದ್ದಿತೆಂದೂ ಅವರಿಗೆ ಒಪ್ಪಿಕೊಳ್ಳಬೇಕಾಯಿತು. ಮೊದಲೇ ಈ ಮಾತನ್ನು ಹೇಳಿದ್ದರೆ ಗಾಂಧೀಜಿಯವರು ಇದಕ್ಕೆ ಒಪ್ಪುತ್ತಿದ್ದರೇನೊ! ಈಗ ಅವರ ಮನಸ್ಸು ಕಠೋರವಾಯಿತು. ಒಮ್ಮೆ ಕಾರ್ಯಕ್ರಮ ನಿಶ್ಚಿತವಾದ ಮೇಲೆ ಅದರಲ್ಲಿ ಆಯತ್ತ ಹೊತ್ತಿನಲ್ಲಿ ಅಷ್ಟಿಷ್ಟಕ್ಕೆ ಬದಲುಮಾಡುವುದನ್ನು ನಾನೊಪ್ಪುವುದಿಲ್ಲ. ನಾನು ಕೇವಲ ದುಡ್ಡಿಗಾಗಿಯೇ ಈ ಪ್ರವಾಸವನ್ನು ಕೈಕೊಂಡಿಲ್ಲ. ಅದನ್ನು ಕುಳಿತಲ್ಲೇ ನಾನು ಶೇಖರಿಸಬಹುದು. ಅಷ್ಟು ನನ್ನ ಕಾರ್ಯದಲ್ಲಿ ಅವರಿಗೆ ವಿಶ್ವಾಸವಿದ್ದರೆ, ನನಗೆ ದಾರಿಯಲ್ಲಿಯೇ ಅವರು ಕೊಡಲಿ" ಎಂದು ಹೇಳಿಬಿಟ್ಟರು. ಕೊನೆಗೆ ಮೊದಲು ಗೊತ್ತುಪಡಿಸಿದ ವೇಳೆಗೇ ಅಲ್ಲಿಂದ ಹೊರಟರು.

ಅವರೊಡನೆ ನಾನಿದ್ದುದು ೭-೮ ಗಂಟೆಗಳ ಕಾಲ ಮಾತ್ರ. ದೀರ್ಘಾವಧಿಯ ನಮ್ಮ ಜೀವನದಲ್ಲಿ ಈ ಕಾಲ ಎಂದರೆ ಲಕ್ಷದಲ್ಲಿ ಒಂದು ಪಾಲು ಇದ್ದಂತೆ. ಆದರೆ ಆ ಮಂಗಲಪ್ರಸಂಗ ನನ್ನ ಜೀವನದುದ್ದಕ್ಕೂ ಹೃದಯದಲ್ಲಿ ಅಚ್ಚೊತ್ತಿದಂತೆ ನಿಂತುಬಿಟ್ಟಿದೆ. ನಾನು ನಿದ್ದೆಯಿಂದೆಚ್ಚೆತ್ತು ನೋಡಿದಾಗ ಕಂಡ ಗಾಂಧೀಜಿಯವರ ಆ ಮೂರ್ತಿಯು ಇಂದಿಗೂ ನನ್ನ ಕಣ್ಣೆದುರು ಕಟ್ಟಿದಂತಿದೆ!

ಗಾಂಧೀಜಿಯವರು ಯಾವುದರ ಮೇಲೆ ಮಲಗಿಕೊಂಡಿದ್ದರೋ ಆ ಖಾದಿಯ ದುಪ್ಪಟ್ಟಿಯನ್ನು, ಎಷ್ಟೋ ದಿನ ನಾನು ಕಾಯ್ದಿರಿಸಿದ್ದೆ: 'ನನ್ನ ಮೈಗೆ ಅದು ತಗುಲಲಿ' ಎಂದು, ಆಗಾಗ ಅದನ್ನು ಉಪಯೋಗಿಸುತ್ತಿದ್ದೆ. ಅಂಥ ವಿಶುದ್ಧಾತ್ಮನ ಮೈ ಸೋಂಕಿದ ಆ ಬಟ್ಟೆ ನನ್ನ ಮೈ-ಮನಗಳಲ್ಲಿ ಕಿಂಚಿತ್ತಾದರೂ ಶುದ್ಧತೆಯನ್ನುತರಲಿ—ಎಂದು!

ಅವರ ಪ್ರತ್ಯಕ್ಷ ಸಹವಾಸ, ಉಪದೇಶ, ಬರೆವಣಿಗೆ, ಭಾಷಣಗಳು ಇಂದು ಜಗತ್ತಿನಲ್ಲಿ ಯಾರ ಯಾರ ಜೀವನವನ್ನು ಯಾವ ಯಾವ ಬಗೆಯಿಂದ ಪರಿವರ್ತಿಸಿರುವುವೋ ಅದು ಯಾವ ಅಳತೆಗೂ ನಿಲುಕದ ಮಾತು! ದೇವರು ಹೇಗೆ ವಿಶ್ವವನ್ನೇ ವ್ಯಾಪಿಸಿದ್ದಾನೊ ಹಾಗೆ, ಗಾಂಧೀಜಿಯವರು ಇಂದು ಮಾನವಹೃದಯವನ್ನೇ ವ್ಯಾಪಿಸಿ ನಿಂತಿದ್ದಾರೆ! ಮನುಷ್ಯನಲ್ಲಿ ಮನುಷ್ಯತ್ವ ಇರುವವರೆಗೂ ಗಾಂಧೀಜಿಯವರಿಗೆ ಸಾವಿಲ್ಲ!

ಚಿತ್ರಕಲಾ ಶಿಕ್ಷಕ

ಬರೆದವರು: ಶ್ರೀ. ಗೋ. ಶ್ರೀ. ಹುದ್ದಾರ

ಶಾಲೆಗಳಲ್ಲಿ ಡ್ರಾಯಿಂಗ್ ಕಲಿಸುವ ಉಪಾಧ್ಯಾಯರಿಗೂ ಕಲಿಯುವ ವಿದ್ಯಾರ್ಥಿಗಳಿಗೂ ತುಂಬ ಉಪಯುಕ್ತ. ಅನೇಕ ಪ್ರಾಯೋಗಿಕ ಚಿತ್ರಗಳಿಂದ ಕೂಡಿದೆ.

ಬೆಲೆ ೨-೦-೦. ಅಂಚೆಯ ವೆಚ್ಚ ೦-೪-೦.

'ಜಯಂತಿ' ಕಾರ್ಯಾಲಯ, ಧಾರವಾಡ

ಮಹಾತ್ಮರೂ ಆಯುರ್ವೇದವೂ

ಆಯುರ್ವೇದ ವಿದ್ವಾನ್, ಮ. ಗೋಪಾಲಕೃಷ್ಣರಾಯರು
'ಕಲಿಯುಗ'ದ ಸಂವಾದಕರು

ಜೀವನದಲ್ಲಿಯ ಎಲ್ಲ ಅನುಕೂಲತೆಗಳು ಬಡವನಿಗ ಬಲ್ಲಿದನಿಗೂ ಸಾಮಾನ್ಯವಾಗಿಯೂ ಸುಲಭಸಾಧ್ಯವಾಗಿಯೂ ನಿಸರ್ಗಕ್ಕೆ ಅವಿರೋಧವಾಗಿಯೂ ಇರಬೇಕೆಂಬುದು ಮಹಾತ್ಮರ ಬೀಜಮಾತು. ವೈದ್ಯಕ ಚಿಕಿತ್ಸೆಯಾದರೂ ಹಾಗೆಯೆ ಇರಬೇಕೆಂದು ಅವರು ಹೇಳುತ್ತಿದ್ದರು.

★

'ಆಯುರ್ವೇದ' ಎಂಬ ಶಬ್ದಕ್ಕೆ ಸಮಗ್ರ ಜಗತ್ತಿನ ವೈದ್ಯಶಾಸ್ತ್ರ ಎಂಬ ಅರ್ಥವನ್ನೇ ಈ ಲೇಖನದಲ್ಲಿ ಇಟ್ಟುಕೊಳ್ಳಲಾಗಿದೆ. ಬಾಳಿನ ವಿವಿಧ ಕ್ಷೇತ್ರಗಳಲ್ಲಿಯಂತೆ ಆಯುರ್ವೇದದಲ್ಲಿಯೂ ಮಹಾತ್ಮಾ ಗಾಂಧಿಯವರು ತಮ್ಮ ವೈಶಿಷ್ಟ್ಯದ ಜಜ್ಞಿತ್ತಿದ್ದಾರೆ. 'ಉನ್ನತ ವಾದ ವಿಚಾರ, ವಿನೀತವಾದ ಆಚಾರ' ಎಂಬ ಮಾತು ಮಹಾತ್ಮರ ತನು-ಮನಗಳ ಅಣು-ರೇಣುಗಳಲ್ಲಿಯೂ ಮೈಗೂಡಿತ್ತು. ಅದೇ ಅವರ ಬಾಳಿನ ವೈಶಿಷ್ಟ್ಯವೆಂದರೂ ನಲ್ಲುವುದು. ಅದೇ ಮಾತನ್ನೆ ಅವರು ಆಯುರ್ವೇದಕ್ಕೂ ವೈದ್ಯರಿಗೂ (ಡಾಕ್ಟರರಿಗೂ, ಹಕೀಮರಿಗೂ) ಅನ್ವಯಿಸಿ ಪರೀಕ್ಷಿಸುತ್ತಿದ್ದರು. ಬರಿ ಸಾಧನೆಗಳ ವಿಪುಲತೆಗಿಂತ ಆರೋಗ್ಯದ ಸ್ಥಿರತೆಯೇ ಅವರ ಪರೀಕ್ಷಣದ ಗುರಿಯಾಗಿರುತ್ತಿತ್ತು. ಆದುದರಿಂದ ವೈದ್ಯರು ಕೈಕೊಳ್ಳುವ ಚಿಕಿತ್ಸೆಯಲ್ಲಿ ಅನಿವಾರ್ಯವಾದುದೆಷ್ಟು? ಆಡಂಬರವೆಷ್ಟು? ಸ್ವಾರ್ಥಕ್ಕಾಗಿ ಎಷ್ಟು?—ಎಂಬ ವಿವರಗಳನ್ನು ಅವರು ತೀಕ್ಷ್ಣವಾದ ವಿಮರ್ಶೆಗೆ ಒಳಪಡಿಸುತ್ತಿದ್ದರು.

ಈ ಇಪ್ಪತ್ತನೆಯ ಶತಮಾನದಲ್ಲಿ ವೈದ್ಯಕ್ಷೇತ್ರದಲ್ಲಿ ಅನೂಹ್ಯವಾದ ಸಂಶೋಧನಗಳು ನಡೆದಿವೆ: ಇನ್ನೂ ನಡೆಯುತ್ತಿವೆ. ಪ್ರತಿಯೊಂದು ಸಂಶೋಧನವೂ ಮಾನವನಿಗೆ ಅಮರತ್ವವನ್ನೆ ತಂದು ಕೊಡುವುದೇನೋ ಎಂಬಷ್ಟು ಉತ್ಸಾಹದಿಂದ ಸ್ವಾಗತಿಸಲ್ಪಡುತ್ತಿದೆ. ಆ ಉತ್ಸಾಹಾತಿರೇಕದಲ್ಲಿ 'ಪೆನಿಸಿಲಿನ್' ಎಂಬ ನವೀನ ಔಷಧವನ್ನು 'ಸಂಜೀವಿನಿ' ಎಂದು ಕೂಡ ಕರೆದು ಬಿಟ್ಟರು. ಆ ಸಂಜೀವಿನಿಯು ಸಾಯುವಂತಹ ಎಷ್ಟರೋಗಿಗಳನ್ನು ಬದುಕಿಸುತ್ತಿದೆ—ಎಂಬುದು ಮುಂದೆ ಜಗತ್ತಿಗೆ ತಿಳಿಯಬೇಕು. ಅದರ ಗುಣಗಳನ್ನು ಎಷ್ಟೇ ವರ್ಣಿಸಿದರೂ ಮಹಾತ್ಮರು ಅದನ್ನು, ಸಾವನ್ನೆದುರಿಸುತ್ತಿರುವ ತಮ್ಮ ಪ್ರಿಯಪತ್ನಿ ಕಸ್ತೂರಿಬಾಯಿಯವರಿಗೆ ಪ್ರಯೋಗಿಸಲು ಒಪ್ಪಲಿಲ್ಲ. ಅದರ ಪ್ರಯೋಗದ ಬಗ್ಗೆ ಮಹಾತ್ಮರು ಎರಡು ಆಕ್ಷೇಪಗಳನ್ನು ಎತ್ತಿದರು: ಒಂದನೆಯದಾಗಿ ಸಂಜೀವಿನಿಯು ಕಸ್ತೂರಿಬಾಯಿಯವರ ಪ್ರಾಣ ಸಂಜೀವಿನಿಯು ಆಗುವುದೆಂದು ಯಾವ ವೈದ್ಯನೂ ಎದೆತಟ್ಟಿ ಹೇಳಲಾರ; ಎರಡನೆಯದಾಗಿ ಬೇನೆಯಿಂದ ಮತ್ತು ನಾಡಸೇನೆಯಿಂದ ಜರ್ಜರಿತವಾದ ದೇಹಕ್ಕೆ ಪ್ರತಿ ಮೂರು ಗಂಟೆಗೊಮ್ಮೆಯಂತೆ ಹತ್ತು ಹದಿನೆಂಟು ಸಲ ಸಂಜೀವಿನಿಯನ್ನು ಚುಚ್ಚಿ ಚುಚ್ಚಿ (ಇಂಜೆಕ್ಷನ್) ಹಾಕುವುದು ಎಂತಹ ಹಿಂಸಾತ್ಮಕ ಚಿಕಿತ್ಸೆ! ಅನಿಶ್ಚಿತವಾದ ಯಶಸ್ಸಿಗಾಗಿ ಅಸಹ್ಯವಾದ ವೇದನೆಯನ್ನು ಕೊಡುವುದೇ? 'ಅವಳು ಸಾಯುವುದಿದ್ದರೆ ಶಾಂತಳಾಗಿ ಸಾಯಲಿ' ಎಂದು ಅವರು ಉದ್ಗರಿಸಿದರು. ಮತ್ತೆ 'ಸಂಜೀವಿನಿ'ಯ ಬಗ್ಗೆ ಕೆಲವು ಸುಪ್ರಸಿದ್ಧ ಪಾಶ್ಚಾತ್ಯ ವೈದ್ಯರು ಕೂಡ ಇತ್ತೀಚೆಗೆ ನಿರಾಶೆಯ ಉಸಿರು ತೆಗೆಯುತ್ತಿದ್ದಾರೆ. 'ಮನೆ ಹೊಕ್ಕ ಕಳ್ಳನನ್ನು ಶಿಕ್ಷಿಸಲು ಗೋಡೆ-ಚಿಪ್ಪರಗಳನ್ನೆಲ್ಲ ಕೆಡಹುವ ಜಾಣೆ ಸಂಜೀವಿನೀ ಚಿಕಿತ್ಸೆಯಲ್ಲಿದೆ'ಎಂದು ಆ ತಜ್ಞರು ಅಭಿಪ್ರಾಯ ಪಡತ್ತಿದ್ದಾರೆ. ಪ್ರತಿ ಮೂರು ಗಂಟೆಗೊಂದರಂತೆ ಚುಚ್ಚುಕೊಡುವುದರಿಂದ ಮನಸ್ಸಿಗೆ ಆಘಾತವೆಂತಹುದು! ನರಮಂಡಲಕ್ಕಾಗುವ ವೇದನೆಯೆಷ್ಟು!! ಮತ್ತು ಇದ್ದ ಬೇನೆಯು ಈ ಅನಾಚಾರಕ್ಕಂಜಿ ಸರಿದರೂ ಆ ಆಘಾತ-ವೇದನೆಗಳ ಸಮುಚ್ಚಾಯಿಕ ಪರಿಣಾಮವು ಮುಂದೆ ಎಂತಹ ಬೇನೆಯನ್ನು ತರುವುದೋ! ಆದರೂ ವೈಜ್ಞಾನಿಕ ಸಂಶೋಧನ ರತ್ನವಲ್ಲವೆ? ನೆಗಡಿಯಾದರೂ ಪೆನಿಸಿಲಿನ್ ಬೇಡುವ ಬೇನಿಗರಿದ್ದಾರೆ; ಕೊಡುವ ವೈದ್ಯರಿದ್ದಾರೆ.

ವಿಜ್ಞಾನದ ಈ ಅಂಧಾನುಸರಣವು ಮಹಾತ್ಮರಿಗೆ ಬೇಸರವನ್ನುಂಟು ಮಾಡಿತ್ತು. 'ರೋಗಿಯನ್ನು ಚಿಕಿತ್ಸಿಸು; ಬರೋಗವನ್ನಲ್ಲ' ಎಂಬ ಪುರಾತನ ಆಯುರ್ವೇದ ತತ್ತ್ವವನ್ನು ಅವರು ತುಂಬಾ ಮೆಚ್ಚಿದ್ದರು. ಮತ್ತು 'ಹೆಗ್ಗಣವನ್ನು ಒಳಗೇ ಬಿಟ್ಟು ಹೋರು (ತೂತು) ಮುಚ್ಚುವ' ಆಧುನಿಕ ಚಿಕಿತ್ಸಾಕ್ರಮಕ್ಕೆ ಅವರು ಹೇಸಿಹೋಗಿದ್ದರು. ಆಹಾರ ವಿಹಾರಗಳ ನಿಸರ್ಗತತ್ತ್ವಗಳನ್ನು ಮೀರಿ ತನುಮನಗಳ ರಚನೆ-ಕ್ರಿಯೆಗಳನ್ನು ಹದಗೆಡಿಸಿಕೊಳ್ಳುವುದು; ತತ್ಪರಿಣಾಮವಾಗಿ ಹುಟ್ಟುವ ರೋಗಲಕ್ಷಣಗಳನ್ನು ಮತ್ತೆ ಅಡಗಿಸುವ ಮದ್ದುಗಳನ್ನು ನುಂಗುವುದು ಕಾಲಾಂತರದಲ್ಲಿ ಒಳಗಿನ ಹದಗೇಡು ಅಕಾಲದ ಮುಪ್ಪನ್ನು ತಂದು ಬಾಳನ್ನೆ ಹಿಂಡಿ ಒಗೆಯುವುದು: ಈ ದಿಕ್ಕೆಟ್ಟ ಚಿಕಿತ್ಸಾಕ್ರಮವನ್ನು ನಡೆಸುವವರಿಗೆ ವೈದ್ಯರೆಂದು ಕರೆಯುವುದು ಸರಿಯೇ' ಒಂದು ಯುನಾನಿ ತಿಬ್ಬಿ (ಆಯುರ್ವೇದ) ವಿದ್ಯಾಲಯದ ಪ್ರಾರಂಭೋತ್ಸವದ ಭಾಷಣದಲ್ಲಿ ಈ ವಿಚಾರವನ್ನು ಮಹಾತ್ಮರು ವಿಶೇಷವಾಗಿ ಒತ್ತಿ ಹೇಳಿದ್ದಾರೆ: "ಒಬ್ಬನು ಮಿತಿಮೀರಿ ತಿಂದ

ಅಜೀರ್ಣವನ್ನು ತಂದುಕೊಳ್ಳುತ್ತಾನೆ. ವೈದ್ಯನು ಅವನಿಗೆ ಮದ್ದು ಕೊಟ್ಟು ಅಜೀರ್ಣವನ್ನು ಕಳೆಯುತ್ತಾನೆ. ಅವನು ಪುನಃ ಅತ್ಯಾಹಾರಕ್ಕೆ ಬಲಿಬೀಳುತ್ತಾನ. ಪುನಃ ವೈದ್ಯನು ಔಷಧ ಕೊಡುತ್ತಾನೆ. ವೈದ್ಯನ ಈ ಕ್ರಮಕ್ಕೆ ಚಿಕಿತ್ಸೆಯೆನ್ನುವುದಕ್ಕಿಂತ ದುಡ್ಡಿನ ಸುಲಿಗೆಯೆನ್ನಕೂಡದೆ? ಅತ್ಯಾಹಾರದ ಚಟವನ್ನು ತಪ್ಪಿಸುವುದೇ ಸರಿಯಾದ ಚಿಕಿತ್ಸೆಯಲ್ಲವೇ? ಔಷಧ ಭಕ್ಷಣಕ್ಕಿಂತ ಆರೋಗ್ಯದ ಶಿಕ್ಷಣವನ್ನು ಕೊಡುವವರೇ ಅನ್ವರ್ಥಕರಾದ ವೈದ್ಯರಲ್ಲವೇ?" ಎಂದು ನಿರ್ದಾಕ್ಷಿಣ್ಯವಾಗಿ ನುಡಿದಿದ್ದಾರೆ.

ಕಲಕತ್ತೆಯ ಅಷ್ಟಾಂಗ ಆಯುರ್ವೇದ ವಿದ್ಯಾಲಯದ ಕೋನಶಿಲಾ ಸ್ಥಾಪನೆಯ ಕಾಲದ ಭಾಷಣದಲ್ಲಿಯೂ ಮಹಾತ್ಮರು ವೈದ್ಯರ ಆಲಸ್ಯ ಮತ್ತು ಸ್ವಾರ್ಥಗಳನ್ನು ಖಂಡಿಸಿದ್ದಾರೆ: "ನನಗೆ ಆಯುರ್ವೇದದ ತತ್ತ್ವಗಳ ಜ್ಞಾನವಿಲ್ಲ. ವೈದ್ಯರು ಅವನ್ನು ಸಾಮಾನ್ಯ ಮನುಷ್ಯನಿಗೂ ತಿಳಿಯುವಂತೆ ವಿವರಿಸುವುದಿಲ್ಲ. ಮಾನವರನ್ನು ರೋಗಮುಕ್ತರನ್ನಾಗಿ ಮಾಡುವ ಗುರಿಯನ್ನೆ ಇಟ್ಟುಕೊಂಡು ವೈದ್ಯವೃತ್ತಿಯನ್ನು ಕೈಕೊಳ್ಳುವವರು ಎಷ್ಟು ಮಂದಿ? ವೈದ್ಯವಿದ್ಯೆಯಲ್ಲಿ ಪಾಶ್ಚಾತ್ಯ ಪೌರಸ್ತ್ಯ ಎಂಬ ಭೇದವನ್ನು ಕಲ್ಪಿಸುವುದು ಸಮಂಜಸವಾಗಲಾರದು. ಸ್ಥಿರವಾದ ಆರೋಗ್ಯವನ್ನೇ ಧ್ಯೇಯವಾಗಿಟ್ಟುಕೊಂಡರೆ ಈ ಭೇದವು ಅಳಿಯುವುದು. ಆಗ ಜಗತ್ತಿನಿಂದ ರೋಗವನ್ನು ಓಡಿಸುವುದೇ ಎಲ್ಲರ ಕರ್ತವ್ಯವಾಗುವುದು. ವೈದ್ಯರು ಮೂಢನಂಬಿಕೆಗಳನ್ನು ಕಳೆದು ಆಯುರ್ವೇದವನ್ನು ವೈಜ್ಞಾನಿಕವಾಗಿ ಅಭ್ಯಾಸಮಾಡಬೇಕು. ಭಾರತದ ವಿಪುಲವಾದ ವನಸ್ಪತಿಗಳು ವೈದ್ಯರ ಸಂಶೋಧನೆಗೆ ಒಳಗೊಳ್ಳಬೇಕು" ಈ ಪ್ರಾಮಾಣಿಕವಾದ ಭಾಷಣದಿಂದ ಮಹಾತ್ಮರು ಆಯುರ್ವೇದದ ವೈರಿಗಳೆಂದು ವೈದ್ಯರು ತಪ್ಪು ತಿಳುವಳಿಕೆ ಮಾಡಿಕೊಂಡರು; 'ನೋಡಿದಿರಾ ಮಹಾತ್ಮರು ಕೂಡ ಆಯುರ್ವೇದವನ್ನು ಒಪ್ಪುವುದಿಲ್ಲ' ಎಂದು ಡಾಕ್ಟರರು ವೈದ್ಯರನ್ನು ಹಳಿಯಲು ಆ ಭಾಷಣವನ್ನು ಸಾಧನವಾಗಿ ಮಾಡಿಕೊಂಡುದೂ ಉಂಟು.

ನಲುವತ್ತು ಕೋಟಿ ಜನರುಳ್ಳ ದೇಶಕ್ಕೆ ಪಾಶ್ಚಾತ್ಯ ಆಡಂಬರದ ಔಷಧಶಾಸ್ತ್ರವು ನಿರುಪಯುಕ್ತವೆಂದು ಮಹಾತ್ಮರು ಸಂದರ್ಭ ಸಿಕ್ಕಾಗಲೆಲ್ಲ ಹೇಳುತ್ತಿದ್ದರು. ಸುಲಭತೆಯು ವೈದ್ಯವಿದ್ಯೆಯಲ್ಲಿ ಅತ್ಯವಶ್ಯವೆಂದು ಅವರ ಖಂಡಿತವಾದ ಅಭಿಪ್ರಾಯವಾಗಿತ್ತು. ಹುಸು ಶೀತವಾದೊಡನೆ ರೋಗಿಗೆ ಇಂಜೆಕ್ಷನ್, ಔಷಧಗಳ ಪ್ರಯೋಗ ಮಾಡುವುದೂ ಆ ಶೀತವು ಮುಂದೆ ಕ್ಷಯವಾಗಬಹುದೆಂದು 'ಕ್ಷ'ಕಿರಣಗಳ ಪರೀಕ್ಷೆ ನಡೆಯಿಸುವುದೂ ರಕ್ತ, ಮೂತ್ರಗಳನ್ನು ಪರೀಕ್ಷಿಸುವುದೂ---ದೇಶದ ಮತ್ತು ರೋಗಿಯ ಹಣದ ಅಪವ್ಯಯವೆಂದೂ ಬುದ್ಧಿಯ ನಿರುಪಯುಕ್ತವಾದ ದುಡಿತವೆಂದೂ ಅವರು ಹೇಳುತ್ತಿದ್ದರು. ಹಾಗೆ ಒಮ್ಮೆಲೆ ದುಡುಕುವುದು ಪ್ರಕೃತಿಯ ಅಪಮಾನವೆಂದೂ ಅವರೆನ್ನುತ್ತಿದ್ದರು. ನಮ್ಮ ತಪ್ಪುಗಳೆಂದಾದ ಅಕ್ರಮಗಳನ್ನು ಪ್ರಕೃತಿಯು ಸರಿಪಡಿಸುವಳು. ಅವಳ ಕಾರ್ಯಕ್ಕೆ ತಡೆಯಾಗದಂತೆ ಚಿಕಿತ್ಸಕರು ಎಚ್ಚರಪಡಬೇಕು. ನಾಗರಿಕತೆಯ ಹೆಸರಿನಿಂದ ಮೆರೆಯುತ್ತಿರುವ ಚಹಾ, ಕಾಫಿ, ಬೀಡಿ, ಸಿಗರೇಟು, ಮದ್ಯ, ಪಕ್ವಾನ್ನಗಳ ದಾಳಿಯನ್ನು ತಡೆಗಟ್ಟದೆ ವೈದ್ಯವಿಜ್ಞಾನವು ಹೊಸ ಹೊಸ ಔಷಧಗಳನ್ನು ಸಂಶೋಧಿಸುವುದು, ಮಹಾಪೂರದಲ್ಲಿ ಒಡ್ಡು ಕಟ್ಟಲು ಯತ್ನಿಸುವಷ್ಟೆ ಮೂರ್ಖತನವಲ್ಲವೇ? ಪರಿಣಾಮಕ್ಕೆ ಚಿಕಿತ್ಸೆ ನಡೆಸಿದರೆ ಕಾರಣದ ಪರಿಹಾರವಾಗುವುದು ಶಕ್ಯವೇ ಇಲ್ಲ. ದುರ್ಗುಣ, ದುಶ್ಚಟಗಳು ದುರಾಹಾರ ದುರ್ವಿಹಾರಗಳಿಗೆ ಕಾರಣಗಳಾಗಿವೆ. ಅವುಗಳ ಪರಿಣಾಮವೇ ದಿನದಿನವೂ ಬೇನೆಗಳ ಸಂಖ್ಯೆ ಹೆಚ್ಚಲು ಕಾರಣವಾಗುವುದು. ಆದ್ದರಿಂದ ಆಧುನಿಕ ವೈದ್ಯವಿಜ್ಞಾನವು ದೇಹದ ಕಡೆಗೆ ಕೊಡುತ್ತಿರುವ ಗಮನದ ನೂರುಪಾಲು ಹೆಚ್ಚು ಲಕ್ಷ್ಯವನ್ನು ಮನಸ್ಸಿನ ಕಡೆಗೆ ಪೂರಯಿಸಬೇಕೆಂದು, ತಿಬ್ಬಿ ಕಾಲೇಜಿನ ಪ್ರಾರಂಭ ಭಾಷಣದಲ್ಲಿ ಮಹಾತ್ಮರು ಸಾರಿದರು.

ಹಳ್ಳಿಗರಿಗೆ ವೈದ್ಯಕೀಯ ಸಹಾಯವನ್ನು ಸಲ್ಲಿಸುವ ವಿಷಯದಲ್ಲಿ ಸುಲಭತೆಯು ಅವಶ್ಯವಾಗಿರಬೇಕೆಂದು ಅವರು ಹಟದಿಂದ ಹೇಳುತ್ತಿದ್ದರು. ಔಡಲ ಎಣ್ಣೆ (ಹರಳೆಣ್ಣೆ), ಕ್ವಿನೀನು ಇವೆರಡೇ ಔಷಧಗಳು ಸಾಕೆಂದು ಅವರು ಭಾವಿಸಿದ್ದರು. ಚಳಿಜ್ವರವು ಕ್ವಿನೀನಿಲ್ಲದೆ ಮಣಿಯದೆಂದು ಮನವರಿಕೆಯಾಗಿದ್ದುದರಿಂದ, ಹಳ್ಳಿಯಲ್ಲಿ ಅದು ಅನಿವಾರ್ಯವೆಂದು ಮಹಾತ್ಮರು ತಿಳಿದಿದ್ದರು. ಮಲಬದ್ಧತೆಯಿಂದಲೆ ಮುಕ್ಕಾಲು ರೋಗಗಳು ಬರುವುವಾದುದರಿಂದ, ಔಡಲೆಣ್ಣೆಯನ್ನು ಒಂದು ಅಗತ್ಯದ ಔಷಧವೆನ್ನುತ್ತಿದ್ದರು. ಆದರೆ ಹಳ್ಳಿಗರು ಅವರೆಡಕ್ಕೆ ಆಳಾಗದಂತೆ ಸದಾಹಾರ-ಸದಾಚಾರಗಳಿಂದ ರೋಗನಿರೋಧಕ ಶಕ್ತಿಯನ್ನು ಬೆಳೆಸಿ, ಆ ಔಷಧಗಳ ಅಗತ್ಯವನ್ನು ಕಡಮೆಮಾಡಬೇಕೆಂಬ ಎಚ್ಚರಿಕೆಯನ್ನು ಕೊಡುತ್ತಿದ್ದರು. ರೋಗಗಳಿಗಾಗಿ ಔಷಧಗಳು ಹುಟ್ಟಿದ್ದರೂ, ಈಗಿನ ಅನೇಕ ರೋಗಗಳು ಔಷಧಗಳಿಂದಲೆ ಹುಟ್ಟಿವೆಯೆಂಬ ಸತ್ಯವನ್ನು ಅವರು ಮನಗಂಡಿದ್ದರು.

ಪ್ರಾಯಶಃ ಮಹಾತ್ಮರಷ್ಟು ಉಪವಾಸಗಳನ್ನು ಮಾಡಿದ ಮಹಾಪುರುಷರು ಇತಿಹಾಸದಲ್ಲಿ ಕ್ವಚಿತ್ತಾಗಿಯೆ ಒಬ್ಬಿಬ್ಬರಿರಬಹುದು. ಆದರೆ ಉಪವಾಸಗಳಿಂದ ಮಹಾತ್ಮರು ಸಾಧಿಸಿದಷ್ಟು ಧ್ಯೇಯಗಳನ್ನು ಬೇರೆ ಯಾರೂ ಸಾಧಿಸಿಲ್ಲವೆಂದು ಧೈರ್ಯವಾಗಿ ಹೇಳಬಹುದು. ತನು-ಮನಗಳ ಶುದ್ಧಿಗೆ ಉಪವಾಸದಂತಹ ಉತ್ತಮವಾದ ಔಷಧ ಬೇರೊಂದು ಇಲ್ಲವೆಂದು ಅವರು ಅನುಭವದಿಂದ ಹೇಳುತ್ತಿದ್ದರು. ತಮ್ಮ ಜೀವಮಾನದಲ್ಲಿ ಹದಿನೈದು ಮಹತ್ತ್ವದ ಉಪವಾಸಗಳನ್ನು ಮಾಡಿದ ಮಹಾತ್ಮರು, ಉಪವಾಸದ ತಂತ್ರದಲ್ಲಿ ಅತೀವ ತಜ್ಞರಾಗಿದ್ದರು. ನೂರಾರು ರೋಗಿಗಳಿಗೆ ಉಪವಾಸವನ್ನು ಕ್ರಮಬದ್ಧವಾದ ರೀತಿಯಲ್ಲಿ ಆಚರಿಸಲು ಹೇಳಿ ಗುಣಪಡಿಸಿದ್ದರು. ದುರಾಹಾರ, ಅತ್ಯಾಹಾರ, ದುರ್ಮನಗಳಿಂದ ಹುಟ್ಟಿಕೊಂಡ ವಿಷವನ್ನು ಸುಟ್ಟುಹಾಕುವುದರಲ್ಲಿ ಉಪವಾಸವು ಒಳ್ಳೆಯಶಸ್ವಿಯಾದ ಉಪಾಯವೆಂದುದರಲ್ಲಿ ಸಂದೇಹವಿಲ್ಲ.

ಜೀವಮಾನದ ಕೊನೆಯ ಭಾಗದಲ್ಲಿ ಮಹಾತ್ಮರು ನಿಸರ್ಗ-ಚಿಕಿತ್ಸೆಯ ಕಡೆಗೆ ಹೆಚ್ಚು ಗಮನವನ್ನು ಕೊಟ್ಟಿದ್ದರು. ಸುಮಾರು ಮೂವತ್ತು ವರ್ಷಗಳ ಹಿಂದಿನಿಂದಲೂ ನೀರು, ಉಪವಾಸ, ಮಣ್ಣುಗಳನ್ನು ತಮ್ಮ ಸ್ವಂತದ ಬೇನೆ-ಬೇಸರಿಕೆಗಳಿಗೂ ತಮ್ಮ

ಬಳಗದವರ ಉಪಚಾರಕ್ಕಾಗಿಯೂ ಉಪಯೋಗಿಸುತ್ತಲೇ ಬರುತ್ತಿದ್ದರು. ಆದರೆ ಕೊನೆಯ ಆರೇಳು ವರ್ಷಗಳಲ್ಲಿ ನಿಸರ್ಗ ಚಿಕಿತ್ಸೆಗೂ ಅವರ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರವು ಸಿಕ್ಕಿತು. ಪುಣೆಯ ಮೆಹತಾ ಅವರ ನಿಸರ್ಗಚಿಕಿತ್ಸಾಲಯದಲ್ಲಿ ಅದೇ ಉದ್ದೇಶದಿಂದಲೆ ಅವರು ಧರ್ಮದರ್ಶಿಗಳಾಗಿ ಸೇರಿದರು. ಆದರೆ ಅಲ್ಲಿಯ–ರಾಜರು ಮಹಾರಾಜರುಗಳಿಗೆ ಮಾತ್ರ ಸಾಧ್ಯವೆನಿಸುವ–ಸಾಧನ ಸಲಕರಣೆ ಚಿಕಿತ್ಸಾಕ್ರಮಗಳನ್ನು ನೋಡಿ, ಭಾರತದ ಬಡವರಿಗೆ ಅವು ನಿಷ್ಪ್ರಯೋಜಕವೆಂದು ಆ ಸಂಸ್ಥೆಯ ಸಂಬಂಧವನ್ನು ಕಡಿದುಕೊಂಡರು. ಅನಂತರ ಉರುಳಿ ಕಾಂಚನವೆಂಬ ಹಳ್ಳಿಯಲ್ಲಿ ನಿಸರ್ಗಚಿಕಿತ್ಸಾಲಯವನ್ನು ತೆರೆದು ಸಾವಿರಾರು ಬಡರೋಗಿಗಳಿಗೆ ಸುಲಭೋಪಚಾರದಿಂದ ಗುಣಪಡಿಸಲಾರಂಭಿಸಿದರು. 'ಪೃಥ್ವಿ, ಆಪ್, ತೇಜ, ವಾಯು, ಆಕಾಶಗಳು ಪಿಂಡಾಂಡ ಮತ್ತು ಬ್ರಹ್ಮಾಂಡವ ಘಟಕಗಳಾಗಿವೆ. ಅವುಗಳ ಸಯುಕ್ತಿಕವಾದ ಉಪಯೋಗದಿಂದ ಸಕಲ ರೋಗಗಳೂ ನಾಶವಾಗುವುವು' ಎಂದು ಮೂರು ಸಾವಿರ ವರ್ಷಗಳ ಹಿಂದೆಯೇ ಆಯುರ್ವೇದವು ಸಾರಿದೆ; ಅದನ್ನೇ ಮಹಾತ್ಮರು ತಮ್ಮ ಪ್ರಯೋಗಗಳಿಂದ ಜಗತ್ತಿಗೆ ಸತ್ಯವೆಂದು ಸಿದ್ಧಮಾಡಿ ತೋರಿಸಿದರು. ಆ ಪಂಚಭೂತಗಳು ಬಡವರಿಗೂ ನಿರ್ಗತಿಕರಿಗೂ ಕೂಡ–ಒಂದು ಕಾಸು ಕೂಡ ವೆಚ್ಚಿಸದೆ–ಸಿಗುವಂತಹ ಅಮೌಲ್ಯವಾದ ಔಷಧಗಳಾದುದರಿಂದ, ಮಹಾತ್ಮರು ಆಯುರ್ವೇದ ತತ್ತ್ವವನ್ನು ಮೆಚ್ಚಿದರು.

ಆರೋಗ್ಯವನ್ನು ಬೆಳಸಿಕೊಳ್ಳಲೂ, ಕಳೆದುಕೊಂಡುದನ್ನು ಗಳಿಸಿಕೊಳ್ಳಲೂ ಉಪವಾಸ, ಪಥ್ಯಗಳಂತೆಯೆ ಯೋಗಾಸನಗಳೂ ತುಂಬಾ ಪ್ರಭಾವಿಯಾಗಿವೆಯೆಂಬುದನ್ನು ಮಹಾತ್ಮರು ಅನುಭವದಿಂದ ನಿರ್ಧರಿಸಿದ್ದರು. ಒಮ್ಮೆ ಅವರಿಗೆ ವಿಶೇಷವಾದ ದೌರ್ಬಲ್ಯವುಂಟಾದಾಗ, ಪ್ರಕೃತಿಯನ್ನು ಸುಧಾರಿಸಲೆಂದು ಪೈಸೂರಿನ ನಂದೀ ಬೆಟ್ಟದಲ್ಲಿ ಬಂದು ಕೆಲವು ತಿಂಗಳುಗಳವರೆಗೆ ತಂಗಿದುದು ವಾಚಕರಿಗೆ ನೆನಪಿರಲು ಸಾಕು. ಆಗ ಅವರು ಒಬ್ಬ ಯೋಗಿಗಳಿಂದ ಆಯುರ್ವೇದೀಯ ಆಸನಗಳನ್ನು ಕಲಿತು ಅಭ್ಯಾಸಮಾಡಿ, ಆರೋಗ್ಯವನ್ನು ಬಲಪಡಿಸಿಕೊಂಡರು. ಆ ಯೋಗಿಗಳು ಯಾರು ಬಲ್ಲಿರಾ? ಕಣ್ಮರೆಯಾದ ಕನ್ನಡವಿಭೂತಿಗಳೂ ಆಯುರ್ವೇದಾಕಾಶದ ಉಜ್ವಲ ಸೂರ್ಯರೂ ಆಗಿದ್ದ ದಿವಂಗತ ಗುರುವರ್ಯ ಪಂಡಿತ ತಾರಾನಾಥರಾಯರೇ ಆ ಯೋಗಿಗಳೆಂದರೆ, ಕನ್ನಡಿಗರಿಗೆ ಹೆಮ್ಮೆಯ ಸಂಗತಿಯಲ್ಲವೇ! ಆಸನಗಳಿಂದ ದೇಹದ ವಿವಿಧ ನರಚಕ್ರಗಳಲ್ಲಿ ಒತ್ತಡವನ್ನು ತಂದು, ತನ್ಮೂಲಕ ರಕ್ತಪರಿಚಲನದಲ್ಲಿ ವಿಶಿಷ್ಟವಾದ ಮಾರ್ಪಾಡನ್ನುಂಟು ಮಾಡುವುದರಿಂದ, ಓಜೋಗ್ರಂಥಿಗಳ ಮೇಲೆ ಪರಿಣಾಮವಾಗಿ, ಕೆಲವು ಘೋರ ವ್ಯಾಧಿಗಳು ಕೂಡ ಗುಣಪಡುವುವೆಂದು ಪಂಡಿತಜಿಯವರು ತಮ್ಮ ಅನುಭವ ಸಾಗರದ ಬಲವಿಂದ ಮಹಾತ್ಮರಿಗೆ ಮನವರಿಕೆ ಮಾಡಿಕೊಟ್ಟರು. ಮಹಾತ್ಮರು ಪಂಡಿತಜಿಯವರ ದೇಹಾಂತವಾಗುವವರೆಗೆ, ಕಾಲಕಾಲಕ್ಕೆ ಕೆಲವು ಅಸಾಧ್ಯ ರೋಗಿಗಳನ್ನು ತುಂಗಭದ್ರಾ ಪ್ರೇಮಾಯತನಾಶ್ರಮಕ್ಕೆ ಕಳಿಸುತ್ತಿದ್ದರು.

ಆಡಂಬರವು ಆಧುನಿಕ ವೈದ್ಯವಿಜ್ಞಾನದ ಒಂದು ಘನಶಾಪವಾಗಿದೆ. 'ಕ್ಷ'ಕಿರಣ, ವಿದ್ಯುತ್ತರಂಗ, ರಕ್ತಪರೀಕ್ಷೆ, ಮೂತ್ರಪರೀಕ್ಷೆ, ರಕ್ತದ ಒತ್ತಡ (ಬ್ಲಡ್‌ಪ್ರೆಶರ್) ಪರೀಕ್ಷೆ, ಇಂಜೆಕ್ಶನ್, ಶಸ್ತ್ರಚಿಕಿತ್ಸೆ ಮುಂತಾದ ನೂರಾರು ವಿಧಾನಗಳಿಂದ ವೈದ್ಯವಿದ್ಯೆಯೊಂದು ವಿಪರೀತ ತೊಡಕಿನ ಸಾಹಸವಾಗುತ್ತಿದೆ. ಮತ್ತೆ ವೈದ್ಯಕೀಯ ಸಂಶೋಧನಗಳಲ್ಲಿ ಮನುಷ್ಯನ ಒಂದು ಕ್ಷುಲ್ಲಕ ರೋಗದ ಮದ್ದನ್ನು ಸಿದ್ಧಗೊಳಿಸುವಾಗ ಕುದುರೆ, ಹಂದಿ, ಮಂಗ, ಮೊಲ, ಇಲಿ ಮುಂತಾದ ಮೂಕಪ್ರಾಣಿಗಳನ್ನು ವಿವಿಧವಾಗಿ ಹಿಂಸಿಸುವುದೂ ಕೊಲ್ಲುವುದೂ ಅಡೆತಡೆಯಿಲ್ಲದೆ ನಡೆದೇ ಬಿಟ್ಟಿದೆ. ಮನುಷ್ಯನು ತನ್ನ ಸುಖಕ್ಕಾಗಿ ಪರಪ್ರಾಣಿಗಳನ್ನು ಹಿಂಸಿಸುವುದು ತೀರ ಕಾಡುತನವೆಂದು ಮಹಾತ್ಮರು ನಿರೋಧಿಸುತ್ತಿದ್ದರು. "ವೈದ್ಯಕೀಯ ಸಂಶೋಧನವು ಪ್ರಾಣಿಹಿಂಸೆ ಮತ್ತು ಶಸ್ತ್ರಚಿಕಿತ್ಸೆಯಿಲ್ಲದೆ ಸಕಲ ರೋಗಗಳನ್ನು ಪರಿಹರಿಸುವ ಗುರಿಯಿಟ್ಟು ಹೊರಡಲಿ. ವಿಮಾನ, ನಿಷವಾಯು, ಅಣುಸ್ಫೋಟಕಗಳನ್ನು ಹುಡುಕಿದ ಮಿದುಳಿಗೆ ಇದು ಕಠಿನವೆನಿಸಬಾರದು." ಎಂದು ಅವರು ತುಂಬಾ ಸಂಕಟದಿಂದ ನುಡಿಯುತ್ತಿದ್ದರು.

ಮಹಾತ್ಮರು 'ಆರೋಗ್ಯ ನಿರ್ದರ್ಶನ' (ಗೈಡ್ ಟು ಹೆಲ್ತ್) ಮತ್ತು 'ಬ್ರಹ್ಮಚರ್ಯೆ ಮತ್ತು ವಿಷಯಲಾಂಪಟ್ಯ' (ಕೊಂಟನೆನ್ಸ್ ವೆರ್ಸಸ್ ಇಂಡಲ್ಜನ್ಸ್) ಎಂಬ ವೈದ್ಯಕೀಯ ಪುಸ್ತಕಗಳನ್ನು ಕಾಲು ಶತಮಾನದ ಹಿಂದೆಯೆ ಬರೆದುದಲ್ಲದೆ ಹರಿಜನ, ನವಜೀವನ ಮತ್ತು ಯಂಗ್ ಇಂಡಿಯಾ ಪತ್ರಿಕೆಗಳಲ್ಲಿ ಕಾಲಕಾಲಕ್ಕೆ ವೈದ್ಯಕ ಮತ್ತು ಸ್ವಾಸ್ಥ್ಯವಿಷಯಕ ನವೋನವೀನ ಪ್ರಚೋದಕ ಬರೆಹಗಳನ್ನು ಪ್ರಸಿದ್ಧಿಸಿದ್ದರು. "ತೀರ ಅಗ್ಗವಾಗಿರಬೇಕು; ಆದರೆ ದುಷ್ಪರಿಣಾಮವಾಗಿರಬಾರದು; ಹಳ್ಳಿಗರಿಗೂ ಸಾಧ್ಯವೆನಿಸಬೇಕು; ನಿಸರ್ಗತತ್ತ್ವಗಳನ್ನು ಮೀರಬಾರದು; ಸಕಲರೋಗಗಳಿಗೂ ಗುಣಕಾರಿಯಾಗಬೇಕು" ಅಂತಹ ಸುಲಭಚಿಕಿತ್ಸೆಯನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೆಂದು ಅವರು ಹಂಬಲಿಸುತ್ತಿದ್ದರು. ಅವರ ಹಂಬಲವನ್ನು ಖಾದೀ ಪ್ರತಿಷ್ಠಾನದ ಶ್ರೀ. ಸತೀಶಚಂದ್ರದಾಸ ಅವರು 'ವಿಲೇಜ್ ಆ್ಯಂಡ್ ಹೋಮ್ ಡಾಕ್ಟರ್' ಎಂಬ ಪುಸ್ತಕವನ್ನು ಬರೆದು ಕೊಂಚ ತಣಿಸಿದರು. ಅದಕ್ಕೆ ಮಹಾತ್ಮರೇ ಮುನ್ನುಡಿ ಬರೆದಿದ್ದಾರೆ. ಆದರೂ ಬಡಭಾರತೀಯ ಹಳ್ಳಿಗನಿಗೆ ಆ ಪುಸ್ತಕದಿಂದ ವಿಶೇಷ ಪ್ರಯೋಜನವಾದೀತೆಂಬ ತೃಪ್ತಿ ಮಹಾತ್ಮರಿಗಾಗಲಿಲ್ಲ.

ಸಾದಾತನವೇ ವೈದ್ಯಾನ್ವೇಷಣದ ಸೂತ್ರವಾಗಲಿ; ಉಪಜೀವಿಕೆಗಿಂತ ಲೋಕಸೇವೆಯೇ ಪ್ರಚೋದಕವಾಗಲಿ; ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರದಂತಹ ತೊಡಕಿನ ಚಿಕಿತ್ಸೆಯು ತೊಲಗಲಿ; ರೋಗ ನಿವಾರಣೆಗಿಂತ ರೋಗ ನಿರೋಧವೇ ವೈದ್ಯರ ಗುರಿಯಾಗಲಿ 'ನಾತ್ಮಾರ್ಥಂ ನಾಪಿ ಕಾಮಾರ್ಥಂ ಅಥ ಭೂತದಯಾಪ್ರತಿ' ಎಂಬ ಆಯುರ್ವೇದ ತತ್ತ್ವಗಳೇ ಮಹಾತ್ಮರ ಉಸಿರಾಗಿತ್ತು. ವೈದ್ಯರು ಅವರ ಹಂಬಲಕ್ಕೆ ತಕ್ಕಂತೆ ವರ್ತಿಸಿ ಅವರ ಆತ್ಮಕ್ಕೆ ಶಾಂತಿಸಿಕ್ಕುವಂತೆ ಯತ್ನಿಸುವರೇ?

ಮಹಾತ್ಮಾಜಿಯವರ ಜೀವನದ ಮಹತ್ತ್ವದ ಘಟನೆಗಳು

ಪ್ರಿನ್ಸಿಪಾಲ್ ವಿ. ಕೃ. ಗೋಕಾಕ, ಎಂ. ಎ. (ಬಾಂಬೆ) ಬಿ.ಎ (ಆಕ್ಸ್‌ಫರ್ಡ್) ವಿಜಯನಗರ

(ಆಲ್ ಇಂಡಿಯಾ ರೇಡಿಯೊ ಮುಂಬಯಿ ಕೇಂದ್ರದಿಂದ ೧-೨-೪೮ ಕ್ಕೆ ಮಾಡಿದ ಭಾಷಣ.)

★

ಗಾಂಧಿಯವರೆಂದರೆ ಭಾರತದ ಜೀವನಕ್ಕೆ ಬಂದ ಮಹಾಪೂರ. ಜಗತ್ತಿಗೆ ಚಿರಂತನವಾಗಿ ಬೆಳಕುಗರೆವ ಸತ್ಯದ ಧ್ರುವತಾರೆ !

★

ಮಹಾತ್ಮಾಜಿಯವರ ಅಗಲಿಕೆಯಿಂದ ದೇಶವೇ ದಿಗಿಲುಗೊಂಡಿದೆ. ಜಗತ್ತೇ ಚಿಂತೆಯಲ್ಲಿ ಮುಳುಗಿದೆ. ದಿವ್ಯ ಭವ್ಯ ಪ್ರಕಾಶವೊಂದು ನಮ್ಮ ನಡುವೆ ಇದ್ದು ಕಾಯುತ್ತಿತ್ತು. ಈಗ ಥಟ್ಟನೆ ಅದು ಇಲ್ಲವಂತಾಗಿ ಕತ್ತಲೆಯಲ್ಲಿ ನಾವು ತಿರುಗುತ್ತಿದ್ದೇವೆ.

ಮಹಾತ್ಮಾಜಿಯವರ ಅವತಾರಕಾರ್ಯವೇನು ? ಯಾವ ಸಂದೇಶ ಅವರಲ್ಲಿ ಮೂರ್ತಿಮಂತವಾಗಿ ನಿಂತಿತ್ತು ? ಅಹಿಂಸೆ ಅವರ ತತ್ತ್ವಗಳಲ್ಲಿ ಒಂದು. ಜಾತಿ-ಮತ-ವರ್ಣಾಂಗಗಳನ್ನು ಮೀರಿ ಇಡೀ ಜಗತ್ತೇ ಒಂದು ಕುಟುಂಬ; ಜಾಗತಿಕ ವ್ಯಾಪಾರ-ವ್ಯವಹಾರಗಳೆಲ್ಲ ಒಂದೇ ಒಂದು ಅಂತಃಕರಣ ಸಾಮೃತವಾಗಿರಬೇಕು. ದೇಶಗಳೂ ವ್ಯಕ್ತಿ-ವ್ಯಕ್ತಿಗಳೂ ಸೌಹಾರ್ದದಿಂದ—ಪ್ರೀತಿಯಿಂದ—ಒಡೆದುಕೊಳ್ಳುತ್ತಿರಬೇಕು. ಇನ್ನೊಬ್ಬರ ಮೋಹವನ್ನು ನೋಯಿಸಬಾರದು; ಅಂತಃಕರಣವನ್ನು ನೋಯಿಸಬಾರದು. ಪ್ರೀತಿ ಭೌತಿಕ ವಸ್ತು. ಅದನ್ನು ನಾವು ಕಾಯ್ದುಕೊಂಡು ಬರಬೇಕೆಂಬುದೇ ಅವರ ಧ್ಯೇಯವಾಗಿತ್ತು. ಆ ಧ್ಯೇಯವು ಅವರ ನಾಳೆ-ನಾಳೆಗಳಲ್ಲಿಯೂ ರಕ್ತವಾಗಿ ಹರಿಯುತ್ತಿತ್ತು.

ಸತ್ಯ ಅವರ ಇನ್ನೊಂದು ಆದರ್ಶ. ಆಡುವುದರಲ್ಲಿ—ಮಾಡುವುದರಲ್ಲಿ—ಸತ್ಯವು ತುಂಬಿರಬೇಕು. ಬರಿ ಸುಳ್ಳು ಹೇಳಬಾರದೆಂದಿಷ್ಟೇ ಅಲ್ಲ; ಸುಳ್ಳನಡೆಯಬಾರದು, ಸುಳ್ಳುಗೆಯ್ಯಬಾರದು. ಸ್ವಾತಂತ್ರ್ಯ, ಪ್ರೀತಿ, ಅಹಿಂಸೆ,—ಇವೆಲ್ಲ ಆದರ್ಶಗಳು ದಿವ್ಯಸತ್ಯದ ಬೇರೆ ಬೇರೆ ಪೈಲುಗಳು. ಸತ್ಯವು ಅನೇಕ ಮುಖವಾದದ್ದು. ನಿಶ್ಚಯವನ್ನೇ ಸತ್ಯವು ತುಂಬಿ ನಿಂತಿದೆ. ವ್ಯಕ್ತಿಯ ಜೀವನ, ದೇಶಗಳ ರಾಜಕಾರಣ, ಆಂತರರಾಷ್ಟ್ರೀಯ ಜೀವನ,—ಎಲ್ಲೆಡೆಗೂ ಸತ್ಯವು ತುಂಬಿರಬೇಕು. ಹೀಗಿದ್ದರೆ ಜಗತ್ತು ಪುಣ್ಯಭೂಮಿಯಾದೀತು. ರಾಜ್ಯವು ರಾಮರಾಜ್ಯವಾದೀತು.

ಮಹಾತ್ಮರ ಅಂತ್ಯಯಾತ್ರೆ

ಬಿರ್ಲಾ ಭವನದಲ್ಲಿ ಗವರ್ನರ್ ಜನರಲ್ ಮೌಂಟ್‌ಬ್ಯಾಟನ್ ಅವರು ಕೊನೆಯ ಮುನ್ನಡೆ ಸಲ್ಲಿಸಿದ ತರುವಾಯ, ಮಹಾತ್ಮರ ಕಳೇಬರವನ್ನು ಭವನದ ಹೊರಗೆ ವಾಹನದ ಮೇಲೆ ಇರಿಸಿದಾಗಿನ ಕರುಣಾಜನಕ ದೃಶ್ಯ.

ಇಂಥ ದಿವ್ಯ ಸತ್ಯಕ್ಕಾಗಿ ಮಹಾತ್ಮರು ತಮ್ಮ ಜೀವನವನ್ನೇ ಸವೆಯಿಸಿದರು, ಅದರ ಸೂಕ್ಷ್ಮರೂಪವನ್ನೂ ವಿರಾಟರೂಪವನ್ನೂ ಕಂಡುಕೊಂಡು ಸತ್ಯದ ದಿವ್ಯ ಉಪಾಸಕರಾದರು. ಸತ್ಯದ ಜೀವಂತ ಮೂರ್ತಿಯಾದರು. ಇಂದಿನ ಸುಳ್ಳುಗಾರಿಕೆಯ ಜಗತ್ತಿನಲ್ಲಿ ನಿಸ್ಸೀಮಸತ್ಯದ ದಿವ್ಯಪ್ರಕಾಶವಾದರು ಮಹಾತ್ಮಾಜಿ.

ಅಹಿಂಸೆಯನ್ನೂ ಸತ್ಯವನ್ನೂ ರಾಜಕಾರಣದ ರಂಗಭೂಮಿಯ ಮೇಲೆ---ಮುಖ್ಯತಃ ಭಾರತದ ರಾಜಕಾರಣದಲ್ಲಿ---ಪ್ರಯೋಗಿಸಿ ತೋರಿಸುವುದು ಮಹಾತ್ಮರ ಮುಖ್ಯ ಕಾರ್ಯವಾಯಿತು. ದಕ್ಷಿಣ ಆಫ್ರಿಕೆಯ ಸತ್ಯಾಗ್ರಹದ ಪ್ರಾರಂಭದಿಂದ ದಿಲ್ಲಿಯಲ್ಲಿಯ ಅವರ ಕೊನೆಯ ಉಪವಾಸದ ವರೆಗೆ, ಸತ್ಯದೆದುರು ಆಯುಷ್ಯವು ತೃಣಸಮಾನವೆಂಬ ಅವರ ಭಾವನೆಯು ಅಚ್ಚಳಿಯದೆ ಅವರ ಜೀವನದಲ್ಲಿ ಮೂಡಿತು. ಈ ರಂಗದಲ್ಲಿ ಶತ್ರುಗಳನ್ನೂ ಅವರು ಮಿತ್ರರಂತೆ ಕಂಡರು. ಸತ್ಯದೆದುರು ಆತಂಕವಾಗಿ ಬಂದ ಎಲ್ಲ ಆಸಕ್ತಿಗಳನ್ನೂ ಬದಿಗೆ ಸರಿಸಿ ಅನಾಸಕ್ತಿಯೋಗದ ಯೋಗಪುರುಷರಾದರು. ಭಾರತಕ್ಕೆ ದೊರೆತ ಸ್ವಾತಂತ್ರ್ಯ ಅವರ ಈ ದಿವ್ಯ ತಪಸ್ಸಿನ ಫಲವಾಗಿದೆ.

ಇನ್ನೊಂದು ಮಾತೆಂದರೆ ಪ್ರಯೋಗಕ್ಕೆ ಅವರ ಜೀವನದಲ್ಲಿದ್ದ ಸ್ಥಾನ. ಶ್ರದ್ಧೆಯ ಬೆಳಕಿನಂದು ಅವರ ದಾರಿಯ ಮೇಲೆ ದೈವಿಕವಾಗಿ ಅಡುತ್ತಿತ್ತು. ಆ ಬೆಳಕು ಕರೆದತ್ತ ನಿರ್ಭೀತರಾಗಿ ಅವರು ನಡೆದರು. ಊಟ, ಉಡಿಗೆ, ನಿಸರ್ಗಚಿಕಿತ್ಸೆ, ಆರ್ಥಿಕ ಜೀವನ, ಸಮಾಜ ಸುಧಾರಣೆ, ರಾಜಕಾರಣ, ಆಶ್ರಮ ಜೀವನ, ಸತ್ಯಾಗ್ರಹ,---ಒಂದಲ್ಲ ಎರಡಲ್ಲ, ಜೀವನದ ವಿವಿಧ ರಂಗಗಳಲ್ಲಿ ಅವರ ಪ್ರಯೋಗಗಳು ನಡೆದುವು. ಸಾಹಿತ್ಯ, ಸಾಹಿತ್ಯದ ಶೈಲಿ, ರಾಷ್ಟ್ರಭಾಷೆ---ಇವೂ ಅವರ ಪ್ರಭಾವಳಿಯಿಂದ ಹೊರಗಾಗಿರಲಿಲ್ಲ. ಅವರ ಒಂದೊಂದು ಪ್ರಯೋಗದ ಫಲವಾಗಿ ದೇಶದಲ್ಲಿ ಒಂದೊಂದು ಹಿರಿಯ ಸಂಸ್ಥೆಯು ತಲೆದೋರಿತು. ರಾಷ್ಟ್ರದ ಜೀವನವು ಪಾವನವಾಯಿತು.

ಹೀಗೆ ಗಾಂಧೀಜಿಯವರು ಭಾರತದ ಜೀವನಕ್ಕೆ ಬಂದಿದ್ದ ಮಹಾಪೂರವಾಗಿದ್ದರು. ಗಾಂಧಿಬೊಪ್ಪಿಗೆಯನ್ನು ರಾಷ್ಟ್ರದ ತಲೆದುಡಿಗೆಯನ್ನೇ ನೂಡಿದ ಸತ್ಯಾಗ್ರಹ, ದಾಂಡಿಯ ಉಪ್ಪಿನ ಸತ್ಯಾಗ್ರಹದಿಂದ ಒಂದು ಹಿರಿಯ ಸಾಮ್ರಾಜ್ಯವನ್ನೇ ಬೇರುಹಿಡಿದು ಅಲ್ಲಾಡಿಸಿದ ಮಹಾಪುರುಷ, ಒಂದೊಂದು ಉಪವಾಸದಿಂದ ದೇಶದಲ್ಲಿಯೇ ಒಂದೊಂದು ಹೃದಯಕ್ರಾಂತಿಯನ್ನು ತಂದ ಯೋಗಿ, ತನ್ನ ಭಕ್ತಿ-ಶ್ರದ್ಧೆಗಳಿಂದ ಕೋಟಿಜೀವಗಳನ್ನು ಪಾವನವಾಗಿಸಿದ ಗುರು, ಜಗತ್ತಿಗೆ ಚಿರಂತನವಾಗಿ ಬೆಳಕುಗರೆವ ಸತ್ಯದ ಧ್ರುವತಾರೆ, ಹೀಗೆ ಮಹಾತ್ಮರು ಜಗತ್ತಿನ ಜೀವನದ ವಿಸ್ತಾರವನ್ನು ಹೆಚ್ಚಿಸಿದ್ದಾರೆ. ಅವರ ಜೀವನ ಹಾಗು ಅವರ ಸಾಹಿತ್ಯ ಎಲ್ಲರಿಗೂ ಹಿರಿಯ ಬೆಳಕಾಗಲಿ.

ಭಾಗ್ಯವದು ಬಯಲಾಯಿತೆ ?

(ಪಾರ್ಥಿವ ಶರೀರ)

ಡಿ. ಗಂಗಪ್ಪ ವಾಲಿ, ಹುಬ್ಬಳ್ಳಿ

★

ಕೊಲಬೇಡಿ ಕೊಲಬೇಡಿ ಕೊಲಬೇಡಿ ಕೊಲಬೇಡಿ
ಕೊಲಬೇಡಿರೆಂದೆಂಬ ತತ್ತ್ವ ಸಂಜೀವನವೆ
ಕೊಲೆಗೆ ಬಲಿಯಾದ ಕೇಡನು ಮೀರ್ವ ಕೇಡುಂಟೆ ?
ಕಗ್ಗೊಲೆಗಳಿಗೆ ಕೇಡಿದು !

ಬಲು ಮುಂದುವರಿದವರು ಭಾರತೀಯರು ನಾವು
ಬಲು ಹಿರಿದು ನಮ್ಮ ಸಂಸ್ಕೃತಿಯೆಂಬ ಹೆಮ್ಮೆಗಳ
ಬಲುಹು ಬರಿದಾಯ್ತು ; ನಮ್ಮೆಲ್ಲರಗಿರ್ಪ ಕಿಲುಬಿಂಗೆ
ರಕ್ತ ಸಾಕ್ಷಿಯು ಕೊಲೆಯಿದು!

ದೌರಾತ್ಮ್ಯ--ದೌರ್ಜನ್ಯ ಕೈರಾತ ಕರ್ಮಗಳು
ಕಾರಣದ ವಿಷಮೂಲಗಳನಿಲ್ಲದಂತೆಸಗಿ
ಭಾರತದೊಳಿಲ್ಲವರು ನಿಜ ಮನುಜರಾಗಲ್ಕೆ
ಮುಕ್ತಾವಕಾಶ ಕೊಡಲು

ನೂರಯಿಪ್ಪತ್ತೈದು ವರ್ಷಂಬರಂ ಬಾಳ್ದ
ಸಾರತರ ರಾಮರಾಜ್ಯವ ರಚಿಸಬೇಕೆಂದ
ನೀರಂಗೆ ಕಾಲಾಗ್ನಿ ಗೋಲಕಂ ಬಡಿವಂತೆ
ಬರೆದ ಬೀದಿಯೆಂ ಕ್ರೂರನೋ,

ಸದುವಿನಯವೇ ಮಾನವಾಕೃತಿಯನಾಂತಿಹುದೊ,
ಸದಸದ್ವಿವೇಕವೇ ಬಿಳಿಬಟ್ಟೆಯುಟ್ಟಿಹುದೊ,
ಪದವಿಡುತ ಬರುತಿಹುದೊ ಸದ್ಗುಣದ ಸಂಚಯಂ
ನೆಲದಿ ತಾನೆಂದೆನಿಸುತ

ಹೆದರಿಕೆಯ ಬಲವಿಳಿಸಿ ಹೃದಯಗಳ ಹದಗೊಳಿಸಿ
ಸದಯತೆಯ ನೆಲೆಗೊಳಿಸಿ ಶಾಂತಿಯಮೃತವಸುಣಿಪ
ಮಿದುನಗೆಯ ಮುದುಕನನು ನಮ್ಮ ಬಳಿಯೊಳಿ ಕಾಂಬ
ಭಾಗ್ಯವದು ಬಯಲಾಯಿತೆ

ಕಾಣಮೊಡವೆಂ ಶಂಗಳಿಂಗನನ ಮೈದ್ದೀಹ ?
ಕಾಣುತಿಹುದವನ ಘನ ತಾತ್ತ್ವಿಕದ ಚಿದ್ದೀಹ!
ಕಾಣಬಹುದವನೆ ನಾವಾದ ಪಿರಿವದ್ಭುತವ-
ನವನ ನಡೆಯೊಳಿ ನಡೆದೊಡೆ

ಜ್ಞಾನಹೀನತೆಯಲ್ತೆ ಹೀನಚರ್ಯೆಯ ಮೂಲ ?
ಜ್ಞಾನ-ಕ್ರಿಯಾ ಮಿಲನವಲ್ತೆ ಪ್ರಗತಿಯ ಕೀಲ ?
ಜ್ಞಾನ ಮೂರ್ತಿ ಮಹಾತ್ಮನಿಗೆ ಶಾಂತಿ ದೊರೆವಂತೆ
ನಡೆವುದೆಂದಿಂಗೆ ನಾವು !

ಬಾಪೂಜಿಯವರ ಸತ್ಸಂಗದಲ್ಲಿಯ ನೆನಪುಗಳು

'ಭಾರತ ಸಂಚಾರಿ' ಗೋಸಾವಿ ಕೃಷ್ಣರಾಯರು, ಬೆಂಗಳೂರು

★

ಬಾಪೂಜಿ ಋಷಿಯಲ್ಲದ ಮಹರ್ಷಿ. ಯೋಗಿಯಲ್ಲದ ಸತ್ಯಯೋಗಿ. ಗುರುವಲ್ಲದ ಜಗದ್ಗುರು. ತಪಸ್ವಿಯೆನಿಸದ ವೀರ ತಪಸ್ವಿ !

★

೧ ಸಾಬರಮತಿಯ ಆಶ್ರಮ

ಸಾಬರಮತಿ ನದಿಯ ತೀರದಲ್ಲಿ, ದಧೀಚಿ ಋಷಿಗಳ ಆಶ್ರಮವಿದೆ. ಆದರ ನೆರೆಯಲ್ಲಿಯೆ ಮಹಾತ್ಮಾಜಿಯವರು ತಮ್ಮ ಆಶ್ರಮ ಸ್ಥಾಪಿಸಿದ ವಿಷಯ ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ದಕ್ಷಿಣ ಆಫ್ರಿಕೆಯಿಂದ ಹಿಂದುಸ್ತಾನಕ್ಕೆ ಬಂದೊಡನೆಯೆ ಮಹಾತ್ಮರು, ತಮ್ಮ ಕಾರ್ಯವನ್ನು ಪ್ರಾರಂಭಿಸಲು ಯೋಗ್ಯ ಸ್ಥಳವಾವುದೆಂಬುದನ್ನು ಸಂಶೋಧಿಸುವುದರಲ್ಲಿದ್ದರು. ಅದೇ ವೇಳೆಯಲ್ಲಿ ಮಹಾತ್ಮರ ಸ್ವಾಗತಕ್ಕಾಗಿ ಅಹಮ್ಮದಾಬಾದಿನ ನಾಗರಿಕರು ಸಭೆಯೊಂದನ್ನು ಏರ್ಪಡಿಸಿದ್ದರು. ಬ್ಯಾರಿಸ್ಟರ್ ಸರ್ ಜಿನೂಭಾಯಿಯವರು ಆ ಸಭೆಗೆ ಅಧ್ಯಕ್ಷರಾಗಿದ್ದರು. ಅಲ್ಲಿ ಶ್ರೀ. ಎಂ. ಅಂಬಾಲಾಲ ಸಾಖರಲಾಲ ಎಂಬ ಸದ್ಗೃಹಸ್ಥರು ಗಾಂಧಿಯವರನ್ನು ಕುರಿತು ಹೀಗೆ ಹೇಳಿದರು: '....ಮುಂಬಯಿ ನಗರವು ಮಹಾಸಾಗರವಿದ್ದಂತೆ; ರಾಜಕೋಟ ಮೊದಲಾದ ಆಶ್ರಿತ ಸಂಸ್ಥಾನಗಳು ತಮ್ಮ ದೇಶ ಕಾರ್ಯದ ಚಟುವಟಿಕೆಗೆ ನಿರುಪಯುಕ್ತ. ಆದುದರಿಂದ ಅಹಮ್ಮದಾಬಾದಿನ ಬಳಿಯಲ್ಲಿಯೆ ತಮ್ಮ ಆಶ್ರಮ ಸ್ಥಾಪಿಸಬೇಕು. ಇದಕ್ಕಾಗಿ ಸ್ವಯಂಸೇವಕರನ್ನೂ ಸ್ಥಳವನ್ನೂ ಕೊಡುವೆವಲ್ಲದೆ ಹಣದ ರಾಶಿಯನ್ನೂ ತಮ್ಮೆದುರು ಇರಿಸುವೆವು....'

ಆಶ್ರಮ ಸ್ಥಾಪಿಸುವ ಮೊದಲು ಗಾಂಧೀಜಿಯವರು ಶಾಂತಿನಿಕೇತನ, ಹರಿದ್ವಾರ, ಹೃಷೀಕೇಶ ಮೊದಲಾದ ಸ್ಥಳಗಳನ್ನು ಸುತ್ತಿ ಬಂದಿದ್ದರು. ಕೊನೆಗೆ ಶ್ರೀ. ಅಂಬಾಲಾಲ ಸಾಖರಲಾಲರಿಂದಿಗೆ ಎಲಿಸ್ ಬ್ರಿಜ್ಜಿನ ಮೇಲಿಂದ ಹಾಯ್ದು, ಸಾಬರಮತೀ ತೀರದ ಒಂದು ಹಳೆಯ ಆಶ್ರಮಕ್ಕೆ ಬಂದರು. ಅಲ್ಲೊಂದು ಪುರಾತನ ಗುಡಿಯಿದ್ದಿತು. ಆ ಸ್ಥಳವು 'ದಧೀಚ್ಯಾಶ್ರಮ' ಎಂದು ಕೇಳಿದೊಡನೆಯೆ ಗಾಂಧೀಜಿಯವರು: 'ದೇವಾಸುರ ಕಾಳಗದಲ್ಲಿ ತನ್ನ ಬೆನ್ನ ಮೂಳೆಯನ್ನೇ ಅರ್ಪಿಸಿದ ದಧೀಚಿಯ ಆಶ್ರಮವಲ್ಲವೆ? ನನಗೂ ಒಂದುದಿನ ಆ ಮಹರ್ಷಿಯಂತೆಯೆ ಲೋಕಕಲ್ಯಾಣಕ್ಕಾಗಿ ಬೆನ್ನೆಲುಬನ್ನು ಕೊಡಬೇಕಾದ ಸಂದರ್ಭ ಬರಲಿ!' ಎಂದು ಹಾರೈಸಿ, ಆ ಸ್ಥಳವನ್ನು ಆಶ್ರಮಕ್ಕಾಗಿ ಆಯ್ದುಕೊಂಡರು. ಅವರ ಅಂದಿನ ಹಾರೈಕೆ ಪೂರ್ಣವಾದಂತಾಯಿತು. ಮಹಾತ್ಮರು ಈ ಯುಗದ ದಧೀಚಿಯಾದರು.

೨ ಮಹಾತ್ಮರ ಸಮಾಧಿಸ್ಥಿತಿ

ಆಶ್ರಮವಲ್ಲಿ ನದಿಯ ತೀರದಲ್ಲಿ ಒಂದು ದಿನ ಸಾಯಂಪ್ರಾರ್ಥನೆ ನಾಗಿದೆ. ಬಾಪೂಜಿಯವರನ್ನು ಬಳಸಿಕೊಂಡು ಆಶ್ರಮವಾಸಿಗಳೆಲ್ಲರೂ ಪ್ರಾರ್ಥನೆಗಾಗಿ ಕುಳಿತಿದ್ದಾರೆ. ಎಲ್ಲರೂ ಕಣ್ಣು ಮುಚ್ಚಿ ಕುಳಿತು, ಗೀತೆಯ ಶ್ಲೋಕಗಳನ್ನು ಮೆಲ್ಲಗೆ ಹೇಳುತ್ತಲಿದ್ದಾರೆ. ಶಾಂತ-ಗಂಭೀರ ವಾತಾವರಣ. ನಾನು ಆಶ್ರಮಕ್ಕೆ ಬಂದು ಇದೇ ಆಗ ೮-೧೦ ದಿನಗಳಾಗಿದ್ದುವು. ವಿಚಿತ್ರ ಘಟನೆಯೊಂದು ಅಂದು ಸಂಭವಿಸಿತು. ಮಹಾತ್ಮರ ಎಡಪಕ್ಕದಲ್ಲಿ ಒಂದು ಒಂದುವರೆ ಯಾರ್ಡು ಅಂತರವಲ್ಲಿಯೆ ನಾನು ಕುಳಿತಿದ್ದೆ. ಹೊಸತಾಗಿ ಬಂದವನಾದುದರಿಂದ, ಹೆಚ್ಚುಕಾಲ ಕಣ್ಣುಮುಚ್ಚಿ ಕುಳಿತುಕೊಳ್ಳಲಿಕ್ಕೆ ಆಗುತ್ತಿರಲಿಲ್ಲ. ಅರೆತೆರೆದ ಕಣ್ಣುಗಳನ್ನು ಆಗಾಗ ಅತ್ತಿತ್ತ ಹೊರಳಿಸಿ ಎಲ್ಲರ ಕಡೆಗೆ ನೋಡುತ್ತಲಿದ್ದೆ. ಆಗ ಒಮ್ಮಿದೊಮ್ಮೆಲೆ ಎರಡು ನಾಯಿಗಳು ಮಹಾತ್ಮರ ಬಳಿ ಬಂದು, ಹೆಗಲ ಮೇಲೆ ಕಾಲಿರಿಸಿ ನಿಂತು, ಎಡಗಲ್ಲವನ್ನು ನೆಕ್ಕಿ ಓಡಿ ಹೋದುವು. ಇಷ್ಟಾದರೂ ಮಹಾತ್ಮರ ಧ್ಯಾನಾವಸ್ಥೆಗೆ ಭಂಗ ಬರಲಿಲ್ಲ, ಕುಳಿತವರು ಅಲುಗಾಡಲಿಲ್ಲ. ಮತ್ತೆ ಕೆಲವು ಸೆಕೆಂದುಗಳು ಸರಿಯಲು ಆ ನಾಯಿಗಳು ಮತ್ತೆ ಬಂದು ಮೊದಲಿನಂತೆಯೆ ನೆಕ್ಕಲಾರಂಭಿಸಲು, ನಾನು ಎದ್ದು ಅವುಗಳನ್ನು ಓಡಿಸಿದೆ. ನಾಯಿ ನೆಕ್ಕಿದ ಕಲೆಗಳು ತೋರುತ್ತಿದ್ದುವು. ಪ್ರಾರ್ಥನೆ ಮುಗಿದೊಡನೆ, ನಿತ್ಯವಂತೆ ಕೆಲವು ಮಹತ್ತ್ವದ ರಾಜಕೀಯ ಸಂಗತಿಗಳನ್ನು ಕುರಿತು ಮಾತನಾಡಿ, ಮಹಾತ್ಮರು ಎದ್ದು ಹೋದರು. ಈ ನಾಯಿಗಳ ನಿಷಯ ಯಾರಿಗೂ ಗೊತ್ತಾಗಿರಲಿಲ್ಲ. ಮಹಾತ್ಮರು ಆಗ ಸಂಪೂರ್ಣವಾಗಿ ಸಮಾಧಿ ಸ್ಥಿತಿಯಲ್ಲಿಯೆ ಇದ್ದರೆಂದು ನನಗೆ ಆ ಮೇಲೆ ಗೊತ್ತಾಯಿತು. ಇಂತಹ ಇನ್ನೂ ಹಲವು ಸಂದರ್ಭಗಳನ್ನು ಪ್ರತ್ಯಕ್ಷ ಕಂಡವರಿದ್ದಾರೆ. ಮಹಾತ್ಮರು ತಮ್ಮ ಸಾಧನಕ್ಕಾಗಿ ಒಂದು ಸುರವ ಕೋಣೆಯನ್ನೆ ನಿರ್ಮಿಸಿಕೊಂಡು

ದನ್ನು ನಾನು ನೋಡಿದ್ದೇನೆ. ಅದು ಅವರು ಕುಳಿತುಕೊಳ್ಳುವ ಕಿರುನುನೆಯ ಮೂಲೆಯಲ್ಲಿತ್ತು.

೩ ಮನಶ್ಶಾಸ್ತ್ರವಿಶಾರದ ಬಾಪೂಜಿ

ಕಿರಿಯರೊಂದಿಗೆ ಆಟವಾಡುವುದೆಂದರೆ ಮಹಾತ್ಮರಿಗೆ ತುಂಬ ಆನಂದ. ನಿತ್ಯದ ಪ್ರಾರ್ಥನೆಯನ್ನು ಮುಗಿಸಿ ಹೊರಗೆ ತಿರುಗಾಡಲು ಹೋದಾಗ ಬಾಪೂಜಿಯವರು, ಅನೇಕ ಚಿಕ್ಕಮಕ್ಕಳೊಂದಿಗೆ ಸೇರಿ, ವಿಧವಿಧದ ಆಟವಾಡುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ; ನಾನೂ ಅವರೊಂದಿಗೆ ಆಟವಾಡಿ ನಲಿದಿದ್ದೇನೆ.

ತಿಂಗಳಿಗೊಂದು ಸಲ ಮಹಾತ್ಮಾಜಿಯವರು ಆಶ್ರಮದ ವಿದ್ಯಾರ್ಥಿಗಳ ಸಭೆ ಸೇರಿಸುತ್ತಿದ್ದರು. ಇಂತಹ ಸಭೆಯಲ್ಲಿ ಚಿಕ್ಕ ಮಕ್ಕಳ ಮನಸ್ಸಿನ ಪರೀಕ್ಷೆ ನಡೆಯುತ್ತಿದ್ದಿತು. ಒಂದು ಸಲ ಹೀಗೆ ನಡೆಯಿತು : ಸಭೆಯಲ್ಲಿ ನೇರಿದ ವಿದ್ಯಾರ್ಥಿಗಳಿಗೆಲ್ಲ ಕಾಗದದ ತುಂಡುಗಳನ್ನು ಕೊಟ್ಟು, ಅವರವರಿಗೆ ತೋರಿದಂತೆ ತುಂಟ ಹುಡುಗರ ಹೆಸರುಗಳನ್ನು ಬರೆದುಕೊಡಿರೆಂದು ಬಾಪೂಜಿಯವರು ಹೇಳಿದರು. ನಾನೆಲ್ಲ ಹಾಗೆ ಹೆಸರುಗಳನ್ನು ಬರೆದು ಕೊಟ್ಟೆವು. ಬಳಿಕ ಕೆಲವು ಹುಡುಗರ ಹೆಸರುಗೊಂಡು, ಅವರನ್ನು ಎದ್ದು ನಿಲ್ಲುವಂತೆ ಹೇಳಿದರು. ಎದ್ದುನಿಲ್ಲುವಾಗ ಹುಡುಗರ ಮೋರೆಗಳೆಲ್ಲ ಕಪ್ಪಿಟ್ಟುಹೋದುವು. ಕೆಲವರ ಕಣ್ಣುಗಳಿಂದಂತೂ ನೀರುಸುರಿಯತೊಡಗಿದುವು. ಬಾಪೂಜಿಯವರು ಒಬ್ಬನನ್ನು ತಮ್ಮ ಬಳಿ ಕರೆದು 'ಇವನು ಕೆಟ್ಟ ಹುಡುಗನೊ?' ಎಂದವರೇ ಅಡಿಯಿಂದ ಮುಡಿಯ ವರೆಗೆ ಅವನನ್ನು ನೋಡಿದರು. 'ಉಹುಂ, ನನಗೇನೂ ಇವನು ಕೆಟ್ಟವನೆಂದು ಎನಿಸುವುದಿಲ್ಲ. ನೀವೇ ಇವನನ್ನು ಕೆಟ್ಟವನನ್ನಾಗಿಸಿದ್ದೀರಿ!' ಎಂದು ನುಡಿದು, ಆ ಹುಡುಗನ ಬೆನ್ನ ಮೇಲೆ ಕೈಯಾಡಿಸಿದರು. ಕೂಡಲೆ ಅಳುತ್ತಿದ್ದವರೆಲ್ಲ ನಗಲು ತೊಡಗಿದರು. ಮುಂದೆ ಆ ಹುಡುಗ ಎಂದೂ ಕೆಟ್ಟ ಹುಡುಗರ ಪಟ್ಟಿಯಲ್ಲಿ ಸೇರಲಿಲ್ಲ, ಎಂದರೆ ತುಂಟತನವನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟನು. ಮಹಾತ್ಮರದಿದೊಂದು ಮಕ್ಕಳ ಮನಸ್ಸನ್ನು ತಿದ್ದುವ ರೀತಿ.

೪ ಅಳುವವರನ್ನು ನೆಗಿಸುವ ಬಾಪೂಜಿ

ಇನ್ನೊಂದು ದಿನ ಜರುಗಿದ ಸಂಗತಿಯಿದು. ನಾವೆಲ್ಲರೂ ಛಾತ್ರಾಲಯದ ಮೇಲ್ಮಾಳಿಗೆಯ ಮೇಲೆ ಮಲಗಿಕೊಂಡಿದ್ದೇವೆ. ರಾತ್ರಿ ಒಂಬತ್ತುವರೆ ಗಂಟೆಯಾಗಿರಬಹುದು. ಒಮ್ಮೆಲೆ ನಾಲ್ಕಾರು ಟಾಂಗಾಗಳು ಆಶ್ರಮಕ್ಕೆ ಬಂದುಹೋದುವು. ಅವುಗಳಲ್ಲಿ ಯಾರೂ ಇದ್ದಂತೆ ತೋರಲಿಲ್ಲ. ಬೆಳುದಿಂಗಳು ಹರಡಿದ್ದಿತು. ಮುಂದೆ ಸ್ವಲ್ಪ ಕಾಲದಲ್ಲಿಯೆ ಒಂದು ಕಾರು ಬಂದಿತು. ಗಂಟೆಯನ್ನು ಬಾರಿಸದೆ, ಎಲ್ಲರಿಗೂ ಶಾಂತರೀತಿಯಿಂದಲೆ ಬಾಪೂಜಿಯವರ ಬಂಧನದ ವಾರ್ತೆಯನ್ನು ತಿಳುಹಲಾಯಿತು. ಪೋಲೀಸ ಮೇಲಧಿಕಾರಿ ಹೇಲೆಸಾಹೇಬರು ವಾರಂಟು ತೋರಿಸಿ, ಬಾವಿಯ ಬಳಿಯಲ್ಲಿ ಅಡಿಯಾಡುತ್ತಲಿದ್ದರು. ಎಲ್ಲರೂ ಸೇರಿ ಬಾಪೂಜಿಯವರ ಮನೆಯ ಹಿಂಬದಿಯಲ್ಲಿ ನಿಂತುಕೊಂಡು ಪ್ರಾರ್ಥನೆ ಮಾಡಿದೆವು. ಆಗಿನ ಬಾಪೂಜಿಯವರ ಚಟುವಟಿಕೆ ನೋಡುವಂತಿದ್ದಿತು. ಕಾಲೊಳಗಿನ ಕಟ್ಟಗೆಯ ಹಾವುಗೆಗಳು ಚಟ್‌ಪಟ್ ಶಬ್ದಮಾಡುತ್ತ ಕುಣಿನಾಡುತ್ತಲಿದ್ದುವು. ಅವರಿಗೊಂದು ಪುಸ್ತಕಬೇಕಾಯಿತು. ಪೋಲೀಸ್ ಸುಪರಿಂಟೆಂಡೆಂಟ್ ಹೇಲೆ ಸಾಹೇಬರನ್ನು ಕರೆದು 'ಸ್ವಲ್ಪ ಒಳಕ್ಕೆ ಹೋಗಿ ಪುಸ್ತಕವೊಂದನ್ನು ತರಲೇ?' ಎಂದು ಕೇಳಿದರು. ಆಗ ಸಾಹೇಬರು ನಾಚಿಕೆಯಿಂದ ಮೋರೆ ಕೆಳಗೆನಮಾಡಿ 'ನಾನು ತಮಗೆ ಆಜ್ಞೆ ಮಾಡಲು ಸಮರ್ಥನೆ? ಹಾಗೆ ಇದ್ದರೆ ಕಳ್ಳನಂತೆ ಇಂತಹ ರಾತ್ರಿಯಲ್ಲಿ ತಮ್ಮನ್ನು ಹಿಡಿಯಲಿಕ್ಕೆ ಏತಕ್ಕೆ ಬರುತ್ತಿದ್ದೆ?' ಎಂದುಕೊಂಡನು. 'ಹಾಗಲ್ಲ, ನಾನೀಗ ಕಾಯಿದೆಯಿಂದ ಬಂಧಿತನು' ಎಂದು ನುಡಿದು ಮಹಾತ್ಮರು ಓಡಿ ಹೋಗಿ, ಬೇಕಾಗಿದ್ದ ಪುಸ್ತಕವನ್ನು ತೆಗೆದುಕೊಂಡು ಬಂದರು. ಅಷ್ಟರಲ್ಲಿ ಅನಸೂಯಾಬೇನರು (ಶ್ರೀ. ಅಂಬಾಲಾಲ ಸಾರಾಭಾಯಿಯವರ ತಂಗಿ) ಬಂದು ಅತ್ತುಕರೆದು ದುಃಖವನ್ನು ವ್ಯಕ್ತಪಡಿಸುತ್ತಿರಲು, ಬಾಪೂಜಿಯವರು ಚಿಕ್ಕಮಗುವಿನಂತೆ ಒಮ್ಮೆಲೆ ಅವರನ್ನು ತಬ್ಬಿಕೊಂಡು 'ಶೇರಕೇ ಬಚ್ಚಿ!' ಎಂದು ನುಡಿದು ಬೆನ್ನಮೇಲೆ ಕೈಯಾಡಿಸಿದುದೇ ತಡ; ಆಕೆಯ ಅಳುವು ನಗೆಯಾಗಿ ಪರಿಣಮಿಸಿತು. (ಅಂದು ಸಂಜೆಯ ಪ್ರಾರ್ಥನೆಯ ಕಾಲದಲ್ಲಿ ಬಾಪೂಜಿಯವರು ತಮ್ಮ ಬಂಧನದ ಬಗ್ಗೆ ವಿಶೇಷವಾಗಿ ಮಾತನಾಡಿದ್ದರು. ಅಜಮೇರಕ್ಕೆ ಹೋಗಿದ್ದ ಅವರು ಆ ದಿನವೇ ಮರಳಿದ್ದರು. (೧೯೩೨ ನೆಯ ಮಾರ್ಚ್, ೧೦.) ಬಾಡೋಲಿಯ ಸತ್ಯಾಗ್ರಹಕ್ಕಾಗಿ ನಿತ್ಯವೂ ಸಾವಿರಾರು ಜನರು ಆಶ್ರಮಕ್ಕೆ ಬರುತ್ತಿದ್ದರು. ತಮ್ಮನ್ನು ಬಂಧಿಸಿದರೆ ಅವರೆಲ್ಲ ಶಾಂತತೆ ಕಾಯ್ದುಕೊಳ್ಳುವಂತೆ ಹೇಗೆ ವರ್ತಿಸಬೇಕೆಂಬುದನ್ನೂ ಬೇರೆ ವಿಷಯಗಳನ್ನೂ ನಿತ್ಯ ಹೇಳುವಂತೆ ಹೇಳುತ್ತಿರುವಾಗ, ಸೈಕಲ್ ಸವಾರನೊಬ್ಬನು ನಡುವೆ ಬಂದು ನಮ್ಮನ್ನು ಗಾಬರಿಗೊಳಿಸಿದ್ದನು.)

೫ ನೆಪೋಲಿಯನ್ನನಂತಹ ನಿದ್ರೆ

ಹರಿಪುರ ಕಾಂಗ್ರೆಸ್ಸಿನ ಸಮಯ. ನಾನು ದಕ್ಷಿಣಭಾರತದೊಳಗಿನ ಮುಖ್ಯ ಕೇಂದ್ರವಾದ ಮಾರ್ತಾಂಡಮ್‌ನಲ್ಲಿ ಜೇನು ಸಾಕುವ ಶಿಕ್ಷಣ ಹೊಂದಿ ಹರಿದ್ವಾರಕ್ಕೆ ಹೋಗುವಾಗ, ಮಾರ್ಗವಲ್ಲಿ ತಿರುಪುರ, ಕೋಯಿಮತ್ತೂರು, ಕುನ್ನೂರು, ಊಟಿ, ವೀರರಾಜಪೇಟೆ (ಕುರ್ಗ) ಮತ್ತು ದೊಡ್ಡ ಬಳ್ಳಾಪುರಗಳ ಜೇನು ಸಾಕುವ ಕೇಂದ್ರಗಳನ್ನು ಸಂದರ್ಶಿಸಿ ಹರಿಪುರಕ್ಕೆ ಮುಟ್ಟಿದೆನು. ಆಗ ನನ್ನೊಂದಿಗೆ ಅನೇಕರು ತಮ್ಮ ಕೇಂದ್ರದ ಜೇನುತುಪ್ಪವನ್ನು ಬಾಪೂಜಿಯವರಿಗೆ ನುಟ್ಟಿಸಲು ಕೊಟ್ಟಿದ್ದರು. ನಾನು ಗಾಂಧೀ ಸೇವಾ ಸಂಘ ಹಾಗೂ ಅ. ಭಾ. ಗ್ರಾಮೋದ್ಯೋಗ ಸಂಘದ ನೆಂಬರನಾಗಿ ಶಿಕ್ಷಣ ಪಡೆಯಲು ಹೋಗಿದ್ದೆನಾದ್ದರಿಂದ, ಅಲ್ಲಿಯ ಪ್ರದರ್ಶನದಲ್ಲಿ ಜೇನಿನ ವಿಭಾಗವು ನನ್ನ ಪಾಲಿಗೆ ಬಂದಿತ್ತು. ಮೀರಾಬೇನಳೊಂದಿಗೆ ಆ ಬಾಟ್ಲಿಗಳನ್ನೆಲ್ಲಾ ಬಾಪೂಜಿಯವರಿಗೆ

ನುಟ್ಟಿಸಿ, ಮಾತಾಡಲು ಸಮಯ ಕೇಳಿದ್ದೆನು. ಅವಳು ಬಂದು ಮಧ್ಯಾನ್ಹ ಫಲಾಹಾರದನಂತರ ಬರಬೇಕೆಂದು ತಿಳಿಸಿದರು. ಆ ಪ್ರಕಾರ ನಾನು ಬಾಪೂಜಿಯವರ ಕುಟೀರವನ್ನು ೧೫ಗೆ ಸರಿಯಾಗಿ ತಲುಪಿದೆನು. ಅವರು ಅದೇ ಆಹಾರ ತೆಗೆದುಕೊಂಡು ಅಡ್ಡಾಗಿದ್ದರು. ಮೊದಲು ನಾನು ಕುನ್ನೂರಿಂದ ತಂದ ಆಫಘಾನ್ ಸ್ತ್ರೀಯರ ಪತ್ರವನ್ನು ಕೊಟ್ಟು, ಅವರಿಗೆ ಬಂಧನದಲ್ಲಿ ಆಗುವ ತೊಂದರೆಗಳನ್ನು ತಿಳಿಸಿದೆನು. 'ಪತ್ರವನ್ನು ಮಹಾದೇವನ ಕೈಯಲ್ಲಿ ಕೊಡು' ಎಂದರು. ಅದರಂತೆ ಮಾಡಿ ಅವರಿಗೆ ಉತ್ತರ ಹಾಕಲು ತಿಳಿಸಿ, ಪುನಃ ಬಾಪೂಜಿಯವರಿಗೆ ಸಮೀಪವಾಗಿ ಕುಳಿತೆನು. ಆಗ ಜೇನಿನ ಕೇಂದ್ರವನ್ನು ಸ್ಥಾಪಿಸಲು ಉತ್ತರಭಾರತದಲ್ಲಿ ಯೋಗ್ಯ ಸ್ಥಳವಾವುದು—ಎಂಬ ವಿಷಯವಾಗಿ ಅವರೊಂದಿಗೆ ಮಾತಾಡುತ್ತಿದ್ದೆನು. ಅವರು ಆಸಾಮದಿಂದ ಡೇಹರಾಡೂನಿನ ವರೆಗೆ ಇದ್ದ ಕೆಲವು ಕೇಂದ್ರಗಳ ಸಂಗತಿಯನ್ನು ತಿಳಿಸಿ, ನೀನು ಡೆಹರಾಡೂನನ್ನೆ ನಿನ್ನ ಕೇಂದ್ರ ಮಾಡಲು ಅಡ್ಡಿಯಿಲ್ಲವೆಂದು ನುಡಿದು, ವಾಚ್ ತೆಗೆದಿಟ್ಟು 'ಗಂ ನಿಮಿಷಗಳ ನಂತರ ಪುನಃ ಮಾತನಾಡು' ಎಂದವರೇ ನಿದ್ರೆಹೋದರು. (ಸಂಪೂರ್ಣ ನಿದ್ರೆಹತ್ತಿದಂತೆ ಗೊರಕೆ ಹೊಡೆಯಹತ್ತಿದರು.) ಆಮೇಲೆ ಸರಿಯಾಗಿ ಹತ್ತು ನಿಮಿಷವಾಗುತ್ತಲೇ 'ಅಚ್ಛಾ ಆಗೇ' ಎಂದರು. 'ಇದೆಂಥ ವಿಚಿತ್ರ ನಿದ್ರೆಯೊ' ಎಂದುಕೊಂಡು ಪುನಃ ಕೆಲವು ಸಂಗತಿಗಳನ್ನು ಮಾತಾಡಿ, ಕೇಂದ್ರ ಸ್ಥಾಪಿಸುವ ಮೊದಲು ಹರಿದ್ವಾರ-ಗುರುಕುಲದಲ್ಲಿದ್ದ ಜೇನುಗೂಡನ್ನು ಕುಂಭಮೇಳೆಯಲ್ಲಿ ಪ್ರದರ್ಶಿಸಿ ತೋರಿಸುವೆನೆಂದು ಹೇಳಿ, ನನ್ನ ಸಮಯ ಮುಗಿದದ್ದರಿಂದ, ಅವರ ಆಜ್ಞೆ ಪಡೆದು ಹೊರಟುಬಂದೆನು.

೩ ಮರೆಯದಂತಹ ಸ್ಮರಣಶಕ್ತಿಯುಳ್ಳವರು

ಹರಿದ್ವಾರದಿಂದ ಗುರುಕುಲ ಪ್ರಿನ್ಸಿಪಾಲರಾದ ಪಂ. ದೇವಕರ್ಮಾಜೀ (ಸ್ವಾಮಿ ಅಭಯದೇವಜಿ) ಯವರೊಂದಿಗೆ ಅರವಿಂದರ ಭೆಟ್ಟಿಗಾಗಿ ಹೊರಟಾಗ, ಮಾರ್ಗದಲ್ಲಿ ಸೇವಾಗ್ರಾಮಕ್ಕೆ ಮುಟ್ಟಿದೆನು. ಆಗ ಅಲ್ಲಿ ರಾಜಕುಮಾರಿ ಅಮೃತಕೌರ ಇದ್ದರು. ಅವರಲ್ಲಿ, ನಿಮ್ಲಾದಲ್ಲಿರುವ ಒಂದು ನೂಲುವ ಹಿಂಜುವ ವರ್ಗ ತೆಗೆದು ೨-೩ ತಿಂಗಳದ್ದವನಾದ್ದರಿಂದ, ಪ್ರೇಮದಿಂದ ಅವರು, ಬಾಪೂಜಿಯವರಿಗೆ ನಿಮ್ಮ ಭೆಟ್ಟಿಮಾಡಿಸುವೆನೆಂದು ಅವರ ಕುಟೀರಕ್ಕೆ ನನ್ನನ್ನು ಕರೆದೊಯ್ದರು. ಅವರು ನನ್ನ ಬಗ್ಗೆ ಹೇಳುತ್ತಿರುವಾಗಲೆ ಬಾಪೂಜಿಯವರು ನಡುವೇ 'ಏ ಹಮಾರಾ ಆಶ್ರಮಕಾ ವಿದ್ಯಾರ್ಥಿ; ಬರಮತೀ ಮೇ ಥಾ' ಎಂದುಬಿಟ್ಟರು. ಆ ಮಾತಿಗೆ ಸುಮಾರು ಹನ್ನೆರಡು ವರ್ಷವಾಗಿ ಹೋಗಿತ್ತು. ಆಮೇಲೆ ಪರಸ್ಪರರ ಭೆಟ್ಟಿಯಾಗಿರಲಿಲ್ಲ. ನಾನು ಆಶ್ರಮ ಸೇರಿದಾಗ ಸಣ್ಣವನಿದ್ದೆನು. ಇನ್ನೂ ಗಡ್ಡ ಬಂದಿದ್ದಿಲ್ಲ. ಈಗ ಗಡ್ಡಗಳಿದ್ದರೂ ಬಾಪೂಜಿ ಗುರುತಿಸಿದುದು ನನ್ನನ್ನು ಬೆರಗುಗೊಳಿಸಿತು. ಇನ್ನೊಂದು ದಿನ ನನಗೆ 'ಏ ಶಹದ್‌ವಾಲಾ' ಎಂಬ ಬಿರುದು ಮಹಾತ್ಮರಿಂದ ಸಿಕ್ಕಿತು. ಗಾಂಧೀ ಸೇವಾಸಂಘದ ಸಭೆಗಾಗಿ ಮಾಲಕಾಂಡಾ (ಪೂರ್ವ ಬಂಗಾಲ) ಕ್ಕೆ ಹೋದಾಗ, ಡೇಹರಾಡೂನ್ ಜೇನುಕೇಂದ್ರದ ತುಪ್ಪವನ್ನು ಎಲ್ಲ ಮುಂದಾಳುಗಳಿಗೂ ಬಾಪೂಜಿಯವರಿಗೂ ಕೊಟ್ಟು ಭೆಟ್ಟಿಗೆ ಸಮಯ ಸಿಕ್ಕದೆ, ಮಧ್ಯಾನ್ಹ ಭೋಜನದ ವೇಳೆಗೆ ಅವರ ಕುಟೀರವನ್ನು ಪ್ರವೇಶಿಸಿದೆನು. ಕೂಡಲೆ ಅವರು—'ಏ ಶಹದ್‌ವಾಲಾ ಕ್ಯೋಂ ಆಯಾ' ಎಂದರು. ಅದಕ್ಕೆ ನಾನು—'ಜೇನುತುಪ್ಪದ ಉಪಯೋಗದ ಬಗ್ಗೆ ನಿಮ್ಮಿಂದ ಏನಾದರೂ ಒಂಡೆರಡು ವಾಕ್ಯ ಬೇಕಿದ್ದುವು' ಎಂದೆನು. ಅದಕ್ಕೆ ಅವರು—'ಇಂತಹ ತಾರೀಖಿನ ನವಜೀವನದಲ್ಲಿದೆ; ನೋಡಿಕೋ! ಅಷ್ಟೇ ಸಾಕು, ಭಾಗೋ!' ಎಂದರು.

೪ ಮ್ಯಾಂಚೆಸ್ಟರಿನ ಮಲ್ಲುಹರಿದು ಖಾದಿ ಧರಿಸಿದ ಶಾಸ್ತ್ರಿಗಳು

ಬೆಂಗಳೂರಿನ ಒಬ್ಬ ಪ್ರಸಿದ್ಧ ವಿದ್ವಾನ್ ಪಂಡಿತರು ಹರಿದ್ವಾರದಲ್ಲಿ ನನಗೆ ಭೆಟ್ಟಿಯಾದರು. ಅವರು ಸಾಧಾರಣ ಪಂಡಿತರಲ್ಲೆಂಬುದು ಗೊತ್ತಾದರೂ, ಒಂದು ಪ್ರವಾಸದಲ್ಲಿ ಗಾಂಧಿಜಿಯವರ ಬಗ್ಗೆ ನಮ್ಮ ಅವರ ಮತಭೇದ ಬಂದು, ಅಡಿಗೆ ಊಟ ಜೇರೆ ಆಗಹತ್ತಿದುವು. ಇದಕ್ಕೆ ಕಾರಣವೆಂದರೆ ಅವರು—ಮಹಾತ್ಮರನ್ನು ಕೆಳಗಿನ ವರ್ಣದವರೆಂದು ಬೈಯುವವರು. ನಾನು ನಿಷ್ಠಾವಂತ ಬ್ರಾಹ್ಮಣರಿಗಿಂತಲೂ ಅವರು ಸಾವಿರ ಪಾಲು ಶ್ರೇಷ್ಠರೆನ್ನುವವನು. ಅಂತೂ ಅವರ ನಮ್ಮ ಹಟವು ಜೋರಾಗಿ, ಅವರನ್ನು ಅಜಮೀರ ಮಾರ್ಗವಾಗಿ ಸಾಬರಮತಿಯ ಸಂತರ ಕಡೆಗೆ ಕರೆದೊಯ್ದೆನು. ಅವರಿಗೆ ಸಂಜೆಯ ಪ್ರಾರ್ಥನೆಯನಂತರ ವೇಳೆ ಸಿಕ್ಕಿತು. ತಮ್ಮ ಸಂಶಯ ನಿವಾರಣೆಗಾಗಿ ಕೆಲವು ಸಂಗತಿಗಳನ್ನು ಕುರಿತು ಮಾತಾಡಿ, ಅವರಿಂದ ಏನೋ ದೀಕ್ಷೆ ಸಿಕ್ಕಂತೆ ಪ್ರಭಾವಿತರಾಗಿ, ನನ್ನೆಡೆಗೆ ಬಂದವರೇ ತಮ್ಮ ಮ್ಯಾಂಚೆಸ್ಟರ್ ಮಲ್ಲಿನ ಅಂಗಿ ಹರಿದೊಗೆದು, ನಿಜವಾಗಿಯೂ ಗಾಂಧಿಜಿಯವರು ನಮ್ಮ ಆದ್ಯ ಶಂಕರಾಚಾರ್ಯರಿಗಿಂತ ಶ್ರೇಷ್ಠರು ಎಂದು ನುಡಿದು, ಖಾದಿ ಧರಿಸಿ ತಮ್ಮೂರಿಗೆ ಹೋಗಿ, ಏನೇನೋ ಬರೆಯಲು ಒಂದು ಪೇಪರು ತೆಗೆದು ಜೇಲಿಗೂ ಹೋಗಿಬಿಟ್ಟರು. (ಇಂಥ ಹಲವು ಸಂಗತಿಗಳನ್ನು ನಾನು ಸ್ವತಃ ನೋಡಿದ್ದೇನೆ. ಅವನ್ನೆಲ್ಲಾ ಮತ್ತೆ ಬರೆಯುವೆನು.)

ಮಹಾತ್ಮರ ಕೊಲೆ ಅಥವಾ ಹಿಂದುಮುಸಲ್ಮಾನರ ಐಕ್ಯ

ಶ್ರೀ. ಶೀ. ಗೋ. ಕುಲಕರ್ಣ, ಧಾರವಾಡ

★

ಮಹಾತ್ಮರ ಮಾನವಬಂಧುತ್ವದ—ಸ್ನೇಹಯೋಗದ—ಅರ್ಥ, ಸಾಮಾನ್ಯ ಬುದ್ಧಿಯ ಜನಕ್ಕೆ ಆಗಲಿಲ್ಲ. ಇವರಲ್ಲಿ ಉರಿದಿದ್ದ ದ್ವೇಷ-ಮತ್ಸರಗಳ ಬೆಂಕಿಗೆ ಮಹಾತ್ಮರ ದೇಹ ಬಲಿಯಾಯಿತು.

●

ಮಹಾತ್ಮರ ಕೊಲೆಯಾಯಿತು. ದೇಹಧಾರಿ-ಮನುಷ್ಯರಾದ ನಾವು ಮಹಾತ್ಮರ ದೇಹವನ್ನು ಕಳೆದುಕೊಂಡು ದುಃಖಿತರಾದೆವು. ಇದು ಸತ್ಯವಾದ ಮಾತು. ಇದರೊಂದಿಗೆ ಇದಕ್ಕೂ ಹೆಚ್ಚು ಬೆಲೆ ಬಾಳುವ ಅಮರವಾದ ಸತ್ಯವಿದೆ. ಅದನ್ನು ತೋರಿಸುವುದೇ ಈ ಲೇಖನದ ಉದ್ದೇಶ.

ಮಹಾತ್ಮರು ತಾನಾಗಿಯೇ ತಾಳಿಕೊಂಡಿರಬಹುದಾದ ತಮ್ಮ ಜೀವನದ ಗುರಿಯೆಂದರೆ, ಭಾರತಕ್ಕೆ ಅಹಿಂಸೆಯ ಸಾಧನದಿಂದ ಸ್ವಾತಂತ್ರ್ಯ ಕೊಡಿಸುವುದು. ಈ ತಮ್ಮ ಗುರಿಯನ್ನು ಸಿದ್ಧಿಸಿಕೊಳ್ಳಲು ಅಹಿಂಸಾತ್ಮಕವಾದ ಸಾಧನೆಯನ್ನು ಅವರು ಅಖಂಡವಾಗಿ ಅರ್ಧಶತಮಾನಗಳ ವರೆಗೂ ಮಾಡಿದರು. ಸಿದ್ಧಿಯನ್ನೂ ಪಡೆದರು. ಈ ಸ್ವಾತಂತ್ರ್ಯಸಂಗ್ರಾಮದಲ್ಲಿ ಬಂದ ಹಾಲಾಹಲವೆಂದರೆ ಹಿಂದೂ-ಮುಸಲ್ಮಾನರ ವೈರ. ಈ ಹಾಲಾಹಲವು ದೇಶವನ್ನೆಲ್ಲ ವ್ಯಾಪಿಸಿತು. ಅದರಿಂದ ಆಗಬಹುದಾಗಿದ್ದ ಅನರ್ಥಗಳೂ ಆದುವು. ಇದರೊಂದಿಗೆ ಇಂದು ಗಳಿಸಿದ ಸ್ವಾತಂತ್ರ್ಯ ನಾಳೆ ಹೋದೀತೆಂಬ ಭಯವೂ ಉತ್ಪನ್ನವಾಯಿತು. "ಸ್ವಾತಂತ್ರ್ಯ ಸಿಕ್ಕರೆ ಸಾಲದು. ಅದು ನಮಗೆ ದಕ್ಕಬೇಕು. ನನ್ನ ಜೀವಮಾನದಲ್ಲಿ ದೊರೆತ ಭಾರತ ಸ್ವಾತಂತ್ರ್ಯ ನಾನು ಹೋದ ಮೇಲೆ ಹೋಗಬಾರದು!" ಎಂದು ಮನುಷ್ಯಮಾತ್ರರಿಗೆ ಬರತಕ್ಕ ಭಯವೂ ಮನುಷ್ಯ—ಮಹಾತ್ಮರಿಗೆ ಬಂತು. ನಮಗಾಗಿ ಈ ಭಯವನ್ನು ಮಹಾತ್ಮರು ಗೃಹಿಸಿದರು. ಆ ಭಯನಿವಾರಣೆಗಾಗಿ "ಮಾಡು ಇಲ್ಲವೆ ಮಡಿ" ಎಂಬ ಮಾರ್ಗವನ್ನು ಹಾಕಿಕೊಂಡರು.

ಸ್ವಾತಂತ್ರ್ಯಸಾಧನೆಯೊಂದೇ ಮಹಾತ್ಮರ ಜೀವನದ ಗುರಿಯಾಗಿರಲಿಲ್ಲ. ಅದನ್ನು ಭದ್ರವಾದ ಅಸ್ತಿವಾರದ ಮೇಲೆ ನಿಲ್ಲಿಸಬೇಕೆಂದೂ ಅವರು ಮನಸ್ಸು ಮಾಡಿದರು.

"ತಳಸೋಸಿ ಪಾಯಹಾಕು" ಎನ್ನುವುದೊಂದು ವಾಡಿಕೆಯ ಮಾತು. ಈ ಮಾತಿನಂತೆ ಮಹಾತ್ಮರು ತಮ್ಮೊಳಗಿನ ತಳಸೋಸಿ ಅಸ್ತಿವಾರ ಹಾಕಿದರು.

ದ್ವೇಷ, ಅಸೂಯೆಗಳು ಯಾವ ಮಾನವನನ್ನೂ ಯಾವ ದೇಶವನ್ನೂ ಮುಂದು ತರಲಾರವು. ನಮ್ಮ ಹಿತಕ್ಕಾಗಿ, ನಮ್ಮ ಬೆಳವಣಿಗೆಗಾಗಿ, ನಮ್ಮ ಸ್ವಾತಂತ್ರ್ಯಕ್ಕಾಗಿ ನಾವು ನಮ್ಮೊಳಗಿನ ದ್ವೇಷ ಅಸೂಯೆಗಳನ್ನು ತೊಳೆದುಕೊಳ್ಳಬೇಕು. ಅನ್ಯರ ನೆರವನ್ನಾಗಲಿ ಅನ್ಯರು ಮೊದಲು ತಮ್ಮನ್ನು ತಾವು ತಿದ್ದಿಕೊಳ್ಳಲಿ ಎಂದು ಸುಮ್ಮನೆ ಕೂಡುವುದಾಗಲಿ ಅಹಿಂಸಾತಪಸ್ವಿಗೆ ಎಂದೂ ಸಲ್ಲದು. ಬರುವುದಿಲ್ಲ. ಅಂತೆಯೇ ಮಹಾತ್ಮರು ಅನ್ಯರ ಕಡೆಗೆ ನೋಡದೆ ತಮ್ಮೊಳಗೆ ತಾವು ನೋಡಿಕೊಂಡರು.

ಅಲ್ಲಿ ಅವರು ಕಂಡುಕೊಂಡದ್ದು ಏನು? ತಾನೂ ಒಬ್ಬ ಹಿಂದೂ ಮುಸಲ್ಮಾನರ ಶತ್ರು. ತನ್ನಲ್ಲಿಯ ಈ ವೈರ ಅಳಿಯುವುದೆಂತು ಮುಸಲ್ಮಾನರ ಮಿತ್ರನಾಗುವುದೆಂತು? ತಾನೊಬ್ಬ ಮಿತ್ರನಾದರೆ ತನ್ನನ್ನು ಹಿಂಬಾಲಿಸುವ ಹಿಂದುಗಳೆಲ್ಲರೂ ಇಂದಿಲ್ಲ ನಾಳೆ, ತನ್ನಂತೆ ಮಿತ್ರರಾಗುವರು. ತನ್ನೊಬ್ಬನನ್ನಾದರೂ ಮುಸಲ್ಮಾನರು ಮಿತ್ರನೆಂದು ಇಂದು ಗೃಹಿಸಿದಲ್ಲಿ ಮುಂದೆ ಬರುಬರುತ್ತ ಎಲ್ಲ ಹಿಂದು ಜನರನ್ನೆ ಮಿತ್ರರೆಂದು ಗೃಹಿಸಬಹುದು. ತನ್ನ ಮನದಲ್ಲಿಯ ವೈರವನ್ನು ತಾನು ಕಳೆದುಕೊಂಡಲ್ಲಿ ತನ್ನಂತೆ ಉಳಿದ ಹಿಂದುಗಳ ತಮ್ಮ ಮನದಲ್ಲಿಯ ವೈರವನ್ನು ಕಳೆದುಕೊಳ್ಳಲು ಸಮರ್ಥರಾಗುವರು. ತಾನೆಂದರೆ ಯಾರು? ಭರತಖಂಡದ ಏಳತ್ತು ಕೋಟಿಯ ಒಂದಂಶ. ಭಾರತೀಯನಾದ ತಾನು ಆದೇ ಪ್ರಮಾಣದಲ್ಲಿ ತಾನ ಭರತಖಂಡವೆಂದು ಇರುವಾಗ, ತನ್ನ ಪಾಲಿನ ಕೆಲಸವನ್ನು ತಾನ ಮೊದಲು ನಿಚ್ಚಳವಾಗಿ ಮಾಡಿಕೊಳ್ಳಲು ಸಮರ್ಥನಾದನೆಂದ ತನ್ನಂತೆ ಭಾರತದ ಉಳಿದ ಭಾಗಗಳೂ ಸಮರ್ಥವಾಗುವುವ ಇದೇ ಮಹಾತ್ಮರ ನಿರ್ಧಾರವಾಯಿತು. ಕೊನೆಯ ನಿರ್ಧಾರವಾಯಿತು.

ಈ ನಿರ್ಧಾರದಿಂದಲೇ ಅವರು ತಮ್ಮ ಕೊನೆಯ ಉಪವಾಸವನ್ನು ಕೈಕೊಂಡರು. ಅದರಿಂದ ತಮ್ಮ ಅಂತಃಶುದ್ಧಿಯನ್ನು ಸಿದ್ಧಿಸಿಕೊಂಡರು. ಉಳಿದ ಹಿಂದೀಯರಿಗೆ ತಮ್ಮ ತಮ್ಮ ಅಂತರಂಗ ಶುದ್ಧಿಯ ಮಾರ್ಗದರ್ಶಕರಾದರು. ಉಪವಾಸ ಮುರಿಯೇ ಅವರು ದೇಶಕ್ಕೆ ಹಾಕಿದ ಏಳು ಕರಾರುಗಳು ಹಿಂದೂ ಮನ ಮೂಲೆಮೂಲೆಯಲ್ಲಿ ಪರಧರ್ಮದ್ವೇಷಭಾವನೆಯನ್ನು ಕೆತ್ತು ಹಾಕಲು ಮಹಾತ್ಮರು ಮಾಡಿದ ಧರ್ಮೋಪದೇಶ. ಮುಸಲ್ಮಾ

ರೆನ್ನುವುದೊಂದು ನೆವ. ಇದೇ ರೀತಿ ಹಿಂದೊಮ್ಮೆ ಭಾರತಸ್ವಾತಂತ್ರ್ಯದ ಅರುಣೋದಯದ ಕಾಲಕ್ಕೆ ಮಹಾತ್ಮರು, ಇಂಗ್ಲೀಷರ ವಿಷಯವಾಗಿ ಈ ವರೆಗೂ ಭಾರತೀಯರು ತಾಳಿದ್ದ ವೈರಭಾವವನ್ನು ಕಳೆಯುವ ಒಂದೇ ಒಂದು ಮಾತನ್ನಾದರೂ ಪಡೆಯಬೇಕೆಂದು ಅಹೋ ರಾತ್ರಿ ಹುಡುಕಿದ ಪ್ರಸಂಗ ನೆನಪಿನಲ್ಲಿ ಬರುತ್ತದೆ. ಭಾರತ–ಬ್ರಿಟಿಷರ ಸಂಬಂಧಕ್ಕಿಂತಲೂ ಹಿಂದೂ–ಮುಸಲ್ಮಾನರ ಹತ್ತುಗಡೆ ತೀರ ಹತ್ತಿರದ್ದು. ಅಂತೇ ಮೊದಲಿನದನ್ನು ಮಹಾತ್ಮರು ಇದ್ದುಸಾಧಿಸಿದರು; ಎರಡನೆಯದನ್ನು ತಮ್ಮ ಬಲಿಕೊಟ್ಟು ಸಾಧಿಸಿದರೆನ್ನಬಹುದು.

ಹಾಗಾದರೆ ಹಿಂದೂ–ಮುಸಲ್ಮಾನರ ಐಕ್ಯವನ್ನು ಸಾಧಿಸಿದರೆ ! ಅದು ಹೇಗೆ ? ಅದಿನ್ನೂ ಕಂಡು ಬರುವುದಿಲ್ಲವಲ್ಲ ? ನಿಜ. ಮಹಾತ್ಮರ ಎತ್ತರದ ಜನರಿಗೆ ಈ ಮಾತುಸಾಧಿಸಲು ಕೂಡಲೇ ಬಂದಂತೆ ಮಾನವ ಸಾಮಾನ್ಯರಿಗೆ ಬರುವುದಿಲ್ಲ. ಆದರೂ ಅದೇ ನಮ್ಮ ಧ್ಯೇಯವೆಂದು ತಿಳಿದು ನಿತ್ಯನಾವೆಲ್ಲರೂ ಅದರ ಸಾಧನೆಗಾಗಿ ಬಾಳಿದರೆ, ಅದಕ್ಕಿಂತ ಹೆಚ್ಚಿನದೇನೂ ಬೇಕಿಲ್ಲ. ಮಹಾತ್ಮರ ಮಾರ್ಗದಲ್ಲಿ ಭಾರತವು ನಡೆಯಬೇಕೆಂದು ಒಮ್ಮನದಿಂದ ನಿರ್ಧರಿಸಿ ಒಂದಡಿಯನ್ನಿಟ್ಟರೂ ಸಾಕು; ಹಿಂದು–ಮುಸಲ್ಮಾನರ ಐಕ್ಯ ಸಾಧಿಸಿದಂತೆ.

ಇದರೊಂದಿಗೆ ಇನ್ನೊಂದು ಮಾತು ತಾನೇ ತಾನಾಗಿ ಕೈಗೂಡಿ ಬಂದದ್ದು ದೈವಸಂಕಲ್ಪವನ್ನು ಸೂಚಿಸುತ್ತಿರಬೇಕು. ಎಲ್ಲ ಮುಸಲ್ಮಾನರಿಗೆ ಎಲ್ಲ ಹಿಂದೀಯರೇನೂ ಶತ್ರುಗಳಾಗಿ ಇರಲಿಲ್ಲ. ಎಲ್ಲ ಮುಸಲ್ಮಾನರನ್ನೂ ಎಲ್ಲ ಹಿಂದೀಯರು ದ್ವೇಷಿಸುತ್ತಿರಲಿಲ್ಲ. ಮುಸ್ಲೀಂ ಲೀಗಕ್ಕೆ ಪ್ರತಿರೋಧಿಯಾಗಿ ರಾಷ್ಟ್ರೀಯ ಸೇವಾಸಂಘವೂ ಹಿಂದೂ ಮಹಾಸಭೆಯೂ ತಲೆಯೆತ್ತಿದುವು. ಹಿಂದೂ ಸಂಘಟನೆಗಳಾದ ಈ ಎರಡೂ ಸಂಸ್ಥೆಗಳು ಎಲ್ಲ ಹಿಂದೂಜನರ ಆದರಕ್ಕೆ ಪಾತ್ರವಾಗಿರದಿದ್ದರೂ ತಿರಸ್ಕಾರಕ್ಕೆ ಗುರಿಯಾಗಿರಲಿಲ್ಲ. ತಳದ ತಳಕ್ಕೆ ಅಂಟಿಕೊಂಡಿದ್ದ ಈ ಹಿಂದೀಯರ ಹೃದಯದ ಕೊಳೆಯನ್ನು ತೊಳೆಯುವುದು ಹಿಂದೀಯರಾದ ಮಹಾತ್ಮರಿಗೆ ಸುಲಭವಾದ ಮಾತಾಗಿರಲಿಲ್ಲ. ದೈವಸಂಕಲ್ಪ ಇಲ್ಲಿ ಸಹಾಯವಾಗಿ ಬಂತು.

ಮಹಾತ್ಮರ ಕೊಲೆಯಲ್ಲಿ ಮೇಲಿನ ಸಂಸ್ಥೆಗಳ ಆತ್ಮನಾಶವೂ ಆಗಿ–ಹಿಂದು–ಮುಸಲ್ಮಾನರ ಐಕ್ಯಕ್ಕೆ ತಡೆಯಾಗಿ ಈ ವರೆಗೂ ನಿಂತಿದ್ದ—ದೊಡ್ಡ ಅಡ್ಡಿಯನ್ನು ದೂರಮಾಡಿತು. **ಹಿಂದೂ–ಮುಸಲ್ಮಾನರ ಐಕ್ಯವಾಯಿತು.**

ಹಿಂದೂ ಸಮಾಜದವನಾದ ನಾನು ಮಹಾತ್ಮರನ್ನು, 'ಹಿಂದೂ' ಎಂದು ಇಟ್ಟುಕೊಂಡೇ ಈ ಲೇಖನ ಬರೆದಿದ್ದೇನೆ. ಗಾಂಧೀ ಮುಸಲ್ಮಾನರೆಂದು ಗ್ರಹಿಸಿಕೊಂಡರೂ ಮೇಲಿನಂತೆ ಬರೆಯಬಹುದೆಂದು ನನಗೆ ತೋರುತ್ತದೆ. ಮನುಷ್ಯನಾದ ನಾನು ನನ್ನಂತೆ ಮನುಷ್ಯರಾಗಿರುವ ಮುಸಲ್ಮಾನರಿಂದ ಇದನ್ನು ಅಪೇಕ್ಷಿಸಬಹುದೆಂದು ತಿಳಿದಿದ್ದೇನೆ.

ಜಯಂತಿಗೆ ಚಂದಾದಾರರಾದರೆ ಸಂಸ್ಕೃತಿ ಬೆಳೆವುದು.
ಜಯಂತಿಯಲ್ಲಿ ಜಾಹೀರಾತು ಕೊಟ್ಟರೆ ಸಂಪತ್ತಿ ಬೆಳೆವುದು.



ಮಗನ ಮನದಳಲು

★

ಮಹಾತ್ಮಾಜಿಯವರ ಕಿರಿಯ ಮಗ ಶ್ರೀ. ದೇವದಾಸ ಗಾಂಧಿಯವರು ಫೆಬ್ರುವರಿ ೫ನೆಯ ದಿನಾಂಕ ರಾತ್ರಿ, ಅಖಿಲ ಭಾರತ ಆಕಾಶವಾಣಿಯ ದಿಲ್ಲಿಯ ಕೇಂದ್ರದಿಂದ ಮಾಡಿದ ಭಾಷಣವಿದು. *

ಇತರ ಅನಾಥಬಾಂಧವನೊಡನೆ, ಈ ನೇರವಾದ ಹಾಗೂ ವಿಶಿಷ್ಟವಾದ ಮಾರ್ಗದಿಂದ ತನ್ನ ದುಃಖವನ್ನೂ ಹಂಚಿಕೊಂಡು ಹೃದಯ ಹಗುರುಮಾಡಿಕೊಳ್ಳುವ ಒಬ್ಬ ಅನಾಥನಾಗಿ ನಾನು ಮಾತಾಡುತ್ತಿದ್ದೇನೆ. ನಮ್ಮೆಲ್ಲರ ಮೇಲೆ ಕಡಿದುಕೊಂಡುಬಿದ್ದ ಈ ಕರಾಳಕತ್ತಲಗೆ ಅವರಿವರೆಂಬ ಭೇದವಿಲ್ಲ. ಕಳೆದ ಶುಕ್ರವಾರ ಸಂಜೆಯಿಂದ ಒಮ್ಮಿಂದೊಮ್ಮೆಲೆ ಕಣ್ಣು ಕಳೆದು ಹೋದ ಅನುಭವ ನನಗೊಬ್ಬನಿಗೇ ಅಲ್ಲವೆಂಬುದನ್ನು ನಾನು ಬಲ್ಲೆ.

ನಮ್ಮಿಬ್ಬರಲ್ಲಿದ್ದ ತಂದೆ-ಮಕ್ಕಳ ಪಾತ್ಸಲ್ಯ ಎಷ್ಟು ಆಳವಾಗಿತ್ತೆಂಬುದನ್ನು ದೇವನೊಬ್ಬನೇ ಅಳೆಯಬಲ್ಲ. ನಾನು ಇಪ್ಪತ್ತನೆಯ ಪರಯದಲ್ಲಿ ವಿಶೇಷ ವಿದ್ಯಾಭ್ಯಾಸಕ್ಕೆಂದು ಬನಾರಸಕ್ಕೆ ಹೊರಟು ನಿಂತಾಗ, ಅವರು ಅವಸರವಾಗಿ ನನ್ನ ಮುಂದಲೆಗೆ ಮುತ್ತಿಟ್ಟ ಸನ್ನಿವೇಶ ನನಗಿನ್ನೂ ನೆನಪಿದೆ. ಅದಕ್ಕೂ ಪೂರ್ವದಲ್ಲಿ ನನ್ನ ಅವರು ಮುತ್ತಿಟ್ಟ ಸಂದರ್ಭ ಯಾವುದೂ ಅಷ್ಟೊಂದು ಸ್ಪಷ್ಟವಾಗಿ ನೆನಪಿಲ್ಲದಿರುವುದು ವಿಚಿತ್ರ.

ಅವರು ದಿಲ್ಲಿಯಲ್ಲಿದ್ದ ಈ ಕೆಲವು ತಿಂಗಳಲ್ಲಿ, ನನ್ನ ಮೂರ ವರ್ಷದ ಮಗು ಗೋಪಿಗೆ ಅವರ ಮುದ್ದಾಟದ ಭಾಗ್ಯ ಲಭಿಸಿತು. ನಾನಂತೂ ಹಳಬನಾಗಿಬಿಟ್ಟಿದ್ದೆ. ನಾವು ಬಿರ್ಲಾಭವನಕ್ಕೆ ಬರುವುದು ತಪ್ಪಿದಾಗಲೆಲ್ಲ ಗೋಪುವಿಗಾಗಿ ಅವರು ಚಡಪಡಿಸುತ್ತಿದ್ದರು. ನಾನು ಬರಲಿ, ಬಿಡಲಿ, ಗೋಪು ಇಲ್ಲದಿದ್ದರೆ ಅವರು ಭಣಭಣ ಎನಿಸುತ್ತಿತ್ತೆಂದು ಅವರೊಮ್ಮೆ ಹೇಳಿದರು. ಈಗ ಮಗು, ತನ್ನ ಅಜ್ಜ ತನ್ನನ್ನು ಕರೆಯುತ್ತಿದ್ದ ರೀತಿಯನ್ನು ಅನುಕರಿಸಿ ತುಟಿ ಮುಂದೆಚಾಚಿ ತೋರಿಸುವಾಗ, ನಮ್ಮ ಕಣ್ಣೀರು ಉಕ್ಕಿಬರುತ್ತವೆ. ಇಷ್ಟಿದ್ದರೂ ಗಾಂಧೀಜಿಯವರಿಗೆ ತಮ್ಮ ಕುಟುಂಬದ ಈ ಸಂಕುಚಿತಕ್ಷೇತ್ರದಲ್ಲಿ ವಿಶೇಷ ಆಸ್ಥೆಯಿದ್ದಿಲ್ಲ. ನಾನಂತೂ 'ಅವರು **ನನ್ನ** ತಂದೆ, **ನನ್ನ** ಮನೆಯ ಜೀವ!' ಎಂಬ ಭಾವನೆಯನ್ನು ಎಂದೋ ಬಿಟ್ಟುಕೊಟ್ಟಿದ್ದೆ. ನಿಮ್ಮೆಲ್ಲರಂತೆ ನಾನು ಅವರನ್ನು ಒಬ್ಬ ಪೂಜ್ಯನಾಥುವೆಂದು ಕಾಣುತ್ತಿದ್ದೆ. ಅವರು ಹೊರಟು ಹೋದ ನಂತರ ಹಬ್ಬಿದ ಕರಾಳಶೂನ್ಯತೆಯನ್ನು, ನಿಮ್ಮಲ್ಲಿ ಒಬ್ಬನಾಗಿ—ನಿಮ್ಮಂತೆಯೆ ನಾನು—ಅನುಭವಿಸುತ್ತಿದ್ದೇನೆ.

ಆದುದರಿಂದ, ಯಾವುದೇ ಬಗೆಯ ಕುಲಗೋತ್ರದ ಇಲ್ಲವೆ ರಕ್ತದ ಸಂಬಂಧವಿಲ್ಲದ ಒಬ್ಬ ಉತ್ತರಧ್ರುವದ ನಿವಾಸಿಯಂತೆ ಈ ಮಹಾತ್ಮನ ದುರಂತವನ್ನು ನಾನು ಕಾಣುತ್ತಿದ್ದೇನೆ. ನನಗೆ ನಮ್ಮ ಮನೆಯವರಿಗೂ ಸುತ್ತ ಕಡೆಯಿಂದ ಬರುತ್ತಿರುವ ಪಾರ್ಥಿವ ಸಾಂತ್ವನ ಸಂದೇಶಗಳು ಅತ್ಯಂತ ಭಾರವಾಗಿವೆ. ಇಂತಹ ಸಂದೇಶಗಳಿಗೆ ಔಪಚಾರಿಕವಾಗಿ ಉತ್ತರ ಕೊಡುವುದು ರೂಢಿ. ಆದರೆ ಈ ವ್ಯಸನಂಗದಲ್ಲಿ ನನಗೆ ನಿರಂತರವಾಗಿ ಬರುತ್ತಿರುವ ಪ್ರತಿಯೊಂದು ಸಹಾನುಭೂತಿಯ ರಬ್ಬರ್ ಸಂಪೂರ್ಣವಾಗಿ ಕೃತಜ್ಞತೆಯ ಪ್ರತ್ಯುತ್ತರ ಕೊಡುವುದು ನನ್ನ ಕರ್ತವ್ಯವಾಗಿದೆ.

ನಾನು ಬಂದಾಗ ಗಾಂಧೀಜಿಯವರು ತೀರಿಕೊಂಡು ಅರ್ಧಗಂಟೆಯಾಗಿತ್ತು. ಆದರೆ ಅವರ ಮೈ ಇನ್ನೂ ಬೆಚ್ಚಗಿತ್ತು

* ಅನುವಾದಕರು ಶ್ರೀ. ಆರ್. ವಿ. ಕುಲಕರ್ಣಿ ಎಂ. ಎ. ಅವರು:
—ಸಂ. ಜ.



ಮಹಾತ್ಮರ ಮಹಾಯಾತ್ರೆ

ಭಾರತ ಭಾಗ್ಯವಿಧಾತನ ಅಂತಿಮಯಾತ್ರೆಯಿಂದ ದುಃಖಿತವಾದ ವಿಹಂಗ ಸಮೂಹ

ಯಾವಾಗಲೂ ಅವರ ಸೈದೊಗಲನ್ನು ಮುಟ್ಟಿದರೆ, ಮೃದುವಾಗಿ ಕೋಮಲವಾಗಿ ಹತ್ತುತ್ತಿತ್ತು ; ಸಹಜ ಸುಂದರವಾಗಿತ್ತು. ನನ್ನ ಎರಡೂ ಕೈಗಳಿಂದ ಅವರ ರಟ್ಟೆಗಳನ್ನು ಅದುಮಿ ನೋಡಿದೆ. ಏನೂ ನಿಗಿಯೆ ಇಲ್ಲ ಎನ್ನುವಂತಿತ್ತು. ಆದರೆ ನಾಡಿಯ ಮಿಡಿತ ಮಾತ್ರ ನಿಂತುಹೋಗಿತ್ತು. ಆಭಾಳ ತೊಡೆಯ ಮೇಲೆ ತಲೆಯಿಟ್ಟು ಮಲಗಿದಂತೆ ಅಂದೂ ಅವರು ಮಲಗಿದಂತಿತ್ತು. ಪಂಡಿತ ನೆಹರೂ ಹಾಗೂ ಸರದಾರ ಪಟೇಲರು ಅವರ ಬಳಿಯಲ್ಲಿ ತೆನ್ಪಗೆ ಕುಳಿತಿದ್ದರು. ಇತರರನೇಕರು ಮಂತ್ರಿವತನೆಯ ಪ್ರಯತ್ನವಲ್ಲಿದ್ದು ನಡುನಡುವೆ ಬಿಕ್ಕುತ್ತಿದ್ದರು. ನಾನು ತಡಮಾಡಿದ್ದೆ. " ತಂಪೆ, ನಿನ್ನಿಸು " ಎಂದು ಗಾಂಧೀಜಿಯ ಕಿವಿಯಲ್ಲಿ ಪೊರೆಯಿಟ್ಟೆ. ಉತ್ತರ ಬರಲಿಲ್ಲ. ಹಿಂದೆ ಎಷ್ಟೋ ಸಲ ನನ್ನ ತಪ್ಪನ್ನು ಪೊಟ್ಟೆಯಲ್ಲಿ ಹಾಕಿಕೊಂಡ ಈ ದಯಾಳು ತಂದೆ, ಕೊನೆಯ ಒಂದು ಸಲವೂ ನನ್ನ ತಪ್ಪನ್ನು ಕ್ಷಮಿಸಿ, ನನ್ನ ಕಡೆಗೆ ಒಂದೇ ಒಂದು ದಯಾದೃಷ್ಟಿ ಬೀರುವರೆಂದು ಆತುರದಿಂದ ಹಾದಿ ನೋಡಿದೆ. ಆದರೆ ಅವರ ಕಣ್ಣು ಬಿಚ್ಚಲಿಲ್ಲ; ಅವರ ಕಣ್ಣು ತೆರೆಯಲಿಲ್ಲ. ಅವು ನಿರಂತರ ಶಾಂತಿಯನ್ನು ಹುಡುಕಿಕೊಂಡು ಹೊರಟುಹೋಗಿದ್ದವು. ಸಹಾ ಯಮಗೇಡಿಯಾದ ಮಗನಿಗೆ, ಚಿತವಾದ ಅವರೆ ನಿರುದ್ವೇಗದ ಗತಿಯಲ್ಲಿ "ನನಗಿನ್ನು ತೊಂದರೆ-ಯಿಲ್ಲ" ಎಂದು ಹೇಳುವಂತಿತ್ತು ಅವರ ಮುಖಭಾವ.

ಅಂದು ಇಡೀ ರಾತ್ರಿ ನಾವು ಕಣ್ಣಿನೆ ಬಡಿಯದೆ ಕುಳಿತು-ಕೊಂಡೆವು. ಆ ಮುಖದ ಗಂಭೀರಭಾವ, ಆ ದೇಹವನ್ನು ಸುತ್ತುಗಟ್ಟಿದ ದೈವೀಜ್ಯೋತಿಯ ಪ್ರಭಾವಲಯ— ಇವನ್ನು ನೋಡುತ್ತಿರುವಾಗ, ಮರಣದ ಬಗ್ಗೆ ಹೀನರುವುದಾಗಲಿ ಮಂಖಿಸುವುದಾಗಲಿ ಎಂತಹ ಅವಮಿತ್ಯವರ್ತನೆ ಎನಿಸಿತು. ಗಾಂಧೀಜಿಯವರು ಜೀವನವನ್ನಾರಂಭಿಸುವ ಮುನ್ನ "ಮರಣವೆಂಬುದು ಅನು-ಮ ಮಿತ್ರ" ಎಂದು ಹೇಳಿದ್ದು ಪೂರ್ಣ ಸತ್ಯ ಎಂದೂ ನಿಸಿತು.

ಗಾಂಧೀಜಿಗೆ ಧಾರ್ಮಿಕ-ಧಿಯ ಮೇರೆಗೆ ಸ್ನಾನಮಾಡಿಸ ಬೇಕೆಂದು. ಅವರ ಶಾಲನ್ನು ತೆಗೆದೆವು. ಅತ್ಯಂತ ಅಸಹನೀಯ-ವಾದ ಹೃದಯದ್ರಾವಕ ಕ್ಷಣ ಅದು. ಪ್ರಾರ್ಥನೆಗೆ ಹೋಗುವಾಗ ಅವರು ಹೊತ್ತುಕೊಂಡಿದ್ದ ಶಾಲನ್ನು ಬಿಚ್ಚತೊಡಗಿದೆವು. ತುಂಡು-ಬಟ್ಟೆ ಹೊತ್ತರೂ ಅವರು ಯಾವಾಗಲೂ ಅತ್ಯಂತ ಅಚ್ಚುಕಟ್ಟಿನ ವ್ಯಕ್ತಿ. ಆ ದಿನವಂತೂ ಅವರು ಬಹಳ ಜಾಗರೂಕತೆವಹಿಸಿ-ದಂತಿತ್ತು. ಹೊರಗಿನ ಶಾಲಿಗೆ ಪ್ರಾರ್ಥನಾಭೂಮಿಯ ಧೂಳಿ ಹಾಗೂ ಹುಲ್ಲಿನ ಎಸಳು ಅಂಟಿಕೊಂಡಿದ್ದುವು. ಅವು ಯಾವುದೂ ಕಳಚದಂತೆ ಶಾಲನ್ನು ಜೋಕೆಯಿಂದ ಮಡಿಸಿ ಇಟ್ಟೆವು. ಶಾಲಿನ ಮಡಿಕೆಯಲ್ಲಿ ಒಂದು ಗುಂಡಿನ ಗನಸಣಿಗೆ ದೊರೆಯಿತು. ಎಷ್ಟು ಸನಿಹದಿಂದ ಗುಂಡು ಹಾರಿತೆಂಬುದನ್ನು ಅದು ತೋರಿಸುತ್ತಿತ್ತು. ಅವರು ಎದೆಯ ಮೇಲೆ ಹಾಕಿಕೊಂಡಿದ್ದ ಸಣ್ಣಬಟ್ಟೆಯ ತುಂಬಾ ರಕ್ತದ ದೊಡ್ಡ ದೊಡ್ಡ ಕಲೆ ಮೂಡಿದ್ದುವು. ಉಟ್ಟುಕೊಂಡ ಲಂಡ ಧೋತ್ರವನ್ನೊಂದು ಬಿಟ್ಟು ಇತರ ವಸ್ತ್ರಗಳನ್ನೆಲ್ಲ ತೆಗೆಯ ಲಾಗಿ, ನಾವೆಲ್ಲರೂ ಬಲ್ಲ " ಬತ್ತಲೆ ಫಕೀರ " ನಮ್ಮ ಕಣ್ಣಿಗೆ

ಮಹಾತ್ಮರ ಮಹಾಯಾತ್ರೆ

ಮಹಾತ್ಮರ ಕಳೇಬರವು ದಹನವಾಗುತ್ತಿರುವುದನ್ನು ದುಃಖದಿಂದ ನೋಡುತ್ತ ಕುಳಿತ ಭಾರತ ನೇತಾರರ ಬಳಗ

ಬಿಟ್ಟನು. ನಮಗಾಗ ತಡೆಯಲಾಗಲಿಲ್ಲ. ಆ ನೊಳಕಾಲು, ಆ ಕೈ, ಆ ಬಿರಳಿನ ನೋಡಿ, ಆ ಪಾದ—ಎಲ್ಲವೂ ಎಂದಿನಂತೆಯೆ ಇರುವ ಈ ದೇಹವನ್ನು, ಹೀಗೆಯೆ ಉಳಿಸಿಕೊಳ್ಳಬೇಕೆಂಬ ಸೂಚನೆಗೆ ವಿರೋಧ ವ್ಯಕ್ತಮಾಡುವುದೂ ಎಷ್ಟು ದುಸ್ತರವಾಗಿತ್ತು! ಆದರೆ ದೇಹವನ್ನು ಹೀಗೆಯೆ ಕಾಯ್ದಿಟ್ಟಬಗೆ ಹಿಂದೂಭಾವನೆ ಅದನ್ನು ಸಹಿಸುತ್ತಿದ್ದಿಲ್ಲ. ಬಾಪೂಜಿ ನಮ್ಮನ್ನು ಕ್ಷಮಿಸುತ್ತಿದ್ದಿಲ್ಲ.

ನೃತ್ತಪತ್ರಿಕೆಗಳಲ್ಲಿಯ ವಿವರಗಳನ್ನು ಓದಿದ ಮೇಲೆ ಕೂಡ ಅನೇಕರು "ಬಾಪೂಜಿ ಕೂಡಲೆ ಮರಣ ಹೊಂದಿದರೆ?" ಎಂದು ಕೇಳುತ್ತಲಿದ್ದಾರೆ. ಗಾಂಧೀಜಿ ಸಂಜೆಯ ೫–೧೦ ಕ್ಕೆ ತಮ್ಮ ಕೋಣೆಯಿಂದ ಹೊರಬಿದ್ದು ಪ್ರಾರ್ಥನಾಸಭೆಗೆ ಹೊರಟರು. ಆ ಹೊತ್ತಿನ ವರೆಗೆ ಅವರು ಸರದಾರ್ ಪಟೇಲರೊಡನೆ ಮಾತಾಡುತ್ತಿದ್ದರು. ಸಭೆಗೆ ಹೋಗುವ ಮುನ್ನ ಒಂದು ನಿಮಿಷ ವಿಶ್ರಾಂತಿ ಹೊಂದುವುದು ಅವರ ರೂಢಿ. ಆ ದಿನ ವಿಶ್ರಾಂತಿಯಿಲ್ಲದೆ ನೇರ ನಾಗಿ ಹೊರಟರು. ಪ್ರತಿನಿತ್ಯದಂತೆ ಆಭಾ ಹಾಗೂ ಮನೂ ಅವರ ಹೆಗಲ ಮೇಲೆ ಕೈಯೂರಿಕೊಂಡು ಸಭೆಯ ಸೋಪಾನ ಹತ್ತುತ್ತಿರುವಾಗ "ಈ ದಿನ ತಡವಾಯಿತು" ಎಂದು ಗಾಂಧೀಜಿ ನುಡಿದರು. ಅಷ್ಟರಲ್ಲಿ ಆ ಮನುಷ್ಯ ಎಲ್ಲಿಂದಲೋ ಬಂದು ಗಾಂಧೀಜಿಯವರನ್ನು ಎದುರಾದನು. ಅನೇಕರಂತೆ ಅವನೂ ಮಹಾತ್ಮರಿಗೆ ಪಾದಮುಟ್ಟಿ ಸಾಷ್ಟಾಂಗ ನಮಸ್ಕಾರಮಾಡಲು ಬಂದಿರುವನೆಂದು ಭಾವಿಸಿ, ಮನು ಅವನನ್ನು ಸರಿಸಲು ಪ್ರಯತ್ನಿಸಿದಳು. ಆದರೆ ಅವನು ಕೊಸರಿಕೊಂಡು ಮೂರು ಗುಂಡು ಹಾರಿಸಿದನು. ಎಲ್ಲ ಗುಂಡುಗಳೂ ಅವರ ಎದೆಯ ಬಲಗಡೆಗೆ ಹಾಗೂ ಕೆಳಭಾಗದಲ್ಲಿ ನೆಟ್ಟುವು. ಗಾಂಧೀಜಿ ಮುಗ್ಗರಿಸಿದರು. ಅವರೊಡನೆ ಆಭಾಳೂ ಬಿದ್ದಳು. ಆದರೆ ಕೂಡಲೆ ಸಾವರಿಸಿ ಕೊಂಡು ಮಹಾತ್ಮರ ತಲೆಯನ್ನು ತನ್ನ ತೊಡೆಯ ಮೇಲೆ ಇಟ್ಟು ಕೊಂಡಳು. ಅವರ "ರಾಮ ರಾಮ" ಎಂಬುದು ಕೇಳಿಸಿತು. ದಿಙ್ಮೂಢವಾದ ಜನತೆ ಹುಚ್ಚೆದ್ದು ಹಣೆ ಹಣೆ ಗಟ್ಟಿಸಿಕೊಳ್ಳುತ್ತಿರುವಾಗಲೆ ಗಾಂಧೀಜಿಯವರ ಪ್ರಾಣಪಕ್ಷಿ ಹಾರಿಹೋಯಿತು. ಬಹುಶಃ ಇದು ಅವರನ್ನು ಬಿರ್ಲಾಭವನಕ್ಕೆ ಒಯ್ಯುವುದಕ್ಕೆ ೫ ನಿಮಿಷ ಮುಂಚೆ ಆಗಿರಬೇಕು. ಆಮೇಲೆ ಜಂಘಕಾರ ಕವಿಯಿತು.

ಆ ದುರಂತದ ರಾತ್ರಿ, ತಂದೆಯ ಸುತ್ತಲೂ ನಾವು ಕುಳಿತಿರುವಾಗ "ಬೆಳಗಾಗುವುದರೊಳಗಾಗಿ ಗುಂಡಿನ ಗಾಯ ಮುಚ್ಚಿಹೋಗಿ ಮತ್ತೆ ಜೀವ ಮರುಕಳಿಸಬಾರದೆ?" ಎಂದು ನಾನು ಪ್ರಾರ್ಥಿಸಿದೆ; ಮಗು ವಿನಂತಿ ಆಶೆಯಿಂದ ಹಾದಿ ನೋಡಿದೆ. ಆದರೆ ನಿಷ್ಕರುಣ ಕಾಲ ಮೌನವಾಗಿ ಮುಂದುವರಿಯಿತು. ಜಗತ್ತಿನ ಯಾವ ವಸ್ತುವೂ ಅವರ ನಿದ್ದೆಗೆ ಭಂಗ ತರಲಿಲ್ಲ. 'ಈ ದಿನ ಸೂರ್ಯ ಮೂಡಲೇ ಬಾರದು!' ಎಂದುಕೊಂಡೆ. ಆದರೆ ಹೂಗಳು ಬರತೊಡಗಿದುವು. ಕೊನೆಯ ಯಾತ್ರೆಗಾಗಿ ನಾವು ಅವರನ್ನು ಅಲಂಕರಿಸತೊಡಗಿದೆವು. ಅವರ ಎದೆಯನ್ನು ತೆರೆದಿಡಲು ಹೇಳಿದೆ. ಬಾಪುವಿಗೆ ಇಪ್ಪಂತಹ ವಿಶಾಲವಾದ ಎದೆ ಯಾವ ಸೈನಿಕನಿಗೂ ಇದ್ದಿರಲಾರದು. ಆಮೇಲೆ ಸುತ್ತಲೂ ಕುಳಿತುಕೊಂಡು, ಅವರಿಗೆ ಪ್ರೀಯವಾಗಿದ್ದ ಧರ್ಮಗ್ರಂಥಗಳನ್ನೂ, ಮಂತ್ರಗಳನ್ನೂ ಎನ್ನತೊಡಗಿದೆವು. ಬೆಳ್ಳಗೆ ಬೆಳಗಾಗುವವರೆಗೂ ಜನರು ಗುಂಪುಗುಂಪಾಗಿ ಅಂತ್ಯದರ್ಶನಕ್ಕಾಗಿ ಬರುತ್ತಲೆ ಇದ್ದರು. ನಸುಕಿನಲ್ಲಿ ಅವರು ಹರಿಜನಸಿಧಿಗೆ ಕೊನೆಯಸಂಗ್ರಹ ಕೂಡಿಸಿದಂತಾಯಿತು; ಬಂದ ಬಂದವರೆಲ್ಲ ಹೂಗಳನ್ನೂ ಹಣವನ್ನೂ ಕೂಡಿಸಿ ಮುಳಿಗರೆದು ಹೋಗುತ್ತಿದ್ದರು.

ಮುನ್ನಾದಿನ ರಾತ್ರಿ ನನಗೊಂದು ಅಲಭ್ಯ ಲಾಭ:—ಅವರೊಡನೆ ಏಕಾಂತದಲ್ಲಿ ಮಾತಾಡುವ ಒಂದು ಕ್ಷಣದ ಸುಯೋಗ ದೊರಕಿತ್ತು. ಪ್ರತಿನಿತ್ಯದಂತೆ ರಾತ್ರಿ ೯–೩೦ಕ್ಕೆ ನಾನು ಹೋದೆ. ಅವರು ಮಲಗುವ ತಯಾರಿಯಲ್ಲಿದ್ದರೂ, ಮರುದಿನ ವರ್ಧಾಕ್ಕೆ ಹೋಗುವ ಆಶ್ರಮವಾಸಿಗಳೊಬ್ಬರಿಗೆ ಬೇಗನೆ ಹೊರಡಲು ತಿಳಿಸುತ್ತಿದ್ದರು. ನಾನು ಒಳಗೆ ಹೆಜ್ಜೆ ಇಡುತ್ತಲೆ "ಏನು ಸುದ್ದಿ?" ಎಂದು ನನ್ನನ್ನು ಬರಮಾಡಿಕೊಂಡರು. ನಾನು ಪತ್ರಿಕಾಕರ್ತನೆಂದು ಯಾವಾಗಲೂ ನನಗೆ ಎಚ್ಚರಿಕೆ ಕೊಡುವ ರೂಢಿ ಅದು. ಆ ಎಚ್ಚರಿಕೆಯನ್ನು ನಾನು ಸಂಪೂರ್ಣವಾಗಿ ಅರಿತುಕೊಂಡೂ ಇದ್ದೆ. ಅವರು ನನ್ನಿಂದ ಏನೂ ಬಚ್ಚಿಟ್ಟುಕೊಳ್ಳುತ್ತಿದ್ದಿಲ್ಲ. ನಾನು ಕೇಳಿದ್ದಕ್ಕೆಲ್ಲ ಸಮರ್ಪಕವಾಗಿ ಉತ್ತರ ಕೊಡುತ್ತಿದ್ದರು. ಒಮ್ಮೊಮ್ಮೆ ತಾವಾಗಿಯೆ ಹೇಳುತ್ತಿದ್ದರು. ಆದರೆ ಸಾಮಾನ್ಯವಾಗಿ, ನಾನೇ ಏನಾದರೂ ಉದ್ದೇಶಪೂರ್ವಕವಾಗಿ ಕೇಳದೆ ಅವರು ಏನೊಂದನ್ನೂ ಹೇಳುವ ರೂಢಿಯಿರಲಿಲ್ಲ. ಆ ದಿನ ನನಗೆ ಕೇಳತಕ್ಕ ಸುದ್ದಿಯೇನೂ ಇದ್ದಿಲ್ಲ. ಆದ್ದರಿಂದ "ರಾಜ್ಯದ ರಥ ಹೇಗೆ ಸಾಗಿದೆ?" ಎಂದು ನಾನು ಕೇಳಿದೆ.

ಅದಕ್ಕೆ ಉತ್ತರವಾಗಿ "ಚಿಕ್ಕ ಪುಟ್ಟ ಮತಭೇದಗಳು ಹೊರಟು ಹೋಗುತ್ತವೆಂದು ನನಗೆ ಭರವಸೆಯಿದೆ. ಆದರೆ ನಾನು ವರ್ಧಾದಿಂದ ತಿರುಗಿ ಬರುವವರೆಗೂ ಕೆಲವು ವಿಷಯ ಬಗೆಹರಿಯಲಿಕ್ಕಿಲ್ಲ. ಅದೂ ಬಹಳ ತಡವಾಗುವುದಿಲ್ಲ. ಸರಕಾರದಲ್ಲಿ ದೇಶಭಕ್ತರೇ ಇರುವುದರಿಂದ, ದೇಶದ ಹಿತಕ್ಕೆ ಬಾಧೆ ಬರುವಂತಹ ಯಾವ ಕೆಲಸವನ್ನೂ ಅವರು ಮಾಡಲಾರರು. ಏನೇ ಆದರೂ ಅವರಲ್ಲಿ ಒಕ್ಕಟ್ಟು ಇರಬೇಕು; ಅದು ಇದೆ. ಮೂಲತಃ ಮತಭೇದವೇನೂ ಇಲ್ಲ," ಎಂದು ಅವರು ಹೇಳಿದರು. ಹೀಗೆಯೆ ಕೆಲಹೊತ್ತು ಮಾತು-ಕತೆ ನಡೆದುವು. ನಾನು ಇನ್ನೂ ತುಸು ಹೊತ್ತು ನಿಂತಿದ್ದರೆ ಇಂತಹ ಹೊತ್ತಿನಲ್ಲಿಯೂ ಜನ ಗುಂಪುಗಟ್ಟುವ ಸಂಭವವಿತ್ತು. ಆದ್ದರಿಂದ ಹೊರಟು ನಿಂತು "ಬಾಪು ಇನ್ನು ನೀವು ಮಲಗುವಿರಾ?" ಎಂದೆ. ಅದಕ್ಕೆ ಅವರು, "ಇಲ್ಲ, ಅವಸರವೇನೂ ಇಲ್ಲ. ನಿನಗೆ ಇಷ್ಟವಿದ್ದರೆ ಇನ್ನೂ ಕೆಲವು ಹೊತ್ತು ಮಾತಾಡಬಹುದು" ಎಂದರು. ಮರುದಿನ ಮತ್ತೆ ಮಾತಾಡುವ ಭಾಗ್ಯ ನನಗೆ ಉಳಿಯಲಿಲ್ಲ.

ಕೆಲದಿನಗಳ ಹಿಂದೆ ಹೀಗೆಯೆ ರಾತ್ರಿ ಮಾತುಮುಗಿಸಿ ಹೊರಡುವಾಗ ನಾನು "ಪ್ಯಾರೇಲಾಲರನ್ನು ನನ್ನೊಡನೆ ಊಟಕ್ಕೆ ಕರೆದೊಯ್ಯುತ್ತೇನೆ" ಎಂದಿದ್ದೆ. ಆಗ ಗಾಂಧೀಜಿ, "ಓಹೋ ಅವಶ್ಯವಾಗಿ ಆಗಲಿ! ಆದರೆ ಎಂದಾದರೂ ನನ್ನನ್ನು ಕರೆಯುವ ವಿಚಾರ ನಿನಗೆ ಬರುತ್ತದೆಯೇ?" ಎಂದು ತುಂಬಾ ನಕ್ಕಿದ್ದರು. ಅವರು ಯಾವಾಗಲೂ ತುಂಬ ನಗುತ್ತಿದ್ದರು.

ನನ್ನ ಮಿತ್ರನೊಬ್ಬನ ಹೆಂಡತಿ ಕೋಮಲತೆ ಹಾಗು ಕಾರುಣ್ಯವ

ಮೂರ್ತಿಯಾಗಿದ್ದವಳು, ನಿನ್ನೆ ನನ್ನನ್ನು ಉದ್ದೇಶಪೂರ್ವಕವಾಗಿ ಭೆಟ್ಟಿಯಾಗಿ "ನಿಮ್ಮನ್ನು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ, ಆ ಕೊಲೆಗಡುಕನನ್ನು ಗಲ್ಲಿಗೆ ಹಾಕಿಸಬೇಡಿರಿ. ಆ ಶಿಕ್ಷೆ ಅವನಿಗೆ ಸಾಲದು. ಅವನು ಅನ್ನ ವಿಲ್ಲದೆ ಕೊರಗಿ ಸಾಯುವಂತೆ ಮಾಡಿರಿ!" ಎಂದು ಹೇಳಿದಳು. ಇನ್ನೊಬ್ಬರು ಹೇಳಿದರು:—"ನಾವು ಸುಸಂಸ್ಕೃತರಾದ್ದರಿಂದ ಅವನನ್ನು ಹಿಂಸಿಸಲಾರೆವು. ಅವನು ತನ್ನ ಪಾಪದ ಹೊರೆಯನ್ನು ಹೊತ್ತು ಪಾಶ್ಚಾತ್ತಾಪ ಪಡುವುದನ್ನು ನೋಡಬೇಕಾಗಿದೆ" ಎಂದು. ಒಬ್ಬ ತಮ್ಮನನ್ನೋ, ಮಗನನ್ನೊ ಹೇಗೆ ಶಪಿಸಬೇಕೋ ಹಾಗೆ ಅವನನ್ನು ನಾನು ಶಪಿಸುತ್ತೇನೆ. ಏಕೆಂದರೆ ಬಾಪೂಜಿಗೆ ಅವನೂ ಒಬ್ಬ ಮಗನಂತೆಯೆ. ಅವನೊಬ್ಬ ಮೂರ್ಖನೆಂದು ನಾನು ನುಡಿದಿದ್ದೇನೆ. ಆದರೆ ಎಂತಹ ಘಾತಕ ಮೂರ್ಖನು! ಅವನನ್ನು ಮುಂದೂಡಿ ಅವನ ಬೆನ್ನು ಕಟ್ಟಿದ ಇತರ ನೀಚರೂ ಇದ್ದಾರೆ. ಅವರು ಅಸಹನೀಯ ಮೂರ್ಖರು. ಮೂರ್ಖರು ಮಾಡುವ ಪಾತಕ ಎಂತಹುದೊ ಹೇಳಲಾಗುವುದಿಲ್ಲ. ಆದ್ದರಿಂದ ಕಳ್ಳರ ಬಗ್ಗೆ ಎಚ್ಚರಿಕೆ ವಹಿಸುವಂತೆ ಇವರ ಬಗ್ಗೆಯೂ ವಹಿಸಬೇಕು. ಆರ್. ಎಸ್. ಎಸ್.ದ ಬಗ್ಗೆ ನನಗೆ ಅಭಿಮಾನ ನೆನಿಸುತ್ತಿದ್ದ ಕಾಲವೊಂದು ಇತ್ತು. ಅದು ಆರಂಭವಾದ ಕಾಲದಲ್ಲಿ ಶಾರೀರಿಕ ಉನ್ನತಿ, ಕವಾಯಿತು, ಶಿಸ್ತು, ಸಂಘಟನೆ ಮೊದಲಾದುವು ಅವರ ತಳಹದಿಯಾಗಿದ್ದುವು. ಆದರೆ ಅತ್ಯಲ್ಪ ಕಾಲದಲ್ಲಿ ಅದು ಕಾಹಸಿಗರ ಕೈಗೊಂಬೆಯಾಯಿತು. ಅದರಿಂದ ಸ್ವಾರ್ಥಸಾಧನೆ ಮಾಡಿಕೊಂಡು ರಾಜಕೀಯ ಲಾಭ ಪಡೆದುಕೊಳ್ಳಬೇಕೆಂದು ಕೆಲ ವರು ಹೊಂಚು ಹಾಕಿದರು. ಅದರ ಅವನತಿ ಆರಂಭವಾಯಿತು. ಅವರ ಮುಖಂಡರು ಮೊದಲು ಗುಪ್ತವಾಗಿ, ಆಮೇಲೆ ಬಹಿರಂಗವಾಗಿ ಕೂಡ ಘೋರ ನಿಜಾರಗಳನ್ನು ಪ್ರಕಟಿಸತೊಡಗಿದರು. ಹೊನೆಗೆ ಕರಾಳ ಯೋಜನೆಯ ಕ್ರೂರಬೀಜವನ್ನು ಯಾವನೋ ಒಬ್ಬನು ಬಿತ್ತಿ ಬಿಟ್ಟನು.

ಆದರೆ ನಾವು ದುಡುಕಕೂಡದು. ಗಾಂಧೀಜಿಯವರ ಜೀವದ ಮೇಲೆ ಪ್ರಸಂಗ ಬಂದಿದೆಯೆಂದು ತಿಳಿದಿದ್ದರೆ, ಅದನ್ನು ತಪ್ಪಿಸಲು ತಮ್ಮ ಪ್ರಾಣಾರ್ಪಣೆ ನಾಡಲೂ ಸಿದ್ಧರಾಗುವ ಅನೇಕ ಜನರು ಇಂದೂ ಮಹಾಸಭೆ ಹಾಗೂ ಆರ್. ಎಸ್. ಎಸ್.ನಲ್ಲಿ ಇದ್ದಾರೆ. ಈ ಕೊಲೆಯ ಕಾರಸ್ಥಾನ ಮಾಡಿದವರು ಕೆಲವೇ ಕೆಲವು ನೀಚರು. ಅಲ್ಲಲ್ಲಿಯ ಕಾರಸ್ಥಾನಿಗಳೊಡನೆ ಹೊಂಚುಹಾಕಿದ ಕೆಲವು ನಿಹಾರಾಷ್ಟ್ರೀಯರಿಗಾಗಿ ಇಡೀ ಮಹಾರಾಷ್ಟ್ರದ ಮುಖಕ್ಕೆ ಮಸಿ ಳಿಯಲಾಗದು. ಈ ಕಾರಸ್ಥಾನದ ಕೂಟದ ಬಗ್ಗೆ ಇಂದು ರಾತ್ರಿ ನಾನು ಮಾತನಾಡುವ ಸ್ಥಿತಿಯಲ್ಲಿಲ್ಲ. ದುರಭಿಮಾನ, ಅತೃಪ್ತಿ, ನಾಗೂ ಹೊಟ್ಟೆಯುರಿ—ಇವನ್ನು ಬಿಟ್ಟರೆ ಇವರಿಗೆ ಬೇರೆ ಯಾವ ಉದ್ದೇಶವೂ ಇದ್ದಿರಲಾರದು.

ಈ ದುರಂತದ ಸನ್ನಿವೇಶದಲ್ಲಿ ಕೆಲವರು ಮಿಠಾಯಿ ಹಂಚಿ ಂತೋಷ ಪಟ್ಟರಂತೆ. ಎಂತಹ ನಿಕಟ ವಿನೋದ! ಈ ಜನರಿಗೆ ಂದು ನಿಶ್ಚಿತ ಧ್ಯೇಯವಿಲ್ಲ, ಪರಿಣಾಮದ ಜ್ಞಾನವಿಲ್ಲ. ಅನರಿಗೆ ಂಬಲವಾಗಿ ಕೆಲವು ಪತ್ರಿಕೆಗಳೂ ಉಂಟು.

ಬಯಲಿಗೆ ಬಂದು ತಲೆಯೆತ್ತಿ ಸಿರೆಯುವ ಹಾಗೂ ನೈಮರಸಿ ಕೊಂಡು ಅಲ್ಲಲ್ಲಿ ಅಲೆದಾಡುವ ಈ ಎಲ್ಲ ದ್ರೋಹಿಗಳ ಸಮಾಚಾರ ಹೇಗೆ ತೆಗೆದುಕೊಳ್ಳಬೇಕೆಂಬುದನ್ನು ಸರಕಾರ ನೋಡಿಕೊಳ್ಳುತ್ತದೆ. ಅಲ್ಲಿಯೂ ಇಲ್ಲಿಯೂ ಒಂದು ಹಿಡಿಯಷ್ಟು ಇರುವ ಈ ಕೂಟದವರಿಗೆ ಜನತೆ ಏನೂ ಮಾಡಲಾಗದು. ಆ ಕೆಲಸವನ್ನು ನಮ್ಮ ಸರಕಾರವೇ ಮಾಡತಕ್ಕದ್ದು. ಸೇಡು ತೀರಿಸಿಕೊಳ್ಳುವ ಪ್ರಶ್ನೆ ಯಾವ ರೂಪದಲ್ಲಿಯೂ ಏಳುವಂತಿಲ್ಲ. ಅದರಿಂದ ಬಾಪೂ ಬದುಕಿ ಬರುವಂತಿದೆಯೆ? ನಾವು ಯಾದವೀಯುದ್ಧ ಹೂಡಿ ಪರಸ್ಪರರ ರಕ್ತ ಹೀರುವುದನ್ನು ಬಾಪೂಜಿ ಸಹಿಸಿಯಾರೆ? ಇಲ್ಲ.

ಹಿಂದಿನ ಘಟನೆಯನ್ನು ನಿರೀಕ್ಷಿಸಿದಾಗ ನಾವು ಬಾಪುವಿಗೆ ಸಾಕಷ್ಟು ಸಂರಕ್ಷಣೆ ಕೊಡಲಿಲ್ಲವೇನೋ-ಎಂದೆನಿಸಬಹುದು. ಆದರೆ ಬಾಪೂಜಿಯನ್ನು ಬಲ್ಲವರು ಅವರಿಗೆ ಸಂಪೂರ್ಣ ಸಂರಕ್ಷಣೆ ಕೊಡುವುದು ಸಾಧ್ಯವಾದರೂ ಇತ್ತೇ? ಅವರ ಆಯುಷ್ಯದ ೭೮ ವರ್ಷಗಳಲ್ಲಿ ದೇವರ ರಕ್ಷೆಯಲ್ಲದೆ ಇನ್ನಾವ ರಕ್ಷೆ ಅವರಿಗೆ ಇತ್ತು? ಅವರು ಯಾವಾಗಲೂ ಗಂಡಾಂತರಕ್ಕೆ ಎದೆಗೊಟ್ಟೇ ನಿಂತಿರಲಿಲ್ಲವೆ? ನಮ್ಮ ದುಃಖದ ಆವೇಶದಲ್ಲಿ ತಾಳ್ಮೆಗೆಟ್ಟು, ನಾವು ಸಲ್ಲದ ಆರೋಪಗಳನ್ನು—ಅದೂ ನಮ್ಮಂತೆಯೆ ದುಃಖ ಸಂತಪ್ತರಾದವರ ಮೇಲೆ—ಹೊರಿಸಕೂಡದು.

ನಮ್ಮ ಭವಿಷ್ಯತ್ತು ಅಂಧಕಾರಮಯವಾಗಿದೆಯೆಂದು ನಾನು ನಂಬಲಾರೆ. ಭವಿಷ್ಯತ್ತಿನ ಬಗ್ಗೆ ಭರವಸೆಯಿಂದ "ಇದು ಹೀಗೆ" ಎಂದು ಹೇಳಬಲ್ಲ ಎದೆಗಾರಿಕೆ ಪ್ರವಾದಿಗಳ್ಳದೆ ಇನ್ನಾರಿಗೂ ಇಲ್ಲ. ಈಗ ಕಣ್ಣೆದುರಿಗೆ ಕತ್ತಲೆಯೇನೋ ಕವಿದಿದೆ, ನಿಜ! ಆದರೆ ಬಾಪೂಜಿ ಯಾವುದಕ್ಕಾಗಿ ದುಡಿದರೊ ಯಾವುದಕ್ಕಾಗಿ ಮಡಿದರೊ ಆ ಆದರ್ಶಗಳಿಗಾಗಿ ನಾವು ದುಡಿದರೆ ಭವಿಷ್ಯ ಬೆಳಕಾದೀತು. ಅವರಿಂದ ನಾನು ನಿರಾಶಾವಾದಿಯಾಗಿಲ್ಲ. 'ಬಾಪೂಜಿ ಎಂದೆಂದಿಗೂ ನಮ್ಮೊಂದಿಗೇ ಇರಲಿ? ಎಂದು ನಾವು ಹಂಬಲಿಸಿದರೆ ಅವರು ಅದಕ್ಕೆ ಅತ್ಯಾಶೆ ಎಂದೂ ಎನ್ನಬಹುದು. ಈಗ ನಾವು ನಮ್ಮ ಕಾಲ ಮೇಲೆಯೆ ನಿಲ್ಲಬೇಕಾಗಿದೆ. ನಮ್ಮ ಶಕ್ತಿಯಿಂದ ಮುನ್ನಡೆಯಬೇಕಾಗಿದೆ. ದೇವರ ಇಚ್ಛೆ ಏನಿತ್ತೋ ಅವರಂತೆ ಆಯಿತು. ಅದರ ಬಗ್ಗೆ ಭಾವನಾವಶರಾಗಿ ನಿಷ್ಫಲಮುಃಖದಲ್ಲಿ ಕಾಲಕಳೆಯುವುದು ಬೇಡ. ಸ್ವತಃ ಬಾಪೂ ಆನಂದ ಹೊಂದಿದರು. ಇನ್ನೆಂದಿಗೂ ಅವರ ಪಾರ್ಥಿವ ಕಾಯ ನಮ್ಮ ಕಣ್ಣಿಗೆ ಬೀಳಲಾರದು. ಆದರೂ ಅವರ ಆತ್ಮ ನಮ್ಮನ್ನು ಕೈಹಿಡಿದು ನಡೆಯಿಸಿಕೊಂಡು ಹೋಗುತ್ತದೆ. ಈ ನಾಲ್ಕು ತಿಂಗಳಲ್ಲಿ ಅವರು ಹೇಳಿದ ನಿತ್ಯದ ಮಾತುಗಳಲ್ಲಿ ಅವರು ನಮಗೆ ಹೇಳಬೇಕಾದುದೆಲ್ಲವನ್ನೂ ಹೇಳಿಕೊಟ್ಟಿದ್ದಾರೆ. ಜಗಳವಾಡಿ ಸಿಡಿಮಿಡಿಗೊಳ್ಳುವ ಸ್ವಾತಂತ್ರ್ಯ ಪ್ರತಿಯೊಬ್ಬನಿಗೂ ಇದೆ. ಆದರೆ ಅದೇ, ತುಸು ಪ್ರಯತ್ನಮಾಡಿ ಒಟ್ಟುಗೂಡಿದರೆ ನಾವು ಮುಗಿಬಿದ್ದ ಮೋಡಗಳನ್ನು ಚೆದರಿಸಿ ಉದಯಕಾಲದ ವೈಭವವನ್ನು ಕಾಣಬಲ್ಲೆವು.

ಸೋಲರಿಯದ ಶಕ್ತಿ

ಶ್ರೀ. ಎಸ್. ಆರ್. ಮುಳಗಿ ಎಂ.ಎ. ಧಾರವಾಡ

★

ಮಹಾತ್ಮರ ಸಾವು ಕೂಡ ಲೋಕಕ್ಕೆ ಒಂದು ಶ್ರೇಷ್ಠವಾದ ಸತ್ಯದ ಜ್ಞಾನವನ್ನುಂಡಿಕೊಟ್ಟಿದೆ: ಜಾತಿ-ಜಾತಿಗಳ ವರ್ಗ-ವರ್ಗಗಳ ವೈಷಮ್ಯವು ಲೋಕದ ನಾಶಕ್ಕೆ ಕಾರಣವಾಗುತ್ತದೆ.

★

ಜನವರಿ ನೂನತ್ತರ ಸಂಜೆ. ಅದೇ ಸೂರ್ಯಾಸ್ತವಾಗಿ ಭೂದೇವಿಯ ಮುಖವು ಕಪ್ಪಿಟ್ಟಿತ್ತು. ಬರಸಿಡಿಲಿನಂತೆ ಅಂತರಿಕ್ಷವನ್ನು ಭೇಧಿಸುತ್ತ ಬಂತು ಆ ವಾರ್ತೆ—— ಮಹಾತ್ಮರನ್ನು ಕಗ್ಗೊಲೆಗೈದ ದುರ್ವಾರ್ತೆ! ಕೇಳಿ ದಿಙ್ಮೂಢನಾದೆ; ಕೆಲಹೊತ್ತು ಸ್ತಬ್ಧನಾದೆ. ತಲೆಯಲ್ಲಿ ಯೋಚನಾಯಂತ್ರವು ಗಿರಿಗಿರಿ ತಿರುಗಿದಂತಾಯ್ತು. ಒಂದೇ ಯೋಚನೆ—ಒಂದೇ ಪ್ರಶ್ನೆ— ರಾಷ್ಟ್ರಪಿತನ ಕೊಲೆಯಾಗಿ ಹೋಯ್ತೇ?....ಎಂದು. ತಲೆ ಕಾಯ್ದು ಸಿಡಿಯುವಂತಾಯ್ತು. ಮುಖ ಎದೆಯಲ್ಲಿ ಕುದಿಯುತ್ತಿತ್ತು.

ಮನೆಬಿಟ್ಟು ಹೊರಬಿದ್ದೆ. ಸುತ್ತಲೂ ಮಬ್ಬು ಕವಿಯಲಾರಂಭಿಸಿತ್ತು. ದಾರಿಯ ಅಕ್ಕಪಕ್ಕದ ಅಂಗಡಿಗಳೆಲ್ಲ ಮುಖಮುಚ್ಚಿಕೊಂಡಿದ್ದುವು. ಎಲ್ಲೆಲ್ಲೂ ಹಾಹಾಕಾರ; ನಿರಾಶೆಯ ನಿಟ್ಟುಸಿರು. ದಾರಿಯಲ್ಲಿಯ ಜನ ನಡೆಯುವ ಹೆಣಗಳಂತೆ ಕಾಣುತ್ತಿದ್ದರು! ಯಾರಿಗೂ ಯಾರನ್ನೂ ಮಾತನಾಡಿಸುವ ಇಚ್ಛೆಯಿದ್ದಂತೆ ತೋರಲಿಲ್ಲ. ರೇಡಿಯೋ ಆಕ್ರಂದನವಂತೂ ಎದೆಬಿರಿಯುವಂತಿತ್ತು. ಧಾರವಾಡತಾಯಿಯೇ ಬಾಯಳಿದಳುತ್ತಿದ್ದಳು!

ಎಂಟೂವರೆ ಗಂಟೆಗೆ ಪಂಡಿತ ಜವಾಹರರ ಹಾಗೂ ಸರದಾರ್ ಪಟೇಲರ ರೇಡಿಯೋ ಭಾಷಣಗಳನ್ನು ಕೇಳಿದೆ. ಅವು ಭಾಷಣಗಳೇ? ಛೇ—— ತಂದೆಯ ಮರಣಕಾಲದಲ್ಲಿ ಬಿಕ್ಕಿ ಬಿಕ್ಕಿ ದುಃಖಿಸುತ್ತಿದ್ದ ಮಕ್ಕಳ ರೋದನಗಳು! ನಲವತ್ತು ಕೋಟಿ ಭಾರತೀಯರ ದುಸ್ಸಹವಾದ ಶೋಕ-ಸಂತಾಪಗಳನ್ನು ಅವೆರಡು ಗದ್ಗದಿತಕಂತಗಳು ಉಕ್ಕಿಸಿದುವು.

ಗಾಂಧೀಜಿಯವರನ್ನು ಗುಂಡಿಕ್ಕಿಕೊಂದ ಆ ಕೊಲೆಪಾತಕಿ ಹಿಂದುವೆಂದು ತಿಳಿಯಿತು. ಪ್ರಾರ್ಥನಾಸಭೆಗೆ ಹೋಗುವಾಗ, ಜನರ ಗದ್ದಲದಿಂದ ನುಗ್ಗಿ ಬಂದು, ಸಭಿಕರಿಗೆ ಕೈಮುಗಿಯುತ್ತಿದ್ದ ಮಹಾತ್ಮರ ಎದೆಗೆ ಮೂರು ಸಲ ಗುಂಡಿಕ್ಕಿದನಂತೆ ಆ ಪಾಪಿ! ಅಯ್ಯೋ, ಇದೆಂಥ ಪಾಪ! ಇದಾರ ಶಾಪ! ಆಧ್ಯಾತ್ಮದ ನೆಲೆವೀಡೆಂದು ಹೆಸರಾಂತ ಭಾರತದ ಪುಣ್ಯಭೂಮಿಯಲ್ಲಿ ಮಹಾತ್ಮರ ಮೇಲೆಯೂ ಕೈಯೆತ್ತಿ ಘಾತಿಸಬಲ್ಲಂಥ ಮಾನವಮೃಗ ಹಿಂದುಗಳಲ್ಲಿಯೆ ಉದ್ಭವಿಸಿತೇ! ಮನಸ್ಸಿಗೆ. ಹೇಸಿಕೆಯೆನಿಸಿತು.... ಸನಾತನ ಹಿಂದೂ ಸಂಸ್ಕೃತಿಗೆ ಮಹಾತ್ಮರ ವಧೆಯ ಕಲಂಕ ತಟ್ಟಬೇಕೇ? ಈ ಕಲಂಕದಿಂದ ಹಿಂದೂ ಸಂಸ್ಕೃತಿಗೆ ಮುಕ್ತಿ ಎಂದು? ಹೇಗೆ?— ಯೋಚನೆ ಪ್ರಶ್ನಾರ್ಥಕವಾಗಿಯೇ ಉಳಿಯಿತು.

ಅದೇ ಎಂಟು ಹತ್ತು ದಿನಗಳ ಹಿಂದೆ ಪ್ರಾರ್ಥನಾ ಸಭೆಯಲ್ಲಿ ಮಹಾತ್ಮರ ಇದಿರಿನಲ್ಲಿಯೆ ಬಾಂಬು ಸ್ಫೋಟವಾದಾಗ, ಮರುದಿನದ ಸಭೆಯಲ್ಲಿ ಆ ಬಗೆಗೆ ಅವರು ಹೀಗೆ ಹೇಳಿದ್ದರು:— 'ಇಂಥ

ಚಿತೆಯ ಬಳಿಯಲ್ಲಿ

ಭಾರತದಲ್ಲಿ ಎಂದೂ ನೋಡದಂತಹ ನೋಟವಿದು. ಭಾರತದ ಗವರ್ನರ್ ಜನರಲ್‌ರು ಹೀಗೆ ಬರಿನೆಲದ ಮೇಲೆ ಕುಳಿತುದನ್ನು ಯಾರಾದರೂ ಎಂದಾದರೂ ನೋಡಿರುವರೆ?

ಒಂದು ಬಾಂಬುಸ್ಫೋಟದ ಪರಿಣಾಮವಾಗಿ ನಾನು ನೆಲಕ್ಕುರುಳುವುದೇ ಆದಲ್ಲಿ ಬಾಂಬನ್ನು ಎಸೆದವನ ಬಗೆಗೆ ಏನೊಂದೂ ದ್ವೇಷಭಾವನೆ ತಾಳದೆ ನಗೆಮೊಗದಿಂದ ಸಾಯಬಲ್ಲೆನಾದರೆ, ಆಗ ಮಾತ್ರ ನಾನು ಪ್ರಶಂಸೆಗೆ ಅರ್ಹ— ಎಂದು ನುಡಿದಿದ್ದರಲ್ಲದೆ, ಆ ಬಾಂಬೆಸೆದವನನ್ನು ಪೀಡೆಗೆ ಗುರಿಮಾಡದೆ ಅವನನ್ನು ಕರುಣೆಯಿಂದ ನೋಡಬೇಕೆಂದು ಪೋಲೀಸ ಅಧಿಕಾರಿಗಳಿಗೆ ತಿಳಿಸಿದ್ದರಂತೆ. ಈಗ ಗುಂಡು ಬಡಿದಾಗಲೂ ರಾಮನಾಮೋಚ್ಚಾರಣೆಯೊಂದಿಗೆ ಅವರು ನೆಲಕ್ಕುರುಳಿದರು. ಈ ರಾಮನಾಮೋಚ್ಚಾರಣೆಯಲ್ಲಿ ಗುಂಡಿಕ್ಕಿದವನ ಬಗೆಗೆ ಕ್ಷಮಾಚಿಂತನೆ ದಯಾರ್ದ್ರಭಾವ ಇವೆರಡೂ ಅಡಕವಾಗಿದ್ದುವೆಂದು ಹೇಳಬೇಕಿಲ್ಲ. ಕ್ರೈಸ್ತನನ್ನು ಸಿಲುಬೆಗೇರಿಸಿದಾಗ— 'ಓ ದೇವ, ಇವರನ್ನು ಕ್ಷಮಿಸು; ತಾವೇನು ಮಾಡುತ್ತಿರುವರೆಂಬುದನ್ನು ಇವರು ಅರಿಯರು' ಎಂದು ಆ ಮಹಾನುಭಾವನು ನುಡಿದಿದ್ದನಂತೆ. ಮಹಾತ್ಮರ ಈ ಮರಣವೂ ಹೀಗೆಯೇ ಅತ್ಯಂತ ಭಾವಪೂರ್ಣವಾಗಿದೆ; ಚಿತ್ತವೇಧಕವಾಗಿದೆ.

ಮಹಾತ್ಮರು ತಮ್ಮ ಜೀವಿತದ ಕೊನೆಯ ನಿಮಿಷದ ವರೆಗೆ ಮಹಾತ್ಮರಾಗಿಯೇ ಉಳಿದರು. ಅವರ ಈ ಸಾವು ಅವರನ್ನು ಮಾನವತೆ ಮುಟ್ಟಬೇಕಾದ ಅತ್ಯುಚ್ಚ ಆದರ್ಶ ಶಿಖರಕ್ಕೇರಿಸಿತು. ಆದರೆ ಅವರನ್ನು ಕೊಂದ ಪಾಪ ಮಾತ್ರ ಏಂದೂ ಜನತೆಯನ್ನು ಬಿಡದು. ಈ ದುರ್ಘಟನೆಯನ್ನು ಇತಿಹಾಸವು ಮರೆಯಲಾರದು. ಸಹಸ್ರಾರು ತಲೆಮಾರುಗಳ ವರೆಗೆ ನಮ್ಮ ಮುಂದಿನ ಸೀಳಿಗೆಗಳು, ಈ ಪಾಪಕ್ಕಾಗಿ ನಮ್ಮನ್ನು ಕ್ಷಮಿಸಲಾರವು.

ಮಹಾನುಭಾವರಾದ ಬುದ್ಧ-ಯೇಸುಕ್ರಿಸ್ತರ ತರುವಾಯ ಈ ಎರಡು ಸಾವಿರ ವರುಷಗಳಲ್ಲಿ ಕಾಣಲಾರದಂಥ ಆತ್ಮತೇಜಸ್ಸನ್ನು ಮಹಾತ್ಮರು ತೋರಿಸಿದರು. ಸತ್ಯ-ಅಹಿಂಸೆಗಳನ್ನು ತಮ್ಮೆರಡು ಕಣ್ಣಾಗಿಸಿದರಲ್ಲದೆ ಬಿದ್ದ ರಾಷ್ಟ್ರವನ್ನು ಎದ್ದು ನಿಲ್ಲಿಸಿ ಅದಕ್ಕೂ ಆ ಎರಡು ಕಣ್ಣುಗಳನ್ನು ದಯಪಾಲಿಸಿ, ಅವುಗಳ ಮೂಲಕ ವಿಶ್ವಸ್ಥಿತಿಯನ್ನು ನೋಡಹಚ್ಚಿದರು. ತಮ್ಮ ಬಾಳಿನಲ್ಲಿ ಸೂಕ್ಷ್ಮವಾಗಿ ಸತ್ಯಶೋಧನೆ ಹಾಗೂ ಅಹಿಂಸಾ ಪ್ರಯೋಗಗಳನ್ನು ನಡೆಸಿ, ಇಡಿಯ ರಾಷ್ಟ್ರದ ಜನತೆಯನ್ನು ಆ ತತ್ತ್ವ ಪಥದಲ್ಲಿ ನಡೆಯಹಚ್ಚಿದರು. ಅವರ ಆ ದಾರಿಎಂಥದು? ಅದೊಂದು ಖಡ್ಗಧಾರೆ! ಜೋಕೆ-ತೂಕಗಳಿಂದ ಅದರ ಮೇಲೆ ಲೀಲಾಜಾಲವಾಗಿ ನಗುನಗುತ್ತ ತಾವು ಮೊದಲು ನಡೆದು ತೋರಿದರು. ರಾಷ್ಟ್ರವನ್ನು ತಮ್ಮ ಹಿಂದೆ ಬರಲು ಕರೆದರು. ರಾಷ್ಟ್ರದ ಆಧ್ಯಾತ್ಮಬಲವನ್ನು ಜಾಗೃತಗೊಳಿಸಿ ಬಾಳಿನ ಸುಖ-ದುಃಖ, ನೋಲು-ಗೆಲವು, ಶೌರ್ಯ-ಹೇಡಿತನ, ಮಾನಾಪಮಾನ, ಸತ್ಯಾಸತ್ಯ ಮೊದಲಾದ ದ್ವಂದ್ವಗಳಿಗೆ ಹೊಸ ಅರ್ಥಗಳನ್ನೂ ಹೊಸ ಬೆಲೆಗಳನ್ನೂ ಕಲ್ಪಿಸಿ, ಅವುಗಳನ್ನೊಪ್ಪುವಂತೆ ಜನತೆಯ ಚಿತ್ತವೃತ್ತಿಗಳನ್ನು ಸಿದ್ಧಗೊಳಿಸಿದರು. ಎದೆಯಲ್ಲಿ ಮಹಾತ್ಕರವಾದ ಮಹತ್ತರವಾದ ಧೈರ್ಯ-ಸ್ಥೈರ್ಯಗಳಿರದಿದ್ದರೂ ಇಡಿಯ ರಾಷ್ಟ್ರವು ಅವರ ಕರೆಗೆ ಓ ಕೊಟ್ಟು, ಅವರನ್ನು ಹಿಂಬಾಸಿತು. ರಾಷ್ಟ್ರವನ್ನು ಪೆಟ್ಟಿಸಿಂತ ಪಾಶವೀಶಕ್ತಿ ಮಹಾತ್ಮರ ಆತ್ಮಶಕ್ತಿಗೆ ಕೊನೆಗೊಮ್ಮೆ ಬಾಗಿ ದೂರ ಸರಿಯಬೇಕಾಯ್ತು. ರಾಷ್ಟ್ರಕ್ಕೆ ಗೆಲವು ಬಂದಿತು. ರಕ್ತರಹಿತವಾದ ಈ ರಾಜಕೀಯ ಕ್ರಾಂತಿಯನ್ನು ಕಂಡು ಇಡಿಯ ಜಗತ್ತು ಬೆರಗಾಯ್ತು.

ಮಹಾತ್ಮರ ಈ ಆತ್ಮಶಕ್ತಿಯ ಮೂಲವು ಅವರ ಪರಮಾತ್ಮತತ್ತ್ವದಲ್ಲಿತ್ತೆಂಬುದು ಸುಸ್ಪಷ್ಟವಾಗಿದೆ. ಸತ್ಯವೇ ಅವರ ಪರಮಾತ್ಮ. ಆ ಸತ್ಯದೇವನನ್ನು ತಾವು ಕಂಡು ಜಗತ್ತಿಗೆ ಕಾಣಿಸುವುದೇ ಅವರ ಅಂತಿಮ ಧ್ಯೇಯವಾಗಿತ್ತು. ಭರತಖಂಡವು ಅವರ ಕಾರ್ಯರಂಗವಾಗಿದ್ದರೂ ಇಡಿಯ ಮಾನವಲೋಕದ ಕ್ಷೇಮಕಲ್ಯಾಣಗಳಿಗಾಗಿ ಅವರು ತಪಿಸಿದರು. ಮಾನವನ ನೈತ್ಯಿಕ ಶಕ್ತಿಯನ್ನು ಉದ್ಬುದ್ಧಗೊಳಿಸಿ, ಅದರ ಮೂಲಕವಾಗಿ ಭೂಮಿಯ.



ಮೇಲೆ 'ರಾಮರಾಜ್ಯ' ವನ್ನು ಸ್ಥಾಪಿಸಲು ಅವರು ಹೆಣಗಿದರು. ಈ ಹೆಣಗಾಟವೇ ಅವರ ಮುಖ್ಯ ಜೀವನಕಾರ್ಯ---ಭಾರತದ ಸ್ವಾತಂತ್ರ್ಯಯುದ್ಧ ಹಾಗೂ ಅದರೊಡನೆ ಹೂಡಿದ ಹಲವಾರು ಸಾಮಾಜಿಕ ಹೋರಾಟಗಳು ಆ ಮುಖ್ಯ ಜೀವನಕಾರ್ಯಕ್ಕೆ ಅನುಷಂಗಿಕವಾಗಿದ್ದುವು. ಅವರೊಮ್ಮೆ ಹೀಗೆ ಉದ್ಗಾರವೆತ್ತಿದ್ದರು:— 'ಭಾರತದ ಸ್ವಾತಂತ್ರ್ಯಕ್ಕಿಂತ ದೊಡ್ಡದಿದೆ ನನ್ನ ಮಹತ್ತ್ವಾಕಾಂಕ್ಷೆ. ಭಾರತದ ಬಂಧನವನ್ನು ಬಿಡಿಸಿ ಜಗತ್ತಿನ ದುರ್ಬಲವೆನಿಸಿಕೊಳ್ಳುವ ಎಲ್ಲ ಜನಾಂಗಗಳನ್ನೂ ಪಾಶ್ಚಾತ್ಯರ ಹಿಡಿತದಿಂದ ಬಂಧಮುಕ್ತಗೊಳಿಸಲು ಹೆಣಗುವೆ'—ಸತ್ಯದೇವನ ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬ ಮಹಾತ್ಮರ ಹಂಬಲವು ಅದ್ಭುತವಾಗಿತ್ತು.

ಸತ್ಯದೇವನ ಸಾಕ್ಷಾತ್ಕಾರದ ಈ ಮಾರ್ಗದಲ್ಲಿ ಆ ದೇವನೇ ತಮ್ಮ ಮಾರ್ಗದರ್ಶಕ ಎಂದು ಅವರು ನಂಬಿದ್ದರಿಂದ, ಅವರಲ್ಲಿ ನಿರ್ಭಯವೃತ್ತಿ ಅಖಂಡವಾಗಿ ಬೆಳೆದಿತ್ತು. ಮರಣಭೀತಿಯೂ ಅವರಿಗಿರಲಿಲ್ಲ. 'ಮರಣವೆಂಬುದು ಅದೊಂದು ದೇವನ ಅನುಗ್ರಹ. ಅದರಲ್ಲೂ ಸತ್ಯಸಾಧನೆಯಲ್ಲಿ ಮಡಿದ ವೀರನ ಮರಣವಂತೂ ಪರಮಾನುಗ್ರಹ.... ಮರಣವು ನಮ್ಮನ್ನು ಜೀವಿತದ ಯಾತನೆಯಿಂದ ಮುಕ್ತಗೊಳಿಸುವ ಪರಮ ಸ್ನೇಹಿತ. ಮನುಷ್ಯನ ಆತ್ಮೋದ್ಧಾರಕ್ಕೆ ಮರಣವೂ ಜೀವಿತದಷ್ಟೇ ಆವಶ್ಯಕ.'—ಮರಣದ ಬಗೆಗೆ ಇದ್ದ ಮಹಾತ್ಮರ ವಿಚಾರಗಳಿವು.

ಅವರ ಜೀವನದರ್ಶನವೂ ಭವ್ಯವಾಗಿತ್ತು.—'ಜೀವನವೆಲ್ಲದ ರೊಡನೆ ತಾದಾತ್ಮ್ಯ ಹೊಂದುವುದೇ ನನ್ನ ಜೀವನತತ್ತ್ವ. ಎಲ್ಲ ಜೀವಿಗಳೊಡನೆ ಸಾಮರಸ್ಯ ವಡೆದು ಜೀವನದಿರಲ್ಲಿ ಈ ಜೀವನದ ಭವ್ಯ ವೈಭವದಲ್ಲಿ ನಾನು ಲಾಲುಗಾರನಾಗಲು ಬಯಸುವೆ. ಜೀವನವು ಪರಮಾತ್ಮನಿಂದ ಭಿನ್ನವಲ್ಲ.' ಜೀವನದರ್ಶನವು ಹೀಗಿರುವಾಗ, ತಮ್ಮ ಜೀವಿತದ ಬಗೆಗೆ ಮಹಾತ್ಮರು ಎಂದೂ ನಿರಾಸಕ್ತರಾಗಿರಲಿಲ್ಲ.—'ನನ್ನ ಬಾಳಿನ ಪ್ರಗತಿಯನ್ನು ಈಕ್ಷಿಸಿದಾಗ ನಾನು ನನ್ನ ಗುರಿಯನ್ನು ಮುಟ್ಟುವೆನೆಂಬ ಆಶೆ ನನ್ನಲ್ಲಿ ಬಲವತ್ತರವಾಗಿದೆ. ನನ್ನ ಗುರಿಯನ್ನು ನಾನು ಮುಟ್ಟುವ ಮುನ್ನವೇ ನಾನು ಈ ದೇಹದಿಂದ ಮುಕ್ತನಾದುದಾದರೆ ನಾನು ಸೋತೆನೆನ್ನಲಿಕ್ಕಿಲ್ಲ. ಯಾಕೆಂದರೆ ನಾನು ಪುನರ್ಜನ್ಮದಲ್ಲಿ ನಂಬಿಕೆಯಿಟ್ಟವ. ಈ ದೇಹದ ಅಸ್ತಿತ್ವದಷ್ಟೇ ನನ್ನ ಪುನರ್ಜನ್ಮವೂ ಸತ್ಯವಾಗಿದೆ. ಆದ ಕಾರಣ ನನ್ನ 'ಜೀವಿತದ ಹೋರಾಟದ ಒಂದಂಶವೂ ವ್ಯರ್ಥವಾಗಲಾರದು.'— ಎಂದೂ ಸೋಲರಿಯದ ಆಧ್ಯಾತ್ಮ ಶಕ್ತಿಯಿದು!

ಹೀಗೆ ಜೀವನದ ಇತ್ಯರ್ಥವನ್ನೂ ಮರಣದ ಸ್ವರೂಪವನ್ನೂ ಪೂರ್ಣವಾಗಿ ಅರಿತು, ಮಹಾತ್ಮರು ಅವೆರಡನ್ನೂ ಇದಿರಿಸುವ ಸಿದ್ಧತೆಯನ್ನು ಮಾಡಿಕೊಂಡಿದ್ದರಲ್ಲದೆ, ಹಾಗೆ ಇದಿರಿಸಿ ತೋರಿಸಿದರು. ಇಂಥ ಮಹಾತ್ಮರನ್ನು ಕೊಲ್ಲಲ್ಲು ಹೋಗಿ ಆ ಮೂಢನು ತನ್ನನ್ನೇ ಕೊಂದುಕೊಂಡ. ಸತ್ತವರು ಮಹಾತ್ಮರಲ್ಲ, ಆ ಅಜ್ಞಾನಿ!

ಮಹಾತ್ಮರ ಈ ಕೊಲೆಯಿಂದ ಇಂದು ರಾಷ್ಟ್ರದ ಕಣ್ಣು ತೆರೆಯಹತ್ತಿದೆ. ಮಹಾತ್ಮರ ಕೊಲೆಗೆ ಕಾರಣರಾರು?—ಎಂಬೀ ಪ್ರಶ್ನೆ ಭಾರತೀಯರನ್ನೆಲ್ಲ ಕೆಣಕಹತ್ತಿದೆ. ಇದನ್ನು ಪ್ರತಿಯೊಬ್ಬ ಭಾರತೀಯನು ತನ್ನಷ್ಟಕ್ಕೆ ಸ್ವತಂತ್ರವಾಗಿ ನಿರ್ವಿಕಾರ ಬುದ್ಧಿಯಿಂದ ಬಿಡಿಸಿಕೊಂಡು, ದೊರೆತ ಉತ್ತರಕ್ಕನುಗುಣವಾಗಿ ತನ್ನ ವರ್ತನೆಯನ್ನು ತಿದ್ದಿಕೊಳ್ಳುವುದವಶ್ಯ. ವರ್ತನೆ ಮನೋವೃತ್ತಿಯ ನೆರಳು ಮಾತ್ರ. ಆದುದರಿಂದ ಮೊದಲು ತಿದ್ದಿಕೊಳ್ಳಬೇಕಾದುದು ಮನೋವೃತ್ತಿ. ಮಹಾತ್ಮರು ಕಳೆದ ಕಾಲುಶತಮಾನದಿಂದ ಬೋಧಿಸುತ್ತ ಬಂದ ಪ್ರೇಮಸಂದೇಶದ ಅರ್ಥವಿನ್ನೂ ಪೂರ್ಣವಾಗಿ ಖಚಿತವಾಗಿ ನಮಗಾಗಿಲ್ಲವೆಂಬುದನ್ನು ಒಪ್ಪಿಕೊಳ್ಳಬೇಕು. 'ಮಾನವರಲ್ಲಿ ಮೇಲ್ಕೀಳ್ಗಳಿಲ್ಲ. ಇವೆಯೆಂದು ಬಗೆವುದು ಮಾನವತೆಗೂ ದೈವಕ್ಕೂ ದ್ರೋಹ ಬಗೆದಂತೆ'—ಎಂಬ ಅವರ ಉಕ್ತಿ ನಮ್ಮ ಮನಸ್ಸನ್ನು ಮುಟ್ಟಲ್ಲ. ಆದುದರಿಂದಲೆ ನಮ್ಮಲ್ಲಿ ಇನ್ನೂ ಜಾತೀಯತೆಯ ಭೂತದ ಉಚ್ಚಾಟನೆಯಾಗಿಲ್ಲ. ಪರಮತೀಯರ ಬಗೆಗಿರುವ ತಿರಸ್ಕಾರ ಹಾಗೂ ದ್ವೇಷಭಾವನೆಗಳು ನಮ್ಮ ಇಂದಿನ ಜಾತೀಯ ಮನೋವೃತ್ತಿಯನ್ನು ಪೋಷಿಸುತ್ತ ಬಂದಿವೆ. ಹೀಗೆ ಬೆಳೆದು ಬಂದ ಮನೋವೃತ್ತಿಯ ದುರ್ಬೀಜವೊಂದು ಮಹಾತ್ಮರ ಕೊಲೆಗೆ ಕಾರಣವಾಯಿತೆಂಬುದು ಸುಸ್ಪಷ್ಟವಿದೆ. ಒಬ್ಬ ವ್ಯಕ್ತಿ ಮಹಾತ್ಮರಂಥವರ ಮೇಲೆ ಕೈಯೆತ್ತಲಾರ. ಇಂದು ಭರತಖಂಡದ ಪ್ರತಿಯೊಂದು ವ್ಯಕ್ತಿಯ ರಕ್ತನಾಳಗಳಲ್ಲಿ ಸೂಕ್ಷ್ಮವಾಗಿ ಸೇರಿಕೊಂಡ ಜಾತೀಯತೆಯ ವಿಷಕಣಗಳ ಸಮಷ್ಟಿರೂಪದ ಪ್ರತೀಕವೇ ಆ ವ್ಯಕ್ತಿ. ಈ ಬಗೆಯ ಆತ್ಮಶೋಧನೆ ಮಾಡಿಕೊಂಡು ಪ್ರತಿಯೊಬ್ಬ ಭಾರತೀಯನು ಆ ವಿಷದಿಂದ ಮುಕ್ತಿ ಹೊಂದಲು ಪ್ರಾಮಾಣಿಕವಾಗಿ ಯತ್ನಿಸುವುದಗತ್ಯ. ಮಹಾತ್ಮರ ಸಾವು ಇದನ್ನೇ ನಮಗಿಂದು ಬೋಧಿಸುತ್ತಿದೆ. ಈ ವಿಷವನ್ನು ಭಾರತೀಯರ ಮನದಿಂದ ಪೂರ್ತಿಯಾಗಿ ಕಿತ್ತೊಗೆಯಲು ತಮ್ಮ ಜೀವಮಾನದಲ್ಲೆಲ್ಲ ಹೆಣಗಿ, ಕೊನೆಗೆ ತಮ್ಮ ದೇಹವನ್ನೇ ಇದಕ್ಕಾಗಿ ಬಲಿಕೊಟ್ಟಿದ್ದಾರೆ. ಭಾರತೀಯರಿಗಾಗಿ, ಸಕಲಮಾನವ ಜನಾಂಗಕ್ಕಾಗಿ ತಮ್ಮ ಕೊನೆಯ ಪ್ರೇಮಸಂದೇಶವನ್ನು, ತಾವು ಬಿಟ್ಟುಹೋದ ದಿವ್ಯಾಂಬರದಲ್ಲಿ ರಕ್ತಾಕ್ಷರಗಳಿಂದ ಬರೆದಿಟ್ಟು ಹೋಗಿದ್ದಾರೆ. ಅದರರ್ಥವನ್ನು ಬಗೆದು ನೋಡುವ ಕಣ್ಣು ನಮಗೆಬರಲಿ. ಈ ಸಂದೇಶವೇ ನಮ್ಮ ಕಣ್ಣಿಬೆಳಕಾಗಿ ನಮ್ಮನ್ನು ಸತ್ಪಥದಲ್ಲಿ ನಡೆಯಿಸಲಿ.

ರಾಜಕೀಯ ಲೋಕದ ಅವಲೋಕನ

'ರಾಯರ ಅಪ್ಪಾಜಿ'ಯಿಂದ

ಗಾಂಧೀಜಿ ಅವರ ಹೋಗಯ್!

ಸ್ವಾತಂತ್ರ್ಯದ ಹೊಸ್ತಿಲಲ್ಲಿ ಕಾಲಿಟ್ಟ ಹಿಂದುಸ್ತಾನದ ರಾಜಧಾನಿಯಲ್ಲಿ ನಡೆದ ಸಂಗತಿ. ಜಾನೇವಾರಿ ೩೦; ಸಂಜೆ ೫–೧೦. ಮಹಾತ್ಮಾ ಗಾಂಧಿಯವರು ನಿತ್ಯದಂತೆ ಪ್ರಾರ್ಥನಾ ಸಭೆಗೆ ಹೋಗುತ್ತಿರುವಾಗ, ನಾಥೂರಾಮ ವಿನಾಯಕ ಗೋಡಸೆ ಎಂಬವನು ಅವರ ಮೇಲೆ ಮೂರು ಗುಂಡುಗಳನ್ನು ಹಾರಿಸಿದನು. ಎರಡು ಗುಂಡುಗಳು ಅವರ ಹೊಟ್ಟೆಯಲ್ಲಿ ಆರುಪಾರು ಹಾಯ್ದುಹೋದುವು. ಒಂದು ಅವರ ಫುಪ್ಫುಸದಲ್ಲಿ ಸಿಕ್ಕಿತು. 'ರಾಮ ರಾಮ' ಎಂಬ ಹೊರಟ ಶಬ್ದಗಳೇ ಮಹಾತ್ಮರ ಕೊನೆಯ ಶಬ್ದಗಳು. ಬಹುತರ ತತ್‌ಕ್ಷಣವೆ ಅವರ ಪ್ರಾಣಪಕ್ಷಿಯು ಹಾರಿ ಹೋಗಿರ ಬೇಕು. ಒಬ್ಬ ನರಾಧಮನ ನೀಚಕೃತ್ಯದಿಂದ ಸಮಸ್ತ ಭಾರತವು ಶೋಕಸಾಗರದಲ್ಲಿ ಮುಳುಗಿತು. ಇಡೀ ಮಾನವಕುಲವು ಹಳಹಳಿಸಿತು. ಮೋಡವಿಲ್ಲದ ಆಕಾಶದಿಂದ ಒಮ್ಮೆಲೆ ಸಿಡಿಲುಬಿದ್ದಂತಾಯಿತು. ಮಹಾತ್ಮರ ಮರಣವು ಎಷ್ಟು ಆಕಸ್ಮಿಕವಾಯಿತೊ ಅಷ್ಟೇ ಅದು ದುಃಖದಾಯಕ. ಅವರ ಕೊಲೆಯು ಇವೆರಡರ ನಾಲ್ಕರಷ್ಟು ಖಂಡನೀಯ.

ತಮ್ಮ ೭೮ ವರ್ಷದ ಆಯುಷ್ಯದಲ್ಲಿ ಮಹಾತ್ಮಾ ಗಾಂಧಿಯವರು ಮಾಡಿದ ಅಲೌಕಿಕ ಮಹತ್ಕಾರ್ಯವನ್ನು ಈ ಮಾಸಿಕ ವರದಿಯಲ್ಲಿ ಹೇಳಲು ಯತ್ನಿಸುವುದೆಂದರೆ, ಗಿಂಡಿಯಲ್ಲಿ ಆನೆಯನ್ನು ಸೇರಿಸಲು ಯತ್ನಿಸಿದಂತೆಯೇ ಸರಿ. ಕೇವಲ ಹಿಂದೀಯರ ದೃಷ್ಟಿಯಿಂದ— ಅದು ಕೂಡ ರಾಜಕೀಯ ದೃಷ್ಟಿಯಿಂದ— ಹೇಳುವುದಾದರೆ, ಅವರು ಕುಂಭಕರ್ಣನ ನಿದ್ರೆಯಲ್ಲಿದ್ದ ಒಂದು ದೇಶದ ಮೃತ್ತಿಕೆಯಿಂದ ಮಹಾವೀರರನ್ನು ನಿರ್ಮಿಸಿದರು. ಹಿಂದೂ ಸಮಾಜದಲ್ಲಿಯ ಕೊಳಚೆಯನ್ನು ತೆಗೆದೊಗೆದು, ಅದಕ್ಕೆ ಪಾವಿತ್ರ್ಯದ ಗಂಗಾಸ್ನಾನವನ್ನು ಮಾಡಿಸಿದರು. ಜನರ ನೈತಿಕಮಟ್ಟವನ್ನೆತ್ತರಿಸಿದರು. ದೇಶಕ್ಕೆ ಸ್ವಾತಂತ್ರ್ಯವನ್ನು ಜೊಕೆಸಿಕೊಟ್ಟರು. ದಾಸ್ಯದಲ್ಲಿ ತೊಳಲಿದವರಿಗೆ ಸ್ವತಂತ್ರ ಸರಕಾರವನ್ನು ನಡೆಯಿಸುವ ಧೈರ್ಯ-ವಿಶ್ವಾಸಗಳನ್ನು ತಂದುಕೊಟ್ಟರು. ಜಗತ್ತಿನ ವಿಶಾಲದೃಷ್ಟಿಯಿಂದ, ತಾತ್ತ್ವಿಕದೃಷ್ಟಿಯಿಂದ ನೋಡಿದರೆ, ಹಿಂಸೆಯಲ್ಲಿ ಮುತ್ತು ಹಿಂಸೆಯಿಂದ ಮುತ್ತವಾದ ಜಗತ್ತಿಗೆ ಮಾನವತೆಯ ಅಹಿಂಸೆಯ ಮುತ್ತು ಪ್ರೇಮದ ಹೊಸ ಹೆದ್ದಾರಿಯನ್ನು ತೋರಿಸಿದರು. ಭುಜಬಲವೆ ಶ್ರೇಷ್ಠವೆಂದು ಸಡ್ಡು ಹೊಡೆಯುತ್ತಿರುವ ಜಗತ್ತಿಗೆ ಅವರು, ಆಧ್ಯಾತ್ಮಿಕಸಾಮರ್ಥ್ಯವನ್ನು ಸಪ್ರಯೋಗವಾಗಿ ತೋರಿಸಿದರು.

ಇಂದಿನ ನರ-ನಾರಾಯಣರ ನಗೆ

ಭಾರತದ ಶಿಲ್ಪಿಗಾರ ಪಂಡಿತ ಜವಾಹರಲಾಲ ನೆಹರು ಅವರು; ಲೋಕದ ಶಿಲ್ಪಿಗಾರರಾಗಿದ್ದ ಅವರ 'ಬಾಪೂಜಿ' ಅವರು.

ಮುಂದೇನು ?

ಮಹಾತ್ಮರು ಹೋಗಿ ೨೪ ತಾಸುಗಳಾಗುವುದರೊಳಗಾಗಿ 'ಆವರು ಇದ್ದಿದ್ದರೆ!' ಎನಿಸತೊಡಗಿತು. ಸದ್ಯದ ಪರಿಸ್ಥಿತಿಯಲ್ಲಿ ಅವರ ಅವಶ್ಯಕತೆ ಬಹಳವಿದ್ದಿತು. ಅಂತಸ್ಕಲಹ, ಪಾಕಿಸ್ತಾನ-ದೊಡನೆ ಅಪ್ರತ್ಯಕ್ಷಯುದ್ಧ, ಆಹಾರಬಟ್ಟೆಗಳ ಕೊರತೆ, ಆರ್ಥಿಕ ದುಃಸ್ಥಿತಿ, ನಿರಾಶ್ರಿತರ ಪುನರ್ನಿವೇಶ ಮೊದಲಾದ ಗುಡ್ಡದಂತಹ ಸಮಸ್ಯೆಗಳು ದೇಶವನ್ನು ಎದುರಿಸುತ್ತಿದ್ದಾಗ, ಅವರ ಮಾರ್ಗ-ದರ್ಶನವು ಅತ್ಯವಶ್ಯವಾಗಿದ್ದಿತು. ಹಿಂದಿನ ಋಷಿಗಳ ತಪೋವನ-ದಲ್ಲಿ ಪಶು-ಪಕ್ಷಿಗಳು ತಮ್ಮ ನೈಸರ್ಗಿಕವೈರವನ್ನು ಮರೆತು ಕೂಡಿಯೆ ಇರುತ್ತಿದ್ದುವು: ಸಿಂಹವು ಆಕಳ ಗಂಗೆದೊಗಲನ್ನು ನಕ್ಕುತ್ತಿತ್ತು—ಚಿಗರೆಯ ಮರಿಗಳು ಹುಲಿಯ ಮರಿಗಳೊಡನೆ ಆಡುತ್ತಿದ್ದುವು ಎಂದು ಕೇಳಿದ್ದೇನೆ. ಮಹಾತ್ಮರ ಆಶ್ರಯದಲ್ಲಿ ಅನೇಕ ಮುಖಂಡರು ತಮ್ಮ ಭೇದಭಾವಗಳನ್ನು ಮರೆತು, ರಾಷ್ಟ್ರಕಾರ್ಯದ ನೊಗವನ್ನು ಎತ್ತುತ್ತಿದ್ದರು. ಜನರನ್ನು ಒಂದುಗೂಡಿಸುವ ಈ ಮಹಾಶಕ್ತಿ ಇನ್ನು ಇಲ್ಲದಂತಾಯಿತು.

ಜಾತೀಯತೆಯನ್ನು ತೊಡೆದುಹಾಕಲು ಯತ್ನಿಸಿದ ಮಹಾತ್ಮರ ಕೊಲೆಯ ಪರಿಣಾಮವಾಗಿ,ಉಪಜಾತೀಯತೆಯು ಭೀಕರಸ್ವರೂಪ-ವನ್ನು ತಾಳಿ ತಲೆಯೆತ್ತಿತು. ಮಹಾತ್ಮರನ್ನು ಕೊಲೆ ಮಾಡಿದ 'ಗೋಡಸೆ' ಎಂಬವನು ಬ್ರಾಹ್ಮಣನೆಂದು, ಬಹುದಿನಸಗಳಿಂದ ಸನಾಧಿಯಲ್ಲಿದ್ದ ಬ್ರಾಹ್ಮಣ–ಬ್ರಾಹ್ಮಣೇತರ ಉಪಜಾತೀಯತೆಯು ಧುತ್ತೆಂದೆದ್ದಿತು. ಗೋಡಸೆಯು ಬ್ರಾಹ್ಮಣನೆಂದು ಸಾರಿ ಸಾರಿ ಹೇಳಲಾಯಿತು. ಉಪಜಾತೀಯತೆಯು ಉಪ್ಪೋವಜಾತೀಯತೆಗೂ ಇಂಬುಗೊಟ್ಟಿತು. ಪ್ರಾಂತೀಯತೆಗೂ ಕಾರಣವಾಯಿತು. ಗೋಡಸೆ ಮಹಾರಾಷ್ಟ್ರೀಯನೆಂದೂ ಕೊಂಕಣಸ್ಥ ಚಿತ್ತಪಾವನ ಬ್ರಾಹ್ಮಣನೆಂದೂ ಪ್ರಸಿದ್ಧವಾಗತೊಡಗಿತು. ಅವನು ಶಾಂಡಿಲ್ಯ ಗೋತ್ರದವನೆಂದೂ ಕೂಡ ಪ್ರಸಿದ್ಧವಾಯಿತಂತೆ. ಈ ಜಾತೀಯತೆ, ಉಪಜಾತೀಯತೆ, ಉಪ್ಪೋವಜಾತೀಯತೆ, ಪ್ರಾಂತೀಯತೆಯ ಪರಿಣಾಮವಾಗಿ ನಡೆದ ಕೊಲೆ-ಸುಲಿಗೆಗಳನ್ನು ನೋಡಿ, ಮಹಾತ್ಮರು ಇದ್ದಿದ್ದರೆ ಕ್ಷಣಾರ್ಧದಲ್ಲಿ ಇವನ್ನೆಲ್ಲ ತಪ್ಪಿಸುತ್ತಿದ್ದರೆಂದು ಎನಿಸು-ವಂತಾಯಿತು. ಜಾತೀಯತೆಯು ಅರಾಜಕತೆಯಾಗಿ ಪರಿಣಮಿಸಿದ ನೋಟಂತೂ ಈ ಸಾತು ಮತ್ತಷ್ಟು ಸ್ಪಷ್ಟವಾಗತೊಡಗಿತು. ಸಂಧಿವಾಧಕರು ಕೊಲೆ-ಸುಲಿಗೆಗಳಿಗೆ ಕೈಹಾಕಿದರು. ಒಂದು ಪ್ರಸಂಗವಲ್ಲದಂತೂ ಒಂದು ಪ್ರಚಂಡ ಜನಸಮುದಾಯವು ಪ್ರಳಯವನ್ನೆ ಎಬ್ಬಿಸಿ ಸರಕಾರಕ್ಕೆ ಅಡ್ಡಾನಕೊಟ್ಟಿತು !

'ಮಹಾತ್ಮಾ ಗಾಂಧಿಯವರಿಲ್ಲದೆ ನಾವು ಮುಂದೆ ಸಾಗಬಹುದೆ?' ಎಂಬ ವಿಚಾರವು ಹೆಚ್ಚೆಹೆಚ್ಚಿಗೆ ಕ್ಷಣಕ್ಷಣಕ್ಕೆ ಬರತೊಡಗಿತು. 'ತಂದೆ ಹೋದ ಮೇಲೆ ಮಕ್ಕಳು ತಾವಾಗಿಯೇ ಅವನ ಕಾರ್ಯವನ್ನು ಕೈಕೊಳ್ಳಲು ಮುಂದೆ ಬರುವಂತೆ, ನಾನು ಹೋದ ಮೇಲೆ ನನ್ನ ಕಾರ್ಯವನ್ನು ಮುಂದೆ ಸಾಗಿಸಲು ಜನ ಬಾರದಿರರು' ಎಂದು ಅವರೆ ಹೇಳಿದ ಮಾತು ಬಹಳ ಆಶಾದಾಯಕವಾಗಿದೆ. ಮಹಾತ್ಮರು ದೇಹದಿಂದ ನಮ್ಮೊಡನೆ ಇಲ್ಲದಿದ್ದರೂ ಅವರು ಹಾಕಿಕೊಟ್ಟ ದಾರಿ ಇದ್ದೆ ಇದೆ. 'ಮಹಾತ್ಮಾ ಅಮರಹೋಗಯೇ !' ಅವರ ಕೀರ್ತಿಯೇ ನಮಗೆ ಮಾರ್ಗದರ್ಶನ ಮಾಡಲಿ.

ವಿಲೀನೀಕರಣದ ಪೂರ್ತಿ

ದಕ್ಷಿಣ ಸಂಸ್ಥಾನಗಳ ಅಧಿಪತಿಗಳು,ಸಂಯುಕ್ತ ದಕ್ಷಿಣ ಸಂಸ್ಥಾನ-ವನ್ನು ವಿಧಿಪೂರ್ವಕವಾಗಿ ವಿಸರ್ಜಿಸಿ ವಿಲೀನೀಕರಣದ ಒಡಂಬಡಿ-ಕೆಗೆ ಸಹಿ ಹಾಕಿದರು. ಮಾರ್ಚ್ ೧೧ ರಿಂದ ಆಕ್ಕಲಕೋಟ, ಔಂಧ, ಭೋರ, ಜಮಖಂಡಿ, ಜತ್ತ, ಕುರುಂದವಾಡ (ಹಿರಿ ಮತ್ತು ಕಿರಿ) ಮುಧೋಳ, ಮಿರ್ಜಿ (ಹಿರಿ ಮತ್ತು ಕಿರಿ) ಫಲ್ಟನ, ರಾಮದುರ್ಗ, ಸಾಂಗಲಿ, ಸವಣೂರು ಮತ್ತು ವಾಡಿ ಈ ಸಂಸ್ಥಾನ-ಗಳು ಮುಂಬಯಿ ಪ್ರಾಂತದಲ್ಲಿ ವಿಲೀನವಾಗಲಿದ್ದುವು; ಕಾರ-ಣಾಂತರದಿಂದ ಕೆಲವು ದಿನ ಮುಂದೆ ಬಿದ್ದಿತ್ತು ಇಷ್ಟೆ. ಸಂಯುಕ್ತ ದಕ್ಷಿಣ ಸಂಸ್ಥಾನದ ಯೋಜನೆಗೂ ಸೇರದ ಸಂಸ್ಥಾನಗಳು ಕೂಡ ವಿಲೀನೀಕರಣಕ್ಕೊಪ್ಪಿದಂತಾಯಿತು ಎಂಬುದು ಮೇಲಿನ ವಿಷಯ-ದಿಂದ ಕಂಡುಬರಬಹುದು. ಮಾರ್ಚ್ ಒಂದರ ಮೊದಲೆ ಕೂಡ ಕೆಲವು ಸಂಸ್ಥಾನಗಳು ಮುಂಬಯಿ ಸರಕಾರದ ಆಡಳಿತಕ್ಕೆ ಅಧೀನ-ವಾದುವು. ಮಹಾತ್ಮರ ಕೊಲೆಯ ಪರಿಣಾಮವಾಗಿ ಅಥವಾ ಅದರ ನಿಮಿತ್ತ ಮಾಡಿಕೊಂಡು ನಡೆದ ಸಾಮುದಾಯಿಕ ಕೊಲೆ-ಸುಲಿಗೆಗಳನ್ನು ತಡೆಯುವ ಸದುದ್ದೇಶದಿಂದ ಸಾಂಗಲಿ, ಮಿರ್ಜಿ, ಬುಧಗಾಂವ (ಕಿರಿ ಮಿರ್ಜಿ) ಮೊದಲಾದ ಕೆಲವು ಸಂಸ್ಥಾನಗಳು, ತಮ್ಮ ಸಂಸ್ಥಾನಗಳ ಶಾಂತಿ—ಸುರಕ್ಷಿತತೆಯ ಭಾರವನ್ನು ಮುಂಬಯಿ ಸರಕಾರಕ್ಕೆ ಒಪ್ಪಿಸಿದುವು. ವಿಲೀನೀಕರಣದಿಂದ ಬೇರೆ ಲಾಭಗಳಿರಬಹುದು; ಆದರೆ ಮುಖ್ಯವಾದ ಲಾಭನೆಂದರೆ 'ಸಂಸ್ಥಾನದವ' 'ಪ್ರಾಂತದವ' ಎಂಬ ಕೃತ್ರಿಮಭೇದವು ಜನರಲ್ಲಿಲ್ಲವಾಗಿ ಅವರ ಒಕ್ಕಟ್ಟಿಗೆ ಕಾರಣವಾಗುವುದು. ಕೊಲ್ಹಾಪುರ ಸಂಸ್ಥಾನವೊಂದು ಇದೇ ರೀತಿ ವಿಲೀನವಾಗಬೇಕು. ಇತರ ದಕ್ಷಿಣ ಸಂಸ್ಥಾನಗಳು ವಿಲೀನವಾದನಂತರ, ಜನರ ಲಕ್ಷವು ಕೊಲ್ಹಾಪುರ ಸಂಸ್ಥಾನದ ಕಡೆಗೆ–ಅದರ ಅಧಿಪತಿಗಳ ಆಚಾರ ವಿಚಾರಗಳ ಕಡೆಗೆ-ಹೋಗುವುದು ಸಹಜ. ಬೆಳಗಾಂವಿ ಜಿಲ್ಲೆಯಲ್ಲಿ ಕೊಲೆ ಸುಲಿಗೆ ನಡೆಯಿಸಿದವರು ಬಹುತರವಾಗಿ ಕೊಲ್ಹಾಪುರ ಸಂಸ್ಥಾನದವರೆಂದು ವೃತ್ತಪತ್ರಗಳಲ್ಲಿ ಪ್ರಸಿದ್ಧವಾಗಿದೆ. ಇದು ನಿಜವಾದರೆ ಸರಕಾರವು ಆ ಸಂಸ್ಥಾನ ಮತ್ತು ಸಂಸ್ಥಾನಿಕರ ಕಡೆಗೆ ಲಕ್ಷ್ಯ ಪೂರಯಿಸುವುದು ಅವಶ್ಯವೆಂದು ಬೇರೆ ಹೇಳಬೇಕಾಗಿಲ್ಲ.

ಕರ್ನಾಟಕ ಏಕೀಕರಣ

ಕರ್ನಾಟಕ ಏಕೀಕರಣದ ಸಲುವಾಗಿ ಒಂದು ತರದ ಪ್ರತ್ಯಕ್ಷ ಹೋರಾಟವನ್ನು ಪ್ರಾರಂಭಿಸುವ ಮೊದಲು ಕಾಂಗ್ರೆಸಿನ ವರಿಷ

ರನ್ನೂ ಮಹಾತ್ಮಾ ಗಾಂಧಿಯವರನ್ನೂ ಕಾಣುವುದುಚಿತವೆಂದು ಕ. ಪ್ರಾಂ. ಕಾಂ. ಸಮಿತಿಯು ನಿರ್ಧರಿಸಿತು. (೧೪–೧–೪೪) ಮತ್ತು ಈ ನಿರ್ಣಯದನ್ವಯ ಒಂದು ಶಿಷ್ಟಮಂಡಳವನ್ನು ಕಳುಹಿಸಿತು. ನೆರೆಯ ಪ್ರಾಂತಗಳಲ್ಲಿ ತಮ್ಮ ತಮ್ಮಲ್ಲಿ ಗಡಿಗಳ ಬಗ್ಗೆ ಒಪ್ಪಂದ ಮಾಡಿಕೊಂಡು,ಆ ಒಪ್ಪಂದಕ್ಕೆ ಕಾಯಿದೆ ಸ್ವರೂಪ ಕೊಡಬೇಕೆಂದು ಮಹಾತ್ಮರು ಶಿಷ್ಟಮಂಡಳಕ್ಕೆ ತಿಳಿಸಿದರು. (೨೪—೧—೪೪) "ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಪರವಾಗಿ ಪಂ. ನೆಹರೂರವರು ಇದೇ ಮಾತನ್ನೆ ಬೇರೆ ಶಬ್ದಗಳಲ್ಲಿ ಹೇಳಿದರು." ಮಹಾತ್ಮರ ಮರಣದ ತರುವಾಯ ಕರ್ನಾಟಕ ಏಕೀಕರಣದ ಪ್ರಶ್ನೆಯು ಆಲ್ಪ ಸ್ವಲ್ಪ ಹಿಂದೆ ಬಿದ್ದುದು ಸ್ವಾಭಾವಿಕ. ಮಹಾತ್ಮರ ಈ ಉಪದೇಶವನ್ನು ಪಾಲಿಸಲು ಸಂಬಂಧಪಟ್ಟ ಎಲ್ಲ ಪ್ರಾಂತಗಳೂ ಹೆಣಗಬೇಕೆಂದು ಒತ್ತಿ ಹೇಳುವೆನು. ಆದರೆ ಈ ಪ್ರಶ್ನೆಯು ಪರಸ್ಪರ ವಿಚಾರವಿನಿಮಯದಿಂದ, ಒಡಂಬಡಿಕೆಯಿಂದ ಬಗೆಹರಿಯಬಹುದೆಂದು ಎನಿಸುವುದಿಲ್ಲ. ಕಾಶ್ಮೀರದ ಪ್ರಶ್ನೆಯು ಭದ್ರತಾ ಮಂಡಳಕ್ಕೆ ಹೋದಾಗ ಅಲ್ಲಿ ಕೆಲವರು ಹಿಂದುಸ್ತಾನ ಪಾಕಿಸ್ತಾನಗಳು ಪ್ರಶ್ನೆಯನ್ನು ತಮ್ಮ-ತಮ್ಮೊಳಗೆ ಬಗೆಹರಿಸಿಕೊಳ್ಳಬೇಕೆಂದು ಹೇಳಿದರು. ಅದಕ್ಕೆ ಸಮರ್ಪಕ ಉತ್ತರವನ್ನು ಕೊಡಲಾಯಿತು: ಪ್ರಶ್ನೆಯು ಹಾಗೆ ಬಗೆಹರಿಯಬಹುದಾಗಿದ್ದರೆ ಲೇಕಸಭೆಸ್ಸಿಗೆ ಬರುವ ಕಾರಣವೇನಿರುತ್ತಿರಲಿಲ್ಲ. ಪ್ರಾಂತಗಳ ವಿಷಯದಲ್ಲಿಯೂ ಹೀಗೆಯೇ ಹೇಳಿ, ಕಡೆಗೆ ಗಡಿಸಮಿತಿ ನಿರ್ಮಿಸಬೇಕೆಂದು ಸರಕಾರಕ್ಕೆ ಕೇಳುವ ಪ್ರಸಂಗ ಬರಬಹುದೆಂದು ಎನಿಸುವುದು. ಕೇವಲ ಗಡಿಗಳನ್ನು ನಿರ್ಮಿಸಿದರೆ ಆಗದು; ಹೊಣೆ-ಸೊತ್ತುಗಳ ವಿಭಜನೆಯೂ ಆಗತಕ್ಕದ್ದು. ಇದು ನಿಷ್ಪಕ್ಷಪಾತ ನ್ಯಾಯಮಂಡಳ ವಿಲ್ಲದೆ ಸಾಧ್ಯವೆ?

ಸುದ್ದಿ ಸಂಗ್ರಹ

ಭದ್ರತಾ ಮಂಡಳದಲ್ಲಿ ಚರ್ಚಿಸಲ್ಪಡುತ್ತಿದ್ದ ಕಾಶ್ಮೀರ ಪ್ರಶ್ನೆಯು ಮತ್ತಷ್ಟು ಜಟಿಲವಾಗುವುದೆಂಬ ಭೀತಿಯು ತೋರುತ್ತಿದೆ. ಕಾಶ್ಮೀರ ಪ್ರಶ್ನೆಯನ್ನು ಹಿಂದುಸ್ತಾನ-ಪಾಕಿಸ್ತಾನ ಪ್ರಶ್ನೆಯನ್ನಾಗಿಸಿ, ತಾವು ಮೊದಲೆ ವಚನ ಕೊಟ್ಟಂತೆ ಪಾಕಿಸ್ತಾನದ ಪ್ರತಿನಿಧಿ ಸರ್ ಝುಫ್ರುಲ್ಲಾಖಾನರು 'ಎಲ್ಲ ಹೊಲಸನ್ನು ಹೊರಗೆಡವಲು' ಮುಸ್ತಿಸಿದ್ದಾರೆ. ಇದರಿಂದ ಕಾಲವ್ಯಯವಾಗುವುದಲ್ಲದೆ ಸಾಧಿಸ ಬೇಕಾದುದು ಅಸಾಧ್ಯವಾಗಿ ಉಳಿಯುವ ಸಂಭವ ಕಾಣುತ್ತಿದೆ. ಭದ್ರತಾಮಂಡಳಕ್ಕೆ ಕಾಶ್ಮೀರ ಪ್ರಶ್ನೆಯನ್ನು ಒಯ್ದು ಸರಕಾರವು ತನ್ನ ಕಾಲ ಮೇಲೆ ತಾನೇ ಕಲ್ಲು ಚಿಲ್ಲಿಕೊಂಡಿತೇನೊ ಎಂದು ಎನಿಸುತ್ತದೆ.

ಆಯರ್ಲಂಡಿನ ಸ್ವಾತಂತ್ರ್ಯದ ಸ್ತಂಭರೂ ಸುಮಾರು ೧೭ ವರ್ಷಗಳಿಂದ ಅವರ ಮುಖ್ಯ ಪ್ರಧಾನರೂ ಆದ ಡಿ. ವೆಲೆರಾರವರನ್ನು ಸೋಲಿಸಿ, ಜಾನ ಕಾಸ್ಟೆಲ್ಲೊ ಎಂಬ ೫೭ ವರ್ಷದ ಬ್ಯಾರಿಸ್ಟರರು ಆಯರ್ಲಂಡಿನ ಮುಖ್ಯ ಪ್ರಧಾನರಾದರು. ಆಯರ್ಲಂಡಿನ ಪಾರ್ಲಿಮೆಂಟಿನಲ್ಲಿ ಇನ್ನು ಡಿ. ವೆಲೆರಾ ವಿರೋಧಪಕ್ಷದ ಮುಖಂಡರಾಗಿ ಉಳಿಯಲಿರುವರು.

ಸಿಂಹಳವು ಫೆಬ್ರುವರಿ ನಾಲ್ಕಕ್ಕೆ ಸ್ವಾತಂತ್ರ್ಯವನ್ನು ಪಡೆಯಿತು. ಹಿಂದುಸ್ತಾನವು ಸ್ವತಂತ್ರ ನಾದುದರಿಂದ ತಮ್ಮ ಸ್ವಾತಂತ್ರ್ಯ ಸಾಧನೆಯ ಕಾರ್ಯವು ಹಗುರಾಯಿತೆಂದು ಹಿಂದುಸ್ತಾನದಲ್ಲಿಯ ಸಿಂಹಳವ ರಾಯಭಾರಿಗಳು ಹೇಳಿದರು.

(೩೬ನೆಯ ಪುಟದಿಂದ ಮುಂದೆಸಾಗಿದ್ದು)

ಚಾರ್ಯರಿಂದಲೂ ಪಡಿಯಚ್ಚಿನ ನೆರವು ಸ್ವಲ್ಪ ಸಿಕ್ಕಿತು. 'ಸಂಯುಕ್ತ ಕರ್ನಾಟಕ' ಕಾರ್ಯಾಲಯದಿಂದಲೂ ಪಡಿಯಚ್ಚುಗಳು ದೊರೆಯ ಭರವಸೆ ಸಿಕ್ಕಿದ್ದಿತು. ಆದರೆ ಸ್ವಲ್ಪದ ಆಭಾವದ ಮೂಲಕ ಅವರ ಭರವಸೆಯನ್ನು ಉಪಯೋಗಿಸಿಕೊಳ್ಳಬೇಕಾದ ಸಂದರ್ಭ ಬರಲಿಲ್ಲ. ಪಡಿಯಚ್ಚುಗಳ ನೆರವನ್ನು ಕೊಟ್ಟ ನಮ್ಮ ಮಿತ್ರರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ವಿಲಂಬವಾಯಿತು.

ಜಯಂತಿ ಇದುವರೆಗೆ, ಪ್ರತಿ ತಿಂಗಳ ೧೧ನೆಯ ತಾರೀಖಿಗೆ ಪ್ರಕಟವಾಗುವುದಕ್ಕೆ ಎಂದೂ ತಪ್ಪಿರಲಿಲ್ಲ. ಈ ಸಲ ಹೊರಗಿನಿಂದ ಲೇಖನಗಳನ್ನು ತರಿಸಲಿಕ್ಕೆ ದಿನಗಳು ಬೇಕಾದುದರಿಂದಲೂ ಮುದ್ರಣಾಲಯದಲ್ಲಿಯ ಬೇರೆ ಕೆಲಸಗಳ ಒತ್ತಡದ ಮೂಲಕವೂ ೧೧ನೆಯ ತಾರೀಖಿನ ನಿಯಮವನ್ನು ವಿಚಾರಬೇಕಾಯಿತು. ನಮ್ಮ ವಾಜಕವರ್ಗಕ್ಕೆ ದಾರಿ ನೋಡಹಚ್ಚಿದಕ್ಕಾಗಿ ನಮಗೆ ವಿಷಾದ ವೆನಿಸುತ್ತಿದೆ; ಆದರೆ ವಿಲಂಬವಾದರೂ ಒಳ್ಳೆಯ ಸಂಚಿಕೆಯೊಂದನ್ನು ಅವರಿಗೆ ಕೊಡಲಿಕ್ಕಾಯಿತೆಂಬ ಸಮಾಧಾನ ಆ ವಿಷಾದವನ್ನು ಮರೆಮಾಡಿದೆ. ಏಪ್ರಿಲ್ ಸಂಚಿಕೆಯು ಎಂದಿನಂತೆ ಏಪ್ರಿಲ್ ೧೧ನೆಯ ತಾರೀಖಿಗೆ ತಲ್ಪುನಂತೆ ಪ್ರಕಟವಾಗುವುದು. ನಮಸ್ತೇ!

—ಸಂಪಾದಕರು

(೩೮ನೆಯ ಪುಟ ನೋಡಿರಿ)

ಅವರ ಗ್ರಂಥಕಾರ ನಮ್ಮಲ್ಲಿಯೇ ಇದ್ದಾನೆ. ದೇವ, ಮಾನವ, ಸ್ವಾತಂತ್ರ್ಯ, ಐಕ್ಯ, ಭ್ರಾತೃತ್ವ ಇವುಗಳನ್ನು ತನ್ನ ಜೀವನದಿಂದ ಕಲಿಸುವ ಗುರುವು ಬರುವ ಕಾಲ ನಮಿಸಿವಿದ್ದರಿಂದ, ಎಂಥ ಮಹಾ ಧರ್ಮಗ್ಲಾನಿ ಬಂದಿದೆ ಎಂಬುದನ್ನು ಮಹಾತ್ಮರು ತಮ್ಮ ಅಹಿಂಸಾಮರಣದಿಂದ ಪ್ರಕಟಗೊಳಿಸಿ, ಅಂತರ್ಧಾನ ಹೊಂದಿದ್ದಾರೆ. ಅವರ ದೇಹವು ಜ್ವಾಲೆಯಾಗಿ ಮುಂದಿನ ಬೆಳಕಾಗಿದೆ. ಅವರ ನಾಮ ಅಳಿಯದು. ರೂಪ ಮರೆಯದು. ಈ ಶ್ರದ್ಧಾದೇವನಿಗೆ ನನ್ನ ನಮಸ್ಕಾರ.

ಸಾದರ ಸ್ವೀಕಾರ

★

೧೬೬. **ಕಪಟನಾಟಕ**— (ಸಾಮಾಜಿಕ ನಾಟಕ). ಬರೆದವರು ಶ್ರೀಮತಿ 'ಭಾರತಿ' ಅವರು. ಪ್ರಕಾಶಕರು ಎಸ್.ಎಸ್.ಎನ್. ಪುಸ್ತಕ ಪ್ರಕಟನಾಲಯ; ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ. ಕ್ರೌ. ಅ. ೭೨ ಪುಟಗಳು. ಬೆಲೆ ೦–೧೨–೦.

೧೬೭. **ಭವಭೂತಿಯ ಉತ್ತರ ರಾಮಾಯಣದ ಕಥಾಚಿತ್ರ**— (ಕಥಾಸಂಗ್ರಹ). ಬರೆದವರು ಶ್ರೀ. ಎನ್. ಎಸ್. ವೀರಪ್ಪ ಬಿ.ಎಸ್ಸಿ. (ಆನರ್ಸ್). ಬಿ.ಟಿ. ಮೈಸೂರು ಶಿಕ್ಷಣಶಾಖೆ. ಪ್ರಕಾಶಕರು ಮೇಲಿನವರೆ. ಕ್ರೌ. ಅ. ೮೬ ಪುಟಗಳು. ಬೆಲೆ ೧–೦–೦.

೧೬೮. **ವಿಜ್ಞಾನಿ ವಿಶ್ವಾಮಿತ್ರ**— (ಕವನಸಂಗ್ರಹ). ಲೇಖಕರು ಪ್ರಕಾಶಕರು: ೧೬೬ರಲ್ಲಿ ಕಾಣಿಸಿದವರೇ. ಕ್ರೌ. ಅ. ೫೬ ಪುಟಗಳು. ಬೆಲೆ ೦–೮–೦.

೧೬೯. **ಮೇಕೆದಾಟು ಮತ್ತು ಇತರ ಕಥನ ಕವನಗಳು**— (ಕವನಸಂಗ್ರಹ). ಲೇಖಕರು ಪ್ರಕಾಶಕರು: ಮೇಲೆ ೧೬೬-೧೬೭ರಲ್ಲಿ ಕಾಣಿಸಿದವರೆ. ಕ್ರೌ. ಅ. ೫೮ ಪುಟಗಳು. ಬೆಲೆ ೦–೧೨–೦.

೧೭೦. **ಅಹಮ್ಮದನಗರ ಆಯುರ್ವೇದಾಶ್ರಮ** ಫಾರ್ಮಸಿಯ ೧೯೪೯ನೆಯ ಇಸ್ವಿಯ ಕ್ಯಾಲೆಂಡರು. ಕಲಾವಂತಿಕೆಯಿಂದ ಕೂಡಿದ ಸುಂದರ ತ್ರಿವರ್ಣಚಿತ್ರ ಸಹಿತವಾದುದು.

೧೭೧. **ಎಮ್ಮನಾಡು ಎಮ್ಮಸುದಿ**— (ಕವಿತೆಗಳು). ಬರೆದವರು ಶ್ರೀ. ಎಚ್. ಎಂ. ನಾರಾಯಣಭಟ್ಟ, ಕುಂಬಳೆ. ಕಾಸರಗೋಡಿನ ಸಾಹಿತ್ಯಸಮ್ಮೇಳನ ಕಾಲದಲ್ಲಿ ಪ್ರಕಟವಾದುದು. ಡೆ. ೧೯೬೮ ೮೪ ಪುಟಗಳು.

೧೭೨. **ಕೆ. ಟಿ. ಹೋಂಗರೆ ಕಂಪನಿಯ**— ೧೯೪೯ನೆಯ ವರ್ಷದ ಕ್ಯಾಲೆಂಡರು. ತಾಯಿ-ಮಕ್ಕಳ ಸುಂದರ ಚಿತ್ರದಿಂದ ಕೂಡಿ ಚಿತ್ತಾಕರ್ಷಕವಾಗಿದೆ.

೧೭೩. **ನವಚೇತನ**— (ವಾರಪತ್ರಿಕೆ) ಶಿರಸಿಯಲ್ಲಿ ಹೊಸತಾಗಿ ಹೊರಡುತ್ತಲಿದೆ. ಸಂಪಾದಕರು ಮತ್ತು ಪ್ರಕಾಶಕರು: ಶ್ರೀ. ರಾ. ವೆ. ವಾಲಗಳ್ಳಿ ' ನವಚೇತನ ' ಕಾರ್ಯಾಲಯ, ಶಿರಸಿ (ಉ. ಕ). ಕ್ರೌ. ಫೋ. ೮ ಪುಟಗಳು. ವಾರ್ಷಿಕ ಚಂದಾ ೪–೮–೦.

ಉತ್ತರ ಕನ್ನಡಜಿಲ್ಲೆಯಲ್ಲಿ ಮೊದಲಿನಿಂದಲೂ ಇದ್ದ ಒಂದು ಕನ್ನಡಪತ್ರಿಕೆ, ಕನ್ನಡಿಗರ ಮತ್ತು ಕರ್ನಾಟಕದ ಹಿತಸಂಬಂಧವನ್ನು ಮರೆತು ವಿರೋಧಮಾರ್ಗದಿಂದ ನಡೆದಿರುವಾಗ ' ನವಚೇತನ ' ತಲೆಯೆತ್ತಿರುವುದು ಸಂತೋಷದ ವಿಷಯ. ಕನ್ನಡಕ್ಕಾಗಿ ದುಡಿಯುತ್ತ ' ನವಚೇತನ ' ಜಯಶಾಲಿಯಾಗಿ ಬಾಳಲಿ.

೧೭೪. **ವಿಹಾರಿ**— (ಹೊಸಮಾಸಪತ್ರಿಕೆ). ಸಂಪಾದಕರು ಶ್ರೀ. ಟಿ. ಆರ್. ಐಯಂಗಾರ್, ಬೆಂಗಳೂರು. ಪ್ರಕಾಶಕರು ಪೀರಿಯಾಡಿಕಲ್ಸ್ ಪಬ್ಲಿಕೇಶನ್ಸ್ ೧೯೧. ಸುಲ್ತಾನ್‌ಪೇಟೆ; ಬೆಂಗಳೂರು ಸಿಟಿ.

೧೭೫. **ಗುಲಾಬಿ**— (ಸಣ್ಣಕತೆಗಳ ಸಂಗ್ರಹ). ಬರೆದವರು ಶ್ರೀ.ಟಿ. ಮಹಾಬಲೇಶ್ವರ ಭಟ್ಟ, ಸಾಗರ. ಪ್ರಕಾಶಕರು ಜಲಂದರ ಪ್ರಕಟನಾಲಯ, ಚಾಮರಾಜ ಪೇಟೆ, ಸಾಗರ — ಶಿವಮೊಗ್ಗ. ಕ್ರೌ. ಅ. ೫೮ ಪುಟಗಳು. ಬೆಲೆ ೦–೧೨–೦.

೧೭೬. **ಶ್ರೀಬಸವೇಶ್ವರ ವಾಚನಾಲಯ ಕರೀಕಟ್ಟೆ**— ಈ ಸಂಸ್ಥೆಯ ಸಂಕ್ಷಿಪ್ತವರದಿ. ಗೌರವ ಕಾರ್ಯದರ್ಶಿಗಳ ಕರಿಬಸಪ್ಪ ಮಹಾದೇವಪ್ಪ ಹೊಸಕೋಟಿ ಅವರು. ಡೆ. ೮೪ ಪುಟಗಳು.

ಹಳ್ಳಿಯ ಈ ವಾಚನಾಲಯವು ನಾಡಿನ ಮಿಕ್ಕ ಹಳ್ಳಿಗಳಿಗೆ ಆದರ್ಶಪ್ರಾಯವಾಗಿದೆ. ಸಾರ್ವಜನಿಕ ದೇವಾಲಯದಷ್ಟೆ ಸಾರ್ವಜನಿಕ ವಾಚನಾಲಯದ ಅಗತ್ಯ ಇಂದು ಜನತೆಗಿರಬೇಕು.

೧೭೭. **ಪ್ರಕಾಶ** (ಪರ್ಯಾಯ ವಿಶೇಷಸಂಚಿಕೆ). ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು: ಶ್ರೀಮಾನ್ ಉ. ವ್ಯಾಸರಾವ. 'ಪ್ರಕಾಶ' ಕಾರ್ಯಾಲಯ, ಉಡುಪಿ. ಕ್ರೌ.ಡಿಮಿದ ೯೨ ಪುಟಗಳ ಬೆಲೆ ೦—೧೨—೦.

ಸಾಮಾನ್ಯವಾಗಿ ಇಂದು ಕನ್ನಡದಲ್ಲಿ ಹೊರಡುವ ವಿಶೇಷ ಸಂಚಿಕೆಗಳಂತೆ ವಿವಿಧ ಲೇಖನಗಳಿಂದ ಕೂಡಿದೆ. ಆದರಂತೆ ವಿಶೇಷ ಸಂಚಿಕೆಗಳಲ್ಲಿ ಕಾಣುವ ಇಂದಿನ ಬಹುಜನ ಪರಿಚಿತ ಲೇಖಕರ ಹೆಸರುಗಳು ಇದರಲ್ಲಿಯೂ ಕಾಣುವುವು. ದಕ್ಷಿಣ ಕನ್ನಡ ಜಿಲ್ಲೆಯ ಪತ್ರಿಕೆಯಾದರೂ ಧಾರವಾಡ ಕಡೆಯ ಲೇಖಕರ ಬರೇಗಳೆ ಹೆಚ್ಚಾಗಿರುವುದು ಈ ಸಂಚಿಕೆಯದೊಂದು ವೈಶಿಷ್ಟ್ಯ.

೧೭೮. **ಕನ್ನಡ ನೀತಿ ಶತಕ** (ಭರ್ತೃಹರಿಯ ಸಂಸ್ಕೃತ ನೀತಿ ಶತಕದ ಭಾಷಾಂತರ). ಬರೆದವರು ಶ್ರೀ. ಎಂ. ಎಸ್. ಸುಬ್ಬ ಬಳ್ಳಾರಿ. ಪ್ರಕಾಶಕರು, ಸರಸ್ವತೀ ಭಾಂಡಾರ, ಹೂ ಬಝಾರ್, ಬಳ್ಳಾರಿ. ಕ್ರೌ.ಅ. ೧೮ ಪುಟಗಳು; ಬೆಲೆ ೦—೪—

೧೭೯ **ಶಾಂತಿಪ್ರಚಾರಕ** (ಪ್ರಚಾರಾತ್ಮಕ ನಿಬಂಧ). ಬರೆದವರು: ಜನಾಬ್ ಸೈಯದ್ ಹಸನ್ ಸೈಯದ್ ಖಾಜಾ ಸಾಪೇಬ ಆನರರಿ ಸೆಕ್ರೆಟರಿ ಮೊಹಮ್ಮದಿಯಾ ಪ್ರೈಮರಿ ಎಜ್ಯುಕೇಶನ ಬೋರ್ಡ್, ಕ್ರೌ. ಅ. ೨೦ ಪುಟಗಳು. ಬೆಲೆ ೦—೪—೦.

ಇಂದಿನ ಹಿಂದು-ಮುಸಲ್ಮಾನರ ವಿತುಷ್ಟಿ ಅನಾವಶ್ಯಕವೆಂದೂ, ಅನೈಸರ್ಗಿಕವೆಂದೂ, ಪರಸ್ಪರರ ಐಕ್ಯಭಾವವೇ ಶಾಂತಿಯ ಸಾಯೆಂದೂ ಸೋದಾಹರಣವಾಗಿ ವಿವೇಚಿಸಿ ಹೇಳಿರುವರು. ಸ್ಪರ್ಧೆಗಿಂತ ಸಹಾನುಭೂತಿ ಜೀವನಕ್ಕೆ ಸತ್ಫಲದಾಯಿಯೆಂಬುದನ್ನು ಎಲ್ಲರೂ ಬಲ್ಲರಾದರೂ, ಆಚರಣೆಯಲ್ಲಿ ತರಲು ಸಿದ್ಧರಾಗುವುದಿಲ್ಲ. ಇಂಥ ಸದುದ್ದೇಶದಿಂದ ಹೊರಡುವ ಪುಸ್ತಕಗಳು ಹೆಚ್ಚಾಗಬೇಕು.

೧೮೦. **ಬುರುಕಿ** (ಲಘುಕತೆಗಳು) ಬರೆದವರು ಶ್ರಿಮಾನ್ . ಜಿ. ಭಟ್ ಎಂ. ಎ. ಕಡತೋಕಾ. ಗೋಕರ್ಣದ ಪರ್ಣಕುಟಿ ಂ ಥ ಮಾ ಲೆ ಯ ಪ್ರಕಟನೆ. ಕ್ರೌ. ಅ. ೫೪ ಪುಟಗಳು. ಲೆ ೦—೧೭—೦.

೧೮೧. **ಬಾಯ ಬಂಡಾಯ** (ನಾಲ್ಕಂಕಿನ ನಾಟಕ). ಮೂಲ ರಾಟೆ ನಾಟಕದ ಅನುವಾದ. ಅನುವಾದಕರು ಶ್ರಿಮಾನ್ ೀಂದ್ರೆ ಲಕ್ಷ್ಮಣರಾಯರು. ಧಾರವಾಡದ ಪ್ರತಿಭಾ ಗ್ರಂಥ ಾಲೆಯ ೫ನೆಯ ವರ್ಷದ ಕಿರಣ ೧. ಕ್ರೌ. ಅ. ೧೦೬ ಪುಟ. ಲೆ ೧—೮—೦.

೧೮೨. **ಕೊಲ್ಲಂಬ** (ಅನುವಾದಿತ ಕತೆ) ವಿಕ್ಟರ್ ್ಯಾಗೋರವರ 'ಮರಣದಂಡನೆ' ಎಂಬ ಕೃತಿಯ ಅನುವಾದ. ೀಲಿನ ಪ್ರತಿಭಾ ಗ್ರಂಥಮಾಲೆಯ ೫ನೆಯ ವರ್ಷದ ಕಿರಣ ೨. ್ರೌ. ಅ. ೭೨ ಪುಟಗಳು. ಬೆಲೆ ೦—೧೪—೦.

೧೮೩. **ಪಂಜರದ ಹಕ್ಕಿ—** (ಐದು ಪ್ರಣಯಚಿತ್ರಗಳು) ೂಲ ಬಂಗಾಲಿ ಲೇಖಕರು ಶ್ರೀಚಾರುವಂದ್ಯೋಪಾಧ್ಯಾಯರು. ನುವಾದಕರು ಶ್ರೀ. ಮೇವುಂಡಿ ಮಲ್ಲಾರಿಯವರು. ಇದು ಪ್ರತಿಭಾ ಂಥಮಾಲೆಯ ೫ನೆಯ ವರ್ಷದ ಮೂರನೆಯ ಕಿರಣ. ಕ್ರೌ. ಅ. ೨ ಪುಟಗಳು. ಬೆಲೆ ೦—೧೪—೦.

೧೮೪. **ಮುಗಿಲಮಲ್ಲಿಗೆ** (ಸ್ವತಂತ್ರ ಾಮಾಜಿಕ ಕಾದಂಬರಿ). ಬರೆದವರು: ್ರೀಮಾನ್ ಕೃಷ್ಣಮೂರ್ತಿ ಪುರಾಣಿಕರು. ್ರತಿಭಾ ಗ್ರಂಥಮಾಲೆಯ ೫ನೆಯ ವರ್ಷದ ನೆಯ ಕಿರಣ. ಕ್ರೌ. ಅ. ೨೭೪ ಪುಟಗಳು. ಲೆ ೩—೦—೦.

೧೮೫. **ಪ್ರತಿಸರಕಾರ** (ಸ್ವತಂತ್ರಸಾಮಾ- ಿಕ ಕಾದಂಬರಿ). ಬರೆದವರು ಶ್ರೀ. ಮಿರ್ಜಿ ಣ್ಣಾರಾಯರು. ಧಾರವಾಡದ ಲಲಿತ ಸಾಹಿತ್ಯ ಾಲೆಯ ೪ನೆಯ ವರ್ಷದ ಕುಡಿ ೪. ಕ್ರೌ. ಅ. ೩೭ ಪುಟಗಳು. ಬೆಲೆ ೦—೧೪—೦.

೧೮೬. **ವ್ಯಾಕರಣಸಾರ** (ಪತ್ಯವ್ಯಾಕರಣ). ಸಿದವರು: ಪಂಡಿತ ತಿರುಶ್ರೀನಿವಾಸಾಚಾರ್ಯರು. ಪ್ರಕಾಶಕರು ಶ್ರೀ ರಾಮಚಂದ್ರ ುಕ್ಡಿಪ್ಪೊ, ಮೈಸೂರು. ಕ್ರೌ. ಅ. ೬೦ ಪುಟಗಳು. ಬೆಲೆ ೦—೮—೦

೧೮೭. **ಜಯಹಿಂದ** (ವಾರಪತ್ರಿಕೆಯ ೦ನೆಯ ಜನ್ಮದಿನಾಂಕ). ಸ್ಥಾಪಕರು ಮತ್ತು ಂಪಾದಕರು ಡಾ. ನಾ. ಸು. ಹರಪನೀಕರ ವರು. ಸಂಪಾದಕರು: ಶ್ರೀ. ರಾ. ವೆಂ. ೀರುದರಿಯವರು. ಪ್ರಕಾಶಕರು ಶ್ರೀ. ಎಸ್. ಿ. ಮನಗೋಳಿ, ಮನೆ ನಂ. ೧೦೫೭೭ ದಾಜೀ- ಾನ ಪೇಟೆ, ಹುಬ್ಬಳ್ಳಿ. ಕ್ರೌ. ೪೭ ಳ ಪುಟ- ಗಳು. ಬೆಲೆ ೦—೮—೦.

೧೮೮. **ಸರ** (ಕವನಸಂಗ್ರಹ) ಬರೆದವರು ಶ್ರೀ. ಅಮ್ಮೆಂಬಳ ಶಂಕರನಾರಾಯಣ 'ವಿದ್ವಾನ್' ಮಂಗಳೂರು. ಪ್ರಕಾಶಕರು: ಸಾಧನ ಪ್ರಕಟನಾಲಯ, ಧಾರವಾಡ. ಕ್ರೌ. ಅ. ೧೪+೧೧೦ ಪುಟಗಳು. ಬೆಲೆ ೧—೧೭—೦

೧೮೯. **ತಿರುಗಿ ಮನೆಗೆ** (ಅನುವಾದಿತ ಕಾದಂಬರಿ) ಮೂಲ ಬಂಗಾಲಿ ಲೇಖಕರು ಶ್ರೀಚಾರುವಂದ್ಯೋಪಾಧ್ಯಾಯರು. ಅನುವಾದಕರು ಮತ್ತು ಪ್ರಕಾಶಕರು ಶ್ರೀ. ಮೇವುಂಡಿ ಮಲ್ಲಾರಿ, ಶುಕ್ರವಾರ ಪೇಟೆ, ಧಾರವಾಡ. ಫೂ. ಕ್ಯಾ. ಅ. ೧೭೬ ಪುಟಗಳು. ಬೆಲೆ ೧—೧೦—೦.

೧೯೦. ನೃತ್ಯಕಾಲಿ (ಅನುವಾದಿತ ಕತೆ). ಮೂಲ ಲೇಖಕರೂ ಅನುವಾದಕರೂ ಮೇಲೆ ಹೇಳಿದವರೇ. ಫೂ. ಕ್ಯಾ. ಅ. ೫೬ ಪುಟ. ಬೆಲೆ ೦—೬—೦.

೧೯೧. **ತರುಣೆಯರ ಆರೋಗ್ಯ** (ಸಚಿತ್ರ ವೈಜ್ಞಾನಿಕ ಗ್ರಂಥ). ಬರೆದವರು ಆಯುರ್ವೇದ ವಿದ್ವಾನ್ ಶ್ರೀ. ವಿನಾಯಕ ರಾವ ಬಾಪಟ ಎಲ್. ಎ. ಎಂ. ಎಸ್.; ಪ್ರಕಾಶಕರು ಸಾಧನ ಪ್ರಕಟನಾಲಯ ವಿವನೊಗ್ಗ. ಕ್ರೌ. ಅ. ೧೪+೧೩೭ ಪುಟಗಳು. ಬೆಲೆ ೨—೦—೦

ಆಕೆ ಕನ್ನಡಿಯೆದುರು ಬಹುಕಾಲ ನಿಲ್ಲುತ್ತಾಳೆ!
ಅವಳ ಕೂದಲು ಸುಂದರವಾಗಿರಲಿಕ್ಕೆ ಕಾರಣವೆಂದರೆ 'ಮುಳ್ಳಾಲ' ತೈಲವನ್ನವಳು ಉಪಯೋಗಿಸತೊಡಗಿದುದು. ಕನ್ನಡಿಯೆದುರ ನಿಂತು ತನ್ನ ಜೆಲುವನ್ನು ತಾನೇ ನೋಡುವುದು ಅಳೆಗೊಂದು ಕೆಲಸ. ನೀವೂ ನಿಮ್ಮ ಕೂದಲಿಗೆ 'ಮುಳ್ಳಾಲ'ದ ತಾಣಿಕೆ ಉಲ್ಲಸಿರಿ. ಜೆಲುವನ್ನು ಗಳಿಸಿರಿ.
Mullal
NOT JUST A HAIR OIL BUT A HAIR TONIC TOO
AYURVEDASHRAM PHARMACY LTD., AHMEDNAGAR
AYD 13

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ನಿಮ್ಮ ಮೂಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಜೆಂಟಿಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಪ್ರಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ ಎಸ್ ಕಿಣಿ

ಮ್ಯಾನೇಜರ್
ಎಮ್. ಗೋವರ್ಧನರಾವ

ರೀಟಾ: ತಲೆಯ ಕೂದಲನ್ನು ಬೆಳೆಸುವುದು.

ರೀಟಾ ನೆದುಳಿಗೆ ಶಕ್ತಿಯನ್ನು ಕೊಟ್ಟು, ಮಿರುಗುವ ನೀಳವಾದ ಕೂದಲನ್ನು ಬೆಳಸಲು ಅದ್ಭುತವಾದ ಹೇರ್ ಟಾನಿಕ್.

ರೀ ಟಾ

ತಲೆಯ ಕೂದಲು ಉದುರುವುದು, ನೆರೆಯುವುದು, ಹೆಟ್ಟು. ಉದುರುವುದು, ಕಟ್ಟಕಲೆ, ಹೇನಿನ ಬಾಧೆ, ಇವೇ ಮೊದಲಾದ ತಲೆಯ ಕೂದಲಿಗೆ ಸಂಬಂಧಿಸಿದ ಸಮಸ್ತ ವ್ಯಾಧಿಗಳಿಗೂ ರೀಟಾ ಅತ್ಯುತ್ತಮವಾದ ಗುಣಕಾರಿ.

ಈಗಾಗಲೆ ಸಾವಿರಾರು ಜನ ಉಪಯೋಗಿಸಿ ಗುಣವನ್ನು ಹೊಂದಿದ್ದಾರೆ. ನೀವು ಕೂಡ ಇಂದಿನಿಂದಲೇ ರೀಟಾವನ್ನು ಉಪಯೋಗಿಸಿರಿ.

RITA
HAIR TONIC

ರೀಟಾ ಹಿಂದುಸ್ತಾನದಲ್ಲೆಲ್ಲಾ ದೊರಕುವುದು. ಬೆಲೆ:— ಸೀಸೆ ೧ಕ್ಕೆ ೧೫ ಆಣೆ.

Printed by Mr. V. Y. Jathar at the Karnatak Printing Works, Dharwar, and Published for the Proprie Jayanti Publications, by M. V. Melligatti at the Jayanti Office, Dharwar.—701-47.

ಚಂದಮಾಮ

ಏಪ್ರಿಲ್

೧೯೪೮

★

★

ಸಿಲುವು ಲೇಖಕರು

'ಆನಂದಕಂದ'

ಕೆ. ಎ. ಎನ್. ರಾವ್ ★

ಎಂ. ಕೆ. ಸುಬ್ಬರಾವ ★

ಎಸ್. ಕೆ. ಐರಣಿ ★

ವೀ. ಪಾನೋಳಕರ ★

ಡಾ. ಸಿದ್ಧಾಂತಿ ★

— ಇ ಕ್ಯಾ ಬಿ —

ನೆಯ ಸಂಚಿಕೆ

★

ಲ ಆನ್ನೆ

ಶೀ. ಉರವಕೊಂಡ ಗವೀಮುತನ ಜಗದ್ಗುರುಗಳು

ಸಂಪುಟ ೦೦ | ೧ ನೆಯ ಏಪ್ರಿಲ್ ೧೯೪೮ | ಸಂಚಿಕೆ ೧೧

ಮುಖ್ಯ ವಿಷಯಗಳು

●

ಮಹಾತ್ಮರ ವಿಚಾರವಾಣಿ
'ಮಧುಕರ' ೩೬೫

ಕರ್ನಾಟಕ ಗ್ರಂಥಾಲಯ (ಸಂಪಾದಕೀಯ)
ಸಂಪಾದಕರು ೩೬೬

ಬೀರಣ್ಣನ ಬಡಿನುಡಿಗಳು (ನ್ಯಂಗ್ಯಚಿಪ್ಪಣಿಗಳು)
'ಗುಡದಪ್ಪ' ೩೬೮

ಸೀಮೆಯ ಕಲ್ಲು (ಸಣ್ಣಕತೆ)
'ಆನಂದಕಂದ' ೩೬೮

ಸ್ವಿಸ್ ರಾಜ್ಯಾಂಗ (ರಾಜ್ಯತಂತ್ರ ಪರಿಚಯ)
ಶ್ರೀ. ಎಂ. ಕೆ. ಸುಬ್ಬರಾವ್ ಎಂ. ಎ. ಮೈಸೂರು ೩೭೩

ನಮಸ್ಕಾರ ಡಾಕ್ಟರರೆ (ಹರಟೆ)
ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ ೩೭೭

ಜೀವಿತದಲಿ ನುಂದಸ್ಮಿತ (ಕವನ)
ಶ್ರೀ. ಬಿ. ಆರ್. ಅಲನಳ್ಳಿ, ಕಡಗೋಡು ೩೮೦

—ಗೆ (ಕವನ)
ಶ್ರೀ. ಎಸ್. ಎಸ್. ಒಸುಪಟ್ಟದ ಬಿ. ಎ. ಸೊಲ್ಲಾಪುರ ೩೮೦

ವರ್ಗೀಕರಣ ಪದ್ಧತಿಗಳು (ಪುಸ್ತಕಾಲಯಶಾಸ್ತ್ರ)
ಶ್ರೀ. ಐರಣಿ ಶ್ರೀನಿವಾಸ ಬಿ. ಎ. (ಆನರ್ಸ್) ೩೮೧

ಸಾಕನ್ನು ಕಪಟ ಕಣ್ಣೀರು (ವಿಚಾರತರಂಗ)
ಶ್ರೀ. ಕೋ. ಚೆನ್ನಬಸವ್ವ ಎಲ್ ಎಲ್. ಬಿ. ಬಳ್ಳಾರಿ ೩೮೬

ಮಹಾಪಾಪ (ಸಣ್ಣಕತೆ)
ಶ್ರೀ. ಕೆ. ಎ. ಎನ್. ರಾವ್, ಬನಾರಸ ೩೮೭

ಮಹಾತ್ಮಾಜಿಯವರ ವ್ಯಕ್ತಿ ಜೀವನ (ಪರಿಚಯ)
ಡಾ. ನ. ಭೀ. ಸಿದ್ದಾಂತಿ, ಧಾರವಾಡ ೩೯೨

ಪುಸ್ತಕ ವಿಮರ್ಶೆ
ಬೇರೆ ಬೇರೆ ವಿಮರ್ಶಕರು ೩೯೪

ರಾಜಕೀಯ ಲೋಕದ ಅವಲೋಕನ
'ರಾಯರ ಅಣ್ಣಾಜಿ' ೩೯೬

ಸಾದರ ಸ್ವೀಕಾರ ೪೦೦

ಮನೋಹರ ಗ್ರಂಥಮಾಲೆಯ ಶತಗ್ರಂಥೋತ್ಸವಕ್ಕಾಗಿ ಏರ್ಪಡಿಸಿದ

ಸ್ಪರ್ಧೆಗಳ ಪರಿಣಾಮ

೧. ಕಾದಂಬರಿ ಸ್ಪರ್ಧೆ

೨ನೆಯ ಬಹುಮಾನ – ೨೦೦ ರೂಪಾಯಿ

" ಮುನಿಯನ ಮಾದರಿ "

ಲೇ: ಶ್ರೀ. ಕೆ. ಎ. ಎನ್. ರಾವ್, ಬನಾರಸ

೨. ನಾಟಕ ಸ್ಪರ್ಧೆ

೨ನೆಯ ಬಹುಮಾನ — ೨೦೦ ರೂಪಾಯಿ

" ನುಗು "

ಲೇ: ಶ್ರೀ. ಕೆ. ಎ. ಎನ್. ರಾವ್, ಬನಾರಸ

೩. ಸಣ್ಣಕತೆಗಳ ಸ್ಪರ್ಧೆ

೨ನೆಯ ಬಹುಮಾನ — ೫೦ ರೂಪಾಯಿ

" ಭಕ್ತನ ಕನಸು "

ಲೇ: ಶ್ರೀ. ಕೆ. ಎ. ಎನ್. ರಾವ್, ಬನಾರಸ

೩ನೆಯ ಬಹುಮಾನ — ೨೫ ರೂಪಾಯಿ

" ದಾದಿ "

ಲೇ: ಶ್ರೀ. ಕೆ. ಬಿ. ಪಾಟೀಲ, ಬೆಳಗಾಂವಿ

೪. ಏಕಾಂಕನಾಟಕ ಸ್ಪರ್ಧೆ

೨ನೆಯ ಬಹುಮಾನ — ೫೦ ರೂಪಾಯಿ

" ತ್ಯಾಗ "

ಲೇ: ಶ್ರೀ. ಎಚ್. ಆರ್. ಸುಬ್ರಹ್ಮಣ್ಯ, ಮೈಸೂರ

೩ನೆಯ ಬಹುಮಾನ — ೨೫ ರೂಪಾಯಿ

" ಹಂಚಿಕೆ "

ಲೇ: ಶ್ರೀ ಕೆ. ಎ. ಎನ್. ರಾವ್, ಬನಾರಸ

೫. ವ್ಯಕ್ತಿಚಿತ್ರ ಸ್ಪರ್ಧೆ

೧ನೆಯ ಬಹುಮಾನ — ೨೫ ರೂಪಾಯಿ

" ಮಾಸ್ತಿಯವರು "

ಲೇ: ಶ್ರೀ. ಕೆ. ಎ. ಎನ್. ರಾವ್' ಬನಾರಸ

೬. ಪ್ರಬಂಧ ಸ್ಪರ್ಧೆ

ಬರಿಹಗಳು ನಾಕಷ್ಟು ಬಾರದ್ದರಿಂದ ನಡೆದಿಲ್ಲ.

೭. ಕಾವ್ಯಸ್ಪರ್ಧೆ

" ಪುಷ್ಪವಿಕ್ಷೇಪ " (ಕಾವ್ಯಸಂಗ್ರಹ) **೫೦ ರೂಪಾಂ**

ಲೇ: ಶ್ರೀ. ಎಚ್. ಆರ್ ಸುಬ್ರಹ್ಮಣ್ಯ, ಮೈಸೂರು

" ಮಹಾಯುದ್ಧ " (ಖಂಡಕಾವ್ಯ) ೫೦ ರೂಪಾಯಿ

ಲೇ: ಶ್ರೀ. ಕೆ. ಎ. ಎನ್. ರಾವ್, ಬನಾರಸ

—ಕಾರ್ಯದರ್ಶಿ



ವಾರ್ಷಿಕ ಚಂದಾ
೪—೮—೦

ಪ್ರತಿತಿಂಗಳ ೧೯ನೆಯ ತಾರೀಖಿಗೆ
ಪ್ರಕಟವಾಗುವುದು.

ಮಹಾತ್ಮರ ವಿಚಾರವಾಣಿ

ಧರ್ಮ ಮತ್ತು ಅಧರ್ಮ

ಸತ್ಯಶೋಧಕನು ಸರ್ವಧರ್ಮಗಳು ಸರಿಸಮವೆಂದು ತಿಳಿಯುವನು. ಆದರೆ ತನ್ನ ಧರ್ಮದ ಹೆಸರಿನಿಂದಾಗಲಿ, ಅನ್ಯರ ಧರ್ಮದ ಹೆಸರಿನಿಂದಾಗಲಿ ಇಲ್ಲವೆ ಪ್ರತ್ಯೇಕವಾಗಿಯಾಗಲಿ, ಎಲ್ಲಿಯಾದರೂ ಅಧರ್ಮವಾಗುತ್ತಿದರೆ ಅದನ್ನು ವಿರೋಧಿಸುವನು.

* * *

ಪ್ರತಿಯೊಂದು ಧರ್ಮದಲ್ಲಿಯೂ ಅಲ್ಪಸ್ವಲ್ಪ ಅಪೂರ್ಣತೆಯಿದ್ದುದರಿಂದ, ಪ್ರತಿಯೊಂದು ಧರ್ಮದಲ್ಲೂ ಧರ್ಮದ ಹೆಸರಿನಿಂದ ಅಧರ್ಮವು ಸೇರಿಕೊಂಡಿದೆ. ಅದು ಧರ್ಮದ ಹೆಸರಿನಿಂದ ಸೇರಿದ ಕಾರಣ, ಧರ್ಮವಾವುದು ಅಧರ್ಮವಾವುದು ತಿಳಿಯದಂತಾಗಿದೆ. ಆದಕ್ಕೂ ಅದನ್ನು ಅರಿತುಕೊಳ್ಳಲೆಬೇಕಾಗುವುದು.

* * *

ಯಾವುದಾದರೂ ಧರ್ಮದಲ್ಲಿ ಆಗಿಹೋದ ಪ್ರಸಿದ್ಧ ವ್ಯಕ್ತಿಗಳ ಜೀವನಚರಿತ್ರೆಯಲ್ಲಿ ದೋಷವು ಕಂಡುಬಂದರೆ, ಅದನ್ನೆ ಎತ್ತಿ ಆ ಧರ್ಮವನ್ನು ದೂಷಿಸುವುದು ನಿಂದಕನ ರೀತಿಯು. ಆದರೆ ಇಂತಹ ದೋಷವನ್ನೇ ಧರ್ಮದ ಕಟ್ಟಳೆ ಎಂದು ಯಾರಾದರೂ ಆಚರಿಸಲಿಕ್ಕೆ ಹೇಳಿದರೆ ಅದನ್ನು ವಿರೋಧಿಸಬಹುದು.

* * *

ಸಾಮಾನ್ಯವಾಗಿ ಯಾವ ಆಚಾರಗಳು ಸತ್ಯಾದಿ ಯಮ-ನಿಯಮಗಳನ್ನು ವಿರೋಧಿಸಿ, ಧರ್ಮದ ಬೆಳವಣಿಗೆಯನ್ನು ಮಾಡದೆ ಅದರ ದಾರಿಯಲ್ಲಿ ಅಡ್ಡಬಂದು ಅದನ್ನು ಕೆಡಿಸುವುವೊ, ಅವು ಅಧರ್ಮವೆಂದೆನಿಸುವುವು. ಇದನ್ನು ನಿಶ್ಚಯಿಸುವುದು ಅತ್ಯಂತ ಕಠಿನವಾದುದು. ಆದರೂ ಭಕ್ತಿವಂತನಾದ ವಿವೇಕಿಯಾದ ಸತ್ಯಶೋಧಕನಿಗೆ ಇದು ಗೋಚರವಾಗುವುದು.

* * *

ಸತ್ಯಶೋಧಕನು ಎಲ್ಲ ಕಡೆಗೂ ಅಧರ್ಮವನ್ನು ವಿರೋಧಿಸುವನು. ಆದರೆ ಅಧರ್ಮ ಬೇರೆ, ಅದನ್ನಾಚರಿಸುವ ವ್ಯಕ್ತಿ ಬೇರೆ—ಎಂದವನು ಭಾವಿಸುವನು. ಅಧರ್ಮವನ್ನವನು ವಿರೋಧಿಸುವನಾದರೂ, ಅಧರ್ಮವನ್ನಾಚರಿಸುವ ವ್ಯಕ್ತಿಯನ್ನು ದ್ವೇಷಿಸಲಾರ. ಸತ್ಯಮಯವಾದ— ಅಹಿಂಸಾಮಯವಾದ— ಮಾರ್ಗಗಳಿಂದಲೇ ಅಧರ್ಮವನ್ನು ವಿರೋಧಿಸುವನು. ಅಧರ್ಮದ ನಾಶಕ್ಕಾಗಿ ಅಸತ್ಯಮಯ ಹಿಂಸಾಮಯ ಮಾರ್ಗವನ್ನು ಅತನೆಂದೂ ಅನುಸರಿಸಲಾರನು.

* * *

ಅಧರ್ಮವನ್ನು ವಿರೋಧಿಸುವಾಗ, ಅಹಿಂಸಾವ್ರತದ ಭಂಗವಾಗುವ ಸಂಭವವುಂಟು. ಆದುದರಿಂದ ಅಹಿಂಸಾಮಯವಾದ ಸಾಧನಗಳಿಂದಲೆ ಅಧರ್ಮವನ್ನು ವಿರೋಧಿಸುವುದು ಸತ್ಯಾಗ್ರಹವೆಂದು ಮತ್ತೆ ಮತ್ತೆ ಒತ್ತಿ ಹೇಳಬೇಕಾಗಿದೆ. 'ಸತ್ಯಾಗ್ರಹ'ದ ಹೆಸರಿನಿಂದ ಇಂದು ದೇಶದಲ್ಲಿ ನಡೆದಿರುವ ಯುದ್ಧದ ಶುದ್ಧ ಸ್ವರೂಪದ ಸ್ಥೂಲವಾದ ವ್ಯಾಖ್ಯೆಯು ಇದೇ— ಎಂದು ಹೇಳಬಹುದು.

ಕರ್ನಾಟಕ ಗ್ರಂಥಾಲಯದ ಪ್ರಾರಂಭ

ಕಳೆದ ಫೆಬ್ರುವರಿ ೬ನೆಯ ತಾರೀಖು, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ, ಕರ್ನಾಟಕ ಗ್ರಂಥಾಲಯದ ಪ್ರಾರಂಭೋತ್ಸವ ಜರುಗಿತು. ಉತ್ಸವಕ್ಕೆ ಹಿರಿಯರಾಗಿ ಶ್ರೀಉರವಕೊಂಡನ ಗವೀಮಠದ ಜಗದ್ಗುರು ಶ್ರೀಕರಿಬಸವ ಸ್ವಾಮಿಗಳವರು ದಯೆಮಾಡಿಸಿ, ನಾಡು-ನುಡಿಗಳ ಪ್ರೀತಿಯಿಂದ ತುಂಬಿದ ತಮ್ಮ ಉತ್ಸಾಹದಾಯಕ ಸಂದೇಶವನ್ನು ಬೀರಿ, ಕನ್ನಡಿಗರಲ್ಲಿ ಹೊಸನೋಟ ಹುಟ್ಟುವಂತೆ ಮಾಡಿದರು.

ಹರಿದು ಹಂಚಿಹೋದ ಕನ್ನಡನಾಡು, ಸಂಬಂಧಿಸಿದ ಯಾವ ಪ್ರಾಂತೀಯ ಸರಕಾರದಿಂದಲೂ ಉಪೇಕ್ಷಿತವಾಗಿದೆ. ಅದುದರಿಂದಲೇ ಕೇಂದ್ರಸರಕಾರವೂ ತನ್ನ ಉಪೇಕ್ಷೆಯ ಆಘಾತಗಳನ್ನು ಕನ್ನಡಿಗರ ಎದೆಯ ಮೇಲೆ ಆಗಾಗ ಹಾಕುತ್ತಲಿದೆ. ಇದ್ದುದರಲ್ಲಿಯೇ ಮುಂಬಯಿ ಸರಕಾರ, ಅಳುವ ಕನ್ನಡಿಗರ ಕಣ್ಣೊರಸುವ ಕೆಲಸವನ್ನು ಸ್ವಲ್ಪಸುಟ್ಟಿಗೆ ಮಾಡುವುದೆಂದು ಎನ್ನಬೇಕಾಗುವುದು. ಅಂತಹ ಕೆಲಸದಲ್ಲಿ ಇದೊಂದು, ಕರ್ನಾಟಕ ಗ್ರಂಥಾಲಯ ದಾನ. ಪ್ರಾಂತೀಯ ಕೇಂದ್ರದಲ್ಲಿ 'ಕಾಪೀರೈಟ್' ಸಲುವಾಗಿ ಬಂದಿದ್ದ ಕನ್ನಡ ಪುಸ್ತಕಗಳು ಕಣ್ಣಿಗೆ ಕಾಣದೆ ಹೋಗಿದ್ದರೆ, ಈ ಕರ್ನಾಟಕ ಗ್ರಂಥಾಲಯವಾದರೂ ನಮಗೆ ಸಿಕ್ಕುತ್ತಿದ್ದಿತೋ ಇಲ್ಲವೊ ?

ಈಗ ಸಿಕ್ಕಿದೆಯೆಂದು ಸಮಾಧಾನ ಪಡುವಂತೆಯೂ ಇಲ್ಲ. ಮುಂಬಯಿ ಇಲಾಖೆಯಲ್ಲಿ ಗುಜರಾತು ಅಖಂಡ ಪ್ರಾಂತವಿದೆ; ಮಹಾರಾಷ್ಟ್ರವೂ ಬಹುಭಾಗವಿದೆ; ಕರ್ನಾಟಕದ ಜಿಲ್ಲೆ ನಾಲ್ಕು ಮಾತ್ರ. ಇನ್ನುಮೇಲೆ ಉತ್ತರಕರ್ನಾಟಕದ ಸಂಸ್ಥಾನದ ಪ್ರದೇಶ ಕರ್ನಾಟಕದಲ್ಲಿ ಸೇರಬಹುದಾದರೂ, ಅಲ್ಲಿಯ ಜನರು ಕನ್ನಡಿಗರೆಂದು ಹೇಳಿಕೊಳ್ಳಲು ಒಪ್ಪಲಿಕ್ಕೆ ಹತ್ತಿಪ್ಪತ್ತು ವರ್ಷ ಹೋಗಬೇಕು. ಇಂತಹ ಸಂದರ್ಭದಲ್ಲಿ, ಪ್ರಾದೇಶಿಕ ವಾಚನಾಲಯಗಳ ವೆಚ್ಚದ ಅರ್ಧ ಹೊಣೆಯನ್ನು ಆ ಆ ಪ್ರದೇಶಗಳ ಜನತೆ ಹೊರಬೇಕೆಂದು ಹಾಕಿದ ಮುಂಬಯಿ ಸರಕಾರದ ಕರಾರನ್ನು, ಬರಿಯೆ ನಾಲ್ಕುಜಿಲ್ಲೆಯ ಕನ್ನಡಿಗರು ಹೇಗೆ ಹೊರಬೇಕು? ಆದರಲ್ಲಿಯೂ ಧಾರವಾಡದಲ್ಲಿ ಇರುವ ವಾಚನಾಲಯಕ್ಕೆ ನಾವೇಕೆ ಹೊಣೆಗಾರರಾಗಬೇಕೆಂಬ 'ವಿಶಾಲಬುದ್ಧಿ'ಯ ಜನರೂ ನಮ್ಮಲ್ಲಿ ಬೇಕಾದಷ್ಟು ಜನರು. ಇದುವರೆಗಿನ ಪ್ರಾಂತೀಯ ಸರಕಾರದ ಪಕ್ಷಪಾತ ಬುದ್ಧಿಯ ಮೂಲಕ, ನಮ್ಮ ಜನತೆಯಲ್ಲಿ ಶಿಕ್ಷಣ ಪ್ರಸಾರ ಸಾಕಷ್ಟು ಇಲ್ಲ; ಎಂತಲೆ ಮಹಾರಾಷ್ಟ್ರ-ಗುಜರಾತಿನಲ್ಲಿಯಷ್ಟು ಕಲಿತ ಜನರ ಸಂಖ್ಯೆ ಕರ್ನಾಟಕ ಪ್ರದೇಶದಲ್ಲಿಲ್ಲ. ಇವೆಲ್ಲ ಮಾತುಗಳನ್ನು ಲಕ್ಷ್ಯದಲ್ಲಿರಿಸಿಕೊಂಡು, ಜನತೆಯ ಹಿತವನ್ನು ಮನವಾರೆ ಬಯಸುವ ಇಂದಿನ ಮುಂಬಯಿ ಸರಕಾರ, ಕರ್ನಾಟಕ ಗ್ರಂಥಾಲಯದ ಎಲ್ಲ ಆರ್ಥಿಕಹೊಣೆಯನ್ನು ತಾನೇ ಹೊರಬೇಕಾಗಿದ್ದಿತು. ಆದರೆ ಹತ್ತು ಸಾವಿರ ರೂಪಾಯಿಗಳನ್ನು ತಾನು ಕೊಡುವುದಾಗಿ ಹೇಳಿ, ಅಷ್ಟೇ ಹಣವನ್ನು ಕನ್ನಡಜನತೆ ವರುಷ ವರುಷವೂ ಕೂಡಿಸಿಕೊಡಬೇಕೆಂದು ನಮಗೆ ಕರಾರು ಹಾಕಿದೆ. ಈ ಕರಾರನ್ನು—ನಾಡಿನ ವಿಷಮ ಪರಿಸ್ಥಿತಿಯ ಮೂಲಕ—ನಡೆಯಿಸುವುದು ಸಾಧ್ಯವಾಗದುದರಿಂದಲೆ, ಇದಕ್ಕಿಂತ ಎಷ್ಟೋ ತಿಂಗಳು ಮೊದಲು ಪ್ರಾರಂಭವಾಗಬೇಕಾಗಿದ್ದ ಈ ಗ್ರಂಥಾಲಯ, ಮೊನ್ನೆಮೊನ್ನೆ ಪ್ರಾರಂಭವಾಯಿತು.ಜನತೆ ಕೂಡಿಸಿಕೊಡಬೇಕಾಗಿದ್ದ ಹಣದ ಒಂದು ದೊಡ್ಡ ಭಾಗವನ್ನು, ಶ್ರೀಉರವಕೊಂಡ ಮಹಾಸ್ವಾಮಿಗಳವರು ಪ್ರಸಾದರೂಪದಿಂದ ಕೊಟ್ಟುದು ಕನ್ನಡಿಗರಿಗೆಲ್ಲ ಆನಂದದ ಸಂಗತಿ.

ಗ್ರಂಥಾಲಯದ ಮಹತ್ತ್ವವನ್ನರಿತು ಅಖಿಲ ಕರ್ನಾಟಕಸ್ಥರು ಈ ಸಂಸ್ಥೆಗೆ ಕೊಡುಗೈಯಿಂದ ನೆರವು ಕೊಡಬೇಕು. 'ಕರ್ನಾಟಕ ಗ್ರಂಥಾಲಯ' ಎಂದು ಹೆಸರಿದ್ದರೂ ಇಲ್ಲಿ ದೇಶ-ವಿದೇಶದ ಎಲ್ಲ ಮುಖ್ಯಭಾಷೆಗಳ ಸಂದರ್ಭಗ್ರಂಥಗಳನ್ನೂ ನಿಯತಕಾಲಿಕಗಳನ್ನೂ ಸಂಗ್ರಹಿಸಲಾಗುತ್ತದೆ. ಕನ್ನಡದ ಎಲ್ಲ ಗ್ರಂಥಗಳನ್ನು ಸಂಗ್ರಹಿಸುವುದಂತೂ ಇದರ ಮೊದಲನೆಯ ಕೆಲಸ. ಮುಮ್ಮುಂದೆ ಇದರ ಕಾರ್ಯಕ್ಷೇತ್ರ ಬೆಳೆಯಲಿದೆ. ಇದು ಕರ್ನಾಟಕದ ಮಧ್ಯವರ್ತಿ ಗ್ರಂಥಾಲಯವಾಗಿ, ಇದರ ಮುಖಾಂತರ ನಾಡಿನಲ್ಲೆಲ್ಲ ಚಿಕ್ಕ ದೊಡ್ಡ ವಾಚನಾಲಯಗಳನ್ನು ಸ್ಥಾಪಿಸುವ ಚಟುವಟಿಕೆ ಆರಂಭವಾಗುವುದರಲ್ಲಿದೆ. ಆದುದರಿಂದ ದೇಶದ ಬೆನ್ನೆಲುಬಿನಂತೆ ಕೆಲಸ ಮಾಡಬಹುದಾದ ಈ ಸಂಸ್ಕೃತಿಪ್ರಸಾರಕ ಸಂಸ್ಥೆ ಬೆಳೆದುಬಾಳುವಂತೆ, ಪ್ರತಿಯೊಬ್ಬ ಕನ್ನಡಿಗನೂ ತನು-ಮನೋ-ಧನದಿಂದ ಸಹಕಾರ ನೀಡಬೇಕಾಗಿದೆ. ಇಂದಿನ ನಮ್ಮ ಸರಕಾರಗಳಿಗೆ, ದೇಶದ ಸಂರಕ್ಷಣೆಯ ಹೊಣೆಗಾರಿಕೆ ಮಿಕ್ಕುದನ್ನೆಲ್ಲ ಮರೆಯಿಸಿಬಿಡುವಷ್ಟು ಹೊರೆಯಾಗಿ ನಿಂತಿರುವುದರಿಂದ, ಗ್ರಂಥಾಲಯ-ವಾಚನಾಲಯಗಳಂತಹ ಜ್ಞಾನಸಂವರ್ಧಕ ವಿಧಾಯಕ ಕಾರ್ಯವನ್ನು ಜನತೆಯೆ ಹೊತ್ತು ನಡೆಯಿಸಬೇಕಾಗಿದೆ. ಮಹಾರಾಷ್ಟ್ರ-ಗುಜರಾತುಗಳಲ್ಲಿಯ ಪ್ರಾದೇಶಿಕ ಗ್ರಂಥಾಲಯಗಳನ್ನು ಅಲ್ಲಿಯ ಜನತೆ ಉತ್ಸಾಹದಿಂದ ಪ್ರಾರಂಭಿಸಿ, ಯಶಸ್ವಿಯಾಗಿ ನಡೆಯಿಸತೊಡಗಿದೆ. ಇದರಲ್ಲಿ ಕನ್ನಡಿಗರು ಹಿಂದುಳಿಯಲಾಗದು. ಸಾತ್ತ್ವಿಕ ಸ್ಪರ್ಧೆಗಳು ವ್ಯಕ್ತಿಯ—ಸಮಾಜದ—ಪ್ರಗತಿಗೆ ಕಾರಣವಾಗುವು-

ನೆಂಬುದನ್ನು ಯಾರೂ ಮರೆಯಲಾಗದು.

ಪ್ರಾಂತ ಸರಕಾರದಲ್ಲಿರುವ ಕರ್ನಾಟಕ ಪ್ರತಿನಿಧಿಗಳು ಕನ್ನಡ ನಾಡು-ನುಡಿಗಳ ಬಗೆಗೆ—ಇದುವರೆಗಿನಂತೆ—ಉಪೇಕ್ಷೆ ತೋರಿಸಬಾರದೆಂದು ನಮ್ಮ ಹಾರಯಿಕೆ. ಭಾರತದ ಭಾವೀರಾಜ್ಯ-ಘಟನೆಯಲ್ಲಿ ಕನ್ನಡಿಗರಿಗೆ ಕರ್ನಾಟಕವೇ ಜೀವನಕ್ಷೇತ್ರ; ಕನ್ನಡವೇ ಜ್ಞಾನದಾಯಕಭಾಷೆ. ಆದುದರಿಂದ ಎಲ್ಲರೀತಿಯಿಂದಲೂ ನಾಡನ್ನೂ ನುಡಿಯನ್ನೂ ವಿಕಾಸಗೊಳಿಸಬೇಕಾದುದು ನಮ್ಮ ಮುಂದಾಳುಗಳ ಕರ್ತವ್ಯ. ಒಟ್ಟಿನ ಮೇಲೆ ಸರಕಾರದ ಘೋರಣ ಸಾರ್ವಜನಿಕ ಶಾಂತಿ-ಪುಷ್ಟಿ-ತುಷ್ಟಿಗಳ ಪ್ರಸ್ಥಾಪನೆಯಾಗಿದ್ದರೂ, ಅಧಿಕಾರಸ್ಥಾನದಲ್ಲಿ ಕುಳಿತವರು ಮಾನವರಾದುದರಿಂದ, ಅವರೆಲ್ಲ ಒಂದೊಂದು ಬಗೆಯ ಸ್ವಾರ್ಥದ ವರ್ತುಲದಲ್ಲಿ ಕುಳಿತು ಕೆಲಸಮಾಡುತ್ತಿರುವರು. ಇಂತಹ ಅಧಿಕಾರಿವರ್ಗದಲ್ಲಿ ಕನ್ನಡಿಗರ ಸಂಖ್ಯೆ ಕಡಿಮೆಯಾಗಿ ಇರುವುದರಿಂದ, ಸರಕಾರದ ಘೋರಣದ ಸದುಪಯೋಗ ಕನ್ನಡಿಗರಿಗೆ ಆಗಬೇಕಾದಷ್ಟು ಆಗುತ್ತಿಲ್ಲ. ಆದುದರಿಂದ ಕನ್ನಡಿಗರು ದಾಕ್ಷಿಣ್ಯಭಾವ ತೋರಿಸಿ ಸುಮ್ಮನಿರದೆ, ಕನ್ನಡ ನಾಡು-ನುಡಿಗಳ ವಿಕಾಸಕ್ಕಾಗಿ ಕೂಗಿ ಕೂಗಿ, ತಮ್ಮ ಹಕ್ಕು-ಬಾಧ್ಯತೆಗಳನ್ನು ಸರಕಾರದ ನೆನಪಿಗೆ ತಂದು ಕೊಡಬೇಕಾಗುವುದು. ಕರ್ನಾಟಕ ಗ್ರಂಥಾಲಯದ ಬಗೆಗೂ, ಸರಕಾರದಲ್ಲಿರುವ ಕನ್ನಡ ಧುರೀಣರು ಮಾಡಬೇಕಾದ ಕಾರ್ಯ ತುಂಬ ಇರುವುದು. ಕರ್ನಾಟಕದ ವಿಷಮಪರಿಸ್ಥಿತಿಯನ್ನು ಸರಕಾರಕ್ಕೆ ಮನವರಿಕೆ ಮಾಡಿಕೊಟ್ಟು, ಕನ್ನಡ ಗ್ರಂಥಾಲಯದ ಕಡೆಗೆ ಹೆಚ್ಚಿನ ಔದಾರ್ಯದ ದೃಷ್ಟಿಯಿಂದ ಅದು ನೋಡುವಂತೆ ಮಾಡಬೇಕು; ಎಂದರೆ ಸಂಪೂರ್ಣಸಹಾಯ ಸರಕಾರದಿಂದಲೇ ಸಿಕ್ಕುವಂತೆ ಪ್ರಯತ್ನಿಸಬೇಕು. ಹಿಂದುಳಿದ ಕರ್ನಾಟಕದಲ್ಲಿ ಮಾಡಬೇಕಾಗಿರುವ ರಚನಾತ್ಮಕ ಕಾರ್ಯಗಳು ಹಲವು ಇರುವುವು. ಆದುದರಿಂದ ಜನತೆಯು ಬೇರೆಯ ಕ್ಷೇತ್ರದಲ್ಲಿ ಬೇಕಾದರೆ ಆರ್ಥಿಕ ಹೊಣೆ ಹೊರಲಿ. ಸರಕಾರದ ಮುಖ್ಯ ಕೆಲಸವೇ ಒಂದಾದ ಕರ್ನಾಟಕ ಗ್ರಂಥಾಲಯದ ಆರ್ಥಿಕಹೊಣೆಯನ್ನು ಕನ್ನಡಿಗರು ಏತಕ್ಕಾಗಿ ಹೊರಬೇಕು ?

ಶ್ರೀಉರವಕೊಂಡದ ಜಗದ್ಗುರುಗಳು

ಪ್ರಾಚೀನಭಾರತದಲ್ಲಿ ಧರ್ಮಪೀಠಗಳಾದ ಮಠಗಳೂ ಆಡಳಿತದ ಪೀಠಗಳಾದ ರಾಜ್ಯಗಳೂ ಜನತೆಯ ಕಲ್ಯಾಣಕ್ಕಾಗಿ ಇದ್ದುವು. ಇಂದು ಅವೇ ಧರ್ಮಪೀಠಗಳೂ ರಾಜ್ಯಪೀಠಗಳೂ ಜನತೆಯ ಸಾಂಪ್ರದಾಯಿಕಬುದ್ಧಿಯನ್ನು ಉಪಯೋಗಮಾಡಿಕೊಂಡು, ಜನತೆಯ ಗಳಿಕೆಯನ್ನು ಸೆಳೆದುಕೊಂಡು ಕೊಬ್ಬಿ ಕೊನೆಯುತ್ತಲಿವೆ. ಸದ್ಯದ ಭಾರತದ ಒಕ್ಕೂಟದ ಸಂಸ್ಥಾನಶಾಖೆ, ಅನೇಕ ರಾಜ್ಯ-ಪೀಠಗಳನ್ನು ದಾರಿಗೆ ತಂದು, ಜನತೆಯ ಹಿತಕ್ಕಾಗಿ ಅವು ಕಾರ್ಯಮಾಡುವಂತೆ ಮಾಡಿದೆ. ಆದರೆ ಧಾರ್ಮಿಕಪೀಠಗಳು 'ಇದ್ದಂತಿರೊ ಸಿದ್ಧೇಶ್ವರಾ!' ಎಂಬಂತೆ ಯಾವ ಮಾರ್ಪಾಡನ್ನೂ ಪಡೆಯದೆ ಇವೆ. ಸಾಮಾಜಿಕ ಕಲ್ಯಾಣದ ಆದರ್ಶವಿಲ್ಲದ ಗುರುವರ್ಗ ಆ ಪೀಠಗಳನ್ನು ಆಳುತ್ತಿದ್ದು, ಅಜ್ಞಾನಿ ಜನತೆಯ ಮೂಢಭಾವನೆಯನ್ನು ತಮ್ಮ ಭೋಗಕ್ಕಾಗಿ ಬಳಸಿಕೊಳ್ಳುತ್ತಿರುವುದೇ ಇಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಪ್ರಗತಿಶೀಲ ವಿಚಾರಗಳನ್ನು ಈ ಗುರುವರ್ಗ ಒಪ್ಪುತ್ತಲೆ ಇಲ್ಲ. ಇಂತಹ ವಿಷಮಕಾಲದಲ್ಲಿಯೂ ಒಬ್ಬರು ಕನ್ನಡ ಜಗದ್ಗುರುಗಳು, ಪುರೋಗಾಮಿ ವಿಚಾರದಿಂದ ಜನತೆಯ ಕಲ್ಯಾಣದ ಕಡೆಗೆ ಮನಗೊಟ್ಟು ಕಾರ್ಯಮಾಡಲು ಹೊರಟುದು ನಮ್ಮ ಸೌಭಾಗ್ಯವೆಂದೇ ಹೇಳಬಹುದು. ಅಂತಹ ಕನ್ನಡ ಜಗದ್ಗುರುಗಳೆಂದರೆಯೆ ಶ್ರೀಉರವಕೊಂಡ ಗವೀಮಠದ ಶ್ರೀಕರಿಬಸವಮಹಾಸ್ವಾಮಿಗಳು.

ಪರಂಪರೆಯಿಂದ ಬಂದ ಆಧ್ಯಾತ್ಮಿಕಪೀಠದ ಮೇಲೆ ಅವರು ಕುಳಿತಿರುವರಾದರೂ, ವೇಶ-ಕಾಲಗಳ ಔಚಿತ್ಯದ ಕಲ್ಪನೆಯಿರುವ ಸ್ವಾಮಿಗಳು, ಅಧಿಭೌತಿಕ ವಿಚಾರವನ್ನೂ ಆವಶ್ಯಕತೆಯರಿತು ನಾಡುವರು. ಮತಧರ್ಮದ ಸಂಕುಚಿತ ವರ್ತುಲಕ್ಕಿಂತ ಮಾನವ ಧರ್ಮದ ಮಹಾವರ್ತುಲದಲ್ಲಿದ್ದು ಕಾರ್ಯಮಾಡಬೇಕೆಂಬುದರ ಮಹತ್ತ್ವವನ್ನು ಕಂಡುಂಡವರು. ಅಧ್ಯಾತ್ಮಸಿದ್ಧರನ್ನು ಕಾಣುವ ಆದರ– ವಿಶ್ವಾಸಗಳ ದೃಷ್ಟಿಯಿಂದಲೇ ಇಂದಿನ ರಾಜಕೀಯ ಸ್ವಾತಂತ್ರ್ಯಸಿದ್ಧರನ್ನೂ ನೋಡುವವರು. ನಮ್ಮ ನಾಡಿನ ಎಲ್ಲ ಮಠಾಧೀಶರಲ್ಲಿಯೂ ಈ ಲೋಕಕಲ್ಯಾಣಬುದ್ಧಿ ಉದಯಿಸಿದರೆ, ಮುಂದೆ ಧರ್ಮಪೀಠಗಳ ವಿರುದ್ಧ ಏಳಲಿರುವ ಬಂಡಾಯವನ್ನು ಇಂದೆಯೆ ತಡೆಮುಹಿಡಿಯಲಿಕ್ಕೆ ಅನುಕೂಲವಾದೀತು. ನಾಡಿನಲ್ಲಿ ಭಾವಶುದ್ಧಿಗಾಗಿ— ಹೃದಯವಿಕಾಸಕ್ಕಾಗಿ— ಮತಧರ್ಮಗಳು ಬೇಕೇಬೇಕು. ಆದರೆ ಆ ಮತಧರ್ಮಗಳು ಒಳ್ಳೆಯ ಕೆಲಸ ಮಾಡಬೇಕಾದರೆ, ಸಮಾಜದ ತಳಹದಿ ಭದ್ರವಾಗಿರಬೇಕೆಂಬುದನ್ನು ಶ್ರೀಉರವಕೊಂಡದ ಸ್ವಾಮಿಗಳು ಚೆನ್ನಾಗಿ ಅರಿತಿರುವರು. ಜನತೆ ಇವರ ಕಾರ್ಯದ ಅರ್ಥವನ್ನು ಸರಿಯಾಗಿ ಮಾಡಿಕೊಂಡು ಸಹಕರಿಸಿದರೆ, ಈ ಒಬ್ಬರೆ ಒಬ್ಬ ಸ್ವಾಮಿಗಳವರಿಂದಲೂ ನಮ್ಮ ಹಿತ ಹಲವು ಬಗೆಯಿಂದ ಸಾಧಿಸಬಹುದಾಗಿದೆ; ಮಿಕ್ಕ ಮಠಾಧೀಶರೂ ಇವರನ್ನು ಹಿಂಬಾಲಿಸಬಹುದಾಗಿದೆ. ಉರವಕೊಂಡ ಜಗದ್ಗುರುಗಳ ಕಾರ್ಯದ— ಹರಕೆಯ— ಮಧುರಫಲ ಕನ್ನಡಿಗರಿಗೆ ಬಹುದಿನಗಳ ವರೆಗೆ ದೊರೆಯುತ್ತಿರಲಿ.

—ಸಂಪಾದಕರು

ಗಡಿಯ ಜನರ ಗಡಬಡಿ

ಇತ್ತಿಹಾದುಲ್ ಮುಂಜರೂ ನೈಝಾಂ ಪೋಲೀಸರೂ, ಹಿಂದುಸ್ತಾನದ ಗಡಿಯಲ್ಲಿ ನುಗ್ಗಿ ಜನರಿಗೆ ತೊಂದರೆ ಕೊಡುತ್ತಲಿದ್ದಾರೆ, ಗಡಿಯ ಹಳ್ಳಿಯ ಜನರು ಇದ್ದೂರು ಬಿಟ್ಟು ಮೂರನೆ ಊರಿಗೆ ಹೋಗುತ್ತಲಿದ್ದಾರೆ, ಇದರ ಬಗೆಗೆ ನಿನ್ನ ಅಭಿಪ್ರಾಯವೇನೆಂದು ಬೀರಣ್ಣನನ್ನು ಕೇಳುವವರು ಹಲವರು. ಬೀರಣ್ಣ ತನ್ನ ನಿತ್ಯದ ಅನುಭವದಿಂದ ಕಂಡ ಮಾತನ್ನಲ್ಲದೆ ಇನ್ನೇನು ಹೇಳಬೇಕು? ಅವನ ಅಭಿಪ್ರಾಯ ಹೀಗೆ:

"ಅಯ್ಯಾ, ಕುರಿಗಳಿದ್ದಲ್ಲಿ ತೋಳಗಳು ನುಗ್ಗುವುದು ಸಾಜ. ಕುರುಬನಾದವನು ತೋಳ ಬಾರದಂತೆ ದಡ್ಡಿಗೆ ಗಟ್ಟಿಮುಟ್ಟಾದ ಬೇಲಿಬಡಿಯಬೇಕು ಒಂದು; ಇಲ್ಲವಾದರೆ ಸಂಧಿ ಸಾಧಿಸಿ ದೊಣ್ಣೆಯ ಏಟು ಹಾಕಿ ತೋಳನನ್ನು ಈ ಲೋಕದಿಂದ ಇಲ್ಲದಂತೆ ಮಾಡಬೇಕು ಒಂದು. ಏನು ಮಾಡಬೇಕೆಂದು ಅಳುತ್ತ ಕೂಡುವ ಕುರುಬನ ಕುರಿಗಳು ನಿತ್ಯನಿತ್ಯವೂ ತೋಳಾರ್ಪಣ ಕೇಳಯ್ಯಾ!"

"ಇನ್ನೊಂದು ಹಂಚಿಕೆಯಿದೆ: ಕುರಿಗಳೆಲ್ಲ ಗುಂಪುಗೂಡಿದರೆ ಕರಿಯ ಬಲ ಸಂಗ್ರಹವಾಗುವುದು. ಒಂದೊಂದಾಗಿ ಬರುವ ತೋಳಗಳನ್ನು ಕುರಿಗಳು ತಮ್ಮ ಉಸಿರಿನಿಂದ ಹಾರಿಸಿಬಿಡಬಹುದು. ಕುರಿಗಳಿಗೂ ಜೀವವಿದೆ. ಜೀವವಿರುವಲ್ಲಿ ಶಕ್ತಿಯಿದೆ. ಈ ಮಾತಿನ ಅರಿವು ಕುರಿಗಳಿಗಾದರೆ ತೋಳದ ಬಲ ಹಾಳಾಗುವುದು ಕೇಳಯ್ಯಾ!"

* * * *

ಆಧುನಿಕ ಭಸ್ಮಾಸುರ

ನೈಝಾಂ ಭೋಲಾನಾಥನು ಲೀಲೆಗಾಗಿ 'ಇತ್ತಿಹಾದುಲ್' ಮಾನಸಪುತ್ರನನ್ನು ಪಡೆದ. ಇಲ್ಲದ ಸಲುಗೆ ಕೊಟ್ಟು ಬೆಳೆಯಿಸಿದ. 'ಮಹಾಘನತೆ ಹೊಂದಿದ ನಿಜಾಂ ಪ್ರಭು'ಗಳು ಇಂದು ತಮ್ಮ ಮಾನಸಪುತ್ರನ ಘನಗರ್ಜನೆಗೆ ಗಡಗಡನೆ ನಡುಗುತ್ತಿರುವರು. ಭೀತಿಯಿಂದ ಸಾತ್ತ್ವಿಕಮೂರ್ತಿಗೆ ಮೊರೆಹೊಕ್ಕಿರುವರು. ನಿಝಾಮರ ರಾಜ್ಯವಧುವೇ ತನಗೆ ಬೇಕೆಂದು ಈ ಮಾನಸಪುತ್ರನ ಕಾಮುಕ ದುರಾಶೆ. ಸತ್ತ್ವಮೂರ್ತಿಯೊಗ ಆ ಕಾಮುಕನನ್ನು ಅಳಿದು ನಿಝಾಮರಿಗೆ ಅಭಯನೀಡಲು ಬೇಗನೆ ತನ್ನ ಮೋಹಿನೀರೂಪವನ್ನು ಧರಿಸಿ, ನರ್ತನವನ್ನು ಆರಂಭಿಸಲಿದ್ದಾನೆ. ಇದೆಲ್ಲ ಸುದ್ದಿ ಬೀರಣ್ಣನಿಗೆ ತನ್ನ ಬಡಿಗೆಯ ಮುಖಾಂತರ ಗೊತ್ತಾಗಿದೆ.

ಪೆರಿದನು ಮಾಡಿದಿನ ಆ ತೋಳುಮಾಜ;
ಮುರಿದನು ಬಡ ಆಗದ ಅವನೆಲುಬು ಪೂರ!

* * * *

ಜಿನ್ನಾರ ಜಂಗ್‌ಝೊಳ್ಳು

ಪಾಕಿಸ್ತಾನದಲ್ಲಿ ಮಿಕ್ಕ ಜನರು ಬಾಯಿ ಬಾಯಿ ಬಡುತ್ತಲಿದ್ದರೂ ಕಾಯಿದೇ ಆಜ್ಮ ಜಿನ್ನಾ ಸಾಹೇಬರು ಇನ್ನೂ ಜೋರಾಗಿಯೇ ಡೊಳ್ಳು ಹೊಡೆಯುತ್ತಿದ್ದಾರೆ. ಬೇಕಾದಷ್ಟು ಹಣವನ್ನು ಸಂಪಾದಿಸಿ ಒಗೆದಿದ್ದಾರೆ. ಗವರ್ನರ್ ಜನರಲರ ಅಧಿಕಾರ ಕೈಯೊಳಗಿದೆ. ಯಾರೂ ಏನೂ ಮಾಡದಂತೆ ಬಲವಾದ ಸಂರಕ್ಷಣೆಯಿದೆ. ಮಿಕ್ಕ ಜನರನ್ನೆಲ್ಲ ನರಕದಲ್ಲಿ ನೂಕಿ ತಾವು ಸ್ವರ್ಗಸುಖ ಅನುಭವಿಸುತ್ತಲಿರುವುದರಿಂದ, ಪಾಕಿಸ್ತಾನದ ಸ್ವರ್ಗಸುಖವನ್ನು ತಮ್ಮ ಮುಪ್ಪಿನ ಕಂತದಿಂದಲೂ ಕೂಗಿ ಕೂಗಿ ಜನರಿಗೆ 'ಖಾತ್ರಿ' ಮಾಡಿಕೊಡಲು ಹವಣಿಸುತ್ತಿದ್ದಾರೆ. ಲೋಕದಲ್ಲಿ ಡಂಗುರ ಸಾರುತ್ತಿದ್ದಾರೆ. ಆದರೆ ಮಿ.ಫಜ್ಲುಲ್ ಹಕ್ ಸಾಹೇಬರಂತಹರೂ ಪಾಕಿಸ್ತಾನದಿಂದ ಮರಳಿ ಹಿಂದುಸ್ತಾನಕ್ಕೆ ಹೊರಟ ನೌಕರರೂ, ಜಿನ್ನಾರವರು ಬಾರಿಸುವ ಡೊಳ್ಳು ಎಷ್ಟು ಪೊಳ್ಳಾಗಿದೆಯೆಂಬುದನ್ನು ಜಗತ್ತಿಗೆ ಸಾರುತ್ತಿದ್ದಾರೆ. ಆದರೂ ಜಿನ್ನಾ ಸಾಹೇಬರೇ ನೀವು ಬಿಡಬೇಡಿರಿ.

ಬಾರಿಸಿರಿ ಬಾರಿಸಿರಿ ಜೆಡಜಂಗ್ ಝೊಳ್ಳು!
ಸಾರೀರಿ ಸಾರೀರಿ ಬರಿ ಹಸೀ ಸುಳ್ಳು!

* * * *

ಊರು ಉರಿದ ಮೇಲೆ ನೀರಿನ ಬಂಬು!

ಕಾಶ್ಮೀರ ನಂದನವನದ ಸೌಂದರ್ಯವನ್ನು ಉಳಿಸಿಕೊಳ್ಳಬೇಕೆಂಬುದು ಹಿಂದುಸ್ತಾನದ ಹಂಬಲ. ತನ್ನನ್ನು ತಿನ್ನಲು ಬಂದ ಗುಡ್ಡಗಾಡಿನ ಮೃಗಗಳನ್ನು, ಕಾಶ್ಮೀರದ ಕಡೆಗೆ ಅಟ್ಟುತ್ತಲಿದೆ....ಹಿಂದುಸ್ತಾನದ ದಾಯಾದಿ ಪಾಕಿಸ್ತಾನ. ಈ ದಾಯಾದಿ ಹಚ್ಚಿದ ದೇಶದುರಿಯನ್ನು ತಣ್ಣಗಲಿಸಲು ಸಹಾಯ ಮಾಡಿರೆಂದು ಹಿಂದುಸ್ತಾನ ಓಡಿತು ಆಗದವರಲ್ಲಿ ಔಷಧಿ ಕೇಳಲಿಕ್ಕೆ—ಭಾಗಾದಿಯ ಬಳಿ ಬಲಾಚಾರ ಕೇಳಲಿಕ್ಕೆ! ಆಗದ ಭಾಗಾದಿಗಳು, ಊರೆಲ್ಲ ಉರಿದ ಹೋಗಿದ್ದರೂ ನೀರಿನ ಬಂಬು ಕಳುಹಬೇಕೋ ಬಾರದೋ—ಎಂಬ ವಿಚಾರದಲ್ಲಿಯೇ ಕಾಲನೂಕುತ್ತಲಿದ್ದಾರೆ ಯಾವಾಗಲೂ ಇನ್ನೊಬ್ಬರ ಕೈಯಿಂದ ಉಣ್ಣುವುದು ಒಳ್ಳೆಯದಲ್ಲವೆಂಬುದನ್ನು ಹಿಂದುಸ್ತಾನ ಇನ್ನೂ ಕಲಿಯಬೇಕಾಗಿದೆಯೆ?

'ಮಾಡಬೇಕಾದುದನು ಕೂಡಲೇ ಮಾಡು
ನೋಡದಿರು ಬೇರೆಯರ ನೀನೆ ಮಾಡು!

ಸೀಮೆಯ ಕಲ್ಲು

(ಕಥೆ)*

"ಆನಂದಕಂದ"

'ಯಾವ ಕಲ್ಲ ಬುಡಕ್ಕೆ ಯಾವ ಚೇಳು ಇದೆಯೋ?' ಎಂದು ಕನ್ನಡದಲ್ಲಿ ಹಳೆಯದೊಂದು ಗಾದೆಯ ಮಾತು ಇದೆ. ಆದರೆ ಇಂದು ಕಣ್ಣಿಟ್ಟು ನೋಡುವವರಿಗೆ 'ಯಾವ ಕಲ್ಲ ಬುಡಕ್ಕೆ ಯಾರ ಕತೆ ಹುದುಗಿದೆಯೋ!' ಎಂಬ ಹೊಸ ಗಾದೆಯನ್ನು ಕಟ್ಟಬೇಕೆನಿಸುತ್ತದೆ.

ವೀರನಗೌಡ ಬಹುದಿನಗಳಿಂದಲೂ ತಮ್ಮ ಹಳ್ಳಿಗೆ ಬರಲು ನನ್ನನ್ನು ಕರೆಯುತ್ತಿದ್ದ. ಹಳ್ಳಿ ನನಗೆ ಅಪ್ರೀತಿಯ ವಿಷಯವೇನೂ ಲ್ಲ. ಏಕೆಂದರೆ ನಾನು ಹಳ್ಳಿಯಲ್ಲಿ ಹುಟ್ಟಿ ಬಳೆದವನು. ಹಳ್ಳಿಯ ೂಗಸು-ಸೊಬಗುಗಳು ಎಂತಹವೆಂಬುದನ್ನು ಎಳೆಯತನದಲ್ಲಿ ಂಡುಂಡವನು. ಹಳ್ಳಿಗರ ಸೌಹಾರ್ದಮಯ ಸಾಮಾಜಿಕ ೀವನ, ಕಟ್ಟು-ಕಟ್ಟಳೆಗಳ ಕೃತ್ರಿಮತೆಯಿಲ್ಲದ ಸರಲ ಸಹಜ ೃಭಾವ—ಇವುಗಳ ಸವಿಯನ್ನು ಅನುಭವಿಸಿದವನು. ಉಸಿರು-ಟ್ಟುಸುವಂತಿರುವ ಇಂದಿನ ನನ್ನ ಪಟ್ಟಣದ ಜೀವನದಲ್ಲಿ, ಹಳ್ಳಿ-ುಲ್ಲಿ ಕಳೆದ ಚಿಕ್ಕತನದ ಸಿಹಿನೆನಪುಗಳು, ಸುಖಸ್ವಪ್ನಗಳಂತೆ ಃಗಾಗ ಮನದ ಪಟದ ಮೇಲೆ ಮೂಡಿ ಮೂಡಿ ಹೋಗುತ್ತಿರುತ್ತವೆ. ಃದುದರಿಂದಲೆ ನನಗೆ ಹಳ್ಳಿಗೆ ಹೋಗಬೇಕೆಂದು ಆಗಾಗ ನಿಸುವುದು; ಆದರೆ ಹೊಟ್ಟೆಯ ಹೋರಾಟ, ಪಟ್ಟಣದಲ್ಲಿ ನನ್ನ ಾಲುಗಳನ್ನು ಕಟ್ಟಿಹಾಕಿರುವುದು.

ವೀರನಗೌಡನ ಒಲವಿನ ಔತಣವನ್ನು—ಎರಡು ಮೂರು ಸಲ—ಅನಿವಾರ್ಯವಾಗಿ ನಿರಾಕರಿಸಬೇಕಾಗಿ ಬಂದಿತು. ಆಗಿನ ಆ ಗೆಳೆಯನ ನೊಂದ ಹೃದಯದ ಅನುಭಾವ, ನನ್ನ ಹೃದಯವನ್ನು ಕಲುಕಿಸಿತ್ತು. ಈ ಸಲ ಬಂದೆತೀರಬೇಕೆಂದು ಗೌಡ ಪಟವನ್ನೆ ಹಿಡಿದ. ಗೆಳೆಯನ ಮನಸ್ಸನ್ನು ಮತ್ತೆ ಮತ್ತೆ ನೋಯಿಸಬಾರದೆಂದು ನಿರ್ಣಯಿಸಿ, ಆರು ದಿನಗಳ ರಜೆ ಪಡೆದುಕೊಂಡು, ವೀರನ ಗೌಡನ ಹಳ್ಳಿಗೆ ಹೊರಟುಬಿಟ್ಟೆ.

ಹಳ್ಳಿಯ ಗೌಡರ ಮನೆಯಲ್ಲಿ ನಾನು ಅತಿಥಿ. ಮನೆಗೆ ಬಂದ-ರೆಲ್ಲ ಬೆರಗುಗಣ್ಣುಗಳಿಂದ ನನ್ನನ್ನು ನೋಡುತ್ತ, ಗೌಡರ ಮಗನ ಗೆಳೆಯನೆಂದು ಅರಿತುಕೊಂಡು, ಸಹಜವಾದ ಆದರ-ಪ್ರೀತಿಗಳನ್ನು ಲ್ಲಿಸುತ್ತಿದ್ದರು. ವೀರನಗೌಡನ ತಂದೆ—ಹಿರಿಯಗೌಡರು ಹೆಚ್ಚಿಗೆ ಲಿತವರಲ್ಲವಾದರೂ, ಹುಟ್ಟಿ ಬಳೆದ ದೊಡ್ಡ ಮನೆತನದ ಪರಂಪರೆ ಅವರ ಮನಸ್ಸು-ಹೃದಯಗಳನ್ನು ಅರಳಿಸಿತ್ತು. ನಾನು ತಮ್ಮ ಮನೆಗೆ ಬಂದುದು ಅವರಿಗೆ ತುಂಬ ಸಂತೋಷವನ್ನು ಉಂಟು-ಮಾಡಿತ್ತು. ಆದುದರಿಂದಲೆ ನಾನು ಎಷ್ಟು ತಿಂದರೂ ಕಡಿಮೆ; ಎಷ್ಟು ಂಡರೂ ಕಡಿಮೆ. ನನಗೆ ಯಾವುದರ ಕೊರತೆಯೆನಿಸೀತೋ—ಂದು ಯಾವಾಗಲೂ ನನ್ನ ಮುಖವನ್ನು ಅವರು ನಿಟ್ಟಿಸುತ್ತಿದ್ದರು. ವೀರನಗೌಡನಿಗೆ ಅವರಿಂದ ತಂದೆಯ ಪ್ರೀತಿಯೊಂದೇ ಸಲ್ಲುತ್ತಿದ್ದರೆ, ನನಗೆ ಅಂತಹ ಪ್ರೀತಿಯೊಂದಿಗೆ ಆತಿಥ್ಯದ ಮಾನ-ಸನ್ಮಾನಗಳೂ ಸಲ್ಲುತ್ತಿದ್ದುವು.

ಅತ್ತೆಯ ಮನೆಯಿಂದ ತವರು ಮನೆಗೆ ಬಂದಿದ್ದ—ವೀರನಗೌಡನ ತಂಗಿ-ಸಿಂಗಾರಮ್ಮ, ತಂಗಿಯಿಲ್ಲದಿರುವ ನನ್ನ ಕೊರತೆಯನ್ನು ಕಳೆದುಬಿಟ್ಟಳು. ಕತೆ-ಕಾದಂಬರಿಗಳನ್ನೋದಿ, ನಾಟಕ-ಚಲಚ್ಚಿತ್ರಗಳನ್ನು ನೋಡಿ, ಹೆಣ್ಣಿನ ಪ್ರೀತಿಯೆಂದರೆ ಶೃಂಗಾರಸಂಬಂಧವಾದುದೇ ಎಂದು ನಂಬಿಬಿಟ್ಟಿದ್ದ ನನ್ನನ್ನು—ಸಿಂಗಾರಮ್ಮನ ತಂಗಿತನದ ಪ್ರೀತಿ ಚೆನ್ನಾಗಿ ಕಣ್ಣು ತೆರೆಯಿಸಿತು. ವೀರನಗೌಡನ ಹೆಂಡತಿ ಚಿನ್ನಮ್ಮನ ಮಲುನಗೆಯ ಮೌನಸತ್ಕಾರವಂತೂ ನನ್ನನ್ನು ಬೆರಗುಗೊಳಿಸಿಬಿಟ್ಟಿತು. ನೋಡಿದರೆ ನನ್ನ ಜಾತಿ ಬೇರೆ; ವೀರನಗೌಡನ ಜಾತಿ ಬೇರೆ. ಆದರೆ ಅವರಲ್ಲರ ಸ್ನೇಹ—ಪ್ರೀತಿಗಳ ಪ್ರವಾಹ, ನನ್ನ ಜಾತಿಯ ನೆನಪನ್ನೆ ಕೊಚ್ಚಿಕೊಂಡು ಹೋಗಿದ್ದಿತು.

ಗೌಡರ ಹಳ್ಳಿಯಿಂದ ಮೂಡಣಕ್ಕೆ—ಎರಡು ಮೈಲುಗಳ ಅಂತರದ ಮೇಲೆ—ಇನ್ನೊಂದು ಕಿರುವಳ್ಳಿಯಿದೆ. ಅಲ್ಲಿ ಈ ಗೌಡರದೊಂದು ತೋಟವಿದೆ. ದೊಡ್ಡದಾದ ತೋಟ. ಅದೊಂದೇ ತೋಟದಲ್ಲಿ ಆರು ಎತ್ತುಗಳೂ ಆರೇಳು ಜನ ಆಳುಗಳೂ ದುಡಿಯುತ್ತಾರೆ. ಕಬ್ಬು-ಬಾಳೆಗಳು ಮುಖ್ಯ ಬೆಳೆ. ಹೌಸಿಗಾಗಿ ಅಪರೂಪದ ಹಣ್ಣಿನ ಗಿಡಗಳನ್ನೂ ಹೂವಿನ ಗಿಡಗಳನ್ನೂ ಹಚ್ಚಿಸಿದ್ದಾರೆ. ಈ ತೋಟವನ್ನು ನೋಡಲಿಕ್ಕೆಂದು ಒಂದು ದಿನ ಬೆಳಗಿನಲ್ಲಿ, ನಾವಿಬ್ಬರೂ ಹೊರಟೆವು.

'ಬಂಡೀ ಹೂಡಿಸಿ ಕುಳಿತುಕೊಂಡು ಹೋಗಿರಿ' ಎಂದರು ಹಿರಿಯ ಗೌಡರು. 'ಬೇಡ, ನಡೆಯುತ್ತಲೇ ಹೋಗೋಣ' ಎಂದು ನಾನೆಂದೆ. ವೀರನಗೌಡನೂ ನನ್ನ ಮಾತನ್ನು ಒಪ್ಪಿಕೊಂಡ. ನಡೆಯುತ್ತಲೆ ಹೊರಟೆವು. ಓಲೆಕಾರನೊಬ್ಬ ನಮಗೆ ದಾರಿ ತೋರಿಸುವವನಂತೆ ಮುಂದೆ ಮುಂದೆ ನಡೆದಿದ್ದ.

* ಶ್ರೀ. ಕೆ-ಳಿ-ಳಿಯ ದಿನ ಅಖಿಲಭಾರತ ಆಕಾಶವಾಣಿಯ ಮೈಸೂರು ಕೇಂದ್ರದಿಂದ ಪ್ರಸಾರವಾದ ಕಥೆಯಿದು. —ಸಂ. ಜ.

ಸುಮಾರು ಒಂದು ಮೈಲು ದಾರಿಯನ್ನು ಸಾಗಿರಬಹುದು. ಮುಂದೆ ದಾರಿಯ ಎಡಪಕ್ಕದಲ್ಲಿ, ದಪ್ಪಗಿನ ಹಾಸುಗಲ್ಲೊಂದು ಬಿದ್ದುದನ್ನು ಕಂಡೆ. ಏನೋ ಒಂದು ಕಲ್ಲು ಇರಬಹುದೆಂದು ನಾನು ದುರ್ಲಕ್ಷ್ಯಿಸಿ ಹಾಗೆಯೆ ಮುಂದುವರೆಯಬಹುದಾಗಿತ್ತು. ಆದರೆ ನಮ್ಮ ಮುಂದೆ ಮುಂದೆ ನಡೆದಿದ್ದ ಓಲೆಕಾರ, ಬಗ್ಗಿ ದಾರಿಯಲ್ಲಿ ಬಿದ್ದ ಹಿಡಿಗಲ್ಲೊಂದನ್ನು ಕೈಯಲ್ಲಿ ತೆಗೆದುಕೊಂಡು, ಆ ಹಾಸುಗಲ್ಲಿನ ಬಳಿಗೆ ಹೋದ; 'ಥೂ' ಎಂದು ಅದರ ಮೇಲೆ ಉಗುಳಿ, ಕೈಯ ಹಿಡಿಗಲ್ಲನ್ನು ಹಾಸುಗಲ್ಲಿಗೆ ಎಸೆದು ಮುಂದೆ ಹೊರಟ. ಓಲೆಕಾರನ ಈ ರೀತಿ ನನ್ನನ್ನು ಕುತೂಹಲಿಯನ್ನಾಗಿ ಮಾಡಿತು. ನಾನು ಅಲ್ಲಿಯೆ ನಿಂತು ಆ ಹಾಸುಗಲ್ಲನ್ನು ನಿಟ್ಟಿಸಿ ನೋಡತೊಡಗಿದೆ. ಅದರ ಬಳಿಯಲ್ಲಿ ಹಿಡಿಗಲ್ಲುಗಳು ರಾಶಿರಾಶಿಯಾಗಿ ಬಿದ್ದಿವೆ. ನಾನು ಕೆಣಕಿದ ಮನದವನಾಗಿ ಕೇಳಿದೆ:

"ಇದೇನಪಾ, ಈ ಕಲ್ಲು ಗೌಡಾ!"

ವೀರನಗೌಡ ಸ್ವಾಭಾವಿಕ ಧ್ವನಿಯಲ್ಲಿ ಹೇಳಿದ:

"ಓ! ಇದಽ? ಇದು ನಮ್ಮೂರ ಸೀಮಿಯ ಕಲ್ಲು. ಇಲ್ಲಿಂದ ಮುಂದಿನ ಹೊಲಗಳೆಲ್ಲಾ ಮುಂದಿನ ಕೆರುವಳ್ಳಿಗೆ ಸಂಬಂಧಿಸಿದ್ದೂ!"

"ಸೀಮಿಯ ಕಲ್ಲು ಸರಿಹೋಯ್ತು; ಇಲ್ಲೆ ಹೀಂಗ ಹಿಡಿಗಲ್ಲುಗಳ ರಾಶಿ ಯಾಕ ಬಿದ್ದಽದು! ಇದೇ ಈಗ ನಿಮ್ಮ ವಾಲೀಕಾರ, ಈ ಹಾಸುಗಲ್ಲ ನ್ಯಾಲೆ ಉಗುಳಿ, ತಾನೂ ಒಂದು ಹಿಡಿಗಲ್ಲು ಎಸೆದು ಮುಂದೆ ಸಾಗಿದನಲ್ಲಾ! ಇದೇನು ರೀತಿಯಿದು?"

"ಏನೋಽಪ್ಪಾ! ಹಿಂದಿನಿಂದಲೂ ಏನೋ ಒಂದು ರೂಢಿ ನಡಕೊಂಡು ಬಂದಽದೆ. ಈ ಹಾದಿಯಲ್ಲಿ ಹೋಗು-ಬರುವವರೆಲ್ಲಾ---ಪ್ರತಿಸಲಕ್ಕೂ---ಈ ಕಲ್ಲ ಮ್ಯಾಲೆ ಉಗುಳಿ, ಒಂದೊಂದು ಹಿಡಿಗಲ್ಲು ಎಸೆದು ಹೋಗತಿರತಾರ. ಚಿಕ್ಕತನದಲ್ಲಿ ನಾನು ಕೂಷಾ ಹೀಂಗೆಲ್ಲಾ ಮಾಡತಿದ್ದೆ. ಏನೋ ಒಂದು ಹಳ್ಳಿಗರ ಪದ್ಧತಿ!"

"ಅದಾಯ್ತು ಗೌಡಾ! ಹೀಂಗ ಪದ್ಧತಿ ಬೀಳಲಿಕ್ಕೆ ಏನಾದರೂ ಒಂದು ವಿಶೇಷಕಾರಣ ಇರಬೇಕಲ್ಲ! ಆ ಕಾರಣ ನಿನಗೇನಾದರೂ ಗೊತ್ತದಽ ಏನು?"

"ನನಗೇನೂ ಗೊತ್ತಿಲ್ಲ ಬಿಡು! ಎಲ್ಲಾರೂ ಉಗುಳಿ ಕಲ್ಲು ಒಗೀತಿದ್ದರಂತ ನಾನೂ ಉಗುಳತಿದ್ದೆ, ಕಲ್ಲುಒಗೆದು ಮುಂದೆ ಹೋಗತಿದ್ದೆ!"

ನನ್ನಲ್ಲಿ ತಲೆದೋರಿದ್ದ ಕುತೂಹಲ ನನ್ನನ್ನು ಮುಂದೆ ಬಿಡಲಿಲ್ಲ; ಆ ಹಾಸುಗಲ್ಲ ಹತ್ತಿರ ಹೋಗಿ ಅದನ್ನು ನೋಡಲುತೊಡಗಿದೆ. ಕಾಡುಗಲ್ಲು; ಆದರೂ ಮೇಲ್ಬದಿಯಲ್ಲಿ ಒಂದು ಚೌಕನ್ನು ಕಡೆದಿದ್ದು, ಅದರ ನಡುವೆ ಭಿನ್ನಭಿನ್ನವಾದ ಮನುಷ್ಯಾಕೃತಿಯೊಂದು ಮುಸುಕುಮುಸುಕಾಗಿ ಕಾಣುತ್ತಿತ್ತು. ಜನರು ಎಸೆದ ಕಲ್ಲಿನ ಪೆಟ್ಟಿಗೆ ಆ ಮನುಷ್ಯಾಕೃತಿ ಸವೆಯುತ್ತ ಹೊರಟಿದ್ದಿತು. ನನಗೆ ತುಂಬ ಆಶ್ಚರ್ಯ. ದಪ್ಪಗಿನ ಕಾಡುಗಲ್ಲು....ಅದರ ಮೇಲೆ ಮಾನವಾಕೃತಿ....ಹೋಗು-ಬರುವ ಜನ ಉಗುಳುವರು....ಕಲ್ಲೆಸೆಯುವರು....ಇದರಲ್ಲಿ ಏನಾದರೂ ರಹಸ್ಯವಿರಬೇಕೆಂದು ನನಗೆನ್ನಿಸಿತು. ಹಲವು ಬಗೆಯ ಪ್ರಶ್ನೆಗಳನ್ನು ಹಾಕಿದರೂ ವೀರನ ಗೌಡನಿಂದ ಒಂದಕ್ಕೂ ಸಮಾಧಾನಕರವಾದ ಉತ್ತರ ಸಿಕ್ಕಲಿಲ್ಲ. ನಾನು ಅತೃಪ್ತಭಾವದವನಾಗಿಯೆ ಮುಂದೆ ಹೆಜ್ಜೆಯಿಟ್ಟೆ. ದಾರಿಯುದ್ದಕ್ಕೂ ಗೌಡ ಏನೇನನ್ನೋ ಮಾತನಾಡುತ್ತ ನಡೆದಿದ್ದ. ಆದರೆ ಆ ಸೀಮೆಯ ಕಲ್ಲು ನನ್ನನ್ನು ಕೆಲವು ಹೊತ್ತು ಕಿವಿಯಿದ್ದ ಕಿವುಡನನ್ನಾಗಿಸಿದ್ದಿತು.

ತೋಟವನ್ನು ತಲ್ಪಿದೆವು. ಕಲ್ಲು–ಗಾರೆಗಳಿಂದ ಕಟ್ಟಿದ್ದ ಆ ಭವ್ಯವಾದ ಏತದ ಬಾವಿ, ಏತದ ಮೇಲೆ ಮೊಟ್ಟೆಗೆ ಹೂಡಿದ್ದ ಗಟ್ಟಿ. ಮುಟ್ಟಾದ ಎತ್ತುಗಳ ಜೋಡಿ, ಏತದ ಗಾಲಿಯ ಮಧುರ-ಕರ್ಕಶವಾದ ಕಿರುಚಾಟ, ತೋಟದ ಪಯಿರುಗಳ ಮೈಸಿರಿ, ಅರಳಿದ ಹೂಗಳ ನಗೆ—ಇವೆಲ್ಲ ಕೂಡಿ, ನನ್ನ ಮನಸ್ಸಿನೊಳಗಿಂದ ಸೀಮೆಯ ಕಲ್ಲಿನ ವಿಷಯವನ್ನು ಕೆಲವುಹೊತ್ತು ಪೂರ್ಣವಾಗಿ ಹೊರಗೆ ತಳ್ಳಿಬಿಟ್ಟುವು.

ತೋಟದಲ್ಲೆಲ್ಲ ಸುತ್ತಾಡಿ ಬಂದೆವು. ಬರುವುದರಲ್ಲಿಯೆ ಆಳೊಬ್ಬ, ಬಾವಿಯ ಬಳಿಯಲ್ಲಿ ಕಟ್ಟಿದ ಹೊಳೆಸಾಲ ಆಕಳನ್ನು ಹಿಂಡಿ ಮುಗಿಸಿದ್ದ; ಆಗ ತಾನೆ ಹಿಂಡಿದ ನೊರೆಹಾಲಿನ ತಂಬಿಗೆಯನ್ನು ನಮ್ಮೆದುರು ತಂದಿಟ್ಟ. ವೀರನ ಗೌಡ 'ಕುಡಿ, ಕುಡಿ!' ಎಂದು ಒತ್ತಾಯಮಾಡಿ, ಮೂರು ಲೋಟಾ ಹಾಲನ್ನು ನನಗೆ ಕುಡಿಸಿದ; ತಾನೂ ಸಾಕಷ್ಟು ಕುಡಿದ. ನಗರದಲ್ಲಿರುವ ನಮಗೆ ಅಂತಹ ನೊರೆಹಾಲಿನ ಸುಖವು ಹೇಗೆ ಸಿಕ್ಕಬೇಕು?

ಬಸಿಲು ಏರುವುದರಲ್ಲಿಯೆ ಮನೆಯ ಕಡೆಗೆ ಹೊರಟೆವು. ದಾರಿಯಲ್ಲಿ ಮತ್ತೆ ಸೀಮೆಯ ಕಲ್ಲನ್ನು ನೋಡಿದೆವು. ಜೊತೆಯಲ್ಲಿದ್ದ ಓಲೆಕಾರ, ಬರುವಾಗ ಕೂಡ ಮುನ್ನಿನಂತೆ ಅದರ ಮೇಲೆ ಉಗುಳಿ, ಹಿಡಿಗಲ್ಲನ್ನು ಅಪ್ಪಳಿಸಿ ಹೊರಟ. ಮತ್ತೆ ಆ ಕಲ್ಲು ನನ್ನ ಮನದಲ್ಲಿ ಮನೆಕಟ್ಟಿ ಕುಳಿತಿತು. ನಮ್ಮ ನಾಡಿನಲ್ಲಿ ಇರುವ ಹಲವು ಮಾತನಾಡುವ ಕಲ್ಲುಗಳಂತೆ ಇದೂ ಇರಬಹುದೆಂದು ಭಾವಿಸಿದೆ. ಅದೇ ಭಾವನೆಯಲ್ಲಿಯೆ ಜೊತೆಯವರನ್ನು ಕೂಡಿಕೊಂಡು ನಡೆದು ಮನೆಯನ್ನು ತಲ್ಪಿದೆ.

ಸ್ನಾನ-ಊಟಗಳು ಮುಗಿದುವು. ವಿಶ್ರಾಂತಿಗಾಗಿ ನಾವೆಲ್ಲ ನೆಗಸಾಲೆಯಲ್ಲಿ ಕುಳಿತುಕೊಂಡು ಅಡಿಕೆಲೆ ಮೆಲ್ಲುತ್ತಿದ್ದೆವು. ಆಗ ವೀರನಗೌಡ ತಂದೆಯವರನ್ನು ಕುರಿತು ಹೇಳಿದ:

"ಅಪ್ಪಾಜಿ, ನಮ್ಮ ಆ ಸೀಮಿಯ ಕಲ್ಲು ಇಲ್ಲಽ? ಅದು ಈತಗ ಒಂದು ಆಶ್ಚರ್ಯದ ವಿಷಯವೇ ಆಗಿ ಕೂತಽದ. ಹಳ್ಳೀ ಊರೊಳಗ ಇಂಥಾವೆಲ್ಲಾ ಹುಚ್ಚುಚ್ಚಾರ ಎಷ್ಟೆಷ್ಟೋ ಇರತಾವಪಾ—ಅಂದರೂ ಇವನಿಗೇನೂ ಸಮಾಧಾನವಾಗಲಿಲ್ಲ."

ನನಗೆ ಯೋಗ್ಯಸಂದರ್ಭ ಸಿಕ್ಕಂತಾಯಿತು. ಒಮ್ಮೆಲೇ ಕೇಳಿದೆ:

"ಹೌದ ಗೌಡರs, ನೀವು ಹಿರಿಯರು. ನಿಮಗ ಆ ಕಲ್ಲಿನ ವಿಷಯ ಏನಾದರೂ ಗೊತ್ತು ಇರಲೇ ಬೇಕು. ನಿಮ್ಮೂರ ಸೀಮಾ-ಕಲ್ಲಿನ ಮ್ಯಾಲೆ ಹಾದಿಕಾರರೆಲ್ಲಾ ಉಗುಳಿ ಕಲ್ಲು ಎಸೆದು ಯಾಕ-ಹೋಗತಾರ ? ಅದರ ಮ್ಯಾಲೆ ಒಂದು ಮನುಷ್ಯನ ಆಕೃತಿ ಅದs ಅಲ್ಲಾ; ಅದು ಯಾರದಾದರೂ ನೆನಪಿಗಾಗಿ ಮಾಡಿದ್ದಿರಬಹುದೂ ಅಂತ ನನಗ ಅನಿಸತsದ !"

ಹಿರಿಯ ಗೌಡರು ಹೇಳತೊಡಗಿದರು :

"ಹೌದು ಹೌದು ! ನಿಮ್ಮ ಮಾತು ಖರೇ ಅದ. ಅದರ ಮ್ಯಾಲೆ ಇರುವ ಮನಸ್ಯಾನ ಚಿತ್ರ, ನಮ್ಮ ಮನಿತನಕ್ಕ ಹೊಂದಿದ ಹಿಂದಿನ ಹಿರಿಯರ ಪೈಕಿ ಒಬ್ಬನದಂತ ! ಏನೋ ಒಂದು ಕೆಟ್ಟ ಕೆಲಸಾ ಮಾಡಿದನಂತ; ಆ ತಪ್ಪಿಗಾಗಿ ಆತ ಸೂರ್ಯ-ಚಂದ್ರ ಇರೋತನಕಾ ಶಿಕ್ಷಾ ಅನುಭವಿಸತಿರಬೇಕಂತ, ಆ ಕಲ್ಲಮ್ಯಾಲ ಅವನ ಗೊಂಬೀ ತಗದು ದಾರೀ ಮ್ಯಾಲೆ ಇರಿಸ್ಯಾರಂತ. ದಾರೀ ಹಿಡಿದು ಹೋಗು-ಬರುವವರೆಲ್ಲಾ ಆ ಗೊಂಬೀ ಮ್ಯಾಲೆ ಉಗುಳಿ, ಕಲ್ಲೊಂದು ಒಗೆದು ಹೋಗಬೇಕಂತ—ಹಿಂದಿನ ಹಿರಿಯರು ಅಂದೇ ಕಟ್ಟಿ ಮಾಡಿಬಿಟ್ಟಾರಂತ. ಅದೇ ಇಂದಿನ ವರೆಗೂ ನಡಕೊಂಡು ಬಂದತsದೇನ್ರಿ !"

ನನ್ನ ಅನುಮಾನ ಸರಿಯಾಗಿ ಪರಿಣಮಿಸಿದುದಕ್ಕಾಗಿ ನನಗೆ ಸ್ವಲ್ಪ ಸಮಾಧಾನವಾಯಿತು. ಆದರೂ ಆ ಕಲ್ಲಿನ ಕತೆಯನ್ನು ಪೂರ್ಣವಾಗಿ ತಿಳಿದುಕೊಳ್ಳಬೇಕೆಂಬ ಕುತೂಹಲ ನನ್ನಲ್ಲಿ ಒಂದೇ ಸಮನೆ ಕುಣಿದಾಡಲು ತೊಡಗಿತು. ಅದೇ ನನ್ನಿಂದ ಮಾತನಾಡಿಸಿತು :

"ಸರಿ ! ಹೀಂಗೇನಾದರೂ ಇರಲಿಕ್ಕೇ ಬೇಕಂತ ನನಗ ತುಂಬಾ ಅನಿಸಿತ್ತು. ಇಂದಿನ ಕಲಿತ ಜನರು ನಾವು ಇಂಥಾ ಪರಂಪರೆಗಳಿಗೆ 'ಹುಚ್ಚುಚ್ಚಾರ' 'ಹುಂಬತನ' ಅಂತ ಅಂತೀವೇನೋ ನಿಜ; ಆದರ ಈ ಹುಚ್ಚುಚ್ಚಾರ-ಹುಂಬತನಗಳ ನೆಲೆಯನ್ನು ಕಂಡುಹಿಡಿದರೆ, ಅದೊಂದು ದೊಡ್ಡ ತತ್ತ್ವದ ಮ್ಯಾಲೆ ನಿಂತುಕೊಂಡತದ ಅಂಬೂದು ಸ್ಪಷ್ಟವಾಗಿ ಕಾಣತsದ. ಆಯ್ತು ! ಆ ನಿಮ್ಮ ಹಿರಿಯ ಯಾವ ತಪ್ಪು ಮಾಡಿದನಂತ ಇಂಥಾ ಉಗ್ರ ಶಿಕ್ಷಾ ಅನುಭವಿಸಬೇಕಾತೂ—ಅಂಬೋದು ನಿಮಗೇನಾರೇ ಗೊತ್ತದs ಏನು ?"

ಹಿರಿಯ ಗೌಡರು ಹೇಳಲಾರಂಭಿಸಿದರು :

"ನನಗೇನೂ ಆ ಮಾತು. ಅಷ್ಟೊಂದು ನಿಚ್ಚಳಾಗಿ ಗೊತ್ತಿಲ್ಲ. ನಾನು ಚಿಕ್ಕಂವ ಇದ್ದಾಗ ನಮ್ಮ ತಂದೆಯವರು ಹೇಳತಿದ್ದ ಮಾತಿನ ನೆನಪಿನಿಂದ, ನಿಮಗೀಗ ಈ ಮಾತನ್ನ ನಾನು ಹೇಳಿದೆ. ನಾನು ಓದು-ಬರೀ ಹೆಚ್ಚಾಗಿ ಕಲೀಲಿಲ್ಲ. ಇದ್ದ ಕಾಗದ-ಪತ್ರಾ ಓದಲಿಕ್ಕೂ ನನಗ ಬರೂದಿಲ್ಲ. ಈ ಸೀಮಾಕಲ್ಲಿನ ಸಂಗ್ತೀನೆಲ್ಲಾ ಬರದದ್ದೊಂದು ಕಾಗದ ನಮ್ಮ ಮನ್ಯಾಗ ಅವ. ಹಿರಿ-ಹಿರಿಯರ ಕಾಲದಿಂದ ಆ ಕಾಗದಾನ ನಾವು ಕಾಯ್ದುಕೊಂಡು ಬಂದೀವಿ. ಆದರೇನು, ಕುರುಡನ ಕೈಯಾಗಿನ ಕನಡಿ ಇದ್ದಾಂಗ ! ನಮಗೇನೂ ಅದನ್ನ ಓದಲಿಕ್ಕೆ ಬರೂದಿಲ್ಲ ಬಿಡೂದಿಲ್ಲ !"

ನನ್ನ ಆತುರ ಇನ್ನಷ್ಟು ಕೆರಳಿ ನಿಂತಿತು. ಶಟ್ಟನೆ ಕೇಳಿದೆ :

"ಎಲ್ಲೆ ಅದ ಆ ಕಾಗದ ?"

ಗೌಡರು ನುಡಿದರು :

"ಯಾಕ, ಈಗs ಬೇಕೇನು? ಅದರ ಮ್ಯಾಲೆ ಬರೆದದ್ದನ್ನೆಲ್ಲಾ ಹಳೇ ಲಿಪಿಯೊಳಗ ಬರದಾರ. ನಿಮಗ ಓದಲಿಕ್ಕೆ ಬಂದೀತೇನು ?"

"ಹಳೆಯ ಲಿಪಿ ಓದಲಿಕ್ಕೆ ಬರತsದ ನನಗ. ಈಗ ತ್ರಾಸ ಇಲ್ಲದೆ—ಬೇಗನೆ ಕೈಗೆ ಬರೂಹಾಂಗಿದ್ದರ, ನೋಡಿ ಹುಡುಕಿ ಕೊಡತೀರೇನು, ಆ ಕಾಗದಾನ ?"

ಹಿರಿಯಗೌಡರು ಶಟ್ಟನೆ ಮೇಲಕ್ಕೆದ್ದರು. ನಾಗವಂದಿಗೆಯ ಮೇಲಿದ್ದ ಹಳೆಯ ಕಾಗದಗಳ ಗಂಟೊಂದನ್ನು ತೆಗೆದುಕೊಂಡು ಬಂದು, ಅದನ್ನು ಬಿಚ್ಚಿ ನೋಡಿ, ತಮಗೆ ಗೊತ್ತಿದ್ದ ಹಳೆಯ ಕರಡುಕಾಗದವನ್ನು ಹುಡುಕಿ ತೆಗೆದು, ನನ್ನ ಕೈಯಲ್ಲಿ ಕೊಟ್ಟರು. ವೀರನಗೌಡನೂ ಬೆರಗುಗಣ್ಣುಗಳಿಂದ ಅದನ್ನು ನೋಡತೊಡಗಿದ. ನಾನು ಆತುರದಿಂದ ಮಡಿಕೆಯನ್ನು ಬಿಚ್ಚಿ ಕಾಗದವನ್ನು ನೋಡಿದೆ. ಸುಮಾರು ೧೭ನೆಯ ಶತಮಾನದಲ್ಲಿ ಬಳಕೆಯಲ್ಲಿದ್ದ ಕನ್ನಡ ಲಿಪಿಯದು. ಓದಲಿಕ್ಕೆ ವಿಶೇಷ ಶ್ರಮವನ್ನೇನೂ ವಹಿಸಬೇಕಾಗಿರಲಿಲ್ಲ. ಬರೆದಿದ್ದ ಭಾಷೆ ಅಷ್ಟೊಂದು ಪರಿಶುದ್ಧವಾದುದಲ್ಲ. ಆ ಕಾಲದ ಹಳ್ಳಿಗರು ಬರೆಯುವ ಭಾಷೆ ಇದ್ದಂತೆ ಇತ್ತು. ನಾನು ನಿದಾನವಾಗಿ ಓದಲಾರಂಭಿಸಿದೆ. ಬರೆದ ವಿಷಯ ಹೀಗೆ ಇತ್ತು :

"ಸಾಲಿವಾಹನ ಸಕವರುಸ ×××× ರಲ್ಲಿ ಗಟ್ಟಿಸಿದ ಹಕೀಕತ್ತು ಇದು : ಹಿರಿಯೂರ ಗೌಂಡರ ಮನಿತನದಲ್ಲಿ ಅಣ್ಣ ಮಲ್ಲಿಗೊಂಡ ; ತಮ್ಮ ಚಿಕ್ಕಗೊಂಡ. ಮಲ್ಲಿಗೊಂಡ ದರ್ಮರಾಜ. ಯಾರಿಗೂ ಕೆಡಕು ಮಾಡುವನಲ್ಲ ; ಯಾರ ತಪ್ಪನೂ ಸೈಸುವವನಲ್ಲ. ಪಾಪ ಮಾಡಿದವಂಗೆ ಪ್ರಾಯಚಿತ್ತ ಕೊಡಲೇಬೇಕಂಬೋದು ಆ ದರ್ಮಾತುಮನ ಬಿರುದು. ಪರರ ಹೆಣ್ಣನ್ನು ಸಾರ್ವತೀದೇವಿಯಂತೆ ಕಾಣುವ ಶರಣನವ. ಊರಿಗೆ ಅರಸನಾದರೂ ಕೈಯಾಸೆ (ಲಂಚ) ಎಂಬುದನು ಕಂಡು ಕೇಳಿ ಅರಿಯ. ಸಜ್ಜನರಿಂಗೆ ಉಪಕಾರಿ ; ದುರ್ಜನರಿಂಗೆ ಹೆಮ್ಮಾರಿ. ತಮ್ಮ ಚಿಕ್ಕಗೊಂಡ ಧುಡುಕ ; ಪಟಿಂಗ ! ಇಪ್ಪತ್ತೆರಡು ವರ್ಷದ ಒಗರುಪ್ರಾಯ. ಗರಡಿಯಾಡಿದ ಜಟ್ಟಿಗ. ಹೆಣ್ಣುಗಳ ಕಡೆಗೆ ಹರಿದೋಡುವ ಕಾಮುದ ಕಣ್ಣಿನವ. ಮಾವಿನ ಮುರದ ಜೊತೆಯಲ್ಲಿ ಹುಟ್ಟಿ ಬೆಳೆವ ಮುಳ್ಳುಮುರದಂತೆ, ಚಿಕ್ಕಗೊಂಡ ಮಲ್ಲಿಗೊಂಡಂಗೆ ತಮ್ಮನಾಗಿ ಹುಟ್ಟಿ ಬೆಳೆದಿದ್ದ.

....ಗೌಡರ ಹಿರಿಯ ಕಮತಿಗ ಕಲ್ಲಜ್ಜ. ಈತನ ಹಿರಿಯ ಮಗ ಜಕ್ಕಣ್ಣ. ಜಕ್ಕಣನ ಹೆಂಡತಿ ಹೂವಮ್ಮ ಹಳ್ಳಿಗೆ ಹೊಸತಾಗಿ ಬಂದವಳು. ಸಾವಿರ ಹೆಣ್ಣುಗಳಲ್ಲಿ ಎದ್ದು ತೋರುವಂಥಾ ಚೆಲುವಿ-ಚೆನ್ನಿ ಹೂವಮ್ಮ. ಯಾರ ಸೊಸೆಯಾದರೇನು ? ಊರಿಗೆ ಬಂದವಳು ನೀರಿಗೆ ಬಾರದಿರುವಳೆ? ಒಂದು ಸಂಜೆಯ ಹೂಬಿಸಿಲಲ್ಲಿ ಚಿಕ್ಕಗೊಂಡ ನೀರ ಹೊಳೆಯ ದಾರಿಯ ಮ್ಯಾಲೆ, ಹೂವಿನಂಥಾ ಹೂವಮ್ಮನನ್ನು ನೋಡಿದ. ಮನಸ್ಸನ್ನು ಅವಳಿಗೆ ಮಾರುಗೊಟ್ಟ.



ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ವಿಠಾಟರಾಜನ ಪಟ್ಟಣದಲ್ಲಿ ದುರಪದಿಯನ್ನು ನೋಡಿದ ಕೀಚಕನಂತೆ ಅವನ ಪಾಡಾಯಿತು.

....ಒಂದೆರಡು ಸಲ ಅನಕಾಸಿ ಸಿಕ್ಕಾಗ ಧುಡುಕಿ ಚಿಕ್ಕಗೊಂಡ, ಹೂವಮ್ಮನ ನ್ಯಾಲಿ ಕೈಮಾಪಿಕ್ಕೆ ಜವಣಿಸಿದ. ಹೆಂಡತಿಯಿಂದ ಜಕ್ಕಂಗೆ ಈ ಸಂಗತಿ ತಿಳಿದಾಯಿತು. ಜಕ್ಕ ತನ್ನ ತಂದೆಯ ಕಿವಿಗೆ ಈ ಮಾತನ್ನು ಮುಟ್ಟಿಸಿದ: 'ಹೇಗಾದರಂತಾ ಮಲ್ಲಿಗೊಂಡರ ಬೆನ್ನಲ್ಲಿ ಬಂದವನೆಂತ ಕೈಕಾದಿಸ್ಕೀನಿ: ಇಲ್ಲಾಪಾದರೆ ಚಿಕ್ಕಗೊಂಡನನ್ನ ಚಿಕ್ಕಜೊಕೆ ಕಾಣಿಸಂತಿಸ್ಕೀನಿ!' ಎಂದು ಹೇಳಿದ. ಕಲ್ಲಜ್ಜ ಧುಡುಕದಿರುವಂತೆ ಮಗಂಗೆ ಹೇಳಿ, ಸೂಕ್ಷ್ಮವಾಗಿ ಮಲ್ಲಿಗೊಂಡರ ಕಿವಿಗೆ ಈ ಮಾತನ್ನು ಮುಟ್ಟಿಸಿ, ಬುದ್ಧಿಯವರು ತಮ್ಮನಿಗೆ ಬುದ್ಧಿಮಾತನ್ನು ಹೇಳಬೇಕೆಂದು ಬಿನ್ನವಿಸಿದ.

.... ನಾಯಿ ಬಾಲದ ಡೊಂಕು ಏನ ಮಾಡಿದರೆ ಹೋದೀತು? ಕಾವಾತುರಂಗೆ ಎಲ್ಲಿಯ ಅಂಜಿಕೆ, ಎಲ್ಲಿಯ ನಾಚಿಕೆ? ಹೆಣ್ಣಿನ ಹುಚ್ಚುಹಿಡಿದ ಚಿಕ್ಕಗೊಂಡ,ಹೂವಮ್ಮನ ಬೆನ್ನನೆ ಕಾಯತೊಡಗಿದ್ದ. ಒಂದುದಿನ ಹೊಲದಲ್ಲಿ ಹೂವಮ್ಮ ಒಬ್ಬಳೇ ಇದ್ದುದನ್ನು ಗುರುತಿಟ್ಟು, ಈ ಕೀಚಕ ಹೂವಮ್ಮನ ಮೈಮುಟ್ಟ ಹೋದ. ಸಂಜುವಾಡಿಕೊಂಡು ಕುಳಿತ ಜಕ್ಕಣ್ಣ—ಅವನ ತಮ್ಮ ಹೋರಿಗ— ಇಬ್ಬರೂ ಸೇರಿ, ಚಿಕ್ಕಗೊಂಡನನು ಹೊಡೆದು ಕೆಡಹಿ, ಕತ್ತು ಮುರಿದರು. ಹಾಗೆಯೇ ಹೋಗಿ ಮಲ್ಲಿಗೊಂಡನೆದುರು ನಡೆದ ಸಂಗತಿಯನೆಲ್ಲ ಅರಿಕೆಮಾಡಿ 'ನಿಮ್ಮ ತಮ್ಮನನ್ನು ನಾವು ಕೊಂದಿದ್ದೇವೆ; ಆ ತಪ್ಪಿಗಾಗಿ ನಮ್ಮನು ನೀವು ಕೊಂದುಬಿಡಿರಿ' ಎಂದು ಬೇಡಿಕೊಂಡು, ಬಾಗಿ ನಿಂತರು. ತಮ್ಮ ಚಿಕ್ಕಗೊಂಡನ ತಪ್ಪು ಸಹಿಸಲಾರದ್ದೆಂದು ಮಲ್ಲಿಗೊಂಡ ಯೋಚಿಸಿದ. ಸತ್ಯಶೀಲರಾದ ಜಕ್ಕಣ್ಣ-ಹೋರಣ್ಣರನ್ನು ಬಿಗಿದು ತಬ್ಬಿಕೊಂಡು, ಅವರ ಕೊಲೆಯ ತಪ್ಪನ್ನು ಮನ್ನಿಸಿದ. ಸ್ತ್ರೀದೇವತೆಯನು ಅವಮಾನಗೊಳಿಸಿದ ಕಾಮದ ಕೈಗೊಂಬೆ ಚಿಕ್ಕಗೊಂಡನಿಗೆ ಆಗಿರುವ ಶಿಕ್ಷೆ ಸಾಲದೆಂದು ಅಸಮಾಧಾನಪಟ್ಟುಕೊಂಡ. ಚಿಕ್ಕಗೊಂಡನ ಹೆಣ ಬಿದ್ದ ಹೊಲದಲ್ಲಿ, ಆತನ ಮೂರ್ತಿಯಂ ಕೊರೆದ ಕಲ್ಲೊಂದನ್ನ ಚೆಲ್ಲಿಸಿ, ಹೋಗುವ ಬರುವ ಹಾದಿಕಾರರೆಲ್ಲ ಮೂರ್ತಿಯ ಮೇಲೆ ಉಗುಳಿ, ಹಿಡಿಗಲ್ಲನು ಹಾಕಿ ಹೋಗಬೇಕು—ಎಂದು ಕಟ್ಟಳೆಯನು ಸಾರಿಸಿದ.

....ಚಿಕ್ಕಗೊಂಡ ಸತ್ತರೂ ಅವನ ತಾಯಿ ಮಹಾದೇವಿ ದುಃಖ ಮಾಡಲಿಲ್ಲ. 'ಪಾಪಿಮಕ್ಕಳು ಸಾಯುವುದೇ ಕುಲಕ್ಕೆ ಕ್ಷೇಮ' ಎಂದು ನುಡಿದು, ತಾನೂ ಹೋಗಿ, ಆ ಕಲ್ಲ ಮೇಲೆ ಉಗುಳಿ ಹಿಡಿಗಲ್ಲನ್ನು ಹಾಕಿಬಂದಳು. ಇಂತಿದು ಮಲ್ಲಿಗೊಂಡನ ಮಹಾಮಹಿಮೆ ಶ್ರೀ ಶ್ರೀ ಶ್ರೀ ಶ್ರೀ "

ಕಾಗದವನ್ನು ಓದಿ ಮುಗಿಸಿದೆ. ಅಂದಿನ ಮಹಾಮಹಿಮ ಮಲ್ಲಿಗೊಂಡನನ್ನು ಕಾಣಬಹುದಾದ ಮನ್ನಣೆಯ ನೋಟದಿಂ ಹಿರಿಯಗೌಡರನ್ನು ನೋಡಲು ತೊಡಗಿದೆ. ಮನದಲ್ಲಿಯೆ ಅವ ಮನೆತನದ ಭಾಗ್ಯದೇವತೆಯನ್ನು ವಂದಿಸಿದೆ.

ಓದಿದುದನ್ನೆಲ್ಲ ಮನಸ್ಸುಗೊಟ್ಟು ಕೇಳಿದ ಹಿರಿಯಗೌಡರು ಹೇಳಿದರು :

"ನೋಡಪಾ, ಇದೆಲ್ಲಾ ಸಂಗತಿ ನಮ್ಮ ಮನ್ಯಾಗಽ ಇದ್ದರ ನಮಗ ಗೊತ್ತಿದ್ದಿದ್ದಿಲ್ಲ. ನೀವು ಬಂದ್ರಿ; ಇದನ್ನೆಲ್ಲಾ ಓ ನಮಗ ತಿಳಿವಳಿಕೀ ಮಾಡಿಕೊಟ್ಟರಿ !"

ನಾನು ಭಾವಾವಿಷ್ಟನಾಗಿ ಮೆಲ್ಲಗೆ ಗೌಡರಿಗೆ ಹೇಳಿದೆ :

"ಇಂಥಾ ಸಂಗತಿಗಳನ್ನೆಲ್ಲಾ ನಾವು ಮರತುಬಿಟ್ಟದ್ದರಿಂದನ ನಾವು ಮನಸ್ಯಾರು ಇದ್ದೀವಿ ಅಂಬೋದನ್ನ ಕೂಡಾ ಮರತ ನಡದೀವಿ! ಗೌಡರ, ನಿಜವಾದ ಧರ್ಮಾ ಅಂಬೋದು ಹೀಂಗ- ನಮ್ಮ ಕಣ್ಣಿಗೆ ಕಾಣಿಸದ ಹಾಂಗ— ಹಳೆಯ ಕಡತದೊಳಗ- ಕಲ್ಲುಬಂಡೆಗಳ ಬುಡಕ— ಹುದುಗಿ ಕುಳಿತಽದ. ಸುಳ್ಳುಸು ಯಾವುದನ್ನೋ ನಾವು 'ಧರ್ಮಾ' ಅಂತ ಎತ್ತಿಕೊಂ ಹೊರಟೀವಿ. ನಿಮ್ಮೂರ ಸೀಮಿಯ ಕಲ್ಲು ಇಂದು ನನಗೊಂ ಒಳ್ಳೆಯ ಧರ್ಮದ ಮಾತನ್ನ ಕಲಿಸಿತು."

ಹಿರಿಯ ಗೌಡರು ಹೆಮ್ಮೆಯ ಕಿರುನಗೆ ನಗುತ್ತ ಆ ಕಾತೆಗೆದುಕೊಂಡು, ಮತ್ತೆ ಆ ಹಳೆಯ ಗಂಟಿನಲ್ಲಿ ಕಟ್ಟಿ ನಾಗವಂಗೆಯ ಮೇಲೆ ಇಟ್ಟುಬಿಟ್ಟರು. ನಾನಾಗ ಮನದಲ್ಲಿ ಸೀಮೆಕಲ್ಲನ್ನೂ ಮಲ್ಲಿಗೊಂಡನ ಧರ್ಮಮೂರ್ತಿಯನ್ನೂ ಚಿಕ್ಕಗೊಂಅವಿವೇಕದ ಬಾಳನ್ನೂ ಮನದಲ್ಲಿಯೆ ಕಾಣತೊಡಗಿದ್ದೆ.

ಸ್ವಿಸ್ ರಾಜ್ಯಾಂಗ

(ಪೂರ್ಣಾರ್ಥ)

ಡಾ. ಎಂ. ಕೆ. ಸುಬ್ಬರಾವ್, ಎಂ. ಎ.
'ಆಕಾಶವಾಣಿ' ಮೈಸೂರು

★

ಪ್ರಪಂಚದಲ್ಲೆಲ್ಲಾ ಅತ್ಯಂತ ಪುರಾತನವಾದ ಚಿಕ್ಕದಾದ ಅತ್ಯುತ್ತಮವಾದ ರಾಜ್ಯಾಂಗವಾಗಿರುವುದರಿಂದಲೇ ಸ್ವಿಟ್ಜರ್‌ಲೆಂಡ್ ದೇಶದ ರಾಜ್ಯಾಂಗ, ಎಲ್ಲಾ ರಾಷ್ಟ್ರಗಳ ಮೆಚ್ಚಿಕೆ-ಮನ್ನಣೆಗಳಿಗೆ ಪಾತ್ರವಾಗಿದೆ.

★

ವಿಶ್ವದ ರಾಷ್ಟ್ರಗಳಲ್ಲಿ ಇತ್ತೀಚೆಗೆ ಬಹುವಾಗಿ ಜನಜಾಗೃತಿ ಮೂಡಿ, ಪ್ರತಿಯೊಂದು ರಾಷ್ಟ್ರವೂ ತನ್ನದೇ ಆದ ಒಂದು ಸ್ವತಂತ್ರ ರಾಜ್ಯಾಂಗವನ್ನು ಸ್ಥಾಪಿಸಿಕೊಳ್ಳಲು ದೊಡ್ಡ ಆಂದೋಲನ ಈ ಕಾಲದಲ್ಲಿ ನಡೆಯುತ್ತಿದೆ. ಅದರಲ್ಲೂ ಮುಖ್ಯವಾಗಿ ಇದುವರೆಗೂ ಪರಾವಲಂಬನೆಯಲ್ಲಿ ಸಿಕ್ಕು ತೊಳಲುತ್ತಿದ್ದ ಅನೇಕ ಪೌರ್ವಾತ್ಯ ರಾಷ್ಟ್ರಗಳು, ಸ್ವತಂತ್ರ ರಾಜ್ಯಾಂಗರಚನೆಯಲ್ಲಿ ಕಾರ್ಯಾಸಕ್ತವಾಗಿವೆ. ಎಲ್ಲೆಲ್ಲೂ ಪ್ರಜಾಪ್ರಭುತ್ವವನ್ನೇ ಮೂಲತತ್ತ್ವವನ್ನಾಗಿ ರಾಜ್ಯಾಂಗದ ತಳಹದಿಯಲ್ಲಿಟ್ಟುಕೊಳ್ಳಬೇಕೆಂಬ ಕೂಗು ಹೊಳಗುತ್ತಿದೆ. ಪಾಶ್ಚಿಮಾತ್ಯ ಪ್ರಧಾನ ರಾಷ್ಟ್ರಗಳು ಪ್ರಜಾಪ್ರಭುತ್ವ ತತ್ತ್ವವನ್ನು ತಳಹದಿಯಾಗಿ ಹೊಂದಿ, ಅನೇಕ ವರ್ಷಗಳ ಕೆಳಗೇ ತಮ್ಮ ತಮ್ಮ ಸ್ವತಂತ್ರ ರಾಜ್ಯಾಂಗಗಳನ್ನು ಸ್ಥಾಪಿಸಿಕೊಂಡಿವೆ; ಆದರೆ ಎಲ್ಲಾ ರಾಜ್ಯಾಂಗಗಳೂ ಒಂದೇ ರೀತಿಯಲ್ಲಿಲ್ಲ. ನೂತನವಾಗಿ ರಾಜ್ಯಾಂಗವನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಪಡುತ್ತಿರುವ ಕೆಲವು ಪೌರ್ವಾತ್ಯ ರಾಷ್ಟ್ರಗಳು, ಯಾವ ರೀತಿಯ ರಾಜ್ಯಾಂಗವನ್ನು ಹೊಂದಬೇಕೆಂಬ ವಿಷಯದಲ್ಲಿ ದೊಡ್ಡ ಜಿಜ್ಞಾಸೆಯೇ ಬೆಳೆದಿದೆ. ಭಾರತವು ಸಹ ಸ್ವಾತಂತ್ರ್ಯದ ಹೆಬ್ಬಾಗಿಲಿನಲ್ಲಿ ಹೆಜ್ಜೆಯಿಟ್ಟು ತನ್ನ ರಾಜ್ಯಾಂಗನಿರ್ಮಾಣ ಸಮಿತಿಯ ಮೂಲಕ, ಸ್ವತಂತ್ರ ರಾಜ್ಯಾಂಗವನ್ನು ಸ್ಥಾಪಿಸಿಕೊಳ್ಳಲು ಹವಣಿಸುತ್ತಿದೆ. ಪಾಶ್ಚಿಮಾತ್ಯ ರಾಷ್ಟ್ರಗಳ ರಾಜ್ಯಾಂಗಗಳಲ್ಲಿ, ಪ್ರಜಾಪ್ರಭುತ್ವದ ನಿಜವಾದ ಮುತ್ತು ಕಾರ್ಯಗತ ಮಾಡಲು ಸಾಧಕವಾದ ರೂಪಹೊಂದಿರುವ ರಾಜ್ಯಾಂಗವೆಂದರೆ, ಸ್ವಿಟ್ಜರ್‌ಲೆಂಡ್ ರಾಷ್ಟ್ರಕ್ಕೆ ಸೇರಿದ ರಾಜ್ಯಾಂಗ. ಭಾರತದ ರಾಜ್ಯಾಂಗ ರಚನಾ ಸಮಿತಿಯ ಮೊಟ್ಟಮೊದಲನೆಯ ಹಂಗಾಮಿ ಅಧ್ಯಕ್ಷರಾಗಿದ್ದ ಡಾ. ಸಚ್ಚಿದಾನಂದ ಸಿಂಹರವರು, ೧೯೪೬ನೆಯ ವರ್ಷದ ಡಿಸೆಂಬರ್ ೯ನೆಯ ತಾರೀಖು—ಸಮಿತಿ ಮೊದಲನೆಯ ದಿನ ಸಮಾವೇಶಗೊಂಡಾಗ—ಮಾಡಿದ ಭಾಷಣದಲ್ಲಿ, ಸ್ವಿಸ್ ರಾಜ್ಯಾಂಗವನ್ನು ಕುರಿತು ಪ್ರಸ್ತಾಪ ಮಾಡಿದ್ದಾರೆ. ಅದರ ರೀತಿ-ನೀತಿಗಳನ್ನು ಅನುಸರಿಸಬೇಕೆಂಬ ಅಭಿಲಾಷೆ ಅನೇಕರಲ್ಲಿದೆ. ಪ್ರಪಂಚದಲ್ಲೆಲ್ಲಾ ಅತ್ಯಂತ ಹಳೆಯದಾದ, ಚಿಕ್ಕದಾದ, ಅತ್ಯುತ್ತಮವಾದ ರಾಜ್ಯಾಂಗವಾಗಿರುವುದರಿಂದಲೇ ಸ್ವಿಟ್ಜರ್‌ಲೆಂಡ್ ದೇಶದ ರಾಜ್ಯಾಂಗ, ಎಲ್ಲಾ ರಾಷ್ಟ್ರಗಳವರ ಆದರ-ಮೆಚ್ಚಿಗೆ-ಮನ್ನಣೆಗಳಿಗೆ ಪಾತ್ರವಾಗಿದೆ. ಇದರ ಕೆಲವು ತತ್ತ್ವಗಳನ್ನು ಅನುಸರಿಸಬೇಕೆಂದು, ಹಲವು ಭಾರತೀಯರಲ್ಲಿ ಮೂಡಿರುವ ಅಭಿಪ್ರಾಯಕ್ಕೂ ಇದೇ ಕಾರಣ.

ಸ್ವಿಸ್ ರಾಜ್ಯಾಂಗವನ್ನು ಭಾರತೀಯರು ಗಮನಿಸಬೇಕಾದುದು ಅತ್ಯಗತ್ಯ. ನಮ್ಮ ರಾಷ್ಟ್ರದ ಈ ಅತ್ಯಂತ ಸಂದಿಗ್ಧ ಕಾಲದಲ್ಲಿ, ಅದು ಬಹಳ ಗಮನಾರ್ಹವಾಗಿದೆ. ಒಂದು ರಾಷ್ಟ್ರದಲ್ಲಿ ನಿವಿಧ ಮತಗಳೂ ಕೋಮುಗಳೂ ಇದ್ದರೂ, ಬೇರೆ ಬೇರೇ ಭಾಷೆಗಳೂ ಇದ್ದರೂ, ಐಕಮತ್ಯವುಳ್ಳ ಏಕೈಕ ರಾಜ್ಯಾಂಗವನ್ನು ರೂಪಿಸಲು, ಈ ವೈವಿಧ್ಯವು ಯಾವ ಅಡ್ಡಿಯನ್ನೂ ತರುವುದಿಲ್ಲವೆಂಬುದನ್ನು ಉದಾಹರಿಸಬೇಕಾದರೆ, ನಾವು ಸ್ವಿಸ್‌ರಾಜ್ಯಾಂಗದ ಕಡೆ ಬೆರಳು ತೋರಿಸಬೇಕು. ಭಾರತದಲ್ಲಿ ಒಂದು ಸ್ವತಂತ್ರ ರಾಜ್ಯಾಂಗವನ್ನು ರೂಪಿಸಲು ಮತೀಯ ಹಾಗೂ ಭಾಷಾವಾರು ವೈವಿಧ್ಯ ಅಡ್ಡಿಯಾಗಿದೆಯೆಂದು ಅನೇಕ ವರ್ಷಗಳಿಂದ ಬ್ರಿಟಿಷರು ಹೇಳುತ್ತಿದ್ದರಲ್ಲದೆ, ನಮ್ಮ ದೇಶದಲ್ಲೇ ಪ್ರತಿಗಾಮಿಗಳು ಈ ಪೊಳ್ಳುವಾದವನ್ನು ಮುಂದಿಟ್ಟುಕೊಂಡು, ರಾಷ್ಟ್ರದ ಏಳಿಗೆಗೆ ಕಂಟಕಪ್ರಾಯರಾಗಿದ್ದರು. ಈಗಿನ ಸಂದರ್ಭದಲ್ಲಿ ಹಿಂದಕ್ಕೆ ನೂಕಲ್ಪಟ್ಟಿರುವ ಆ ಪ್ರತಿಗಾಮಿಗಳು, ಸ್ವಿಸ್‌ರಾಜ್ಯಾಂಗದ ಕಡೆಗೆ ತಮ್ಮ ಗಮನವನ್ನು ಸ್ವಲ್ಪ ಕೊಟ್ಟರೆ ಒಳಿತು.

ಸ್ವಿಟ್ಜರ್‌ಲೆಂಡ್‌ದೇಶ ಯೂರೋಪಖಂಡದಲ್ಲಿ ಬಹಳ ಚಿಕ್ಕದಾದ ಒಂದು ರಾಷ್ಟ್ರ. ಇದರ ಸರ್ಕಾರ 'ಫೆಡರಲ್ ರಿಪಬ್ಲಿಕ್' ಎಂದರೆ ಸಂಯುಕ್ತ ಪ್ರಜಾಪ್ರಭುತ್ವದ ರಾಜ್ಯಾಂಗದಿಂದ ರಚಿತವಾಗಿದೆ. ಸ್ವಿಸ್‌ದೇಶದ ನಿಸ್ತೀರ್ಣ ಕೇವಲ ಹದಿನೈದು ಸಾವಿರದ ಒಂಭೈನೂರ ಎಪ್ಪತ್ತೈದು ಚದರು ಮೈಲಿಗಳು. ಸ್ವಲ್ಪ ಹೆಚ್ಚು ಕಡಿಮೆ ನಮ್ಮ ಮೈಸೂರು ಸಂಸ್ಥಾನದ ಅರ್ಧದಷ್ಟಿದೆ. ಈ ಪುಟ್ಟ ರಾಷ್ಟ್ರ ಸ್ವಿಟ್ಜರ್ಲಿಂಡ್, ಯೂರೋಪಿನ ಬಹಳ ಬಲಯುತವಾದ ರಾಷ್ಟ್ರಗಳಾದ ಫ್ರಾನ್ಸ್, ಜರ್ಮನಿ ಹಾಗೂ ಇಟಲಿ ಈ ರಾಷ್ಟ್ರಗಳ ನಡುವೆ ಸಿಕ್ಕಿಕೊಂಡಿದೆ. ಅದರ ಸುತ್ತುಮುತ್ತಲೂ ಇರುವ ಪರ್ವತಶ್ರೇಣಿಗಳು ಅದನ್ನು ಸುತ್ತಲಿನ ರಾಷ್ಟ್ರಗಳಿಂದ ಪ್ರತ್ಯೇಕಪಡಿಸಿದೆ.

ಸ್ವಿಟ್ಜರ್ಲಿಂಡ್ ದೇಶವನ್ನು ಒಟ್ಟು ಇಪ್ಪತ್ತೈದು ಭಾಗಗಳಾಗಿ ವಿಂಗಡಿಸಿದೆ. ಈ ಭಾಗಗಳಿಗೆ **ಕ್ಯಾಂಟನ್** ಎಂಬುದಾಗಿ ಹೆಸರು. ಈ ಇಪ್ಪತ್ತೈದರಲ್ಲಿ ಹತ್ತೊಂಬತ್ತು ಪೂರ್ಣ ಕ್ಯಾಂಟನ್‌ಗಳೂ ಆರು ಅರ್ಧ ಕ್ಯಾಂಟನ್‌ಗಳೂ ಇವೆ. ಈ ಆರು ಅಪೂರ್ಣ ಕ್ಯಾಂಟನ್‌ಗಳನ್ನು ಮೂರು ಪೂರ್ಣ ಕ್ಯಾಂಟನ್‌ಗಳೆಂದು ಪರಿಗಣಿಸಿದರೆ, ಒಟ್ಟು ಇಪ್ಪತ್ತೆರಡು ಕ್ಯಾಂಟನ್‌ಗಳಿದ್ದಂತಾಯಿತು.

'ಕ್ಯಾಂಟನ್' ಎಂದರೆ 'ಜಿಲ್ಲೆ' ಎಂದರ್ಥ. ಸ್ವಿಸ್ ಜನರಲ್ಲಿ ನೂರಕ್ಕೆ ಎಪ್ಪತ್ತೊಂದು ಭಾಗ ಜರ್ಮನ್ ಭಾಷೆಯನ್ನೂ, ಇಪ್ಪತ್ತೊಂದು ಭಾಗ ಫ್ರೆಂಚ್ ಭಾಷೆಯನ್ನೂ, ಆರು ಭಾಗ ಇಟಾಲಿಯನ್ ಭಾಷೆಯನ್ನೂ ಮಾತನಾಡುತ್ತಾರೆ. ಮತದ ವಿಷಯದಲ್ಲಿ ನೂರಕ್ಕೆ ಐವತ್ತುನಾಲ್ಕು ಮಂದಿ ಪ್ರಾಟೆಸ್ಟೆಂಟ್ ಮತಕ್ಕೂ, ನೂರಕ್ಕೆ ನಲವತ್ತೊಂದು ಮಂದಿ ಕ್ಯಾಥೊಲಿಕ್ ಮತಕ್ಕೂ, ನೂರಕ್ಕೆ ಐದುನುಂದಿ ಯಹೂದ್ಯ ಮತಕ್ಕೂ ಸೇರಿದವರಾಗಿದ್ದಾರೆ. ಈ ರೀತಿ ಆ ದೇಶದಲ್ಲಿ ಮತ ಹಾಗೂ ಭಾಷೆ ಇವುಗಳಲ್ಲಿ ಬಹಳ ವೈವಿಧ್ಯ ಮತ್ತು ಭೇದ ಇದ್ದರೂ, ಅಲ್ಲಿಯ ನಲವತ್ತುಲಕ್ಷ ಮಂದಿ ಪ್ರಜೆಗಳು ಒಂದುಗೂಡಿ, ರಾಜಕೀಯ ಏಕಮತ್ಯದಿಂದ ತಮ್ಮ ನಿತ್ಯಜೀವನವನ್ನು ಸುಖದಿಂದ ಸಾಗಿಸುತ್ತಿದ್ದಾರೆ.

ಸ್ವಿಸ್‌ದೇಶ ತನ್ನ ಸ್ವತಂತ್ರ ಆಡಳಿತಾಧಿಕಾರವನ್ನು ಸ್ಥಾಪಿಸಿಕೊಂಡು, ಸುಮಾರು ಆರುನೂರು ವರ್ಷಗಳಾದುವು. ಆದರೆ ನಾವು ಇಲ್ಲಿ ಪ್ರಸ್ತಾಪಿಸುವ ಸ್ವಿಸ್ ರಾಜ್ಯಾಂಗ ೧೮೪೮ ರಲ್ಲಿ ಸೊದಲು ಸ್ಥಾಪಿತವಾಯಿತು. ಅಲ್ಲಿಂದೀಚೆಗೆ ೧೮೭೪ರಲ್ಲಿ, ಅದನ್ನು ತಿದ್ದುಪಡಿ ಮಾಡಲಾಯಿತು. ಆಗಾಗ ಸಮಯ-ಸಂದರ್ಭಗಳಿಗೆ ಹೊಂದಿಕೊಳ್ಳುವಂತೆ ಕೆಲವು ತಿದ್ದುಪಡಿಗಳನ್ನು ಮಾಡಿದ್ದಾರೆ. ಈ ತಿದ್ದುಪಡಿಯ ಕ್ರಮವೇನು, ಅದನ್ನು ಯಾವ ರೀತಿ ಮಾಡುವುದು ಎಂಬುದನ್ನು ಮುಂದೆ ಪ್ರಸ್ತಾಪಿಸೋಣ.

೧೮೪೮ರಲ್ಲಿ ಸ್ವಿಟ್ಜರ್‌ಲಂಡ್ ದೇಶದಲ್ಲಿ ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟೆಂಟ್ ಮತೀಯರು ಬಹುಸಂಖ್ಯಾಕರಾಗಿರುವ ಕ್ಯಾಂಟನ್‌ಗಳಲ್ಲಿ ನಡೆದ ಅಂತರ್ಯುದ್ಧದ ಪರಿಣಾಮವಾಗಿ, ಈಗಿನ ಸ್ವಿಸ್ ರಾಜ್ಯಾಂಗದ ಸ್ಥಾಪನೆ ಆಯಿತು. ಈ ಮೊದಲೇ ಹೇಳಿರುವಂತೆ ಅದೊಂದು 'ಫೆಡರಲ್ ರಿಪಬ್ಲಿಕ್' ಎಂದರೆ ಸಂಯುಕ್ತ ಪ್ರಜಾ-ಪ್ರಭುತ್ವ ರಾಜ್ಯಾಂಗ. ಆದರೂ ಸಹ ಅದನ್ನು "ಸ್ವಿಸ್ ಕಾನ್‌ಫೆಡರೇಷನ್" ಎಂಬ ಹೆಸರಿನಿಂದ ಕರೆಯುತ್ತಾರೆ. ಇಲ್ಲಿ ನಾವು ಫೆಡರೇಷನ್ನಿಗೂ, ಕಾನ್‌ಫೆಡರೇಷನ್ನಿಗೂ ಮುಖ್ಯವಾದ ವ್ಯತ್ಯಾಸಗಳೇನೆಂಬುದನ್ನು ಗಮನಿಸುವುದು ಅವಶ್ಯಕ. ಕೆಲವು ಸ್ವತಂತ್ರ ಸಾರ್ವಭೌಮ ಸರ್ಕಾರಗಳು ಸ್ವಂತ ಇಚ್ಛೆಯಿಂದ ಒಂದುಗೂಡಿಕೊಂಡು, ತಮಗೆ ಹೊರಗಿನ ಆಕ್ರಮಣವಿರದಂತೆಯೂ ತಮ್ಮ ರಕ್ಷಣೆಯ ಬಗ್ಗೆಯೂ ಒಂದು ಸಂಘವನ್ನು ರಚಿಸಿಕೊಳ್ಳಬಹುದು. ಈ ಸಂಘದ ಕೇಂದ್ರ ಅಧಿಕಾರದಲ್ಲಿ ಅದಕ್ಕೆ ಸೇರುವ ಎಲ್ಲ ಸರ್ಕಾರಗಳ ಪ್ರತಿನಿಧಿಗಳೂ ಇರುತ್ತಾರೆ. ಆದರೆ ಈ ಕೇಂದ್ರ ಸಮಿತಿ ಯಾವೊಂದು ಸದಸ್ಯ ಸರ್ಕಾರದ ಮೇಲೂ ಅಧಿಕಾರವನ್ನು ಹೊಂದಿರುವುದಿಲ್ಲ. ಅದು ನಿರ್ಣಯಗಳನ್ನು ಅಂಗೀಕರಿಸಬಹುದು. ಆದರೆ ಅವುಗಳನ್ನು ಯಾವೊಂದು ಸರ್ಕಾರಕ್ಕೆ ಸೇರಿದ ಪ್ರದೇಶದಲ್ಲಿ ಜಾರಿ ಮಾಡುವುದಕ್ಕಾಗಲಿ, ಇಲ್ಲವೆ ಆ ಸರ್ಕಾರವನ್ನು ಜಾರಿ ಮಾಡುವಂತೆ ಬಲಾತ್ಕರಿಸುವುದಕ್ಕಾಗಲಿ ಸಾಧ್ಯವಿಲ್ಲ. ಎಂದರೆ, ಕಾನ್‌ಫೆಡರೇಷನ್ನಿನ ಕೇಂದ್ರ ಆಡಳಿತಾಂಗಕ್ಕೆ ಪರಮಾಧಿಕಾರವಿಲ್ಲ. ಅದರ ಸದಸ್ಯ ಸರ್ಕಾರಗಳು ತಮ್ಮ ಸ್ವತಂತ್ರ ಪರಮಾಧಿಕಾರವನ್ನು ಹೊಂದಿರುತ್ತವೆ. ಹಿಂದೆ ಇದ್ದ ಲೀಗ ಆಫ್ ನೇಷನ್ಸ್ ಅಥವ ಈಗಿರುವ ಸಂಯುಕ್ತ ರಾಷ್ಟ್ರಸಂಸ್ಥೆ ಇವುಗಳನ್ನು ಕಾನ್‌ಫೆಡರೇಷನ್ನಿನ ಉದಾಹರಣೆಯಾಗಿ ಕೊಡಬಹುದು.

ಆದರೆ ಫೆಡರೇಷನ್ನಿನಲ್ಲಿ, ಅದಕ್ಕೆ ಸೇರುವ ಪ್ರಾಂತಗಳು ಸ್ವತಂತ್ರ ಸಾರ್ವಭೌಮಾಧಿಕಾರವನ್ನು ಹೊಂದಿರದೆ, ಈ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಡುತ್ತವೆ. ಅದರ ನಿರ್ಧಾರಕ್ಕೆ ತಲೆಬಾಗುತ್ತವೆ. ಮತ್ತೊಂದು ಮುಖ್ಯ ಅಂಶವೇನೆಂದರೆ, ಕಾನ್‌ಫೆಡರೇಷನ್ನಿನಲ್ಲಿ ಅದಕ್ಕೆ ಸೇರುವ ಯುನಿಟ್ಟುಗಳು ತಮಗೆ ಇಚ್ಛೆ ಬಂದಾಗ ಕಾನ್‌ಫೆಡರೇಷನನ್ನು ತ್ಯಜಿಸಿ ಹೋಗಲು ಕಾನೂನುಬದ್ಧವಾದ ಅಧಿಕಾರ ಹೊಂದಿರುತ್ತವೆ. ಆದರೆ ಫೆಡರೇಷನಿನಲ್ಲಿ ಆ ರೀತಿಯ ಅಧಿಕಾರವನ್ನು ಯೂನಿಟ್ಟುಗಳು ಅಥವ ಪ್ರಾಂತಗಳು ಹೊಂದಿರುವುದಿಲ್ಲ. ಕಾನ್‌ಫೆಡರೇಷನ್ನಿನ ಕೇಂದ್ರ ಆಡಳಿತಾಂಗವು, ಅದಕ್ಕೆ ಸೇರಿದ ಸರ್ಕಾರಗಳೊಡನೆ ವ್ಯವಹರಿಸುವುದೇ ಹೊರತು, ಅವುಗಳ ಪ್ರಜೆಗಳೊಡನೆ ವ್ಯವಹರಿಸುವುದಿಲ್ಲ. ಕಾನ್‌ಫೆಡರೇಷನ್ನಿನ ನಿರ್ಧಾರಗಳಿಗೆ ಯಾವುದಾದರೊಂದು ಸರ್ಕಾರದ ಪ್ರಜೆಗಳು ವಿಧೇಯರಾಗಿ ನಡೆಯಬೇಕಾದರೆ, ಸರ್ಕಾರ ನಿರ್ಧಾರಗಳನ್ನು ಕಾರ್ಯಗತ ಮಾಡುವುದು ಅವಶ್ಯ. ಫೆಡರೇಷನ್ನಿನ ಕೇಂದ್ರ ಸರ್ಕಾರ, ತನಗೆ ಸೇರಿದ ಪ್ರಾಂತ ಸರ್ಕಾರಗಳು ಮಾತ್ರವಲ್ಲದೆ, ಅವುಗಳ ಪ್ರಜೆಗಳ ಮೇಲೂ ನೇರವಾ ಅಧಿಕಾರವನ್ನು ಹೊಂದಿರುತ್ತದೆ. ಎಂದರೆ ಫೆಡರಲ್ ರಾಜ್ಯಾಂಗದ ಪ್ರಜೆ, ತಾನು ವಾಸ ಮಾಡುವ ಪ್ರಾಂತಸರ್ಕಾರಕ್ಕೆ ಮಾತ್ರವಲ್ಲದೆ, ಫೆಡರಲ್ ಕೇಂದ್ರ ಸರ್ಕಾರಕ್ಕೂ ಸಹ ವಿಧೇಯನಾಗಿ ನಡೆದುಕೊಳ್ಳಬೇಕು. ಕಾನ್‌ಫೆಡರೇಷನ್ನಿಗೂ ಫೆಡರೇಷನ್ನಿಗೂ ಈ ಮೇಲೆ ಹೇಳಿದ ವ್ಯತ್ಯಾಸಗಳಿಂದ, ಮತ್ತೊಂದು ವ್ಯತ್ಯಾಸ ಉದ್ಭವವಾಗುತ್ತದೆ. ಕಾನ್‌ಫೆಡರೇಷನ್ನಿನ ಸಂಘಟನೆ, ಫೆಡರೇಷನ್ನಿನಷ್ಟು ಬಿಗಿಯಾದುದು ಅಧಿಕಾರಯುತವಾದುದೂ ಅಲ್ಲ. ಕಾನ್‌ಫೆಡರೇಷನ್ನಿನ ಅಂಗಗಳಿಗೆ ಸ್ವೇಚ್ಛಾವರ್ತಿಯಾಗಿರಲು ಹೆಚ್ಚು ಅವಕಾಶವಿದೆ. ಆದ್ದರಿಂದ ಅದರ ಅಂಗರಚನೆ ಬಹಳ ಸಡಿಲವಾದದ್ದು. ಇದರ ಪರಿಣಾಮವಾಗಿ ಕಾನ್‌ಫೆಡರೇಷನ್ ಹೆಚ್ಚು ದಿನ ಬಾಳತಕ್ಕದ್ದಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಫೆಡರೇಷನ್ ಬಹಳ ಬಿಗಿಯಾಗಿಯೂ, ಅಧಿಕಾರಯುತವಾಗಿಯೂ ಇರುವುದು. ಸಾಮಾನ್ಯವಾಗಿ ಫೆಡರೇಟಿವ್ ರಾಜ್ಯಾಂಗಗಳಲ್ಲಿ ಕೇಂದ್ರ ಸರ್ಕಾರಕ್ಕೂ ಪ್ರಾಂತ ಸರ್ಕಾರಕ್ಕೂ ಸಾಮಾನ್ಯವಾಗಿರುವ ಆಡಳಿತ ವಿಷಯಗಳಲ್ಲಿ ಯಾವಾಗಲಾದರೂ ಭಿನ್ನಾಭಿಪ್ರಾಯ ಉಂಟಾದರೆ, ಅಂತ್ಯದಲ್ಲಿ ಫೆಡರಲ್ ಸರ್ಕಾರದ ನಿರ್ಧಾರವೇ ಉಳಿಯುವುದು.

ಸ್ವಿಟ್ಜರ್ಲೆಂಡ್ ರಾಷ್ಟ್ರದ ರಾಜ್ಯಾಂಗ ಫೆಡರಲ್ ರಾಜ್ಯಾಂಗವಾದರೂ, ಇನ್ನೂ ಅದನ್ನು ಕಾನ್‌ಫೆಡರೇಷನ್ ಎಂದೇ ಕರೆಯಲು ಕಾರಣವೇನೆಂದು ಕೇಳಬಹುದು. ೧೮೪೭ರಲ್ಲಿ ಉಂಟಾದ ವೆಸ್ಟ್‌ಫಾಲಿಯಾ ಒಪ್ಪಂದದ ಪ್ರಕಾರ, ಸ್ವಿಟ್ಜರ್ಲೆಂಡ್ ಸ್ವತಂ

ಸರ್ವಭೌಮಾಧಿಕಾರವುಳ್ಳ ರಾಷ್ಟ್ರವೆಂದು ಪರಿಗಣಿಸಲ್ಪಟ್ಟಾಗಲೂ ಅಲ್ಲಿಂದಾಚೆಗೆ ಎರಡು ಶತಮಾನಗಳ ವರೆಗೂ, ಅದು ಕಾನ್‌ಫೆಡರೇಷನ್ ಆಗಿದ್ದಿತು. ಆ ಸಮಯದಲ್ಲಿ ಬಲಯುತವಾದ ಕೇಂದ್ರ ಸರ್ಕಾರ ಇರಲಿಲ್ಲ. ಗಲಭೆಗಳಲ್ಲಿ ಕ್ಯಾಥೋಲಿಕ್ ಹಾಗೂ ಪ್ರಾಟೆಸ್ಟಂಟ್ ಕ್ಯಾಂಟನ್‌ಗಳ ನಡುವೆ ಅಂತರ್ಯುದ್ಧ ನಡೆದುದರ ಪರಿಣಾಮವಾಗಿ, ಕಾನ್‌ಫೆಡರೇಷನ್ನಿಗೆ ಸೇರಿದ್ದ ಸರ್ಕಾರಗಳೆಲ್ಲವೂ, ಬಲಯುತವಾದ ಕೇಂದ್ರ ಸರಕಾರವೊಂದನ್ನು ಸ್ಥಾಪಿಸಿಕೊಂಡು, ಫೆಡರೇಷನ್ನಿಗೆ ಪರಿವರ್ತಿತವಾಗಲು ನಿರ್ಧಾರ ಮಾಡಿಕೊಂಡುವು. ರಾಜ್ಯಾಂಗ ಹಾಗೂ ರಾಜಕೀಯ ವಿಷಯಗಳಲ್ಲಿ ಈ ಫೆಡರೇಷನ್, ಇತರ ಎಲ್ಲಾ ಫೆಡರಲ್ ರಾಜ್ಯಾಂಗಗಳಂತೆಯೆ ಇದ್ದರೂ, ಕೆಲವು ಅಂಶಗಳಲ್ಲಿ ಮಾತ್ರ, ಸ್ವಿಸ್ ಕ್ಯಾಂಟನ್‌ಗಳು ವಿಶೇಷ ಸೌಲಭ್ಯಗಳನ್ನು ಹೊಂದಿವೆ. ಸ್ವಿಸ್ ಫೆಡರಲ್ ಸರ್ಕಾರಕ್ಕೆ ಸೇರಿದ ಯಾವುದಾದರೊಂದು ಕ್ಯಾಂಟೊನಲ್ ಸರ್ಕಾರ, ವಿದೇಶದಲ್ಲಿ ತನ್ನ ವಾಣಿಜ್ಯ ಪ್ರತಿನಿಧಿಯನ್ನು ಹೊಂದಿರಲು ಅವಕಾಶವಿದೆ. ಇನೇ ಮುಂತಾದ ಕಾರಣಗಳಿಂದ, ಈಗಲೂ ಸಹ ಸ್ವಿಸ್ ದೇಶದ ಅಂಗರಚನೆಗೆ ' ಕಾನ್‌ಫೆಡರೇಷನ್ ' ಎಂಬ ಹೆಸರೇ ಉಳಿದಿದೆ.

ಫೆಡರಲ್ ರಾಜ್ಯಾಂಗಗಳಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದುದು ಕೇಂದ್ರಸರ್ಕಾರಕ್ಕೂ ಪ್ರಾಂತಸರಕಾರಗಳಿಗೂ ಇರುವ ಅಧಿಕಾರಗಳ ಹಂಚಿಕೆ. ಈ ವಿಷಯದಲ್ಲಿ ಹೆಚ್ಚುಕಡಿಮೆ ಎಲ್ಲಾ ಫೆಡರಲ್ ರಾಜ್ಯಾಂಗಗಳು ಒಂದೇ ರೀತಿ ಇರುತ್ತವೆ. ಇಲ್ಲಿ ಸ್ವಿಸ್ ರಾಜ್ಯಾಂಗವನ್ನು, ನಾವು ಅಮೇರಿಕಾ ಸಂಯುಕ್ತ ಸಂಸ್ಥಾನದ ಫೆಡರಲ್ ರಾಜ್ಯಾಂಗಕ್ಕೆ ಹೋಲಿಸಬಹುದು. ಸ್ವಿಟ್ಜರ್‌ಲಂಡಿನಲ್ಲಿ ಅಧಿಕಾರಗಳ ವಿಂಗಡಣೆ ಈ ರೀತಿ ಇದೆ: ಕೇಂದ್ರ ಸರ್ಕಾರ ಮಾತ್ರ ಹೊಂದಿರುವ ಅಧಿಕಾರಗಳು, ಕೇಂದ್ರಸರ್ಕಾರ ಹಾಗು ಪ್ರಾಂತೀಯ ಸರ್ಕಾರ ಇವೆರಡೂ ಒಟ್ಟಿಗೆ ಅಧಿಕಾರ ಹೊಂದಿರುವ ಆಡಳಿತ ವಿಷಯಗಳು ಮತ್ತು ಕಡೆಯದಾಗಿ ಪ್ರಾಂತ ಅಥವಾ ಕ್ಯಾಂಟೊನಲ್ ಸರ್ಕಾರಗಳು ಮಾತ್ರ ಹೊಂದಿರುವ ವಿಷಯಗಳು, ವಿದೇಶಾಂಗನೀತಿ, ಯುದ್ಧ ಮತ್ತು ಶಾಂತಿ, ಒಪ್ಪಂದಗಳು, ಮಿಲಿಟರಿ, ಅಂಚೆ ಇಲಾಖೆ, ಕೆಲವನ್ನು ಮಾತ್ರ ಬಿಟ್ಟು ಉಳಿದ ಎಲ್ಲಾ ರೈಲ್ವೆಗಳು, ತಂತಿ ಮತ್ತು ಟೆಲಿಫೋನ್ ಇಲಾಖೆ, ದೇಶದಲ್ಲಿ ಚಿನದ ಚಲಾವಣೆ, ಬ್ಯಾಂಕಿಂಗ್ ಮತ್ತು ವಾಣಿಜ್ಯದ ಹತೋಟಿ, ಕೆಲವು ಸುಂಕಗಳು, ನೀರಿನಿಂದ ತಯಾರು ಮಾಡಬಹುದಾದ ಶಕ್ತಿಗಳು, ಆಸ್ಫೋಟಕ ವಸ್ತುಗಳು, ದ್ರಾವಕಗಳು; ಈ ಎಲ್ಲಾ ವಿಷಯಗಳು ಸಂಪೂರ್ಣವಾಗಿ ಸ್ವಿಟ್ಜರ್‌ಲಂಡಿನ ಕೇಂದ್ರಸರ್ಕಾರಕ್ಕೆ ಒಳಪಟ್ಟಿವೆ. ಕ್ಯಾಂಟೋನಲ್ ಸರ್ಕಾರಗಳು ಇವುಗಳಲ್ಲಿ ಕೈಹಾಕುವಂತಿಲ್ಲ. ಸಿವಿಲ್ ಮತ್ತು ಕ್ರಿಮಿನಲ್ ಕಾನೂನು, ನ್ಯಾಯ, ಕೈಗಾರಿಕೆ, ವಿಮೆ, ವೃತ್ತಪತ್ರಿಕೆಗಳ ಮೇಲಿನ ಹತೋಟಿ, ಪಿಸ್ತೂಲುಗಳು, ವಿದ್ಯಾಭ್ಯಾಸ ಈ ವಿಷಯಗಳಲ್ಲಿ ಕೇಂದ್ರ ಸರ್ಕಾರವೂ, ಕ್ಯಾಂಟೊನಲ್ ಸರ್ಕಾರಗಳೂ ಒಟ್ಟಿಗೆ ಸಮಾನವಾದ ಅಧಿಕಾರಗಳನ್ನು ಹೊಂದಿವೆ. ಎಲ್ಲಾ ಸರ್ಕಾರಗಳು ತಮ್ಮ ಮಿತಿಯಲ್ಲಿ, ತಮಗೆ ಸಂಬಂಧಪಟ್ಟಂತೆ ಅಧಿಕಾರಗಳನ್ನು ಚಲಾಯಿಸುತ್ತವೆ. ಆದರೆ ಈ ಸಾಮಾನ್ಯ ಅಧಿಕಾರಗಳ ವಿಷಯದಲ್ಲಿ ಯಾವುದಾದರೊಂದು ಕ್ಯಾಂಟೊನಲ್ ಸರ್ಕಾರಕ್ಕೂ, ಫೆಡರಲ್ ಸರ್ಕಾರಕ್ಕೂ ಭಿನ್ನಾಭಿಪ್ರಾಯ ಹುಟ್ಟಿತೆಂದರೆ, ಫೆಡರಲ್ ಸರ್ಕಾರದ ಅಂತ್ಯನಿರ್ಧಾರವೇ ಆಖೈರಾಗಿ ಉಳಿಯುವುದು. ಪ್ರಾಂತೀಯ ಸರ್ಕಾರ ಅದನ್ನೇ ಅನುಸರಿಸಬೇಕಾಗುವುದು. ಸ್ವಿಸ್ ರಾಜ್ಯಾಂಗದ ವಿಶೇಷವೇನೆಂದರೆ, ಕೇಂದ್ರ ಸರ್ಕಾರವೂ ಪ್ರಾಂತಸರ್ಕಾರಗಳೂ ಕೆಲವು ಅಧಿಕಾರಗಳನ್ನು ಹೊಂದಿರಕೂಡದೆಂದು ರಾಜ್ಯಾಂಗ ನಿಷೇಧಿಸಿದೆ. ಕೋಮುವಾರು ಅಥವಾ ಮತೀಯ ವಿಷಯಗಳಲ್ಲಿ, ಯಾವ ಸರ್ಕಾರವೂ ಯಾರಮೇಲೂ ಬಲಾತ್ಕಾರವನ್ನು ಪ್ರಯೋಗಿಸುವಂತಿಲ್ಲ. ಬಡತನ ಅಥವಾ ಮತೀಯ ನಂಬುಗೆ ಇವುಗಳನ್ನು ಮುಂದಿಟ್ಟು, ವಿವಾಹಗಳನ್ನು ಸರ್ಕಾರ ಅಡ್ಡಿಪಡಿಸುವಂತಿಲ್ಲ. ಇವೆಲ್ಲಕ್ಕಿಂತ ಮುಖ್ಯವಾಗಿ ಕೇಂದ್ರ ಸರ್ಕಾರವಾಗಲಿ, ಕ್ಯಾಂಟೊನಲ್ ಸರ್ಕಾರವಾಗಲಿ, ಯಾರನ್ನೂ ರಾಜಕೀಯತಪ್ಪಿಗಾಗಿ ಮರಣದಂಡನೆಗೆ ಗುರಿಪಡಿಸುವ ಅಧಿಕಾರವನ್ನು ಹೊಂದಿಲ್ಲ. **Federal** ಸರ್ಕಾರದ ಆಡಳಿತ ವಿಷಯಗಳು, **Federal** ಮತ್ತು **Cantonal** ಸರ್ಕಾರಗಳು ಸಾಮಾನ್ಯವಾಗಿ ಹೊಂದಿರುವ ಅಧಿಕಾರಗಳು, ಎರಡೂ ಹೊಂದದೆ ಇರುವ ರಾಜ್ಯಾಂಗ ನಿಷಿದ್ಧವಾದ ವಿಷಯಗಳು, ಈ ಮೂರು ಬಗೆಗಳನ್ನು ಬಿಟ್ಟು ಇತರ ಎಲ್ಲಾ ಉಳಿಕೆಯ ಅಧಿಕಾರಗಳನ್ನೂ, ಆಡಳಿತ ವಿಷಯಗಳನ್ನೂ, ಪ್ರಾಂತ ಅಥವಾ ಕ್ಯಾಂಟೊನಲ್ ಸರ್ಕಾರಗಳು ಹೊಂದಿರುತ್ತವೆ.

ಇನ್ನು ಫೆಡರಲ್ ಸರ್ಕಾರದ ಅಂಗರಚನೆಯ ವಿಷಯ : ಇದನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಲೆಜಿಸ್ಲೇಟರ್, ಎಕ್ಸೆಕ್ಯೂಟಿವ್, ಜುಡೀಷಿಯರಿ ಎಂದರೆ ಶಾಸನಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ. ಸ್ವೀಟ್ಜರ್‌ಲಂಡ್ ರಾಷ್ಟ್ರದ ಶಾಸಕಾಂಗ ಎರಡು ಸಭೆಗಳನ್ನು ಹೊಂದಿದೆ. ಇದಕ್ಕೆ ಆಂಗ್ಲ ಭಾಷೆಯಲ್ಲಿ ಬೈಕ್ಯಾಮೆರಲ್ ಎಂದರೆ ದ್ವಿಮುಖ ಶಾಸನಾಂಗ ಎಂದು ಕರೆಯುತ್ತಾರೆ. ಮೊದಲನೆಯದು " ಕೌನ್ಸಿಲ್ ಆಫ್ ಸ್ಟೇಟ್ಸ್, " ಎರಡನೆಯದು "ನ್ಯಾಷನಲ್ ಕೌನ್ಸಿಲ್." ಇವೆರಡೂ ಸೇರಿ ಸ್ವಿಸ್ ಶಾಸಕಾಂಗಕ್ಕೆ ' ಸ್ವಿಸ್ ಫೆಡರಲ್ ' ಎಂಬುದಾಗಿ ಹೆಸರು. ಮೇಲಿನ ಸಭೆಯಾದ ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ಒಟ್ಟು ನಲವತ್ತನಾಲ್ಕು ಮಂದಿ ಸದಸ್ಯರಿದ್ದಾರೆ. ಎಂದರೆ ಹತ್ತೊಂಬತ್ತು ಪೂರ್ಣ ಕ್ಯಾಂಟನ್‌ಗಳಿಂದ ಇಬ್ಬಿಬ್ಬರು ಪ್ರತಿನಿಧಿಗಳೂ, ಆರು ಅರ್ಧ ಕ್ಯಾಂಟನ್‌ಗಳಿಂದ ಒಬ್ಬೊಬ್ಬ ಪ್ರತಿನಿಧಿಯೂ ಆರಿಸಿ ಬರುವರು. ಈ ಪ್ರತಿನಿಧಿಗಳ ಚುನಾವಣೆಗೆ ಫೆಡರಲ್ ಸರ್ಕಾರದವರು ಯಾವ ನೇರವಾದ ಏರ್ಪಾಡನ್ನೂ ಮಾಡಿಲ್ಲ. ಅದು ಆಯಾ ಕ್ಯಾಂಟೊನಲ್ ಸರ್ಕಾರಗಳಿಗೆ ಸಂಬಂಧಪಟ್ಟದ್ದು. ಕೆಲವು ಕ್ಯಾಂಟನ್‌ಗಳಲ್ಲಿ ಕೌನ್ಸಿಲ್ ಆಫ್ ಸ್ಟೇಟ್ ಪಟ್ಟಿಗೆ ಸದಸ್ಯರನ್ನು ಜನಗಳಿಂದ ನೇರವಾಗಿಯೂ, ಕೆಲವೆಡೆ ಕ್ಯಾಂಟನ್‌ಗಳ ಶಾಸನ ಸಭೆಗಳಿಂದಲೂ ಚುನಾಯಿಸುತ್ತಾರೆ. ಸದಸ್ಯರ ಅಧಿ-

WHILE AT DHARWAR--
For Clean & Tasty Meals
THE CITY CENTRAL LODGE
OPP. REGAL TALKIES,
DHARWAR
Will be the right Selection
VISIT ONCE...AND...BE SATISFIED.

ಸ್ವಚ್ಛ ಮತ್ತು ಆರೋಗ್ಯಕರವಾದ ಊಟ-ತಿಂಡಿ ಗಳಿಗಾಗಿ ಅತ್ಯುತ್ತಮ ಏರ್ಪಾಡು!

ದಿ ಸಿಟಿ ಸೆಂಟ್ರಲ್ ಲಾಜ್,
(ರೀಗಲ್ ಟಾಕೀಜಿನ ಎದುರು)
ಧಾರವಾಡ

ವಿದ್ಯಾರ್ಥಿಗಳೇ ಆಗಲಿ, ಪ್ರವಾಸಿಕರೇ ಆಗಲಿ ಊಟಕ್ಕಾಗಿ ತೊಂದರೆ ಪಡಬೇಕಾಗಿಲ್ಲ ಶುಚಿಕರವಾದ ಏರ್ಪಾಡು; ಒಮ್ಮೆ ಬಂದು ಒಳ್ಳೆಯ ಅನುಭವ ಪಡೆಯಿರಿ.

ಕಾರಾವಧಿಯೂ ಸಹ ಆಯಾ ಪ್ರಾಂತೀಯ ಸರ್ಕಾರಗಳ ನಿರ್ಧಾರದ ಮೇಲೆ ಅವಲಂಬಿಸಿರುವುದು. ಈ ಕೌನ್ಸಿಲ್ ಆಫ್ ಸ್ಟೇಟ್ ಸಭೆಗೆ ಎಲ್ಲಾ ವಿಷಯಗಳಲ್ಲೂ ಹೆಚ್ಚುಕಡಿಮೆ—ಕೆಳಗಣ ಸಭೆ ಎಂದರೆ ನ್ಯಾಷನಲ್ ಕೌನ್ಸಿಲ್‌ನಷ್ಟೇ ಅಧಿಕಾರವಿರುವುದು. ಆದರೂ ಸಹ ಶಾಸನಗಳ ರಚನೆಯಲ್ಲಿ ಮೇಲಣ ಸಭೆಯ ಅಧಿಕಾರ ಅಷ್ಟು ಪ್ರಾಮುಖ್ಯವಾದದ್ದಲ್ಲ.

ಸ್ವಿಸ್ ಫೆಡರಲ್ ಪಾರ್ಲಿಮೆಂಟಿನ ಕೆಳಗಣ ಸಭೆಯೆಂದರೆ ಸ್ವಿಸ್ ನ್ಯಾಷನಲ್ ಕೌನ್ಸಿಲ್. ಇದರಲ್ಲಿ ಸುಮಾರು ಇನ್ನೂರು ಮಂದಿ ಸದಸ್ಯರಿದ್ದಾರೆ. ಈ ಸಭೆಯ ಅಧಿಕಾರಾವಧಿ ನಾಲ್ಕು ವರ್ಷಗಳು. ಪ್ರತಿ ನಾಲ್ಕನೆಯ ವರ್ಷದ ಅಂತ್ಯದಲ್ಲಿಯೂ, ಪ್ರತಿಯೊಂದು ಕ್ಯಾಂಟನ್‌ನಲ್ಲಿಯೂ ಚುನಾವಣೆ ನಡೆಯುವುದು, ಪ್ರಮಾಣಪ್ರತಿನಿಧ್ಯ ಪದ್ಧತಿಯನ್ನು ಈ ಚುನಾವಣೆಯಲ್ಲಿ ಅನುಸರಿಸುತ್ತಾರೆ. ಜನಸಂಖ್ಯೆ ಎಷ್ಟೇ ಕಡಿಮೆ ಇದ್ದರೂ, ಪ್ರತಿಯೊಂದು ಕ್ಯಾಂಟನ್ನಿಗೂ ಒಬ್ಬ ಪ್ರತಿನಿಧಿಯಾದರೂ ಇದ್ದೇ ಇರುತ್ತಾನೆ. ಈ ರೀತಿ ಒಬ್ಬನೇ ಪ್ರತಿನಿಧಿಯನ್ನು ಆರಿಸಿ ಕಳುಹಿಸುವೆಡೆಗಳಿಗೆ ಪ್ರಮಾಣಪ್ರತಿನಿಧ್ಯ ಪದ್ಧತಿ ಅನ್ವಯಿಸುವುದಿಲ್ಲ. ಪ್ರತಿಯೊಬ್ಬ ನಯಸ್ಸ ಗಂಡುಸಿಗೂ ಅಲ್ಲಿ ಓಟಿನ ಹಕ್ಕನ್ನು ಕೊಡಲಾಗಿದೆ. ಸ್ವಿಟ್ಜರ್ಲಂಡ್ ಇಷ್ಟು ಮುಂದುವರಿದಿದ್ದರೂ ಸಹ, ಅಲ್ಲಿ ಮಹಿಳೆಯರಿಗೆ ಓಟಿನ ಹಕ್ಕನ್ನು ಕೊಟ್ಟಿಲ್ಲ. ಪ್ರತಿಯೊಬ್ಬ ಮತದಾರನಿಗೂ ಕಡೆಯ ಪಕ್ಷ ಇಪ್ಪತ್ತುವರ್ಷಗಳ ವಯಸ್ಸಾಗಿರಬೇಕು.

ಸ್ವಿಸ್ ಫೆಡರಲ್ ಪಾರ್ಲಿಮೆಂಟಿನ ಅಧಿವೇಶನ, ಸಾಮಾನ್ಯವಾಗಿ ವರ್ಷಕ್ಕೆರಡು ಬಾರಿ ಸೇರುವುದು. ಸದಸ್ಯರು ಜರ್ಮನ್, ಇಟಾಲಿಯನ್ ಮತ್ತು ಫ್ರೆಂಚ್ ಈ ಮೂರು ಭಾಷೆಗಳಲ್ಲಿ, ಯಾವುದನ್ನಾದರೂ ಮಾತನಾಡಬಹುದು. ಈ ಭಾಷೆಗಳೆಲ್ಲವೂ ಅಧಿಕೃತ ಅಂಗೀಕಾರವನ್ನು ಪಡೆದಿವೆ; ಮತ್ತು ಹೆಚ್ಚು ಕಡಿಮೆ ಎಲ್ಲಾ ಮುಖ್ಯ ಕಾಗದಪತ್ರಗಳನ್ನೂ, ಮೂರುಭಾಷೆಗಳಲ್ಲೂ ಅಚ್ಚು ಹಾಕಿಸಿ ಇಟ್ಟಿರುತ್ತಾರೆ. ರಾಜ್ಯಾಂಗದ ಪ್ರಕಾರ ಕೌನ್ಸಿಲ್ ಆಫ್ ಸ್ಟೇಟ್ ಮತ್ತು ನ್ಯಾಷನಲ್ ಕೌನ್ಸಿಲ್ ಈ ಎರಡು ಸಭೆಗಳಿಗೂ ಒಂದೇ ಸಮನಾದ ಅಧಿಕಾರವಿದ್ದರೂ, ವಾಸ್ತವವಾಗಿ, ಮೇಲಣ ಸಭೆ ಎಂದರೆ ಕೌನ್ಸಿಲ್ ಆಫ್ ಸ್ಟೇಟ್ ಸಭೆಯ ಅಧಿಕಾರ ಕುಂದಿದೆ. ಎಲ್ಲಿಯವರೆಗೆ ನ್ಯಾಷನಲ್ ಕೌನ್ಸಿಲ್ ಸಭೆಗೆ ಜನತೆಯ ವಿಶ್ವಾಸ ಮತ್ತು ಬೆಂಬಲವಿರುತ್ತದೋ, ಅಲ್ಲಿಯವರೆಗೆ ಆ ಸಭೆ ದೇಶದಲ್ಲಿ ಸಂಪೂರ್ಣ ಅಧಿಕಾರವನ್ನು ಹೊಂದಿರುವುದು. ಅದರ ನಿರ್ಧಾರಗಳನ್ನು ಕಾರ್ಯಾಂಗವಾಗಲಿ ನ್ಯಾಯಾಂಗವಾಗಲಿ ರದ್ದುಪಡಿಸುವಂತಿಲ್ಲ. ಆದರೆ ಪ್ರಜೆಗಳು ಮಾತ್ರ ಶಾಸನ ಸಭೆಯ ಯಾವ ನಿರ್ಧಾರವನ್ನಾದರೂ ರದ್ದುಪಡಿಸಬಹುದು. ಯಾವ ಮಸೂದೆ ಕಾರ್ಯಗತವಾಗಬೇಕಾದರೂ, ಅದನ್ನು ಎರಡು ಶಾಸನ ಸಭೆಗಳೂ ಅಂಗೀಕರಿಸಬೇಕೆಂಬ ನಿಯಮವಿದೆ. ಶಾಸನ ಸಭೆಯ ಯಾವೊಬ್ಬ ಸದಸ್ಯನಾದರೂ ವೈಯಕ್ತಿಕವಾಗಿ ಮಸೂದೆಯನ್ನು ಮಂಡಿಸುವ ಅಧಿಕಾರವಿದ್ದರೂ, ಸಾಮಾನ್ಯವಾಗಿ ಪ್ರಮುಖವಾದ ಮಸೂದೆಗಳೆಲ್ಲವನ್ನು ಫೆಡರಲ್ ಕೌನ್ಸಿಲ್ ಎಂದರೆ ಕೇಂದ್ರ ಮಂತ್ರಿಮಂಡಳ ಮುಂಚೆಯೆ ಪರಿಶೀಲಿಸಿ, ಅದನ್ನು ಸೂಕ್ತವಾದ ರೀತಿಯಲ್ಲಿ ಸಭೆಯ ಮುಂದೆ ಮಂಡಿಸುತ್ತದೆ. ಸಾಧಾರಣವಾಗಿ ಈ ಶಾಸನಸಭೆಗಳು ತಮ್ಮ ಕೆಲಸಗಳ ಹೆಚ್ಚು ಭಾಗವೆಲ್ಲವನ್ನೂ, ಸಮಿತಿಗಳನ್ನು ನೇಮಿಸಿ ಅವುಗಳ ಮೂಲಕ ನಡೆಯಿಸುತ್ತವೆ. ಸಾಮಾನ್ಯವಾಗಿ ವಿದೇಶಾಂಗ ನೀತಿ, ಯುದ್ಧ ಮತ್ತು ಶಾಂತಿ, ಅಗತ್ಯ ಕಂಡು ಬಂದರೆ ರಾಜ್ಯಾಂಗದ ಪುನರ್ವಿಮರ್ಶೆ, ಅವಶ್ಯವಾದ ಕಾನೂನುಗಳನ್ನು ಮಾಡುವುದು, ವಾರ್ಷಿಕ ಆಯವ್ಯಯ, ನ್ಯಾಯಾಸ್ಥಾನಗಳ ಆಡಳಿತದ ಮೇಲ್ವಿಚಾರಣೆ, ಈ ವಿಷಯಗಳೆಲ್ಲವೂ ಸ್ವಿಸ್ ಶಾಸನಸಭೆಯಲ್ಲಿ ಚರ್ಚೆಗೆ ಬರುತ್ತವೆ. ಸಭೆಯ ನಿರ್ಧಾರದಂತೆ ಆ ಬಗ್ಗೆ ಕೆಲಸ ನಡೆಯುತ್ತದೆ. ಸ್ವಿಟ್ಜರ್ಲಂಡಿನಲ್ಲಿ ಆಡಳಿತ ನಡೆಯಿಸುವ ಕಾರ್ಯಾಂಗಕ್ಕೆ ಫೆಡರಲ್ ಕೌನ್ಸಿಲ್ ಎಂಬುದಾಗಿ ಹೆಸರು. ಪ್ರತಿಸಾರಿಯೂ ಹೊಸ ಚುನಾವಣೆ ನಡೆದ ತರುಣದಲ್ಲಿ, ಸ್ವಿಸ್ ಪಾರ್ಲಿಮೆಂಟಿನ ಎರಡು ಶಾಸನ ಸಭೆಗಳೂ ಜಂಟಿ ಅಧಿವೇಶನವನ್ನು ನಡೆಸಿ, ಕಾರ್ಯಾಂಗವನ್ನು, ನ್ಯಾಯಾಧೀಶರುಗಳನ್ನೂ, ಫೆಡರಲ್ ಸೈನ್ಯಗಳ ಪ್ರಧಾನ ದಂಡನಾಯಕರನ್ನೂ ಚುನಾಯಿಸುತ್ತವೆ. ಇದಿಷ್ಟು ಸ್ವಿಸ್ ಶಾಸನಾಂಗದ ವಿಷಯವಾಯಿತು.

ನಮಸ್ಕಾರ, ಡಾಕ್ಟರರೇ! (ಹರಟೆ)

ಶ್ರೀ. ಮಾನೋಳಳರ ಶ್ರೀಧರರಾಯರು, ಪುಣೆ

ದೇಹಕ್ಕೆ ರೋಗವೆಂದು ಡಾಕ್ಟರರ ಬಳಿ ಹೋದರೆ, ಡಾಕ್ಟರ ಬಿಲ್ಲಿನ ಚಿಂತೆ ಮನೋರೋಗವನ್ನೂ ಹೆಚ್ಚಿಸಿತು. ಎಂಟಾಣೆಯ ಸುಂಟಿ-ಬಿಲ್ಲದ ಔಷಧಿ ನೀಗದ ರೋಗವನ್ನೂ ಓಡಿಸಿತು.

★

"ವೈದ್ಯರಾಜ ನಮಸ್ತುಭ್ಯಂ ಯಮರಾಜ ಸಹೋದರ!
ಯಮಸ್ತು ಹರತಿ ಪ್ರಾಣಾನ್ ವೈದ್ಯೋ ಪ್ರಾಣ-ಧನಾನಿಚ"
"ವೈದ್ಯಂ ಸರ್ವಾನವದ್ಯಂ ವಿಚಿನುತ ಶರಣಂ ಪ್ರಾಣ-
ಸಂಪ್ರೀಣನಾಯ"
(ಸುಭಾಷಿತೇ).

ನಮ್ಮ ಭಾರತದೇಶದಲ್ಲಿ ಮೊದಲಿನಿಂದಲೂ ವೈದ್ಯವಿದ್ಯೆ ಯದೆಯೆಂಬುದು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ. ತಕ್ಷಶಿಲಾ ತ್ತು ವಿಶೇಷತಃ ನಳಂದಾ ಎಂಬ ವಿದ್ಯಾಪೀಠಗಳಲ್ಲಿ ವೈದ್ಯ-ಸ್ಯೆಯನ್ನು ಕಲಿಯಲಿಕ್ಕೆ ಅರಬಸ್ತಾನ, ಇರಾಣ, ಚೀನ, ಇಟಲಿ-ಂದ ಜನರು ಬಂದು, ಕಲಿತು, ಪ್ರವೀಣರಾಗಿ ಜಗತ್ತಿನ ತುಂಬ ೋಗ್ಯಕ್ಕೆ ಅನುಕೂಲರಾಗುತ್ತಿದ್ದರು. ಚರಕ, ವಾಗ್ಭಟ, ಶ್ರುತ ಇಂತಹ ಮಹಾ ವೈದ್ಯವಿಶಾರದರು ಗ್ರಂಥಗಳನ್ನು ದು, ತಮ್ಮ ಅನುಭವಗಳನ್ನು ಜಗತ್ತಿನ ಎದುರಿಗೆ ಇಟ್ಟು ೋಪಕಾರಿಗಳಾದರು. ರೋಗಸಂಪನ್ನರಾದವರನ್ನು ಆರೋಗ್ಯ ಪನ್ನರನ್ನಾಗಿ ಮಾಡುವುದು ವೈದ್ಯರ ಕೆಲಸ. ಅದನ್ನು ಗತ್ತಿನ ಆ ತುದಿಯಿಂದ ಈ ತುದಿಯವರೆಗೂ ಈಗಲೂ ದ್ಯರು ಮಾಡುತ್ತಲೇ ಇದ್ದುದನ್ನು ನೋಡಬಹುದು.

ಬ್ರಿಟಿಶರ ರಾಜ್ಯವು ನಮ್ಮ ದೇಶದಲ್ಲಿ ಬಂದಕೂಡಲೆ, ಅನೇಕ ಕಗಳೆಲ್ಲ ನಮ್ಮ ದೇಶದಲ್ಲಿ ಬರಹತ್ತಿದುವು. ಬರೆಯುವ ಸಹೇನು, ಉಡುವ ಧೋತರ, ಹಾಕುವ ಟೊಪ್ಪಿಗೆ, ಕೂಡುವ ಯಕಲ್ಲು, ಓದುವ ಪುಸ್ತಕ, ನೋಡುವ ಕನ್ನಡಕ, ಕೇಳುವ ಡಿನ ಯಂತ್ರ, ಕುಡಿಯುವ ಔಷಧ—ಯಾವ ಕಾರ್ಯವನ್ನು ಾಡಿದರೂ ಅದಕ್ಕೆ ಸಾಧನವೆಲ್ಲ—ಬ್ರಿಟಿಶರಿಂದ ಬರಹತ್ತಿತು. ದ್ದರಿಂದ ನಮ್ಮ ದೇಶದ ಕಲಾಕೌಶಲ್ಯಗಳೆಲ್ಲ ಹರಿದು-ೋದಂತೆ, ವೈದ್ಯವಿದ್ಯೆಯೂ ಮಾಯವಾಯಿತು. ಅವರ ವೈದ್ಯ-ದ್ಯೆಯನ್ನು ಕಲಿತ ಡಾಕ್ಟರರೂ ಅವರ ಯಂತ್ರಗಳಿಂದ ಸಿದ್ಧ-ದ ಸಿದ್ಧೌಷಧಿಗಳೂ ಬಂದುವು. ಮನೆಮನೆಗೆ ನೀರಿನ ನಳ-ತೆ ಔಷಧಗಳಿಂದ ತುಂಬಿದ ಬಾಟ್ಲಿಗಳೂ ಬರಹತ್ತಿದುವು. ನನಗೊಂದು ದಿವಸ ಏನಾಯಿತೋ ಏನೋ, ಹೊಟ್ಟೆಯ ಡಬದಿಯಲ್ಲಿ ನೋಯಹತ್ತಿತು. ಊಟ ಹೋಗಲಿಲ್ಲ; ಓಕರಿಕೆ ಬರಹತ್ತಿತು. ಯಂತ್ರವಿದ್ಯೆ, ಗಣಿತ-ಭೂಮಿತಿ, ಜ್ಯೋತಿಷ ಶಾಸ್ತ್ರಗಳಂತೆಯೇ ನನ್ನ ಪ್ರಗತಿಯು ವೈದ್ಯಶಾಸ್ತ್ರದಲ್ಲಿ—ಎಂದರೆ ಪೂಜಿ. ನಮ್ಮ ಅಜ್ಜಿಯನ್ನು ಕೇಳಿದೆ. ಆಕೆ ಕಾಸಲಿಕ್ಕೆ ಹೇಳಿದಳು. ಕಾಸಿದೆ. ಏನೂ ಆಗಲಿಲ್ಲ. ಕಡೆಗೆ ಮೂರನೆಯ ದಿವಸ, ನಮ್ಮ ಮನೆಯ ಹತ್ತಿರದ 'ಗಡಬಡಿ' ಶಾಂತರಾವ (ಎಮ್. ಎ. ಪಿಎಚ್. ಡಿ. ಅಲ್ಲಲ್ಲ, ಎಮ್. ಬಿ ಬಿ. ಎಸ್. ಎಫ್. ಆರ್. ಓ. ಟಿ.—ಏನೇನೋ ಬರೆದಿತ್ತು) ಇವರ ಕಡೆಗೆ ಹೋದೆ. ಅಲ್ಲಿ ಜನ ಜಾತ್ರೆ. ನನ್ನ ನಂಬರು ಬರಬೇಕಾದರೇನೇ ಅರ್ಧಗಂಟೆ. ನಾನು ಎಂದೆಂದೂ ಡಾಕ್ಟರರ ಹೊಸ್ತಿಲನ್ನು ತಾಣದ್ದರಿಂದ ನನಗೆ ನಡುಗು ಹುಟ್ಟಿತು. ನಡುಗುತ್ತಲೆ ಡಾಕ್ಟರರ ಮುಂದೆ ನಿಂತೆ. "ಏನಾಗುತ್ತದೆ ನಿಮಗೆ?" ಎಂದು ವಿನಯಪೂರ್ಣ ನುಡಿಯಿಂದ ಕೇಳಿದರು. "ಹೊಟ್ಟೆ ನೋಯುತ್ತದೆ" ಎಂದು ನುಡಿದೆ. "ಒಳಗೆ ನಡೀರಿ" ಎಂದರು. "ಅಯ್ಯೋ ಹಣೇಬರಹವೇ! ಮತ್ತೆ ಒಳಗೆ ಏನೇನು ಆಗುವುದೋ!" ಎಂದು ಸಂಕಟಪಡುತ್ತ ಒಳಗೆ ಹೋದೆ. ಅಲ್ಲಿ ಒಂದು ಸುಂದರವಾದ ಪಲ್ಲಂಗು ಇತ್ತು. ಅದರ ಮೇಲೊಂದು ಮೆತ್ತನೆಯ ಗಾದಿ. ಅದರ ತಲೆಯ ಬದಿಗೆ ಒಂದು ಶುಭ್ರವಾದ ಹಂಸದುಪ್ಪಳದಿಂದಲೋ, ಕೋಳಿಯ ತುಪ್ಪಳದಿಂದಲೋ ತುಂಬಿರುವ ತಲೆದಿಂಬು. ನೋಡಿ ಸಂತುಷ್ಟವಾದೆ! ಕಳವು ಮಾಡಹೊರಟ ಬ್ರಾಹ್ಮಣನು ಕನ್ನವನ್ನುಕೊರೆದು, ಒಳಗೆ ಸುಂದರವಾದ ಗಣಪತಿಯನ್ನು ನೋಡಿ ಪೂಜೆ ಮಾಡಹೊಂಟಂತೆ ಆಯಿತು ನನಗೆ—ಪಲ್ಲಂಗು ನೋಡಿ ನಿದ್ದೆ ಬಂತು. ಅಲ್ಲಿಯೆ ಒಂದು ಬದಿಗೆ ಕಂಪಾವ್ಡರ್ ರಾಮಾಚಾರ್ರು ಔಷಧ ಕೊಡುತ್ತಿದ್ದರು. "ಅರ್ಧಗಂಟೆಯಾಯಿತು; ಡಾಕ್ಟರ್ರು ಒಳಗೆ ಬರಲೇ ಇಲ್ಲ!" ಎಂದು ಕೇಳಿದೆ. ಅವರು ಥಟಕ್ಕನೆ "ಖುರ್ಚೀದ ಮ್ಯಾಲ ಕಡೂರಿ. ಅವರಿಗೆ ನಿಮ್ಮದೊಂದೇ ಕೆಲಸಾ ಅಂತ ತಿಳದುಕೊಂಡಿರೇನು?" ಎಂದರು. ಏನೇ ಅಂದರೂ ಖುರ್ಚಿಯ ಮೇಲೆ ಕೂಡಲಿಕ್ಕೆ ಪರವಾನಿಗೆ ಸಿಕ್ಕಿದ್ದೇ ಲಾಭವೆಂದೆ. ಕೂತೆ; ಡಾಕ್ಟರರು ಬಂದರು. "ಹೋ! ಕೋಟು ಅಂಗೀ ಕಳೀರಿ" ಎಂದರು. ಹಾಗೇಮಾಡಿದೆ. "ಪಲ್ಲಂಗಿನ ಮೇಲೆ ಮಲಗಿಕೊಳ್ಳಿರಿ"

ಎಂದರು. ಹಾಗೆ ಮಾಡಿದೆ. (ಡಾಕ್ಟರರು ಹೇಳಿದಂತಯೇ ಕೇಳಬೇಕಲ್ಲ!) "ಕಾಲು ಮೇಲೆ ಮಡಿಚಿರಿ" ಎಂದರು. (ಹೆಣ-ದಂತೆಯೇ — ಎಂದು ನನಗೆ ಸಂಶಯ ಬಂತು). ಡಾಕ್ಟರರು ತಮ್ಮ ಕೊರಳೊಳಗಿನ ನಳಿಗೆಯಿಂದ ನನ್ನ ಎದೆಯನ್ನು ನೋಡಹತ್ತಿ-ದರು. ನಾನು ಅಲ್ಲಿ ನೋಯುವುದಿಲ್ಲವೆಂದು ಹೇಳಿದೆ. 'ಎಲ್ಲಿ?' ಎಂದು ಕೇಳಿದ್ದಕ್ಕೆ ಜಾಗೆ ತೋರಿಸಿದೆ. "All right" ಎಂದರು. ಎರಡೂ ಕಣ್ಣುಗಳನ್ನು ಕಿಸಿದು ನೋಡಿದರು. 'ಅಲ್ ರಾಯಿಟ್' ಎಂಬ ಪಲ್ಲವಿಯು ನಡೆದೇ ಇತ್ತು. ಕಟ್ಟಕಡೆಗೆ "yes" ಎಂಬ ಪಾಶುಪತಾಸ್ತ್ರವನ್ನು ಬಿಟ್ಟರು. ಕೊಟು-ಟೊಪ್ಪಿಗೆ- ಅಂಗಿ-ಚಸ್ಸಲುಗಳನ್ನು ಹಾಕಿ ಹೊರಗೆ ಹೋದೆ. ಡಾಕ್ಟರರು "ಸ್ವಲ್ಪ ಸೀರಿಯಸ್" ಎಂದರು. "ಈ ಔಷಧವನ್ನು ತಗೊಳ್ಳಿರಿ" ಎಂದು ಔಷಧದ ಕಾಗದವನ್ನು ಕೊಟ್ಟರು ನನಗೆ. ಅದರಲ್ಲಿ ನನ್ನ ಹೆಸರು, ದೆಸೆ, ರೋಗ, ವಯಸ್ಸು, ಔಷಧ, ಅದರ ಫೀ ಎಲ್ಲಾ ಬರೆದಿತ್ತು. ನಾನು ರಾಮಾಚಾರ್ಯರಿಗೆ ಖಿಡಿಕಿಯೊಳ-ಗಿಂದ ಕಾಗದ ಕೊಟ್ಟೆ. ಶ್ರೀಯುತ ರಾಮಾಚಾರ್ರು "ಬಾಟ್ಲು?" ಎಂದರು. ನಾನು "ತಂದಿಲ್ಲಾ" ಎಂದೆ. "ಹಾಂಗಾರ ಇಲ್ಲೇನು ಕಬ್ಬಿನ ರಸಾ ಕುಡೀಲಿಕ್ಕೆ ಬಂದೀರೇನು?" ಎಂದರು. 'ಇವರು ಔಷಧ ಕೊಡುವ ಕಂಪಾವುಂಡರರೋ, ಏನು ವಿದ್ಯೆಯನ್ನು ಕಲಿಸುವ ಸಾಲೀ ಮಾಸ್ತರರೋ' ಎಂದು ಮನದಲ್ಲಿ ಕೋಪ ಬಂತು. ಡಾಕ್ಟರರು "Be a little polite (ಸ್ವಲ್ಪ ವಿನಯದಿಂದ ಮಾತನಾಡಿರಿ!) Give him a bottle (ಅವರಿಗೊಂದು ಬಾಟ್ಲು ಕೊಡಿರಿ)" ಎಂದರು. ಅದಕ್ಕೆ ಅವರು "ನವ್ಕಪ್ಪಂದೇನು ಗಂಟು ಹೋಗತವ?" ಎಂದರು. ಮತ್ತೂ ಅದೇ! ಸ್ವಭಾವೊ ದುರತಿಕ್ರಮಃ! ಬಾಟ್ಲು ತುಂಬಿ ಕೊಟ್ಟರು. ನಮಸ್ಕಾರ ಮಾಡಿ ಹೊರಬಿದ್ದೆ. ಹೊತ್ತು ಬಂದಾಗ ಕತ್ತೆಯ ಕಾಲನ್ನೂ ಹಿಡಿಯ-ಬೇಕಾಗುತ್ತದೆಂಬುದನ್ನು ಯಾರೂ ಮರೆಯಕೂಡದು

ಮನೆಗೆ ಹೋಗಿ ಒಂದು ಡೋಜು ಕುಡಿದೆ. ಕೆಟ್ಟ ಔಷಧ.... ಹೊಲಸು ನಾರುತ್ತಿತ್ತು. ಊಟಕ್ಕೆ ಕುಳಿತೆ; ಮೊದಲೇ ಊಟ ಹೋಗುತ್ತಿರಲಿಲ್ಲ. ಅದರಲ್ಲಿ ಮತ್ತೆ ಹುಳಿ, ಎಣ್ಣೆ, ಸೊಸರು (ನನಗೆ ಪ್ರೀತಿಯವು, ಹುಳಿ ಇದ್ದರೆ) ವರ್ಜ್ಯ; ಹತ್ತು ಹನ್ನೆ-ರಡು ದಿವಸ ಔಷಧ ಕುಡಿಯುತ್ತ ಬಂದೆ ಇದ್ದುದಿದ್ದಂತೆಯೆ ಇತ್ತು. ಆ ಮೇಲೆ ನಾಲ್ಕೈದು ಇಂಜೆಕ್ಷನ್ (ಸೂಜಿ ಚುಚ್ಚಿಸಿ-ಕೊಳ್ಳುವುದು) ಆದುವು. ಎರಡು ಮೂರು ಸಾರಿ ಕೆಟ್ಟ ಮೋರೆ-ಮಾಡಿ, ಅರ್ಧ ಅರ್ಧ ಬಾಟ್ಲು ಔಡಲ ಎಣ್ಣೆಯನ್ನೂ ಕುಡಿದೆ. ಏನೂ ಆಗಲಿಲ್ಲ.

ನಮ್ಮ ಮನೆಯ ಆಚೆಗೆ ಒಬ್ಬ ವೃದ್ಧ ವೈದ್ಯರಿದ್ದರು. ಅವರಿಗೆ ನಮಸ್ಕಾರ ಮಾಡಿ ಕುಳಿತುಕೊಂಡೆ. ಅವರ ನಾಡೀ ಪರೀ-ಕ್ಷೆಯೇ ಅರ್ಧ ತಾಸು ನಡೆಯಿತು. ಅವರು ಹೊಟ್ಟೆಯನ್ನು ನೋಡಲಿಲ್ಲ, ನಳಿಗೆಯನ್ನು ಹಚ್ಚಲಿಲ್ಲ. ಒಮ್ಮೆ 'ಹೂ, ತಿಳಿ-ಯಿತು!' ಎಂದರು. ನನಗೆ ಅಘಾತವಾಯಿತು. ಅವರು ಕಾಡೇದ ಸಾವಾನು ಬರೆದುಕೊಟ್ಟರು. ಅದನ್ನೆಲ್ಲ ಕುಟ್ಟಿ ಪುಡಿ ಮಾಡಿ ಗಡಿಗೆಯೊಳಗೆ ಕುದಿಸಬೇಕು. ತಂಬಿಗೆ ನೀರಿಟ್ಟು ಅರ್ಧ ತಂಬಿಗೆ ಆಟ್ಟಿಸಬೇಕು. ಅದನ್ನು ದಿನಾಲು ನಾಲು ಹೊತ್ತು ಕುಡಿಯಬೇಕು. ಪಥ್ಯ: ಹಾಲು ಅನ್ನ (ಬರೇ, ಮೊಸರ ಮಜ್ಜಿಗೆ ವರ್ಜ್ಯ). ಜೀನುತುಪ್ಪ, ಸಕ್ಕರಿ, ಕಾಕಂಬಿ, ಕಬ್ಬಿನ ರಸ— ಏನೂ ಇಲ್ಲ! ದೈವವೆ! ವೈದ್ಯರ ಔಷಧವೆಂದರೆ ಮೊದಲೇ ಜೀನುತುಪ್ಪವೆಂದು ನನಗೆ ಎನಿಸುತ್ತಿದ್ದುದು ವ್ಯರ್ಥವಾಯಿತ ಆ ಔಷಧವೂ ಕಹಿ ವಿಷ! ಎರಡು ಸಪ್ತಕ (೧೪ ದಿವಸ) ಔಷ ಕುಡಿದೆ. ಛಲೇರೆ ಜಟ್ಟಿ! ಸ್ವಲ್ಪ ಗುಣವಾಯಿತು, ಹೌದೊ ಅಲ್ಲೋ! 'ಇನ್ನು ಔಷಧವೇ ಬೇಡ, ಮರಣ ಬಂದರ ಒಳ್ಳೇದು' ಎಂದೆ. ರೋಗವಿದ್ದವನಿಗೆ ಸುಮ್ಮನೆ ಕೂಡುವ-ದಾಗುವುದೇ? ಮತ್ತೆ ಒಬ್ಬ ಹೊಸ ಡಾಕ್ಟರರ ಕಡೆಗೆ ಹೋದೆ.

ಮಾರ್ತಾಂಡರಾವ ಮಾತಾಳಿ, (ಡಾಕ್ಟರ್ ಮತ್ತೆ ಏನೇನೋ ಬರೆದಿತ್ತು ಹಲಗೆಯ ಮೇಲೆ) ಇಂಗ್ಲಂಡಿಗೆ ಹೋಗಿ ಕಲಿತು ಬಂದವರು (London) ಎಂದು ಮತ್ತೊಂದು ಬಿರುದು ಇತ್ತು. ಇವರ ಥಾಟೇ ಬೇರೆ! ಇವರ ಬಂಗ್ಲೆ ದೊಡ್ಡದು. ಹೊರಗೆ ಹೂವಿನ ತೋಟ. ಬರೇ ಅಲ್ಲಿ ಕುಳಿತರೇ ಗಮಗಮ ವಾಸನೆ ಕುಡಿದು ರೋಗ ಹೋಗುವಂತಿತ್ತು. ಅಲ್ಲಲ್ಲಿ ಹೂವಿನ ಮಡಿ-ಗಳು, ಅಲ್ಲಲ್ಲಿ ಕಾರಂಜಿ, ಇಲ್ಲಲ್ಲ ಮಾವಿನ ಗಿಡ, ಬೇವಿನ ಗಿಡ. 'ಛೇ, ನಾನು ಹಣದಿ ತಪ್ಪಿ ಬಂದೆನೋ!' ಎಂದು ಸಂಶಯ ಬಂತು. ಔಷಧ ತುಂಬಿದ ಬಾಟ್ಲುಗಳನ್ನು ಕೈಯಲ್ಲಿ ಹಿಡಿದುಕೊಂಡು ಹೆಜ್ಜೆಗೊಮ್ಮೆ ಕೆಟ್ಟ ಮೋರೆ ಮಾಡಿ ನರಳುತ್ತ, ಬರಹೋಗು-ತ್ತಿದ್ದ ಕೆಲವು ಜನರನ್ನು ಕಂಡು, ಇವರೇ ಡಾಕ್ಟರರ ಕಡೆಗೆ ಹೋಗಿದ್ದಾರೆಂದು ತಿಳಿಯುವಂತಿತ್ತು. ದವಾಖಾನೆಯ ಹೊ ಮಗ್ಗಿಲಿನ ಗೋಡೆಗಳ ಮೇಲೆ ತರತರದ ರೋಗಗಳೂ ಅದ ರಿಂದಾಗುವ ವೇದನೆಗಳೂ ಮನದಟ್ಟಾಗುವಂತೆ, ತೋರಿಸು ತರತರದ ಚಿತ್ರಗಳಿದ್ದುವು. ಹಲ್ಲು ಹುಳಿತರೆ ಏನಾಗುತ್ತದೆ ಕಣ್ಣು ಕುಂದವಾದರೆ ಏನಾಗುತ್ತದೆ, ಕೂಟ್ಟೆಗೆ ಹುಣ್ಣು ಹುಟ್ಟಿದ ಏನಾಗುತ್ತದೆ, ಮೂಗು ಬಾತರೆ ಏನಾಗುತ್ತದೆ, ಕಿವಿಯ ಸೋರಿದರೆ ಏನಾಗುತ್ತದೆ, ಉದರ ರೋಗವಾದರೆ — ಇ ವೈದ್ಯಕೀಯ ಶಾಲೆಯೋ ದವಾಖಾನೆಯೋ ಎನ್ನುವಂತಿತ್ತು ಅಲ್ಲಿ ಹೊರಗೆ ಬಿಳಿಯ ಶುಭ್ರ, ಸ್ವಚ್ಛ, ಬರ್ಫದಂತಿರುವ ಮನ ಷ್ಯನೊಬ್ಬನು, 'ಕ್ಯೂ, ಕ್ಯೂ' ಎಂದು ಹೇಳುತ್ತಿದ್ದ. ನಾನು ಸಾ ಯಲ್ಲ ಇಂಗ್ಲೀಷು ಕಲಿತಿದ್ದೆ. ಕ್ಯೂ ಎಂದರೆ O,P,Q, ನೇ ಗೊತ್ತಿತ್ತು. ನಾನು 'ಕ್ಯೂ' ಅಲ್ಲೋ, 'ಕೆ' ಅಂದೆ. ನನ್ನ ಅಡ್ಡಹೆಸ ವಿದ್ಯಕ್ಷರ 'ಕೇ' ಅಂದೆ. ಅವನು 'ಹಾಂಗಲ್ಲ ರಾಯರೇ 'ಕ್ಯೂ' ಅಂದರೆ ಸಾಲು! ಸಾಲಿನೊಳಗೆ ನಿಲ್ಲಬೇಕು!' ಎಂದು ಸಾಲ ನಿಂತಿದ್ದ ರೋಗಿಗಳನ್ನು ತೋರಿಸಿದ. ನಾನೂ ಆ ಸಾಲಿ ನಿಂತೆ. ನಿಲ್ಲುವುದಕ್ಕೆ ಆಗದವರಿಗೆ? ನೆರಳನಲ್ಲಿ ಪಲ್ಲಂಗಗಳ ಹಾಕಿದ್ದರು. ಅದರ ಮೇಲೆ ಅಂತಿಗಳಿದ್ದುವು. ಅದರ ಪ್ರಕಾರ

ಪರೀಕ್ಷೆಯಾಗಿ, ಇದ್ದಕ್ಕಿಯೇ ಔಷಧದ ಬಾಟ್ಲಿಗಳನ್ನು ತಂದು ಕೊಡುತ್ತಿದ್ದರು. ಒಳಗೆ ಹೋದೆ; ಅಲ್ಲಿ ಮೊದಲನೆಯ ಪರೀಕ್ಷೆ ಪ್ರಾರಂಭವಾಯಿತು. ಹೆಸರು, ತಂದೆಯ ಹೆಸರು, ಅಡ್ಡ ಹೆಸರು, ವಯಸ್ಸು, ಜಾತಿ, ಉಪಜಾತಿ, ಪತ್ನಿ (ಮುಖ್ಯ: ಫೀ ಕೊಡದೆ ಓಡಿದರೇನು ಮಾಡಬೇಕು?) ರೋಗದ ಹೆಸರು, ಸುಮಾರು ಔಷಧ ಏನು ಕೊಡಬೇಕು....! ಅಲ್ಲೇ ಅಂಗಿ-ಟೊಪ್ಪಿಗೆ ಹಾಕಲಿಕ್ಕೆ ಗೂಟಗಳಿದ್ದುವು. ಎಡಬಲಕ್ಕೆ ಸುಂದರ ಕನ್ನಡಿಗಳಿದ್ದುವು. ಬರೇಮೈಯ ಸೊಬಗನ್ನೂ ದೇಹಸೌಷ್ಠವವನ್ನೂ ಕನ್ನಡಿಯೊಳಗೆ ನೋಡುತ್ತ ಒಳಗೆ ಹೋದೆ. ಮಾರ್ವಾಂಡ ಡಾಕ್ಟರು! ಕೈಯಲ್ಲಿ ಬಂಗಾರದ ಉಂಗುರ, ತಲೆಯಲ್ಲಿ ನುಣುಪಾದ ಕೂದಲು, ನಡುವೆ ಬಾಣದಂತೆ ಹೋಗಿರುವ ಬೈತಲು, ಬೂಟು, ಪ್ಯಾಂಟು ಶರ್ಟು, ಕೋಟು-ಅಗದಿ ಅಪ್-ಟು-ಜೇಟ್ ಕೆಲಸ. ಎಡಬಲಕ್ಕೆ ಬಿಳಿಯ ವಸ್ತ್ರಗಳನ್ನು ಪರಿಧಾನ ಮಾಡಿದ ಇಬ್ಬರು ಅಪ್ಸರೆಯರು ನಿಂತಿದ್ದರು. ನಾನು ಹೋಗಿ ಕಾಗದವನ್ನು ಕೊಟ್ಟೆ. ಡಾಕ್ಟರರು 'ಖಾನೋಳಕರ!" "Yes. I remember your father' ನಿಮ್ಮ ತಂದೆಯನ್ನು ನಾನು ಬಲ್ಲೆ) ಎಂದರು. "ಒಳ್ಳೇದು. ನರ್ಸ್ ಚಮಚೆ ತನ್ನಿರಿ" ಎಂದರು. ಬಿಳಿಯ ವಸ್ತ್ರದ ಯುವತಿಯು ಜಳಜಳಕನೆ ಹೊಳೆಯುವ ಚಮಚೆಯನ್ನು ತಂದಳು. ನನ್ನ ಬಾಯಿ ತೆರೆದು, ನಾಲಗೆಯನ್ನು ಚಮಚೆಯ ಹಿಂಬದಿಯಿಂದ ಒತ್ತಿ, ಒಳಗೆ ಎಂದರೆ ಹೊಟ್ಟೆಯೊಳಗೆ, ನೋಡಿದರು. ಆಮೇಲೆ ರಕ್ತಪರೀಕ್ಷೆಯಾಯಿತು. ಬಿಳೀ ವಸ್ತ್ರದ ಯುವತಿಯು ನನ್ನ ಬೆರಳನ್ನು ಬಿಗಿಯಾಗಿ ಹಿಡಿದು, ಸೂಜೀ ಚುಚ್ಚಿ ರಕ್ತವನ್ನು ತೆಗೆದು, ಕಾಜಿನ ತುಕಡಿಯ ಮೇಲೆ ಸವರಿದಳು. ಆಯಿತು. ಒಬ್ಬ ಮನುಷ್ಯ ಹಾದಿಯನ್ನು ತೋರಿಸಿ ನಿಮ್ಮ ಬಾಟ್ಲಿ ಗೇಟಿನ ಮೇಲೆ (ಪೆಬ್ಬಾಗಿಲಿನ ಬಳಿ) ಬರುವುದೆಂದು ಹೇಳಿದ. ನಾನು ಅಂಗಿ-ಟೊಪ್ಪಿಗಿ ಹಾಕಿಕೊಂಡು ಬಾಗಿಲ ಬಳಿ ಹೋಗುವುದರಲ್ಲಿ, ನನ್ನ ಬಾಟ್ಲಿ ನನ್ನ ಹಾದಿಯನ್ನು ನೋಡುತ್ತ ಕುಳಿತಿತ್ತು. ಒಬ್ಬರು "Bill please" ಅಂತ ಕೇಳಿದರು. ಒಟ್ಟು ನಾಲ್ಕು ರೂಪಾಯಿ ಹದಿನಾಲ್ಕಾಣೆ ಆಗಿತ್ತು. ಕೊಟ್ಟೆ....ಐದು ರೂಪಾಯಿ ನೋಟು. ಬಂದೆ ಮನೆಗೆ. ಸ್ವಲ್ಪ ಗುಣವಾಯಿತು! ಆದರೆ. ಈಗಾಗಲೇ ನಾಲ್ವತ್ತು ರೂಪಾಯಿ ಖರ್ಚಾಗಿತ್ತು.

ಕಟ್ಟಕಡೆಗೆ ನಮ್ಮೊಬ್ಬ ಗೆಳೆಯರು 'ಇಲ್ಲಿ ಒಬ್ಬ ಮುಸಲ್ಮಾನ್ ಕಾಜೀ ಇರುತ್ತಾನೆ. ಅವನ ಕಡೆಗೆ ಹೋಗಿ ಕೇಳಿದಲ್ಲಿ ನಿಮಗೆ ಗುಣಬರಬಹುದು' ಎಂದು ಹೇಳಿದರು, ಹೊರಟೆ. ಫೀ-ಗೀ ಏನೂ ಇಲ್ಲ ಇವರ ಬಳಿ. ಮುಪ್ಪಿನ ಮುದುಕರು. ಕಣ್ಣಿಗೊಂದು ಬಿಳಿಯ ಕನ್ನಡಕ—ಬೆಳ್ಳಿಯದು. ಒಂದು ಉದ್ದನ್ನ ಅಂಗಿ. ಕರೇದು. ಹಾಲಿನಂತೆ ಶುಭ್ರವಾದ ಬಿಳಿಯ ಗಡ್ಡದ ಮೇಲೆ ಕೈಯಾಡಿಸುತ್ತ "ಅಲ್ಲಾ, ಅಲ್ಲಾ" ಎಂದು ದೇವರ ಧ್ಯಾನ ಮಾಡುತ್ತ ನನ್ನ ನಾಡೀ ನೋಡಿದರು. "ನಿಮಗೆ ನಿದ್ದೆ ಬರುತ್ತದೇನು?" ಎಂದು ಕೇಳಿದರು. ನಾನು ಹೇಳಿದೆ: "ಕಾಜಿಯವರೆ. ಒಂದು ಗಂಟೆಯ ವರೆಗೆ ಓದುತ್ತ ಕುಳಿತು ಮಲಕೊಳ್ಳುತ್ತೇನೆ.. ಎಂಟು ಗಂಟೆಗೆ ನಿದ್ದೆ ಮುಗಿಯುತ್ತದೆ" ಎಂದು ಹೇಳಿದೆನು. "ಅಚ್ಛಾ. ಮಲಕೊಳ್ಳುವ ಮುಂದೆ ಒಂದಕ್ಕೆ ಹೋಗುತ್ತೀರೇನು?" "ಇಲ್ಲಾ, ಒಂದು ಅರ್ಧ ತಂಬಿಗೆ ನೀರು ಕುಡಿಯುತ್ತೇನೆ!" "ಅಚ್ಛಾ ತೀರ್ತು," ಎಂದು ಮೂರು ಚೀಟುಗಳನ್ನು ಕೊಟ್ಟರು. ಮಲಗಿಕೊಳ್ಳುವ ಮುಂದೆ ಒಂದಕ್ಕೆ ಹೋಗಬೇಕು, ಚೀಟು ತೆಗೆದುಕೊಂಡು ಮೇಲೆ ಹಾಲು ಕುಡಿಯಬೇಕು, ಜಾಗರಣೆ ಮಾಡಕೂಡದು; ಪಥ್ಯ. ಹುಳಿ, ಎಣ್ಣೆ, ಖಾರ ತಿನ್ನಬಾರದು." ಚೀಟು ತೆಗೆದುಕೊಂಡೆ; ಮೂರೇ ಚೀಟುಗಳಿಗೆ ಗುಣ ಬಂತು. ಖರ್ಚು ಎಂದು ಕೇಳದಾಗ ಎಂಟಾಣೆ ಅಂತ ಹೇಳಿದರು. ನಾನು ಖುಷಿಯಿಂದ ಒಂದು ರೂಪಾಯಿ ಕೊಟ್ಟೆ!

ಇತ್ತೀಚಿನ ನಮ್ಮ ಸಂಸ್ಕೃತಿಯಲ್ಲಿ, ಎಂದರೆ ಸುಧಾರಣೆಯಲ್ಲಿ, ಅನಾರೋಗ್ಯವೂ ಒಂದು ದೆವ್ವಿನಂತೆ ನಮ್ಮನ್ನು ಹಿಂಬಾಲಿಸುತ್ತಲೇ ಬಂದಿದೆ. ಅದಕ್ಕೆ ಮುಖ್ಯ ಕಾರಣವೆಂದರೆ ನಮ್ಮ ಈಗಿನ ಇರುವಿಕೆಯ ಪದ್ಧತಿ. ಏನಿದ್ದರೂ ತಲೆನೋವಿಗೆ ಡಾಕ್ಟರು, ಹೊಟ್ಟೆನೋವಿಗೆ ಡಾಕ್ಟರು, ಹೀಗೆ ಯಾವಾಗಲೂ ಡಾಕ್ಟರ ಬಾಟ್ಲಿ, ಡಾಕ್ಟರು-ಬಾಟ್ಲಿ ಮಾಡುತ್ತ ಕುಳಿತದ್ದೊಂದು ಜೊತೆ ಕಾರಣ. ಮೊನ್ನೆ ನಾನು ಓದುತ್ತಿದ್ದ ಒಂದು ವೈದ್ಯಕೀಯ ಗ್ರಂಥದಲ್ಲಿ, ಆ ಡಾಕ್ಟರನು ಬರೆದಿರುವುದೇನೆಂದರೆ: ಜಗ್ಗಿ ತಿನಬೇಕು, ಜಗ್ಗಿ ತಿರುಗಬೇಕು, ಜಗ್ಗಿ ನಿದ್ದೆಮಾಡಬೇಕು" ಇದು ಎಲ್ಲ ಆರೋಗ್ಯದ ಗುಟ್ಟು. ನಂಬರು ೧ ಮತ್ತು ೩ ರಲ್ಲಿ ನಮ್ಮನ್ನು ಸೋಲಿಸುವವರು ಯಾರು? "ಜಗ್ಗಿ ತಿರುಗಬೇಕು" ಎಂಬುದು ನಮಗೆ ಅಭ್ಯಾಸವಾದರೆ, ನಾವು (ಕರ್ನಾಟಕದವರು) ಅನುರರೇ ಸೈ!!!

ಐವತ್ತು ವರ್ಷಗಳಿಂದ ಅನುಭವಪಟ್ಟ

ಕರ್ಕ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆ.

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ:—

ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ

ಗಿರಗಾಂವ, ಮುಂಬಯಿ.

ಜೀವಿತದಲಿ ಮಂದಸ್ಮಿತ

ಶ್ರೀ. ಬಿ. ಆರ್. ಅಲವಳ್ಳಿ, ಕಡಗೋಡು

★

ದಿನ-ದಿನವೂ ಜೀವನದಲಿ
ಮಾನ ಬರಲಿ, ಹಾನಿ ಬರಲಿ!
ಹಿಂಜರಿಯದೆ ಹೆದರಿಕೊಳದೆ
ನಗು-ನಗುತಲೆ ಬಾಳಬೇಕು.

'ಇದು ದುಷ್ಟವು, ಅದು ಕಷ್ಟವು!'
ಎನುತ ಕಣ್ಣ ನೀರ ಕರೆದು,
ಪೇಡಿಗಳೊಲು ಅಳಬೇಕೇ?

ಎಂದಿಗೂ ನಮ್ಮ ಉಸಿರು
ಆನಂದವೆ ಇರಬೇಕು;
ಎಂದಿಗೂ ನಮ್ಮ ಚಿತ್ತ
ನಿರ್ವಿಕಾರಿಯಿರಬೇಕು!

ಅದೋ ನೋಡು ಹೂಗಳನು—
ಮುಗುಳುನಗೆಯ ಮುಗುಳುಗಳನು!
ಹೂಗಿಡದಲಿ ಎಂತಂತೆಯೆ—
ಕೊಯಿದಹಿತರ ಕೈಯಲಿಯೂ
ನಗುನಗುತಲೆ ಇರುತಿಹವು.

ಅಹಿತರೆಂದು ಮುಳಿಸುಗೊಳದೆ
ತಮ್ಮ ಸಹಜ ಗುಣವ ಬಿಡದೆ,
ಕಂಪ ಸೊಂಪ ಬೀರುತಿಹವು

ದೇವರಿರಲಿ, ಯೋಗಿಯಿರಲಿ,
ಅರಸ ತಿರುಕ ನುರುಳಿರಲಿ,
ಹೆಣವೊ ಶುನಿಯೊ ನಗಣಿಯಿರಲಿ—
ಯಾವುದಕ್ಕೆ ಮುಡಿಸಿದರೂ
ಒಂದೆ ಬಗೆಯ ಮಂದಹಾಸ.

ನಂದನೋದ್ಯಾನವಿರಲಿ,
ನಾಡೊ ಕಾಡೊ ಮಸಣವಿರಲಿ
ಎಲ್ಲಿ ಹುಟ್ಟಿ ಬೆಳೆದರೆಯೂ
ಒಂದೆ ವಿಭವ ಮನಸ್ಥೈರ್ಯ!

* * *

ನೋಡು, ಸಾಗಿರುವಳು ಗಂಗೆ—
ಮುಗುಳುನಗೆಯ ತೆರೆತೆರೆಗಳ
ಹರಡಿ ಹರಿನ ಸುರತರಂಗೆ—
ನಗುತ ನಗುತ ಸಾಗಿರುವಳು.

ಮುಂದೆ ನಡೆವ ದಾರಿಯಲ್ಲಿ
ಇಡುಕು ಬಿರುಕು ಏನೆ ಇರಲಿ,
ಕೆರೆ-ಕೊಳ್ಳಗಳಡ್ಡ ಬರಲಿ—
ಹೊರೆನ್ನುತ ಭೋರೆನ್ನುತ
ಗಹಗಹಿಸುತ ನಕ್ಕು ನಲಿದು,
ಸಾಗುತಿಹಳು ದಾರಿಹಿಡಿದು.

ಸೆಲೆಯ ನೀರು ಕೊಳಕು ನೀರು
ಹೊಲಸು ರಚ್ಚೆ ಏನೆ ಬರಲಿ,
ಎಲ್ಲವನೂ ಒಳಗುಗೊಂಡು
ಕೊಳೆಯನೆಲ್ಲ ಜನನುಗೊಳಿಸಿ
ಲೋಕಕೆಲ್ಲ ತಿಳಿಯನುಣಿಸಿ—
ಮುಗುಳುನಗೆಯ ತೆರೆ-ನೊರೆಗಳ
ಸುಖತರಂಗೆ ದೇವಿಗಂಗೆ,

ನಗುತ ನಗುತ ಸಾಗಿರುವಳು—
ದಿನ ದಿನವೂ ಜೀವನದಲಿ
ಬಂದಡಸುವ ತೊಡರುಗಳಿಗೆ
ಹಿಂಜರಿಯುವೆ ಪೇಡಿಗೊಳದೆ
ತಾಳ್ಮೆಯಿಂದ ಸಹಿಸಿಕೊಂಡು.

* * *

ಹೂವಿನಂತೆ ಗಂಗೆಯಂತೆ
ನಗುತ ನಗುತ ಸಾಗಬೇಕು.
ದಿನದಿನವೂ ಜೀವನದಲಿ
ಮಾನ ಬರಲಿ ಹಾನಿ ಬರಲಿ,
ಹಿಂಜರಿಯದೆ ಹೆದರಿಕೊಳದೆ
ನಗುನಗುತಲಿ ಬಾಳಬೇಕು!

—ಗೆ.

ಶ್ರೀ. ಎಸ್.ಎಸ್.ಬಸುಪಟ್ಟದ, ಬಿ.ಎ.
ಸೊಲ್ಲಾಪೂರ

ಹೃದಯದೊಲವು ಉಕ್ಕಿಬಂದು
ಕಣ್ಣ-ಕುಣಿಕೆಯಲ್ಲಿ ನಿಂದು
ಇತ್ತು—ಕೊಂಡು ಒಂದಕೊಂದು
ಬೆರೆತು ನಿಂದು ಹೊಂದಿಕೊಂಡು
ದೃಷ್ಟಿ-ದೃಷ್ಟಿ ಕೂಡಿತುಽ—
ಹೊಸತು ಸೃಷ್ಟಿ ಮೂಡಿತುಽ—

ನೀನೆ ಎನ್ನ ಜೀವದರಳು
ನಿನ್ನೊಲುಮೆಯೆ ಅದರ ಹುರುಳು;
ನೀನು ಬಳಿಯೆ ಬಂದು ಸುಳಿಯೆ
ಬಂತೊ ಸ್ವರ್ಗ-ಜೀವ ಬಳಿಯೆ
ಎಂದು ಹೃದಯ ಮಿಡಿವುದು—
ಎಂದೆಂದಿಗು ನುಡಿವುದು—

ತನು ನಿನ್ನದು, ಮನ ನಿನ್ನದು;
ಆತ್ಮ-ಪದುಮ ನಿನ್ನದುಽ—
ಅಡಿಯನೆತ್ತಿ ಹೆಜ್ಜೆಯಿಡಲು
ದಿವ್ಯ ಧ್ವನಿಯ ಮಿಡಿಯೆ ಒಡಲು
ಹೊಸತು ಕಬ್ಬ ಬಂದಿತು—
ಮನಕೆ ಹಬ್ಬ ತಂದಿತು—

ಬಾಳ-ಕಡಲಿನಾಳದಲ್ಲಿ
ರತ್ನ-ನೌಕೆ ಸಾಗುವಲ್ಲಿ
ತುಂತುರಾಗಿ ತೂರಿಬರುವ
ಸಿಽರ್ಪನಿಯ ಸುರುಗಿ ತರುವ
ಜೊತೆ ಜೊತೆಯಲಿ ನಿಲ್ಲುತಽ—
ನುಡಿ-ಮುತ್ತನು ಜೆಲ್ಲುತಽ—

ಜೊತೆ-ಜೊತೆಯಲಿ ಮತಿ ಬೆರೆಯಲಿ,
ಮತಿ-ಮತಿಯಲಿ ಗತಿದೋರಲಿ;
ಗತಿ-ಗತಿಯಲಿ ಸ್ಥಿತಿ ನಿಲ್ಲಲಿ,
ಸ್ಥಿತಿ ಪಥದಲಿ ನೆಲೆಗೊಳ್ಳಲಿ
ನನ್ನ ನಿನ್ನ ಭಾವವುಽ—
ನನ್ನ ನಿನ್ನ ಜೀವವುಽ—

ಪುಸ್ತಕಾಲಯಶಾಸ್ತ್ರ : ೩.

ವರ್ಗೀಕರಣ ಪದ್ಧತಿಗಳು

ಶ್ರೀ. ಐರಣಿ ಶ್ರೀನಿವಾಸ, ಬಿ. ಎ. (ಆನರ್ಸ್) ಸಾಂಗಲಿ

ಮನುಷ್ಯನ ವಿಚಾರಶಕ್ತಿಯು ಎಂದಿಗೆ ಮೊದಲಾಯಿತೊ ಅಂದಿನಿಂದಲೆ ವರ್ಗೀಕರಣವು ಪ್ರಾರಂಭವಾಯಿತು— ಎಂದು ಹೇಳುವುದುಂಟು. ಇನ್ನು ಹಲವರು 'ವಸ್ತುಗಳನ್ನು ಹೆಸರಿಸುವುದರಿಂದಲೇ ವರ್ಗೀಕರಣ ನಡೆದಂತೆಯೇ' ಎಂದೂ ಎನ್ನುತ್ತಾರೆ. ಪುಸ್ತಕವರ್ಗೀಕರಣವು ವಿದ್ಯಾವಂತರಲ್ಲಿ ಇತ್ತು ಎನ್ನುವ ಮಾತನ್ನು ಕ್ರಿ ಶ.ಪೂ. ೬೦೦ ವರ್ಷಕ್ಕಿಂತ ಹಿಂದೆಯೂ ಒಯ್ಯಲಾಗಿದೆ. ಆದರೂ ಐತಿಹಾಸಿಕ ದೃಷ್ಟಿಯಿಂದ ಗಮನಿಸಿದಾಗ, ಇದರ ನಿಜವಾದ ಇತಿಹಾಸ ಪ್ರಾರಂಭವಾದುದು, ಅರಿಸ್ಟಾಟಲ್ ಮತ್ತು ಪ್ಲೇಟೊ ಇವರಿಂದ ಎಂದು ಹೇಳಬಹುದು. ಅಂದಿನಿಂದ ಇಂದಿನ ವರೆಗೆ ಅಸಂಖ್ಯ ವರ್ಗೀಕರಣ ಪದ್ಧತಿಗಳು ಹುಟ್ಟಿಕೊಂಡುದನ್ನು ಗುರುತಿಸಿದ್ದಾಗಿದೆ. ಇವುಗಳೆಲ್ಲದರ ವಿಸ್ತೃತವಾಗಲಿ, ಸಂಕ್ಷಿಪ್ತವಾಗಲಿ ಆದ ಪರಿಚಯವನ್ನು, ಇಲ್ಲಿ ವಿಸ್ತಾರಭಯದಿಂದ ಬಿಡಬೇಕಾಗುವುದು. ಆದರೂ ಪುಸ್ತಕವರ್ಗೀಕರಣ ವಿಕಾಸದ ದೃಷ್ಟಿಯಿಂದ, ಈ ಮಾತನ್ನು ತುಸು ನೋಡುವ :

ಪುಸ್ತಕಗಳೆಂದರೆ ಜ್ಞಾನಭಾಂಡಾರವನ್ನು, ಅಕ್ಷರರೂಪದಲ್ಲಿ, ಒಂದೊಂದು ಮೊತ್ತವಾಗಿ, ಹಿಡಿದಿಡಲ್ಪಟ್ಟವುಗಳಷ್ಟೆ ! ಪುಸ್ತಕ ವರ್ಗೀಕರಣವು, ಜ್ಞಾನ ಹಾಗು ಪುಸ್ತಕ ಇವುಗಳನ್ನು ಒಳಗೊಂಡದ್ದಾಗಿದೆ. ವರ್ಗೀಕರಣವು ಮೂಲತಃ ಜ್ಞಾನಸಮುದಾಯಕ್ಕೆ ಸಂಬಂಧಿಸಿದ ಮಾತಾದ್ದರಿಂದ, ಪ್ರಾಚೀನ ವರ್ಗೀಕರಣವು **ತಾತ್ತ್ವಿಕ** ಅಥವಾ **ಜ್ಞಾನವರ್ಗೀಕರಣ** ಎನ್ನಿಸಿಕೊಂಡಿತು. ಏಕೆಂದರೆ ಪ್ರಾರಂಭಕ್ಕೆ 'ಪುಸ್ತಕಗಳು'— ಎಂಬ ಬಗೆಯು ಮಹತ್ವ ವಿಶೇಷವಾಗಿರಲಿಲ್ಲ. ಯಾವಾಗ ಅಚ್ಚಿನ ಶೋಧವಾಗಿ ಪುಸ್ತಕಗಳು ಹೆಚ್ಚಿನ ಪ್ರಮಾಣ ಮತ್ತು ಸಂಖ್ಯೆಯಲ್ಲಿ ಪ್ರಕಟವಾಗತೊಡಗಿದುವೊ, ಆಗ ವರ್ಗೀಕರಣದ ದೃಷ್ಟಿಕೋನವು ತುಸು ಬದಲಾಯಿತು. ಇದರ ಮೂಲಕ ಮಧ್ಯಯುಗದಲ್ಲಿ, ಉಪಯುಕ್ತತೆಯ ದೃಷ್ಟಿಯನ್ನಿಟ್ಟುಕೊಂಡು ಕೆಲ ವರ್ಗೀಕರಣ ಪ್ರಕಾರಗಳು ಹೊರಟುವು. ಆಗ 'ಪುಸ್ತಕವರ್ಗೀಕರಣ'ಕ್ಕೆ ಮೊದಲಾಯಿತು, ಇವುಗಳಲ್ಲಿ ಹಲವು ಪುಸ್ತಕಾಲಯಗಳಿಗಾಗಿ ಇರದೆ, ಪುಸ್ತಕಗಳನ್ನು ಕೊಂಡುಕೊಳ್ಳುವ ಜನರ ಸೌಕರ್ಯಕ್ಕಾಗಿಯೆ ಹೆಚ್ಚಾಗಿ ಇರುವಂತಹವು ಹೊರಟುವು. ಆದರೂ ಈ ಜ್ಞಾನವರ್ಗೀಕರಣ ಪುಸ್ತಕ ವರ್ಗೀಕರಣ ಎಂಬೆರಡು ರೀತಿಗಳಲ್ಲಿ, ಕೊನೆಯದು ಮೊದಲಿನದನ್ನು ಹತ್ತಿಕ್ಕಿ ನಿಂತಂತಹದಾಗಲಿಲ್ಲ. ಆಗ ಜ್ಞಾನವರ್ಗೀಕರಣಕ್ಕೇ ಹೆಚ್ಚು ಮಹತ್ವವಿದ್ದಿತು.

ಈಗ ನಾವು ಎರಡು ಬಗೆಯ ವರ್ಗೀಕರಣ ರೀತಿಗಳನ್ನು ನೋಡಿದಂತಾಯಿತು. ಒಂದು ಜ್ಞಾನವರ್ಗೀಕರಣ— ಎಂದರೆ ಒಂದು ಪುಸ್ತಕದ ನಿರ್ದಿಷ್ಟ ವಿಷಯವನ್ನು ಗಮನಿಸಿ, ಜ್ಞಾನಸಮುದಾಯದಲ್ಲಿ ಅದಕ್ಕಿರುವ ಸ್ಥಾನವನ್ನು ಎಷ್ಟೊ ತಪ್ಪದಂತೆ ನಿರ್ದೇಶಿಸುವುದು. ಹೀಗೆ ಇಲ್ಲಿ ತಾತ್ತ್ವಿಕದೃಷ್ಟಿಯಿದೆ. ಇನ್ನೊಂದು ಪುಸ್ತಕವರ್ಗೀಕರಣ. ಎಂದರೆ ಯಾವುದೊಂದು ಶಾಸ್ತ್ರೀಯ ಅಥವಾ ತಾತ್ತ್ವಿಕ ತಳಹದಿಯಲ್ಲದೆ, ಓದುಗರ ಮತ್ತು ಪುಸ್ತಕಾಲಯ ಕೆಲಸಗಾರರ ಸೌಕರ್ಯವನ್ನು ಗಮನಿಸಿ ಮಾಡಿದಂತಹದು. ಹೀಗೆ ಇಲ್ಲಿ ಪ್ರಾಯೋಗಿಕ ದೃಷ್ಟಿಯಿದೆ. ಈ ರೀತಿಗೆ **ಗ್ರಂಥಸೂಚಕವರ್ಗೀಕರಣ** (Bibliographical classification) ಎಂದೂ ಹೇಳುವುದುಂಟು.

ಈ ಎರಡರಲ್ಲಿ ಸಾಕಷ್ಟು ಅಂತರವಿರುವುದರಿಂದ, ಉಪಯುಕ್ತತೆಯನ್ನು ಗಮನಿಸುವವರು, ಜ್ಞಾನವರ್ಗೀಕರಣವನ್ನು ಅಲ್ಲಗಳೆಯುವುದು ಕಂಡುಬರುತ್ತದೆ. ಅವೆರಡರ ಮುಖ್ಯ ಭೇದಗಳೆಂದರೆ, ಒಂದು ಪುಸ್ತಕವು ಒಂದೇ ವಿಷಯವನ್ನೊಳಗೊಂಡದ್ದಾಗಿದೆಯೆಂದು ಹೇಳಬರುವುದಿಲ್ಲ. ರತ್ನಾಕರವರ್ಣಿಯ ಭರತೇಶವೈಭವವು ಕಾವ್ಯವಾಗಿದೆ; ಇದಕ್ಕೆ ಸರಿಸಮನಾಗಿ ದಾರ್ಶನಿಕ ಗ್ರಂಥವಾಗಿದೆ. ಅಲ್ಲದೆ ಜೈನಧರ್ಮದ ತತ್ತ್ವವನ್ನೂ ಹಿನ್ನೆಲೆಯಲ್ಲಿ ಒಳಗೊಂಡದ್ದಾಗಿದೆ. ಹೀಗಿರುವುದರಿಂದ ಜ್ಞಾನವರ್ಗೀಕರಣದ ಪ್ರಕಾರ, ಈ ಮೂರೂ ಅಂಗಗಳು ಮೂರು ಬೇರೆ ಬೇರೆ ಕಡೆಗೆ ಸೇರಬೇಕಾಗುವುದು. ಇದರಿಂದ ಆ ಒಂದು ಪುಸ್ತಕವನ್ನು ವರ್ಗೀಕರಿಸುವುದು **ಅಸಾಧ್ಯವೆ** ಆಗುತ್ತದೆ.[೧] ಅಲ್ಲದೆ ಈ ತಾತ್ತ್ವಿಕ ವರ್ಗೀಕರಣವೆಂದರೆ, ಅಪಾರವಾದ ಜ್ಞಾನಭಾಂಡಾರವನ್ನು, ಕೆಲವು ಮೂಲಭೂತ ವಿಷಯಗಳನ್ನು ತಳಹದಿಯಾಗಿಟ್ಟುಕೊಂಡು ಕ್ರಮವಾಗಿ ವಿಂಗಡಿಸುತ್ತ ಹೋಗುವುದಿರುವುದರಿಂದ, ಒಂದು ಪುಸ್ತಕದ ತನಕ ಮುಟ್ಟಬೇಕಾದರೆ, ಎಷ್ಟೊಂದು ಉದ್ದನ್ನ ಸಂಕೇತವನ್ನು ನಾವು ಬಳಸಬೇಕಾಗುವುದು! ಉಬಾ : ಗೆ ಯುದ್ಧೋತ್ತರ ಪುನರ್ರಚನೆಯೆಂಬ ವಿಷಯ

೧. 'The classification of books is a logical absurdity'—Sevons.

ವನ್ನು ತೆಗೆದುಕೊಳ್ಳೋಣ. ಇತಿಹಾಸವೆಂಬ ಮುಖ್ಯ ವರ್ಗದಿಂದ ಈ ವಿಷಯದ ತನಕ ಬರಬೇಕಾದರೆ, ಅರೇಳು ಹಂತಗಳು ಬರುತ್ತವೆ. ದಶಾಂಕ ಪದ್ಧತಿಯ ಪ್ರಕಾರ ಇದರ ಒಂದೆರಡು ಹಂತಗಳನ್ನು ನೋಡಬಹುದು.

ವಿಷಯ.	ಸಂಕೇತ.
ಇತಿಹಾಸ	೯.
....	....
೧೯೪೯ರ ಮಹಾಯುದ್ಧ	೯೪೦.೩೫
....	....
ಯುದ್ಧೋತ್ತರ ಪುನರ್ರಚನೆ	೯೪೦.೩೫೩೪೪

ಅಲ್ಲದೆ, ಅನೇಕಕಡೆ ಸಂಕೇತವು ಇದಕ್ಕೂ ಉದ್ದವಾಗಿ, ಆಗೆಲ್ಲ ಇಂತಹ ಸಂಕೇತವು ನಿರುಪಯೋಗಿಯಾಗುತ್ತದೆ.

ಇನ್ನು ಬರಿ ಉಪಯುಕ್ತತೆಯೊಂದನ್ನೇ ಗಮನಿಸಿದರೆ, ಅದೂ ಸರಿಯಾದುದಲ್ಲ. ಈ ಈ ವರ್ಷದಲ್ಲಿ ಪ್ರಕಟವಾದ ಒಟ್ಟು ಪುಸ್ತಕಗಳು ಬೇಕಾಗಿನೆಯೆಂದು ತಿಳಿಯುವ. ಮಾದರಿಗೆ, ೧೯೪೪ರಲ್ಲಿ ಪ್ರಕಟವಾದ ಪುಸ್ತಕಗಳನ್ನೆಲ್ಲ ಒಂದೆಡೆ ಇಟ್ಟುಬಿಟ್ಟರೆ ವರ್ಗೀಕರಣ ಸರಿಯಾದೀತೆ? ಏಕೆಂದರೆ, ಪುಸ್ತಕದಲ್ಲಿ ವಿಷಯ ಯಾವಾಗಲೂ ಮುಖ್ಯವಾದುದು. ಅದರ ಉಪಯೋಗ ಎಷ್ಟೆಂದರೂ ತಿಳಿವನ್ನು ಗಳಿಸುವುದಕ್ಕೆ ಇರುವುದರಿಂದ, ಜ್ಞಾನ ವರ್ಗೀಕರಣದ ಮಾದರಿಯನ್ನೂ ನಾವು ಬಿಡಲು ಬರುವಂತಿಲ್ಲ. ಅಲ್ಲದೆ ಉಪಯುಕ್ತತೆಯನ್ನೇ ನಾವು ಹೆಚ್ಚಾಗಿ ಗಣಿಸಿದರೆ ಪ್ರತಿಯೊಂದು ಪುಸ್ತಕಾಲಯಕ್ಕೂ, ಬೇರೆ ಬೇರೆ ವರ್ಗೀಕರಣ ಇರಬೇಕಾದೀತು!

ಅರ್ವಾಚೀನ ವರ್ಗೀಕರಣ ಪದ್ಧತಿಗಳನ್ನು ನಿರ್ಮಿಸುವಾಗ, ತಾತ್ತ್ವಿಕ ಹಾಗು ಉಪಯುಕ್ತ ವರ್ಗೀಕರಣ—ಇವೆರಡನ್ನೂ ಬೆರೆಯಿಸುವ ಒಂದು ಪ್ರಯತ್ನವು ಅವರವರ ವಿಚಾರಕ್ಕೆ ತಕ್ಕಂತೆ ನಡೆಯಿತು. ಯಾವುದೊಂದು ವರ್ಗೀಕರಣದ ಯಶಸ್ವಿತೆಯು, ಇವೆರಡರ ಪ್ರಮಾಣಬದ್ಧವಾದ ನಿರ್ದಿಷ್ಟ ಬೆರಕೆಯನ್ನೇ ಅವಲಂಬಿಸಿದೆ ಎಂಬ ಮಾತು ಹೊಳೆದು, ವರ್ಗೀಕರಣದ ಇತಿಹಾಸದಲ್ಲಿ ಹೊಸದೊಂದು ಬೆಳಕು ಮೂಡಿತು. ಇವೆರಡರ ಹಿತಮಿತವಾದ ಬೆರಕೆ ಅವಶ್ಯವಾಗಿತ್ತು. ಏಕೆಂದರೆ ಜ್ಞಾನ ಭಾಂಡಾರವನ್ನು ಕ್ರಮವಾಗಿ ವಿಂಗಡಿಸಿ, ಎಲ್ಲ ವಿಷಯಗಳೂ ಅದರಲ್ಲಿ ಸಂಪೂರ್ಣವಾಗಿ ಬರುವಂತೆ ನೋಡಿಕೊಂಡು ಹೋಗುವುದನ್ನು ಅಲ್ಲಗಳೆದರೆ, ವರ್ಗೀಕರಣಕ್ಕೆ ಭದ್ರತೆಯೆಂಬುದು ಉಳಿಯುವುದಿಲ್ಲ. ಇನ್ನು ಪುಸ್ತಕಗಳು ಓದುಗರಿಗಾಗಿ ಮಾತ್ರ ಇವೆ—ಎಂಬ ಮಾತೂ ಅಷ್ಟೇ ಮಹತ್ತ್ವದ್ದಾಗಿರುವುದರಿಂದ, ಓದುಗರ ಸೌಲಭ್ಯವನ್ನೂ ಕಡೆಗಣಿಸುವಂತಿಲ್ಲ. ಹೀಗಾಗಿ ಡ್ಯೂವಿ, ಬ್ಲಿಸ್, ಕಟರ್, ರಂಗನಾಥನ್ ಮೊದಲಾದ ವರ್ಗೀಕರಣ ಪ್ರಭೃತಿಗಳು, ವರ್ಗೀಕರಣ ಪದ್ಧತಿಯನ್ನು ನಿರ್ಮಿಸುವಾಗ, ತಾತ್ತ್ವಿಕತೆಯನ್ನು ಹಿನ್ನೆಲೆಯಾಗಿಟ್ಟುಕೊಂಡರು. ಅನೇಕ ಕಡೆ ಅವರವರ ದೃಷ್ಟಿಗೆ ತಕ್ಕಂತೆ, ಅಡನ್ನು ಓದುಗರ ಸೌಲಭ್ಯಕ್ಕಾಗಿ ಮುರಿದರು. ಡ್ಯೂವಿ ಅವರು ತಮ್ಮ ಗ್ರಂಥದಲ್ಲಿ ಈ ಮಾತನ್ನು ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ.[೨]

ಈಚಿನ ಪದ್ಧತಿಗಳು ಶಾಸ್ತ್ರವಿಷಯಗಳಿಗೆ ಹೆಚ್ಚು ಮಹತ್ತ್ವ ಕೊಟ್ಟುವಾಗಿದ್ದರೆ, ಪುರಾತನ ಹಾಗೂ ಮಧ್ಯಕಾಲದ ವರ್ಗೀಕರಣ ಪದ್ಧತಿಗಳು ಧಾರ್ಮಿಕ ದೃಷ್ಟಿಯಿಂದ ರಚಿತವಾದುವುಗಳಾಗಿವೆ. ಏಕೆಂದರೆ ಆಗಿನ ಹೊತ್ತಗೆಗಳಾಗಲಿ, ಜ್ಞಾನಾರ್ಜನೆಯಾಗಲಿ, ಧರ್ಮಾಭಿಮುಖವಾಗಿದ್ದುವು. ಪುಸ್ತಕಗಳು ಹೀಗೆ ಮತತತ್ತ್ವಗಳನ್ನು ತಿಳಿಯುವುದಕ್ಕೆ ಸಾಧನಗಳೆಂದು ತಿಳಿಯಲ್ಪಡುತ್ತಿದ್ದುವು. ಇದು ಅಲ್ಲದೆ ದೇಶವಿದೇಶ, ಅಥವಾ ಪ್ರಾಂತ ಪ್ರಾಂತೀಯ ಸಂಬಂಧ ಹಾಗೂ ಬಳಕೆಯು ಹಿಂದಿನ ಕಾಲದಲ್ಲಿ ಬಹಳ ಕಡಿಮೆಯಾಗಿದ್ದುದರಿಂದ, ಅನೇಕ ಸ್ಥಳೀಯ ವರ್ಗೀಕರಣ ರೀತಿಗಳು ಹುಟ್ಟಿಕೊಂಡುವು. ಮುಂದೆ ಜ್ಞಾನ ಹಾಗೂ ವಾಙ್ಮಯವು ಹೆಚ್ಚು ವ್ಯಾಪಕವಾದಹಾಗೆಲ್ಲ, ವರ್ಗೀಕರಣ ವಿಧಾನವು ಕ್ರಮೇಣ ಬೆಳೆಯುತ್ತ ಹೋಗಿ, ಅದಕ್ಕೆ ಶಾಸ್ತ್ರದ ಸ್ವರೂಪ ಬರತೊಡಗಿತು.

ಆ ಕಾಲದಲ್ಲಿ ಪುಸ್ತಕಾಲಯಗಳ ಉಪಯೋಗ ತೀರ ಕೆಲವರಿಗಾಗಿ ಮಾತ್ರ ಇತ್ತಷ್ಟೆ! ಬರುಬರುತ್ತ ಅದು ಕಡಿಮೆಯಾಗಿ ಹೆಚ್ಚು ಜನರು ಪುಸ್ತಕಗಳನ್ನು ಓದತೊಡಗುವ ಸಮಯ ಬಂದಾಗ, ಅವರ ಸೌಕರ್ಯವನ್ನು ಗಮನಿಸಿ, ಕೆಲ ಪದ್ಧತಿಗಳು ಹೊರಟುವು. ಈ ಉಪಯುಕ್ತ ಅಥವಾ ಗ್ರಂಥಸೂಚಕ ವರ್ಗೀಕರಣದ ಮೊದಲಿಗನು, ಜರ್ಮನಿಯ ಕೊನ್ರ್ಯಾಡ ಜೆಸ್ನರ್ ಎಂಬಾತನು (೧೫೪೫). ಆದರೆ ಇಂದಿನ ಮಹತ್ತ್ವದ ವರ್ಗೀಕರಣ ಪದ್ಧತಿಗಳಿಗೆ ತಳಹದಿ ಹಾಕಿದವನೆಂದರೆ, ಇಂಗ್ಲಂಡಿನ ಹೆಸರಾಂತ ತತ್ತ್ವಜ್ಞಾನಿ, ಫ್ರಾನ್ಸಿಸ್ ಬೇಕನ್ನನು. ವರ್ಗೀಕರಣದ ಇತಿಹಾಸದಲ್ಲಿ ಇವನ ಮಹತ್ತ್ವ ವಿಶೇಷವಾಗಿದೆ.

ಬೇರೆ ಬೇರೆ ವರ್ಗೀಕರಣ ಪದ್ಧತಿಗಳು ಎಂದಾಗ, ಎಲ್ಲರೂ ಸ್ವತಂತ್ರವಾಗಿ ಇಂತಹ ಪದ್ಧತಿಗಳನ್ನು ನಿರ್ಮಿಸಬಲ್ಲರು ಎಂದಲ್ಲ ಅದು ಅಕಕ್ಯವಾದುದಿಷ್ಟೇ ಅಲ್ಲದೆ, ಅವ್ಯವಹಾರ್ಯವಾದುದು ಈಗ ಹುಟ್ಟಿಕೊಂಡ ವರ್ಗೀಕರಣ ಪದ್ಧತಿಗಳು ಹಿಂದಿನವುಗಳನ್ನು ಅನುಸರಿಸಿಯೇ ರಚಿತವಾಗಿರುತ್ತವೆ. ಮತ್ತು ಯಾವ ವರ್ಗೀಕರಣ ಪದ್ಧತಿಯೂ ದೋಷರಹಿತವಾಗಿಯೂ ಪರಿಪೂರ್ಣವಾಗಿಯೂ ಇಲ್ಲ. ಹಾಗೂ ಎಲ್ಲರಿಗೂ ಸಮ್ಮತವಾದ ಒಂದೇ ವರ್ಗೀಕರಣ ಪದ್ಧತಿಯೂ ಇಲ್ಲ. ಇದು ಜ್ಞಾನಸಮುದ್ರದ

---

೨. The impossibility of making a satisfactory classification of all knowledge as preserved in books, has been appreciated from the first, and theoretic harmony and exactress have been repeatedly sacrificed to practical requirements.—Decimal classification. 1942 Introd. Page 16.

ಅನಂತತೆಯನ್ನೂ, ಅದರ ವಿಶ್ವವ್ಯಾಪಕತೆಯನ್ನೂ ತೋರಿಸುತ್ತದೆ. ಅದಿನ್ನೂ ಮಾನವನ ಮಿದುಳಿನ ಹಿಡಿತಕ್ಕೆ ಸಿಕ್ಕಿಲ್ಲ.

ಇನ್ನು, ಇಂದಿಗೆ ಪ್ರಸಿದ್ಧವಾಗಿರುವ ಕೆಲವು ಪದ್ಧತಿಗಳನ್ನು ಈ ಕೆಳಗೆ ಹೆಸರಿಸಿದೆ:—

	ಹೆಸರು	ಕರ್ತೃ	ವರ್ಷ
೧.	ದಶಾಂಶ ವರ್ಗೀಕರಣ	ಮೆಲ್‌ವೆಲ್ ಡ್ಯೂವಿ	೧೮೭೬
೨.	ವಿಸ್ತೃತ ,,	ಚಾರ್ಲಸ್ ಕಟರ್	೧೮೯೧
೩.	ಕಾಂಗ್ರೆಸ್ ,,	ಲೈಬ್ರರಿ ಆಫ್ ಕಾಂಗ್ರೆಸ್ (ಅಮೇರಿಕೆ)	೧೯೦೪
೪.	ವಿಷಯವಾರ್ ,,	ಜೇಮ್ಸ್ ಬ್ರೌನ್	೧೯೦೬
೫.	ಗ್ರಂಥಸೂಚಕ ,,	ಹೆನ್ರಿ ಬ್ಲಿಸ್	೧೯೨೨
೬.	ದ್ವಿಬಿಂದು ,,	ರಂಗನಾಥನ್ ಎಸ್. ಆರ್ ,,	

೧. ಆಧುನಿಕ ವರ್ಗೀಕರಣ ಪದ್ಧತಿಯ ಮೂಲಜನಕರು ಎಂಬ ಮಾತು ಡ್ಯೂವಿ ಅವರಿಗೆ ತುಂಬ ಅನ್ವರ್ಥಕವಾದುದು. ಅಲ್ಲದೆ ಇಡೀ ಜಗತ್ತಿನಲ್ಲಿಯ, ಇಂದಿನ ಪುಸ್ತಕಾಲಯ ಜಳವಳಿಗೆ ಅವರು ಪ್ರೇರಕರಾಗಿದ್ದಾರೆ. ಮೆಸ್ಯಾಚ್ಯುಸೆಟ್ಸಿನ ಅಮಹರ್ಸ್ಟ್ ಕಾಲೇಜಿನ ಗ್ರಂಥಾಲಯದಲ್ಲಿ ಕೆಲಸ ಮಾಡುತ್ತಿದ್ದು, ವಿದ್ಯಾರ್ಥಿಗಳಾಗಿರುವಾಗಲೇ, ಈ ದಶಾಂಶ ಪದ್ಧತಿಯ ಸ್ಥೂಲರೂಪವನ್ನು ಸಿದ್ಧಪಡಿಸಿದರು. (೧೮೭೬). ಇದರ ಹಿನ್ನೆಲೆಯನ್ನು ಕುರಿತು ಅವರು ಹೀಗೆ ಹೇಳಿದ್ದಾರೆ: "ಸುಮಾರು ಐವತ್ತು ಪುಸ್ತಕಾಲಯಗಳನ್ನು ಪರಿಶೀಲಿಸಿದನಂತರ, ಅವುಗಳಲ್ಲಿ ಕ್ರಿಯಾಶಕ್ತಿಯ ಕೊರತೆಯನ್ನೂ, ಪುನಃ ಪುನಃ ವರ್ಗೀಕರಿಸುವಲ್ಲಿ ಮತ್ತು ಗ್ರಂಥಸೂಚಿಯನ್ನು ತಯಾರಿಸುವಲ್ಲಿ ಆಗುತ್ತಿರುವ ವೇಳೆ ಮತ್ತು ಹಣದ ಅಪವ್ಯಯವನ್ನೂ ಕಂಡು ಬಹಳಷ್ಟು ಸೋಜಿಗಗೊಂಡೆ." [೩] ಆಗ ಅವರಿಗೆ ಒಂದು ಸಾರ್ವತ್ರಿಕವಾದ ಹಾಗೂ ಭದ್ರವಾದ ತಳಹದಿಯ ಮೇಲೆ ನಿರ್ಮಿತವಾದ ಒಂದು ವರ್ಗೀಕರಣ ಪದ್ಧತಿಯ ಅವಶ್ಯಕತೆ ಕಂಡು ಬಂದು, ಅದಕ್ಕಾಗಿ ಆರು ತಿಂಗಳು ಆಳವಾದ ಅಭ್ಯಾಸ ಮಾಡಿದರು. ವರ್ಗೀಕರಣ ಪದ್ಧತಿಯು ಸುಲಭಗಮ್ಯವಾಗಿಯೂ ಮತ್ತು ವಿಶಾಲಯೋಜನೆಯುಳ್ಳದೂ ಆಗಿರಬೇಕೆಂಬ ಗುರಿಯನ್ನು ಮುಂದಿಟ್ಟುಕೊಂಡಿದ್ದರು. ಕೊನೆಗೊಮ್ಮೆ, ಸಂಕೇತ (notation) ದಲ್ಲಿ ಬರಿಯ ಸಂಖ್ಯೆಗಳೆನ್ನು, ದಶಾಂಶ ವಿಧಾನದಿಂದಳ ಉಪಯೋಗಿಸುವ ದಿವ್ಯ ವಿಚಾರವು ಒಮ್ಮೆಲೆ ಹೊಳೆದು, ಮುಂದಿನ ದಾರಿಯು ಅವರಿಗೆ ಸುಗಮವಾಯಿತು.

ಮೊದಲಿಗೆ ಇವರ ಗ್ರಂಥವು ೪೨ ಪುಟಗಳ ಸಣ್ಣ ಪುಸ್ತಿಕೆಯಾಗಿ ಹೊರಬಿದ್ದಿತು. ಆದರೆ ಈಜೆಗೆ ೧೯೨೨ರಲ್ಲಿ ೨೦೦೦ ಪುಟಗಳನ್ನೊಳಗೊಂಡ, ಅದರ ೧೪ನೆಯಾವೃತ್ತಿ ಹೊರಬಿದ್ದಿದೆ. ಇಂದು ಅದು ೧೪೦೦೦ಕ್ಕೆ ಮೇಲ್ಪಟ್ಟ ಪುಸ್ತಕಾಲಯಗಳಲ್ಲಿ ಉಪಯೋಗವಾಗುತ್ತಿದೆ. ಇದರಷ್ಟು ಬಳಕೆಯಲ್ಲಿರುವ ವರ್ಗೀಕರಣ ಪದ್ಧತಿಯು ಮತ್ತಾವುದೂ ಇಲ್ಲ. ಇದರ ಸಮೀಪಕ್ಕೆ ಕೂಡಾ ತಲೆಯೆತ್ತಿ ನಿಂದ ವರ್ಗೀಕರಣ ಪದ್ಧತಿಯೂ ಇಲ್ಲ.

ಇನ್ನು ಈ ಪದ್ಧತಿಯ ಸ್ಥೂಲಪರಿಚಯಕ್ಕೆ ತೊಡಗುವ: ಇಲ್ಲಿ ಒಂದು ಪುಸ್ತಕಾಲಯವನ್ನು—ಅಥವಾ ಜ್ಞಾನಭಾಂಡಾರವೆನ್ನೋಣ—ಮೊದಲಿಗೆ ೯ ಮುಖ್ಯ ವರ್ಗಗಳಲ್ಲಿ ವಿಭಾಗಿಸಲಾಗಿದೆ. ಅದು ಹೀಗೆ:

೧.	ವೇದಾಂತ.	೫.	ಧರ್ಮ.
೨.	ಸಮಾಜಶಾಸ್ತ್ರ	೬.	ಭಾಷಾಶಾಸ್ತ್ರ
೩.	ನೈಸರ್ಗಿಕ ಶಾಸ್ತ್ರಗಳು.	೭.	ಉಪಯುಕ್ತ ಕಲೆಗಳು.
೪.	ಲಲಿತಕಲೆಗಳು.	೮.	ವಾಙ್ಮಯ.
		೯.	ಇತಿಹಾಸ.

ಇವು ಒಂಬತ್ತಕ್ಕೆ ವಿಶಿಷ್ಟವಾಗಿ ಒಳಪಡದುವುಗಳನ್ನು, ಸಾಮಾನ್ಯ ವರ್ಗವೆಂದು ಗುರುತಿಸಲಾಗಿದೆ. ಇದು ಯಾವ ನಿರ್ದಿಷ್ಟವೂ ಆಗಿರದ್ದರಿಂದ ಇದರ ಸಂಕೇತವು '೦' ಆಗಿದೆ.

ಕ್ರಮವಾದ ವಿಭಜನೆಯೆ ವರ್ಗೀಕರಣದ ಮುಖ್ಯ ತತ್ತ್ವವಷ್ಟೆ? ಅದರಂತೆ ಮೇಲಿನ ಹತ್ತು ವರ್ಗಗಳ ಪ್ರತಿಯೊಂದರಲ್ಲಿ ಮತ್ತೆ ೯ ಉಪವರ್ಗಗಳಾಗಿ ವಿಭಾಗಿಸಲ್ಪಟ್ಟಿವೆ. ಉದಾ:

೯ ಇತಿಹಾಸ
೯೧ ಭೂಗೋಲ ಹಾಗು ಪ್ರವಾಸ
೯೨ ಚರಿತ್ರೆ.
೯೩ ಪುರಾತನ ಇತಿಹಾಸ.
೯೪ ಯುರೋಪಿನ ಇತಿಹಾಸ.
.....
೯೯ ಸಮುದ್ರ ಪ್ರದೇಶಗಳ ಇತಿಹಾಸ.

ಮುಖ್ಯವಾದ ಹತ್ತು ವರ್ಗಗಳು ಹೀಗೆ ಉಪವರ್ಗಗಳಾಗಿ ವಿಸ್ತರಣಹೊಂದಿದನಂತರ, ಈ ಪ್ರತಿಯೊಂದು ಉಪವರ್ಗವು ಮತ್ತೆ ೯ ವಿಭಾಗಗಳಾಗಿ ಮಾಡಲ್ಪಟ್ಟಿವೆ. ಉದಾ:

---

೩. Library Journal, Vol. V., 1920.....೧೮೭೬ ರಲ್ಲಿ ಗ್ರಂಥಾಲಯಗಳು ಯಾವ ಸ್ಥಿತಿಯಲ್ಲಿದ್ದುವೆಂದು ಹೇಳುವರೋ, ಸುಮಾರು ಹೆಚ್ಚು ಕಡಿಮೆ ಅದೇ ಸ್ಥಿತಿಯಲ್ಲಿ ನಮ್ಮ ಗ್ರಂಥಾಲಯಗಳು ಇವೆ ಎಂಬುದನ್ನು ಇಲ್ಲಿ ನೆನೆಯತಕ್ಕದ್ದಾಗಿದೆ.

೪. ದಶಾಂಶ ವಿಧಾನ ಎಂದರೆ, ಒಂದು ಸಂಖ್ಯೆಯನ್ನು ಓದುವಾಗ, ಪ್ರತಿಯೊಂದು ಬಿಡಿ ಅಂಕಿಯ ಮುಂದೆ, ದಶಾಂಶ ಬಿಂದು (·) ಇಡಿ ಎಂಬುದನ್ನು ಇಟ್ಟುಕೊಂಡು ಓದಬೇಕು. ೨೬೧ ಈ ಸಂಖ್ಯೆಯನ್ನು ನಾವು ಮೂರು ಸಾವಿರದ ಆರುನೂರಾ ಒಂದು ಎಂದು ಸಾಮಾನ್ಯವಾಗಿ ತಿಳಿಯುತ್ತೇವೆ. ಆದರೆ ದಶಾಂಶವಿಧಾನದಲ್ಲಿ ಈ ಅಂಕಿಯ ಸ್ಥಾನವು ಮೂರು ಮತ್ತು ನಾಲ್ಕರ ನಡುವೆ ಇದೆ, ಅಷ್ಟೆ. ೩·೬ ಎಂದಾಗ ಅದರ ನಿಜವಾದ ಬೆಲೆ, ೩¾ಕ್ಕಿಂತ ಇದ್ದ ಹಾಗೆ. ಆದರಂತೆ ೩·೬೦ ಎಂದಾಗ, ಅದರ ಬೆಲೆ ೩¾ಕ್ಕಿಂತ. ಇದು ಗಣಿತದಲ್ಲಿ ಬರುವ ಒಂದು ವಿಧಾನ.

೫ ನೈಸರ್ಗಿಕ ಶಾಸ್ತ್ರ.
೫೧ ಸಾಮಾನ್ಯ ಗಣಿತ (Mathematics)
೫೧೧ ಸಂಖ್ಯಾ ಗಣಿತ
೫೧೨ ಬೀಜ ಗಣಿತ ಇ. ಇ.

ಇಷ್ಟರಿಂದ ದಶಾಂಶ ಚಿಹ್ನೆಯ ಸ್ಥಾನವನ್ನು ಓದುಗರು ಗುರುತಿಸುವುದು ಸಾಧ್ಯವಾಗಿರಬೇಕು. ಹೀಗಿರುವುದರಿಂದ ಮೊದಲಿನ ಹತ್ತು ಹರ್ಗಗಳು ನಿಜವಾಗಿಯೂ ಮೂರು ಸ್ಥಾನವನ್ನೇ ಒಳಗೊಂಡದ್ದುವಾಗಿರುತ್ತವೆ. ಎಂದರೆ ಹೀಗೆ:—

೧೦೦ ವೇದಾಂತ. ೩೦೦ ಸಮಾಜಶಾಸ್ತ್ರ
೬೦೦ ನೈಸರ್ಗಿಕ ಶಾಸ್ತ್ರ ೯೦೦ ಸಾಹಿತ್ಯ.

ಇಷ್ಟಲ್ಲದೆ ಈ ಮೂರು ಸ್ಥಾನಗಳ ವರೆಗಿನ ವಿಭಜನೆಯ ನಂತರ ನಡುವೊಂದು ದಶಾಂಶಚಿಹ್ನವನಿಟ್ಟು ನಮಗೆ ಬೇಕಾದಲ್ಲಿಯವರೆಗೆ ಒಂದು ವಿಷಯದ ವಿಭಜನೆಮಾಡಬಹುದು. ಉದಾ. ಗೆ:—

೮೦೦ ಸಾಹಿತ್ಯ ೮೨೦ ಇಂಗ್ಲಿಷ್ ಸಾಹಿತ್ಯ
೮೨೨ ಇಂಗ್ಲಿಷ್ ನಾಟಕಗಳು ೮೨೨. ೩ ಎಲಿಜಾಬೆಥ್ ಕಾಲದ ನಾಟಕ
೮೨೨.೩೩ ಶೇಕ್ಸಪೀಯರನ ಕೃತಿಗಳು.

ಹೀಗೆ ಈ ದಶಾಂಶಪದ್ಧತಿಯಲ್ಲಿ, ಬರಿ ಅಂಕಿಗಳನ್ನು ಉಪಯೋಗಿಸಿ ಎಷ್ಟೊಂದು ಸುಲಭರೀತಿಯಲ್ಲಿ ಪುಸ್ತಕಗಳನ್ನು ವರ್ಗೀಕರಿಸುವುದು ಸಾಧ್ಯವಾಗಿಬೆಯೆಂಬುದನ್ನು ನೋಡಬಹುದು. ಅಲ್ಲದೆ ಅನನ್ನು ಎಷ್ಟು ಬೇಕಾದಷ್ಟು ಸೂಕ್ಷ್ಮವಾಗಿಯೂ ವಿಭಜಿಸುತ್ತ ಹೋಗಬಹುದು. ಉದಾಹರಣೆಗೆ ಬೇಂದ್ರೆಯವರ ಕಾವ್ಯಗಳನ್ನು ತೆಗೆದುಕೊಳ್ಳೋಣ :

೮೦೦ ಸಾಹಿತ್ಯ. ೮೯೧ ಭಾರತೀಯ ಸಾಹಿತ್ಯ. ೮೯೧.೪ ದ್ರಾವಿಡ ಭಾಷೆಗಳು. ೮೯೧.೪೩೧ ಕನ್ನಡಸಾಹಿತ್ಯ. ೮೯೧.೪೩೧೦೨ ಕನ್ನಡ ಕಾವ್ಯಗಳು.
೮೯೧.೪೩೧೦೨೦೧ ಬೇಂದ್ರೆಯವರ ಕಾವ್ಯಗಳು.

ಅಂಬಿಕಾ

ಈ ಹಿಂದಿನ ಲೇಖನದಲ್ಲಿ (ಜಯಂತಿ, ಜನವರಿ ೪೮) ವಿವರಿಸಿದ ಪುಸ್ತಕೀಯ ಸಂಕೇತ, ವರ್ಗೀಯ ಸಂಕೇತಗಳು, ಈ ಉದಾಹರಣೆಯ ಕೊನೆಯದರಲ್ಲಿ ನೋಡಲು ಸಿಗಬಹುದು. ದಶಾಂಶ ಪದ್ಧತಿಯಲ್ಲಿ ಪುಸ್ತಕೀಯ ಸಂಕೇತವು, ಆ ಪುಸ್ತಕದ ಲೇಖಕರ ಹೆಸರಿನ ಮೊದಲಿನ ಮೂರು ಅಕ್ಷರಗಳನ್ನು ಬರೆಯುವುದರಿಂದ ಸೂಚಿತವಾಗುತ್ತದೆ.

ಮುಖ್ಯವರ್ಗದಿಂದ ವಿಶಿಷ್ಟ ವಿಷಯವನ್ನು ತಲುಪುವ ವರೆಗಿನ ಹಂತಗಳನ್ನು ಕ್ರಮಕ್ರಮವಾಗಿ ಗುರುತಿಸುವ ಎಲ್ಲ ಬಗೆಯ ಪಟ್ಟಿಗಳನ್ನು (tables) ಕೊಡಲಾಗಿದೆ. ಪ್ರತಿಯೊಂದು ವಿಷಯಕ್ಕೆ ನಿರ್ದಿಷ್ಟವಾದ ಸಂಕೇತವಾಗಿದೆ. ಕನ್ನಡ ಸಾಹಿತ್ಯದ ಸಂಕೇತವು ಯಾವಾಗಲೂ ೮೯೧.೪೩೧ ಇರುವುದು. ಹೀಗೆ ಸಂಕೇತವು ಸುಲಭವಾಗಿರುವುದರಿಂದಲೂ, ತಯಾರಿಸಲ್ಪಟ್ಟ ಪಟ್ಟಿಗಳು ಇದ್ದು ಪುಸ್ತಕಗಳಿಗೆ ನಂಬರನ್ನು ಹಾಕುವುದು ಅತಿ ಶೀಘ್ರದಲ್ಲಿ ಮುಗಿಯುವುದರಿಂದಲೂ ಈ ಪದ್ಧತಿಯು ಬಹಳ ಜನಪ್ರಿಯವಾಯಿತು.

ಆದರೆ ಇದು ಮೊತ್ತಮೊದಲಿನದಾಗಿರುವುದರಿಂದ, ಒಳ್ಳೆಯ ಗುಣಗಳನ್ನೂ ಅದರ ಜೊತೆಗೆ ದೋಷಗಳನ್ನೂ ಒಳಗೊಂಡಿದೆ. ೭೦ ವರ್ಷಗಳ ಹಿಂದೆಯೆ ನಿರ್ಮಿತವಾಗಿದ್ದು ಅತ್ಯಾಧುನಿಕ ಜ್ಞಾನದ ಬೆಳವಣಿಗೆಯನ್ನು ಅದರಲ್ಲಿ ಸಂಕೇತಿಸುವುದು ಸಾಧ್ಯವಾಗುವುದಿಲ್ಲ. ಎಷ್ಟೋ ತಿದ್ದುಪಡಿಗಳನ್ನು ಅದರಲ್ಲಿ ಮಾಡಿ ಹೊರಟರೂ ಅದು ಪರಿಪೂರ್ಣವಾಗಲಾರದಾಗಿದೆ.* ಶಾಸ್ತ್ರಗಳ ಭಾಷಾಭ್ಯಾಸ, ಭೂಗೋಲ ಇವುಗಳ ವಿಭಜನೆಯೂ ಈಚಿನವರಿ ಸಮಂಜಸವೆನಿಸಿಲ್ಲ. ಅಲ್ಲದೆ, ಸಾಹಿತ್ಯ, ಭಾಷಾಶಾಸ್ತ್ರ, ಇವು ಒಂದಾದ ನಂತರ ಒಂದು ಹತ್ತಿರ ಇರಬೇಕಷ್ಟೆ. ಆದರೆ ಇಲ್ಲಿ ಭಾಷಾಶಾಸ್ತ್ರ (೪) ಮೊದಲಿಗ ಬಂದು, ಅನಂತರ ಕೆಲ ಸ್ಥಾನದಾಟಿ ಎಂಟನೆಯದಾಗಿ ಸಾಹಿತ್ಯ ಬಂದಿದೆ. ಹಾಗೂ, ಇಡೀ ಪದ್ಧತಿಯು ಅಮೇರಿಕನ್ ಜ್ಞಾನ ಮತ್ತು ವಾಙ್ಮಯಸಮುದಾಯವನ್ನು ಹಚ್ಚಾಗಿ ಹಿನ್ನೆಲೆಯಾಗಿಟ್ಟುಕೊಂಡಿರುವುದರಿಂದ ಭಾರತೀಯ ಪುಸ್ತಕಾಲಯಗಳಿಗೆ ಅದು ಇನ್ನಷ್ಟು ನಿರರ್ಥಕವಾಗಿದೆ.† ಮತ್ತು ಭಾರತೀಯ ಪ್ರಾಚ್ಯಗ್ರಂಥಗಳ ವಿಷಯ ನಿರ್ವಹಣೆ ಎಷ್ಟೂ ತೃಪ್ತಿಕರವಾಗಿಲ್ಲ. ಈ ಎಲ್ಲ ದೋಷ ಮತ್ತು ಅಡಚಣೆಗಳನ್ನು, ಈ ಪದ್ಧತಿಯನ್ನು ಅನುಸರಿಸಿದ ಗ್ರಂಥಾಧಿಕಾರಿಗಳು, ವರ್ಗೀಕರಣ ಕಾರ್ಯದಲ್ಲಿ ಗಮನಿಸಿಯೇ ಇದ್ದಾರೆ.

೨. 'ವಿಸ್ತರಣ ಪದ್ಧತಿ'ಯ ಸ್ಥಾಪಕರಾದ ಚಾರ್ಲಸ್ ಅಮಿ ಕಟರ್ ಅವರು, ಹಾರ್ವರ್ಡ್ ಕಾಲೇಜ ಗ್ರಂಥಾಲಯದಲ್ಲಿ ಕೆಲಸ ಮಾಡುತ್ತಿದ್ದಾಗ, ದಶಾಂಶಪದ್ಧತಿಯಿಂದ ಸ್ಫೂರ್ತಿಗೊಂಡು ೧೮೭೭ರಲ್ಲಿ ತಮ್ಮ ವರ್ಗೀಕರಣ ಪುಸ್ತಕವನ್ನು ಪ್ರಕಟಿಸಿದರು. ಇದನ್ನು ವಿಸ್ತರಣಪದ್ಧತಿಯೆಂದು ಕರೆಯುವಲ್ಲಿ ಔಚಿತ್ಯವಿದೆ. ಇಲ್ಲಿ ಜ್ಞಾನಸಮುದಾಯವನ್ನು ಏಳು ಬೇರೆ ಬೇರೆ ಪಟ್ಟಿಗಳಲ್ಲಿ (tables) ರೂಪಿಸಲಾಗಿದೆ. ಮೊದಲಿನದು ಸ್ಥೂಲವಾಗಿದ್ದರೆ ಎರಡನೆಯದು ಅದಕ್ಕೂ ತುಸು ವಿಸ್ತೃತವಾಗಿ, ಹೀಗೆಯೆ ಬೆಳೆಯುತ್ತ ಏಳನೆಯದು ತೀರ ಸೂಕ್ಷ್ಮ ಹಾಗೂ ಆಳವಾದ ವರ್ಗೀಕರಣವುಳ್ಳದ್ದಾಗಿದೆ. ಕಟರ್ ಅವರ ಗ್ರಂಥಾಲಯಗಳನ್ನೆ ಏಳು ರೀತಿಯಲ್ಲಿ, ಆ ಗ್ರಂಥಾಲಯಕ್ಕೆ ತಕ್ಕಂತೆ, ಈ ಏಳರಲ್ಲಿಯ ಒಂದು ವರ್ಗೀಕರಣ ಪಟ್ಟಿಯನ್ನು ಬಳಸಬೇಕೆಂದ

---

*. It is an antiquated and inadaplable produc and now it is hopelessly beyond recanstructidn.— H. E. Bliss; 'organisation of knowledge of Libraries Page 228.

†. S. R. Ranganathon. 'School and Colleg Libraries'. Page 267.

ಗೊತ್ತುಪಡಿಸಿಕೊಂಡರು. ಬ್ರಿಟಿಶ್ ಮ್ಯೂಜಿಯಂನಂತಹ ಅತಿ ದೊಡ್ಡ ಗ್ರಂಥಾಲಯಕ್ಕೆ ಒನೆಯ ವಿಸ್ತರಣವು ಅವಶ್ಯವಾಗಬಲ್ಲುದು ಎಂದು ಅವರ ಎಣಿಸಿಕೆ. ಅಂತು ಈ ಪಟ್ಟಿಗಳಲ್ಲಿ ಮೊದಲಿನದರಿಂದ ಕೊನೆಯ ವರೆಗೆ ಕ್ರಮವಾದ ವಿಕಾಸವನ್ನು (evolution) ನಾವು ಕಾಣುತ್ತೇವೆ.

ದಶಾಂಶ ಪದ್ಧತಿಯಲ್ಲಿ ಸಂಕೇತವು ಅಂಕಿಗಳನ್ನೊಳಗೊಂಡಿದ್ದಾಗಿದ್ದರೆ, ಇಲ್ಲಿಯ ಮುಖ್ಯ ವರ್ಗಗಳ ಸಂಕೇತವು ಅಕ್ಷರಗಳಲ್ಲಿದೆ. ಮೊದಲಿನದರಲ್ಲಿ ೧೦ ಮುಖ್ಯ ವರ್ಗಗಳಾಗಿದ್ದರೆ, ಇಲ್ಲಿ ವರ್ಣಮಾಲೆಯ ಪ್ರಕಾರ ೨೭ ಆಗುವುದರಿಂದ, ಒಟ್ಟಿನ ಸಂಕೇತವು ದಶಾಂಶಪದ್ಧತಿಯದಕ್ಕಿಂತ ಸಣ್ಣದಾಗುತ್ತದೆ. ಈ ಇಪ್ಪತ್ತೇಳು ಮುಖ್ಯ ವರ್ಗಗಳನ್ನು ಮುಂದೆ ವಿಭಜಿಸುವಾಗ, ದಶಾಂಶರೂಪದಲ್ಲಿಯ ಅಂಕಿಗಳೇ ಬರುತ್ತವೆ. ಈ ಸಮ್ಮಿಶ್ರಸಂಕೇತದ ಲಾಭವನ್ನು ಕಟರ್ ಅವರೇ ಮೊದಲಿಗೆ ಕಂಡುಹಿಡಿದರೆಂದು ಹೇಳಬಹುದು.

ವಿಸ್ತರಣಪದ್ಧತಿಯು ಸದ್ಯ ಅಪೂರ್ಣವಾಗಿದೆ. ಏಳನೆಯ ಪಟ್ಟಿಯು ತಯಾರಿಕೆಯಲ್ಲಿರುವಾಗ, ಕಟರ್ ಅವರು ತೀರಿಕೊಂಡರು. ಈ ಪದ್ಧತಿಯು ಸಾಂಡಿತ್ಯಪೂರ್ಣವಾದದ್ದೆಂದು ಪೆಸರುಗೊಂಡರೂ, ಇದರಲ್ಲಿಯ ಮುಖ್ಯ ದೋಷವೆಂದರೆ: ವರ್ಗೀಕರಣವನ್ನು ಏಳು ಬೇರೆ ಬೇರೆ ಪಟ್ಟಿಗಳಲ್ಲಿ ಗುರುತಿಸಿದ್ದು. ಇದರ ಪ್ರಕಾರ ಮೊದಲಿನ ಹಂತದ ವರ್ಗೀಕರಣಕ್ಕೆ ಸರಿಹೋಗುವಂತಹ ಒಂದು ಗ್ರಂಥಾಲಯವು ಮುಂದೆ ಬೆಳೆಯುತ್ತ ಹೋಗಿ ೭-ನೆಯ ಹಂತಕ್ಕೆ ಬರುವುದೆಂದು ತಿಳಿಯುವ. ಹೀಗೆ ಬಂದಾಗ ಪ್ರತಿಯೊಂದು ಹಂತದಲ್ಲಿಯೂ ಸ್ವಲ್ಪ ಮಟ್ಟಿಗೆ ವೇರೆಯಾಗಿರುವುದರಿಂದ, ಸಂಕೇತವು ತಪ್ಪುತ್ತದೆ. ಒಂದು ಉದಾಹರಣೆ: ಮೊದಲಿನ ಹಂತದಲ್ಲಿ, ಐತಿಹಾಸಿಕ ಶಾಸ್ತ್ರಗಳಿಗೆ E ಎಂಬ ಸಂಕೇತವಿದೆ; ಆದರೆ ಅದೇ ಆರನೆಯ ಹಂತದಲ್ಲಿ ಈ ವಿಷಯಕ್ಕೆ J ಎಂಬ ಅಕ್ಷರವಿದೆ. ಏನಿದ್ದರೂ ಡ್ಯೂವಿ ಅವರ ಪದ್ಧತಿಯ ನಂತರ, ಇದೇ ತುಸು ಹೆಚ್ಚು ಪ್ರಚಾರದಲ್ಲಿದ್ದುದು ಅಮೇರಿಕೆಯಲ್ಲಿ ಸುಮಾರು ಒಂದುನೂರು ಪುಸ್ತಕಾಲಯಗಳು ಈ ಪದ್ಧತಿಯನ್ನನುಸರಿಸಿವೆ.

೫. ಅಮೇರಿಕೆಯ ರಾಷ್ಟ್ರೀಯ ಗ್ರಂಥಾಲಯವಾದ, ಲೈಬ್ರರಿ ಆಫ್ ಕಾಂಗ್ರೆಸ್—ಇದು ಇಡೀ ಜಗತ್ತಿನಲ್ಲೇ ಅತಿ ದೊಡ್ಡದಾದ ಪುಸ್ತಕಾಲಯವೆನ್ನಿಸಿಕೊಂಡಿದೆ. ಇಲ್ಲಿ ೪ ಲಕ್ಷ ಪುಸ್ತಕ ಸಂಗ್ರಹವಿದ್ದು, ಈಗ ಮೂರೇ ಲಕ್ಷ ಪುಸ್ತಕಗಳನ್ನು ವರ್ಗೀಕರಿಸಲಾಗಿದೆ. ಎಲ್ಲ ರೀತಿಯಿಂದಲೂ ಶ್ರೇಷ್ಠವಾದುದಾಗಿ, ಈ ಗ್ರಂಥಾಲಯವನ್ನು ಮಾಡಬೇಕೆಂಬ ಉದ್ದೇಶದಿಂದ, ಅದಕ್ಕಿಂದು ಸ್ವತಂತ್ರ ವರ್ಗೀಕರಣ ಪದ್ಧತಿಯು ಬೇಕು— ಎಂದು ಇದರ ಅಧಿಕಾರಿಗಳಿಗೆ ಎನಿಸಿತು. ಡಾ. ಹೆರ್ಬರ್ಟ್ ಪುಟ್ನಮ್ ರವರು, ಈ ಗ್ರಂಥಾಲಯದ ಆಡಳಿತಸೂತ್ರಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಂಡಾಗ, ಹೊಸ ವರ್ಗೀಕರಣಪದ್ಧತಿಗೆ ಮೊದಲು ಮಾಡಿದರು. ಡ್ಯೂವಿ ಅವರ ಪದ್ಧತಿಯು ಸರಿಯಾಗಿಲ್ಲವೆಂದು ಕಂಡು ಬಂದ ಮೇಲೆ, ವಿಸ್ತರಣ ಪದ್ಧತಿಯನ್ನೇ ಕೆಲವು ವ್ಯತ್ಯಾಸಗಳೊಂದಿಗೆ ಉಪಯೋಗಿಸಬೇಕೆಂದು, ೧೯೦೪ರಿಂದಲೂ ಇದರ ವರ್ಗೀಕೃತ ವಿಷಯವಾರು ಪಟ್ಟಿಗಳು (Subject Schedules) ಪ್ರಕಟವಾಗುತ್ತಿದ್ದುದ್ದು, ಇನ್ನೂ ಮುಗಿದಿಲ್ಲ.

ಓದುಗರಿಗೂ ವರ್ಗೀಕರಣ ಪದ್ಧತಿಗೂ ಇರುವ ಸಂಬಂಧ, ಹಾಗೂ ಓದುಗರಿಗೆ, ವರ್ಗೀಕರಣ ಕರ್ತರಿಗೆ ಆಗುವ ಅಡಚಣೆಗಳನ್ನು ಮನದಂದು ಈ ಪದ್ಧತಿಯು ಹುಟ್ಟಿಕೊಂಡಿತೆಂಬುದನ್ನು ಮರೆಯಲಾಗದು. ಈ ಪದ್ಧತಿಯು, ವಿಷಯಗಳ ಶಾಸ್ತ್ರೀಯ ಗುಣಸಂಬಂಧಗಳನ್ನು ಸಂಪೂರ್ಣವಾಗಿ ಅನುಸರಿಸಬೇಕೆಂಬ ಗುರಿಯನ್ನು ಇಟ್ಟುಕೊಂಡಿಲ್ಲ. ಬೇರೆ ಬೇರೆ ವಿಷಯವಾರು ಗುಂಪುಗಳನ್ನು, ಅವು ಬರಿಯ ವಿಷಯಗಳು ಎಂದು ತಿಳಿಯದೆ, 'ಪುಸ್ತಕಗಳ ಗುಂಪು' ಎಂದು ಗಣಿಸಿಯೆ ಇಲ್ಲಿ ವರ್ಗೀಕರಣವನ್ನು ಮಾಡಲಾಗಿದೆ.[೭] ಆದರೆ ಒಬ್ಬನೆ ಆದ ಗ್ರಂಥಜ್ಞನಿಂದ ಇದು ನಿರ್ಮಿತವಾಗದಿರುವುದರಿಂದಲೂ, ಎಷ್ಟೆಂದರೂ ಸರಕಾರದ ಒಂದು ಸಮಿತಿಯ ಮೂಲಕ ಕೆಲಸ ನಡೆಯುತ್ತಿರುವುದರಿಂದಲೂ, ತನ್ನ ಮುಂದೆ ಇದು ಇಟ್ಟುಕೊಂಡ ಎಲ್ಲ ಆದರ್ಶಗಳನ್ನು ಸಾಧಿಸಲಾಗಿಲ್ಲವೆಂದೇ ಹೇಳಬೇಕು. ಒಂದು ಉದಾಹರಣೆ ಕೊಡಬಹುದು: ದಶಾಂಶರೂಪವನ್ನು, ಸಂಕೇತದಲ್ಲಿ ಇಟ್ಟುಕೊಳ್ಳಬೇಕು ಎಂಬ ಸೂಚನೆ ಸಮಿತಿಯ ಮುಂದೆ ಬಂದಾಗ, ಸ್ಪಾಫರ್ಡ್ (Spofford) ಎಂಬ ಸದಸ್ಯರು, ಅದನ್ನು ಬಲವಾಗಿ ವಿರೋಧಿಸಿ ಬರದಂತೆ ಹಟಕೊಟ್ಟರಂತೆ! ದಶಾಂಶರೂಪವಿದ್ದಿದ್ದರೆ, ಈ ಪದ್ಧತಿಯು, ಇದುವರೆಗಿನ ಎಲ್ಲ ಪದ್ಧತಿಗಳನ್ನು ಹಿಮ್ಮೆಟ್ಟುವಂತಹದಾಗುತ್ತಿತ್ತು.[೮]

೪. ಜೇಮ್ಸ್ ಡಫ್ ಬ್ರೌನ್ ಅವರು, ೧೮೯೪ರಲ್ಲೇ ಒಂದು ವರ್ಗೀಕರಣ ಪದ್ಧತಿಯನ್ನು ಜಾನಕ್ವಿನ್ ಅವರ ಸಹಾಯದೊಂದಿಗೆ, ಬೆಳಕಿಗೆ ತಂದರು. ಮುಂದೆ ಅದಕ್ಕಿಂತ ವಿಸ್ತಾರವಾಗಿ Adjustable classification ಎಂಬ ಹೆಸರಿನಿಂದ ಇನ್ನೊಂದನ್ನು ಪ್ರಸಿದ್ಧಿಪಡಿಸಿದರು. ಇದೂ ಕೂಡ ದಶಾಂಶಪದ್ಧತಿಯನ್ನು ಹಿಂದೆ ಹಾಕುವುದು ಅಸಾಧ್ಯವೆಂದು ಕಂಡುಬಂದ ಮೇಲೆ, ೧೯೦೬ರಲ್ಲಿ 'ವಿಷಯವಾರು ವರ್ಗೀಕರಣ' ವನ್ನು ಪ್ರಸಿದ್ಧಿಪಡಿಸಿದರು. ಈ ಪದ್ಧತಿಯ ಬಾಹ್ಯರೂಪರೇಷೆಯೇನೋ ಲಕ್ಷಣವಾಗಿ ಕಂಡರೂ, ಕಾರ್ಯರೂಪದಲ್ಲಿ ಬಂದಾಗ ಅದು ತನ್ನ ಸಂಪೂರ್ಣ ಗುರಿಯನ್ನು ನಿಲುಕಲಾರದ್ದಾಗಿದೆ.

೫. ಬ್ಲಿಸ್ ಅವರು ಪುಸ್ತಕಾಲಯ ಇತಿಹಾಸದಲ್ಲೇ ಕ್ರಾಂತಿಕಾರಕವಾದ ಒಂದು ವರ್ಗೀಕರಣ ಪದ್ಧತಿಯನ್ನು, ಜನತೆಯ

---

೭. Report and Manual of the Librarian of Congress. 1901.

೮. Ranganathan S. R. Prolegomenat to Library Classification. Page 190.

ಮುಂಬೆ ಇಡುತ್ತಲಿದ್ದಾರೆ. ಗ್ರಂಥಾಲಯ ಹಾಗೂ ವರ್ಗೀಕರಣ ಶಾಸ್ತ್ರದ ಮೇಲೆ ಅಧಿಕಾರಯುತವಾಗಿ ಬರೆಯ ಬಲ್ಲ ಇವರ ಪದ್ಧತಿಯು, ಈಗಾಗಲೇ ಸಾಕಷ್ಟು ಮೆಚ್ಚಿಕೆಯನ್ನು ಹೊಂದಿದೆ. ಈಗ ಸದ್ಯ ಅದರ ಎರಡು ಸಂಪುಟಗಳು ಮಾತ್ರ ಹೊರಟು, ಇನ್ನೂ ಮುಗಿದಿಲ್ಲವಾದ್ದರಿಂದ, ಇದರ ವಿಶೇಷವಿವರ ಇಲ್ಲಿ ಅನಾವಶ್ಯಕವಾಗಿದೆ.

೬. ಈ ಎಲ್ಲ ಪದ್ಧತಿಗಳ ಗುಣ-ದೋಷಗಳನ್ನು ಚೆನ್ನಾಗಿ ಅರಿತು, ಮದ್ರಾಸ ವಿಶ್ವವಿದ್ಯಾಲಯದ ಗ್ರಂಥಾಧಿಕಾರಿಗಳಾಗಿದ್ದಾಗ, ಗ್ರಂಥಪಾಲರಲ್ಲಿ, ರಾ. ಸಾ. ರಂಗನಾಥನ್ನವರು ದ್ವಿಬಿಂದು-ಪದ್ಧತಿಯನ್ನು ಹುಡುಕಿ ತೆಗೆದರು. ಈ ಪದ್ಧತಿಯು ಅನೇಕ ರೀತಿಯಿಂದ ಮಹತ್ವವಿದ್ದಿರುವುದರಿಂದ, ಹಾಗು ಕನ್ನಡ ಪುಸ್ತಕಾಲಯಗಳಿಗೆ ಇದೇ ಹೆಚ್ಚು ಯೋಗ್ಯವಾದ ಪದ್ಧತಿಯೆಂದು ಪ್ರಸ್ತುತ ಲೇಖಕನ ಅಭಿಮತವಿರುವುದರಿಂದ, ಈ ಪದ್ಧತಿಯನ್ನು ಕುರಿತು ಪ್ರತ್ಯೇಕವಾಗಿ ವಿಚಾರಿಸುವ.

ಇದುವರೆಗೆ ನಾವು ವರ್ಗೀಕರಣದ ಐತಿಹಾಸಿಕ ವಿಕಾಸವನ್ನು ತುಸು ಪರಿಶೀಲಿಸಿದನಂತರ, ಪ್ರಸಿದ್ಧವಾಗಿರುವ ಕೆಲವು ವರ್ಗೀಕರಣ ಪದ್ಧತಿಗಳನ್ನು ನೋಡಿದೆವು. ಭಾರತೀಯ ಭಾಷೆಗಳನ್ನು ಮುಖ್ಯವಾಗಿ ಗಮನಿಸಿ ರಚಿತವಾದ ನುತ್ತ ದೇಶೀಯ ಪುಸ್ತಕಾಲಯಗಳಿಗೆ ಅತ್ಯಂತ ಯೋಗ್ಯವಾದ ದ್ವಿಬಿಂದು ವರ್ಗೀಕರಣ ಪದ್ಧತಿಯನ್ನು ಕುರಿತು ಮುಂದಿನ ಲೇಖನದಲ್ಲಿ ಹೇಳಲಾಗುವುದು.

ಸಾಕಿನ್ನು ಈ ಕಪಟ ಕಣ್ಣೀರು ಬೂದಿಯ ಮಹಿಮೆ!*

★ ★

ಶ್ರೀ. ಕೊ. ಚನ್ನಬಸಪ್ಪ, ಬಳ್ಳಾರಿ

ಓ ದಿವ್ಯಾತ್ಮ! ಬಿದ್ದ ಮಾನವಕುಲದ ಉದ್ಧಾರಕೈತಂದ ತಂದೆ!
ನಿನ್ನ ಒಳ್ಳೆಯತನದಿ ನಮ್ಮೆಲ್ಲರಂ ಮುಗುಡಕಡಲಿಗೆ ತಳ್ಳಿ
ಉಸಿರ್ ಕಟ್ಟಿ ತೇಂಕುವೊಲು ಗೈದೆ; ಸಂಕಟದ ಎದೆಕೊಳ್ಳಿ
ಕೊಲೆಗಡುಕನಂ ನೆನೆದು ಚಾಚುತಿವೆ ನಾಲಗೆಯ ಭರದಿಂದೆ!
ಹಾ! ನಿಲ್ಲು! ಆದರದು ಪಾತಕಿಗೆ ಮದ್ದಲ್ತು! ಬಾಪುಜಿಗೆ
ಪ್ರಿಯಮಲ್ತು!

ಕ್ಷಣಮೊಂದೆ ಯೋಜಿಪೊಡೆ ತಿಳಿವುದೀ ನಿನ್ನೆದೆಯ ಕೊಲೆಗೆ
ಕಾರಣಮಾವ ಜಾತಿದ್ವೇಷದ ಹಾವಿಗೆಡೆಯಿತ್ತು ಆ ಹೇಳಿಗೆ!
ಸರ್ವರೂ ಸಮನೆಂಬ ಧರ್ಮಸೂತ್ರವ ಮರೆತು
ಹೊಲೆಯ-ಮಾದಿಗ-ಮ್ಲೇಚ್ಛ-ಮುಸ್ಲಿಮರು ಕೀಳೆಂದು
ನರದೇವರನೆ ಕಾಲಕೆಳಗೆ ತುಳಿದವಮಾನಿಸಿದ ನೀನೆ
ಕೊಲೆಗಾರ ಗೋಡಸೆಯ ಸೈತಾನ ಸೈನಿಕಂ! ನೀನಿಂದು
ನಿನ್ನೆದೆಯ ದ್ವೇಷಸರ್ಪವಸುರುಹಿ ಕಳೆ ಬೇನೆ!
ಸಾಕಿನ್ನು! ನಿನ್ನ ಈ ಕಪಟ ಕಣ್ಣೀರಿನೀಂ ತಣಿಸಬಯಸುವೆಯ
ನೀನೆ ಹೊತ್ತಿಸಿದ ಪರರೆದೆಯ ಜಾತಿದ್ವೇಷದ ಕಿಡಿಯ?

ಓ ಮಹಾತ್ಮಾ! ಏನಿದೀ ನಿನ್ನ ಮಹಿಮೆಮಯ ಅದ್ಭುತಪವಾಡಂ.
ನಿನ್ನ ಮಹಿಮೆಯನರಿತು ಆದ ಸಾರುವಾ ಸಾಮರ್ಥ್ಯ ನನಗಿಲ್ಲ;
ಆದರೀ ನಿನ್ನ ಭಸ್ಮ-ಬರಿಯ ಬೂದಿಯ ಮುಂದೆ ಅಗಣಿತಜನರಿಲ್ಲ
ಇನಿತು ಶ್ರದ್ಧಾಭಕ್ತಿಯಿಂ ತಲೆಬಾಗಿ ವಂದಿಸುವಂತೆ ಗೈದ ಕೈವಾಡಂ
ನಿನ್ನದೆಂಬುದ ಮಾತ್ರ ಕಾಣುವೆವು ನಿನ್ನಾಧ್ಯೈವಶಕ್ತಿಗೆ ಸಾಕ್ಷಿಯಾಗಿ!
ಆದರಿದು ನಿನಗೆ—ಸಕಲ ಮಾನವಕೋಟಿ ಹೃದಯ
ಸಾಮ್ರಾಜ್ಯವನ್
ಲೋಕನಾಯಕರ ಸೃಷ್ಟಿಸುವ ಮರ್ದಿಸುವ ಅಸಮಾನ್ಯ
ಶಕ್ತಿಯನ್
ಪಡೆದಿರ್ದು ಎನಗಿಂತ ಕಿರಿಯರಿಲ್ಲೆಂದೊರೆದು, ಭಂಗಿ-ಹರಿಜನನಾಗಿ
ಬಾಳಿದ ನಿನಗೆ—ಎನಿತು ಒಪ್ಪುವುದೊ ಈ ಜನರ ಮರುಳ್
ನಾನರಿಯೆ!

ಅಂದು ನೀಂ ಜೀವದಿಂದಿದ್ದಾಗ ಬೋಧಿಸಿದ ಶಾಂತಿ-ಸಮನ್ವಯ
ಧರ್ಮ-ಸತ್ಯ-ಅಹಿಂಸೆಗಳನೆಳೆಮಾತ್ರ ನಂಬದೆಯೆ, ನಡೆಯದೆಯೆ
ಅಡ್ಡಾಡಿದೀ ಮಂದಿ ಸುರಿಸುತಿಹ ಕಣ್ಣೀರ ಅರ್ಪಿಸುವ ಕಾಣಿಕೆಯ
ಕಂಡೇನು ನಗುತಿಹೆಯೋ? ನೀ ಮಡಿದು ಗೆದ್ದೆಯೆಂದರಳುವೆಯೊ?

---

* ಪಂಪೆಯ ಚಕ್ರತೀರ್ಥದಲ್ಲಿ ಬೆರಸಲು ಬಂದ ಮಹಾತ್ಮನ ಚಿತಾಭಸ್ಮವನ್ನು ಬಳ್ಳಾರಿಗೆ ತಂದಾಗ ನೋಡಿ—

ಮಹಾಪಾಪ

(ಸಣ್ಣಕತೆ)

ಶ್ರೀ. ಕೆ. ಅಶ್ವತ್ಥನಾರಾಯಣರಾವ್
ಬನಾರಸ್

ಮಹಾತ್ಮಾಜಿಯವರು ಹೇಳುತ್ತಿದ್ದ ಮಾನವಧರ್ಮವೆಂದರೆ ಯಾವುದೆಂಬುದನ್ನು ಇಲ್ಲಿಯ ಮುಸ್ಲಿಂ ಮುದುಕಿ ಚೆನ್ನಾಗಿ ಅರಿತುಕೊಂಡಿದ್ದಾಳೆ. ಆದುದರಿಂದಲೇ ಮೌಲ್ವಿಯವರ ಮಾತಿಗಿಂತ ಕುರಾಣದ ವಚನಕ್ಕೆ ಅವಳು ಹೆಚ್ಚಿನ ಮನ್ನಣೆಕೊಟ್ಟು ಮಾನವಧರ್ಮ ಪಾಲಿಸಿದಳು.

★

೧

"ಪ್ರಿಜರ್ ಹಯಾತರ ಮಂತ್ರಿಮಂಡಲದ ರಾಜೀನಾಮೆ!"

"ಮಂತ್ರಿಮಂಡಲ ಮುರಿದು ಬಿತ್ತು!"

"ಮುಸ್ಲಿಂ ಲೀಗಿಗೆ ಜಯ!"

"ಪಾಕಿಸ್ತಾನ ಚಿರಾಯುವಾಗಲಿ!"

ಬೆಳಗ್ಗೆ ಪತ್ರಿಕೆಗಳ ಈ ಚೀರಾಟಗಳ ಸೂಚನೆಯೇ ಲಾಹೋರಿನ ಕೋಮುವಾರು ಮದ್ದಿನ ಮನೆಗೆ ಬೆಂಕಿಯ ಸೋಂಕಾಯಿತು. ಈ ಉತ್ಪಾತದ ವರ್ತಮಾನದ ಆಶ್ಚರ್ಯ-ಭಯಗಳಿಂದ ಜನರು ಚೇತರಿಸಿಕೊಳ್ಳದೆ, ಇನ್ನೂ ಅನುಮಾನ-ಭ್ರಾಂತಿಯಲ್ಲಿರುವಾಗಲೇ ನಗರದಲ್ಲಿ ದೊಡ್ಡ ಕೋಲಾಹಲವೆದ್ದಿತು. ಈ ಭೂಕಂಪದ ಅಲ್ಲೋಲ-ಕಲ್ಲೋಲದಿಂದ ನಗರಕ್ಕೆ ನಗರವೇ ಗಡಗಡ ನಡುಗಿತು. ಮಧ್ಯಾನ್ಹವಾಗುವುದರ ಒಳಗಾಗಿ ವಿರೋಧೀ ಪಂಗಡಗಳ ಜನರು ತಂಡತಂಡವಾಗಿ ಹೊರಟು, ಕೈಗೆ ಸಿಕ್ಕಿದ ದೊಣ್ಣೆ, ಭರ್ಜಿ, ಕತ್ತಿ, ಚಾಕು, ಸೀಸೆ, ಕಲ್ಲು, ಇಟ್ಟಿಗೆ—ಏನಾದರೊಂದು ನಾಶದ ಆಯುಧವನ್ನು ಹಿಡಿದು, ಮೆರವಣಿಗೆಯಲ್ಲಿ ಎಲ್ಲೆಲ್ಲೂ ತಿರುಗಾಡುತ್ತಿದ್ದರು. ಒಂದು ಕೋಮಿನ ಗುಂಪು ತನಗೆ ಸಿಕ್ಕಿದ ಇತರ ಕೋಮಿನ ಜನರನ್ನು ಹೊಡೆದು ಬಡಿದು, ತಿವಿದು, ಇರಿದು ಹೇಗೋ ಸಾಯಿಸುತ್ತಿತ್ತು. ಅವರ ಅಂಗಡಿಗೆ—ಮನೆಗೆ—ಬೆಂಕಿ ಹತ್ತಿಸಿ ಸುಡುತ್ತ ಆಹ್ಲಾದಪಟ್ಟು, ಕೇಕೆ ಹಾಕಿ, ಕೂಗಾಡಿ, ಜಯಜಯಕಾರಮಾಡಿ, ಗರ್ಜಿಸಿ ತನ್ನ ದ್ವೇಷದ ಆಟೋಪವನ್ನು, ನೀಚಶೌರ್ಯವನ್ನು ಪ್ರದರ್ಶಿಸುತ್ತಿತ್ತು. ಹಣ, ಒಡವೆ-ವಸ್ತು, ಬಟ್ಟೆ, ಧಾನ್ಯ ಇವೆಲ್ಲವನ್ನೂ ಸೂರೆಮಾಡಿ ಸಾಗಿಸುತ್ತಿತ್ತು. ಹೀಗಾಗಿ ಸಂಜೆಯ ಹೊತ್ತಿಗೆ ನಗರದ ಭವ್ಯ ಬೀದಿಗಳು ಸಾಲುಸಾಲಾಗಿ ಉರಿಯಾಡುತ್ತಿದ್ದುವು. ಆಕಾಶವೆಲ್ಲ ಹೊಗೆ ತುಂಬಿ ಕಪ್ಪಾಗಿತ್ತು. ಬೀದಿಯಲ್ಲಿ, ಚರಂಡಿಗಳಲ್ಲಿ, ಮನೆಗಳ ಕೋಣೆ-ಮೂಲೆಗಳಲ್ಲಿ ಗಂಡು-ಹೆಣ್ಣು—ಮುದುಕರ-ಮಕ್ಕಳ ಹೆಣಗಳು ಅಸ್ತವ್ಯಸ್ತವಾಗಿ ಬಿದ್ದಿದ್ದುವು; ಬೀಳುತ್ತಿದ್ದುವು. ಇತರ ವಸ್ತುಗಳಂತೆಯೆ ರಕ್ತವೂ ಅಲ್ಲಲ್ಲಿ ಜೆಲ್ಲಾಡಿತ್ತು. ಆರ್ತರ ಕಿರಿಚು, ದಿಕ್ಕಾಪಾಲಾದ ಓಟ, ಅವರ ಬೇಟೆಗಾರರ ಅರ್ಭಟ, ಹಿಡಿದಾಟ—ಇದು ಸಾಮಾನ್ಯ ದೃಶ್ಯವಾಯಿತು. ಒಟ್ಟನಲ್ಲಿ ಪಟ್ಟಣವು ತನ್ನ ಈ ಉನ್ಮತ್ತಾವಸ್ಥೆಯ ಸುಂಟರಿನಲ್ಲಿ ಹದಗೆಟ್ಟು ಘೋರವಾಗಿ, ಪರದಾಳಿಯ ನಿಷ್ಕರುಣ ಸೈನ್ಯದ ಸುಲಿಗೆಗೆ ಸಿಕ್ಕಂತಿದ್ದು, ನಾದಿರಷಾ-ತೈಮೂರರ ಹಾವಳಿಯನ್ನು ನೆನಪಿಗೆ ತರುತ್ತಿದ್ದಿತು.

೨

ಈ ಸುಡುಗಾಡು ಸಂಜೆಯಲ್ಲಿ, ಲಾಹೋರಿನ ವಿಸ್ತರಣ—ಸುಲ್ತಾನ್‌ಪುರದ ಮಹಮೂದ್ ಗಲ್ಲಿಯ ಸಣ್ಣ ಮನೆಯೊಂದರ ಮುಂದೆ ಪುಂಡರ ದೊಡ್ಡ ಗುಂಪೊಂದು ಗಲಭೆ ಮಾಡುತ್ತಿದ್ದಿತು. ಆಯುಧಪಾಣಿಗಳಾದ ಜನರು ಸಮಯಕ್ಕೆ ತಕ್ಕಂತೆ "ಬಾಗಿಲು ತೆಗೆ!," "ಕಾಫಿರನನ್ನು ವಶಮಾಡು!," "ಕಾಫಿರರಿಗೆ ಸಾವು!," "ಮುಸ್ಲಿಂ ರಾಜ್ಯ ಎಂದೆಂದೂ!" "ಅಲ್ಲಾ ಹೋ ಅಕ್ಬರ್!" ಎಂದು ಮುಂತಾಗಿ ಕಿರಿಚಿಕೊಳ್ಳುತ್ತಿದ್ದರು. ಮೊದ-ಮೊದಲು ಮನೆಯಲ್ಲಿ ಯಾರೂ ಇಲ್ಲವೋ ಎನ್ನುವಂತೆ ಮನೆಯೊಳಗೆ ಶಬ್ದವೂ ಕೇಳಿ ಬರಲಿಲ್ಲ, ಬಾಗಿಲೂ ತೆರೆಯಲ್ಪಡಲಿಲ್ಲ. ಆದರೆ ಕೆಲವು ನಿಮಿಷಗಳಾದ ಮೇಲೆ, ಬಾಯಿ ಆಕಳಿಸಿದಂತೆ ಬಾಗಿಲು ತೆರೆಯಿತು. ಜನರು ಒಳನುಗ್ಗುವುದಕ್ಕೆ ಹವಣಿಸಿ ಮುಂದೆ ನುಗ್ಗಿದರು. ಆ ಕ್ಷಣದಲ್ಲಿ ಒಳಗೆ ಬಾಗಿಲಿನ ಬಳಿ ಒಬ್ಬ ಹೆಂಗುಸು ಕಾಣಿಸಿಕೊಂಡಳು. ಅವಳು ಎಪ್ಪತ್ತು ವರ್ಷಕ್ಕೆ ಮೀರಿದ ವಯಸ್ಸಿನ ಹಣ್ಣು ಹಣ್ಣು ಮುದುಕಿ. ಸೊಂಟ ಬಗ್ಗಿದ್ದಿತು. ಮುಖವು ಸುಕ್ಕಿನ ಗೆರೆಗಳಿಂದ ತುಂಬಿ ಹೋಗಿದ್ದಿತು. ಬೊಚ್ಚು ಬಾಯಿ. ಬಾಗಿದ್ದ ದೊಡ್ಡ ಮೂಗಿನ ಮೇಲೆ ದಪ್ಪ ಗಾಜಿನ ಕನ್ನಡಕ, ಅದರ ಹಿಂದೆ ಮಂಜುಗಣ್ಣುಗಳು ಪಿಳಿಪಿಳಿಗುಟ್ಟುತ್ತಿದ್ದುವು. ಮಾಸಿದ ಬಿಳಿ ಸೀರೆಯ ಸೆರಗು ನಡುಗುವ ತಲೆಯ ಮೇಲಿದ್ದರೂ, ಬಿಳಿಯ ಕೂದಲು ಬೇಕಾದಷ್ಟು ಹೊರಗೇ ಕಾಣುತ್ತಿದ್ದಿತು. ಮುದುಕಿಯು ಎರಡು ಕೈಗಳನ್ನೂ ಸೊಂಟದ ಮೇಲೆ ಇಟ್ಟುಕೊಂಡು, ಕೊಂಚ ಕತ್ತೆತ್ತಿ ಆಗಂತುಕರನ್ನು ನೋಡಿದಳು.

ಒಳಹೊಗುವ ಉದ್ದಿಶ್ಯದಿಂದ ಮುಂದೆ ಒಂದು ಹೆಜ್ಜೆಯಿಟ್ಟಿದ್ದ ಬಿಚ್ಚುಗತ್ತಿಯ ಮುಖಂಡನೂ, ಅವನನ್ನು ಹಿಂಬಾಲಿಸಿದ್ದ ಪಂಜಿನವನೂ, ದೊಣ್ಣೆ-ಭರ್ಜಿಗಳ ಇತರರೂ ಈ ಮುಸಲ್ಮಾನ ಮುದುಕಿಯ ವಯಸ್ಸು ಹುಟ್ಟಿಸಿದ ಗೌರವದಿಂದ ಕೊಂಚ

ತಡೆದು ಹಾಗೆಯೇ ನಿಂತರು. ಅವಳು ತನ್ನ ದೃಷ್ಟಿಯನ್ನು ಅಕ್ಕಪಕ್ಕಕ್ಕೂ ಮೇಲೆ ಕೆಳಗೂ ನಿಧಾನವಾಗಿ ಹೊರಳಿಸಿ, ನಡುಗುವ ಧ್ವನಿಯಲ್ಲಿ:

"ಯಾರಪ್ಪಾ? ಏನು ಬೇಕು?" ಎಂದು ಕೇಳಿದಳು.

"ಒಬ್ಬ ಕಾಫಿರನನ್ನು ಹುಡುಕುತ್ತಿದ್ದೀವಿ" ಮುಖಂಡನು ಹೇಳಿದನು.

"ಕಾಫಿರ್! ಎಲ್ಲಿದಾನೆ? ಏನು ಮಾಡಿದಾನೆ?" ಮುದುಕಿಯು ಆನುಮಾನದಿಂದ ಕೇಳಿದಳು.

"ಎಲ್ಲಿದಾನೆ? ಏನು ಮಾಡಿದಾನೆ?" ಮುಖಂಡನು ಮೊಳಲು ಕೊಟ್ಟು "ಇಲ್ಲೇ ಇರಬೇಕು" ಎಂದು ಪ್ರಶ್ನೆಯ ಒಂದು ಭಾಗಕ್ಕೆ ಉತ್ತರಕೊಟ್ಟನು.

"ಏನು ಮಾಡಿದಾನೆ ಎಂದರೆ ಕಾಫಿರನಾಗಿರೋದು ಸಾಲದೆ?" ಎಂದು ಪಂಜಿನವನು ತಿರಸ್ಕಾರದಿಂದ ನಗುತ್ತ, ಎರಡನೆಯ ಭಾಗಕ್ಕೆ ಉತ್ತರಕೊಟ್ಟನು.

"ಕಾಫಿರನನ್ನು ಕೊಂದರೆ ಸ್ವರ್ಗ; ಗೊತ್ತಿಲ್ಲವೆ?" ಇನ್ನೊಬ್ಬನು ಕೇಳಿದನು.

"ಅಯ್ಯೋ, ಅಲ್ಲಾ! ಹಾಗೆ ಯಾರು ಹೇಳಿದರಪ್ಪ?" ಮುದುಕಿಯು ಕೇಳಿದಳು.

"ಯಾಮಾ! ಪವಿತ್ರ ಕೊರಾನಿನಲ್ಲಿ ಬರೆದಿದೆ, ಮುದುಕಿ!" ಮುಖಂಡನು ಹೇಳಿದನು.

"ಛೇ! ಛೇ! ಪವಿತ್ರ ಕೊರಾನನ್ನು ನಿಂದಿಸಬೇಡಪ್ಪ" ಮುದುಕಿ ಬೇಡಿಕೊಂಡಳು.

"ಹುಂ, ಬಿಡು ಬಿಡು, ನಿಂಗೇನು ಗೊತ್ತು, ಮೌಲ್ವಿ ಸಾಹೇಬರು ಹೇಳಿದ್ದಾರೆ."

"ಇದೇನಪ್ಪಾ? ನೋಡು, ನಾನು ಚೆಕ್ಕವಳಾಗಿದ್ದಾಗಿನಿಂದ ನಿತ್ಯವೂ ಆ ಪವಿತ್ರಪುಸ್ತಕದ ಕೆಲವು ಹಾಳೆಗಳನ್ನು ಓದದೆ ಊಟ ಮಾಡೋದಿಲ್ಲ. ಈ ವರೆಗೆ ಅದನ್ನು ಎಷ್ಟು ಬಾರಿ ತಿರುವಿ-ಹಾಕಿದ್ದೀನೋ ಏನೋ. ಆದರೆ ಈ ಮಾತು ಮಾತ್ರ....."

"ನಿಂಗೆ ಮೌಲ್ವೀ ಸಾಹೇಬರಿಗಿಂತ ಹೆಚ್ಚು ಗೊತ್ತಾಗುತ್ತೆ; ಅಲ್ಲವೆ? ಸಾಕು!"

ಅನೇಕರು ನಕ್ಕರು.

"ಅದೆಲ್ಲ ಪುರಾಣ ಹೇಗಿದ್ದರೇನು? ಈಗ ನಮ್ಮ ರಾಜ್ಯ—ಬಾದಶಾಹಿ—ಬಂದಿದೆ ಗೊತ್ತೇ? ಇನ್ನು ಮೇಲೆ ಈ ಕಾಫಿರರೆಲ್ಲ ನಮ್ಮ ಗುಲಾಮರು. ಅವರ ಹೆಂಡಿರು, ಹುಡುಗಿಯರು, ಆಸ್ತಿ ಪಾಸ್ತಿ, ಎಲ್ಲ ನಮ್ಮದು. ನಮಗೆ ಇಷ್ಟ ಬಂದ ಹಾಗೆ ಮಾಡುತ್ತೀನಿ" ಪಂಜಿನವನು ಕಟುವಾಗಿ ನಿರ್ಧಾರವನ್ನು ಹೇಳಿದನು.

ಈ ಮಾತುಗಳ ಮುಂದೆ ಮುದುಕಿಯು ಮೂಕಿಯಾದಳು, ತೀಕ್ಷ್ಣವಾಗಿ ಯೋಚಿಸಿದಳು.

"ಹುಂ. ಎಲ್ಲಿ ಅವಿತುಕೊಂಡಿದಾನೆ ತೋರಿಸು, ನಡಿ! ಇಲ್ಲದೆ ಇದ್ದರೆ ಕೊಂಚ ಸರಿದುಕೊ. ನಾವೇ ನೋಡಿಕೊಳ್ಳುತ್ತೀವಿ." ಮುಖಂಡನು ಜಲಿಸಿದನು.

"ಒಳಗೆ ಅಂಥವನು ಇಲ್ಲ....ಅಂತ ಆಗಲೇ ಸೂಚಿಸಿದೆನಲ್ಲಪ್ಪ" ಮುದುಕಿಯು ಅಡ್ಡವಾಗಿಯೇ ನಿಂತುಕೊಂಡು ಧೈರ್ಯವಾಗಿ ಹೇಳಿದಳು.

"ಆಂ!" ಮುಖಂಡನಿಗೆ ಛಳಕು ಹೊಡೆದಂತಾಯಿತು.

"ಈ ಮನೆಗೋ ಪಕ್ಕದ ಸಂದಿಗೋ ಹೋದ—ಅಂತ ನೆರೆಯ ಮನೆ ಮೌಲ್ವೀಸಾಹೇಬರು ಹೇಳಿದರಲ್ಲ? ಅಲ್ಲವೇ ಸಾಹೇಬರೆ?" ಪಂಜಿನವನು ಮುದುಕಿಯ ಮನೆಯ ಪಕ್ಕದಲ್ಲಿದ್ದ ದೊಡ್ಡ ಸೌಧದ ಎತ್ತರವಾದ ಜಗುಲಿಯ ಮೇಲೆ ನಿಂತಿದ್ದ ಮೌಲ್ವಿಯವರನ್ನು ಉದ್ದೇಶಿಸಿ ಕೇಳಿದನು.

ಇದುವರೆಗೂ ಈ ದೃಶ್ಯದಲ್ಲಿ ಯಾವ ಭಾಗವನ್ನೂ ವಹಿಸಿರದಂತೆ ನಿಂತು ನೋಡುತ್ತಿದ್ದ ಮೌಲ್ವಿಯವರು, ಈಗ ಮೌನವಾಗಿಯೇ ತಮ್ಮ ಕೆಂಪು ತುರ್ಕಿ ಟೋಪಿಯ ತಲೆಯನ್ನು ಮೇಲಕ್ಕೂ ಕೆಳಕ್ಕೂ ಆಡಿಸಿ, ಮೊಳುದ್ದುದ ಬಿಳಿಯ ಗಡ್ಡವನ್ನು ದಪ್ಪ ಹೊಟ್ಟೆಗೆ ಮೂರು ನಾಲ್ಕು ಬಾರಿ ಸೋಕಿಸಿದರು. "ನೋಡಿದೆಯಾ?" ಮುಖಂಡನು ಮುದುಕಿಯನ್ನು ಮತ್ತೆ ಕೇಳಿದನು.

"ಪಕ್ಕದ ಸಂದಿಯಲ್ಲಿ ಹೋಗಿರಬಹುದು" ಮುದುಕಿಯು ಶಾಂತವಾಗಿ, ಸಮಾಧಾನವಾಗಿ ಉತ್ತರ ಹೇಳಿದಳು.

"ಅಲ್ಲೆಲ್ಲ ಹುಡುಕಿ ಹುಡುಕಿ ಸಾಕಾಯಿತು. ಸಿಕ್ಕಲಿಲ್ಲ. ಇಲ್ಲೇ ನಿನಗೆ ಕಾಣದಂತೆ ಒಳಹೊಕ್ಕು ...."

"ಛೆ, ಏನು ಹುಡುಗಾಟದ ಮಾತಪ್ಪಾ. ಮಧ್ಯಾಹ್ನದಿಂದ ಬಾಗಿಲನ್ನೇ ತೆಗೆದಿರಲಿಲ್ಲ. ಈಗ ತಾನೆ ನೀವು ಬಂದಿರಿ ಅಂತ ತೆಗೆದೆ" ಮುದುಕಿಯು ಜಗ್ಗಲಿಲ್ಲ.

ಗುಂಪು ಕೊಂಚ ಅನುಮಾನಿಸಿತು

"ಏನು ಮಾಡೋಣ ಮತ್ತೆ?" ಮುಖಂಡನು ಗುಂಪನ್ನು ಉದ್ದೇಶಿಸಿ ಕೇಳಿದನು.

"ಒಳಗೆ ನುಗ್ಗಿ ನೋಡೇ ಬಿಡೋಣ" ಪಂಜಿನವನು ಹೇಳಿದನು.

"ಏನಂದೆಯಪ್ಪಾ? ಜೆನ್ನಾಯ್ತು. ನೀವು ಮುಸಲ್ಮಾನರಲ್ಲವೆ? ಮುಸಲ್ಮಾನ ಸಂಸಾರದ ಮೇಲೆ ಕೊಂಚವೂ ಗೌರವವಿಲ್ಲವೆ? ಮನೆಯಲ್ಲಿ ನನ್ನ ಮಗಳು, ಸೊಸೆ ಇಬ್ಬರು ಫೋಷಾ ಹೆಂಗುಸರಿದ್ದಾರೆ. ಮಗ ಊರಿನಲ್ಲಿಲ್ಲ. ಇಂಥ ಸಮಯದಲ್ಲಿ ಹೀಗೆ ಮಾಡೋದು ಮರ್ಯಾದೆಯೆ? ಇಸ್ಲಾಂ ಧರ್ಮವೆ?" ಮುದುಕಿಯು ಚುರುಕಾಗಿ ಕೇಳಿದಳು.

ಜನರು ಮುಂದುವರೆಯಲಿಲ್ಲ. ಇನ್ನೂ ಅನುಮಾನಿಸುತ್ತಿದ್ದರು.

"ಮೌಲ್ವಿಸಾಹೇಬರೆ, ನೀವಾದರೂ ತಿಳಿದವರು. ಗುರುಗಳು,

ಇವರಿಗೆ ಕೊಂಚ ನಡತೆಯನ್ನು ತಿಳಿಸಿ ಕೊಡಿ" ಎಂದು ಮುದುಕಿಯು ಮೌಲ್ವಿಯವರ ಕಡೆಗೆ ನೋಡಿದಳು.

ಮೌಲ್ವಿಯವರಿಗೂ ಮುದುಕಿಗೂ ಚೆನ್ನಾಗಿ ಪರಿಚಯವಿದ್ದಿತು. ಅವಳ ಸಂಸಾರವು ಅವರ ವತ್ತು ಇತರ ಶ್ರೀಮಂತರ ಮನೆಗಳಲ್ಲಿ ಒದಗುತ್ತಿದ್ದ ಕುಟ್ಟುವುದು, ಬೀಸುವುದು ಮೊದಲಾದ ಚಿಲ್ಲರೆ ಕೆಲಸಗಳನ್ನು ತನ್ನ ಮನೆಯಲ್ಲೇ ಮಾಡಿಕೊಟ್ಟು ಕೂಲಿ ಸಂಪಾದಿಸಿ, ತನ್ನ ಬಡತನದಲ್ಲಿ ಕೊಂಚ ಪರಿಹಾರವನ್ನು ಪಡೆಯುತ್ತಿದ್ದಿತು. ಹೀಗಿದ್ದು ಮೌಲ್ವಿಯವರು ಅವಳ ಬಗ್ಗೆ ಕಾಟಕ್ಷ್ಯವನ್ನು ವಹಿಸದೆ, ಅವಳ ಪ್ರಾರ್ಥನೆಯನ್ನು ಲಾಲಿಸಿ, ತಮ್ಮ ಅರುವತ್ತು ವರ್ಷಗಳನ್ನೂ ದಪ್ಪ ಹೊಟ್ಟೆಯನ್ನೂ ಮೆಲ್ಲಗೆ ಸಿಟ್ಟಲಿನಿಂದ ಇಳಿಸಿಕೊಂಡು ಅವಳ ಮನೆಗೆ ಬಂದು ನಿಂತು:

"ಹಾಗೆಲ್ಲ ನಮ್ಮ ಮತೀಯರ ಮನೆಗೆ ನುಗ್ಗುವುದು ನಮಗೆ ಮರ್ಯಾದೆಯಲ್ಲ. ಹಾಗೆ ಮಾಡಬೇಡಿ!" ಎಂದು ಗುಂಪಿಗೆ ಹೇಳಿ ಸಮಾಧಾನಪಡಿಸಲು ಯತ್ನಿಸಿದರು

"ನೀವೇ ಹೇಳಿರದಿಲ್ಲ ಸಾಹೇಬರೆ, ಅವನು ಇಲ್ಲಿ ಹೊಕ್ಕಿರಾಗೆ ಕಂಡಿತು ಅಂತ" ಎಂದು ಮುಖಂಡನು ವಾದಿಸಿದನು.

"ಅದು ನನ್ನ ಅನುಮಾನವಾಗಿತ್ತು. ನಿಜವೇನೋ ಹೇಗೆ ತಿಳಿಯುವುದಕ್ಕೆ ಆಗುತ್ತೆ? ಅನ್ಯಾಯವಾಗಿ ನಮ್ಮ ಮುಸ್ಲಿಂ ಬಂಧುಗಳನ್ನು ತೊಂದರೆಗೆ ಒಳಗುಮಾಡಿದರೆ ತಪ್ಪಾಗುತ್ತೆ, ಪರಾಧವಾಗುತ್ತೆ— ದೇವರ ಮುಂದೆ!" ಎಂದು ಮೌಲ್ವಿಯವರು ಎಚ್ಚರಿಕೆಕೊಟ್ಟರು.

ಇವರ ಮಾತು ಪರಿಣಾಮಕಾರಿಯಾಯಿತು.

"ಹಾಗೇ ಆಗಲಿ ಮೌಲ್ವಿ ಸಾಹೇಬರೆ. ನಿಮ್ಮ ಮಾತನ್ನು ನಾವು ಮೀರುವುದುಂಟೆ? ಆದರೆ ಆ ಕಾಫಿರ್ ಇನ್ನೆಲ್ಲಿರಬಹುದು ತಿಳಿಸಿ. ಈಗ ತಾನೆ ಅಟ್ಟಿಸಿಕೊಂಡು ಬಂದೆವು. ಅವನು ಈ ಮನೆಯ ತಿರುವಿನಲ್ಲೇ ಮಾಯವಾದನಲ್ಲ! ನಮ್ಮ ಅನುಮಾನ ಹೇಗೆ ಬಗೆ ಹರಿಯುವುದು?" ಮುಖಂಡನು ಪ್ರಶ್ನಿಸಿದನು. ಇತರರೂ "ಹೂಂ, ಹೇಳಿ ಮತ್ತೆ" ಎಂದರು.

ಸಾಹೇಬರು ಕೊಂಚಕಾಲ ನಿರುತ್ತರರಾದರು ಅವರಿಗೆ ಮುದುಕಿಯ ಪರವಾಗಿ ಜನರಿಗೆ ಭರವಸೆ ಕೊಡಲು ಧೈರ್ಯ ಸಾಲದಾಗಿದ್ದಿತು. ಅಲ್ಲದೆ ಅವರಿಗೂ ಅವರ ಮಾತಿನ ಬಗ್ಗೆ ಸಂದೇಹವಿದ್ದಿತು. ಹಾಗೇ ಅವಳಿಗೆ ವಿರೋಧವಾಗಿ ತೀರ್ಮಾನ ಹೇಳುವುದೂ ಕಷ್ಟವಾಗಿದ್ದಿತು. ಅವರಿಗೆ ಮುದುಕಿಯ ವಿಷಯ. ಏನು ಹೊಸದಲ್ಲ ಇಪ್ಪತ್ತು ವರ್ಷಗಳ ಸಂಪರ್ಕದಲ್ಲಿ ಅವಳ ಪ್ರಾಮಾಣಿಕತೆ, ಮತಭಕ್ತಿಗಳು ಅನೇಕ ನಿದರ್ಶನಗಳಿಂದ ತಿರಬಿದ್ದಿದ್ದುವು. ಅವರು ಅವಳನ್ನು ಒಳ್ಳೆಯ ಮುಸ್ಲಿಮಳೆಂದು ಬಹಳವಾಗಿ ಮೆಚ್ಚಿಕೊಂಡಿದ್ದರು. ಅವಳ ಸಹೃದಯತೆ, ತಿಳಿವಳಿಕೆಗಳಿಗಾಗಿ ಅನೇಕ ಬಾರಿ ತಲೆದೂಗಿದ್ದರು. ಹೀಗಿದ್ದು ಅವಳ ಮಾತನ್ನೂ ನಿರಾಕರಿಸದೆ, ತಾವು ಅವಳ ಬಗ್ಗೆ ಜವಾಬ್ದಾರಿಯನ್ನೂ ಹೊತ್ತುಕೊಳ್ಳದೆ, ಮೌಲ್ವೀ ಸಾಹೇಬರು ಅವಳ ಪ್ರಾಮಾಣಿಕತೆಯನ್ನು ಪ್ರಶಂಸಿಸಿ, ಅವಳ ಮಾತನ್ನು ನಂಬಬಹುದೆಂಬಂತೆ ಸೂಕ್ಷ್ಮವಾಗಿ ಸೂಚಿಸಿದರು. ಆದರೆ ಈ ಅರೆಮನಸ್ಸಿನ ಮಾತುಗಳಿಂದ ಜನರು ತೃಪ್ತರಾಗಲಿಲ್ಲ. ಅವರಿಗೆ ಸರಿಯಾದ ಭರವಸೆ ಬೇಕಾಗಿದ್ದಿತು. ಹಾಗಲ್ಲದೆ ಅವರು ಕದಲುವಂತೆ ಕಾಣಲಿಲ್ಲ. ಕಾಫಿರನಿಗಾಗಿ ಕೂಗಾಟ ಕಡಿಮೆಯಾಗಲಿಲ್ಲ.

ಈ ಬಿಕ್ಕಟ್ಟಿನಲ್ಲಿ ಮುದುಕಿಯು ಶಾಂತಳಾಗಿ, ಸ್ಥೈರ್ಯದಿಂದ ದ್ವಾರಪಾಲಕನ ಪ್ರತಿಮೆಯಂತೆ ನಿಂತುನೋಡುತ್ತಿದ್ದಳು. ಕಣ್ಣುಗಳು ಮಾತ್ರ ಇಳಿಯುವ ಸೂರ್ಯನ ಹೊಂಬೆಳಕಿನಲ್ಲಿ ಕನ್ನಡಕದ ಹಿಂದೆ ಮಿನುಗುತ್ತಿದ್ದುವು. ಸಾಹೇಬರು ಗಂಭೀರ ಮುದ್ರೆಯಿಂದ ಎಲ್ಲೋ ನೋಡುತ್ತ, ತಮ್ಮ ಹಣ್ಣು ಗಡ್ಡವನ್ನು ಜೋರಾಗಿ ನೀವುತ್ತ, ಹುಬ್ಬುಗಂಟಿಕ್ಕಿ, ಈ ಪರಿಸ್ಥಿತಿಯ ಪರಿಹಾರದ ಬಗೆಯನ್ನು ತೀಕ್ಷ್ಣವಾಗಿ ಯೋಚಿಸುತ್ತಿದ್ದರು. ನಿಮಿಷ ನಿಮಿಷಗಳು ಸರಿದಂತೆ ಜನರ ತಾಳ್ಮೆಯು ಕರಗಿ ಹೋಗುತ್ತಿತ್ತು. ಆವೇಶವು ಹೆಚ್ಚುತ್ತಿತ್ತು. ಸಾಹೇಬರು ಆಗಾಗ 'ಶಾಂತರಾಗಿ, ಏನಾದರೂ ತೃಪ್ತಿಕರವಾಗಿ ಮಾಡೋಣ' ಎಂದು ಹೇಳುತ್ತಿದ್ದರೂ, ಗುಂಪಿನ ಹಿಂದಿನ ಜನರು ತಾಳದೆ, ಕೇಳದೆ ಮುದುಕಿಯ ಮನೆಯ ಮೇಲೆ ಕಲ್ಲನ್ನು ಎಸೆದರು. 'ಯಾವ ಗಳಿಗೆಯಲ್ಲಿ ಏನನ್ನು ಮಾಡಿಬಿಡುವರೋ!' ಎಂಬ ಭಯವು ಸಾಹೇಬರನ್ನು ಬಾಧಿಸುತ್ತಿತ್ತು. ಈ ಗುಂಪಿನಲ್ಲೆಲ್ಲ ಇನ್ನೂ ನಿಶ್ಚಲವಾಗಿದ್ದ ವ್ಯಕ್ತಿಯೆಂದರೆ ಮುದುಕಿಯದೊಂದೇ. ಹೀಗೆ ಮೇಲೆ ಕಂಡರೂ ಅವಳೊಳಗೆ ಕಳವಳವು ಕವಿದಿದ್ದಿತೆಂದು ಹೇಳಬೇಕಾಗಿಲ್ಲ. ಅವಳು ಹೊಗೆಯಾಡದ ಅಗ್ನಿಪರ್ವತದಂತಿದ್ದಳು. ಅವಳ ಈ ಹೊರ ಸ್ವಭಾವವು ಮೌಲ್ವಿಯವರನ್ನು ಆಶ್ಚರ್ಯಗೊಳಿಸಿತು. ಅದಕ್ಕೆ ಅವಳ ನಿರ್ಮಲ ಹೃದಯ, ದೈವಭಕ್ತಿಗಳು ಕಾರಣವಿರಬೇಕೆಂದು ಅವರು ಯೋಚಿಸಿಕೊಂಡು ಸಂತೋಷಿಸಿದರು.

ಹೀಗೆ ಕೊಂಚ ಕಾಲ ಕಳೆದು ಸಂದರ್ಭವು ಇನ್ನೇನು ತಮ್ಮ ಕೈಯಿಂದ ಜಾರಿ ಹೋಯಿತೆನ್ನುವಹೊತ್ತಿಗೆ, ಮೌಲ್ವಿಯವರಿಗೆ ಬುದ್ಧಿಯಲ್ಲಿ ಯೋಜನೆಯೊಂದು ಮಿಂಚಿತು. ಕೂಡಲೆ ಅವರು ಗುಂಪನ್ನು ಕುರಿತು ದೊಡ್ಡ ಸತ್ಯವನ್ನು ಕಂಡು ಹಿಡಿದು ಪ್ರಕಾಶ ಪಡಿಸುವ ಆಡಂಬರದಿಂದ ನಸುನಗುತ್ತ, ಗಡ್ಡವನ್ನು ಕಿತ್ತುಬಿಡುವಂತೆ ನೀವುತ್ತ:

"ಕೇಳಿ! ಕೇಳಿ! ಎಲ್ಲ ಸಂಶಯವನ್ನು ದೂರ ಮಾಡುವ ಉಪಾಯವನ್ನು ಹೇಳುತ್ತೇನೆ" ಎಂದು ಮುದುಕಿಯ ಕಡೆಗೆ ಕೈ ತೋರಿಸುತ್ತ "ಈ ಮುದುಕಮ್ಮನು ತನ್ನ ಮನೆಯಲ್ಲಿ

ಕನ್ನಡ ಲೇಖಕರ ಸಂಘ, ಬೆಂಗಳೂರು
ಸದಸ್ಯತ್ವ ಶುಲ್ಕ ರೂ. ೦-೪-೦
ಸದಸ್ಯತ್ವ ಶುಲ್ಕ ಪಡೆಯಲಾಗಿದೆ. ಸದಸ್ಯತ್ವ ಪ್ರಮಾಣಪತ್ರ ಕಳುಹಿಸಲಾಗಿದೆ.
ಸಂಘದ ಕಟ್ಟಡ ನಿರ್ಮಾಣಕ್ಕೆ ಧನಸಹಾಯ ಮಾಡಲು ಮನವಿ ಮಾಡಿಕೊಳ್ಳಲಾಗಿದೆ.
ಗೌರವ ಕಾರ್ಯದರ್ಶಿ : ಶ್ರೀ. ಶ್ರೀ. ಶ್ರೀ. ಬಿ. ಸಂಜೀವರಾವ್

ಕಾದಂಬರಿಯ ಕಥಾನಾಯಕಿಯ ಕ್ರಿಯಾ ಚಟುವಟಿಕೆಗಳು ಸಾಮಾನ್ಯವಾಗಿ ಹೀಗೆಯೇ ಇರುತ್ತವೆ. ಅವಳು ಸಾಮಾನ್ಯವಾಗಿ ಹೀಗೆಯೇ ಮಾತನಾಡುತ್ತಾಳೆ. ಅವಳ ಸುತ್ತಲಿನ ಪರಿಸರ ಹೀಗೆಯೇ ಇರುತ್ತದೆ. ಅವಳ ಸುತ್ತಲಿನ ಜನರು ಹೀಗೆಯೇ ಇರುತ್ತಾರೆ. ಅವಳ ಸುತ್ತಲಿನ ಜನರು ಅವಳೊಂದಿಗೆ ಹೀಗೆಯೇ ವರ್ತಿಸುತ್ತಾರೆ. ಅವಳ ಸುತ್ತಲಿನ ಜನರೊಂದಿಗೆ ಅವಳು ಹೀಗೆಯೇ ವರ್ತಿಸುತ್ತಾಳೆ. ಅವಳ ಸುತ್ತಲಿನ ಜನರು ಅವಳೊಂದಿಗೆ ಹೀಗೆಯೇ ಮಾತನಾಡುತ್ತಾರೆ. ಅವಳು ಹೀಗೆಯೇ ಯೋಚಿಸುತ್ತಾಳೆ. ಅವಳು ಹೀಗೆಯೇ ಕನಸು ಕಾಣುತ್ತಾಳೆ. ಅವಳು ಹೀಗೆಯೇ ಅಳುತ್ತಾಳೆ. ಅವಳು ಹೀಗೆಯೇ ನಗುತ್ತಾಳೆ. ಅವಳು ಹೀಗೆಯೇ ಸಾಯುತ್ತಾಳೆ. ಅವಳು ಹೀಗೆಯೇ ಹುಟ್ಟುತ್ತಾಳೆ. ಅವಳು ಹೀಗೆಯೇ ಹುಟ್ಟಿಸುತ್ತಾಳೆ. ಅವಳು ಹೀಗೆಯೇ ಬೆಳೆಯುತ್ತಾಳೆ. ಅವಳು ಹೀಗೆಯೇ ಬೆಳೆಸುತ್ತಾಳೆ. ಅವಳು ಹೀಗೆಯೇ ಕಲಿಯುತ್ತಾಳೆ. ಅವಳು ಹೀಗೆಯೇ ಕಲಿ

ಂದೆ. ಪಂಜಿನವನು "ಹುಂ. ಇದೆಲ್ಲಾದರೂ ಹಾಳಾಗಲಿ" ಎಂದುಕೊಂಡು "ಮುಂದಿನ ಬೇಟೆಗೆ!" ಎಂದು ಆರ್ಭಟಿಸುತ್ತ ಬೀದಿಗೆ ತಿರುಗಿದನು. ಜನರು "ಕಾಫಿರರಿಗೆ ಸಾವು!" "ಅಲ್ಲಾಹೋ ಅಕ್ಬರ್!" ಮುಂತಾಗಿ ಕೂಗುತ್ತ ಮುಂದೆ ಸಾಗಿದರು. ಮೌಲ್ವಿಯವರು "ಪ್ರಾರ್ಥನೆಯ ಹೊತ್ತಾಯ್ತು" ಎಂದು ಮಸೀದಿಗೆ ಹೊರಟರು. ಮುದುಕಿಯಾದರೋ ಎಲ್ಲರೂ ಹೋದಮೇಲೂ ಪುಸ್ತಕವನ್ನು ಹೊತ್ತುಕೊಂಡೇ ಹೊತ್ತು ನಿಂತಿದ್ದಳು. ಅವಳ ಕಣ್ಣುಗಳಲ್ಲಿ ನೀರು ತುಂಬಿ ತುಳುಕುತ್ತಿದ್ದಿತು. ತುಟಿಗಳು ಅಲುಗುತ್ತಿದ್ದವು.

ಮೌಲ್ವಿಯವರು ಪ್ರಾರ್ಥನೆಯನ್ನು ಮುಗಿಸಿ, ಊರಿನ ಕಾಫಿರ್ ಜನರ ಬಗ್ಗೆ ಮುಂದಿನ ದಿನ ನಡೆಯಬೇಕಾಗಿದ್ದ ಕಾರ್ಯಕ್ರಮಗಳ ಚರ್ಚೆಯಲ್ಲಿ ಭಾಗವಹಿಸಿ ಮನೆಗಾಗಿ ಹಿಂದಿರುಗುವ ಹೊತ್ತಿಗಾಗಲೆ ರಾತ್ರಿ ಹತ್ತುಗಂಟೆಯ ಸಮಯವಾಗಿದ್ದಿತು. ಕತ್ತಲು ದಟ್ಟವಾಗಿದ್ದಿತು. ಅವರು ನಡೆದ ಬೀದಿಗಳೆಲ್ಲ ನಿರ್ಜನವಾಗಿದ್ದುವು. ಮೊದಲಿನಿಂದಲೂ ಮುಂದಾಗಿಯೆ ಸುಲಗುತ್ತಿದ್ದ ಸುಲ್ತಾನ್‌ಪುರದ ಮನೆಗಳಲ್ಲಿ ಈಗಲೊ ಕಳವಳದ ಪರಿಣಾಮವಾಗಿ ಒಂದು ಬಾಗಿಲಾದರೂ ತೆರೆದಿರಲಿಲ್ಲ. ಗವಿಕಿಗಳಲ್ಲಿ ಒಂದು ದೀಪವೂ ಕಾಣುತ್ತಿರಲಿಲ್ಲ; ಒಂದು ಧ್ವನಿಯೂ ಕೇಳುತ್ತಿರಲಿಲ್ಲ. ಮೌಲ್ವಿಯವರ ಜೊತೆಯಲ್ಲಿ ಬಂದಿದ್ದ ಒಬ್ಬಿಬ್ಬರೂ ಈಗ ಅವರವರ ಸಂದಿಗಳಿಗೆ ತಿರುಗಿಕೊಂಡಿದ್ದರು. ಮೌಲ್ವಿಯವರು ಈ ನಿಶ್ಶಬ್ದದಲ್ಲಿ ಮಹಮೂದ್‌ನಲ್ಲಿಯ ಬಳಿಗೆ ಬಂದು, ಇನ್ನೇನು ಮುದುಕಿಯ ಮನೆಯ ಸಕ್ಕದಲ್ಲಿ ತಿರುಗಿ ಗಲ್ಲಿಯನ್ನು ಹೊಗಬೇಕು. ಆಗ ಅವರಿಗೆ ಬಳೆಯ ಕಂಠದ ಕೆಳಧ್ವನಿಯ ಮಾತೊಂದು ಕೇಳಿಸಿತು:

"ತಾಯಿ, ಈ ದಿನ ಕೊಲೆಯಿಂದ ನನ್ನನ್ನು ರಕ್ಷಿಸಿ ಪುನರ್ಜನ್ಮ ಕೊಟ್ಟಿರಿ. ನಿಮ್ಮ ಮಗ ನಾನು!"

ಮೌಲ್ವಿಯವರು ತಟ್ಟನೆ ನಿಂತು ಆಲಿಸಿದರು.

"ರಕ್ಷಿಸಿದವನು ದೇವರು; ಅವನೇ ಇನ್ನೂ ಕಾಪಾಡಲಿ, ಹೀಗ ಹೋಗಪ್ಪ" ಮುದುಕಿಯ ಧ್ವನಿ! ಮೌಲ್ವಿಯವರಿಗೆ ಕಿಂಚಿತ್ತೂ ಅನುಮಾನ ಉಳಿಯಲಿಲ್ಲ. ಅವರು ಅತುರದಿಂದ ಗಲ್ಲಿಗೆ ತಿರುಗಿ ಹೆಜ್ಜೆಯೊಂದನ್ನು ಇಟ್ಟು ಬೆಂಕಿಯು ಕಡ್ಡಿಯನ್ನು ಗೀರಿದರು. ಅಗೊ, ಅಲ್ಲೆ ಅರೆತೆಗೆದ ಬಾಗಿಲಿನ ಬಳಿ ನಿಂತು ಮುದುಕಿ! ಅವಳ ಕಾಲ್ಗಳಿಗೆ ನಮಸ್ಕರಿಸುತ್ತ ಒಬ್ಬ ಹುಡುಗ! ಅವಳ ಹರಕೆಯ ಕೈ ಅವನ ತಲೆಯ ಮೇಲೆ! ಮೌಲ್ವಿಯವರಿಗೆ ಅರೆಕ್ಷಣ ದಿಗ್ಭ್ರಮೆಯಾದಂತಾಯಿತು. ಆ ಕಾಲದಲ್ಲಿ ಎಚ್ಚೆತ್ತುಕೊಂಡಿದ್ದ ಹುಡುಗನು ತಟ್ಟನೆ ತಿರುಗಿ ಇವರ ಬೆಳಕಿನ ಕಡೆಗೆ ನೋಡಿ, ಹೆದರಿದ ಜಿಂಕೆಯಂತೆ ಅಂಬಿನ ವೇಗದಿಂದ ಓಡುತ್ತ ಯಾವುದೋ ಸಂದಿಯಲ್ಲಿ ತಿರುಗಿ ಮಾಯವಾಗಿಬಿಟ್ಟನು. ಮುದುಕಿಯು ಬಾಗಿಲನ್ನು ಮುಚ್ಚುವುದರಲ್ಲಿದ್ದಳು. ಮೌಲ್ವಿಯವರು ರಭಸದಿಂದ ಅವಳಲ್ಲಿಗೆ ಮುಂದೆ ನುಗ್ಗಿದರು. ಅವಳು ಹಿಂದೆಗೆಯಲಿಲ್ಲ. ಹಾಗೆಯೇ ನಿಂತಳು. "ಕಾಫಿರ್.... ಅಲ್ಲವೆ?" ಅವರು ಕಟ್ಟಿದ ಉಸಿರಿನಲ್ಲಿ ಕಷ್ಟದಿಂದ ಕೇಳಿದರು. ಮುದುಕಿಯು ಮಾತನಾಡಲಿಲ್ಲ. ಮೌಲ್ವಿಯವರಿಗೆ ಸಿಟ್ಟಿನಿಂದ ಮೈ ನಡುಗಿತು.

"ಥೂ, ಹಾಳು ಮುದುಕಿ! ಪವಿತ್ರ ಕೊರಾನಿನ ಮೇಲೆ ಆಣೆಯಿಟ್ಟು ಸುಳ್ಳು ಹೇಳಿದೆಯಲ್ಲ! ಮಹಾ ಪಾಪ! ಮಹಾ ಪಾಪ ಮಾಡಿದೆ!" ಅವರು ರೋಷಾವೇಶದಿಂದ ಕೂಗಿಕೊಂಡರು.

"ಏನು ಮಾಡಲಿ ಸಾಹೇಬರೆ— ಅಂಥ ಬಿಕ್ಕಟ್ಟು" ಅವಳು ತನಗೆ ಸಹಜವಾದ ಸಮಾಧಾನದಿಂದಲೇ ಉತ್ತರಕೊಟ್ಟಳು.

"ಬಿಕ್ಕಟ್ಟು! ಹುಂ! ಅದೇನು ಅಂಥಾದ್ದು, ಬಂದಿದ್ದು— ಕೇಡು ನಿಂಗೆ?" ಅವರು ದಂಡಿಸಿ ಕೇಳಿದರು.

"ಗುರುಗಳೆ, ಅದೇ ಪವಿತ್ರ ಕೊರಾನಿನಲ್ಲಿ 'ಕಷ್ಟದಲ್ಲಿರುವವರಿಗೆ ನೆರವಾಗು' ಎಂದು ಹೇಳಿದೆಯಲ್ಲ?" ಅವಳು ಶಾಂತವಾಗಿ ಗಂಭೀರವಾಗಿ ತನಗೆ ಸಹಜವಾದ ಸರಳತೆಯಿಂದ ಕೇಳಿದಳು.

"ಹುಂ! ಸಾಕು, ನಿನ್ನ ಪ್ರತಿಷ್ಠೆ! ಪಾಪಿಷ್ಠೆ!" ಮೌಲ್ವಿ ಸಾಹೇಬರು ಸಿಡಿಗುಟ್ಟುತ್ತ ಶಪಿಸಿ ಹೊರಟು ಹೋದರು.

ಮುದುಕಿಯು ಮೌನವಾಗಿ ಬಹಳ ಹೊತ್ತು ನಿಂತಿದ್ದು, ಕಡೆಗೆ ನಿಟ್ಟುಸಿರುಬಿಡುತ್ತ,

"ದೇವರೆ, ನೀನೇ ನೋಡಿಕೊಳ್ಳಪ್ಪಾ" ಎನ್ನುತ್ತ ಒಳಕ್ಕೆ ಸರಿದು ಬಾಗಿಲನ್ನು ಮುಚ್ಚಿಕೊಂಡಳು.

———o———

ಬೆಳಗಾಂವಿಯಲ್ಲಿ ನಮ್ಮ ಏಜಂಟರು:
ಶ್ರೀ. ಎನ್. ಎಸ್. ಹ್ಯಾಟಿ
ಕಥಾಕುಂಜ ಪುಸ್ತಕ ಭಾಂಡಾರ

ಹುಬ್ಬಳ್ಳಿಯಲ್ಲಿ ನಮ್ಮ ಏಜಂಟರು:
ಶ್ರೀ. ವಿ. ಕೆ. ಗೋಖಲೆ
ಕಂಬೈಂಡ್ ನ್ಯೂಜ್ ಏಜನ್ಸಿ

ಮಹಾತ್ಮಾ ಗಾಂಧೀಜಿಯವರ ವ್ಯಕ್ತಿಜೀವನ

ಡಾ. ಸ. ಭೀ. ಸಿದ್ಧಾಂತಿ, ಧಾರವಾಡ*

★

ಮಹಾತ್ಮರ ಜೀವನವು ವಿರೋಧಾಭಾಸದಿಂದ ಕೂಡಿದುದು; ಸುಲಭವಾಗಿ ಅರಿತುಕೊಳ್ಳುವುದೆಂದರೆ ಅಸಾಧ್ಯ. ಅವರ ನಿಕಟವರ್ತಿಗಳಿಗೂ ಮಹಾತ್ಮರ ಜೀವನದ ಅರ್ಥ ರಹಸ್ಯಪೂರ್ಣವಾಗಿಯೆ ಕಂಡಿತು.

★

ಅಹಿಂಸಾಮೂರ್ತಿ ಮಹಾತ್ಮಾ ಗಾಂಧಿಯವರು, ಕಳೆದ ತಿಂಗಳು ದಿನಾಂಕ ೩೦ ಕ್ಕೆ, ಒರ್ವ ತಲೆತಿರುಕನು ಹಿಂಸಾಚಾರದಿಂದೆಸಗಿದ ಗುಂಡಿನೇಟಿಗೆ ಆಹುತಿಯಾಗಿ ಪ್ರಾಣಾರ್ಪಣೆ ಮಾಡಿದ ಸಂಗತಿಯು ಇಡಿ, ನಿಶ್ವನ್ನೇ ಶೋಕಸಾಗರದಲ್ಲಿ ಮುಳುಗಿಸಿದೆ. ಮಹಾತ್ಮರಂತಹ ವಿಶ್ವಪ್ರೇಮಿಗಾ, ಜಗದ್ವಂದ್ಯ ಪರಮಪುರುಷರ ಕೊಲೆಯಾಗಬೇಕು; ಅದೂ ಅಮಾನುಷ ರೀತಿಯಲ್ಲಿ! ಇದನ್ನು ಕೇಳಿದಾಕ್ಷಣ ಕೆಲಹೊತ್ತು, ಇಂತಹ ಭಯಂಕರವಾದ ಹಾಗೂ ಅಸಂಭವನೀಯವೆಂದು ಎನಿಸುವ ಸಂಗತಿಯನ್ನು ಯಾರೂ ನಂಬಲಾರರಾದರು. ಅದರೆ ಪೂಜ್ಯ ಬಾಪೂಜಿಯವರು ನಮ್ಮನ್ನಗಲಿ ಹೋದರೆಂಬ ಸುದ್ದಿ ದಿಟವೆಂದೆನಿಸಿದಾಗ ಮಾತ್ರ, ಪ್ರತಿಯೊಬ್ಬರ ಮನಸ್ಸು ದಿಗ್ಭ್ರಮೆಗೊಂಡು; ದುಃಖಾತಿರೇಕದಲ್ಲಿ ಮೈಮರೆದಿರಲು ಸಾಕು. ಮಹಾತ್ಮರ ಪಾರ್ಥಿವದೇಹವು ಪಂಚತ್ವದಲ್ಲಿ ಕೂಡಿಕೊಂಡರೂ ಅವರು ಅಮರರಾಗಿಯೇ ಉಳಿದಿದ್ದಾರೆ. ಅವರು ಕೈಕೊಂಡ ಕಾರ್ಯ, ಮಾಡಿದ ಕರ್ತವ್ಯ, ಸಾಧಿಸಿದ ಗುರಿ, ಹಾಕಿಕೊಟ್ಟ ಪಾಠ ಹಾಗೂ ಉಪದೇಶಿಸಿದ ತತ್ತ್ವಗಳು ಯಾವತ್ಕಾಲದಲ್ಲಿಯೂ ಆದರಣೀಯ ಹಾಗೂ ಅನುಕರಣೀಯವಾಗಿ ಉಳಿದು, ದಿವ್ಯ ಜ್ಯೋತಿಯಂತೆ ಪ್ರಕಾಶಮಾನವಾಗಿ ಬೆಳಗುತ್ತ ಮಾರ್ಗದರ್ಶಕಗಳಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಎಂತಲೇ ಮಹಾತ್ಮರು ಮಡಿದರೂ ಅಮರರಾದರು. ಸಾವಿಗಂಜದ ಧೀರರವರು. ಸಾವನ್ನು ಮಿತ್ರನಂತೆ ಸ್ವಾಗತಿಸಿ ಆಲಿಂಗಿಸುವ ವೀರರವರು. ದೇಹ ನಶ್ವರ. ಇಂದಿಲ್ಲ ನಾಳೆಯಾದರೂ ಮಣ್ಣನ್ನು ಸೇರತಕ್ಕದ್ದೆ. ಅದರೆ ಅವರು ಎಸಗಿದ ಅಮರ ಕೃತಿಗೆ—ಮಾಡಿದ ಸತ್ಕಾರ್ಯಕ್ಕೆ—ಸಾವಿಲ್ಲ. ಎಂತಲೇ "ಯಾವ ಚ್ಚಂದ್ರ ದಿವಾಕರೌ" ಎಂಬಂತೆ, ಪೃಥ್ವಿಯ ಮೇಲೆ ದಿಗಂತದಲ್ಲಿ ಎಲ್ಲಿಯವರೆಗೆ ಸೂರ್ಯಚಂದ್ರರು ಪ್ರಕಾಶಮಾನರಾಗಿರುವರೊ ಅಲ್ಲಿಯವರೆಗೆ, ಮಹಾತ್ಮಾಜಿಯವರ ಹೆಸರು ಉಳಿಯುವುದು.

ಮಹಾತ್ಮರು ಅಭೂತಪೂರ್ವ ರಾಜಕಾರಣಿಗಳು, ಅದ್ವಿತೀಯ ಪ್ರತಿಭಾ ಸಂಪನ್ನರು, ಮಹಾ ತಪಸ್ವಿಗಳು, ಸಾಧಕರು ಅದರಂತೆ ಮಾನವಕುಲೋದ್ಧಾರಕರೂ ಆಹುದು. ದೀನ ಬಂಧುಗಳೂ, ಪತಿತಪಾವನರೂ ಆದ ಮಹಾತ್ಮರು. ವಿಶ್ವ ಬಂಧುತ್ವದಿಂದ ಪ್ರೇರಿತರಾಗಿ ಯಾವತ್ತೂ ಮಾನವರ ಕಲ್ಯಾಣಕ್ಕಾಗಿ, ವಿಶ್ವಶಾಂತಿಗಾಗಿ, ಜಾತಿ-ಜಾತಿಗಳ ಐಕ್ಯಕ್ಕಾಗಿ, ದೀನದರಿದ್ರರ ಉದ್ಧಾರಕ್ಕಾಗಿ ತಮ್ಮ ಆಯುಷ್ಯವನ್ನೇ ಧಾರೆಯೆರೆದು ಅದಿಶೆಯಲ್ಲಿ ಕಾರ್ಯ ಮಾಡುತ್ತಲೇ ಮಡಿದ ಮಹಾ ಮಾನವರವರು. ಮಾನವರಾಗಿ ಅವತರಿಸಿ ಮಹಾತ್ಮರಾ ಪ್ರಸಿದ್ಧಿ ಹೊಂದಿ, ವೀರಾಧಿವೀರರಂತೆ ಸಾವನ್ನೆದುರಿಸಿ ಹುತಾತ್ಮರಾದ ಮಹಾವಿಭೂತಿಗಳವರು. ಮಹಾತ್ಮರ ಸ್ಫೂರ್ತಿದಾಯಕ ಜೀವನ, ಅಮೃತವಾಣಿಯಿಂದ ಹೊರಸೂಸಿದ ದಿವ್ಯ ಸಂದೇಶ ಇವುಗಳಿಂದ ಮಾನವಕೋಟಿಯು ಉದ್ಧಾರವಾಗದೆ ಇರದು.

ಮಹಾತ್ಮರ ಜೀವನವು ವೈಚಿತ್ರ್ಯಪೂರ್ಣವಾಗಿದ್ದು ಉದ್ಬೋಧಕವೂ ಆಗಿದೆ. ಸದಾ ಹೋರಾಟಮಯಜೀವನ ಅವರದು. ಅಹಿಂಸೆಯಿಂದ ಪ್ರತಿಕಾರ, ಸತ್ಯಕ್ಕಾಗಿ ಆಗ್ರಹ ಅಸಹಕಾರ...ಇವೇ ಅವರು ಹೋರಾಟಕ್ಕಾಗಿ ಅಂಗೀಕರಿಸಿದ ದಿವ್ಯ ಅಸ್ತ್ರಗಳು. ಪರರ ತಪ್ಪನ್ನು, ಇತರರು ಬಗೆದ ಅಹಿತವನ್ನು ಹಗೆಗಳು ಮಾಡಿದ ದ್ರೋಹವನ್ನು ಮಹಾತ್ಮರು ಪ್ರತಿಕರಿಸುವ ಪ್ರತಿಭಟಿಸುವ ರೀತಿಯೆ ಬೇರೆಯಾಗಿತ್ತು. ಪರರ ತಪ್ಪಿಗಾಗಿ ಆತ್ಮಶುದ್ಧಿ ಮಾಡಿಕೊಳ್ಳುವುದಕ್ಕೋಸ್ಕರ ಘೋರತರವಾದ ತಪಶ್ಚರ್ಯವನ್ನು ಕೈಕೊಂಡು, ಸತ್ಯವೇ ದೇವರೆಂದು ಬಗೆದು ಸತ್ಯಕ್ಕಾಗಿ ಪ್ರಾಣಾರ್ಪಣೆ ಮಾಡಲು ಹಿಂಜರಿಯದ ಧೀರರವರು ಪ್ರೇಮದಿಂದ ಹಗೆಗಳನ್ನು ಗೆಲ್ಲುವ ಅಜಾತ ಶತ್ರುಗಳವರು ಪಾಶವವೃತ್ತಿಯಿಂದ, ಹಿಂಸಾಚಾರದಿಂದ ಸಂಪಾದಿಸಿದ ಜಯ ಶಾಶ್ವತವಾಗಿ ಬಾಳಲಾರದು. ಅದರಿಂದ ಹಗೆಗಳ ಹೃದಯ ಪರಿವರ್ತನೆಯೂ ಆಗದು. ಆದುದರಿಂದ ನಿಃಶಸ್ತ್ರ ಪ್ರತಿಕಾರ ಅಹಿಂಸೆಯಿಂದ—ಪ್ರೇಮದಿಂದ ಮನವೊಲಿಸುವಿಕೆ, ಸತ್ಯಾಗ್ರಹ, ಹಾಗೂ ಹಕ್ಕು ಬಾಧ್ಯತೆಗಳನ್ನು ಸಂಪಾದಿಸುವುದಕ್ಕಾಗಿ ಸಂಕಷ್ಟಗಳ ನಿವಾರಣೆಗಾಗಿ ಮತಪ್ರದರ್ಶನ, ಸಂವು; ಉಪವಾಸ ಇತ್ಯಾದಿ ಶಾಂತಿಯ ಸಾಧನೆಗಳಿಂದ ಸ್ವಂತ ಪಂಚ ಪ್ರಾಣಗಳನ್ನೇ ಪಣಕ್ಕೆ ಹಚ್ಚಿ, ಹಗೆಗಳನ್ನು ಗೆಲ್ಲುವ ಹೊಸ

---

* 'ಮಹಾತ್ಮರ ಸಂಜೆ' ಖಚಿತ. ಬರವೇಳಾಗಿದ್ದ ಲೇಖನವಿದು ಸ್ಥಳಾಭಾವದ ಮೂಲಕ ಅದರಲ್ಲಿ ಬರಲು ಸಾಧ್ಯವಾಗಲಿಲ್ಲ. ಸಂ. ಜ

ಮಾರ್ಗವನ್ನು ಕಂಡುಹಿಡಿದು, ಯಶಸ್ವೀ ರೀತಿಯಲ್ಲಿ ಪ್ರಯೋಗಿಸಿ ಅಜರಾಮರರಾದ ಸಿದ್ಧಪುರುಷರು ಮಹಾತ್ಮರು.

ಮಹಾತ್ಮರ ವ್ಯಕ್ತಿಜೀವನವನ್ನವಲೋಕಿಸಿದರೆ, ಅವರು ಸಾಧಿಸಿದ ಕಾರ್ಯಗಳೆಲ್ಲಾ ಅವರ ನಿತ್ಯಜೀವನಕ್ರಮದಿಂದಲೇ ಉದ್ಭವಿಸಿವೆಯೆನ್ನಲಡ್ಡಿಯಿಲ್ಲ. ಮಹಾತ್ಮರ ವ್ಯಕ್ತಿತ್ವವನ್ನು ಅರಿಯುವುದು ಅಸಾಧ್ಯ. ಅವರ ನಿಕಟವರ್ತಿಗಳಿಗೂ ಮಹಾತ್ಮರ ಸಂಪೂರ್ಣ ವ್ಯಕ್ತಿತ್ವವನ್ನರಿಯಲು ಸಾಧ್ಯವಾಗಿಲ್ಲ. ಏಕೆಂದರೆ ಮಹಾತ್ಮರ ಜೀವನವು ವಿಕೋಧಾಭಾಸದಿಂದ ಕೂಡಿದ್ದು ಸುಲಭವಾಗಿ ಅರಿಯಲು ಅಸಾಧ್ಯವಾಗಿತ್ತು. ಪರಮಾತ್ಮನ ಮಹಿಮೆಯು ಅಗಾಧವೂ ಅಗಮ್ಯವೂ ಇದ್ದಂತೆ ಮಹಾತ್ಮರೂ ಇರಬಹುದೆ?

ಅವರದು ಸದಾ ನಿರಾಡಂಬರ ಹಾಗೂ ಸಾದಾವೃತ್ತಿ. ನಿಸರ್ಗೋಚಿತವಾಗಿಯೆ ಎಲ್ಲವೂ ನಡೆಯಬೇಕೆಂದು ಅವರ ಇಚ್ಛೆ. ಕೃತ್ರಿಮತೆ ಅವರಿಗೆ ಎಳ್ಳಷ್ಟೂ ಸರಿ ಬಾರದು. ಆಚಾರ, ವಿಚಾರ, ಎಲ್ಲವೂ ನಿಸರ್ಗ ಬಿಟ್ಟು ದೂರ ಇರಕೂಡದೆಂದು ಅವರ ಅಭಿಮತ. ಹಿಂದುಸ್ತಾನದ ಆರ್ಥಿಕಪರಿಸ್ಥಿತಿ, ಹವಾಮಾನ ಹಾಗೂ ಸಂಸ್ಕೃತಿಗೆ ತಕ್ಕಂತೆ ಆಹಾರಸೇವನೆ, ವೇಷಾಕು ಧರಿಸುವುದು ಇರಬೇಕೆಂದು ಅವರ ಪ್ರತಿಪಾದನೆ. ಸ್ವಂತ ಅವರ ವೇಷಾಕೆಂದರೆ ಒಂದು ಚಿಕ್ಕ ಪಂಚೆ ಮಾತ್ರ. ಕೆಲವು ಸಮಯದಲ್ಲಿ ಹೊದೆಯುವ ಸೆಲ್ಲೆಯೊಂದನ್ನು ಉಪಯೋಗಿಸುತ್ತಿದ್ದರು. ಪ್ರತಿನಿತ್ಯದ ಅವರ ಆಹಾರವೂ ಬಹಳ ಸಾದಾ. ಬೇಯಿಸಿದ ಕಾಯಿಪಲ್ಲೆ, ಹಣ್ಣುಹಂಪಲು, ಆಡಿನ ಹಾಲು, ಜೇನುತುಪ್ಪ—ಇತ್ಯಾದಿ. ಅದೂ ಕ್ಷಪ್ತ ವೇಳೆಯಲ್ಲಿ, ನಿರ್ದಿಷ್ಟ ಪ್ರಮಾಣದಲ್ಲಿ ಮಾತ್ರ ಸೇವಿಸುತ್ತಿದ್ದರು. ನಾಲಗೆಯ ರುಚಿಯನ್ನು ತೃಪ್ತಿಪಡಿಸಲು ಅವರು ಆಹಾರಸೇವನೆ ಮಾಡುತ್ತಿರಲಿಲ್ಲ. ಅಂಗಾಂಗಗಳ ಪೋಷಣೆಗೆ—ಶರೀರಧಾರಣೆಗೆ ಅವಶ್ಯವಾದದ್ದನ್ನಷ್ಟೆ ಅವರು ಸೇವಿಸುತ್ತಿದ್ದರು.

ಮಹಾತ್ಮರ ಆಚಾರವು ಬಹಳೇ ಸಾದಾ ಇದ್ದಿತಾದರೂ, ವಿಚಾರ ಮಾತ್ರ ಬಹಳ ಉಚ್ಚ ಸ್ವರೂಪದುವಿದ್ದುವು. "ಸಾದಾ ಆಚಾರ ಉಚ್ಚ ವಿಚಾರ—Simple living and high thinking—" ಎಂಬ ಉಕ್ತಿ ಅವರಿಗೆ ಸರಿ ಹೋಗುತ್ತದೆ. ಇಂದ್ರಿಯಗಳನ್ನು ಜಯಿಸುವಿಕೆ, ಮನೋನಿಗ್ರಹ, ಆತ್ಮಜ್ಞಾನ, ಆತ್ಮೋನ್ನತಿ, ಪರಮಾತ್ಮನ ದಯೆ—ಶಕ್ತಿಗಳನ್ನು ಸಂಪಾದಿಸುವಿಕೆ ಮುಂತಾದ ಸಾಧನಗಳಲ್ಲಿ ಅವರು, ತಮ್ಮ ಅವಿಶ್ರಾಂತ ಶ್ರಮದಿಂದ ಸಂಪೂರ್ಣ ಯಶಸ್ಸನ್ನು ಪಡೆದರು. ಅದರಂತೆ ಅವರ ಮನಸ್ಸೂ ಬಹಳ ವಿಶಾಲವಾದುದು.

ಪ್ರೇಮಮಲ ಸ್ವಭಾವ, ಶಾಂತ-ಗಂಭೀರ ಮುದ್ರೆ ಇವೆಲ್ಲವೂ ಅವರನ್ನು ಅಲೌಕಿಕ ಪುರುಷರನ್ನಾಗಿ ಮಾಡಿದ್ದುವು. ಅವರ ವಿಶ್ವಬಂಧುತ್ವ, ಮಾನವಕಲ್ಯಾಣಕ್ಕಾಗಿ ಪ್ರಾಣಾರ್ಪಣೆ, ಭೂತದಯೆ ಇವೆಲ್ಲ ಇದಕ್ಕೆ ತಕ್ಕ ನಿದರ್ಶನ.

ಮಹಾತ್ಮರು ತಮ್ಮ ಅಗಾಧ ಸಾಮರ್ಥ್ಯ (ಆತ್ಮಬಲ), ಸ್ಥೈರ್ಯ, ಧೈರ್ಯಾದಿಗಳನ್ನು ಪರಮಾತ್ಮನಲ್ಲಿ ಇರಿಸಿದ ಅಚಲವಿಶ್ವಾಸದಿಂದ ಪಡೆಯುತ್ತಿದ್ದರು. ಯಾವ ಕಾರ್ಯಕ್ಕೂ ಪರಮಾತ್ಮನ ಪ್ರೇರಣೆಯೇ ಮೂಲ, ಸಂಕಟ ಸಮಯದಲ್ಲಿ ಪರಮಾತ್ಮನನ್ನೇ ಶರಣುಹೋಗುವುದು, ಅವನಿಂದಲೇ ಆದೇಶ ಪಡೆದು ಆದರಂತೆ ವರ್ತಿಸುವುದು, ಜಯಾಪಜಯಗಳು ಅವನಿಗೇ ಸೇರತಕ್ಕದ್ದು, ಅವನ (ದೇವರ) ಆದೇಶಾನುಸಾರವಾಗಿ ಕಾರ್ಯಮಾಡಲು ಮಾತ್ರ ತಾವು ಅಧಿಕಾರಿಗಳು, ಲಾಭನಷ್ಟಗಳೆರಡೂ ಪರಮಾತ್ಮನನ್ನೇ ಕೂಡಿವೆ—ಎಂದು ಗಾಂಧೀಜಿ ನಂಬಿ ನಡೆಯುತ್ತಿದ್ದರು.

ಗಾಂಧೀಜಿ ವೈದ್ಯರಾಗಿದ್ದರು. ವೈದ್ಯಕೀಯ ಅಭ್ಯಾಸ ಮಾಡಿರಲಿಲ್ಲವಾದರೂ ಸ್ವಂತಶರೀರದ ಮೇಲೆ ಪ್ರಯೋಗನಡೆಸಿ, ಸ್ವಾನುಭವದಿಂದ ರೋಗೋತ್ಪತ್ತಿಗೆ ಮೂಲಕಾರಣ ಮತ್ತು ಅವುಗಳ ನಿವಾರಣೋಪಾಯಗಳನ್ನು ಕಂಡುಹಿಡಿದಿದ್ದರು. ರೋಗಗಳ ಕಾರಣಗಳನ್ನು ಕಂಡುಹಿಡಿದು ಅವುಗಳನ್ನು ತ್ಯಜಿಸುವುದು ಪ್ರಥಮ ಉಪಾಯ. ಅನಂತರ ಜಾಗೃತನಾಗಿ, ನಿವೇಕವಂತನಾಗಿ ಪುನಃ ರೋಗಕಾರಣಗಳನ್ನು ಬೆಗೂಡಿಸಿಕೊಳ್ಳದಿರುವಿಕೆ ಎರಡನೆಯ ಹೆಜ್ಜೆ. ರೋಗನಿವಾರಣೆಗಾಗಿ ಅನನ್ಯಭಾವದಿಂದ ಪರಮಾತ್ಮನಿಗೆ ಶರಣುಹೋಗುವುದು ಅಂತಿಮ ಉಪಾಯ. ಮತ್ತು ಅದೇ ಅತ್ಯಂತ ಫಲಪ್ರದ. ರಾಮಬಾಣ ಉಪಾಯವೆಂದೂ ಅವರು ಮನಗಂಡಿದ್ದರು. ನಿಸರ್ಗೋಪಚಾರದಿಂದ ವ್ಯಾಧಿಗಳನ್ನು ವಾಸಿಮಾಡಿಕೊಳ್ಳುವುದು ಅವರಿಗೆ ಅತ್ಯಂತ ಪ್ರಿಯವಾಗಿತ್ತು. 'ನಮ್ಮಲ್ಲಿ ರೋಗರುಜಿನಗಳು ಹೆಚ್ಚಾದದ್ದು ನಾವು ಕ್ರಮೇಣ ನಿಸರ್ಗದಿಂದ ದೂರ ಹೋಗಹತ್ತಿದ್ದಕ್ಕಾಗಿ' ಎಂದು ಅವರು ಪದೇ ಪದೇ ಹೇಳುತ್ತಿದ್ದರು. ಆತಪಸೇವನೆ (ಬಿಸಲುಸ್ನಾನ), ಅಂಗಮರ್ದನ, ಉಪವಾಸ, ಹಸಿಮಣ್ಣಿನ ಮುದ್ದೆಯನ್ನು ಹಟ್ಟಿಯಂತೆ ಮಾಡಿ ಅದರ ಪ್ರಯೋಗ, ಇವುಗಳಿಂದ ಎಷ್ಟೋ ರೋಗಗಳು ವಾಸಿಯಾಗುತ್ತವೆಂದು ಅವರು ಸ್ವಾನುಭವದಿಂದ ಕಂಡುಹಿಡಿದಿದ್ದರು. ನಿಸರ್ಗಕ್ಕೆ ಸಮೀಪ ಇದ್ದುಕೊಂಡು, ನಿಸರ್ಗನಿಯಮಗಳನ್ನು ಯಥೋಚಿತವಾಗಿ ಪಾಲಿಸಿದರೆ ಮನುಷ್ಯನು ನಿರೋಗಿಯೂ ದೃಢಕಾಯನೂ ಆಗುವನಲ್ಲದೆ, ದೀರ್ಘಾಯುಷಿಯೂ ಆಗುವನೆಂದು ಅವರು ಮನಗಂಡಿದ್ದರು. ಆದರಂತೆ ಅವರು ತಮ್ಮ ಆಚರಣೆಯನ್ನು ಇಟ್ಟಿದ್ದರಿಂದಲೇ ತಾವು ೧೮೫ ವರ್ಷಗಳವರೆಗ ಬಾಳಿ ಬದುಕುವೆನೆಂದು ವಿಶ್ವಾಸಪೂರ್ವಕವಾಗಿ ಆಡಿ ತೋರಿಸುತ್ತಿದ್ದರು. ಆದರೆ ನಮ್ಮ ದುರ್ದೈವ! ಭಾರತದ ದುರ್ಭಾಗ್ಯ! ವಿಶ್ವದ ದುರ್ಭಾಗ್ಯ!!! ಕಾಲನು ಬಾಪೂಜಿಯವರನ್ನು ಅಕಾಲಿಕ ಹಾಗೂ ದುರಂತ ಮರಣಕ್ಕೆ ಈಡುಮಾಡಿದನು.



ಬುರಕಿ

(ಲಘುಕತೆಗಳು)

ಬರೆದವರು : ಶ್ರೀ. ವಿ. ಹೆ. ಭಟ್ಟ ಎಂ. ಎ. ಗೋಕರ್ಣದ

'ಪರ್ಣಕುಟಿ' ಗ್ರಂಥಮಾಲೆ.

ಇದರಲ್ಲಿ ಆಗ ಕಿರುಗತೆಗಳಿವೆ. ಎಲ್ಲವೂ ಸಮಾಜದಲ್ಲಿಯ ಕುಂದು-ಕೊರತೆಗಳನ್ನು ವ್ಯಂಗ್ಯವಾಗಿ ಟೀಕಿಸಲು ಬರೆದುವುಗಳು. ಶ್ರೀ. ರಾಜರತ್ನಮರ 'ಹನಿ' ಶ್ರೀ. ಬಳ್ಳಾರಿ 'ಬೀಚಿ' ಯವರ 'ಮಾತ್ರೆಗಳು' ಈ ಪುಸ್ತಕಗಳನ್ನೋದಿದವರಿಗೆ ವ್ಯಂಗ್ಯರೀತಿಯ ಕಿರುಗತೆಗಳ ಸೌಂದರ್ಯವೂ ಪ್ರಯೋಜನವೂ ಗೊತ್ತಾಗಿರಬೇಕು. ಅವುಗಳ ದಾರಿಯಲ್ಲಿಯೆ 'ಬುರಕಿ' ಮುಂದೆ ಬಂದಿದೆ.

'ಲಘುಕತೆ' ಎಂದು, ತಮ್ಮ ಇಲ್ಲಿಯ ಕತೆಗಳನ್ನು ಲೇಖಕರು ಕರೆದುಕೊಂಡಿದ್ದಾರೆ. ಉತ್ತರ ಕರ್ನಾಟಕದಲ್ಲಿ 'ಬೇಗ' 'ತ್ವರೆ' ಎಂಬ ಅರ್ಥದಲ್ಲಿ ಪ್ರಚಾರದಲ್ಲಿರುವ 'ಲಗು' ಎಂಬ ವಿಶೇಷಣಪದವನ್ನು ಇಲ್ಲಿ ಉಪಯೋಗಿಸಿಕೊಂಡಿರುವರು ಯಾವ ದಾದರೊಂದು ಜೀವನದ ನೋಟ ಕಣ್ಣಿಗೆ ಬಿದ್ದೊಡನೆ, ಕೂಡಲೆ ಕೆಲವೆ ಮಾತುಗಳಲ್ಲಿ ಕೆಲವೆ ವ್ಯಕ್ತಿಗಳಿಗೆ ಸಂಬಂಧಿಸಿ ಹೇಳುವ ವ್ಯಂಗ್ಯರೂಪಕ ಕತೆಯನ್ನು 'ಲಘುಕತೆ' ಎಂಬ ಹೆಸರಿನಿಂದ ಕರೆದಿರುವರು. ಇಂತಹ ಕತೆಗಳನ್ನು 'ಲಗು' ಬರೆಯಬಹುದು; 'ಲಗು' ಓದಬಹುದು. ಪರಿಣಾಮವೂ 'ಲಗು' ಆಗುವದು. ನಮ್ಮ ಜಾನಪದ ಸಾಹಿತ್ಯದಲ್ಲಿ ಕಂಡುಬರುವ—ಒಂದೊಂದು ನೀತಿಯ ನೆಲೆಗಟ್ಟಿನ ಮೇಲೆ ನಿಂತಿರುವ— ರೂಪಕ ಕತೆಗಳೂ ಜಾಣುಕತೆಗಳೂ ಇಂತಹ 'ಲಗುಕತೆ'ಗಳೆ.

'ಬುರಕಿ' ಎಂಬ ಮೊದಲನೆಯ ಕತೆಯೇ, ಸಮಾಜದಲ್ಲಿಯ 'ಕುರೂಪ'ದ ಮೇಲೆ ಹೊಟ್ಟಿರುವ ಸಂಪ್ರದಾಯದ ಹೊದಿಕೆಯ ವಿಡಂಬನೆಯಿಂದ ಕೂಡಿದೆ. ಅಜ್ಞಾನಿ ಈ ಹೊದಿಕೆಯ ಮರೆಯಲ್ಲಿ ಇಲ್ಲದ ಸೌಂದರ್ಯ ಕಲ್ಪಿಸಿ, ಬೆರಗಾಗಿ ಬೆನ್ನು ಹತ್ತಿ, ವಾಸ್ತವಸ್ಥಿತಿ ತಿಳಿದಾಗ ಬಾಯಿ ಬಾಯಿ ಬಿಟ್ಟರೂ, ಮತ್ತೆ ತನ್ನ ತಪ್ಪು ಮುಂದಿಗೆ ಗೊತ್ತಾಗಬಾರದೆಂದು, ಇರುವ ಕುರೂಪದ ಮೇಲೆ ಹೊದಿಕೆ ಹಾಕಿ, ಅದನ್ನೆ ಚೆಲುವೆಂದು ಪ್ರೀತಿಸುವ. ಈ ಲೋಗರ ರೂಢಿಯನ್ನು, ೩೦ ನಿಮಿಷಗಳಲ್ಲಿ ಓದಿ ಮುಗಿಸಬಹುದಾದ ರೂಪಕ ಕತೆಯಲ್ಲಿ ಬರೆದಿದ್ದಾರೆ. ಹೀಗೆಯೆ ಮಾನವನ ವ್ಯವಹಾರ ಬುದ್ಧಿ, ಗಂಡು-ಹೆಣ್ಣಿನ ಸಂಬಂಧದ ತಿಳಿವಳಿಕೆ, ಅಭಾಸ ಧರ್ಮ, ಶಿಕ್ಷಣ, ರಾಜಕಾರ್ಯ, ರಸಿಕತನ ದೇವರು ಮೊದಲಾದ ವಿಷಯಗಳನ್ನು ವಿಡಂಬಿಸಿ ಬರೆದ ಕತೆಗಳು ಇದರಲ್ಲಿವೆ. ಆದರೆ 'ಬೆಲೆ' 'ಅಭಿಮಾನ' 'ಹೊಸ ಉತ್ಸಾಹ' 'ತರಾವು' 'ಜನತೆಯ ರುಚಿ' 'ಕರುಣೆ' 'ಕವಿವಾರು ಪ್ರಾಂತರಚನೆ' ಮೊದಲಾದ ಕತೆಗಳಲ್ಲಿಯ ಅಸ್ಪಷ್ಟ ರೂಪಕಗಳು ಸಹಜವಾಗಿ ಅರ್ಥವಾಗುವಂತಿಲ್ಲ. 'ಶ್ರಾದ್ಧ' 'ಬೀಜ' 'ಪರದೇಶದಿಂದ ಮರಳಿದ ಪಶುಗಳು' ಮೊದಲಾದ ನಾಲ್ಕೈದು ರೂಪಕಗಳಲ್ಲಿ ಅಸಹಜತೆ ಕಂಡು, ಪರಿಣಾಮಸಿದ್ಧಿಗೆ ಕೊರತೆಯೆನಿಸುತ್ತದೆ. ಮಿಕ್ಕುವುಗಳೆಲ್ಲ ಜೀವನಾಗಿವೆ. ಹದವಾದ ಹೃದಯ, ಆದರ್ಶದ ಕಲ್ಪನೆಯಿರುವ ಬುದ್ಧಿ ಜೀವನದ ಒಂದೊಂದು ಸಾಮಾನ್ಯ ಘಟನೆಯಲ್ಲೂ ತತ್ವ ಹುಡುಕಿ ತೆಗೆಯಬಲ್ಲವು. ಅದನ್ನು ಪರಿಣಾಮಕಾರಿಯೆನಿಸ ವಂತಹ ಸಾಹಿತ್ಯದ ಮಾತಿನಲ್ಲಿ ರೂಪಿಸಬಲ್ಲವು. ಈ ಮಾತಿ ಇಲ್ಲಿಯ ಕೃತಿಗಳು ಪ್ರತ್ಯಕ್ಷ ಸಾಕ್ಷಿ. 'ಕುಂಜವಿಹಾರಿ.'

ಬಾಳಕನಸು

(ಕವನ ಸಂಗ್ರಹ)

ಬರೆದವರು : ಶ್ರೀ. ಕೃಷ್ಣಮೂರ್ತಿ ಪುರಾಣಿಕರು.

'ರಾಮೂನ ಕತೆಗಳು' ಎಂಬ ಜೀವನಚಿತ್ರ ಸಂಗ್ರಹ 'ಸೈರಂಧ್ರಿ ಹಾಗೂ ಮಗನೆ ಗೆಲವು' ಎಂಬ ದೃಶ್ಯಗಳು 'ಮುಗಿಲ ಮಲ್ಲಿಗೆ' ಎಂಬ ಸ್ವತಂತ್ರ ಕಾದಂಬರಿ—ಇವುಗಳನ್ನು ಕೊಟ್ಟು ಶ್ರೀ. ಕೃಷ್ಣಮೂರ್ತಿ ಪುರಾಣಿಕರು, ತಮ್ಮ ಸಾಹಿತ್ಯ ಗುಣದ ಪರಿಚಯವನ್ನು ಅಖಿಲ ಕರ್ನಾಟಕಕ್ಕೆ ಮಾಡಿಕೊಟ್ಟಿದ್ದಾರೆ. ಶ್ರೀ. ಪುರಾಣಿಕರು ಬಹಳ ಹಿಂದೆಯೆ, ಕವಿಗಳಾಗಿ ಅಲ್ಲಲ್ಲಿ ಪತ್ರಿಕೆಗಳಲ್ಲಿ ಕಾಣಿಸಿಕೊಂಡಿದ್ದರಾದರೂ, ಅವರ ಕನಸುಗಳು ಇದುವರೆಗೆ ಒಂದು ಗೊಂಚಲಾಗಿ ನಮಗೆ ದೊರೆತಿರಲಿಲ್ಲ. ಈಗ 'ಬಾಳ ಕನಸು' ಎಂಬ ಹೆಸರಿನಿಂದ ತಮ್ಮ ರಸವತ್ತಾದ ೩೨ ಕವನಗಳನ್ನು ಸೇರಿಸಿಕೊಟ್ಟಿರುವದು ಸಂತೋಷದ ಸಂಗತಿ.

ಶ್ರೀ. ಪುರಾಣಿಕರು ಇನ್ನೂ ಕಾಲೇಜಿನ ವಿದ್ಯಾರ್ಥಿಗಳಾಗಿದ್ದಾಗಿನಿಂದಲೂ ಜೀವನವನ್ನು ಪ್ರಗತಿಶೀಲ ದೃಷ್ಟಿಯಿಂದ ನೋಡುತ್ತಬಂದವರು. ದೇವರ ಹೆಸರಿನಿಂದ, ಧರ್ಮದ ಹೆಸರಿನಿಂದ, ಆಡಳಿತದ ಹೆಸರಿನಿಂದ ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯ-ಅಕ್ರಮಾಚಾರಗಳನ್ನು ಮೊದಲಿನಿಂದಲೂ ಯುಕ್ತಿಯುಕ್ತವಾದ ಮಾತುಗಳಲ್ಲಿ ಪ್ರತಿಭಟಿಸುತ್ತ ಬಂದವರು :

'ಗಿರಿಯನೇರಿ ನೋಡಿರೊಮ್ಮೆ
ದೇವ ಪ್ರತಿಮೆಯ
ಕರುಣೆಯು ಕಾಲಿಂದ ಜಿಮ್ಮಿ
ನಿಂತ ಮೂರ್ತಿಯ'

ಎಂದು 'ಗಿರಿಯ ವೆಂಕಟ'ನನ್ನು ದೂರಿದವರು.

" ದೀನವಾಣಿ ಗಿರಿಯನೆಲ್ಲ ಸುತ್ತುತಿರುವುದು;
' ಅಯ್ಯೋ ! ಹಸಿವೆ ! ' ಎಂಬ ಸೊಲ್ಲೆ ಮಾರು ತರುವುದು ! "
" ಅಲ್ಲಿ ಹಸಿವು ಇಲ್ಲಿ ತೇಗು ಕೂಳಿನುಬ್ಬಸ
ತೆರೆದ ಒಡಲು ಕೊರೆಯುತಿರಲು ಹೊನ್ನಿನಕ್ಕಸ ! "

ದು ಗಿರಿಯ ನಿಷ್ಠುರಸತ್ಯವನ್ನು ಚಿತ್ರಿಸಿರುವರು.

" ಗಿರಿಯ ತೊರೆದು ಹೊರಗೆ ಬಾರೊ
ಗಿರಿಯ ನಾಯಕಾ !
ಬಡ ಸಹಸ್ರರೊಡಲ ನೋಡೊ
ಗಿರಿಯ ವೆಂಕಟಾ ! "

ಂದು ಗಿರಿಯ ದೇವನನ್ನು ಆಹ್ವಾನಿಸಿದ್ದಾರೆ. ಇದೇ ಬಗೆಯ ಕ್ರಾಂತಿಕಾರಕ ರೌದ್ರಭಾವನೆಗಳ ರಭಸವನ್ನು ' ವೇದವಾಲ ' ವತಾರ ' ' ನರಕ ' ' ಜಗಂಝಳ್ಳಿ ' ಈ ಕವನಗಳಲ್ಲಿ ಣಬಹುದು.

ಸಮಾಜದಲ್ಲಿಯ ದಲಿತರನ್ನು ಕಂಡು ದ್ರವಿಸಿದ ಈ ಕವಿಯ ಹೃದಯವನ್ನು ' ಬಡವಿ ' ' ನಿಟ್ಟುಸಿರು ' ಭಾಯಿ ತೆರೆ ಭೂ ಮಿ ತಾ ಯಿ ! ' ಬೆಂದೊಡಲ ಬಿಸಿಯುಸಿರು ' ' ಬಡವನ ಬೇಡಿಕೆ ' ' ಗೋಳು ' ಮೊದಲಾದ ವನಗಳಲ್ಲಿ ಕಾಣಬಹುದು ದಾರಿದ್ರ್ಯ, ಶಾಸ್ಯ, ದೈವಗೇಡಿತನಗಳ ಹೆಸರಿನಿಂದ ಸ್ತ್ರೀಯರ ಮೇಲೆ ಮಾಡುವ ವ್ಯಕ್ತಿಯ ಸಮಾಜದ ಅನ್ಯಾಯಗಳನ್ನು, ಈ ಕವನಗಳು ಚೆನ್ನಾಗಿ ಹೊರಕ್ಕೆ ಹಾಕುತ್ತವೆ.

ಶ್ರೀ. ಪುರಾಣಿಕರು ಕನ್ನಡದ ಪ್ರತಾಂತ ಅಭಿಮಾನಿಗಳು; ಭಾರತ ತಾಸ್ಯದ ಸ್ವಾತಂತ್ರ್ಯಸಿದ್ಧಿಗಾಗಿ ಕಳವಳಿಸಿದ್ದವರು.

' ಬನ್ನಿ ಬನ್ನಿರಿ ಬನ್ನಿ ಕನ್ನಡ ನಾಡ ತೆಲುವಿಕ ಮಕ್ಕಳಿ ! ' ಎಂದು ' ಕನ್ನಡದ ಸೇನೆಗೆ ' ಹುರಿನುಡಿಗಳಿಂದ ಎಲ್ಲರನ್ನೂ ಆಹ್ವಾನಿಸುವರು. ' ತಾಯ್ನಾಡು ' ಎಂಬುದರಲ್ಲಿ ಕನ್ನಡನಾಡಿನ ಇಂದಿನ ಅಧೋಗತಿಯನ್ನು ಚಿತ್ರಿಸಿ, ಕನ್ನಡ ವೀರರಲ್ಲಿ ತಳಮಳವೆಬ್ಬಿಸಲು ಹವಣಿಸಿರುವರು. ' ಚೆನ್ನಿ ' ಎಂಬ ಕಥನ ಕವನ, ಕನ್ನಡ ವೀರಸೈನಿಕನ ಹೆಂಡತಿಯೊಬ್ಬಳ ಅಪ್ರೇಮವನ್ನೂ, ವಿರಹದ ಸಂತಾಪವನ್ನೂ, ವೀರವೃತ್ತಿಯನ್ನೂ ಹಾಡಿಹೊಗಳಿ ಇಂದಿನವರಲ್ಲಿ ಸಾಡಿನ ಹೆಮ್ಮೆಯನ್ನೂ ಕರ್ತವ್ಯದ ಅರಿವನ್ನೂ ಹುಟ್ಟಿಸುತ್ತದೆ.

' ಸಹೋದರಿ ' ಎಂಬ ಕವನದಲ್ಲಿ ಕಳೆದು ಹೋದ ತಂಗಿಗಾಗಿ ಅತ್ತ ಅಳಲು, ತನ್ನ ಸಹಜತೆಯಿಂದ ಕಣ್ಣೀರ ಮಿಡಿಸುತ್ತದೆ. ವಿ ಕ್ತ ಭಾವಗೀತೆಗಳೂ ಚೆನ್ನಾಗಿವೆ.

ಶ್ರೀ. ಪುರಾಣಿಕರು ಕವಿತೆಯೆಂದರೇನೆಂಬುದನ್ನು ಚೆನ್ನಾಗಿ ಅರಿತವರು. ಹೇಗೆ ಬರೆಯಬೇಕೆಂಬುದನ್ನೂ ಅಭ್ಯಾಸದಿಂದ ಅರಿತುಕೊಂಡವರು. ಆದುದರಿಂದ ಛಂದೋಬಂಧ ವಿಶುದ್ಧವಾದುದಾಗಿದೆ. ಭಾಷೆಯಲ್ಲಿ ಶಬ್ದ-ವಾಕ್ಯಗಳು ನಿರ್ದುಷ್ಟವಾಗಿದ್ದು, ಹೇಳಬೇಕೆಂದುದನ್ನು ಹೇಳಲಕ್ಕೆ ಸಮರ್ಥವಾಗಿವೆ. ಇಂತಹ ಒಳ್ಳೆಯ ಕವನಸಂಗ್ರಹವು ಜೊರಕ್ಕೆ ಬರಲಿಕ್ಕೆ ಧನಸಹಾಯ ಮಾಡಿದ ಕೌಜುಲಗಿಯ ಶ್ರೀಮಂತ ಸರದಾರ್ ಬಿ. ಜಿ. ದೇಸಾಯಿಯವರೂ ಕವಿಗಳೊಂದಿಗೆ ಕನ್ನಡಿಗರ ಅಭಿನಂದನೆಗೆ ಪಾತ್ರರಾಗಿದ್ದಾರೆ. ಹೀಗೆಯೆ ಕನ್ನಡ ' ಶ್ರೀಯುತರೊಳ್ ಉದಾತ್ತತೆ ' ತಲೆದೋರಿ, ಕನ್ನಡ ವಾಣಿಗೆ ಬೆಲೆಬಾಳುವ ಅಲಂಕಾರಗಳು ದೊರೆಯಲಿ.

— ಬೆಟಗೇರಿ ಕೃಷ್ಣಶರ್ಮ



ಕರ್ನಾಟಕ ಬ್ರ್ಯಾಂಚ್ :

ಕೊಪ್ಪೀಕರ ರೋಡು, ಹುಬ್ಬಳ್ಳಿ

ರಾಜಕೀಯ ಲೋಕದ ಅವಲೋಕನ

' ರಾಯರ ಅಜ್ಜಿ 'ಯಿಂದ

ಸ್ವಾತಂತ್ರ್ಯದ ಆಸ್ವಾದ

ಆಗಸ್ಟ್ ೧೫ಕ್ಕೆ ಸ್ವಾತಂತ್ರ್ಯ ದೊರೆತಿದ್ದರೂ, ಸ್ವಾತಂತ್ರ್ಯ ಸಿಕ್ಕಿದೆ ಎಂದು ಜನಸಮಾನ್ಯರಿಗೆ ಎನಿಸುವಂತೆ ಏನು ಆಗಿದ್ದಿಲ್ಲ-ವೆಂದೇ ಹೇಳಬೇಕು. ಸರಕಾರೀ ಕಛೇರಿಗಳ ಮೇಲೆ ಯೂನಿಯನ್ ಜಾಕಿನ ಬದಲು ಚಕ್ರಾಂಕಿತ ಧ್ವಜವು ಹಾರಾಡಿತು. ಅದು ಮೇಲೆಯೆ ಹಾರಾಡಿತು ಹೊರತು ಒಳಗೆ ಅಲ್ಲ. ಆಡಳಿತ ನಡೆದಂತೆಯೇ ನಡೆದಿದ್ದು, ಸರಕಾರದ ಧ್ಯೇಯ-ಧೋರಣಗಳಲ್ಲಿ ಬೇಳಿಕೊಳ್ಳುವಂತಹ ವ್ಯತ್ಯಾಸ ಅಥವಾ ಸ್ವಾತಂತ್ರ್ಯದ ಆಸ್ವಾದ ಕಂಡುಬಂದಿರಲಿಲ್ಲ. ಇದು ವಸ್ತುಸ್ಥಿತಿಯಾಗಿತ್ತಾದರೂ ನಮ್ಮ ರಾಷ್ಟ್ರೀಯ ಸರಕಾರದ ತಪ್ಪಲ್ಲವಿದು. ಮದುವೆಯಾದ ಕೂಡಲೆ ಪ್ರೇಯಸಿಯೊಡನೆ ಪ್ರಣಯನಿಹಾರ ಮಾಡುವ ಬದಲು, ಬೀಗರ ಆತಿಥ್ಯಸತ್ಕಾರಕ್ಕೆ ಆದ ಸಾಲದ ಪರಿಹಾರದಲ್ಲಿ ತೊಡಗಿದ ನವ-ಪರಿಣೀತನಂತೆ ನಮ್ಮ ಸರಕಾರದ ಸ್ಥಿತಿಯಾಗಿತ್ತು. ಪಾಕಿಸ್ತಾನ ಮೊಡನೆ ಹೆಜ್ಜೆಹೆಜ್ಜೆಗೆ ತಿಕ್ಕಾಟ, ನಿರಾಶ್ರಿತರನ್ನು ಪಾರುಮಾಡುವುದು, ಅವರ ಪುನರ್ವಸತಿಯ ವ್ಯವಸ್ಥೆಮಾಡುವುದು, ಸಂಸ್ಥಾನಗಳ ಸಮಸ್ಯೆ ಇತ್ಯಾದಿ ಅನೇಕ ಸಮಸ್ಯೆಗಳು ರಾಷ್ಟ್ರೀಯ ಸರಕಾರವನ್ನು ಎದುರಿಸಿದುದನ್ನು ಪಾಚಕರಿಗೆ ಎತ್ತಿ ಹೇಳುವುದವಶ್ಯವಿಲ್ಲ.

ನಾವು ಸ್ವಾತಂತ್ರ್ಯದ ಆಸ್ವಾದವನ್ನು ಪಡೆಯತೊಡಗಿದೆವೆನ್ನುವಂತಹ ಎರಡು ಸಂಗತಿಗಳು ಈ ತಿಂಗಳಲ್ಲಿ ಸಂಭವಿಸಿದುವು. ಮೊದಲನೆಯದೆಂದರೆ ರಾಷ್ಟ್ರೀಯ ವಿದ್ಯಾರ್ಥಿ ಸೈನ್ಯಪಡೆಯ ನಿರ್ಮಾಣದ ಘೋಷಣೆ; ಎರಡನೆಯದು ನಿಶಾಪಾಪಟ್ಟಣದಲ್ಲಿ ಮುಖ್ಯಮಂತ್ರಿ ಪಂಡಿತ ಜವಾಹರಲಾಲ ನೆಹರೂರವರು ನೆರವೇರಿಸಿದ ' ಜಲಉಷೆಯ ' ಜಲಪ್ರವೇಶ.

ರಾಷ್ಟ್ರೀಯ ಸೈನ್ಯಸಿದ್ಧತೆ.

ಸ್ವಾತಂತ್ರ್ಯವನ್ನು ಪಡೆದಿರುವಷ್ಟೇ ಅದನ್ನು ಉಳಿಸಿಕೊಳ್ಳುವ ಕಾರ್ಯವು ಮಹತ್ತ್ವದ್ದೆಂದು ನಮ್ಮ ಮುಖಂಡರು ಅನೇಕ ಸಾರಿ ಹೇಳಿದ್ದಾರೆ. ಅವರೆ ಬಲಾಢ್ಯಸೈನ್ಯವಿಲ್ಲದೆ ನಮ್ಮ ಸ್ವಾತಂತ್ರ್ಯದ ರಕ್ಷಣೆಯಾಗಲಾರದು. ಸೈನ್ಯವನ್ನು ತಯಾರಿಸುವುದಕ್ಕಿಂತ ನಮ್ಮ ತರುಣ-ತರುಣಿಯರಲ್ಲಿ ಆತ್ಮಸಂರಕ್ಷಣೆ ಮತ್ತು ರಾಷ್ಟ್ರಸಂರಕ್ಷಣೆಯ ಕಡೆಗೆ ಒಲವು ಉಂಟಾಗುವಂತೆ ಮಾಡುವುದು ಅತ್ಯವಶ್ಯವಾಗಿದೆ. ಈ ದೃಷ್ಟಿಯಿಂದ ರಾಷ್ಟ್ರೀಯ ವಿದ್ಯಾರ್ಥಿ ಸೈನ್ಯಪಡೆಯ ನಿರ್ಮಾಣವು ಅತ್ಯಂತ ಸ್ವಾಗತಾರ್ಹವಾಗಿದೆ. ಶಾಲೆ-ಕಾಲೇಜುಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಸೈನ್ಯಶಿಕ್ಷಣ ಕೊಡಲಾಗುವುದು. ಪ್ರಸಂಗ ಬಂದರೆ ಒತ್ತಾಯದಿಂದಲೂ ಈ ಶಿಕ್ಷಣವನ್ನು ಕೊಡಲಾಗುವುದು. ಸೈನ್ಯಕ್ಕೆ ಬೇಕಾಗುವ ಅಧಿಕಾರಿಗಳು ಸಿಕ್ಕುವಂತೆ ಕಾಲೇಜಿನ ತರುಣರಿಗೆ, ಸೈನಿಕರು ಸಿಕ್ಕುವಂತೆ ಶಾಲೆಯ ಹುಡುಗರಿಗೆ, ಮತ್ತು ಆತ್ಮಸಂರಕ್ಷಣೆಯ ಪ್ರಸಂಗಬಿದ್ದರೆ ಪುರುಷರ ಕೆಲಸಗಳನ್ನು ನಿರ್ವಹಿಸಲು ಬರುವಂತೆ ವಿದ್ಯಾರ್ಥಿನಿಯರಿಗೆ, ಸೈನ್ಯಶಿಕ್ಷಣ ಕೊಡಬೇಕೆಂದು ಈ ಯೋಜನೆಯಿದೆ. ಈ ಯೋಜನೆಯನ್ವಯ ೨ ಲಕ್ಷ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಸೈನ್ಯಶಿಕ್ಷಣ ದೊರೆಯುವುದು. ಇದು ಅತ್ಯಂತ ಸ್ವಾಗತಾರ್ಹವಿದೆ. ತರುಣ-ತರುಣಿಯರು ಇದರ ಲಾಭವನ್ನು ಪಡೆಯಲೇ ಬೇಕೆಂದು ನಾವು ಆಗ್ರಹದಿಂದ ಸೂಚಿಸುತ್ತೇವೆ.

' ಜಲ ಉಷಾ ' ಹಡಗಕ್ಕೆ ಜಯ !

ಸ್ವತಂತ್ರ ಹಿಂದುಸ್ತಾನವು ಸಮೃದ್ಧವಾಗುವುದೆಂಬುದು ಕಟ್ಟಿಟ್ಟ ಮಾತು. ಹಿಂದುಸ್ತಾನವು ಸಮೃದ್ಧನಾದಂತೆ ಅದರ ವ್ಯಾಪಾರವೂ ಹೆಚ್ಚಾಗುವುದು. ವ್ಯಾಪಾರದಿಂದಲೆ ಸಮೃದ್ಧಿ ಹೆಚ್ಚಾಗುವುದು. ಅದಕ್ಕಾಗಿ ಹಿಂದುಸ್ತಾನಕ್ಕೆ ತನ್ನನೇ ತನ್ನವಾದ ಹಡಗುಗಳು ಬೇಕು. ದೇಶದಲ್ಲಿ ಹಡಗುಕಟ್ಟುವ ಉದ್ಯೋಗವು ಬೆಳೆಯಬೇಕು. ಇದೇ ತಿಂಗಳಲ್ಲಿ ಮುಖ್ಯಮಂತ್ರಿ ಪಂಡಿತ ಜವಾಹರಲಾಲ ನೆಹರೂರವರು, ಹಿಂದುಸ್ತಾನದಲ್ಲಿ ಕಟ್ಟಲ್ಪಟ್ಟ ಮೊತ್ತಮೊದಲನೆಯ ಹಡಗು ' ಜಲಉಷೆ 'ಯ ಜಲಪ್ರವೇಶ ಸಮಾರಂಭವನ್ನು ನೆರವೇರಿಸಿದರು. ನೌಕಾ ಉದ್ಯೋಗಕ್ಕೆ ಸರ್ವವಿಧದಲ್ಲೂ ಸಹಾಯ ಸಲ್ಲಿಸುವ ಆಶ್ವಾಸನವನ್ನು ಕೊಟ್ಟರು. ' ನಾನು ತರುಣನಿದ್ದಿದ್ದರೆ ನೌಕಾ ಮತ್ತು ನಿಮಾನಪಡೆಗಳಲ್ಲಿ ಕೆಲಸ ಮಾಡುತ್ತಿದ್ದೆ ' ಎಂಬ ಹುರುಪಿನ ಮತ್ತು ಹುರುಡು ಹುಟ್ಟಿಸುವ ಮಾತುಗಳನ್ನಾಡಿದರು. ಜಲಉಷೆಯು ನಮ್ಮ ಅಭ್ಯುದಯದ ಉಷೆಯಾಗಲಿ. ನಮ್ಮ ಮಿಲಿಟರಿ ಬಲವು ಹೆಚ್ಚಲಿ ಮತ್ತು ವ್ಯಾಪಾರವು ಬೆಳೆಯಲಿ, ನಮಗೆ ರಾಷ್ಟ್ರಗಳ ಮಾಲಿಕೆಯಲ್ಲಿ ಮಾನದ ಸ್ಥಾನವು ಸಿಕ್ಕಲಾರದೆಂದು ಮುಖ್ಯಮಂತ್ರಿಗಳು ಹಿರಿಯೋಲಗದಲ್ಲಿ ಹೇಳಿದ್ದಾರೆ. ಈ ಮಾತನ್ನು ನೆನೆದರೆ, ವಿದ್ಯಾರ್ಥಿ ಸೈನ್ಯಪಡೆಯ ನಿರ್ಮಾಣ ಮತ್ತು ಹಡಗುಕಟ್ಟುವ ಉದ್ಯೋಗ ಇವು ಎಷ್ಟು ಮಹತ್ತ್ವದುವೆಂಬುದು ಸ್ಪಷ್ಟವಾಗುವುದು.

ಹೊಸ ರಾಜ್ಯಘಟನೆ

ಘಟನಾಸಮಿತಿಯ ನಿರ್ಣಯಗಳನ್ನು ಅನುಲಕ್ಷಿಸಿ ಘಟನೆಯ ಕರಡನ್ನು ಸಿದ್ಧಪಡಿಸಲು ಒಂದು ಸಮಿತಿ ನಿಯಮಿಸಲ್ಪಟ್ಟಿತ್ತು. ಈ ಸಮಿತಿಯು ಈಗ ಕರಡನ್ನು ತಯಾರಿಸಿ ಪ್ರಸಿದ್ಧಿಪಡಿಸಿದೆ. ಈ

ಘಟನೆಯನ್ವಯ ಹಿಂದುಸ್ತಾನವು ಸಾರ್ವಭೌಮ ಪ್ರಜಾರಾಜ್ಯ-ನಾಗುವುದು. ಕರಡನ್ನು ಸಾಧ್ಯಂತವಾಗಿ ಇಲ್ಲಿ ಚರ್ಚಿಸುವುದು ಸಾಧ್ಯವಿಲ್ಲ; ಅಲ್ಲದೆ ಅದು ಇನ್ನೂ ಘಟನಾಸಮಿತಿಯಲ್ಲಿ ಚರ್ಚಿಸಲ್ಪಟ್ಟ ಬಳಿಕ ರಾಷ್ಟ್ರಮುದ್ರೆಯನ್ನು ಪಡೆಯಲಿದೆ, ಈಗಲೆ ಅಲ್ಲ. ಕರಡಿನ ವಿಷಯವಾಗಿ ಒಂದೆರಡು ಮಾತುಗಳನ್ನು ಬರೆಯುತ್ತೇವೆ :

ಕರಡನ್ನು ಸಿದ್ಧಪಡಿಸುವವರು ಆಸ್ಟ್ರೇಲಿಯನೆಯ ಇಸ್ಟ್ರಿಯ ಕಾನೂನನ್ನು ತಮ್ಮ ಮುಂದೆ ಇಟ್ಟುಕೊಂಡು, ಈ ಹೊಸ ಘಟನೆಯನ್ನು ಸಿದ್ಧಪಡಿಸಿದ್ದಾರೆ. ಘಟನಾಸಲಹೆಗಾರರು ಹಿಂದುಸ್ತಾನದ ಪರಂಪರೆಯನ್ನು ಅಭ್ಯಸಿಸದೆ ಅಮೇರಿಕಾ, ಕ್ಯಾನಡಾ ಮತ್ತು ಆಯರ್ಲಂಡಿನ ಘಟನೆಗಳನ್ನು ಒಂದು ಸಲ ಬಿಟ್ಟು ಹತ್ತು ಸಲ ಓದಿಕೊಂಡು, ಇದನ್ನು ಬರೆದಿದ್ದಾರೆ. ಬ್ರಿ. ಪಾರ್ಲಿಮೆಂಟಿನಲ್ಲಿ ಇಷ್ಟು ದಿವಸ ನಮ್ಮ ಘಟನೆಗಳೂ ಅವುಗಳ ಆವೃತ್ತಿಗಳೂ ಸಿದ್ಧವಾಗುತ್ತಿದ್ದುವು. ಈ ಸಲ ಅದು ಹಿಂದುಸ್ತಾನದಲ್ಲಿ ಹಿಂದೀಯರಿಂದ ಸಿದ್ಧವಾಗಿದೆ; ಇಷ್ಟೇ ಹೊರತು ಏನೂ ಮಹತ್ತ್ವದ ವ್ಯತ್ಯಾಸವಿಲ್ಲ. ಹಲ್ಲಿಗಳ ದೇಶವಾದ ಹಿಂದುಸ್ತಾನದ ಘಟನೆಯಲ್ಲಿ ಹಲ್ಲಿಗಳು ಮತ್ತು ಹಲ್ಲಿಗಳ ಆಡಳಿತವು ರಾಜ್ಯಾಡಳಿತದ ತಳಹದಿಯಾಗಬೇಕು. ಮೊದಲಿನಿಂದ ಹೀಗೆಯೇ ಇದ್ದಿತೆಂತಲೆ ಇಲ್ಲಿಯವರೆಗೆ ನಮ್ಮ ಸಂಸ್ಕೃತಿಯ ರಕ್ಷಣೆಯಾಗಿದೆ. ಹೊಸ ಘಟನೆಯು ಈ ಮಹತ್ತ್ವದ ಮಾತನ್ನೆ ದುರ್ಲಕ್ಷಿಸಿದೆ. ಇಷ್ಟು ದಿವಸ ಮುಸಲ್ಮಾನ್ ಬಹುಸಂಖ್ಯಾಕ ಪ್ರಾಂತಗಳು ಮುಸಲ್ಮಾನೇತರ ಪ್ರಾಬಲ್ಯವುಳ್ಳ ಕೇಂದ್ರಸರಕಾರಕ್ಕೆ ಒಳಗಾಗಲು ಒಪ್ಪಲಿಲ್ಲವಾದುದರಿಂದ, ಕೇಂದ್ರಸರಕಾರದ ಅಧಿಕಾರವು ಸಂಕುಚಿತವಾಗಬೇಕಾಯಿತು; ಮತ್ತು ದಕ್ಷತೆಯಿಂದ ಇಂಗ್ಲಿಷರು ಹಾಗೆ ಮಾಡಿದರು. ಆದರೆ ಈಗ ಮುಸಲ್ಮಾನ್ ಬಹುಸಂಖ್ಯಾಕ ಪ್ರಾಂತಗಳು ಸಿಡಿದುಹೋಗಿವೆ: ಕೇಂದ್ರಸರಕಾರಕ್ಕೆ ಹೆಚ್ಚಿನ ಅಧಿಕಾರ ಕೊಟ್ಟರೆ ಯಾರೂ ಕಣ್ಣು ಕಿಸಿಯಲಾರರು. ಆದರೂ ಹೊಸ ಘಟನೆಯಲ್ಲಿ ಕೇಂದ್ರ ಸರಕಾರದ ಅಧಿಕಾರ ಅಷ್ಟಕ್ಕಷ್ಟೇ.

ಕರ್ನಾಟಕ ಹೊಲಿಗೆಯ ವಿದ್ಯಾಲಯದ ಸಂಘಟಕರು

ತಾ. ೧೯-೩-೪೮ ನೆಯ ದಿನ ಧಾರವಾಡದಲ್ಲಿ ಈ ಹೊಲಿಗೆಯ ವಿದ್ಯಾಲಯವು ಶ್ರೀ ಉರವಕೊಂಡದ ಜಗದ್ಗುರುಗಳ ಅಮೃತಹಸ್ತದಿಂದ ಪ್ರತಿಷ್ಠಾಪನೆಗೊಂಡಿದೆ.

೧. ಶ್ರೀ. ಲಾತೂರಕರ (ಅಧ್ಯಕ್ಷ ಕ. ಟೆ. ಅಸೋಸಿಯೇಶನ್, ಧಾರವಾಡ)
೨. ಶ್ರೀ. ಶಿವಶಿಂಪಿ, ಮಾಸ್ಟರ್ ಟೇಲರ್
ಮಧ್ಯದಲ್ಲಿ ಉರವಕೊಂಡದ ಜಗದ್ಗುರುಗಳು.
೩. ಶ್ರೀ. ಎಂ. ವಿ. ಸಂಗೀತ, ಟಿ. ಸಿ. ಡಿ.
೪. ಶ್ರೀ. ಹಳಪೇಟೆ ಚಿಂತಾಮಣೆರಾಯರು ' ಸೂಚಿಶಿಲ್ಪ ವಿಶಾರದ '

ಹಿಂದುಸ್ತಾನವು, ತನ್ಮುಷ್ಟಕ್ಕೆ ತಾವು ಸ್ವತಂತ್ರವಾದ 'ರಾಜ್ಯಗಳ' ಎಂದರೆ ಪ್ರಾಂತಗಳ ಒಕ್ಕೂಟವಾಗಬೇಕೆಂದು ಹೇಳಲಾಗಿದೆ. ಇದರಿಂದ ಪ್ರಾಂತೀಯತೆ ಹೆಚ್ಚುವ ಸಂಭವವಿದೆ. ತಮ್ಮ ತಮ್ಮ ಪ್ರಾಂತದ ಅಭಿವೃದ್ಧಿಯಲ್ಲಿಯೆ ಜನರು ಹೆಚ್ಚು ಲಕ್ಷ್ಯಹಾಕುವರೆಂಬ ಭೀತಿ ತೋರುತ್ತದೆ. ಜಾತೀಯತೆಯನ್ನು ನಿರ್ಮೂಲನಮಾಡಬೇಕೆಂದು ಒಂದೇ ಸವನೆ ಭಾಷಣಗಳು ಕೇಳಬರುತ್ತಿವೆ; ಇಂತಹ ಸ್ವತ್ಯನಿಚಾರದ ಪುರಸ್ಕರ್ತರೇ ಜಾತೀಯತೆಗೆ ಜೀವದಾನ ಕೊಟ್ಟು, ಹೊಸ ಘಟನೆಯಲ್ಲಿ ವಿಶಿಷ್ಟ ಜಾತಿಯವರಿಗೆಂದು ಸ್ಥಳಗಳನ್ನು ಕಾಯ್ದಿಟ್ಟದ್ದು ನೋಡಿದರೆ ಸಖೇದಾಶ್ಚರ್ಯವಾಗುವುದು. ಇಷ್ಟು ದಿವಸ ನಮ್ಮ ಗವರ್ನರ್ ಜನರಲ್ ಮತ್ತು ಗವರ್ನರರು ಸರಕೀಯರಿದ್ದರು; ಆದುದರಿಂದ ಅವರ ಅಧಿಕಾರವು ಮರ್ಯಾದಿತ ನಿರಬೇಕೆಂದು ಪ್ರಜೆಗಳ ಬೇಡಿಕೆ ಇದ್ದಿತು. ಆದರೆ ಇನ್ನು ಅಧ್ಯಕ್ಷ (ಗವರ್ನರ ಜನರಲ್) ಮತ್ತು ಗವರ್ನರರು ಪ್ರಜಾಪ್ರತಿನಿಧಿಗಳೇ ಆಗಲಿರುವರು. ಅವರ ಅಧಿಕಾರವು ಹಿಂದಿನವರಂತೆ ಮರ್ಯಾದಿತವಿರಬೇಕೆಂದು ಬೇಳಿದರೆ ಯೋಗ್ಯವಾಗಲಾರದು. ಇಷ್ಟು ವೇತನಕೊಟ್ಟು ಒಂದು ಗವರ್ನರ್ ಎಂಬ ನಿರ್ಜೀವ ಮೂರ್ತಿಯನ್ನು ಸ್ಥಾಪಿಸುವುದಕ್ಕಿಂತ, ಅವನಿಲ್ಲದೆ ಸಾಗಿಸುವುದು ಯೋಗ್ಯವಾಗಲಾರದೆ?—ಎಂಬ ವಿಚಾರವು, ಈ ಘಟನೆಯನ್ನು ತಯಾರಿಸಿದವರ ತಲೆಯಲ್ಲಿ ಸುಳಿದಿಲ್ಲ. ಈಗಿನ ಆಡಳಿತವನ್ನು ನೋಡಿದರೆ, ಪ್ರಜಾನಿಯುಕ್ತ ಮಂತ್ರಿಗಳಿಗೆ ಪ್ರತಕ್ಷ್ಯ ಆಡಳಿತದ ಅನುಭವವು ಕಡಿಮೆ ಎಂದು ಒಪ್ಪಬೇಕಾಗುವುದು. ಅದು ಅವರ ತಪ್ಪಲ್ಲ. ಪ್ರತ್ಯಕ್ಷ ಆಡಳಿತವು ಮಂತ್ರಿಗಳ ಕಾರ್ಯವಲ್ಲವೆ ಅಲ್ಲ. ಅಲ್ಲದೆ ಆಡಳಿತದ ಯಂತ್ರವನ್ನು ನಿರೀಕ್ಷಿಸುತ್ತಿರುವಷ್ಟರಲ್ಲಿಯೇ ಅಧಿಕಾರದ ಅವಧಿ ಮುಗಿದು ಅಥವಾ ಅವಿಶ್ವಾಸಗೊತ್ತುವಳಿ ಬಂದು ಅವರು ಮನೆಗೆ ಹೋಗಬೇಕಾಗುತ್ತದೆ. ಆದುದರಿಂದ ಆಡಳಿತದ ಯಂತ್ರವನ್ನು ನಿರ್ವಹಿಸಲು ಆಡಳಿತದ ಅನುಭವವಿದ್ದವನೊಬ್ಬನು ಬೇಕೆಂಬುದು ಸ್ಪಷ್ಟವಾಗುವುದು. ಪ್ರಾಂತದ ಆಡಳಿತವು ಗವರ್ನರರ ಹೆಸರಿನಿಂದ ನಡೆಯಲಿದೆ. ಆದುದರಿಂದ ಅವನು ಆಡಳಿತದ ಅನುಭವ ಉಳ್ಳವನಿರಬೇಕು. ಕೇವಲ ತೋರಿಸಿದ ಸ್ಥಳದಲ್ಲಿ ಸಹಿ ಮಾಡುವುದು; ಬರೆದುಕೊಟ್ಟ ಭಾಷಣವನ್ನು ಓದುವುದು ಅವನ ಕಾರ್ಯವಾಗಬಾರದು, ಅವನ ಸ್ಥಿತಿಯಾಗಬಾರದು. ಇದು ಸಾಧಿಸಬೇಕಾದರೆ ಗವರ್ನರ್ ಮತ್ತು ಅಧ್ಯಕ್ಷರ ಆಯ್ಕೆಗೆ ನಿಲ್ಲುವವರು ಆಡಳಿತದ ಅನುಭವವುಳ್ಳವರಿರಬೇಕು. ನಿವೃತ್ತ ಅಧಿಕಾರಿಗಳು ಅಥವಾ ನಿವೃತ್ತರಾಗಲಿರುವ ಅಧಿಕಾರಿಗಳಿರಬೇಕೆಂದು ನಿಯಮ ಮಾಡಬೇಕೆಂದು ನಮ್ಮ ಸೂಚನೆ. ಏಪ್ರಿಲ್ ೧೯೩೭ಕ್ಕೆ ಆಂಧ್ರವು ಪ್ರತ್ಯೇಕ ಪ್ರಾಂತವಾಗುವುದೆಂಬ ಸುದ್ದಿಯು ನಿರಾಧಾರವೆಂದು ಕರಡು ಸಿದ್ಧಮಾಡಿದೆ. ಭಾಷಾನುಗುಣ ಪ್ರಾಂತಗಳ ವಿಷಯವಾಗಿ ವಿಚಾರ ಮಾಡಿ, ಅವುಗಳ ನಿರ್ಮಾಣದ ಬಗ್ಗೆ—ಘಟನೆಯು ಪೂರ್ಣ ಸಿದ್ಧವಾಗುವುದರೊಳಗಾಗಿ—ಸಲಹೆ ಕೊಡಲು ಒಂದು ಮಂಡಳವು ನಿಯಮಿಸಲ್ಪಡಬೇಕೆಂದು ಘಟನೆಯಲ್ಲಿ ಸೂಚನೆಯಿದೆ.

ಯುದ್ಧದ ಕಾರ್ಮೋಡಗಳು

ಜಗತ್ತಿನಲ್ಲಿಯ ಸ್ವಂತದ ಮುಂಗೈಜೋರಿನಿಂದ ಯುದ್ಧಮಾಡಬಲ್ಲ ರಾಷ್ಟ್ರಗಳೆಂದರೆ ಎರಡೇ ಎರಡು—ಅಮೇರಿಕಾ ಮತ್ತು ರಶಿಯಾ. ಇವೆರಡಕ್ಕೂ ಎಲ್ಲೆಲ್ಲಿ ಸಂಬಂಧ ಬರುತ್ತಿದೆಯೊ ಅಲ್ಲಲ್ಲಿ ಚಕಮಕಿ ಪ್ರಾರಂಭವಾಗಿ, ಯುದ್ಧದ ದಾವಾನಲವು ಹೊತ್ತುವ ಚಿಹ್ನೆಗಳು ಸ್ಪಷ್ಟವಾಗಿ ಕಂಡುಬರುತ್ತಿವೆ. ಅಮೇರಿಕೆಯ ಡಾಲರಿನ ಪ್ರಭಾವವು ಹೇಗೆ ಬೆಳೆಯುತ್ತಿದೆಯೆಂಬುದನ್ನು ಈ ಮೊದಲೊಮ್ಮೆ ನಾನು ಬರೆದಿದ್ದೇನೆ. ಎಲ್ಲೆಲ್ಲಿ ಡಾಲರಿನ ಪ್ರಭಾವವು ಕಂಡುಬರುತ್ತಿದೆಯೊ ಅಲ್ಲಲ್ಲಿ, ಅದಕ್ಕೆ ರಶಿಯದ ಆಹ್ವಾನವು ಸಿಕ್ಕುತ್ತಿದೆ. ಚೀನದಲ್ಲಿಯ ಸರಕಾರಕ್ಕೆ ಅಮೇರಿಕೆಯು ಶಸ್ತ್ರಾಸ್ತ್ರ ಸಹಾಯವನ್ನೂ ಧನಸಹಾಯವನ್ನೂ ಮಾಡಿದರೆ, ಅದರೆದುರು ಧುತ್ತೆಂದು ನಿಂತ ಮತ್ತು ಸರ್ವಸಾಧಾರಣ ಇಡಿ ಮಂಚೂರಿಯಾವನ್ನು ಹಸ್ತಗತ ಮಾಡಿಕೊಂಡ ಚೀನೀ ಕಮ್ಯುನಿಸ್ಟರಿಗೆ ರಶಿಯದ 'ತಾತ್ತ್ವಿಕ ಮತ್ತು ನೈತಿಕ' ಸಹಾಯವಿದೆ. ತಾತ್ತ್ವಿಕ ಮತ್ತು ನೈತಿಕವೆಂದರೆ ಶುದ್ಧ ತಾತ್ತ್ವಿಕ ಮತ್ತು ನೈತಿಕ ಬೆಂಬಲವೆಂದು ಯಾರೂ ತಿಳಿಯಬಾರದು. ಜಪಾನದಲ್ಲಿಯೂ ರಶಿಯಾ-ಅಮೇರಿಕೆಗಳ ನಡುವೆ ತಿಕ್ಕಾಟ. ಇತ್ತ ಯುರೋಪದಲ್ಲಿ ಇರಾಣ, ತುರ್ಕಸ್ತಾನ್ ಮತ್ತು ಗ್ರೀಸದಲ್ಲಿ, ಎರಡೂ ರಾಷ್ಟ್ರಗಳಲ್ಲಿ ಪ್ರತ್ಯಕ್ಷ ಅಪ್ರತ್ಯಕ್ಷ ತಿಕ್ಕಾಟವು ಎಂಮೋ ಪ್ರಾರಂಭವಾಗಿದೆ. ಯುದ್ಧದಿಂದ ಹುರುಪಳಿಸಿದ ಯುರೋಪಿಯನ್ ರಾಷ್ಟ್ರಗಳು ಬಾಳಬೇಕಾದರೆ ಅವುಗಳಿಗೆ ಯಾರಿಂದಾದರೂ ಸಹಾಯ ಬೇಕಾಗಿದೆ. ಇಂತಹ ಸಹಾಯವನ್ನು ಒದಗಿಸಿ ಕೊಡಲು ಅಮೇರಿಕೆಯು 'ಮಾರ್ಶಲ್ ಯೋಜನೆ' ಎಂಬ ಹೆಸರಿನಿಂದ ಪ್ರಸಿದ್ಧವಾದ ಒಂದು ಯೋಜನೆಯನ್ನು ಮುಂದೊಡ್ಡಿದೆ. ಈ ಯೋಜನೆಯು ಯುರೋಪದ ರಾಷ್ಟ್ರಗಳನ್ನು ಉಳಿಸುವುದಕ್ಕಿಂತ ರಶಿಯದ ಕಮ್ಯುನಿಝಮಿಗೆ ರಶಿಯದ ಪ್ರಭಾವಕ್ಕೆ ತಡೆಹಾಕಲು ಹೊಂಚು ಹಾಕಿದೆ. ಈ ಯೋಜನೆಯನ್ನು ರಶಿಯವು ಚೆನ್ನಾಗಿ ಪ್ರತಿಭಟಿಸಿದೆ.

ರಶಿಯದ ವಿರುದ್ಧ ಅಮೇರಿಕೆ

ಇನ್ನು 'ತಾಜಾ' ಇತಿಹಾಸವೆಂದರೆ ತನ್ನ ವಾಯವ್ಯದ ಗಡಿಯಲ್ಲಿದ್ದ ಫಿನಲಂಡನ್ನು ನುಂಗಲು ರಶಿಯವು ಪ್ರಯತ್ನಿಸುತ್ತಿದೆ. ಝೆಕೋಸ್ಲೊವಾಕಿಯದಲ್ಲಿ ಘಟನಾತ್ಮಕ ಸರಕಾರವನ್ನು ಕಿತ್ತೊಗೆದು, ಕಮ್ಯುನಿಸ್ಟ್ ಪ್ರಾಬಲ್ಯದ ಮಂತ್ರಿಮಂಡಳವು ಸ್ಥಾಪಿತವಾಗಿದೆ. ಇಟಲಿಯಲ್ಲಿ ಕಮ್ಯುನಿಸ್ಟ್ ಪಕ್ಷವು ಪ್ರಬಲವಿರುವುದರಿಂದ, ಅದು ರಶಿಯದ ಉಡಿಯಲ್ಲಿ ಬೀಳುವ ಸಂಭವನಿದೆ. ಪಶ್ಚಿಮ ಯುರೋಪದ ಐದು ರಾಷ್ಟ್ರಗಳಾದ—ಬೆಲ್ಜಿಯಂ, ಫ್ರಾನ್ಸ್, ಲಗ್ಸೆಂಬರ್ಗ್ ನೆದರಲ್ಯಾಂಡ್ಸ್ ಮತ್ತು ಇಂಗ್ಲಂಡ್ — ಇವು, ೫೦ ವರ್ಷದ ಪರಸ್ಪರ ಸಹಾಯದ ಒಪ್ಪಂದವನ್ನು ಮಾಡಿಕೊಂಡು ಒಂದಾಗಿವೆ. ಇವುಗಳಿಗೆ ಬೇಕಾಗುವ ಸಾಧನಸಾಮಗ್ರಿಯನ್ನು ಪೂರಯಿಸಲು

ಅಮೇರಿಕೆಯು ಒಪ್ಪಿದೆ. ಪ್ರಜಾಸತ್ತೆ, ವ್ಯಕ್ತಿಸ್ವಾತಂತ್ರ್ಯ, ರಾಜಕೀಯ ಸ್ವಾತಂತ್ರ್ಯ, ಘಟನಾಬದ್ಧ ಆಳಿಕೆ ಇವುಗಳನ್ನು ಉಳಿಸಿಕೊಳ್ಳಲು ಪರಸ್ಪರ ಮಿಲಿಟರಿ ಸಹಾಯ ಮಾಡಬೇಕೆಂದು ಈ ಪಂಚರಾಷ್ಟ್ರಗಳ ಒಪ್ಪಂದದಲ್ಲಿದೆ. ಇವೆಲ್ಲ ಘಟನೆಗಳ ಕಳಸವೆಂಬಂತೆ ಅಧ್ಯಕ್ಷ ಟ್ರೂಮನ್ನರು ಅಮೇರಿಕೆಯಲ್ಲಿ ಸೈನ್ಯಭರತಿ ಮತ್ತು ಒತ್ತಾಯದ ಸೈನ್ಯಶಿಕ್ಷಣ ಪ್ರಾರಂಭವಾಗಬೇಕೆಂದು ಘೋಷಿಸಿದ್ದಾರೆ. ಯುರೋಪದಲ್ಲಿಯ ಕಮ್ಯುನಿಸ್ಟ್ ಹಾವಳಿಯನ್ನು ತಡೆಯುವ ತಮ್ಮ ನಿರ್ಧಾರವನ್ನು ಅವರು ನಿಸ್ಸಂದಿಗ್ಧವಾಗಿ ಸಾರಿದ್ದಾರೆ. ಒಟ್ಟಿನ ಮೇಲೆ ಟ್ರೂಮನ್ನರು ಸಡ್ಡು ಹೊಡೆದರೆಂದು ಹೇಳಲಡ್ಡಿಯಿಲ್ಲ.

ಹಿಂದುಸ್ತಾನ ಎತ್ತ ಒಲೆಯುವುದು ?

ಹಿಂದುಸ್ತಾನವು ಅಖಂಡವಾಗಿ ಉಳಿದಿದ್ದರೆ ಅದು ರಶಿಯದ ಕಡೆಗೆ ಹೋಗುವ ಸಂಭವವಿದೆಯೆಂದು ಎನಿಸಿದುದರಿಂದಲೇ, ಹಿಂದುಸ್ತಾನವನ್ನು ಎರಡು ತುಂಡು ಮಾಡಬೇಕು— ರಶಿಯಾ ಹಿಂದುಸ್ತಾನಗಳ ನಡುವೆ ಅಡ್ಡಗೋಡೆಯನ್ನು ಕಟ್ಟಬೇಕೆಂದು, ಅಮೇರಿಕೆಯೇ ಒತ್ತಾಯ ಪಡಿಸಿತೆಂದೂ ಮತ್ತು ಅಮೇರಿಕೆಯಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಮಾಡಿದ ಭಾಷಣಗಳ ನೇರಿಂದ ಅಮೇರಿಕೆಯು ಮೇಲಿನಂತೆ ಸಂಶಯ ತೆಗೆದುಕೊಂಡಿತೆಂದೂ ಒಬ್ಬರು ಹೇಳಿದ್ದಾರೆ. ಇದು ನಿಜವಿರಲಿ ಅಥವಾ ಇಲ್ಲದಿರಲಿ, ಹಿಂದುಸ್ತಾನವು ರಶಿಯಾ ಅಥವಾ ಅಮೇರಿಕಾ ಇವುಗಳಲ್ಲಿ ಯಾವ ಗುಂಪಿಗೆ ಸೇರುವುದೆಂಬುದು ಮಹತ್ವದ ಸಂಗತಿ. 'ಹಿಂದುಸ್ತಾನವು ಕಾಮನ್‌ವೆಲ್ಥದಲ್ಲಿ ಉಳಿಯಬೇಕೊ ಉಳಿಯಬಾರದೊ ?' ಎಂಬ ಪ್ರಶ್ನೆಯನ್ನೂ ಕೊನೆಯದಾಗಿ ಘಟನಾಸಮಿತಿಯೆ ನಿರ್ಣಯಿಸುವುದೆಂದು ಪಂ. ಜವಾಹರಲಾಲರು ಹೇಳಿದ್ದಾರೆ. ಕಾಮನ್‌ವೆಲ್ಥದ ಪ್ರಶ್ನೆ ನಿರ್ಣಯಿಸಲ್ಪಟ್ಟ ಬಳಿಕ ಮುಂದಿನ ಮಾತು. ಏನೇ ಆದರೂ, ಹಿರಿಯೋಲಗದಲ್ಲಿ ಪಂ. ಕುಂಝರುರವರು ಎಚ್ಚರಿಸಿದಂತೆ, ಹಿಂದುಸ್ತಾನವು ಎಂತಹ ಪ್ರಸಂಗ ಬಂದರೂ ಅದನ್ನು ಎದುರಿಸುವ ಸಿದ್ಧತೆಯಲ್ಲಿರಬೇಕು.

ಸಾಂದರ್ಭಿಕ ಟೀಕೆ-ಟಿಪ್ಪಣಿಗಳು

ಹಿಂದುಸ್ತಾನ್ ಮತ್ತು ಹೈದ್ರಾಬಾದ್ ಸರಕಾರಗಳ ನಡುವೆ ಶಾಶ್ವತ ಒಪ್ಪಂದದ ಸಲುವಾಗಿ ಮತ್ತೆ ಮಾತು-ಕತೆಗಳು ಪ್ರಾರಂಭವಾಗಿ, ನಿಜಾಮ ಮಾತು-ಕತೆಗಳ ಪದ್ಧತಿಯಂತೆ ಮತ್ತೆ ಮುಂದೆ ಬಿದ್ದುವು. ಮೊನ್ನೆ ನಡೆದ ಮಾತು-ಕತೆಗಳಲ್ಲಿ ಶಾಶ್ವತ ಒಪ್ಪಂದದ ಸಲುವಾಗಿ ಚರ್ಚೆಯಾಯಿತೊ ಅಥವಾ ಹೈದ್ರಾಬಾದವು ಯಥಾಸ್ಥಿತ ಒಪ್ಪಂದವನ್ನು ಎಷ್ಟು ಸಲ ಎಷ್ಟು ರೀತಿಯಿಂದ ಭಂಗಿಸಿದೆಯೆಂಬುದರ ಬಗ್ಗೆ ಚರ್ಚೆಯಾಯಿತೊ ತಿಳಿಯಲು ಮಾರ್ಗವಿಲ್ಲ. ಗಡಿಯ ಮೇಲಿನ ದುರ್ಘಟನೆಗಳು ದಿನದಿನಕ್ಕೆ ಹೆಚ್ಚುತ್ತಿವೆ. ಹೈದ್ರಾಬಾದಿನ ನಿರಾಶ್ರಿತರು ಹಿಂದುಸ್ತಾನದಲ್ಲಿ ತುಂಬುತ್ತಿದ್ದಾರೆ. ಇಡೀ ದಕ್ಷಿಣ ಹಿಂದುಸ್ತಾನದ ಶಾಂತಿಯು ಹೈದ್ರಾಬಾದಿನ ಮೇಲೆ ಅವಲಂಬಿಸಿದೆ. ಹೈದ್ರಾಬಾದಿನ ನಿರಾಶ್ರಿತರು ಇಲ್ಲಿ ಬರತೊಡಗಿದರೆ ಜಾತೀಯತೆ ಬಹು ತೀಕ್ಷ್ಣವಾಗುವ ಸಂಭವವಿದೆ. ಅಲ್ಲದೆ ಇತ್ತಿಹಾದ್ ಮುಸಲ್ಮೀನರ ಹಾಗೂ ಅವರ ಸ್ವಯಂಸೇವಕಪಡೆಯಾದ **ರಜಕಾರ**ದವರ ಚಟುವಟಿಕೆಗಳು ಜಾತೀಯತೆಯ ವಿಷವನ್ನು ದೊಡ್ಡ ಪ್ರಮಾಣದಲ್ಲಿ ಬೀರುತ್ತಿವೆ. ಹೈದ್ರಾಬಾದ ಸಂಸ್ಥಾನದಲ್ಲಿ ಶಿವಮಂದಿರ ಮೊದಲಾದ ಹಿಂದು ದೇವಾಲಯಗಳನ್ನು ಅವರು ನಾಶಗೊಳಿಸುತ್ತಿದ್ದಾರೆ. ಇದು ಕೂಡಲೆ ನಿಲ್ಲಬೇಕು. ಹೈದ್ರಾಬಾದಿನ ಆಂತರಿಕ ಕಾರಭಾರದಲ್ಲಿ ಕೈಹಾಕಲು ಹಿಂದುಸ್ತಾನ್ ಸರಕಾರಕ್ಕೆ ಕಾಗದಪತ್ರದ ಅಧಿಕಾರವಿರದಿದ್ದರೂ, ನೈತಿಕ ಅಧಿಕಾರ ಸಾಕಷ್ಟಿದೆ.

*　　*　　*　　*

ಹಿಂದುಸ್ತಾನದ ಸಮತಾವಾದಿಗಳು ಕಾಂಗ್ರೆಸಿನಿಂದ ಸಿಡಿದು ಹೋಗಿ ಸ್ವತಂತ್ರರಾದರು. ಹಿಂದುಸ್ತಾನದಲ್ಲಿ ಹೊಸದೊಂದು ಪಕ್ಷವು ಸ್ಥಾಪಿಸಲ್ಪಟ್ಟಿತೆಂದು ಹೇಳಲು ಅಡ್ಡಿಯಿಲ್ಲ. ಸಮತಾವಾದದ ತತ್ತ್ವಗಳು ಉತ್ತಮವಾಗಿವೆ. ಯಾಂತ್ರಿಕ ಯುಗದಲ್ಲಿ ಪ್ರತಿಯೊಂದು ರಾಷ್ಟ್ರವು ಒಂದಿಲ್ಲೊಂದು ದಿನ ಸಮತಾವಾದದ ತತ್ತ್ವವನ್ನು ಅಂಗೀಕರಿಸಲೇಬೇಕಾಗುವುದು. ಕಾಂಗ್ರೆಸಿನ ಕಟ್ಟು-ನಿಟ್ಟು ಶಿಥಿಲವಾಗಿ ಅದು ಕೊಳಚೆಯಿಂದ ತುಂಬಿರುವುದರಿಂದ, ಸಮತಾವಾದಿಗಳ ಮಾರ್ಗವು ಸುಗಮವಿದೆ. ಆದರೆ ಸಮತಾವಾದಿಗಳು ಸದ್ಯದ ಸರಕಾರಕ್ಕೆ ವಿರೋಧಪಕ್ಷವಾಗಲು ವಿಶೇಷ ಆಸ್ಥೆಯನ್ನು ತೋರುವಂತೆ ಕಾಣುತ್ತಿದೆ. 'ಪ್ರಜಾಪ್ರಭುತ್ವದ ರಾಜ್ಯಪದ್ಧತಿಯು ಸರಿಯಾಗಿ ನಡೆಯಬೇಕಾದರೆ, ವಿರೋಧ ಪಕ್ಷವು ಬೇಕೇ ಬೇಕು' ಎಂದು ಮುಂತಾಗಿ ಅವರು ಪ್ರತಿವಾದಿಸುತ್ತಿದ್ದಾರೆ. ಹಿಂದುಸ್ತಾನ್ ಸರಕಾರದ ಶಾಖೆಗಳಲ್ಲಿ ಉತ್ತಮವಾಗಿ ನಡದುವು ಎಂದರೆ ವಜ್ರಮುಷ್ಟಿಯ ಸರದಾರರ ಶಾಖೆಗಳು— ಅದರಲ್ಲಿಯೂ ಮುಖ್ಯವಾಗಿ— ಹುಂಡಾದ ಹಿಂದುಸ್ತಾನವನ್ನು ಒಂದುಗೂಡಿಸಿದ ಸಂಸ್ಥಾನ ಶಾಖೆ. ಕೊಲ್ಹಾಪುರದ ಮಂತ್ರಿಮಂಡಳವನ್ನು ಮನೆಗೆ ಕಳಿಸಿ, ಅಲ್ಲಿಯ ಗಲಭೆಯ ಬಗ್ಗೆ ವಿಚಾರ ನಡೆಯಿಸುವ ವ್ಯವಸ್ಥೆಯನ್ನು ಮಾಡಿ, ಈ ಶಾಖೆಯ ಕಾರ್ಯವು ಮತ್ತಷ್ಟು ಸ್ತುತ್ಯವಾಗಿದೆ. ಇಂತಹವರಲ್ಲಿ ಆ ಶಾಖೆಯ ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಸಮತಾವಾದಿಗಳು ವಾದಿಸುವುದನ್ನು ನೋಡಿದರೆ ವಿಚಿತ್ರವೆನಿಸುತ್ತದೆ. ಇದರಿಂದ ಈ ಹೊಸ ಪಕ್ಷವು ಅಪ್ರಿಯವಾಗುವ ಸಂಭವವಿದೆ. ಸದ್ಯಕ್ಕೆ ದೇಶಕ್ಕೆ ಅಥವಾ ದೇಶದ ಸರಕಾರಕ್ಕೆ ವಿರೋಧ ಪಕ್ಷದ ಆವಶ್ಯಕತೆಯಿಲ್ಲ. ಪ್ರಜಾಪ್ರಭುತ್ವದ ರಾಜ್ಯಪದ್ಧತಿಗೆ ವಿರೋಧಪಕ್ಷವು ಬೇಕಾಗಬಹುದು, ಆದರೆ ಸದ್ಯದ ಸರಿಸ್ಥಿತಿಯು ಯುದ್ಧಪರಿಸ್ಥಿತಿಯಂತೆ ಗಂಭೀರವಿರುವುದು. ಈಗ ಅಸ್ತಿತ್ವದಲ್ಲಿದ್ದುದು ಒಂದೇ ಪಕ್ಷದ ಸರಕಾರವಲ್ಲ; ಸರ್ವಪಕ್ಷೀಯ ಸರಕಾರ. ಎಲ್ಲರೂ ಇದಕ್ಕೆ ಸರಿಯಾದ ನೆರವು ಕೊಡುವುದು ಕರ್ತವ್ಯವಾಗಿದೆ.

ಸಾದರ ಸ್ವೀಕಾರ

★

೧೯೨. ಋಗ್ವೇದ ಸೂಕ್ತಗಳು— (ಕನ್ನಡ ಭಾಷಾಂತರ ಸಹಿತ). ಸಂಕಲನಕಾರರು ಶ್ರೀ. ಜಿ. ಹನುಮಂತರಾವ್ ಎಂ ಎ. ಮೈಸೂರು. ಮೈಸೂರಿನ ವಿಶ್ವಸಾಹಿತ್ಯಮಾಲೆಯ ೩ನೆಯ ಪುಷ್ಪ. ಕ್ರೌ. ಅ. ೮೮ ಪುಟಗಳು. ಬೆಲೆ ೦–೧೫–೦.

೧೯೩. ಚರಿತ್ರ ಹೀನ— (ಅನುವಾದಿತ ಕಾದಂಬರಿ). ಮೂಲ ಬಂಗಾಲಿ ಕಾದಂಬರಿಕಾರರು ದಿವಂಗತ ಶ್ರೀಶರಚ್ಚಂದ್ರ ಚಟ್ಟೋಪಾಧ್ಯಾಯರು. ಅನುವಾದಕರು ಶ್ರೀ. ಗುರುನಾಥ ಜೋಶಿಯವರು. ಧಾರವಾಡದ ಸಾಧನ ಮುದ್ರಣಾಲಯದ ಪ್ರಕಟನೆ. ಕ್ರೌ. ಅ. ೫೨೦ ಪುಟಗಳು. ಬೆಲೆ ೭–೪–೦.

೧೯೪. ಶಂಖನಾದ— (ಸ್ವತಂತ್ರ ಕಾದಂಬರಿ). ಬರೆದವರು ಶ್ರೀಮಾನ್ ನಾ. ಕಸ್ತೂರಿ ಮೈಸೂರಿನ ಉಷಾ ಸಾಹಿತ್ಯಮಾಲೆಯ ೯ನೆಯ ಪುಸ್ತಕ. ಕ್ರೌ. ಅ. ೧೫೪ ಪುಟಗಳು. ಬೆಲೆ ೧–೧೫–೦.

೧೯೫. ಕನ್ನಡ ಕೈಪಿಡಿ— (ಸಂ ಪುಟ ೨.) ಕನ್ನಡ ಸಾಹಿತ್ಯದ ಚರಿತ್ರೆ–ಭಾಗ ೧. ದಿವಂಗತ ಬಿ. ಎಂ. ಶ್ರೀಯವರ ನೇತೃತ್ವದಲ್ಲಿ ಬಹಳ ದಿನಗಳ ಹಿಂದೆ ಸಿದ್ಧವಾಗಿದ್ದುದನ್ನು ಮೈಸೂರು ವಿಶ್ವವಿದ್ಯಾನಿಲಯದವರು ಮೊನ್ನೆ ಮೊನ್ನೆ ಪ್ರಕಟಿಸಿದ್ದಾರೆ. ಡೆ. ಅ. ೨೦೪ ಪುಟಗಳು. ಬೆಲೆ ೧–೪–೦.

೧೯೬. ಕನ್ನಡ ಕಹಳೆ— (ಕೈಬರೆಹದ ಮಾಸಪತ್ರಿಕೆ). ಗೋಕರ್ಣದ ಕೆಳೆಯರ ಬಳಗದವರು ಬರೆದು ಪ್ರಕಟಿಸುವರು. ಪೂ. ಧಿ ದ ೪೦ ಪುಟಗಳು.

ಬರೆಹಗಾರರಾಗಬೇಕೆಂದು ಬಯಸುವ ಎಳೆಯರಿಗೆ ಇಂತಹ ಕೈಬರೆಹದ ಪತ್ರಿಕೆಗಳು ಗರಡಿಮನೆಗಳು ಇದ್ದಂತೆ. ಅಭ್ಯಾಸ-ಲೋಕಾನುಭವಗಳನ್ನು ಹೆಚ್ಚಿಸಿಕೊಳ್ಳುತ್ತ ಇಂತಹ ಪತ್ರಿಕೆಗಳಲ್ಲಿ ಬರೆಯುತ್ತ ಸಿದ್ಧಲೇಖಕರಾಗಿ, ಆ ಮೇಲೆ ಪ್ರಕಟವಾಗಿ ಕಾರ್ಯಮಾಡತೊಡಗಿದರೆ, ಕನ್ನಡ ಸಾಹಿತ್ಯ ಸತ್ತ್ವಯುತವಾದೀತು. 'ಕನ್ನಡ ಕಹಳೆ' ಬಹುಕಾಲ ಮೊಳಗುತ್ತಿರಲಿ.

೧೯೭. ಹೂದೋಟ ಭಾಗ ೧.— (ಕಥಾ ಸಂಗ್ರಹ). ಕನ್ನಡನಾಡಿನ ಬೇರೆ ಬೇರೆ ಕತೆಗಾರರು ಬರೆದ ಕತೆಗಳು. ಸಂಪಾದಕರು ಮತ್ತು ಪ್ರಕಾಶಕರು: ಶ್ರೀ. ಟಿ. ಶ್ರೀಪತಿ 'ಕೃಷ್ಣವಿಹಾರ' ಕದ್ರಿ ದೇವಸ್ಥಾನ ರಸ್ತೆ, 'ಬಜಯಿ' ಮಂಗಳೂರು. ಕ್ರೌ. ಅ. ೨೫೦ ಪುಟಗಳು. ಬೆಲೆ ೩–೮–೦.

೧೯೮. ವಾಹಿನೀ— (ವಾರಪತ್ರಿಕೆಯ ದ್ವಿತೀಯ ವಾರ್ಷಿಕ ಸಂಚಿಕೆ). ಸಂಪಾದಕರು ಮತ್ತು ಪ್ರಕಾಶಕರು: ಎಂ. ಎಸ್. ಚಿಂತಾಮಣಿ ಬಿ. ಎಸ್ಸಿ. ಈಸ್ಟರ್ನ್ ಪ್ರೆಸ್ ಜಯಚಾಮರಾಜೇಂದ್ರ ರೋಡು; ಬೆಂಗಳೂರು ನಗರ. ಕ್ರೌ. ಧಿ ದ ೧೬೪ ಪುಟಗಳು, ಬೆಲೆ ೧–೦–೦.

ನಾಡಿನ ವಿವಿಧ ಲೇಖಕರ ಕಥೆ-ಕವನ-ಪ್ರಬಂಧ-ವ್ಯಕ್ತಿ ಪರಿಚಯ, ಹಾಸ್ಯ ಲೇಖನಗಳು ಮೊದಲಿನ ೧೩೬ ಪುಟಗಳಲ್ಲಿ ಇರುವುವು. ಮುಂದಿನ ಪುಟಗಳಲ್ಲಿ ೧೯೭೭ರ (೧) ಸಣ್ಣಕಥೆಗಳು. (೨) ನಾಟಕಗಳು. (೩) ಕಾವ್ಯವಾಹಿನಿ. (೪) ಕನ್ನಡ ಕಾದಂಬರಿಗಳು ಎಂಬ ವಿಮರ್ಶಾತ್ಮಕ ಲೇಖನಗಳಿರುವುವು. ಈ ಲೇಖನಗಳನ್ನು ಕ್ರಮವಾಗಿ (೧) ಎಂ. ವಿ. ಸೀತಾರಾಮಯ್ಯ. (೨) ತ. ರಾ. ಸುಬ್ಬರಾಯ. (೩) ಜಿ. ವರದರಾಜರಾವ್. (೪) ಆರ್. ಎಸ್. ರಾಮರಾವ್ ಅವರು ಬರೆದಿದ್ದು ಅಭ್ಯಾಸಪೂರ್ಣವಾಗಿವೆ. ಸಂಚಿಕೆ ಸಂಗ್ರಾಹ್ಯವಾದುದು.

೧೯೯. '೧೮೫೭' ಅಥವಾ ಬಂಡಾಯದ ಇತಿಹಾಸ— (ಸಚಿತ್ರ ಸ್ವಾತಂತ್ರ್ಯ ಯುದ್ಧದ ಕಥೆ). ಲೇಖಕರು ಶ್ರೀಮಾನ್ ಕೃ. ಗೋ. ಜೋಶಿ ಬಿ. ಎ., ಬಿ. ಟಿ. ಧಾರವಾಡದ ವಿಂಟೇಜ್ ಬಳಿಯ ೧೦ನೆಯ ವರ್ಷದ ೧ನೆಯ ೨ನೆಯ ಕುಡಿ. ಕ್ರೌ. ಅ. ಸುಮಾರು ೩೫೦ ಪುಟಗಳು. ಬೆಲೆ ಸಾದಾ ಪ್ರತಿಗೆ ೪—೦—೦ ಉತ್ತಮ ಪ್ರತಿಗೆ ೫—೦—೦.

೨೦೦. ಕಿತ್ತೂರ ಬಂಡಾಯ— (ಐತಿಹಾಸಿಕ ಲೇಖನಗಳ ಸಂಗ್ರಹ). ಬರೆದವರು ಬೇರೆ ಬೇರೆ ಲೇಖಕರು. ಪ್ರಕಾಶಕರು: ಕಿತ್ತೂರ ಚೆನ್ನಮ್ಮ ರಾಣಿ ಇತಿಹಾಸ ಮಂಡಲ, ಬೈಲಹೊಂಗಲ. ಡೆಮಿ ಅ. ೧೪೦ ಪುಟಗಳು. ಬೆಲೆ ?

೨೦೧. ಗರಗದ ಗುರುರಾಜ ಶ್ರೀಮಡಿವಾಳ ಮಹಾತ್ಮೆ (ಜೀವನ ಚರಿತ್ರ). ಲೇಖಕರು ಶ್ರೀ. ರೇವಣಸಿದ್ದಯ್ಯ ಮಡಿವಾಳಯ್ಯ ಸ್ಯಾಟಮಠ, ಸಂಗೂರು, ಧಾರವಾಡ. ಪ್ರಕಾಶಕರು ಎಚ್. ಬಿ. ನವಲೂರ, ಹಿಂದ ಮಾತಾ ಮುದ್ರಣಾಲಯ ಧಾರವಾಡ. ಕ್ರೌ. ಅ. ೩೨ ಪುಟ. ಬೆಲೆ ೦—೪—೦.

೨೦೨. ಶಿಲ್ಪಿಚಕ್ರವರ್ತಿ— (ಐತಿಹಾಸಿಕ ನಾಟಕ) ಬರೆದವರು ಶ್ರೀ. ಬಾದರಾಯಣ ಮೂರ್ತಿ. ಪ್ರಕಾಶಕರು ಮೆ. ಎಚ್. ಎನ್. ರಾವ್ ಬ್ರದರ್ಸ್, ಚಿಕ್ಕಪೇಟೆ ಬೆಂಗಳೂರ ನಗರ. ಕ್ರೌ. ಅ. ೬೦ ಪುಟಗಳು. ಬೆಲೆ ೦—೧೫—೦.

೨೦೩. ಮರುಭೂಮಿಯ ಅರಬರು—(ಪರಿಚಯಾತ್ಮಕ ಗ್ರಂಥ). ಬರೆದವರು ಶ್ರೀ. ಎಂ. ಹರಿದಾಸರಾವ್. ಪ್ರಕಾಶಕರು ಸಿಟಿ ಬುಕ್‌ಸ್ಟಾಲ್, ಹುಬ್ಬಳ್ಳಿ. ಕ್ರೌ. ಅ. ೯೬ ಪುಟಗಳು ಬೆಲೆ ೧—೮—೦.

೨೦೪. ಭಾಗ್ಯೋದಯ— (ಹಿಂದೀ ಪಕ್ಷಪತ್ರಿಕೆ). ಇದೆ ಫೆಬ್ರುವರಿಯಿಂದ ಜಬ್ಬಲಪುರದಿಂದ ಹೊಸತಾಗಿ ಹೊರಡುತ್ತಲಿದೆ. ಸಂಪಾದಕರು: ಶ್ರೀ. ಟಿ. ಕೃಷ್ಣಸ್ವಾಮಿ, ಭಾಗ್ಯೋದಯ ಕಾರ್ಯಾಲಯ ೩೫೭. ಗೋಲಬಾಜಾರ. ಜಬಲಪುರ. ಕ್ರೌ ಧಿ ದ ೧೮ ಪುಟಗಳು. ವಾ. ಚಂ. ೫—೮—೦. ಪ್ರತಿಸಂಚಿಕೆ ೦—೪—೦.

೨೦೫. **ಬಸವೇಶ್ವರ ಹೈಸ್ಕೂಲ್ ವಿಸೆಲಿನಿ, ಬಾಗಿಲು-ಕೋಟೆ**— (ವರ್ಷಪತ್ರಿಕೆ). ಪ್ರಧಾನ ಸಂಪಾದಕರು: ಶ್ರೀ. ಕೆ. ಬಿ. ಆಚಾರ್ಯ ಬಿ. ಎ., ಬಿ. ಟಿ. ಕ್ರೌ. ಸ್ಥಿದ ೩೬ ಪುಟ ಇಂಗ್ಲಿಷಿಗೂ ೩೨ ಪುಟ ಕನ್ನಡಕ್ಕೂ ಲ ಪುಟ ಹಿಂದಿಗೂ ವಿಭಾಗಿಸಿ ಕೊಡಲಾಗಿದೆ. ಅಲ್ಲದೆ ಚಿತ್ರದ ಪುಟಗಳೂ ಇವೆ. ಲೇಖನಗಳೆಲ್ಲ ವಿದ್ಯಾರ್ಥಿ ವರ್ಗದುವೇ ಇವೆ.

೨೦೬. **ನವಯುಗ ಪಂಚಾಂಗ**—(ಶಾ. ವಾ. ಶ. ೧೮೭೨ ಕೊಲ್ಲಂ ಶಕ ೧೧೪೩–೪೪ರ ಪಂಚಾಂಗ). ಉಡುಪಿಯ ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾ ಪಾಠಶಾಲೆಯ ಜ್ಯೋತಿಷ ಪಂಡಿತ ಶ್ರೀ. ಕೆ. ನರಸಿಂಹ ಉಪಾಧ್ಯಾಯರು ರಚಿಸಿದವರು. ಪ್ರಕಾಶಕರು ನವಯುಗ ಪ್ರೆಸ್, ಉಡುಪಿ. ಡೆ. ಅ. ೪೦ ಪುಟ. ಬೆಲೆ ೦—೫—೦.

೨೦೭. **The Editor and Publisher**— (ಇಂಗ್ಲಿಷ್ ಮಾಸಪತ್ರಿಕೆ) ಸಂಪಾದಕರು ಶ್ರೀ. ಪಿ. ಜಿ ರಾವ್. ಪ್ರಕಾಶನ ಸ್ಥಳ: ಯುನಿಟೆ ಪ್ರಿಂಟಿಂಗ್ ಪ್ರೆಸ್, ೧೬೬. ಹಾರ್ನಬಿರೋಡ್, ಫೋರ್ಟ್—ಮುಂಬಯಿ. ಡೆ. ಅ. ೨೮ ಪುಟಗಳು. ವಾರ್ಷಿಕ ಚಂದಾ ೧೦—೦—೦. ಬಿಡಿಸಂಚಿಕೆಗೆ ೧—೦—೦.

೨೦೮. **ರಾಮಣ್ಣ ಮಾಸ್ತರು**— (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು ಶ್ರೀ. ಮಿರ್ಜಿ ಅಣ್ಣಾರಾಯರು. ಹುಬ್ಬಳ್ಳಿಯ ಕಲ್ಪನಾ ಗ್ರಂಥಪ್ರಕಾಶನ ಸಮಿತಿಯ ೨ನೆಯ ಪುಸ್ತಕ. ಕ್ರೌ ಅ. ೧೭೮ ಪುಟಗಳು. ಬೆಲೆ ೨—೦—೦.

೨೦೯. **ಫಲಸಂಚಯ**— (ಕಥಾಸಂಕಲನ) ಬರೆದವರು ಪ್ರೇಮಾನ್ ವರದರಾಜ ಹುಯಿಲಗೋಳ ಎಂ. ಎ ಧಾರವಾಡ ಇದೂ ಮೇಲಿನ ಕಲ್ಪನಾ ಗ್ರಂಥಪ್ರಕಾಶನಕ್ಕೆ ಸೇರಿದುದು. ೩ನೆಯ ಪುಸ್ತಕ. ಕ್ರೌ. ಅ. ೧೦೪ ಪುಟಗಳು. ಬೆಲೆ ೧-೪-೦.

೨೧೦. **ಕಲ್ಯಾಣ**— ಹಿಂದೀ ಮಾಸಪತ್ರಿಕೆಯ ನಾರೀ ವಿಶೇಷಾಂಕ). ಸಂಪಾದಕರು ಹನುಮಾನ ಪ್ರಸಾದ ಪೋದ್ದಾರ ಮತ್ತು ಶ್ರೀ. ಜಿವ್ರೀಲಾಲ ಗೋಸ್ವಾಮಿ ಎಂ ಎ. ಅವರು. ಪ್ರಕಾಶಕರು: ಘನಶ್ಯಾಮದಾಸ ಜಾಲಾನ. ಗೀತಾ ಪ್ರೆಸ್ ಗೋರಖಪುರ. ಕ್ರೌ. ಸ್ಥಿದ ೮೦೦ ಪುಟಗಳು. ತುಂಬ ಚಿತ್ರಗಳು. ಬೆಲೆ ೬–೧೨–೦.

ಪ್ರಾಚೀನ-ಅರ್ವಾಚೀನ ಸುಪ್ರಸಿದ್ಧ ನಾರಿಯರನ್ನು ಪರಿಚಯ ಮಾಡಿಕೊಡಬಲ್ಲ ಒಂದು ಚರಿತ್ರಕೋಶವಿದೆಂದು ಹೇಳಬಹುದು. ಕನ್ನಡಿಗರ ಸಹಕಾರ ಪಡೆದುಕೊಂಡಿದ್ದರೆ, ಅನೇಕ ಕನ್ನಡ ನಾರೀಮಣಿಗಳ ಚರಿತ್ರಗಳೂ ಇದಕ್ಕೆ ಸೇರಬಹುದಾಗಿತ್ತು. ಕನ್ನಡ ರಾಜಕೀಯ-ಸಾಂಸ್ಕೃತಿಕ ಇತಿಹಾಸ ತುಂಬ ದೊಡ್ಡದು. ಇಲ್ಲಿ ಬೆಳಗಿದ ವೀರನಾರಿಯರೂ ವಿದುಷಿಯರೂ ಪತಿವ್ರತೆಯರೂ ಹಲವು ಜನರು. ಅಂತಹರ ಪರಿಚಯ ಇದರಲ್ಲಿ ಸಿಕ್ಕದಿರುವುದು ಇದರಲ್ಲಿಯದೊಂದು ದೊಡ್ಡ ಕೊರತೆ. ಆದರೂ ಮನೆ-ಮನೆಯಲ್ಲಿಯೂ ಸಂಗ್ರಹಿಸಬೇಕಾದ ಪುಸ್ತಕ.

೨೧೧. **ಚ್ಲಾಕ್ ಮಾರ್ಕೆಟ್**— (ಸಂಗೀತ ನಾಟಕ) ಬರೆದವರು ಶ್ರೀ. ನೀಲಕಂಠ ಹಣಮಂತ ಶೇಡಬಾಳಕರ (ನಾಟ್ಯಾನಂದ) ಕಾಗವಾಡ. ಪ್ರಕಾಶಕರು: ಶ್ರೀ. ಬಿ. ಜಿ. ಸಂಕೇಶ್ವರ, ಸರಸ್ವತೀ ಪುಸ್ತಕ ಭಾಂಡಾರ, ಗದಗ. ಕ್ರೌ. ಅ. ೧೩೬ ಪುಟಗಳು. ಬೆಲೆ ೧–೧೦–೦.

ಕಳೆದ ಯುದ್ಧಕಾಲದಲ್ಲಿ ತಲೆಯೆತ್ತಿ ಇದುವರೆಗೂ ತನ್ನ ತಾಂಡವ ನಡೆಯಿಸಿದ ಕಳ್ಳಪೇಟೆಯ ದುಷ್ಪರಿಣಾಮವನ್ನು ಕುರಿತು ಬರೆದ ನಾಟಕ. ನಾಟಕ ಕಂಪನಿಯೊಂದು ಈಗಾಗಲೆ ಈ ನಾಟಕವನ್ನು ರಂಗಭೂಮಿಯ ಮೇಲೆ ತಂದಿದೆ. ಸಾಮಾನ್ಯರಲ್ಲಿ ಪ್ರಚಾರಮಾಡುವ ಉದ್ದೇಶದಿಂದ ಈ ನಾಟಕ ಬರೆದಿದ್ದಾರೆ. ಆದುದರಿಂದಲೆ ಪಾತ್ರಗಳೆಲ್ಲ ನಾಟಕಕಾರರು ಹೇಳಿದಂತೆ ಕುಣಿಯುತ್ತವೆ. ನಾಟಕದ ವಾತಾವರಣ ತೀರ ಅಸ್ವಾಭಾವಿಕವಾಗಿದೆ. ಪಾತ್ರಪರಿಪುಷ್ಟಿ, ಕಥಾವಸ್ತುವಿನ ಸ್ವಾಭಾವಿಕ ವಿಕಾಸ ಎಲ್ಲಿಯೂ ಕಾಣುವುದಿಲ್ಲ. ನಾಟಕ ಲೇಖನವೂ ಒಂದು ಕಲೆಯೆಂಬುದನ್ನು ಮರೆತು ನಡೆಯಲಾಗದು.

ಬಡತನದ ಬಾಳು

★

'ಆನಂದಕಂದ"ರ ಅತ್ಯುತ್ತಮ ಕಥಾ ಸಂಕಲನ

ಬೆಲೆ ೧-೪-೦

ಇದರಲ್ಲಿ ನಾಲ್ಕು ಕತೆಗಳಿವೆ. ಕನ್ನಡಿಗರ ಬದುಕಿನ ಕಷ್ಟ-ಸುಖಗಳನ್ನೂ ನೋವು-ನಲಿವುಗಳನ್ನೂ ಜೀವ್ಯ-ಕೆಡಕುಗಳನ್ನೂ ಈ ಕತೆಗಳು ಛಾಯಾಗ್ರಾಹಿಯಂತೆ ಚಿತ್ರಿಸುವುವಲ್ಲದೆ, ಸಾಹಿತ್ಯದ ಗುಣವಾದ ರಸಸೌಂದರ್ಯದಿಂದಲೂ ತುಂಬಿರುವುವು.

ಒಮ್ಮೆ ಓದಲಿಕ್ಕೆ ಕೈಯಲ್ಲಿ ಹಿಡಿದರೆ, ಮುಗಿಸುವವರೆಗೆ ಪುಸ್ತಕ ಕೆಳಗಿಡಲಾರದ ಅನುಭವ ಎಲ್ಲರಿಗೆ.

ಬೇಕಾದವರು 'ಜಯಂತಿ' ಕಾರ್ಯಾಲಯಕ್ಕೆ ಬರೆದು ತರಿಸಿಕೊಳ್ಳಬೇಕು.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್

ಧಾರವಾಡ

★ ನಿಮ್ಮ ನೂಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಣಿ

ಮ್ಯಾನೇಜರ್
ಎಮ್. ಗೋವರ್ಧನರಾವ

ರೀಟಾ: ತಲೆಯ ಕೂದಲನ್ನು ಬೆಳೆಸುವುದು.

ರೀಟಾ ಮೆದುಳಿಗೆ ಶಕ್ತಿಯನ್ನು ಕೊಟ್ಟು, ಸುರುಗಾದ ಸೀಳಾದ ಕೂದಲನ್ನು ಬೆಳಸಲು ಅದ್ಭುತವಾದ ಹೇರ್ ಟಾನಿಕ್.

ರೀ ಟಾ

ತಲೆಯ ಕೂದಲು ಉದುರುವುದು, ನೆರೆಯುವುದು, ಹೊಟ್ಟು, ಉದುರುವುದು, ಕಜ್ಜಿತಲೆ, ಹೇನಿನ ಬಾಧೆ, ಇವೇ ಮೊದಲಾದ ತಲೆಯ ಕೂದಲಿಗೆ ಸಂಬಂಧಿಸಿದ ಸಮಸ್ತ ವ್ಯಾಧಿಗಳಿಗೂ ರೀಟಾ ಅತ್ಯುತ್ತಮವಾದ ಔಷಧಿ.

ಈಗಾಗಲೆ ಸಾವಿರಾರು ಜನ ಉಪಯೋಗಿಸಿ ಗುಣವನ್ನು ಹೊಂದಿದ್ದಾರೆ. ನೀವು ಕೂಡ ಇಂದಿನಿಂದಲೇ ರೀಟಾವನ್ನು ಉಪಯೋಗಿಸಿರಿ.

RITA
HAIR TONIC

ರೀಟಾ ಹಿಂದುಸ್ತಾನದಲ್ಲೆಲ್ಲಾ ದೊರಕುವುದು. ಬೆಲೆ:— ಸೀಸೆ ೧ಕ್ಕೆ ೧೫ ಆಣೆ.

Printed by Mr. V. Y. Jathar at the Karnatak Printing Works, Dharwar, and Published for the Proprietor Jayanti Publications, by M. V. Malligatti at the Jayanti Office, Dharwar.—772-48.



ಗಂಗಣ್ಣ ದನಗಳನ್ನು ಪ್ರೀತಿಯಿಂದ ಮೇಯಿಸುವ; ತಿಳಿನೀರ ಹೊರೆಯಲ್ಲಿ ನೀರನ್ನು ಕುಡಿಸಿ ಮೀಯಿಸುವ... (ಪುಟ ೪೧೬).

ಸಂಪಾದಕರು: ಬೆಟಗೇರಿ ಕೃಷ್ಣಶರ್ಮ

ಸಂಪುಟ ೧೦ | ೧೯ನೆಯ ಮೇ ೧೯೪೮ | ಸಂಚಿಕೆ ೯

ಮುಖ್ಯ ವಿಷಯಗಳು

ಜಯಂತಿಯ ಹತ್ತು ವರ್ಷಗಳು (ಸಂಪಾದಕೀಯ)	....	ಸಂಪಾದಕರು
ಆಶಾಚಾತಕ (ಕವನ)	....	ಶ್ರೀ. ಕೆ. ಕೆ. ಅವಧಾನಿ ಬಿ. ಎ. ಬೆಳಗಾಂವಿ
ಬೀರಣ್ಣನ ಬಡಿನುಡಿಗಳು (ವ್ಯಂಗ್ಯಚಿಪ್ಪಣಿ)	....	ಗುಡದಪ್ಪ
ದನಗಾಹಿ (ಸಣ್ಣಕತೆ)	....	' ಆನಂದಕಂದ '
ಸ್ವಿಸ್ ರಾಜ್ಯಾಂಗ (ಉತ್ತರಾರ್ಧ)	....	ಶ್ರೀ. ಎಂ. ಕೆ. ಸುಬ್ಬರಾವ್ ಎಂ. ಎ. ಮೈಸೂರು
ಎಚ್ಚರಿಕೆ (ಕವನ)	....	ಶ್ರೀ. ಸಾಲಿ ರಾಮಚಂದ್ರರಾಯರು ಬಿ. ಎ. ಧಾರವಾಡ
ಚಂದ್ರೋದಯ (ಕವನ)	....	ಶ್ರೀ. ವಿ. ಜಿ. ಭಟ್ಟ ಎಂ. ಎ ಧಾರವಾಡ
ನಮೊ ನಿನಗೆ ಭಿಕ್ಷುಕಿಯೆ ! (ಕವನ)	....	ಶ್ರೀ. ಕೋ. ಚೆನ್ನಬಸಪ್ಪ ಎಲ್.ಎಲ್. ಬಿ. ಬಳ್ಳಾರಿ
ಈ ಘಟಪ್ರವಾಹ (ಕವನ)	....	ಶ್ರೀ. ಚೆನ್ನವೀರ ಕಣವಿ, ಧಾರವಾಡ
ವೃತ್ತಪತ್ರದ ವಿಶ್ವವ್ಯಾಪ್ತಿ (ಲಘುಪ್ರಬಂಧ)	....	ಶ್ರೀ. ಬಿ. ಆರ್. ನಾಡಪ್ಪಿ ಎಂ. ಎ. ಧಾರವಾಡ
' ಅಂಬಿಕಾತನಯದತ್ತ'ರ ' ಗರಿ ' (ರೇಡಿಯೊ ಭಾಷಣ)	....	ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ
ರಣರಂಗದಲ್ಲಿ (ಸಣ್ಣಕತೆ)	....	ಶ್ರೀ. ಜಿ. ಟಿ. ನಾರಾಯಣರಾವ್ ಎಂ. ಎ. ಮಡಿಕೆರಿ
ಬುದ್ಧಿ ಮತ್ತು ಮನಸ್ಸು (ಉಪಸರದ ವಿಚಾರ ೨)	....	ಶ್ರೀ. ಸೋಮೇಶ್ವರ ಪಾರ್ವತೇಯ, ಬನಾರಸ
ಪುಸ್ತಕ ವಿಮರ್ಶೆ	....	ಬೇರೆ ಬೇರೆ ವಿಮರ್ಶಕರು
ರಾಜಕೀಯಲೋಕದ ಅವಲೋಕನ	....	' ರಾಯರ ಅಪ್ಪಾಜಿ '
ಸಾದರ ಸ್ವೀಕಾರ	....	....

ಮರಿಳೆಯರಲ್ಲಿ ಒಂದು ಮಾತು

★

ಹೊಸ ವರ್ಷದಲ್ಲಿ ಕೇವಲ ಹೆಣ್ಣುಮಕ್ಕಳಿಗಾಗಿ ಒಂದೆರಡು ಪುಟಗಳನ್ನು ಕಾಯ್ದಿರಿಸಿ, ಅಡಿಗೆಯ ಮನೆಯ ವಿಷಯಗಳನ್ನೂ, ಬೇರೆ ಸಂಸಾರೋಪಯುಕ್ತ ಮಾತುಗಳನ್ನೂ ಅವರಲ್ಲಿ ಪ್ರಕಟಿಸಬೇಕೆಂದು ಕೆಲವು ಸೋದರಿಯರಿಂದ ಸೂಚನೆಗಳು ಬಂದಿವೆ. ಈ ವಿಭಾಗವು ಯಶಸ್ವಿಯಾಗಿ ನಡೆಯಬೇಕಾದರೆ, ನಮ್ಮ ಸೋದರಿಯರ ಸಹಕಾರ ಹೆಚ್ಚಾಗಿ ಬೇಕಾಗುವುದು. ಅಂತಹ ಸಹಕಾರ ಕೊಡಲಿರುವ ಸೋದರಿಯೆರು ಜಯಂತಿಯ ಸಂಪಾದಕರಿಗೆ ಕಾಗದ ಬರೆದು ತಿಳುಹಬೇಕು. ಹೆಚ್ಚು ಜನರಿಂದ ಸಹಕಾರ ದೊರೆವ ಆಶ್ವಾಸನ ದೊರೆತರೆ, ಬೇಗನೆ ಈ ವಿಭಾಗವನ್ನು ಪ್ರಾರಂಭಿಸಲಾಗುವುದು.

ಸಂಪಾದಕ ' ಜಯಂತಿ ' **ಧಾರವಾಡ**

ಚಂದಾದಾರರ ಅರಿಕೆಗಾಗಿ

★

ಅಂಚೆಯ ರಜಿಸ್ಟ್ರೇಶನ್ ವೆಚ್ಚ ಈಗ ಮೊದಲಿಗಿಂತ ಒಂದು ಆಣೆ ಹೆಚ್ಚಾಗಿದೆ; ಎಂದರೆ ನಾಲ್ಕಾಣೆಯಾಗಿದೆ. ಜಯಂತಿಯನ್ನು ವ್ಹಿ. ಪಿ. ಮೂಲಕ ಅಪೇಕ್ಷಿಸುವವರು, ಈ ನಾಲ್ಕಾಣೆಯ ವೆಚ್ಚವನ್ನು ವ್ಯರ್ಥವಾಗಿ ವಹಿಸುವುದಕ್ಕಿಂತ, ತಂತಮ್ಮ ಚಂದಾಹಣವನ್ನು ಸಕಾಲದಲ್ಲಿ ಮನಿಯಾರ್ಡರ್ ಮೂಲಕ ಕಳುಹಿಸುವುದು ಅನುಕೂಲ. ಜೂನ್ ಸಂಚಿಕೆಯಿಂದ ಜಯಂತಿಯ ೧೧ನೆಯ ವರ್ಷ ಪ್ರಾರಂಭವಾಗುವುದು. ಹೊಸವರ್ಷದ ಎಲ್ಲ ಚಂದಾದಾರರೂ ಚಂದಾಹಣವನ್ನು ಮನಿಯಾರ್ಡರ್ ಮೂಲಕ ಕಳುಹಿಸಿ, ನಾಲ್ಕಾಣೆಯ ಉಳಿತಾಯಮಾಡಿಕೊಳ್ಳಬೇಕಾಗಿ ವಿನ್ನಹ.

ವ್ಯವಸ್ಥಾಪಕ ' ಜಯಂತಿ ' **ಧಾರವಾಡ**



ವಾರ್ಷಿಕ ಚಂದಾ
೪—೮—೦

ಪ್ರತಿತಿಂಗಳ ೧೫ನೆಯ ತಾರೀಖಿಗೆ
ಪ್ರಕಟವಾಗುವುದು.

ಜಯಂತಿಯ ಹತ್ತುವರ್ಷಗಳು

(ಸಂಪಾದಕೀಯ)

ಇದೀಗ, ಜಯಂತಿಯ ಹತ್ತನೆಯ ವರ್ಷದ ಕೊನೆಯ ಸಂಚಿಕೆಯನ್ನು ಕನ್ನಡಿಗರ ಕೈಯಲ್ಲಿ ಅರ್ಪಿಸಲು ತುಂಬ ಆನಂದವೆನಿಸುತ್ತದೆ. ೧೯೩೭ನೆಯ ಮೇ ಸಂಚಿಕೆಯು ಜಯಂತಿಯ ಮೊದಲನೆಯ ವರ್ಷದ ಮೊದಲನೆಯ ಸಂಚಿಕೆ. ಮೂರನೆಯ ವರ್ಷದ ಕೊನೆಯ ಭಾಗದಲ್ಲಿ ಜಯಂತಿಗೊಂದು ಸಂಕ್ರಮಣ ಕಾಲ ಒದಗಿತು. ಅದರಲ್ಲಿ ಜಯಂತಿ ಬದುಕಿ ಮುಂದುವರೆವುದೋ ಇಲ್ಲವೋ—ಎಂಬ ಸಂದಿಗ್ಧ ಪರಿಸ್ಥಿತಿಯಿರುವಾಗ, ಹೊಸದೊಂದು ಸಂಚಾಲಕ ಮಂಡಲಿ ಸಿದ್ಧವಾಗಿ ಜಯಂತಿಯ ಪ್ರಕಾಶನ ವ್ಯವಸ್ಥೆಯನ್ನು—೧೯೪೧ನೆಯ ಏಪ್ರಿಲ್ ತಿಂಗಳಲ್ಲಿ—ತನ್ನ ಕಡೆಗೆ ತೆಗೆದುಕೊಂಡಿತು. ಈ ಮಂಡಲಿ ಎಲ್ಲ ಏರ್ಪಾಡನ್ನೂ ಮಾಡಿಕೊಂಡು ಪ್ರತ್ಯಕ್ಷ ಕೆಲಸ ಕೈಕೊಳ್ಳಲು ಅವಧಿ ಬೇಕಾದುದರಿಂದ, ಜಯಂತಿಯ ೪ನೆಯ ವರ್ಷಾರಂಭದ ಸಂಚಿಕೆ ೧೯೪೧ ಜೂನ್ ತಿಂಗಳಲ್ಲಿ ಪ್ರಕಟವಾಯಿತು; ಅಂದಿನಿಂದ ಇಂದಿನ ವರೆಗೂ—ಬಂದೊದಗಿದ ಎಂತೆಂತಹ ಗಂಡಾಂತರಗಳನ್ನೂ ಎದುರಿಸುತ್ತ—ಪ್ರತಿತಿಂಗಳೂ, ಕಾಲಕ್ಕೆ ಸರಿಯಾಗಿ ಜಯಂತಿ ತನ್ನ ಸೇವೆಯನ್ನು ಸಲ್ಲಿಸುತ್ತ ಬಂದಿದೆ.

*

ಹೊಸ ಸಂಚಾಲಕ ಮಂಡಲಿ ಜಯಂತಿಯನ್ನು ಕೈಗೆ ತೆಗೆದುಕೊಳ್ಳುತ್ತಿದ್ದ ಕಾಲವೆಂದರೆ: ಭಾರತಕ್ಕೆ ಮಹಾಯುದ್ಧದ ಕಾವು ಕ್ರಮವಾಗಿ ತಗಲಲು ಪ್ರಾರಂಭವಾದ ಕಾಲ. ಈ ಕಾವು ಎಲ್ಲಕ್ಕೆಂತ ಮೊದಲು ಮುದ್ರಣದ ಉಪಕರಣಗಳ ಮೇಲೆಯೆ ತನ್ನ ಪ್ರಭಾವವನ್ನು ಬೀರಿತ್ತು. ಆದುದರಿಂದಲೆ ಕೊಡುತ್ತೇವೆಂದು ಮಾತುಕೊಟ್ಟ ಕಾಗದ ವ್ಯಾಪಾರಿಗಳು, ಕಳ್ಳಸೇಟಿಯ ವ್ಯವಹಾರಕ್ಕೆ ಗಂಟುಬಿದ್ದು, ಕಾಗದ ಕೊಡಲೆ ಇಲ್ಲ. ಸೇಟಿಯಲ್ಲಿ ಒಂದು ಕಟ್ಟು ಕಾಗದ ಕೂಡ ಕಣ್ಣಿಗೆ ಕಾಣುತ್ತಿದ್ದಿಲ್ಲ. ಸರಕಾರದವರನ್ನು ಕೇಳಿದರೆ, ಅವರಿಂದಲೂ ಕಾಗದದ ಪೂರೈಕೆಯ ನೆರವು ಸಿಕ್ಕಲಿಲ್ಲ. ಇಂತಹ ಕಾಲದಲ್ಲಿ ೧ ರೂ. ೮ ಆಣೆ—೧ ರೂ. ೧೦ ಆಣೆಗೆ ಒಂದು ಪೌಂಡಿನಂತೆ ಕಾಗದ ತೆಗೆದುಕೊಂಡು ಪತ್ರಿಕೆ ನಡೆಯಿಸಿದೆವು, ಒಂದು ಫಾರ್ಮಿನ ಕಾಗದ ಧಾರವಾಡದಲ್ಲಿ ದೊರೆತರೆ, ಇನ್ನೊಂದು ಫಾರ್ಮಿನ ಕಾಗದಕ್ಕೆ ಬೆಳಗಾಂವಿಗೆ ಓಡಬೇಕಾಗುತ್ತಿತ್ತು; ಮತ್ತೊಂದು ಫಾರ್ಮಿಗಾಗಿ ಸೊಲ್ಲಾಪುರಕ್ಕೆ ಹೋಗಬೇಕಾಗುತ್ತಿತ್ತು. ಸಾಕಷ್ಟು ಕಾಗದ ದೊರೆಯದುದರಿಂದ ಕೆಲವು ದಿನ ಏಜನ್ಸಿ, ವ್ಯವಹಾರವನ್ನೆಲ್ಲ ನಿಲ್ಲಿಸಿ, ಕೇವಲ ಚಂದಾದಾರರ ಸಂಖ್ಯೆಯಷ್ಟು ಮಾತ್ರ ಸಂಚಿಕೆಗಳನ್ನು ಪ್ರಕಟಿಸಬೇಕಾಯಿತು. ಹೇಗಾದರೂ ಮಾಡಿ ಜಯಂತಿಯನ್ನು—ಈ ಕುತ್ತದ ಕಾಲದಿಂದ—ಬದುಕಿಸುವುದೇ ಸಂಚಾಲಕ ಮಂಡಲಿಯ ಗುರಿಯಾಗಿದ್ದಿತು.

ಆವುದರಿಂದ ಈ ಕಾಲದಲ್ಲಿ ಜಯಂತಿಯ ಆದಾಯಕ್ಕೂ ವೆಚ್ಚಕ್ಕೂ ಮೇಳ ಬೀಳದೆ ಹೋಗಿ, ೨ ಸಾವಿರ ರೂಪಾಯಿಗಳ ಸಾಲದ ಹೊರೆ ಹೊರಬೇಕಾಯಿತು. ಅಂದು ಹೊತ್ತ ಹೊರೆ ಇನ್ನೂ ಪೂರ್ತಿ ಬಾಗುತ್ತ, ಜಯಂತಿಯ ಮೇಲೆ ಹಾಗೆಯೆ ಕುಳಿತಿದೆ.

* * * *

ಸರಕಾರ ಮುಂದೆ ಕಾಗದದ ನೆರವನ್ನು ಒದಗಿಸಿಕೊಟ್ಟಿತಾದರೂ ಜಯಂತಿಗೆ ಪುಟಗಳ ನಿರ್ಬಂಧವನ್ನು ಹಾಕಿತು : ೧೮—೨೦ ಪುಟಗಳಿಗಿಂತ ಹೆಚ್ಚಾಗಿ ಸಂಚಿಕೆಗಳು ಇರಕೂಡದೆಂದು. ಸರಕಾರ ಕೊಟ್ಟ ವರಮಿಟ್ಟಿನ ಕಾಗದ ದೊರೆಕಿಸಬೇಕಾದರೂ ನಮಗೆ ಒಂದಕ್ಕೆ ಎರಡರಷ್ಟು ಬೆಲೆ ತೆರಬೇಕಾಗುತ್ತಿತ್ತು. ಪುಟಗಳ ನಿರ್ಬಂಧದಿಂದ ಜಯಂತಿ ಸೊರಗಬೇಕಾಯಿತು. ಅಷ್ಟು ಚಿಕ್ಕ ಸಂಚಿಕೆಯನ್ನೂ ಮೊದಲಿನ ಬೆಲೆಗೆ ಕೊಡಲು ಸಾಧ್ಯವಿಲ್ಲದೆ ಹೋದುದರಿಂದ, ಬೆಲೆ ಹೆಚ್ಚಿಸಬೇಕಾಯಿತು. ಮೊಪಲಿನ ತುಂಬಿದ ವೈಯ ಜಯಂತಿಯನ್ನು ನೋಡಿದವರಿಗೆ, ಸೊರಗಿದ ನೈಯ—ಹೆಚ್ಚಿದ ಬೆಲೆಯ—ಸಂಚಿಕೆಗಳು ಕಣ್ಣಿಗೆ ತುಂಬದಾದುವು. ಚಂದಾದಾರರು ಕಡಿಮೆಯಾಗತೊಡಗಿದರು. ಮಾರಾಟ ಕಡಿಮೆಯಾಗತೊಡಗಿತು. ಇಂತಹ ಕಾಲದಲ್ಲಿಯೂ ಜಯಂತಿಯ ಮೇಲಿನ ಅಭಿಮಾನ ವಿಶ್ವಾಸಗಳಿಂದ, ಕೆಲವು ಜನರಾದರೂ ಚಂದಾದಾರರಾಗಿ—ಗ್ರಾಹಕರಾಗಿ—ಉಳಿದುದು ವಿಶೇಷ. ಈ ಕೆಲವು ಜನ ಅಭಿಮಾನಿಗಳೇ ಜಯಂತಿಯನ್ನು ಇದುವರೆಗೆ ಬದುಕಿಸಲು ಕಾರಣರಾಗಿ ಇದ್ದಾರೆಂದು ಹೇಳಬಹುದು.

* * * *

ಈ ಹತ್ತು ವರ್ಷಗಳಲ್ಲಿ ಜಯಂತಿಯ ಆಶೆಗೆ ಕಾರಣರಾಗಿರುವ ಅಭಿಮಾನಿ ಕನ್ನಡಿಗರಿಂದ ನೆರವು ದೊರೆತಂತೆ, ಅನೇಕ ಜನರು ಕೊಡಬೇಕಾದ ಹಣ ಮುಳುಗಿಸಿಕೊಂಡು ನಿರಾಶೆಗೊಳಿಸಲು ನೆರವಾಪುದೂ ಉಂಟು. ಬಹಳ ದೊಡ್ಡ ಮನುಷ್ಯರೆನಿಸಿಕೊಳ್ಳುವವರೂ ಕೊಡಬೇಕಾಗಿದ್ದ ಚಂದಾಹಣ ಕೊಡಲಿಲ್ಲ. ನಂಬಿಗೆಯಿಂದ ವ್ಯವಹಾರ ನಡೆಯಿಸಿದ ಕೆಲವು ಜನ ಏಜಂಟರೂ ವಿಶ್ವಾಸದ ದುರುಪಯೋಗ ಮಾಡಿಕೊಂಡು, ಹಣಕೊಡದೆ ಮೋಸಗೊಳಿಸಿದರು. ತುಂಬ ನಂಬುಗೆಯವನೆಂದು ನಡೆದುಕೊಂಡ ಕಾರ್ಯಾಲಯದ ಆಳೊಬ್ಬನು ಕೂಡ, ವಸೂಲು ಮಾಡಿದ್ದ ಹಣವನ್ನು ಕಾರ್ಯಾಲಯದಲ್ಲಿ ಜಮೆಮಾಡದೆ ಹೊರಟು ಹೋದ. ಇವೆಲ್ಲವುಗಳ ಪರಿಣಾಮವಾಗಿ ಜಯಂತಿಯ ಆರ್ಥಿಕ ಪರಿಸ್ಥಿತಿಯಾಗ ಸ್ವಲ್ಪವೂ ಆಶಾದಾಯಕವಾಗಿಲ್ಲ. ಸದ್ಯದ ಜಾಗತಿಕ ಆರ್ಥಿಕ ಸಂಕಟವು ಜಯಂತಿಯ ಆಕೆಯ ಮೇಲೆ ಆಗಾಗ ಏಟುಗಳನ್ನು ಹಾಕುತ್ತಲಿದೆ. ಆದರೂ ಜಯಂತಿಯ ಸಂಚಾಲಕ ಮಂಡಲಿಗೆ ಒಳ್ಳೆಯ ಭವಿಷ್ಯದ ಆಶೆ ಕಡಿಮೆಯಾಗಿಲ್ಲ. ಆದುದರಿಂದಲೆ ಅವರು— ಸದ್ಯದ ಸಾಲದ ಹೊರೆಯನ್ನು ಹೊತ್ತುಕೊಂಡೂ— ಜಯಂತಿಯನ್ನು ಮುಂದುವರಿಸಲು ಧೈರ್ಯಮಾಡುತ್ತಿದ್ದಾರೆ. ಸಹೃದಯ ಕನ್ನಡಿಗರು ಔದಾರ್ಯದಿಂದ ನೋಡಿ, ಜಯಂತಿಯ ತಲೆಯ ಮೇಲಿನ ಸಾಲದ ಹೊರೆಯನ್ನು ಇಳುಹಿದರೆ, ಅದರ ಕಾರ್ಯೋತ್ಸಾಹ ಇನ್ನೂ ಹೆಚ್ಚುವುದು. ತನ್ನ ಆದರ್ಶವನ್ನು ಸಾಧಿಸಲು ಜಯಂತಿಗೆ ತುಂಬ ಅನುಕೂಲವಾಗುವುದು.

* * *

ಜಯಂತಿಯ ಸಾಲ ತೀರಿಸುವ ಕಾರ್ಯದಲ್ಲಿ ನೆರವಾಗುವುದೆಂದರೆ ಪುಕ್ಕಟೆಯಾಗಿ ಹಣಕೊಡಬೇಕೆಂದು ಯಾರೂ ಅರ್ಥ ಮಾಡಿಕೊಳ್ಳಲಾಗದು. ಜಯಂತಿಯ ಚಂದಾದಾರರನ್ನು ಹೆಚ್ಚಿಸಿದರೂ, ಜಯಂತಿಗೆ ಜಾಹೀರಾತುಗಳನ್ನು ಒದಗಿಸಿಕೊಟ್ಟರೂ, ಅಲ್ಲಲ್ಲಿ ಏಜಂಟರಾಗಿದ್ದು ಜಯಂತಿಯ ಪ್ರಚಾರಕರಾಗಿದ್ದರೂ ಅದಕ್ಕೆ ಆರ್ಥಿಕ ಸಹಾಯ ಸಲ್ಲಿಸಿದಂತಾಗುವುದು. ಹೊಸವರ್ಷದಲ್ಲಿ ನಮ್ಮ ಅಭಿಮಾನಿಗಳ ಬಳಗ ಈ ಬಗೆಯ ಸಹಕಾರ ಕೊಟ್ಟರೆ, ಜಯಂತಿಯ ಸಂಚಿಕೆಗಳನ್ನು ಇನ್ನೂ ಸುಂದರಗೊಳಿಸಿ, ಪುಷ್ಟಗೊಳಿಸಿ, ಕೊಡಲಿಕ್ಕೆ ನಾವು ಪ್ರಯತ್ನಿಸುವೆವು. 'ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ'

* * *

ಜಯಂತಿ ತನ್ನ ಹತ್ತು ವರ್ಷಗಳ ಜೀವನದಲ್ಲಿ ಮಾಡಿದ ಕೆಲಸವು ಅಷ್ಟಿಷ್ಟಲ್ಲ. ಹಲವು ಜನ ಹೊಸ ಲೇಖಕರನ್ನು ರಂಗದ ಮೇಲೆ ತಂದು, ಅವರಿಗೆ ಹೆಸರುವಾಸಿಯನ್ನು ದೊರೆಕಿಸಿಕೊಡಲು ಜಯಂತಿಯೆ ಕಾರಣವಾಗಿದೆ. ಇಂದು ಪ್ರಕಟವಾಗುವ ಕವಿತಾ-ಸಂಗ್ರಹ, ಕಥಾಸಂಗ್ರಹ, ಪ್ರಬಂಧಸಂಗ್ರಹ, ಏಕಾಂಕಸಂಗ್ರಹಗಳನ್ನು ನೋಡಿದರೆ, ಅವುಗಳ ಲೇಖಕರಲ್ಲಿ ಬಹುಸಂಖ್ಯಾಕರು, ಜಯಂತಿಯ ಪ್ರೋತ್ಸಾಹ-ಪ್ರಚೋದನೆಗಳಿಂದಲೆ ಮುಂದೆ ಬಂದವರೆಂಬ ಮಾತು ಸ್ಪಷ್ಟನಾಗಿ ಗೊತ್ತಾಗುವುದು. 'ಹೊಸಲೇಖಕರು ಎಲ್ಲಿಯೂ ಕಾಣಲೊಲ್ಲರಲ್ಲಾ!' ಎಂದು ಕನ್ನಡ ಹಿರಿಯರು ಕಳವಳಿಸುತಿದ್ದ ಕತ್ತಲೆಯ ಕಾಲದಲ್ಲಿಯೆ, ಜಯಂತಿ ಕೈಹಿಡಿದು ಮೈದಡಹಿ, ಒಬ್ಬೊಬ್ಬರನ್ನಾಗಿ ತರುಣರನ್ನು ಗುಣವರಿತು ಮುಂದೆ ತಂದು, ಅವರನ್ನು ಲೇಖಕರನ್ನಾಗಿ ರೂಪುಗೊಳಿಸಿತು. ಗುಣವು ಕಂಡುಬಾರದ ಅಭಾಸಲೇಖಕರನ್ನು—ಅನಿವಾರ್ಯವಾಗಿ—ನಿರಾಶೆಗೊಳಿಸಬೇಕಾಗಿ ಬಂದುದರಿಂದ, ಕೆಲವೊಂದು ಸಲ ಜಯಂತಿ ಅಂತಹ ಲೇಖಕರ ಕೋಪ-ಶಾಪಗಳಿಗೆ ಕಾರಣವಾಗಬೇಕಾಯಿತು. ಇದು ವಿಷಾದದ ವಿಷಯವಾದರೂ ಸತ್ಯ ಸಂಗತಿ. ಕೈಗೆ ಬಂದುದನ್ನೆಲ್ಲ ಪ್ರಕಟಿಸುತ್ತ ಹೋದರೆ, ಜಯಂತಿಗೆ ತನ್ನ ಆದರ್ಶ ಸಾಧಿಸಲಿಕ್ಕೆ ಸಾಧ್ಯವಾಗದೆಂದು ಯಾವಾಗಲೂ ಎನಿಸುತ್ತಿದೆ. ನಿರಾಶೆಗೊಂಡ ಲೇಖಕವರ್ಗ ಉದ್ದೇಶದ ಕಡೆಗೆ ವೃಷ್ಟಿಯಿರಿಸಿ, ಜಯಂತಿಯನ್ನು ಕಡೆಗಣ್ಣಿಂದ ನೋಡಬಾರದಾಗಿ ಹಾರಯಿಕೆ.

* * * *

ಹತ್ತು ವರ್ಷಗಳಲ್ಲಿ ಜಯಂತಿ ತನ್ನ ವಾಚಕರಿಗೆ ಡೆ. ೫ ವ ೫೫೫ ಪುಟಗಳಷ್ಟು ಓದುವ ವಿಷಯಗಳನ್ನು ಒದವಿಸಿದೆ. ಹತ್ತೂ ಸಂಪುಟಗಳನ್ನು ಕಟ್ಟಿಸಿ ಇಟ್ಟವರಿಗೆ ಜಯಂತಿ ಎಷ್ಟೊಂದು ಜ್ಞಾನ-ಭಾಂಡಾರವನ್ನು ಒದವಿಸಿಕೊಟ್ಟಿದೆಯೆಂಬ ಸಂಗತಿ ಅನುಭವ-

ದಿಂದಲೇ ಗೊತ್ತಾಗುವುದು. ಈ ಭಾಂಡಾರದಲ್ಲಿ ೨೫೦ ಕ್ಕಿಂತ ಹೆಚ್ಚಾಗಿ, ಆಯ್ದ ಉತ್ತಮ ಸಣ್ಣಕತೆಗಳಿವೆ. ೫೦೦-೬೦೦ ಕ್ಕಿಂತ ಹೆಚ್ಚಾಗಿ ರಸವತ್ತಾದ ಕವನಗಳಿವೆ. ನೂರಾರು ಲಘು ಪ್ರಬಂಧ, ಹರಟೆಗಳಿವೆ. ಹಲವು ಏಕಾಂಕ ನಾಟಕಗಳಿವೆ. ದೇಶ-ವಿದೇಶದ ಸುಪ್ರಸಿದ್ಧ ವ್ಯಕ್ತಿಗಳ ಪರಿಚಯಾತ್ಮಕ ಲೇಖನಗಳು ೧೫೦ಕ್ಕಿಂತ ಹೆಚ್ಚಾಗಿವೆ. ವಿವಿಧ ವಿಷಯದ ಪರಿಚಯಾತ್ಮಕ ಲೇಖನಗಳು ಸಾವಿರಕ್ಕೆ ಮಿಕ್ಕಿ ಪುಟಗಳನ್ನು ತುಂಬಿವೆ. ಹಾಸ್ಯಪ್ರಬಂಧ, 'ನಗೀಗೆ ನೈವೇದ್ಯ'ಗಳು ನೂರಾರು ಪುಟಗಳಷ್ಟಿವೆ. ಕರ್ನಾಟಕದ ಭಾರತದ ರಾಜಕಾರಣದ ಚರ್ಚೆ-ವಿಚರ್ಚೆಗಳೂ, ಸಂಪಾದಕೀಯ ಲೇಖನಗಳೂ ಕಳೆದ ಹತ್ತು ವರ್ಷಗಳ ಚರಿತ್ರೆಯನ್ನು ಅಭ್ಯಾಸಿಸಬೇಕೆನ್ನುವವರಿಗೆ ಸಾಕಷ್ಟು ಸಹಾಯ ಮಾಡುವಂತಿವೆ. ಸಾಹಿತ್ಯ-ವಿಹಾರ, ಪುಸ್ತಕ ವಿಮರ್ಶೆ, ಸಾದರ ಸ್ವೀಕಾರದ ಪುಟಗಳು, ಆಧುನಿಕ ಸಾಹಿತ್ಯದ ಅಭ್ಯಾಸಿಗಳಿಗೆ ತುಂಬ ಸಹಕಾರ ಕೊಡುವಂತಿವೆ. ನೂರಾರು ರೂಪಾಯಿ ವೆಚ್ಚಮಾಡಿದರೂ ಸಿಕ್ಕಲಾರದಷ್ಟು ಗುಣ-ಮಾತ್ರ ಬಹುಲತೆಯುಳ್ಳ ಸಾಹಿತ್ಯವನ್ನು ಜಯಂತಿ ೩೫-೪೦ ರೂಪಾಯಿಗಳ ಸುಲಭ ಬೆಲೆಯಲ್ಲಿ ಒದಗಿಸಿಕೊಟ್ಟಿದೆ. ಈ ಮಾಡಿರುವ ಕಾರ್ಯದ ಕಡೆಗೆ ಲಕ್ಷ್ಯಕೊಟ್ಟರೂ, ಕನ್ನಡಿಗರು ಜಯಂತಿಯ ಅಸ್ತಿತ್ವದ ಬಗೆಗೆ ಆಸ್ಥೆಯನ್ನು ವಹಿಸಬೇಕೆಂಬ ಮಾತು ಸ್ಪಷ್ಟವಾಗುವುದು.

* * * *

ಹೊಸ ವರ್ಷದಲ್ಲಿ ಆರ್ಥಿಕ ಅನುಕೂಲತೆಯುಂಟಾದರೆ, ಜಯಂತಿಯಲ್ಲಿ ಹಲವು ಬಗೆಯ ಅಂತರಂಗ-ಬಾಹ್ಯಾಂಗ ಸೌಂದರ್ಯಗಳನ್ನು ಹೆಚ್ಚಿಸಬೇಕೆಂದು ಆಶೆಯಿದೆ. ಜಯಂತಿಯ ಸಂಚಾಲಕ ಮಂಡಲಿ ವ್ಯವಹಾರ ದೃಷ್ಟಿಯಿಂದ ಈ ಪತ್ರಿಕೆಯನ್ನು ನಡೆಯಸುತ್ತಲಿಲ್ಲವೆಂಬ ಮಾತನ್ನು ನಾವು ಆಗಾಗ ಹೇಳುತ್ತ ಬಂದಿದ್ದೇವೆ. ಲಾಭದ ಆಶೆ ಅದಕ್ಕೆ ಇಲ್ಲವಾದರೂ ಇನ್ನೂ ಹೆಚ್ಚಾಗಿ ಕಾಲದ ಹೊರೆ ಹೊರಲಿಕ್ಕೆ ಮಾತ್ರ ಸಾಧ್ಯವಿಲ್ಲ. ಈಗ ಜಯಂತಿಯ ಪ್ರಗತಿಯ— ಅಷ್ಟೇ ಅಲ್ಲ— ಅಸ್ತಿತ್ವದ ಹೊಣೆಯೆಲ್ಲ ಕನ್ನಡಿಗರನ್ನವಲಂಬಿಸಿ ನಿಂತಿದೆ. ಅವರಿಗೆ ಬೇಕಾಗಿದ್ದರೆ 'ಜಯಂತಿ' ತನ್ನ ಸೇವೆ ಸಲ್ಲಿಸಲು ಯಾವಾಗಲೂ ಸಿದ್ಧವಿದೆ.

* * * *

ಜಯಂತಿಯ ಹತ್ತನೆಯ ವರ್ಷದಲ್ಲಿ, ಜಯಂತಿಗೆ ನೆರವಿತ್ತ ಮಹನೀಯರಿಗೆಲ್ಲ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸುವುದು ಈಗ ಕೊನೆಯ ಮಾತಾಗಿ ಉಳಿದಿದೆ. ಯಾವ ಬಗೆಯ ಪ್ರತಿಫಲವನ್ನೂ ಬಯಸದೆ, ತಮ್ಮ ಅತ್ಯುತ್ತಮ ಲೇಖನಗಳಿಂದ ಜಯಂತಿಯ ಪುಟಗಳ ಬೆಲೆಯನ್ನು ಹೆಚ್ಚಿಸುತ್ತಿರುವವರು ನಮ್ಮ ಲೇಖಕರು. ಈ ನಿಷ್ಕಾಮಕರ್ಮಿಗಳಿಗೆ ಕೃತಜ್ಞತೆಯ ವಂದನೆಗಳನ್ನಲ್ಲದೆ ಇನ್ನೇನನ್ನೂ ಸಲ್ಲಿಸಲಿಕ್ಕೆ ನಮಗೆ ಸಾಧ್ಯವಿಲ್ಲ.

ಸದ್ಯದ ದಿನಗಳಲ್ಲಿ ಮುದ್ರಣಕಾಗದ ಸುಲಭವಾಗಿ ಸಿಕ್ಕುವುದು ಅಸಾಧ್ಯ. ಆದರೆ ನಮಗದನ್ನು ಸುಲಭಸಾಧ್ಯ ಮಾಡಿಕೊಟ್ಟಿರುವ 'ಸಂಯುಕ್ತ ಕರ್ನಾಟಕ' ಸಂಚಾಲಕರ ಉಪಕಾರ ತುಂಬ ಹಿರಿಯದು. ಈ ಸಹಕಾರಕ್ಕಾಗಿ ಅವರಿಗೆ ಹೃತ್ಪೂರ್ವಕ ವಂದನೆಗಳು.

ಮುದ್ರಣದ ವೆಚ್ಚ ಮೊದಲಿಗಿಂತ ಮುಮ್ಮಡಿಯಷ್ಟು ಹೆಚ್ಚಿದುದಕ್ಕೆ ಪರಿಸ್ಥಿತಿಯು ಕಾರಣ. ಆದರೂ ಇದ್ದುದರಲ್ಲಿಯೆ ಸಾಧ್ಯವಿದ್ದಷ್ಟು ಸೌಲಭ್ಯವನ್ನೊದಗಿಸಿ, ಸಮಯಕ್ಕೆ ಸರಿಯಾಗಿ ಮುದ್ರಿಸಿಕೊಡುತ್ತಿರುವ ಕರ್ನಾಟಕ ಪ್ರಿಂಟಿಂಗ್ ವರ್ಕ್ಸಿನ ಒಡೆಯರಾದ ಶ್ರೀ. ವಿ. ವೈ. ಜತ್ತಾರ ಅವರ ಉಪಕಾರವೂ ಸ್ಮರಣೀಯವಾದುದು.

ಕೆಲವು ಜನ ಏಜಂಟರು ನಮ್ಮನ್ನು ಮೋಸಗೊಳಿಸಿದ್ದರೂ ಇದುವರೆಗೆ ವಿಶ್ವಾಸದಿಂದ ವ್ಯವಹಾರ ನಡೆಯಿಸಿದ ಏಜಂಟರು ಹಲವು ಜನರಿದ್ದಾರೆ. ಅವರ ವಿಶ್ವಾಸಕ್ಕಾಗಿ ನಾವು ತುಂಬ ಕೃತಜ್ಞರಾಗಿದ್ದೇವೆ.

ಜಯಂತಿಯ ಮುಖ್ಯ ಆಧಾರಸ್ತಂಭಗಳೆಂದರೆ ನಮ್ಮ ಚಂದಾದಾರರು. ಅವರು ಇನ್ನಿಷ್ಟು ಜನರನ್ನು ತಮ್ಮ ಜೊತೆಗೆ ಸೇರಿಸಿಕೊಂಡು, ಆ ಆಧಾರಸ್ತಂಭದ ಶಕ್ತಿಯನ್ನು ಇನ್ನೂ ಹೆಚ್ಚಿಸಬೇಕೆಂಬ ಹಾರಯಿಕೆಯೊಂದಿಗೆ, ನಮ್ಮ ಒಲವಿನ ವಂದನೆಗಳನ್ನವರಿಗೆ ಒಪ್ಪಿಸುವೆವು.

ಜಯಂತಿಯ ಹೊಸ ವರ್ಷದಲ್ಲಿ ನಾವೆಲ್ಲರೂ ಶಾಂತಿ-ಪುಷ್ಟಿ-ತುಷ್ಟಿಗಳನ್ನು ಸಂಪಾದಿಸೋಣ.

ವಂದೇಮಾತರಂ

—ಸಂಪಾದಕರು.

ಆಶಾಚಾತಕ ★ ಶ್ರೀ. ಕೆ. ಕೆ. ಅವಧಾನಿ, ಬಿ.ಎ.

ಕಂಬನಿಯ ಸೈರಿಸೆಲೆ ಚಾತಕವೆ,
ಕಾಲ ಬರುವನಕ ನೀ ತಡೆದು ನೋಡು !
ಉರಿವ ಬಿಸಿಲನ್ನೆಲ್ಲ ಸಹಿಸಿ ನಿಲ್ಲು,
ಬಿಸಿಲುಗುದುರೆಯನೇರಿ ಪಯಣ ಹೊರಡು !
ಬಿಸಿಯುಸಿರ ಕರೆಯದಿರು ಚಾತಕವೆ !

ಪಯಣವದು ಮುಗಿಯುವೆಡೆ ನೀರ ಹನಿ
ಸಾಕನಿತು ದೊರೆವುದಿದು ನಿಶ್ಚಿತವು ;
ಹರಿವ ಹೊಳೆಗೂ ಉಂಟು ಅಡೆ-ತಡೆಯು....
ಬಂಡೆ-ಗುಡ್ಡಗಳೆದ್ದು ನಿಂದರೇನು ?
ಪಥವೊಂದನದು ಪಡೆದೆ ತೀರುವುದು.

ಗಾಂಧಿಯವರನ್ನು ಕೊಂದವರು ಯಾರು ?

ಬೀರಣ್ಣನನ್ನು ಹೀಗೆ ಕೇಳುವವರು ಬಹಳವಾಗಿದ್ದಾರೆ. ನಿಜವಾಗಿಯೂ ಹೀಗೆ ಕೇಳುವಂತೆಯೆ ಆಗಿದೆ—ಇಂದಿನ ದೇಶದ ಪರಿಸ್ಥಿತಿ. ಅಹಿಂಸೆಯನ್ನು ಖಂಡಿತವಾಗಿ ಬೋಧಿಸುತ್ತಿದ್ದ ಮಹಾತ್ಮರ ಶಿಷ್ಯರೆನಿಸಿಕೊಳ್ಳುವವರು, ಅಹಿಂಸೆಯನ್ನು ಎಂದೂ ಕಲಿಯಲಿಲ್ಲ. 'ಮಹಾತ್ಮಾ ಗಾಂಧೀ ಮಹಾರಾಜಕೀ ಜಯ್' ಎನ್ನುತ್ತಲೆ ಕಳವು-ಕೊಲೆ-ಸುಲಿಗೆಗಳನ್ನು ನಡಿಸಿದ್ದಾರೆ. ಜಾತ್ಯತೀತರಾಗಬೇಕೆಂದು ಉಪದೇಶಿಸುತ್ತಿದ್ದ ಮಹಾತ್ಮರ ಮಾತನ್ನು ಯಾರೂ ಕಿವಿಗೆ ಹಾಕಿಕೊಳ್ಳಲಿಲ್ಲ. ಆದುದರಿಂದಲೆ ಇಂದು ಸರಕಾರದ ಒಳಗೂ ಹೊರಗೂ ಗಾಂಧೀ ಅನುಯಾಯಿಗಳಲ್ಲಿಯೆ ಜಾತೀಯ ಜಗಳ ತೀಕ್ಷ್ಣವಾಗಿ ನಡೆದಿದೆ. ಅಸ್ಪೃಶ್ಯತೆಯನ್ನು ಹಿಡಿಯಬೇಕೆಂಬುದು ಮಹಾತ್ಮರ ಅವಿರತವಾದ ಬೋಧನೆ. ಆದರೆ ಮಹಾತ್ಮರ ಬಳಿಯಿರುವ ಪಟ್ಟಶಿಷ್ಯರೆನಿಸಿಕೊಳ್ಳುವವರೇ ಕಳ್ಳಸೇಟಿ-ಲಂಚಗಳಿಂದ ಸಿರಿವಂತಿಕೆಯ ಶಿಖರಕ್ಕೇರಿದ್ದಾರೆ. ಗುರುವಿನ ಉಪದೇಶವನ್ನು ಅಚರಣೆಯಲ್ಲಿ ತಾರದ ಶಿಷ್ಯ, ಪರ್ಯಾಯದಿಂದ ಗುರುವಿನ ಕೊಲೆಯನ್ನೇ ಮಾಡಿದಂತೆ. ಹಾಗೆಯೆ ಗಾಂಧಿಯವರ ಕೊಲೆಯನ್ನು ಮಾಡಿದವರು ನಾಡಿನಲ್ಲಿಯ ಗಾಂಧಿಯವರ ಶಿಷ್ಯ ವರ್ಗದವರೇ ಎಂದು ಬೀರಣ್ಣನ ಅಭಿಪ್ರಾಯ. ಬೇಕಾದರೆ ಕೊಲ್ಲಾಪುರದ ಮಾಧವರಾವ್ ಬಾಗಲರನ್ನೂ ಪುಣೆಯ ಜೇಧೆಯವರನ್ನೂ ಕೇಳಿರಿ. ಅಲ್ಲಲ್ಲಿಯ ಕಾಂಗ್ರೆಸ್ ಪಕ್ಷದ ಮಂತ್ರಿಗಳನ್ನೂ ಲೊ. ಬೊ, ಮು.ಪಾ. ಅಧ್ಯಕ್ಷ-ಜೇರಮನರನ್ನೂ ದೇವರಾಣೆಯಿಟ್ಟು ಕೇಳಿರಿ.

ಗುರುವಿನ ಮ್ಹಾರತರೆ ಮ್ಹುರುಳೇ ನಿನಗೆ
ದ್ಹೊರೆವುಧ್ಯಾಂಗ ಮ್ಹುಕುತೀ....?

* * *

ಮಂತ್ರಿಗಳ ಸಂಚಾರ

ಮುಂಬಯಿ ಮಂತ್ರಿಗಳು ಇನ್ನೇನು ಮಾಡದೆ ಹೋದರೂ ಪ್ರಾಂತಸಂಚಾರವನ್ನು ಮಾತ್ರ ರಭಸದಿಂದ ನಡಿಸಿದ್ದಾರೆ. ಇದಕ್ಕೆ ಕಾರಣವೇನಾದರೂ ಉಂಟೆ ? ಇದರಿಂದ ಉಪಯೋಗವೇನಾದರೂ ಇದೆಯೆ ?—ಎಂದೊಬ್ಬ ಜಿಜ್ಞಾಸು ಬೀರಣ್ಣನನ್ನು ಕೇಳಿದ್ದಾನೆ. ಬೀರಣ್ಣ ಹೀಗೆ ಉತ್ತರ ಬರೆಯುತ್ತಾನೆ :

" ಹಿಂದೆ ಮೇಲಿನ ಅಧಿಕಾರಿಗಳು ಬಂದಾಗ ಮಾನ-ಸನ್ಮಾನಗಳನ್ನು ಸಲ್ಲಿಸುತ್ತಿದ್ದ ಮುಂದಾಳುಗಳೇ ಇಂದು ಮಂತ್ರಿಗಳಾಗಿ ಇರುವುದರಿಂದ, ತಮಗೂ ಅಂತಹ ಮಾನ-ಸನ್ಮಾನ ದೊರೆಯಬೇಕೆಂಬ ಅಪೇಕ್ಷೆಯಿಂದ ಅವರು ಆಗಾಗ ಬರುತ್ತಾರೆ ಎಂದು ಭಾವಿಸುವ ಜನರು ಕಡಿಮೆಯಿಲ್ಲವಾದರೂ, ಇದೊಂದು ಮುಖ್ಯ ಕಾರಣವಲ್ಲವೆಂದು ನನ್ನ ಅಭಿಪ್ರಾಯ. ಮಂತ್ರಿಗಳ ಸಂಚಾರಕ್ಕೆ ಮುಖ್ಯ ಕಾರಣವೆಂದರೆ ನಮ್ಮ ಸರಕಾರದ ಹೊಸ ಯೋಜನೆಗಳು. ಈ ಯೋಜನೆಗಳಿಗಾಗಿ ಸರಕಾರದ ಬಜೆಟ್ಟಿನಲ್ಲಿ ಬೇರೆ ಬೇರೆ ಹಣದ ಮೊತ್ತ ಮಂಜೂರಾಗಿರುತ್ತದೆ. ಅದನ್ನು ಹೇಗೆ ಹೇಗೆ ವೆಚ್ಚ ಮಾಡಬೇಕೆಂಬುದನ್ನು ನೋಡಿಕೊಂಡು ಹೋಗಲು, ಮಂತ್ರಿಗಳು ಮೇಲೆ ಮೇಲೆ ಸಂಚಾರಕ್ಕೆ ಏಳುವರು. ಇರುವವರಿಗೆ ಇದರಿಂದ ಪ್ರಯೋಜನವಿದ್ದೇ ಇದೆ. ಸ್ಥಳೀಯ ಕಾಂಗ್ರೆಸ್ ಅಧಿಕಾರಿಗಳಿಗೆ ವೈಭವದ ಮೆರವಣಿಗೆ, ಸವಿ ಸವಿ ತಿಂಡಿ-ತಿನಿಸು ಸಿಕ್ಕುವುದು. ಅವರ ಸಂಬಂಧಿಕರ ಮುದ್ರಣಾಲಯಗಳಲ್ಲಿ ಮಾನಪತ್ರ ಮುದ್ರಿಸುವುದರಿಂದ ಅವರಿಗೆ ಧನಲಾಭವಾಗುವುದು. ಮಾಲ್-ಗಾರರ ವ್ಯಾಪಾರ ಹೆಚ್ಚುವುದು. ಮಂತ್ರಿಗಳೊಂದಿಗೆ ಅನಿವಾರ್ಯವಾಗಿ ಸುತ್ತ ಬೇಕಾಗಿ ಬರುವ ನೌಕರದಾರರಿಗೆ ಕೆಲಸ ಮಾಡದೆ ಸಂಬಳ ಸಿಕ್ಕುವುದು.... ಸಾಕೋ ಇನ್ನೂ ಬೇಕೋ ? "

* * *

ಅಂಬೇಡಕರರ ಹುಂಬ ಹಂಬಲ

ಕಾಂಗ್ರೆಸ್ ಸರಕಾರಗಳು ಅಸ್ಪೃಶ್ಯತೆಯನ್ನು ಹೋಗಲಾಡಿಸಿ ಅಸ್ಪೃಶ್ಯರನ್ನು ಒಳಗೆ ಕರೆದುಕೊಳ್ಳಬೇಕೆಂದರೆ, ಅಂಬೇಡಕರರು 'ಅಸ್ಪೃಶ್ಯರು ನಾವು ಅಸ್ಪೃಶ್ಯರಾಗಿಯೇ ಉಳಿಯೋಣ' ಎಂದು ಉಪದೇಶಿಸುತ್ತ ಹೊರಟಿದ್ದಾರೆ. ಹಿಂದುಸ್ತಾನವನ್ನು ಜಾತ್ಯತೀತ ಮಾಡಬೇಕೆಂದು ಕಾಂಗ್ರೆಸಿಗರು ಹೊರಟಿದ್ದರೆ, ಅಸ್ಪೃಶ್ಯ ಜಾತಿಯನ್ನು ಕೊನೆಯವರೆಗೂ ಕಾಯ್ದುಕೊಳ್ಳಬೇಕೆಂಬುದು ಅಂಬೇಡಕರರ ಅಧಿಕಾರವಾಣಿ. ಬಾದಾಮಿಯ ಬನಶಂಕರಿ! ಗದುಗಿನ ವೀರನಾರಾಯಣ! ನೀವಿನ್ನು ಅಸ್ಪೃಶ್ಯರ ದರ್ಶನ ಸೌಖ್ಯಕ್ಕಾಗಿ ಆತುರರಾಗಬೇಡಿರಿ. ಅಧಿಕಾರದ ಮಂಕು ಹಿಡಿದಿರುವ ಅಂಬೇಡಕರ ಮಹಾಮಂತ್ರಿಗಳು ನಿಮ್ಮ ದರ್ಶನಕ್ಕೆ ತಮ್ಮ ಅನುಯಾಯಿಗಳನ್ನೇನೂ ಬಿಡುವುದಿಲ್ಲ. ಕೆಲವೊಂದು ಜನರ ಅಧಿಕಾರಗಳಿಗಾಗಿ, ಅಸ್ಪೃಶ್ಯರೆಲ್ಲ ಈಗಿದ್ದ ಗುಡಿ-ಸಿಲು-ಗೂಡುಗಳಲ್ಲಿಯೆ ಇರಬೇಕೆಂದು ಅವರು ಹೇಳುವರು. ಹೌದು! ಕುರಿಗಳು ಕುರಿಗಳಾಗಿ ಇರದಿದ್ದರೆ ನಾಯಿಗೆಲ್ಲಿ ರಕ್ಷಕನ ಅಧಿಕಾರ ಸಿಕ್ಕುವುದು ?

ದನಗಾಹಿ

ಮಾನವತೆಯ ವಿಕಾಸಕ್ರಮವೆಂದರೆ ಅದೊಂದು ಆಧ್ಯಾತ್ಮಿಕ ತಪಸ್ಸು. ಈ ತಪಸ್ಸಿಗೆ ಓದು ಬೇಕಿಲ್ಲ; ಬರೆಹ ಬೇಕಿಲ್ಲ. ಒಳ್ಳೆಯ ವಾತಾವರಣ ಸಿಕ್ಕಿದರೆ, ಗಂಗಣ್ಣನಂತಹ ದನಗಾಹಿಯೂ ಪೂರ್ಣ-ಮಾನವನಾಗಿ ಸಿದ್ಧನಾಗಬಹುದು!

(ಸಣ್ಣಕತೆ)

'ಆನಂದಕಂದ' ಬರೆದುದು

'ದನಗಾಂಯಿ' ಎಂಬುದೊಂದು ನಮ್ಮ ನಾಡಿನಲ್ಲಿ ಬೈಗುಳ ಮಾತಾಗಿ ರೂಢವಾಗಿದೆ. 'ದನಗಾಂಯಿ' ಎಂದರೆ ಬುದ್ಧಿಯಿಲ್ಲದವ—ಎಂದು ಅರ್ಥ. ಒಂದು ವಿಚಿತ್ರ ನೋಡಿ: ನಿಜವಾಗಿಯೂ ಬೈಗುಳ ಮಾತಾಗಿದ್ದ 'ಬೆರಿಕೆ' 'ಗುಲಾಮ' 'ಹರಾಮಿ' 'ಲುಚ್ಚಾ' 'ಖದೀಮ್' ಮೊದಲಾದ ಪದಗಳು ನಮ್ಮಲ್ಲಿ ಹೊಗಳಿಕೆಯ ಮಾತಾಗಿ ಬಳಕೆಯಲ್ಲಿದ್ದರೆ, 'ದನಗಾಂಯಿ' 'ಕುರುಬ' 'ಕುಂಬಾರ' ಮೊದಲಾದ ಉದ್ಯೋಗವಾಚಕ ಪದಗಳು, ತೆಗಳಿಕೆಯ ಪ್ರತಿನಿಧಿಗಳಾಗಿ ಜನರ ಬಾಯಲ್ಲಿ ಇವೆ. ಇದರ ಅರ್ಥವಿಷ್ಟೇ: ಮೈಗಳ್ಳನಾಗಿದ್ದು ಮೋಸ-ಕವಡುಗಳಿಂದ ಹೊಟ್ಟೆ ತುಂಬಿಕೊಳ್ಳುವುದು ನಮ್ಮ ಜನಕ್ಕೆ ಬುದ್ಧಿವಂತಿಕೆಯಾಗಿ ತೋರಿತು; ಮೈಮುರಿಯೆ ದುಡಿದು ಕಷ್ಟದಿಂದ ಹೊಟ್ಟೆ ತುಂಬಿಕೊಳ್ಳುವುದು ಪಡ್ಡಿತನವಾಗಿ ತೋರಿತು.

ಇದಕ್ಕೆ ಪ್ರತ್ಯಕ್ಷ ಉದಾಹರಣೆಯೆಂದರೆ ಶ್ರೀಮಾನ್ ಅಂಗಡಿ ವಕೀಲರು ಮತ್ತು ಅವರ ಮನೆಯ ಆಳು ಗಂಗಣ್ಣ. ಇವರಿಬ್ಬರ ಬದುಕನ್ನು ತೂಗಿ ತೋಡಿದರೆ, ನಮ್ಮ ಸಮಾಜ ಯಾವ ಸುಟ್ಟದಲ್ಲಿದೆಯೆಂಬುದು ಒಡೆದು ಕಾಣುವುದು.

ಶ್ರೀ. ಅಂಗಡಿ ವಕೀಲರು ಕ್ರಿಮಿನಲ್ ಮೊಕದ್ದಮೆಗಳನ್ನು ನಡೆಸುವುದರಲ್ಲಿ ಹೆಸರುವಾಸಿಯನ್ನು ಪಡೆದವರು. ಎಂತೆಂತಹ ಕಳ್ಳರು–ಕೊಲೆಗಾರರನ್ನೂ ತಮ್ಮ ಬುದ್ಧಿವಂತಿಕೆಯಿಂದ ನಿರಪರಾಧಿಗಳನ್ನಾಗಿಸಿದ ಕೀರ್ತಿ ಇವರಿಗಿದೆ. ಇವರ ಬುದ್ಧಿಶಾಲಿತ್ವದ ಫಲವಾಗಿ, ಎರಡೆರಡು ಮೂರುಮೂರು ಸಲ ಖೂನಿ ಮಾಡಿ ಬದುಕಿ ಉಳಿದಿರುವ ಹಲವು ಜನ ಬಂಟರು, ಜೇರೆ ಹೊಸಬೇಟೆಗಳನ್ನು ಹುಡುಕುತ್ತ ತಿರುಗುತ್ತಿದ್ದಾರೆ.

ತಮ್ಮ ಕಡೆಗೆ ಬಂದ ಅಪರಾಧಿಯನ್ನು ಉಳಿಸುವುದಕ್ಕಾಗಿ ಈ ವಕೀಲರು, ಸುಳ್ಳುಹೇಳುವ ಸಾಕ್ಷೀದಾರರನ್ನು ಹೇಗೆ ಹೇಗೆ ತಯಾರು ಮಾಡುತ್ತಾರೆ; ಹೇಗೆ ಹೇಗೆ ತರಬಿಯತ್ತು ಗೊಳಿಸುತ್ತಿರುತ್ತಾರೆ! ಯಾವ ಚಾಣಾಕ್ಷ ಶಿಕ್ಷಕನೂ ಇವರ ಶಿಕ್ಷಣ ಕ್ರಮವನ್ನು ಸರಿಗಟ್ಟಲಾರ. ಈ ಸುಳ್ಳುಗಾರ ವಿದ್ಯಾರ್ಥಿಗಳೇ— ವಕೀಲರ ಬಳಿ ಬಳುವ — ಎಂತೆಂತಹ ಅಪರಾಧಿಗಳನ್ನೂ ಬದುಕಿಸುತ್ತಾರೆ; ವಕೀಲರ ಮನೆಯನ್ನು ಸಂಪತ್ತಿನಿಂದ ತುಂಬಿ ತುಳುಕಿಸುತ್ತಾರೆ. ಈ ಸುಳ್ಳಿನ ಶಿಕ್ಷಣದ ಉದ್ಯೋಗದಿಂದಲೆ ಇವರು ನಗರದಲ್ಲಿ ಮನೆಮಾಡಿ ಮಾನ್ಯರೆನಿಸಿಕೊಂಡರು. ನುನೆಯ ಮೇಲೆ ಹೊಸ-ಹೊಸತಾಗಿ ಮಾಳಿಗೆಗಳನ್ನು ಏರಿಸಿದರು. ಬ್ಯಾಂಕುಗಳ ಡೈರೆಕ್ಟರರಾದರು. ಕಂಪನಿ-ಕಾರಖಾನೆಗಳಲ್ಲಿ ಪಾಲುಗಾರರಾದರು. ನಗರಸಭೆಯ ಅಧ್ಯಕ್ಷರೂ ಆದರು. ಎಲ್ಲೆಲ್ಲಿಯೂ ಇವರಿಗೆ ಮಾನ-ಸನ್ಮಾನಗಳು; ಬೆತನ ಉಪಚಾರಗಳು.

ಇನ್ನು ಗಂಗಣ್ಣನ ವಿಚಾರ: ಇವನು ವಕೀಲರ ಮನೆಯಲ್ಲಿ ದನಗಾಹಿಯಾಗಿ ಇದ್ದಾನೆ. ಒಂದೇ ಒಂದು ಸಲ ಇವನು ಸುಳ್ಳು ಹೇಳಲಿಕ್ಕೆ ಮನಸ್ಸು ಮಾಡಿದ್ದರೆ, ತನ್ನ ಊರಲ್ಲಿಯೆ ಸ್ವತಂತ್ರನಾಗಿ–ತನ್ನ ಮನೆಯ ಯಜಮಾನನಾಗಿ–ಬಾಳಬಹುದಾಗಿತ್ತು. ಬಯಸಿದ ಹೆಣ್ಣು ಇವನ ಮನೆಗೆ ಬಂದು, ಒಲವಿನ ಹೊಳೆಯಲ್ಲಿ ಓಲಾಡಬಹುದಾಗಿತ್ತು. ಆದರೆ ಈ 'ದನಗಾಂಯಿ' ಸುಳ್ಳು ಹೇಳಲಿಕ್ಕೆ ಸಿದ್ಧನಾಗಲಿಲ್ಲ. ಆದ್ದರಿಂದಲೆ ತನ್ನ ಜೀವನದ ಸವಿಗನಸನ್ನೆಲ್ಲ ಹಾಳುಮಾಡಿಕೊಂಡ; ತನ್ನವರಿಗೆ ವಿರೋಧಿಯಾಗಿ ಇದ್ದ ಮನೆಮಾರನ್ನು ಕಳೆದುಕೊಂಡು, ಇನ್ನೊಬ್ಬರ ಮನೆಯಲ್ಲಿ ಊಳಿಗಕ್ಕೆ ನಿಂತುಕೊಂಡ;

ಗಂಗಣ್ಣ ಬಳೆದು ದೊಡ್ಡವನಾದ ಊರು ಗೊಲ್ಲಹಳ್ಳಿ. ಚಿಕ್ಕತನದಲ್ಲಿಯೆ ತಂದೆ-ತಾಯಿಗಳನ್ನು ಕಳೆದುಕೊಂಡ ಆ ದೇಸಿಗನನ್ನು, ಅವನ ತಾಯಿಯ ತಾಯಿ ಗೌರಜ್ಜಿ, ಗೊಲ್ಲಹಳ್ಳಿಗೆ ಕರೆದುಕೊಂಡು ಬಂದಳು. ಪ್ರೀತಿಯಿಂದ ಸಾಕಿ ಅವನನ್ನು ದೊಡ್ಡವನನ್ನಾಗಿ ಮಾಡಿದಳು. ಈ ಮೊಮ್ಮಗನ ಹೊರತು ಮುದುಕಿಗೆ ಇನ್ನಾರೂ ಇರಲಿಲ್ಲ. ಹಳ್ಳಿಯಲ್ಲಿ ಸ್ವಂತದ ಮನೆಯಿದ್ದಿತು; ಎರಡು ಕೂರಿಗೆ ಯಷ್ಟು ಎರೆಯ ಹೊಲವಿದ್ದಿತು. ಮನೆಯಲ್ಲಿ ಎಮ್ಮೆ-ಆಕಳುಗಳನ್ನು ಸಾಕಿಕೊಂಡು ಮುದುಕಿ, ಹಾಲು-ಬೆಣ್ಣೆಗಳ ವ್ಯಾಪಾರವನ್ನೂ ಮಾಡುತ್ತಿದ್ದಳು. ತನ್ನೆಲ್ಲ ಬದುಕನ್ನೂ ಮೊಮ್ಮಗನ ಹೆಸರಿಗೆ

ಮಾಡಿ, ಅವನನ್ನು ಊರಲ್ಲೊಂದು ಒಕ್ಕಲನ್ನಾಗಿ ಮಾಡಬೇಕೆಂದು ಗೌರಜ್ಜಿಯ ಹಾರಯಿಕೆ.

ಮನೆಯಲ್ಲಿ ಮಾಡುವವರಾರೂ ಇರದುದರಿಂದ, ಗೌರಜ್ಜಿಯ ಹೊಲವನ್ನು—ಮೊದಲಿನಿಂದಲೂ—ಅವಳ ದೂರದ ದಾಯಾದಿ ಶಿವರಾಯ ಪಾಲಿನಿಂದ ಮಾಡಿದ್ದ. ಗಂಗಣ್ಣ ಬಂದ ಮೇಲೂ ಅವನೇ ಮಾಡುತ್ತಲಿದ್ದ. ಮನೆಗೆ ಬಂದಂದು ಮೊದಲುಗೊಂಡು ಗಂಗಣ್ಣ, ಮನೆಯ ದನಗಳನ್ನು ಮೇಯಿಸಿಕೊಂಡು ಬರುವ ಕೆಲಸವನ್ನು ತಾನೆ ವಹಿಸಿಕೊಂಡಿದ್ದ. ಮೊದಮೊದಲು ಗೌರಜ್ಜಿ ಜೊತೆಗೆ ಹೋಗುತ್ತಿದ್ದಳು; ರೂಢಿಯಾದಂತೆ ಗಂಗಣ್ಣ ಒಬ್ಬನೆ ಹೋಗತೊಡಗಿದ.

ಮುದುಕಿ ತನ್ನ ಪ್ರೀತಿಯ ಮೊಮ್ಮಗನಿಗೆ ಬಯಸಿದುದನ್ನು ಮಾಡಿ ಬುತ್ತಿಕಟ್ಟಿಕೊಡುತ್ತಿದ್ದಳು. ಗಂಗಣ್ಣ ವೇಳೆಗೆ ಸರಿಯಾಗಿ ದನಗಳನ್ನು ಕಾಡಿಗೆ ಅಟ್ಟಿಕೊಂಡು ಹೋಗಿ ಪ್ರೀತಿಯಿಂದ ಮೇಯಿಸುವ; ತಿಳಿನೀರ ತೊರೆಯಲ್ಲಿ ನೀರನ್ನು ಕುಡಿಸಿ ವಿಾಯಿಸುವ; ಸಂಜೆಯ ಸೂರ್ಯ ಪಡುವಣ ಬಾನಿನಲ್ಲಿ ಚೆಂದೂಳಿಯಾಟವಾಡುತ್ತಿರುವಾಗ, ದನಗಳನ್ನು ಅಟ್ಟಿಕೊಂಡು ಮನೆಯ ಕಡೆಗೆ ಬರುವ.

ಸಂಜೆಯ ಊಟ ಮುಗಿಸಿ ಮುದುಕಿ, ಮೊಮ್ಮಗ ಸೇರಿ ಮುಮ್ಮನೆಯಲ್ಲಿ ಕೂಡುವರು. ಆಗ ಮುದುಕಿ ಪಾಂಡವರ ಕತೆ, ರಾಮನ ಕತೆ, ಹರಿಶ್ಚಂದ್ರರಾಯನ ಕತೆ, ಕುಮಾರ ರಾಮನ ಕತೆ, ಕರಿಬಂಟನ ಕತೆ—ಇವುಗಳಲ್ಲಿ ಯಾವುದಾದರೊಂದನ್ನು ರಸದುಂಬಿ ಹೇಳುವಳು. ಕೊನೆಗೆ ಕತೆಯಲ್ಲಿಯ ನೀತಿಯನ್ನು ವಿವರಿಸುವಳು. ಇನ್ನೊಂದೊಂದು ದಿನ ಬದುಕಿನ ಅನುಭವ ವಚನಗಳನ್ನೂ ಸರ್ವಜ್ಞನ ತುಣುಕುಪದ್ಯಗಳನ್ನೂ ತನ್ನ ಹಳ್ಳಿಯ ಮಾತಿನಲ್ಲಿ ಹೇಳಿ ಅರ್ಥ ವಿವರಿಸುವಳು. ಇದನ್ನೆಲ್ಲ ಕೇಳಿಕೇಳಿ ಗಂಗಣ್ಣ, ತನ್ನ ಎಣೆಯ ಪಟವ ಮೇಲೆ ಏನೇನನೋ ಮೂಡಿಸಿ ಮೂಡಿಸಿ ಇರಿಸಿಕೊಳ್ಳುತ್ತಿದ್ದ.

ದನ ಕಾಯಲಿಕ್ಕೆ ಹೋದಾಗ ಗಂಗಣ್ಣ ಸುಮ್ಮಗಿರುತ್ತಿದ್ದನೇನು? ಮಧ್ಯಾಹ್ನ ನೀರು ಕಂಡಲ್ಲಿ ಈಜಾಡಿ ಸ್ನಾನ ಮಾಡುತ್ತಿದ್ದ. ಬಟ್ಟೆಬರೆ ಹಸನಾಗಿ ಒಗೆದುಕೊಳ್ಳುತ್ತಿದ್ದ. ಗೆಳೆಯರೊಂದಿಗೆ ಕುಳಿತು—ಕೊಟ್ಟು, ಕೊಂಡು—ಊಟ ಮಾಡುತ್ತಿದ್ದ. ಬಿಸಿಲು ಇಳಿದು ತಂಪಾದಾಗ, ಕಾಡಿನಲ್ಲಿಯೆ ಕಣ ಮಾಡಿ ಗೆಳೆಯರೊಂದಿಗೆ ಕುಸ್ತಿಯಾಟ ಆಡುತ್ತಿದ್ದ. ಅಜ್ಜಿ ನೀಡುವ ಒಲವಿನೂಟ, ಪ್ರಕೃತಿಯೊಂದಿಗೆ ಆಟಪಾಟ—ಇದರಿಂದ ಗಂಗಣ್ಣನ ಮೈ ಹುರಿಗೊಂಡು ಬಳೆಯುತ್ತಲಿತ್ತು.

* * * *

ಶಿವರಾಯನ ಎರಡನೆಯ ಮಗಳು ದೇವಮ್ಮ, ಎಳೆಯತನದಿಂದಲೂ ಅಜ್ಜಿಯ ಮನೆಯಲ್ಲಿ ಆಟವಾಡುತ್ತ ಬಳೆದ ಹುಡುಗಿ. ಗಂಗಣ್ಣ ದೇಸಿಗನಾಗಿ ಅಜ್ಜಿಯ ಮನೆಗೆ ಬಂದಾಗ, ಅವನಿಗೆ ೯-೧೦ ವರ್ಷದ ವಯಸ್ಸು; ಆಗ ದೇವಮ್ಮ ನಾಲ್ಕೈದು ವರ್ಷದ ಎಳಸುಗು. ಜೀವಕ್ಕೊಂದು ಜೊತೆ ಬೇಕೆಂದು ಗೌರಜ್ಜಿ ಈ ಮಗುವನ್ನು ಹಚ್ಚಿಕೊಂಡಿದ್ದಳು. ಈಗ ಗಂಗಣ್ಣ ಬಂದ ಮೇಲೆ ಆ ಹಚ್ಚಿಕೊಂಡ ಸಂಬಂಧ ಬಿಡಲಿಲ್ಲ. ಆಗಾಗ ಮನೆಗೆ ಬಂದ ದೇವಮ್ಮ ತನ್ನ ಆಟ-ನೋಟಗಳನ್ನು ನಡೆಯಿಸುತ್ತಿದ್ದಳು.

ಆ ನಿಂಬೆಹಣ್ಣಿನ ಬಣ್ಣದ ಎರಳೆಗಣ್ಣಿನ ಬಿಡಗಿನ ಹುಡುಗಿಯನ್ನು ಕಂಡರೆ, ಮೊದಲಿನಿಂದಲೂ ಗಂಗಣ್ಣನಿಗೆ ಪ್ರೀತಿ. ಅವಳನ್ನು ಮುದ್ದಿಟ್ಟು ಎತ್ತಿಕೊಳ್ಳುವನು. ತನ್ನ ಎಮ್ಮೆ-ಆಕಳುಗಳನ್ನು ತೋರಿಸುವನು. ಒಮ್ಮೊಮ್ಮೆ ಜೊತೆಗೆ ಊಟಕ್ಕೆ ಕರೆದುಕೊಳ್ಳುವನು. ಕಾಡಿನಿಂದ ತಂದ ಬೋರೆಯ ಹಣ್ಣು-ಕಾರೆಯ ಹಣ್ಣುಗಳನ್ನೂ ಚಂಡುಹೂ-ದಂಡೆಹೂಗಳನ್ನೂ ಅವಳಿಗೆ ಮೆಚ್ಚಕೊಡುವನು. ಇವರಿಬ್ಬರ ಪ್ರೀತಿಯನ್ನು ಕಂಡಾಗ, ಮುದುಕಿ ಸುಮ್ಮನೆ ಕುಳಿತು ಮನದಲ್ಲಿ ಏನೇನನೋ ಭಾವಿಸುತ್ತಿದ್ದಳು; ಒಮ್ಮೊಮ್ಮೆ ನಿಡಿದಾಗಿ ಉಸಿರುಹಾಕುತ್ತಿದ್ದಳು; ಮತ್ತೊಮ್ಮೆ ಸಮಾಧಾನದ ಮೆಲುನಗೆ ನಗುತ್ತಿದ್ದಳು.

ಕಾಲದ ಮಹಾಪ್ರವಾಹದಲ್ಲಿ ಮನುಷ್ಯವ್ಯಕ್ತಿಗಳ ಬಾಲ್ಯ ಕಳೆದು ತಾರುಣ್ಯ ಬರುವುದೆಂದರೆ ಅಷ್ಟೆಷ್ಟು ಹೊತ್ತಿನ ಕೆಲಸ? ನಿತ್ಯ ಸೂರ್ಯ, ನಿತ್ಯದ ಚಂದ್ರ; ನಿತ್ಯದ ಹಗಲು, ನಿತ್ಯದ ಇರುಳು ನಿತ್ಯದ ಕೂಳು, ನಿತ್ಯದ ನೀರು! ಆದರೂ ಯಾರಿಗೂ ತಿಳಿಯದಂತೆಯೆ ಮಾನವನ ದೇಹ-ಮನಸ್ಸುಗಳು ಹೇಗೊ ಹೇಗೊ ಬಳೆಯುತ್ತವೆ— ಎಳೆಯತನ ಕಳೆದು ಬೆಳೆಯತನ ಬರುತ್ತದೆ ಬೆಳೆತನವನ್ನು ಬಿಟ್ಟು ಅದು ಕೆಳೆತನವನ್ನು ಹಾರಯಿಸತೊಡಗುತ್ತದೆ.

ಗಂಗಣ್ಣನಿಗೆ ಇಪ್ಪತ್ತು ವರ್ಷಗಳು ತುಂಬಿದುವು. ದೇವಕ್ಕನಿಗಾ ಹದಿನೈದು ತುಂಬಿ ಹದಿನಾರು ನಡೆದಿತ್ತು. ಈ ಅವಧಿಯ, ದೇವಕ್ಕನನ್ನು ಬೇಡಲು ಎಲ್ಲೆಲ್ಲಿಂದಲೋ ಯಾರುಯಾರೊ ಬಂದುಹೋದರು. ಆದರೆ ಏನೇನೋ ಅಡೆತಡೆಗಳು ಒದಗಿ, ಒಂದು ಕಡೆಗೂ ಸಂಬಂಧ ಕೂಡಿಬರಲಿಲ್ಲ. ಬೇಡಲಿಕ್ಕೆಂದು ಮನೆಗೆ ಯಾರಾದರೂ ಬಂದ ದಿನ, ದೇವಕ್ಕನಿಗೆ ಉತ್ಸಾಹವೇ ಇರುತ್ತಿರಲಿಲ್ಲ. ಅಂದು ಗೌರಜ್ಜಿಯ ಮನೆಯ ಕಡೆಗೂ ಆಕೆ ಹೋಗುತ್ತಿರಲಿಲ್ಲ. ಗಂಗಣ್ಣನ ಮನಸ್ಸಿಗೆ ಆ ದಿನವೆಲ್ಲ ಮುಳ್ಳು ಚುಚ್ಚಿದಂತೆ ಆಗುತ್ತಿತ್ತು. ಸಂಬಂಧ ಕೂಡಿಬರಲಿಲ್ಲವೆಂಬ ವರ್ತಮಾನ ತಿಳಿದಾಗ ದೇವಕ್ಕನ ಮುಖ ಹಿಗ್ಗಿ ಇಷ್ಟಗಲವಾಗುತ್ತಿತ್ತು. ಓಡಿಬಂದ ಗೌರಜ್ಜಿಯ ಮುಂದೆ ಈ ವಿಷಯ ಹೇಳುವಳು. ಅಜ್ಜಿ ನಿರಾಶೆಯ ಆತಂಕದ ಬೆಳಕನ್ನು ಕಂಡಂತೆ ಸಮಾಧಾನದ ನಗೆ ನಗುವಳು. ಗಂಗಣ್ಣ ಮಾತನೇನೂ ಆಡುತ್ತಿರಲಿಲ್ಲವಾದರೂ, ಉರಿಯವನೋ ತಣ್ಣಗಾದಂತೆ ತಣಿವನ್ನು ಅನುಭವಿಸುತ್ತಿದ್ದ.

ಆಗಾಗ ದೇವಕ್ಕ ತನ್ನ ಕಳ್ಳಗಣ್ಣುಗಳಿಂದ ಗಂಗಣ್ಣನ ಮೊಗವಿನಾಸೆಮೂಡಿಪ ತುಂಬುಮೊಗವನ್ನೂ, ಅಗಲವಾದ ಕೆಚ್ಚೆದೆಯನ್ನೂ ಪುರಿಕಟ್ಟಾದ ತೋಳುಗಳನ್ನೂ ನೋಡುವಳು. ಗಂಗಣ್ಣ ಕದ್ದು ಕದ್ದು ದೇವಕ್ಕನ ಮುಂಗುರುಳ ಸುಳಿಗಳನ್ನೂ, ಕೆಣಕುನಗೆ ಕುಣಿ

ಳೆದುಟಯನ್ನೂ, ತಾರುಣ್ಯ ಗುಡಿಗಟ್ಟಿದಂತಿರುವ ಉಬ್ಬಿದ ಎದೆಯನ್ನೂ ನೋಡುವನು. ನೋಡಿ ನೋಡಿ ಇಬ್ಬರೂ ಒಳಗೊಳಗೆ ವಿಸಿಯುಸಿರನ್ನು ಹಾಕುವರು. ಅನುಭವಿಕಳಾದ ಗೌರಜ್ಜಿಗೆ ಇವರ ಕಣ್ಣುಮುಚ್ಚಾಟ ಗೊತ್ತಾಗದೆ ಇರುವುದೆ? ಈ ಕಳ್ಳಾಟ ಗೊತ್ತಾದ ಮೇಲೆ ಅವಳಿಗೆ ಸುಮ್ಮಗಿದ್ದು ಬಿಡಲಿಕ್ಕೆ ಆಗುವುದೆ?

ದೇವಮ್ಮನನ್ನು ಗಂಗಣ್ಣನಿಗೆ ಕೊಡುವಂತೆ ಗೌರಜ್ಜಿ, ಶಿವರಾಯನನ್ನೂ, ಅವನ ಹೆಂಡತಿ ಗಿರಿಜವ್ವನನ್ನೂ ಕೇಳಿದಳು. ಮುದುಕಿಯ ಮನೆ, ಹೊಲ, ಮಾಡಿಟ್ಟ ಗಂಟು ಇವೆಲ್ಲವನ್ನೂ ತಿನ್ನಾಗಿ ಅರಿತಿದ್ದ ಆ ಗಂಡ-ಹೆಂಡಿರು, ವಿಚಾರಮಾಡಿದಂತೆ ಕಟಸಿ, ಆಗಬಹುದೆಂದು ಒಪ್ಪಿಗೆ ಕೊಟ್ಟರು. ಈ ವಾರ್ತೆ ಆಳಿದ ದಿನ ದೇವಕ್ಕನಿಗೆ ಜಗತ್ತೆಲ್ಲ ಆನಂದದಿಂದ ಕುಣಿಯುತ್ತಿರುವಂತೆ ಕಂಡಿತು. ಗಂಗಣ್ಣನಿಗೆ ದನಗಳನ್ನು ಮೇಯಲಿಕ್ಕೆ ಬಿಡಬೇಕೆಂಬ ಎಚ್ಚರೂ ಇರಲಿಲ್ಲ.

ಬೇಸಗೆಯಲ್ಲಿ ಮದುವೆ ಮಾಡಬೇಕೆಂಬುದು ಗೊತ್ತಾಯಿತು. ಒಳ್ಳೆಯ ದಿನ ನೋಡಿ, ಸಂಪ್ರದಾಯದಂತೆ 'ಭಷ್ಟಿಗೆ'ಯ ಕಾರ್ಯ ಮಾಡಿಸಬೇಕೆಂದೂ ಮಾತನಾಡಿದರು. ಗಂಗಣ್ಣ-ದೇವಕ್ಕ ಇವರ ಸಂಸಾರವನ್ನು ಕಣ್ಣಾರೆ ಕಾಣುವೆನೆಂದು ಗೌರಜ್ಜಿ ಹಿರಿಹಿರಿ ಹಿಗ್ಗುತ್ತಿದ್ದಳು. ಆ ಒಳ್ಳೆಯ ದಿನದ ಹಾರಯಿಕೆಯಲ್ಲಿ, ಬಂದ ದಿನಗಳನ್ನು ಒಂದೊಂದಾಗಿ ನೂಕುತ್ತಲಿದ್ದಳು.

ಇದ್ದುದಿದ್ದ ಹಾಗೆಯೆ ಗೌರಜ್ಜಿ ಜ್ವರಬಂದು ನುಲಗಿದಳು. ಒಳ್ಳೆಯ ವೈದ್ಯರಾಜ ಕಟ್ಟಿನ ಜ್ವರವೆಂದು ಹೆಸರಿಟ್ಟ. ಕಷಾಯ-ಗುಳಿಗೆ-ಪುಡಿಗಳನ್ನು ಕೊಡಲು ತೊಡಗಿದ. ಯಾವುದಕ್ಕೂ ಜ್ವರವು ಕರಿಯಲಿಲ್ಲ. ಸನ್ನಿಪಾತವಾಗಿ ಮುದುಕಿ ಬಡಬಡಿಸ ತೊಡಗಿದಳು. ಜನರೆಲ್ಲ ಗಾಳಿಯಾಗಿದೆಯೆಂದರು. ಮಂತ್ರವಾದಿಗಳು ಬಂದು ಪಿಪ್ಪ ಬಿಡಿಸುವ ತಂತ್ರಗಳನ್ನು ನಡೆಯಿಸಿದರು. ಈ ತಂತ್ರಗಳ ಸೊನೆಯೊಂದಿಗೆ ಮುದುಕಿಯ ಜೀವಯಂತ್ರ ನಿಂತುಹೋಯಿತು. ಗಂಗಣ್ಣ ತುಂಬ ಅತ್ತ. ಮರಣೋತ್ತರ ಕಾರ್ಯಗಳೆಲ್ಲ ಒಂದೊಂದಾಗಿ ನಡೆದುವು.

ಮುದುಕಿಯ ಅಗಲಿಕೆ ಗಂಗಣ್ಣನಿಗೆ ಭೂತಕಾಲದ್ದಾಗುತ್ತ ಬಂದಿತು. ಭವಿಷ್ಯತ್‌ಕಾಲದ ದೇವಕ್ಕನ ಸಹವಾಸಸುಖದ ಚಿತ್ರಣೆ, ಈ ಭೂತಕಾಲದ ದುಃಖದ ಮೇಲೆ ತೆರೆಯನ್ನು ಹಾಕಲಾರಂಭಿಸಿತು. ಮನೆಯ ಎಲ್ಲ ಹೊರೆ ತನ್ನಮೇಲೆ ಬಿದ್ದ ಚಿಂತೆಯನ್ನೂ, ಅವನ ಭವಿಷ್ಯತ್‌ಸುಖದ ಆಶೆ ಕಡಿಮೆಮಾಡುತ್ತಿತ್ತು.

* * * *

ಶಿವರಾಯನ ಹೊಲದ ಸೀಮೆಯ ವಿಷಯದಲ್ಲಿ, ಅವನಿಗೂ ನೆರೆಯ ಹೊಲದ ಭೀಮಪ್ಪನಿಗೂ ಬಹುದಿನಗಳಿಂದ ಜಗಳ ನಡೆದಿದ್ದಿತು. ಊರ ಗೌಡ-ಕುಲಕರ್ಣಿಯರು ಇಬ್ಬರ ಕಡೆಯಿಂದಲೂ ಲಂಚ ತಿಂದು, ಈ ಸೀಮೆಯ ಸಮಸ್ಯೆಯನ್ನು ಇನ್ನಿಷ್ಟು ಪೆಚ್ಚಿಸಿದ್ದರು. ಶಿವರಾಯನನ್ನು ಕಂಡಾಗ ಅವರು, 'ನಿನ್ನದೇ ಸರಿ! ಹೆದರಬೇಡ!' ಎಂದು ಹೇಳುತ್ತಿದ್ದರು. ಭೀಮಪ್ಪ ಬೆಟ್ಟಿಯಾದಾಗ 'ನೀನು ಹಿಂಜರಿಯಬೇಡ; ನಾವಿದ್ದೇವೆ' ಎಂದು ಬೋಧಿಸುತ್ತಿದ್ದರು.

ಒಂದುದಿನ ಭೀಮಣ್ಣ, ತನ್ನ ಹೊಲದ ಸೀಮೆಗಟ್ಟಿ ಇದ್ದ ನಟ್ಟನ್ನು ಅಗಿಯುತ್ತ ನಿಂತಿದ್ದ. ಶಿವರಾಯನ ಹಿರಿಯ ಮಗ ವೀರಣ್ಣ—ಇದ್ದುದಿದ್ದ ಹಾಗೆಯೆ—ದೊಣ್ಣೆಯೊಂದನ್ನು ಹಿಡಿದುಕೊಂಡು ಬಂದ....ಬಗ್ಗಿ ನಟ್ಟುಕಡಿಯುತ್ತಲಿದ್ದ ಭೀಮಣ್ಣನ ತಲೆಯ ಮೇಲೆ, ಒಮ್ಮೆಲೆ ದೊಣ್ಣೆ-ಯೆತ್ತಿ ಹಾಕಿದ. ಬಳಿಯ-ಹೊಲದಲ್ಲಿ ಇದ್ದ ಗಂಗಪ್ಪ ಇದನ್ನು ನೋಡಿ ಅವಸರಪಟ್ಟು ಓಡಿ-ಬರುವುದರಲ್ಲಿಯೆ, ವೀರಪ್ಪ ಇನ್ನೂ ಮೂರು ನಾಲ್ಕು ಏಟುಗಳನ್ನು ಹೊಡೆದಿದ್ದ. ಭೀಮಣ್ಣ ನಿಂತಲ್ಲಿಯೆ ನೈಮುರೆದು ಬಿದ್ದು ಬಿಟ್ಟಿದ್ದ. ಗಂಗಣ್ಣ ಓಡಿಬಂದು ನೋಡಿದಾಗ, ಭೀಮಣ್ಣನ ತಲೆಯೊಡೆದು ಮೂಗು-ಬಾಯಿ-ಕಣ್ಣುಗಳೆಲ್ಲ ರಕ್ತದಿಂದ ತುಂಬಿಹೋಗಿದ್ದುವು. ಮೈಮೇಲೆ ಎಚ್ಚರವೇ ಇರಲಿಲ್ಲ. ವೀರಣ್ಣನ ಕೈಯೊಳಗಿನ ದೊಣ್ಣೆಯನ್ನು ಕಸಿದುಕೊಂಡು ಗಂಗಪ್ಪ, ಅವನನ್ನು ಹಿಂದಕ್ಕೆ ನೂಕಿದ. ಬಳಿಕ ಭೀಮಣ್ಣನ ಬಳಿಯಲ್ಲಿ ಕುಳಿತು, ಹೊತ್ತ ವಲ್ಲಿಯಿಂದಲೇ ನೆತ್ತರನ್ನು ಒರಸುತ್ತ ಉಪಚರಿಸಲು ತೊಡಗಿದ. ಅಪರಾಧಿಮನದ ವೀರಣ್ಣ, ಅಲ್ಲಿ ನಿಲ್ಲದೆ ಎಲ್ಲಿಗೋ ಓಡಿಹೋಗಿಬಿಟ್ಟ.

ಹೇಗೆ ಸುದ್ದಿ ಹತ್ತಿತೇನೊ! ಭೀಮಣ್ಣನ ಮನೆಯವರು ಅಳುತ್ತ ಬಾಯಿ ಬಾಯಿ ಬಡಿದುಕೊಳ್ಳುತ್ತ ಅಲ್ಲಿಗೆ ಬಂದರು. ಗಂಗಣ್ಣ ನಡೆದ ಸಂಗತಿಯನ್ನು ಅವರೆದುರು ವಿವರಿಸಿ, ಭೀಮಣ್ಣನನ್ನು ಅವರ ಕಡೆಗೆ ಒಪ್ಪಿಸಿ, ಇದೀಗಲೆ ಹೋಗಿ ನೀರುತರುವೆನೆಂದು ಓಡಿದ. ನೆರೆಯಹೊಲದಲ್ಲಿ ಕೇಳಿ ತಂಬಿಗೆಯೊಂದನ್ನು ದೊರೆಕಿಸಿ ದೂರದ ಹಳ್ಳದಿಂದ ನೀರ ತುಂಬಿಕೊಂಡು ಬರುವುದರಲ್ಲಿಯೆ, ಊರೊಳಗಿಂದ ಗೌಡರು, ಜನುಭೋಗರು, ಒಲಿಕಾರರು ಬಂದುಬಿಟ್ಟಿದ್ದರು. ಗಂಗಣ್ಣ ಬಂದುದನ್ನು ನೋಡಿದೊಡನೆಯೆ, ಗೌಡರು ಅವನನ್ನು ತಮ್ಮಬಳಿ ಕರೆದು, ಏನೇನಾಯಿತೆಂಬುದನ್ನು ಕೇಳಿದರು. ತಾನು ಕಂಡದ್ದನ್ನೆಲ್ಲ ಗಂಗಣ್ಣ ಗೌಡರ ಮುಂದೆಯೂ ಹೇಳಿದ. ಪಟ್ಟಿತಿಯಂತೆ ಪಂಚನಾಮೆಯ ಕೆಲಸ ಮುಗಿಯಿತು. ಬಳಿಕ ಗೌಡರು ಗಂಗಣ್ಣನಿಂದ ಅಧಿಕೃತ ಜವಾಬನ್ನು ತೆಗೆದುಕೊಂಡು, ಅದರ-ಮೇಲೆ ಅವನ ಒಪ್ಪಿಗೆಯ ಬೆರಳನ್ನು ಊರಿಸಿಕೊಂಡರು.

ವೈದ್ಯೋಪಚಾರದಿಂದ ಭೀಮಣ್ಣ ಚೇತರಿಸಿಕೊಂಡ. ಪ್ರಾಣ-ವೇನೂ ಹೋಗಿರಲಿಲ್ಲ. ಆದರೆ ತಲೆಗೆ ಬಿದ್ದ ಏಟುಗಳು ಬಲವಾಗಿದ್ದುವು. ಸರಕಾರದ ರೀತಿಗನುಸಾರವಾಗಿ ಅವನನ್ನು ಬಂಡಿಯಲ್ಲಿ ಹಾಕಿ, ಸರಕಾರಿ ದವಾಖಾನೆಗೆ ಕಳುಹಿದರು.

* * * *

ಅಂದೆಯೆ ನಾಲ್ಕುತಾಸು ರಾತ್ರಿಯಾಗಿರಬಹುದು. ಭೀಮಣ್ಣನ ಪ್ರಕರಣವನ್ನು ಕಣ್ಣಾರೆ ಕಂಡುಬಂದ ಗಂಗಣ್ಣನಿಗೆ ಊಟದಲ್ಲಿ ಆಕೆಯೆ ಇರಲಿಲ್ಲ; ಹಾಗೆಯೆ ಮನೆಯಲ್ಲಿ ಹಾಸಿದ ಕಂಬಳಿಯ



ನೋಲೆ ಬಿದ್ದುಕೊಂಡು, ಯಾವುಯಾವುದೊ ಯೋಚನೆಗಳನ್ನು ಮೆಲುಕುಹಾಕುತ್ತಲಿದ್ದ. ಇನ್ನು ದಿದ್ದಾಹಾಗೆಯೆ ಗಂಗಣ್ಣನಿಗೆ ಬಾಗಿಲನ್ನು ತಟ್ಟಿದ ಸದ್ದುಳು ಕೇಳಿಸಿತು. ಎದ್ದು ಬಂದು ಬಾಗಿಲನ್ನು ತೆಕೆದು ನೋಡಿದ. ಶಿವರಾಯಪ್ಪ, ಗೌಡರು ಒಂದು ನಿಂತಿದ್ದರು. ಕರೆಯುವ ದಾರಿಯನ್ನು ಕೂಡ ನೋಡದೆ ಅವರು ಮನೆಯೊಳಗೆ ಬಂದರು. ತಲೆಬಾಗಿಲನ್ನು ಹಾಕಿಕೊಂಡು ಬಾರೆಂದು ಗಂಗಣ್ಣನಿಗೆ ಹೇಳಿ, ನಡುಮನೆಗೆ ಒಮ್ಮೆ, ಹಾಸಿದ್ದ ಕಂಬಳಿಯಮೇಲೆ ಕುಳಿತುಕೊಂಡರು. ಗಂಗಣ್ಣನಿಗೆ ಆಶ್ಚರ್ಯ. ಪ್ರಶ್ನಾರ್ಥಕ ದೃಷ್ಟಿಯಿಂದ ಅವನು ಗೌಡರ ಕಡೆಗೊಮ್ಮೆ, ಶಿವರಾಯನ ಕಡೆಗೊಮ್ಮೆ ನೋಡುತ್ತ ನಿಂತುಕೊಂಡ; 'ಕೂತುಕೊ ಗಂಗಪ್ಪಾ' ಎಂದು ಗೌಡರು ಹೇಳಿದ ಮೇಲೆ, ಹತ್ತಿರದ ನೆಲದ ಮೇಲೆ ಕುಳಿತುಕೊಂಡ. ಆಗ ಗೌಡರು ಮುಗುಳುನಗೆ ನಗುತ್ತ ಸಲುಗೆಯ ಧ್ವನಿಯಲ್ಲಿ ಕೇಳಿದರು :

" ಏನಪಾ ಗಂಗಪ್ಪಾ, ಇಂದ ನೀ ಹೀಂಗ್ಯಾಕ ಮಾಡಿದಿ ? "

ಗಾಬರಿಯಾಗಿ ಗಂಗಣ್ಣ ಕೇಳಿದ :

" ನಾ ಏನ ಮಾಡೀನಿ ಗೌಡರ ? "

" ನಾ ಏನ ನಾಡೀನಿ—ಅಂದರ ಏನಲೆ? ಶಿವರಾಯ, ವೀರಣ್ಣ ನಿನಗ ಹೊರಗಿನವರ ? ನೀ ಇಂದ ಅವರ ವಿರುದ್ಧ ಸಾಕ್ಷೀ ಹೇಳೀದಿ ಅಲ್ಲಾ ! "

" ವಿರುದ್ಧ ಸಾಕ್ಷೀ ಪಾಕ್ಷೀ ನನಗೇನೂ ಗೊತ್ತಿಲ್ರಿ ! ಅಲ್ಲಿ ನಾ ಏನೇನು ನೋಡಿದ್ದೆ, ಅದನ್ನ ಮಾತ್ರ ಹೇಳಿದೇನ್ರಿ ! "

ಗೌಡರು ಶಿಕ್ಷಕನ ಧ್ವನಿಯಲ್ಲಿ ಹೇಳಿದರು;

" ನೀ ಎಲ್ಲಾ ನೋಡಿದ್ದು ಹೇಳೀದೀ ಖರೇ ! ಇದರಿಂದ ನಿಮ್ಮ ಮಾವನ ಮಗ್ಗ ಶಿಕ್ಷಾ ಆಗತಕದಲ್ಲಾ ! "

ಸಹಜಸ್ವರದಲ್ಲಿ ಗಂಗಣ್ಣ ನುಡಿದ :

" ತಪ್ಪು ಮಾಡಿದ ಮ್ಯಾಗ ಆಗೋ ಸಿಕ್ಷಾ ಅನುಬೋಗಸಲಾಕ ಬೇಕಲ್ರಿ ! ಹುತ್ತಿನಾಗ ಕೈ ಹಾಕಿದ ಮ್ಯಾಗ, ಹಾವು ಕಡಿಯೂದು ಬಿಡತೈತೇನ್ರೀ ? "

ಗೌಡರು ಸ್ವಲ್ಪ ತಡೆದು ಮತ್ತೆ ಹೇಳಿದರು :

" ನೋಡೋ ವಿಚಾರ ಮಾಡು ! ಇವರೇನು ನಿನಗ ಹೊರಗಿನವರಲ್ಲ ! ನಾಳೆ ಇವರ ಮನೀ ಹೆಣ್ಣು ಮಾಡಿಕೊಳ್ಳಾಂವ ಇದ್ದೀ ನೀನು ! "

" ಹೆಣ್ಣು ಮಾಡಿಕೊಳ್ಳೂದಕ ನನ್ನ ಖರೇ ಮಾತು ಅಡ್ಡ ಯಾಕ ಬರಬೇಕು ಗೌಡರ ? ಅದಕ್ಕಽ ಇದಕ್ಕಽ ಏನು ಸಮ್ಮಂಧ ? ಇಷ್ಟಕ್ಕಾಗಿ ನನಗ ಸುಳ್ಳು ಮಾತಾಡೂ ಅಂತ ಹೇಳತೀರೇನು ? "

" ಪ್ರಸಂಗ ಬಂದಾಗ ಮನಶಾ ಸುಳ್ಳು ಹೇಳ್ಲಾಕ ಬೇಕಾತೈತಿ ಏನಪಾ ? "

" ಹೆಂತಾ ಪರಸಂಗ ಬಂದರೂ ಸುಳ್ಳು ಮಾತ್ರ ಮಾತಾಡಬ್ಯಾಡಾ—ಅಂತ ನಮ್ಮ ಮುದಿಕಿ ನನ್ನ ಕಡೀಂದ ಮಾತು ತೊಕ್ಕೊಂಡಾಳ್ರಿ ! "

ಗೌಡರು ತುಸು ರೊಚ್ಚಿನ ಧ್ವನಿಯಲ್ಲಿ ಹೇಳಿದರು :

" ಹೋಗೋ ಹುಚ್ಚಾ! ಮುದಿಕಿ ಏನು?—ಮಾತು ತೊಗೋತೈತಿ ಏನು ? ನೀ ಈಗೆ ನಾ ಹೇಳಿದ್ದಾಂಗ ಕೇಳು ! ಈ ಕಲಿಯುಗದೊಳಗ ಬರೇ ಖರೇ ಇದ್ದರ ನಡಿಯೂದಿಲ್ಲ....ತಿಳೀತೇನು ? ನೀನು ಇಂದ ಕೊಟ್ಟ ಜವಾಬಿನ ಕಾಗದ, ಇನ್ನೂ ನನ್ನ ಹತೀಲೇನಽ ಐತಿ. ಶಿವರಾಯ ನನಗ ಬೇಕಾದ ಮನಶಾ ! ಅಂವಗ ಕೆಟ್ಟ ಆಗೂದೂ ಅಂದರ, ನನಗ ಕೆಟ್ಟ ಆದ್ಹಾಂಗs ! ಅದಕ್ಕಽ ಈಗ ನಾನು ಮೊದ್ದಾಂ ನಿನ್ನ ಮನಿಗೆ ಬಂದೀನೇನಪಾ ! ನಿನ್ನ ಜವಾಬಿನ ಕಾಗದಾ ಇಲ್ಲೇ ಹರಿದು ಹಾಕಿ, ಬ್ಯಾರೇ ಜವಾಬು ಬರಕೊಂಡು ಕಳಿಸಬೇಕಂತ ನನ್ನ ಮನಸು ! ಈಗ ನಾ ಹೇಳಿದ್ಹಾಂಗ ಜವಾಬು ಕೊಡು ! "

ನಿಶ್ಚಯಧ್ವನಿಯಲ್ಲಿ ಗಂಗಣ್ಣ ಹೇಳಿದ :

" ಚೇಚೇಚೇ ! ನಾ ಎಂದೂ ಸುಳ್ಳು ಹೇಳಾಕಿಲ್ಲ. ಯಾರು ಎಲ್ಲೇ ಕೇಳಿದರೂ ಕಂಡಷ್ಟು ಮಾತನ್ನ ನಾನು ಕರೇ ಹೇಬಿಡಾಂವ್ನಿ ! "

ಶಿವರಾಯ ಬುದ್ಧಿಯ ಮಾತು ಹೇಳತೊಡಗಿದ :

" ನೋಡೋ ಹುಡಗಾ ! ಇದು ರೀತಿ ಅಲ್ಲ ಇದು ! ಇದರಿಂದ

ನಿನ್ನ ಪರಿಣಾಮ ಏನೂ ಪಾಡ ಆಗೋದಿಲ್ಲ! ಮುದಿಕಿ ಸತ್ತು-ಹೋತ್ಯು! ಆಕೀ ಹೊಲಾ, ಮನಿ, ಬದುಕು ಇವೆಲ್ಲಾ ಇನ್ನೂ ನಿನ್ನ ಹೆಸರಿಗೆ ಆಗಿಲ್ಲ. ಗೌರಜ್ಜಿಗೆ....ಬ್ಯಾರೇ ಸಮೀಪದ ವಾರಸ-ದಾರರು ಇದ್ದಾರ; ಗೊತ್ತೈತೇನು? ನೀ ಈಗ ಗೌಡರು ಹೇಳಿ-ದ್ಹಾಂಗ ಕೇಳದಿದ್ದರ, ನಿನ್ನ ಮನಿ-ಮಾರು, ಬದುಕು-ಬಾಳೀ ಎಲ್ಲಾ ಕೈಬಿಡತಾವ ನೋಡು!"

ಗಂಗಣ್ಣ ಜಡವಾದ ದನಿಯಿಂದ ಮೆಲ್ಲಗೆ ಹೇಳಿದ:

"ನಮ್ಮ ಮುದಿಕಿ ಹೇಳತಿತ್ತು: ಸುಳ್ಳು ಹೇಳಲಿಕ್ಕೆ ತಯಾರಾ-ಗಿದ್ದರ ಆ ಮಾರಾಯ ಹರಿಚಂದರಾಜಗ ವನವಾಸ ಅನಬೋಗಸೂ ಪರಸಂಗನs ಬರತಿದ್ದಿಲ್ಲಾ ಅಂತ! ಖರೇಕಾಗಿ ಆ ಮಾರಾಯ ದೊಡ್ಡದೊಂದು ರಾಜ್ಯಾನs ಬಿಟ್ಟನಂತ! ನಂದೊಂದು ಜೋಟ ಮನೀ, ಗೇಣು ಹೊಲಾ ಹೋದರ, ನಾಯಾಕ ಚಿಂತೀ ಮಾಡ-ಬೇಕು? ದುಡಕೊಂಡು ತಿನ್ನಂವಗ ಎಲ್ಲಿಗೆ ಹೋದರೂ ಹೊಟ್ಟಿ ತುಂಬೇ ತುಂಬತೈತಿ!"

ನಿರಾಶೆಯ ಧ್ವನಿಯಲ್ಲಿ ಶಿವರಾಯ ತಟ್ಟನೆ ಹೇಳಿದ:

"ಆ ಮ್ಯಾಗ ದೇವಕ್ಕನೂ ನಿನಗ ಸಿಗೂದಿಲ್ಲ ನೋಡು!"

ಗಂಗಣ್ಣನ ಹೃದಯದ ಮೇಲೆ ಒಮ್ಮೆಲೆ ಆಘಾತವಾದಂತೆ ಆಯಿತು. ಬೆಚ್ಚಿಬಿದ್ದು ಶಿವರಾಯನ ಮುಖದ ಕಡೆಗೆ ನೋಡ-ಲಾರಂಭಿಸಿದ. ಆಗ ಗೌಡರು ಕೇಳಿದರು:

"ಹೌದು ದೇವಕ್ಕನರೇ ಹ್ಯಾಂಗ ಸಿಗತಾಳ?"

ಸ್ವಲ್ಪ ಕಾಲ ಸುಮ್ಮಗೆ ಕುಳಿತಿದ್ದು ಬಳಿಕ ಮೆಲ್ಲಗೆ ಗಂಗಣ್ಣ ನುಡಿದ:

"ನನಗ ನಾಳಿನ ತನಕಾ, ಸೊಲ್ಪ ಯಿಚಾರಾ ಮಾಡಾಕ ಯಾಳೀ ಕೊಡ್ರಿ!"

ಗೆಲವಿನ ಧ್ವನಿಯಲ್ಲಿ ಗೌಡರು ಹೇಳಿದರು:

"ಆಗಲಿ ನಡಿ ಶಿವಪ್ಪಾ, ಏನೋ ಎಳೀಗೆ ಬರೂಹಾಂಗ ಕಾಣ-ತೈತಿ....ನೀ ಏನೂ ಚಿಂತೀ ಮಾಡಬ್ಯಾಡ!"

ಇಬ್ಬರೂ ಎದ್ದು ಹೊರಟರು. ಅವರನ್ನು ಹೊರತನಕ ಕಳುಹಿ, ಬಾಗಿಲನ್ನು ಇಕ್ಕಿಕೊಂಡು ಗಂಗಣ್ಣ, ಒಳಗೆ ಬಂದು ಮತ್ತೆ ಬಿದ್ದು ಕೊಂಡ. ಒಂದರ ಹಿಂದೊಂದು ವಿಚಾರಗಳು— ಎಚ್ಚರುಗನಸು ಗಳು. ಒಮ್ಮೆ ದೇವಕ್ಕನ ಮೂರ್ತಿ ಬಂದು ನಿಲ್ಲುವುದು: 'ನಾನು ನಿನಗೆ ಬೇಡವೆ? ಬೇಕಾಗಿದ್ದರ ಗೌಡರು ಹೇಳಿದಂತೆ ಕೇಳು!' ಎನ್ನುವುದು. ಇನ್ನೊಂದು ಸಲ ಮುದುಕಿಯ ಮೂರ್ತಿ ಕಂಡು, ತನ್ನ ಎಂದಿನ ಪ್ರೀತಿತುಂಬಿದ ಮಾತಿನಲ್ಲಿ 'ಎಂಥಾ ಪರಸಂಗನs ಬರಲಿ; ಸುಳ್ಳು ಮಾತನಾಡಿದ ಮ್ಯಾಗ ಮನಶ್ಯಾನ ಕೆಮ್ಮುತ್ತು ಉಳೀತೇನು?' ಎಂದು ಉಪದೇಶಿಸುವುದು. ಈ ವಿಚಾರದ ಉಯ್ಯಲೆಯಾಟದೊಂದಿಗೆ ಮಗ್ಗಲುಗಳನ್ನು ಬದಲಿಸುತ್ತ ಇರು-ಳನ್ನು ನೂಕುತ್ತಲಿದ್ದ ಗಂಗಣ್ಣ.

ಮೊದಲನೆಯ ಕೋಳಿ ಕೂಗಿತು. ಯಾವುದೋ ಒಂದು ಮಾತಿನ ನಿಶ್ಚಯ ಮಾಡಿದ ಭಾವದವನಾಗಿ ಮೆಲ್ಲಗೆ ಎದ್ದು ನಿಂತ. ಕಂಬಳಿ-ಯೊಂದನ್ನು ಹೆಗಲ ಮೇಲೆ ತೆಗೆದುಕೊಂಡ. ದನದ ಹಕ್ಕೆಗೆ ಬಂದು ಒಂದೊಂದಾಗಿ ದನಗಳ ಮೇಲೆ ಕೈಯಾಡಿಸಿ ನಮಸ್ಕಾರ ಮಾಡಿದ. ಎಲ್ಲವನ್ನೂ ನಿಂತು ನಿಂತು ನೋಡಿ ನಿಟ್ಟುಸಿರನ್ನು ಚೆಲ್ಲಿದ:

"ಇನ್ನ್ಯಾಕ ಇದೆಲ್ಲಾ ಸೆಳತ? ಇನ್ನ ಮ್ಯಾಗ ಇದೊಂದೂ ನಂದಲ್ಲ!"

ಎಂದು ನುಡಿದು, ಜಡವಾದ ಹೆಜ್ಜೆಗಳನ್ನು ಹಾಕುತ್ತ ಮನೆ-ಯಿಂದ ಹೊರಬಿದ್ದ. ಹೊರಟವನು, ಒಂದಿರುಗಿ ಕೂಡ ನೋಡದೆ ಮುಂಬೆ ಸಾಗಿದ.

* * * *

ಮನೆಬಿಟ್ಟ ಗಂಗಣ್ಣ ಎರಡು ದಿನಗಳ ದಾರಿ ನಡೆದು, ತನ್ನನ್ನು ಯಾರೂ ಅರಿಯದ—ಅಪರಿಚಿತ—ಪಟ್ಟಣಕ್ಕೆ ಬಂದ. ಕೆಲ-ವೊಂದು ದಿನ ಪೇಟೆಯಲ್ಲಿ ಸೊಪ್ಪಿಗಾರಿಕೆ ಮಾಡಿ ಹೊಟ್ಟೆತುಂಬಿ-ಕೊಳ್ಳುತ್ತಲಿದ್ದ. ಆ ಮೇಲೆ, ಏನೋ ಒಂದು ಯೋಗ ಒದಗಿ ಬಂದು, ಶ್ರೀ. ಅಂಗಡೀ ವಕೀಲರ ಮನೆಯಲ್ಲಿ ದನಗಾಹಿಯಾಗಿ ಕೆಲಸಕ್ಕೆ ನಿಂತುಕೊಂಡ.

ವಕೀಲರಲ್ಲಿ ಹಳ್ಳಿಯ ಫೌಜ್‌ದಾರೀ ಮೊಕದ್ದಮೆಗಳು ಎಷ್ಟೋ ಬರುವುವು. ಹಳ್ಳಿಯಿಂದ ಬಂದ ಸಾಕ್ಷೀದಾರರಿಗೆ ವಕೀಲರು ಸುಳ್ಳು ಹೇಳಲಿಕ್ಕೆ ಕಲಿಸುವುದನ್ನು ಗಂಗಣ್ಣ ನಿತ್ಯವೂ ನೋಡು-ತ್ತಾನೆ; ಈ ಸುಳ್ಳು ಸಾಕ್ಷಿಗಳಿಂದಲೇ ಅಪರಾಧಿ ನಿರಪರಾಧಿ-ಯೆಂದೂ, ನಿರಪರಾಧಿ ಅಪರಾಧಿಯೆಂದೂ ಸಿದ್ಧವಾಗುವುದನ್ನು ಆಗಾಗ ಕಾಣುತ್ತಾನೆ. ಈ ಕಳ್ಳ-ಸುಳ್ಳರ ಗುರು ವಕೀಲರು, ಉಪ್ಪರಿಗೆಯ ಮೇಲೆ ಉಪ್ಪರಿಗೆ ಕಟ್ಟಿಸುವುದನ್ನು ನಿಟ್ಟಿಸುತ್ತಾನೆ. ತನಗೆ ಸತ್ಯದ ಪಾಠ ಕಲಿಸಿದ ಮುದುಕಿ ಸಾಮಾನ್ಯರಂತೆ ಸತ್ತು-ಹೋದುದನ್ನೂ, ಸತ್ಯದ ಪಾಠ ಕಲಿತ ತಾನು ಎಲ್ಲವನ್ನೂ ಕಳೆದು-ಕೊಂಡು, ದಿಸೆಗೇಡಿಯಾಗಿ ಎಲ್ಲಿಯೋ ಬಂದು ನಿಂತುಕೊಂಡು-ದನ್ನೂ ನೆನೆದು ನೆನೆದು ನಿಟ್ಟುಸಿರು ಹಾಕುತ್ತಾನೆ. ದೇವಕ್ಕನ ನೆನಪಂತೂ ಗಂಗಣ್ಣನ ಹೃದಯ-ಮನಗಳನ್ನು ನಿತ್ಯವೂ ಕೆಣಕಿ ಕೆಣಕಿ ಕಾಡುತ್ತಲಿದ್ದಿತು. ಎಷ್ಟೋ ಇರುಳುಗಳನ್ನವನು ಕಣ್ಣಿಗೆ ಕಣ್ಣು ಹಚ್ಚದೆ ಕಳೆಯುವ.

ಅವರಂತೆಯೆ ವಕೀಲರ ಈ ಸುಳ್ಳಿನ ಶಿಕ್ಷಣ, ಅನ್ಯಾಯಗಳಿಗೆ ಆಶ್ರಯ ಕೊಟ್ಟು ಪಲವು ಪುಣ್ಯವಂತರ ಪುನೆಗಳನ್ನು ಪಾಳು-ಗೊಳಿಸುತಿರುವುದು—ಇವೂ ಗಂಗಣ್ಣನ ಮನಸ್ಸನ್ನು ಕೆಣಕಿ ಕೆರಳಿ-ಸುವುವು. ಆಗ ಅವನು ತನ್ನನ್ನು ತಾನೇ ಮೆಚ್ಚಿಕೊಂಡು ನುಡಿ-ಯುವನು:

"ನಾನು ಸತ್ಯಮಾರ್ಗ ಹಿಡಿದದ್ದು, ಕೆಡಿಸಿದ್ದರ ನನ್ನೊಬ್ಬನ ಬಾಳೇ ಕೆಡಿಸಿದ್ದೀತು. ಈ ಜನರ ಸುಳ್ಳಿನ ಮಾರ್ಗ ಲೋಕಾನೆಲ್ಲಾ ಕೆಡಸತಾ ಹೊಂಟೈತಿ ಅಲ್ಲಾ!"

ಏನಾದರೇನು? ಗಂಗಪ್ಪ ದನಗಾಹಿ; ಲೋಕದಲ್ಲಿ ಅವನ ಅಸ್ತಿತ್ವಕ್ಕೆ ಬೆಲೆಯೇ ಇಲ್ಲ. ಶ್ರೀ. ಅಂಗಡಿಯವರು ದೊಡ್ಡ ವಕೀಲರು. ಸಮಾಜದಲ್ಲಿ ಸಭ್ಯಗೃಹಸ್ಥರೆಂಬ ಹೆಸರಿನಿಂದ ಶೋಭಿಸುವವರು!

ಸ್ವಿಸ್ ರಾಜ್ಯಾಂಗ

ಡಾ. ಎಂ. ಕೆ. ಸುಬ್ಬರಾವ್, ಎಂ. ಎ.
ಆಕಾಶವಾಣಿ, ಮೈಸೂರು

(ಉತ್ತರಾರ್ಧ)

ಸ್ವಿಸ್ ದೇಶದಲ್ಲಿ ರಾಷ್ಟ್ರೀಯತೆ ಮಾತ್ರವಲ್ಲದೆ, ಅಂತರರಾಷ್ಟ್ರೀಯ ವಾತಾವರಣ ಸಹ ಬಹು ಸೊಗಸಾಗಿದೆ. ಇದೆಲ್ಲಕ್ಕೂ ಕಾರಣವೆಂದರೆ ವಿಚಾರಪೂರ್ವಕವಾಗಿ ಸಿದ್ಧಗೊಳಿಸಿದ ಆಡಳಿತದ ಪದ್ಧತಿ. ಸ್ವಿಸ್ ರಾಜ್ಯಾಂಗವಿಂದು ಲೋಕಕ್ಕೆ ಆದರ್ಶವಾಗಿ ಮೆರೆಯುತ್ತದೆ.

★

ಕಳೆದ ಸಂಚಿಕೆಯಲ್ಲಿ ಸ್ವಿಟ್ಜರ್ಲಂಡಿನ ಆಡಳಿತದ ಶಾಸಕಾಂಗದ ವಿಚಾರವನ್ನು ವಿವರಿಸಿ ಆಯಿತು. ಇನ್ನು ಸ್ವಿಟ್‌ಜರ್ಲೆಂಡಿನ ಕಾರ್ಯಾಂಗದ ವಿಷಯವನ್ನು ಪರಿಶೀಲಿಸೋಣ : ಇತರ ಎಲ್ಲಾ ದೇಶಗಳಲ್ಲಿಯ ಕಾರ್ಯಾಂಗ ಏಕೈಕವಾಗಿದೆ. ಆದರೆ ಸ್ವಿಸ್-ಕಾರ್ಯಾಂಗವನ್ನು ನಾವು ' ಬಹು ಕಾರ್ಯಾಂಗ ' ಎಂದು ಕರೆಯಬಹುದು. ಇದಕ್ಕೆ 'ಪ್ಲೂರಲ್ ಎಗ್ಸಿಕ್ಯೂಟಿವ್' ಎಂಬುದಾಗಿ ಹೆಸರು. ಪ್ರತಿಸಾರಿಯೂ ಚುನಾವಣೆ ನಡೆದ ಮೇಲೆ, ಸ್ವಿಸ್ ಪಾರ್ಲಿಮೆಂಟು, ದೇಶದ ಆಡಳಿತಕ್ಕಾಗಿ ದಕ್ಷರಾದ ಏಳುಮಂದಿ ಸದಸ್ಯರನ್ನೊಳಗೊಂಡ ಒಂದು ಮಂತ್ರಿಮಂಡಳವನ್ನು ರಚಿಸುವುದು. ಇದೇ-ಕಾರ್ಯಾಂಗ. ಇದರ ಸದಸ್ಯರು ಶಾಸನಸಭೆಯ ಸದಸ್ಯರಾಗಿರುವುದಿಲ್ಲ. ಯಾರಾದರೂ ಶಾಸನಸಭೆಯ ಸದಸ್ಯರು, ಕಾರ್ಯಾಂಗಕ್ಕೆ ಚುನಾಯಿತರಾದರೆ, ಆ ಶಾಸನಸಭೆಯ ಸದಸ್ಯತ್ವಕ್ಕೆ ಅವರು ರಾಜೀನಾಮೆ ಕೊಡುವರು. ಆದರೆ ಈ ಮಂತ್ರಿಮಂಡಳದಲ್ಲಿ, ಒಬ್ಬರಿಗಿಂತ ಜಾಸ್ತಿಯಾಗಿ ಒಂದೇ ಕ್ಯಾಂಟನ್ನಿಗೆ ಸೇರಿದವರು ಇರುವಂತಿಲ್ಲ. ಪ್ರತಿವರ್ಷವೂ, ಸ್ವಿಸ್ ಪಾರ್ಲಿಮೆಂಟಿನ ಎರಡು ಸಭೆಗಳೂ ಸಂಯುಕ್ತ ಅಧಿವೇಶನ ನಡೆಯಿಸಿ, ಕಾರ್ಯಾಂಗದ ಏಳು ಜನ ಮಂತ್ರಿಗಳಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿಯೂ, ಮತ್ತೊಬ್ಬರನ್ನು ಉಪಾಧ್ಯಕ್ಷರನ್ನಾಗಿಯೂ ಚುನಾಯಿಸುತ್ತವೆ. ಈ ರೀತಿ ಚುನಾಯಿತರಾದ ಕಾರ್ಯಾಂಗದ ಅಧ್ಯಕ್ಷರು, ಸ್ವಿಸ್ ಕಾನ್‌ಫೆಡರೇಷನ್ ಎಂದರೆ, ಸ್ವಿಟ್ಸರೆಂಡ್ ರಾಷ್ಟ್ರಕ್ಕೂ ಅಧ್ಯಕ್ಷರಾಗಿರುತ್ತಾರೆ. ಈ ವರ್ಷ ಅಧ್ಯಕ್ಷ ಅಥವಾ ಉಪಾಧ್ಯಕ್ಷರಾದವರು ಮತ್ತೆ ಮರುವರುಷ ಅದೇ ಸ್ಥಾನದ ಚುನಾವಣೆಗೆ ನಿಲ್ಲುವಂತಿಲ್ಲ. ಇದರಿಂದ ಸಾಮಾನ್ಯವಾಗಿ ಕಾರ್ಯಾಂಗಕ್ಕೆ ಚುನಾಯಿತರಾದ ಪ್ರತಿಯೊಬ್ಬ ಸದಸ್ಯರಿಗೂ, ರಾಷ್ಟ್ರದ ಅಧ್ಯಕ್ಷ ಅಥವಾ ಉಪಾಧ್ಯಕ್ಷರಾಗುವ ಗೌರವ ಮತ್ತು ಅವಕಾಶ ದೊರೆಯುವುದು. ಕಾರ್ಯಾಂಗದ ಅವಧಿ ನಾಲ್ಕು ವರ್ಷಗಳು; ಆದರೆ ಸಾಮಾನ್ಯವಾಗಿ ಸದಸ್ಯರು ದಕ್ಷರಾಗಿದ್ದು ಹೆಚ್ಚುಕಾಲ ಇರಲು ಇಷ್ಟಪಟ್ಟರೆ, ಅವರು ಆಗಿಂದಾಗ ಪುನಃ ಚುನಾವಣೆಯಲ್ಲಿ ಜಯಹೊಂದಿ ಅಧಿಕಾರದಲ್ಲಿರುವುದು ಸುಲಭ. ಸ್ವಿಸ್ ಫೆಡರಲ್ ಮಂತ್ರಿಮಂಡಳದ ಅಧ್ಯಕ್ಷರಿಗೆ ತಮ್ಮ ಇತರ ಸಹೋದ್ಯೋಗಿಗಳ ಮೇಲೆ—ಬ್ರಿಟಿಷ್ ಪ್ರಧಾನಮಂತ್ರಿಗಾಗಲಿ, ಅಮೇರಿಕದ ಅಧ್ಯಕ್ಷರಿಗಾಗಲಿ, ಇರುವಂತೆ—ಯಾವ ಅಧಿಕಾರವೂ ಇಲ್ಲ. ಅಧ್ಯಕ್ಷರಿಗೂ, ಇತರ ಮಂತ್ರಿಗಳಿಗೂ ಇರುವ ಅಧಿಕಾರಗಳೆಲ್ಲವೂ ಒಂದೇ ಸಮನಾಗಿರುತ್ತವೆ. ಅಧ್ಯಕ್ಷರು, ರಾಷ್ಟ್ರದ 'ನಾಮಕಾವಾಸ್ತೆ'ಯ ಮುಖ್ಯಸ್ಥರಾಗಿ, ಆ ಸ್ಥಾನದ ಕೆಲಸಕಾರ್ಯಗಳನ್ನು ಗಂಭೀರವಾಗಿ ನಡೆಯಿಸಿಕೊಂಡು ಹೋಗುತ್ತಾರೆ. ಸರ್ಕಾರದ ದಿನವಹಿ ಆಡಳಿತದ ಕೆಲಸಗಳನ್ನು ನಡೆಯಿಸಿಕೊಂಡು ಹೋಗುವುದು, ಶಾಸನ ಸಭೆಗಳಲ್ಲಿ ರಾಷ್ಟ್ರದ ಏಳಿಗೆಗೆ ಅಗತ್ಯವಾದ ಮಸೂದೆಗಳನ್ನು ಮಂಡಿಸುವುದು ಮತ್ತು ಕೆಲವು ಆಡಳಿತಕಾನೂನಿನ ವಿಷಯದಲ್ಲಿ ನ್ಯಾಯಾಂಗದ ಕೆಲಸವನ್ನು ನಡೆಯಿಸುವುದು, ಇವಿಷ್ಟೂ ಕಾರ್ಯಾಂಗದ ಕೆಲಸ. ಶಾಸನ ಸಭೆಗಳಲ್ಲಿ ಸ್ವಿಸ್ ಕಾರ್ಯಾಂಗದ ಮಂತ್ರಿಗಳು ಅಧಿಕೃತ ಮಸೂದೆಗಳನ್ನು ಮಂಡಿಸುವರು. ಸಭೆಗಳು ಅವುಗಳನ್ನು ಅಂಗೀಕರಿಸದೆ ಅವು ಬಿದ್ದುಹೋದರೆ, ಬ್ರಿಟನ್ನಿನಲ್ಲಿರುವಂತೆ ಇಲ್ಲಿ ಮಂಡಳ ರಾಜೀನಾಮೆ ಕೊಡಬೇಕಾಗಿಲ್ಲ. ಸಂಬಂಧಪಟ್ಟ ಮಂತ್ರಿಗಳು ಆ ವಿಷಯವನ್ನು ಅಲ್ಲಿಗೇ ಬಿಟ್ಟು, ತಮ್ಮ ಪ್ರತಿಷ್ಠೆಯನ್ನು ಜೇಬಿಗೆ ಇಳಿಬಿಟ್ಟು, ಶಾಸನಸಭೆಯ ನಿರ್ಧಾರದ ಪ್ರಕಾರ ತಮ್ಮ ಕೆಲಸಕಾರ್ಯಗಳನ್ನು ಮುಂದುವರಿಯಿಸಿಕೊಂಡು ಹೋಗುತ್ತಾರೆ. ಈ ನೀತಿಯ ತತ್ತ್ವವಿಷ್ಟೆ: ಯಾವುದೆ ಒಂದು ಸಣ್ಣ ವಿಷಯದ ಮೇಲೆ, ಒಬ್ಬ ಮಂತ್ರಿಗೂ ಶಾಸನ ಸಭೆಗೂ ಭಿನ್ನಾಭಿಪ್ರಾಯಬಂದರೆ, ಅದರ ಪರಿಣಾಮವಾಗಿ ಇತರ ವಿಷಯಗಳಲ್ಲಿ ದಕ್ಷನಾದ, ಬುದ್ಧಿವಂತನಾದ ವ್ಯಕ್ತಿಯ ಸೇವೆಯನ್ನು ರಾಷ್ಟ್ರ ಕಳೆದು ಕೊಳ್ಳುವುದು ತರವಲ್ಲ. ಸರ್ಕಾರದ ಕೆಲಸವನ್ನು ನಡೆಯಿಸಿಕೊಂಡು ಹೋಗಲು ಆಗಾಗ ಸ್ವಿಸ್ ಮಂತ್ರಿಮಂಡಳದ ಸಭೆ ನಡೆಯುವುದು; ಆದರೆ ಈ ಮಂತ್ರಿಮಂಡಳವನ್ನು 'ಕ್ಯಾಬಿನೆಟ್' ಎಂದು ತಿಳಿಯುವುದು ತಪ್ಪು. ಒಟ್ಟಿನಲ್ಲಿ ಸ್ವಿಸ್ ಕಾರ್ಯಾಂಗ, ಮೂರು ವಿಶೇಷ ಅಂಶಗಳನ್ನು ಒಳಗೊಂಡಿದೆ. ಮೊದಲನೆಯದಾಗಿ ಹಿಂದೆಯೇ ಹೇಳಿದಂತೆ, ಅದು ' ಕೊಲೀಜಿಯೇಟ್ ' ಅಥವಾ ' ಪ್ಲೂರಲ್ ಎಕ್ಸೆಕ್ಯೂಟಿವ್ ' ಆಗಿದೆ. ಎರಡನೆಯದಾಗಿ ಅದು ' ಪಾರ್ಲಿಮೆಂಟರಿ ' ಮತ್ತು ' ನಾನ್-ಪಾರ್ಲಿಮೆಂಟರಿ ' ಈ ಎರಡು ಪದ್ಧತಿಗಳ ಗುಣಗಳನ್ನು ಹೊಂದಿದೆ. ಮೂರನೆಯದಾಗಿ

ಮತ್ತು ಬಹು ಮುಖ್ಯವಾಗಿ, ಜವಾಬ್ದಾರಿ, ನುತ್ತು ಸ್ಥಿರತೆ ಇವೆರಡೂ ಸ್ವಿಸ್ ರಾಜ್ಯಾಂಗದಲ್ಲಿ ಒಂದುಗೂಡಿವೆ.

ಸ್ವಿಸ್ ಫೆಡರಲ್ ರಾಜ್ಯಾಂಗಕ್ಕೆ ಸೇರಿದ ಮೂರನೆಯ ಮುಖ್ಯವಾದ ಅಂಗವೆಂದರೆ **ನ್ಯಾಯಾಂಗ.** ಸ್ವಿಟ್ಜರ್ಲೆಂಡಿನಲ್ಲಿ ಒಂದೇ ಒಂದು ಫೆಡರಲ್ ನ್ಯಾಯಾಸ್ಥಾನವಿದೆ. ಇದಕ್ಕೆ 'ಬಂಡೆಸ್‌ಗೆರಿಷ್ಟ್' ಎಂಬುದಾಗಿ ಹೆಸರು. ಈ ನ್ಯಾಯಾಸ್ಥಾನದಲ್ಲಿ ಇಪ್ಪತ್ತುನಾಲ್ಕು ಮಂದಿ ನ್ಯಾಯಾಧೀಶರಿದ್ದಾರೆ. ಅವರನ್ನು ಶಾಸನಸಭೆಗಳ ಸಂಯುಕ್ತ ಅಧಿವೇಶನ ಚುನಾಯಿಸುವುದು. ಅವರ ಅಧಿಕಾರಾವಧಿ ಆರು ವರುಷಗಳು. ನ್ಯಾಯಾಧೀಶರು ದಕ್ಷರಾಗಿದ್ದು ಇನ್ನೂ ಹೆಚ್ಚು ಕಾಲ ಸೇವೆ ಸಲ್ಲಿಸಲು ಇಷ್ಟಪಟ್ಟರೆ, ಮತ್ತೆ ಚುನಾವಣೆ ಹೊಂದುವುದು ಬಹಳ ಸುಲಭ. ಸಾಮಾನ್ಯವಾಗಿ ಕೇಂದ್ರ ಸರ್ಕಾರ ಎಂದರೆ, ಕಾನ್‌ಫೆಡರೇಷನ್ನಿಗೂ ಮತ್ತು ಕ್ಯಾಂಟನ್‌ಗಳಿಗೂ ಇರುವ ಭಿನ್ನಾಭಿಪ್ರಾಯಗಳು, ಕ್ಯಾಂಟೋನಲ್ ಸರ್ಕಾರಗಳಲ್ಲೇ ಬರುವ ವೈಮನಸ್ಸುಗಳು, ಕ್ಯಾಂಟೊನಲ್ ನ್ಯಾಯಾಸ್ಥಾನಗಳಲ್ಲಿ ಕೈಗೊಳ್ಳುವ ನಿರ್ಧಾರಗಳ ಮೇಲಿನ ಅಪ್ಪೀಲುಗಳು—ಇವುಗಳನ್ನು ಫೆಡರಲ್ ನ್ಯಾಯಾಸ್ಥಾನ ಚರ್ಚೆಗೆ ತೆಗೆದುಕೊಳ್ಳುವುದು. ಆದರೆ ಫೆಡರಲ್ ನ್ಯಾಯಾಸ್ಥಾನವು, ಶಾಸನಸಭೆಗಳು ಜಾರಿಗೆ ತಂದ ಕಾನೂನುಗಳನ್ನು ರದ್ದುಗೊಳಿಸಲು ಅಧಿಕಾರವನ್ನು ಹೊಂದಿಲ್ಲ. ಅಮೆರಿಕಾದ ಸುಪ್ರೀಂ ನ್ಯಾಯಾಸ್ಥಾನದೊಡನೆ ಹೋಲಿಸಿ ನೋಡಿದರೆ, ಸ್ವಿಸ್ ಫೆಡರಲ್ ನ್ಯಾಯಾಸ್ಥಾನದ ಅಧಿಕಾರ ಅತ್ಯಲ್ಪವಾಗಿದೆ.

ಇನ್ನು ಸ್ವಿಸ್ ರಾಜ್ಯಾಂಗದಲ್ಲಿ ಬಹು ಮುಖ್ಯವಾದ ಒಂದೆರಡು ಅಂಶಗಳಿವೆ. ಅವುಗಳನ್ನು ನಾವು ಗಮನಿಸಿಯೇ ತೀರಬೇಕು. ಅಲ್ಲಿ ಎರಡು ಪ್ರಾಮುಖ್ಯವಾದ ಪದ್ಧತಿಗಳಿವೆ. ಅವುಗಳಿಗೆ **ರೆಫರೆಂಡಂ** ಮತ್ತು **ಇನಿಷಿಯೇಟಿವ್** ಎಂಬುದಾಗಿ ಹೆಸರು. ಇವುಗಳನ್ನು ಪ್ರಜಾಪ್ರಭುತ್ವದ ಸ್ತಂಭಗಳೆಂದು ನಾವು ಹೇಳಬಹುದು. ಸ್ವಿಸ್ ಶಾಸನಸಭೆಯಲ್ಲಿ ಅಂಗೀಕೃತವಾದ ಮಸೂದೆಗಳನ್ನು, ಪ್ರಜಾಭಿಪ್ರಾಯ ತೆಗೆದುಕೊಳ್ಳಲು ಸರ್ಕಾರದವರು ಪ್ರಕಟಪಡಿಸುವರು. ಈ ಪ್ರಕಟಣೆಯಾದ ಮೇಲೆ, ಮಸೂದೆಗಳ ಪರವಾಗಿಯೂ, ವಿರೋಧವಾಗಿಯೂ ಬಹುವಾಗಿ ಪ್ರಚಾರ ಕಾರ್ಯ— ಚುನಾವಣಾ ಪ್ರಚಾರದಂತೆಯೇ— ನಡೆಯುವುದು. ಅನಂತರ ಯಾವುದಾದರೂ ಕ್ಲಪ್ತ ದಿನವನ್ನು ಗೊತ್ತು ಮಾಡಿ— ಚುನಾವಣೆಗಳಲ್ಲಿ ಓಟು ಕೊಡುವಂತೆ— ಪೋಲಿಂಗ್ ಬೂತ್ ಎಂದರೆ ಚುನಾವಣಾ ಸ್ಥಳಗಳಿಗೆ ಪ್ರಜೆಗಳು ಹೋಗಿ, ವೋಟಿಂಗ್ ಪೇಪರಿನ ಮೇಲೆ, ತಮಗೆ ಸರ್ಕಾರ ಸೂಚಿಸಿರುವ ಮಸೂದೆಗಳ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸಿ ವೋಟು ಮಾಡುವರು. ಈ ಪದ್ಧತಿಗೆ 'ರೆಫರೆಂಡಂ' ಎಂಬುದಾಗಿ ಹೆಸರು. ವೋಟಿಂಗ್ ಮುಗಿದನಂತರ, ಅವುಗಳನ್ನು ಎಲ್ಲೆಡೆಯಲ್ಲಿಯೂ ಎಣಿಕೆ ಮಾಡುತ್ತಾರೆ. ಯಾವುದಾದರೂ ಮಸೂದೆಗಳಿಗೆ, ಸಾಮಾನ್ಯ ಬಹುಮತದ ಆಧಾರದ ಮೇಲೆ, ಜನಾಭಿಪ್ರಾಯ ವಿರೋಧವಾಗಿದ್ದರೆ, ಅವುಗಳನ್ನು—ಶಾಸನಸಭೆಯಲ್ಲಿ ಅಂಗೀಕೃತವಾಗಿದ್ದರೂ ಸಹ—ರದ್ದುಗೊಳಿಸುತ್ತಾರೆ; ಅಥವಾ ಅದರ ಪರವಾಗಿ ಜನ ತಮ ಅಭಿಪ್ರಾಯವನ್ನು ಸೂಚಿಸಿದರೆ, ಅದನ್ನು ಜಾರಿಗೆ ತರುತ್ತಾರೆ.

ಈ ರಿಫರಿಂಡಂನಲ್ಲಿ ಎರಡು ವಿಧಗಳಿವೆ:— ಕಂಪಲ್ಸರಿ ರೆಫರೆಂಡಂ ಮತ್ತು ಆಪ್ಷನಲ್ ರೆಫರೆಂಡಂ ಎಂಬುದಾಗಿ— ಕಂಪಲ್ಸರಿ ರೆಫರೆಂಡಂ ಎಂದರೆ : ನಿರ್ಬಂಧ ಪ್ರಜಾಭಿಪ್ರಾಯ ಸಂಗ್ರಹಣೆ ; ಆಪಷನಲ್ ರೆಫರೆಂಡಂ ಎಂದರೆ ಐಚ್ಛಿಕ ಪ್ರಜಾಭಿಪ್ರಾಯ ಸಂಗ್ರಹಣೆ. ಕೆಲವು ರೀತಿಯ ಮಸೂದೆಗಳಿಗೆ, ಅವು ಶಾಸನಸಭೆಗಳಲ್ಲಿ ಅಂಗೀಕೃತವಾದಮೇಲೆ, ಪ್ರಜಾಭಿಪ್ರಾಯ ತೆಗೆದುಕೊಂಡೇ ತೀರಬೇಕೆಂಬ ನಿಯಮವಿದೆ. ಅಂತಹವುಗಳನ್ನು, ಅವು ಶಾಸನವಾಗುವ ಮೊದಲು ಸರ್ಕಾರದವರೇ ಪ್ರಜಾಭಿಪ್ರಾಯಕ್ಕೆ ಸೂಚಿಸುತ್ತಾರೆ, ಅಥವಾ 'ರೆಫರ್' ಮಾಡುತ್ತಾರೆ. ಇದಕ್ಕೆ 'ಕಂಪಲ್ಸರಿ ರೆಫರೆಂಡಂ 'ಎಂಬುದಾಗಿ ಹೆಸರು. ಉದಾಹರಣೆಗಾಗಿ: ರಾಜ್ಯಾಂಗದ ವಿಷಯದಲ್ಲಿ ಏನಾದರೂ ಬದಲಾವಣೆಯಾದರೆ, ಅದಕ್ಕೆ ಕಂಪಲ್ಸರಿ ರೆಫರೆಂಡಂ ಅವಶ್ಯಕ. ರೆಫರೆಂಡಂ ತೆಗೆದುಕೊಳ್ಳಲೇಬೇಕೆಂಬ ನಿಯಮವಿಲ್ಲದಿರುವ ಕೆಲವು ಮಸೂದೆಗಳು ಶಾಸನಸಭೆಗಳಲ್ಲಿ ಅಂಗೀಕೃತವಾದುವೆಂದು ಇಟ್ಟುಕೊಳ್ಳೋಣ. ಈ ಮಸೂದೆಗಳಿಗೆ ಕೆಲವು ಪ್ರಜೆಗಳ ವಿರೋಧ ಇರಬಹುದು. ಆಗ ಮೂವತ್ತು ಸಹಸ್ರ ಪ್ರಜೆಗಳಾಗಲಿ, ಅಥವಾ ಎಂಟು ಕ್ಯಾಂಟನ್‌ಗಳಾಗಲಿ, ತಮಗೆ ಅಂತಹ ಮಸೂದೆಗಳ ವಿಷಯದಲ್ಲಿ ವಿರೋಧವಿದೆಯೆಂದೂ, ಆದ್ದರಿಂದ ಅವುಗಳನ್ನು ಪ್ರಜಾಭಿಪ್ರಾಯಕ್ಕೆ ಸೂಚಿಸಬೇಕೆಂದೂ ಫೆಡರಲ್ ಸರ್ಕಾರಕ್ಕೆ ಪತ್ರ ಬರೆದು, ಒತ್ತಾಯ ಮಾಡುವರು. ಈ ನೋಟೀಸು ತಲುಪಿದ ಕೆಲವು ದಿನಗಳಲ್ಲಿ, ಫೆಡರಲ್ ಸರ್ಕಾರ ಆ ಮಸೂದೆಗಳನ್ನು ರೆಫರೆಂಡಂಗೆ ಸೂಚಿಸುವುದು. ಇದಕ್ಕೆ 'ಆಪಷನಲ್ ರೆಫರೆಂಡಂ' ಎಂಬುದಾಗಿ ಹೆಸರು.

ರೆಫರೆಂಡಂ ಜೊತೆಯಲ್ಲೇ ಇರುವ ಮತ್ತೊಂದು ವಿಶೇಷ ಪದ್ಧತಿಗೆ **ಇನಿಷಿಯೇಟಿವ್** ಎಂಬುದಾಗಿ ಹೆಸರು. ಯಾವುದಾದೊಂದು ರೀತಿಯ ಕಾನೂನನ್ನು ಜಾರಿಗೆ ತರಬೇಕೆಂಬ ಅಭಿಲಾಷೆ ಇರುವ— ಒಂದು ನಿರ್ದಿಷ್ಟ ಸಂಖ್ಯೆಯ— ಪ್ರಜೆಗಳು, ಅದನ್ನು ಮಸೂದೆಯ ರೂಪದಲ್ಲಿ ಅರ್ಜಿಯೊಂದರಲ್ಲಿ ಬರೆದು, ಅದಕ್ಕೆ ಸಹಿ ಹಾಕಿ ಸರ್ಕಾರಕ್ಕೆ ಕಳುಹಿಸುವರು. ಸರ್ಕಾರದವರು ಆ ಮಸೂದೆಗಳನ್ನು ಶಾಸನಸಭೆಯ ಮುಂದಿಟ್ಟು, ಅದರ ಅಭಿಪ್ರಾಯವನ್ನು ಪಡೆಯುವರು. ಅಲ್ಲಿ ಅದು ಅಂಗೀಕೃತವಾಗಲಿ, ಆಗದಿರಲಿ, ಆ ಮಸೂದೆಯನ್ನು ರೆಫರೆಂಡಂಗೆ ಸೂಚಿಸುವರು. ಇದಕ್ಕೆ 'ಇನಿಷಿಯೇಟಿವ್' ಎಂಬುದಾಗಿ ಹೆಸರು. ಆಪಷನಲ್ ರೆಫರೆಂಡೆಮ್ಮಿನಲ್ಲಿಗೂ, ಇನಿಷಿಯೇಟಿವ್‌ಗೂ, ಅನುಸರಿಸಬೇಕಾದ ಕ್ರಮ ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿದೆ. ಆದರೆ ಅವೆರಡರ ನಡುವೆ ಇರುವ ವ್ಯತ್ಯಾಸ ಇಷ್ಟು: ಆಪ್ಷನಲ್ ರೆಫರೆಂಡೆಮ್ಮಿನಲ್ಲಿ, ಮೊದಲೇ ಶಾಸನಸಭೆಗಳಿಂದ ಅಂಗೀಕೃತವಾಗಿರುವ ಮಸೂದೆಗಳನ್ನು ಪ್ರಜಾಭಿಪ್ರಾಯಕ್ಕೆ ಸೂಚಿಸಬೇಕೆಂದು, ಜನಗಳು ಫೆಡರಲ್ ಸರ್ಕಾರವನ್ನು

ಕೇಳುವರು; ಆದರೆ ಇನಿಷಿಯೇಟಿವ್‌ನಲ್ಲಿ ಪ್ರಜೆಗಳೇ ಒಂದು ಹೊಸ ಕಾನೂನನ್ನು ರಚಿಸುವ ಬಗ್ಗೆ ಆಸಕ್ತಿ ವಹಿಸಿ, ಆ ವಿಷಯದಲ್ಲಿ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಸರ್ಕಾರವನ್ನು ಕೇಳುವರು.

ರೆಫರೆಂಡಂ ಮತ್ತು ಇನಿಷಿಯೇಟಿವ್ ಇವುಗಳ ಜೊತೆಗೆ 'ಪ್ಲಿಬಿಸೈಟ್' ಮತ್ತು 'ರೀ ಕಾಲ್' ಎಂಬ ಮತ್ತೆರಡು ಪದ್ಧತಿಗಳಿವೆ. ರೆಫರೆಂಡಮ್ಮಿಗೂ, ಪ್ಲಿಬಿಸೈಟಿಗೂ ಅಷ್ಟಾಗಿ ಭೇದವಿಲ್ಲ. ಒಂದೇ ಒಂದು ಮುಖ್ಯ ವ್ಯತ್ಯಾಸವೆಂದರೆ, ಪ್ಲಿಬಿಸೈಟ್ ಎಂಬುದರಲ್ಲಿ ಪ್ರಜಾಭಿಪ್ರಾಯವನ್ನು ಯಾವುದಾದರೂ ನಿರ್ದಿಷ್ಟವಾದ ಸಾರ್ವಜನಿಕ ಸಮಸ್ಯೆಯ ಮೇಲೆ ತೆಗೆದುಕೊಳ್ಳುವುದೇ ಹೊರತು, ಶಾಸನಸಭೆ ಅಂಗೀಕರಿಸಿದ ಮಸೂದೆಯ ಮೇಲಾಗಲಿ, ಯಾವುದಾದರೂ ಕಾನೂನಿನ ಮೇಲಾಗಲಿ ತೆಗೆದುಕೊಳ್ಳುವುದಿಲ್ಲ. ರೀ ಕಾಲ್ ಎಂದರೆ ಪ್ರಜೆಗಳು ಚುನಾಯಿಸಿರುವ ಶಾಸನಸಭಾ ಸದಸ್ಯರನ್ನಾಗಲೀ, ಆಡಳಿತಾಂಗದ ಅಧಿಕಾರಿಗಳನ್ನಾಗಲಿ, ಅಥವಾ ನ್ಯಾಯಾಧೀಶರುಗಳನ್ನಾಗಲಿ, ಅವರ ಅಧಿಕಾರಾವಧಿ ಮುಗಿಯುವ ಮುಂಚಿಯೇ ಹಿಂದಕ್ಕೆ ಕರೆಯಿಸಿಕೊಳ್ಳುವುದು. ಎಂದರೆ ಅವರು ರಾಜೀನಾಮೆ ಕೊಡುವಂತೆ ಒತ್ತಾಯ ಮಾಡುವುದು. ಪ್ರಜಾಪ್ರತಿನಿಧಿಗಳು, ತಮ್ಮನ್ನು ಚುನಾಯಿಸಿದ ಪ್ರಜೆಗಳ ವಿಶ್ವಾಸವನ್ನು ಕಳೆದುಕೊಂಡರೆ. ಆಗ ಸಾರ್ವಜನಿಕರು ರೀಕಾಲ್ ಪದ್ಧತಿಯನ್ನು ಅನುಸರಿಸಿ ಕ್ರಮತೆಗೆದುಕೊಳ್ಳಬಹುದು. ಇದಕ್ಕೆ ಅನುಸರಿಸಬೇಕಾದ ನಡೆವಳಿಕೆಯ ಕ್ರಮ, ಇನಿಷಿಯೇಟಿವ್ ಕ್ರಮದಂತೆಯೇ ಇರುವುದು. ಸ್ವಿಟ್ಜರ್ಲೆಂಡಿನ ಎಂಟು ಕ್ಯಾಂಟನ್‌ಗಳಲ್ಲಿ ಶಾಸನಸಭಾ ಸದಸ್ಯರನ್ನು 'ರೀ ಕಾಲ್' ಮಾಡಬಹುದಾದ ಹಕ್ಕನ್ನು ಪ್ರಜೆಗಳು ಹೊಂದಿದ್ದಾರೆ.

ರೆಫರೆಂಡಂ ಮತ್ತು ಇನಿಷಿಯೇಟಿವ್ ಈ ಎರಡು ಪದ್ಧತಿಗಳನ್ನೂ, ಸ್ವಿಟ್ಜರ್ಲೆಂಡಿನಲ್ಲಿ ಫೆಡರಲ್ ಸರ್ಕಾರದಲ್ಲೂ ಕ್ಯಾಂಟೊನಲ್ ಸರ್ಕಾರದ ಆಡಳಿತಗಳಲ್ಲೂ ಅನುಸರಿಸುತ್ತಿದ್ದಾರೆ. ಗಲಭೆಯಿಂದ ಗಣಿಜಿರ ವರೆಗೆ ಸುಮಾರು ಎಂಟು ಬಾರಿ ಸ್ವಿಸ್ ಪ್ರಜೆಗಳು ಚುನಾವಣಾ ಸ್ಥಳಗಳಿಗೆ ತಮ್ಮ ಅಭಿಪ್ರಾಯ ಸೂಚಿಸಲು ಹೋಗಿದ್ದಾರೆ. ಸಾಮಾನ್ಯವಾಗಿ ಶಾಸನಸಭೆಗಳಲ್ಲಿ ಅಂಗೀಕೃತವಾದ ಎಲ್ಲಾ ಮಸೂದೆಗಳ ಬಗ್ಗೆಯೂ, ಅಲ್ಲಿ ಪ್ರಜಾಭಿಪ್ರಾಯವನ್ನು ತೆಗೆದುಕೊಳ್ಳುತ್ತಾರೆ. ಇಲ್ಲಿ ನಾವು ಗಮನಿಸಬೇಕಾದ ಕೆಲವು ಮುಖ್ಯ ಅಂಶಗಳಿವೆ : ಮೊದಲನೆಯದಾಗಿ ಸ್ವಿಸ್ ಪ್ರಜೆಗಳು ಹೆಚ್ಚುಕಡಿಮೆ ಎಲ್ಲರೂ ವಿದ್ಯಾವಂತರು. ರಾಜಕೀಯ ಜ್ಞಾನ ಮತ್ತು ತಿಳಿವಳಿಕೆ ಪ್ರತಿಯೊಬ್ಬರಲ್ಲೂ ಮೂಡಿದೆ. ಅಭಿಪ್ರಾಯ ಸೂಚಿಸಲು ಹೋಗುವ ಅಥವಾ ಓಟು ಕೊಡಲು ಹೋಗುವ ಪ್ರತಿಯೊಬ್ಬ ಪ್ರಜೆಯೂ ದೊಡ್ಡ ಜವಾಬ್ದಾರಿಯನ್ನು ಹೊತ್ತಂತೆ ತಿಳಿದುಕೊಂಡು, ಚುನಾವಣೆಯ ಕೇಂದ್ರಕ್ಕೆ ಹೋಗಿ ತನ್ನ ಮತವನ್ನು ಕೊಡುತ್ತಾನೆ. ಸ್ವಿಸ್ ರಾಜ್ಯಾಂಗದಲ್ಲಿ ನಡೆದಿರುವ ಪ್ರಯೋಗದ ವಿಜಯಕ್ಕೆ ಈ ಎಲ್ಲಾ ಮುಖ್ಯ ವಿಷಯಗಳೂ ಕಾರಣಗಳಾಗಿವೆ. ಅಲ್ಲದೆ, ಎಲ್ಲಕ್ಕಿಂತ ಪ್ರಮುಖವಾಗಿ ಆ ದೇಶದ ಸಣ್ಣ ವಿಸ್ತೀರ್ಣ, ಯಾವ ಕೊರತೆಯೂ ಇಲ್ಲದೆ ಅವರ ಪ್ರಯೋಗಗಳನ್ನು ಕಾರ್ಯಗತ ಮಾಡಲು ಸಹಕಾರಿಯಾಗಿದೆ.

ಸ್ವಿಸ್ ರಾಜ್ಯಾಂಗದ ಬಗ್ಗೆ ನಾವು ಇಷ್ಟು ತಿಳಿದ ಮೇಲೆ, ಅದನ್ನು ಸ್ವಲ್ಪಮಟ್ಟಿಗೆ ಇತರ ಪ್ರಮುಖ ರಾಷ್ಟ್ರಗಳೊಡನೆ ಹೋಲಿಸಿ ನೋಡುವುದು ಅವಶ್ಯಕವೆಂದು ತೋರುತ್ತದೆ. ಮುಖ್ಯವಾಗಿ ಬ್ರಿಟನ್ ಮತ್ತು ಅಮೆರಿಕಾ ರಾಷ್ಟ್ರಗಳ ರಾಜ್ಯಾಂಗಗಳೊಡನೆ, ಇದನ್ನು ಪರಿಶೀಲಿಸಿ ನೋಡಿದರೆ, ನಮಗೆ ಮೊದಲು ಎದ್ದು ಕಾಣುವುದು ಸ್ವಿಸ್‌ದೇಶದ ಬಹುಕಾರ್ಯಾಂಗ, ಎಂದರೆ ಪ್ಲೂರಲ್ ಎಕ್ಸೆಕ್ಯುಟಿವ್. ಈ ಕಾರ್ಯಾಂಗದ ಸದಸ್ಯರೆಲ್ಲರಿಗೂ ಒಂದೇ ರೀತಿಯಿಂದ ಅಧಿಕಾರವಿರುವುದು. ಬ್ರಿಟನ್ನಿನಲ್ಲಿರುವಂತೆ ಇಲ್ಲಿ ಪ್ರಧಾನಮಂತ್ರಿ ಇಲ್ಲ. ಅಮೆರಿಕಾದಲ್ಲಿರುವಂತೆ, ಇಲ್ಲಿ ಅಧ್ಯಕ್ಷರಿದ್ದರೂ ಅವರಿಗಿರುವ ಸರ್ವಾಧಿಕಾರ, ಸ್ವಿಸ್ ಕಾನಫೆಡರೇಷನ್ನಿನ ಅಧ್ಯಕ್ಷರಿಗೆ ಇರುವುದಿಲ್ಲ. ಬ್ರಿಟನ್ನಿನಲ್ಲಿ ಪ್ರಧಾನ ಮಂತ್ರಿಗೆ ಕಾನೂನುಬದ್ಧವಾಗಲ್ಲದಿದ್ದರೂ, ವಾಸ್ತವವಾಗಿರುವ ಅಧಿಕಾರ ಬಹಳವಾಗಿದೆ. ಅಮೆರಿಕಾದ ಅಧ್ಯಕ್ಷರು ತಮ್ಮ ಸಹೋದ್ಯೋಗಿಗಳನ್ನು ಆರಿಸಿಕೊಳ್ಳುವುದು ಮಾತ್ರವಲ್ಲದೆ, ಅವರ ಮೇಲೆ ತಮ್ಮ ಪ್ರಭಾವ ಹಾಗೂ ಅಧಿಕಾರವನ್ನು ಚಲಾಯಿಸುತ್ತಾರೆ. ಆದರೆ ಪಾಪ ಸ್ವಿಸ್ ಅಧ್ಯಕ್ಷರಿಗೆ, ತಮ್ಮ ಸ್ಥಾನ, ಅದರೊಡನೆ ಗೌರವ—ಇವೆರಡನ್ನು ಬಿಟ್ಟರೆ ಮತ್ತೇನೂ ಇಲ್ಲ. ಬ್ರಿಟನ್ನಿನ ಆಡಳಿತಾಂಗ, ಪಾರ್ಲಿಮೆಂಟರಿ ಮಾದರಿಯದು; ಎಂದರೆ, ಬ್ರಿಟಿಷ್ ಕಾರ್ಯಾಂಗದ ಮಂತ್ರಿಮಂಡಲ ಶಾಸನಸಭೆಗೆ ಸಂಪೂರ್ಣವಾಗಿ ಜವಾಬ್ದಾರಿಯುಳ್ಳದ್ದಾಗಿರುವುದು. ಸರ್ಕಾರ ಮಂಡಿಸಿದ ಯಾವುದೇ ಮಸೂದೆ ಬಿದ್ದುಹೋದರೂ, ಆಗ ಆ ಸರ್ಕಾರ, ಶಾಸನಸಭೆಯ—ತನ್ಮೂಲಕ ಪ್ರಜೆಗಳ,—ವಿಶ್ವಾಸವನ್ನು ಕಳೆದುಕೊಂಡಂತೆ. ಆಗ ಸರಕಾರವೇ ರಾಜೀನಾಮೆ ಕೊಡಬೇಕಾಗುವುದು. ಅಮೇರಿಕಾದಲ್ಲಿರುವುದು ನಾನ್-ಪಾರ್ಲಿಮೆಂಟರಿ ಕಾರ್ಯಾಂಗ. ಈ ಕಾರ್ಯಾಂಗದ ಸದಸ್ಯರುಗಳು ಶಾಸನಸಭೆಯ ಸದಸ್ಯರೂ ಅಲ್ಲ; ಅದರ ಕಾರ್ಯಕಲಾಪಗಳಲ್ಲಿ ಭಾಗ ವಹಿಸುವುದೂ ಇಲ್ಲ. ಆದರೆ ಎರಡು ಶಾಸನಸಭೆಗಳೂ ನೇಮಿಸುವ ಸಮಿತಿಗಳಲ್ಲಿ ಮಾತ್ರ, ಅಮೆರಿಕನ್ ಕಾರ್ಯಾಂಗದ ಸದಸ್ಯರುಗಳು ಹಾಜರಿರುತ್ತಾರೆ. ಆದರೆ ಸ್ವಿಟ್ಜರ್ಲೆಂಡಿನ ಕಾರ್ಯಾಂಗ, ಪಾರ್ಲಿಮೆಂಟರಿ ಹಾಗೂ ನಾನ್-ಪಾರ್ಲಿಮೆಂಟರಿ ಈ ಎರಡೂ ಪದ್ಧತಿಗಳ ಗುಣಗಳನ್ನು ಹೊಂದಿದೆ. ಕಾರ್ಯಾಂಗದ ಸದಸ್ಯರುಗಳನ್ನು ಸ್ವಿಸ್ ಶಾಸನಸಭೆ ಚುನಾಯಿಸುವುದರಿಂದಲೂ, ಶಾಸನಸಭೆಯ ಸದಸ್ಯರಲ್ಲದಿದ್ದರೂ, ಕಾರ್ಯಾಂಗದ ಸದಸ್ಯರು ಶಾಸನಸಭೆಗಳಲ್ಲಿ ಹಾಜರಿದ್ದು, ಮಸೂದೆಗಳನ್ನು ಮಂಡಿಸಿ, ಚರ್ಚೆಯಲ್ಲಿ ಮಾತ್ರ ಭಾಗವಹಿಸಲು ಅಧಿಕಾರವನ್ನು ಹೊಂದಿರುವುದರಿಂದಲೂ, (ಓಟುಮಾಡುವ ಅಧಿಕಾರವಿಲ್ಲ) ಶಾಸನಸಭೆಗಳ ನಿರ್ಧಾರವನ್ನೇ ಕಾರ್ಯಗತ ಮಾಡುವುದರಿಂದಲೂ, ಸ್ವಿಸ್ ಕಾರ್ಯಾಂಗ ಪಾರ್ಲಿಮೆಂಟರಿ

ಗುಣಗಳನ್ನು ಹೊಂದಿದೆಯೆಂದು ಹೇಳಬಹುದು. ಈ ಹಿಂದೆಯೇ ಹೇಳಿರುವಂತೆ, ಸ್ವಿಸ್ ಕೇಂದ್ರಸರ್ಕಾರದ ಮಂತ್ರಿಯೊಬ್ಬರು ಶಾಸನಸಭೆಯಲ್ಲಿ ಮಸೂದೆಯನ್ನು ಮಂಡಿಸಿ, ಅದು ಅಂಗೀಕೃತ ನಾಗದೆ ಹೋದರೆ, ಮಂತ್ರಿಮಂಡಳ ಬ್ರಿಟನ್ನಿನಲ್ಲಿರುವಂತೆ ರಾಜೀನಾಮೆ ಕೊಡಬೇಕಾಗಿಲ್ಲ. ಆ ವಿಷಯವನ್ನು ಸರ್ಕಾರ ಅಲ್ಲಿಯೆ ಬಿಟ್ಟುಬಿಡುವುದು. ಇಲ್ಲದಿದ್ದರೆ, ಶಾಸನಸಭೆಯ ಇಷ್ಟಾನುಸಾರವಾಗಿ ಮಸೂದೆಯನ್ನು ಮತ್ತೆ ರೂಪಿಸಿ ಮಂಡಿಸುವುದು.

ಸ್ವಿಸ್ ಕಾರ್ಯಾಂಗದ ಸದಸ್ಯರು ಎಂದರೆ ಮಂತ್ರಿಗಳು ಶಾಸನಸಭೆಯ ಸದಸ್ಯರಲ್ಲವೆಂದು ಈಗಾಗಲೇ ಹೇಳಿಯಾಗಿದೆ. ಮಂತ್ರಿಗಳಾಗಿ ಚುನಾಯಿತರಾದಾಗ ಶಾಸನಸಭಾಸದಸ್ಯರಾಗಿದ್ದರೆ, ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಡುವರು. ಬ್ರಿಟನ್ನಿನಲ್ಲಿ, ಮಂತ್ರಿಮಂಡಳ ಶಾಸನಸಭೆಯ ವಿಶ್ವಾಸವನ್ನು ಪಡೆದಿರುವತನಕ ಅಧಿಕಾರದಲ್ಲಿ ಇರುವುದು; ಆದರೆ ಸ್ವಿಟ್ಜರ್ಲೆಂಡಿನಲ್ಲಿ, ಕಾರ್ಯಾಂಗದ ಅಧಿಕಾರಾವಧಿಯನ್ನು ನಿರ್ದಿಷ್ಟವಾಗಿ ನಿಷ್ಕರ್ಷೆ ಮಾಡಲಾಗಿದೆ. ಈ ಅವಧಿಯಲ್ಲಿ ಫೆಡರಲ್ ಕೌನ್ಸಿಲರುಗಳನ್ನು ವಜಾ ಮಾಡಲು ಫೆಡರಲ್ ಅಸೆಂಬ್ಲಿಗೆ ಹಕ್ಕಿಲ್ಲ. ಸ್ವಿಟ್ಜರ್ಲೆಂಡಿನ ಆಡಳಿತಾಂಗ ರಾಜಕೀಯ ಬಹುಮತಪಕ್ಷವನ್ನು ಅವಲಂಬಿಸಿಲ್ಲ. ಇವೆಲ್ಲವೂ ಈ ಕಾರ್ಯಾಂಗದ ನಾನ್-ಪಾರ್ಲಿಮೆಂಟರಿ ಗುಣಗಳು. ಹೀಗೆ ಪಾರ್ಲಿಮೆಂಟರಿ, ಮತ್ತು ನಾನ್ ಪಾರ್ಲಿಮೆಂಟರಿ ಈ ಎರಡು ಪದ್ಧತಿಗಳ ಗುಣಗಳೂ ಸ್ವಿಸ್ ಕಾರ್ಯಾಂಗದಲ್ಲಿ ಅಡಕವಾಗಿರುವುದರಿಂದ, ಅದರಲ್ಲಿ ಜವಾಬ್ದಾರಿಯೂ ಸ್ಥಿರತೆಯೂ ಯಾವಾಗಲೂ ಕಂಡುಬಂದಿವೆ. ಸ್ವಿಸ್ ಪ್ರಜೆಗಳ ರಾಜಕೀಯ ಪರಿಜ್ಞಾನ, ಭಿನ್ನಾಭಿಪ್ರಾಯಗಳುಂಟಾದರೆ ಕೂಡಲೆ ಒಪ್ಪಂದಕ್ಕೆ ಬರುವ ಮನೋಭಾವ, ಇವುಗಳಿಂದ ಇಂತಹ ಅತ್ಯುತ್ತಮ ಕಾರ್ಯಾಂಗವನ್ನು ಅಲ್ಲಿ ಜಾರಿಗೆ ತರಲು ಸಾಧ್ಯವಾಗಿದೆ.

ಬ್ರಿಟನ್ನಿನ ಶಾಸನಸಭೆಗಳಲ್ಲಿ ಮೇಲಣ ಸಭೆಯಾದ ಹೌಸ್ ಆಫ್ ಲಾರ್ಡ್ಸ್ ಸಭೆಗೆ ಅಧಿಕಾರವೆಂಬುದು ಶೂನ್ಯ. ಈಚೀಚೆಗಂತೂ, ಅದಕ್ಕಿರುವ ಅಲ್ಪಸ್ವಲ್ಪ ನಾಮಕಾವಸ್ತೆಯ ಅಧಿಕಾರವನ್ನು ಸಹ ಕಿತ್ತುಕೊಳ್ಳುವ ಪ್ರಯತ್ನ ನಡೆದಿದೆ. ಕೆಳಗಣ ಸಭೆಯಾದ ಹೌಸ್ ಆಫ್ ಕಾಮನ್ಸ್ ಸರ್ವಾಧಿಕಾರಿಯಾಗಿದೆ. ಈ ಎರಡು ಸಭೆಗಳಿಗೂ ಇರುವ ಅಧಿಕಾರದಲ್ಲಿಯ ವ್ಯತ್ಯಾಸ ಎದ್ದೆದ್ದು ಕಾಣುತ್ತದೆ. ಆದರೆ ಸ್ವಿಸ್ ಶಾಸನಾಂಗದಲ್ಲಿ, ಕೌನ್ಸಿಲ್ ಆಫ್ ಸ್ಟೇಟ್ ಹಾಗೂ ನಾಶನಲ್ ಕೌನ್ಸಿಲ್ ಈ ಎರಡು ಸಭೆಗಳಿಗೂ ಕಾನೂನುಬದ್ಧವಾಗಿ ಒಂದೇ ಸಮನಾದ ಅಧಿಕಾರವಿದೆ. ಎರಡೂ ಸಭೆಗಳು ಅನುಮತಿ ಕೊಟ್ಟಹೊರತು, ಯಾವ ಶಾಸನವೂ ಜಾರಿಗೆ ಬರುವಂತಿಲ್ಲ. ಆದರೆ ವಾಸ್ತವವಾಗಿ, ಮೇಲಣ ಸಭೆಯಾದ ಕೌನ್ಸಿಲ್ ಆಫ್ ಸ್ಟೇಟ್ ಹೆಚ್ಚಿನ ಅಧಿಕಾರದ ಗೋಜಿಗೆ ಹೋಗದೆ, ಎಲ್ಲವನ್ನು ನ್ಯಾಷನಲ್ ಕೌನ್ಸಿಲ್ಲಿನ ಅಧಿಕಾರಕ್ಕೆ ಬಿಟ್ಟುಬಿಟ್ಟಿದೆ. ಭಿನ್ನಾಭಿಪ್ರಾಯ ಅಕಸ್ಮಾತ್ ಉಂಟಾದ ಸಂದರ್ಭದಲ್ಲಿ, ಎರಡು ಸಭೆಗಳೂ ತೋರಿಸುವ ಸೌಹಾರ್ದ ಮನೋಭಾವ, ಮತ್ತು ಒಪ್ಪಂದದ ಇಂಗಿತ ಬಹಳ ಗಮನಾರ್ಹವಾದ ಘಟ್ಟ ಪ್ರಸಂಶನೀಯವಾದ ಅಂಶ. ಎಲ್ಲಿಯ ವರೆಗೆ ಸ್ವಿಸ್ ಫೆಡರಲ್ ಅಸೆಂಬ್ಲಿಯು, ಪ್ರಜೆಗಳ ವಿಶ್ವಾಸಕ್ಕೆ ಪಾತ್ರವಾಗಿರುವುದೋ, ಅಲ್ಲಿಯ ವರೆಗೆ ಅದು ಪರಿಮಾಧಿಕಾರವನ್ನು ಹೊಂದಿರುವುದು. ಅದರ ನಿರ್ಧಾರಗಳನ್ನು ಬದಲಾಯಿಸಲು ಕಾರ್ಯಾಂಗಕ್ಕಾಗಲಿ, ನ್ಯಾಯಾಂಗಕ್ಕಾಗಲಿ ಸಾಧ್ಯವಿಲ್ಲ.

ಸ್ವಿಟ್ಜರ್ಲೆಂಡಿನ ಫೆಡರಲ್ ನ್ಯಾಯಾಸ್ಥಾನವನ್ನು, ಅಮೆರಿಕಾದ ಸುಪ್ರೀಂ ಕೋರ್ಟಿನೊಡನೆ ಹೋಲಿಸಿ ನೋಡಿದರೆ, ಸ್ವಿಸ್ ನ್ಯಾಯಾಸ್ಥಾನದ ಅಧಿಕಾರಗಳು ಬಹಳ ಅಲ್ಪವಾದುವು. ಮುಖ್ಯವಾಗಿ ಫೆಡರಲ್ ಶಾಸನಗಳನ್ನು ಕ್ರಮಬದ್ಧವಲ್ಲವೆಂದು ಘೋಷಿಸಲು ಸ್ವಿಸ್ ಫೆಡರಲ್ ನ್ಯಾಯಾಸ್ಥಾನಕ್ಕೆ ಯಾವ ಅಧಿಕಾರವೂ ಇಲ್ಲ. ಇದರ ಪರಿಣಾಮವಾಗಿ ಒಂದು ಅಂಶ ಉದ್ಭವವಾಗುತ್ತದೆ. ಸ್ವಿಟ್ಜರ್ಲೆಂಡಿನ ಕ್ಯಾಂಟನ್‌ಗಳ ಅಧಿಕಾರದಲ್ಲಿ, ಫೆಡರಲ್ ಸರಕಾರ ಕೈಹಾಕಿತೆಂದರೆ, ಕ್ಯಾಂಟನ್‌ಗಳು ಫೆಡರಲ್ ನ್ಯಾಯಾಸ್ಥಾನದ ರಕ್ಷಣೆ ಪಡೆಯಲು ಅವಕಾಶವಿಲ್ಲ. ಆದರೆ ಅಮೇರಿಕಾದಲ್ಲಿ ಇಂತಹ ಸಂದರ್ಭ ಉಂಟಾದರೆ, ಸಂಸ್ಥಾನಗಳು ಸುಪ್ರೀಂ ನ್ಯಾಯಾಸ್ಥಾನದ ಮೊರೆಹೊಕ್ಕು, ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಬಹುದು. ಎಂದರೆ, ಅಮೆರಿಕಾದ ಫೆಡರಲ್ ಸರ್ಕಾರಕ್ಕಿಂತ ಹೆಚ್ಚಿನ ಅಧಿಕಾರಗಳನ್ನು ಸ್ವಿಸ್ ಫೆಡರಲ್ ಸರ್ಕಾರ ಹೊಂದಿದೆ.

ಸ್ವಿಟ್ಜರ್ಲೆಂಡಿನಲ್ಲಿ ನಡೆಯುತ್ತಿರುವ ಸರ್ಕಾರ ಪ್ರತ್ಯಕ್ಷ ಪ್ರಜಾಪ್ರಭುತ್ವ ಅಥವಾ ಡಾಯರೆಕ್ಟ್ ಡೆಮೋಕ್ರೆಸಿ. ಬಹಳ ಬುದ್ಧಿವಂತರಾದ ಹಾಗೂ ವ್ಯಾಪಂಚಿಕ ತಿಳಿವಳಿಕೆಯುಳ್ಳ ಪ್ರಜೆಗಳು ಅಲ್ಲಿ ಇದ್ದಾರೆ. ಸ್ವಿಸ್ ರಾಜ್ಯಾಂಗ, ಆಧುನಿಕ ಪ್ರಜಾಪ್ರಭುತ್ವಕ್ಕೆ ಒಂದು ದೊಡ್ಡ ಆದರ್ಶವಾಗಿದೆ. ಎಲ್ಲಾ ರಾಜಕಾರಣಪಟುಗಳೂ, ರಾಜನೀತಿ ಶಾಸ್ತ್ರಜ್ಞರೂ, ಸ್ವಿಟ್ಜರ್ಲೆಂಡ್ ರಾಷ್ಟ್ರವನ್ನು ಮನಸಾರೆ ಹೊಗಳಿದ್ದಾರೆ. ರಾಜ್ಯಾಂಗ ಪರಿಣತರಾದ ಬ್ರೈಸ್, ಮನ್ರೋ ಮುಂತಾದ ಪಾಶ್ಚಿಮಾತ್ಯ ಮೇಧಾವಿಗಳು, ಆ ರಾಷ್ಟ್ರದ ಬಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಸುವರ್ಣಾಕ್ಷರಗಳಲ್ಲಿ ಬರೆದಿಡಲು ಅರ್ಹವಾಗಿವೆ. ಅದು ದೊಡ್ಡ ರಾಷ್ಟ್ರವಲ್ಲದಿದ್ದರೂ, ಅದರ ಅತ್ಯುತ್ತಮ ಸರ್ಕಾರ, ವಿಶ್ವದಲ್ಲಿ ಎಲ್ಲರ ಮನಸ್ಸನ್ನೂ ಆಕರ್ಷಿಸಿದೆ. ಪಕ್ಷರಾಜಕೀಯ, ಅಧಿಕಾರ ಲಾಲಸೆಯ ರಾಜಕೀಯ, ಇವುಗಳಲ್ಲಿ ಸ್ವಿಟ್ಜರ್ಲೆಂಡ್ ಎಂದೂ ಸಿಕ್ಕಿಕೊಳ್ಳಲಿಲ್ಲ. ಅದರ ಗಂಭೀರ ಮುದ್ರೆ ಅದಕ್ಕೆ ಮನ್ನಣೆಯನ್ನು ಸಂಪಾದಿಸಿಕೊಟ್ಟಿದೆ. ಬಹುಕಾಲದಿಂದಲೂ, ಎಲ್ಲಾ ಆಂತರರಾಷ್ಟ್ರೀಯ ಸಂಸ್ಥಗಳವರೂ ತಮ್ಮ ಪ್ರಧಾನಕಛೇರಿಯನ್ನು ಸ್ವಿಟ್ಜರ್ಲೆಂಡ್ ರಾಷ್ಟ್ರದಲ್ಲೇ ಹೊಂದಿದ್ದರು. ಸ್ವಿಸ್ ದೇಶದಲ್ಲಿ ರಾಷ್ಟ್ರೀಯತೆ ಮಾತ್ರವಲ್ಲದೆ, ಆಂತರರಾಷ್ಟ್ರೀಯ ವಾತಾವರಣ ಸಹ ಬಹು ಹೊಗಸಾಗಿದೆ. ಇಂತಹ ದೇಶದ ಉತ್ತಮ ರಾಜ್ಯಾಂಗದ ಉತ್ತಮ ಗುಣಗಳನ್ನು ನಮ್ಮ ರಾಷ್ಟ್ರದ ರಾಜ್ಯಾಂಗವನ್ನು ರೂಪಿಸುವಾಗಲೂ ಸಹ ಸಾಧ್ಯವಾದ ಮಟ್ಟಿಗೂ ಅನುಸರಿಸುವುದು, ನಮ್ಮ ಮಾತೃಭೂಮಿಯ ಏಳಿಗೆಯ ದೃಷ್ಟಿಯಿಂದ ತುಂಬಾ ಹಿತಕರ.

ಎಚ್ಚರಿಕೆ

ಶ್ರೀ. ಸಾಲಿ ರಾಮಚಂದ್ರರಾಯರು, ಧಾರವಾಡ

ಪಲ್ಲವಿ

ಹೊಣೆಯರಿತು ನಡೆದು ಸುಖದಿಂದೆ ಬಾಳು !
ಹೊಣೆಗೆಟ್ಟು ಹುಡಿಗೂಡಬೇಡವಯ್ಯಾ !

೧

ಅತಿಗಡಿಗೆ ತಗ್ಗುಗಳು ತಿವರುಗಳು ಮುಳ್ಳುಕ-
ಲ್ಲಡಿಗಡಿಗೆ ತೊಡರು ಹುಳು-ಹುಪ್ಪಡಿಗಳು !
ತಡೆಯಬೇಡಯ್ಯ; ಕಣ್ದೆರೆದು ಕಿವಿದೆರೆದು ಮುಂ-
ದಡಿಯಿಕ್ಕುತಿರು ಧೀರವೃತ್ತಿಯಿಂದೆ !

೨

ಒಪ್ಪುಹೆಜ್ಜೆಗೆ ನೆಲವು ಹೂವು ಹಾಸಿಗೆಯಹುದು,
ತಪ್ಪುಹೆಜ್ಜೆಗೆ ಹೂವು ಕಾಡುಮುಳ್ಳು !
ಒಪ್ಪುಹೆಜ್ಜೆಯನಿಡುತೆ ನಡೆವವಗೆ ಕೆಯ್ಗೊಡಲು
ತಪ್ಪದಿಹನಯ್ಯ ಸತ್ಪಕ್ಷಪಾತಿ !

೩

ಹೊತ್ತ ಭಾರಕ್ಕೆ ಬೆನ್ನ ಮೂಳೆ ಸುರ್ರಿವುದು ದೃಷ್ಟಿ-
ಯತ್ತಿತ್ತ ಕರ್ತವ್ಯವಥದಿ ಜಲಿಸಿ
ಉತ್ತಮರ ಹೆಜ್ಜೆಯಲಿ ಹೆಜ್ಜೆಯಿಕ್ಕುತ್ತೆ ನಡೆಯೊ,
ಕುತ್ತದಿಂಮಳಿಯಲಿಹುದಿದುವೆ ಯುಕ್ತಿ !

ಚಂದ್ರೋದಯ

ಶ್ರೀ. ವಿ. ಜಿ. ಭಟ್ಟ, ಎಂ. ಎ. ಧಾರವಾಡ

ಹರಿದು ಏರಿ ಬರುತಿರುವ ನೋಡು ಅಕೊ
ಚಂದ್ರ ದಿನ್ನೆ ಮಡ್ಡಿ !
ಜ್ಞಾನದಿಂದ ಸೌಂದರ್ಯದನುಭವಕೆ
ಬಂದಿತಿಂದು ಅಡ್ಡಿ
ಹುಡುಗ-ಕಾಣ್ಕೆ ಇನ್ನೆಲ್ಲಿ ? ಬೆಳೆದಿಹುದು
ಬಹಳ ಉದ್ದ ಚಡ್ಡಿ.
ಅರಿತರೇನು ಅಣುಶಕ್ತಿ, ವಿಶ್ವವಾ-
ದೀತೆ ನಮಗೆ ಗಮ್ಯ ?
ತೊಡೆಯ ತೋರಿ ಕಳೆದಂತೆ ಇರುಳುಗಳ !
ದೇಶ-ಕಾಲ ರಮ್ಯ;
ನಿದ್ದೆಯೊಂದನೇ ಬಯಸಿ ಬೇಡಿದರೆ
ಅಲ್ಲವೇನು ಕ್ಷಮ್ಯ ?
ಇಂಥ ತಂಪಿಗೂ ಮೂಲ ಬೆಂಕಿಯೇ
ಬತ್ತದಂಥ ಒರತೆ
ಕಾವುದೆಂದು ಕೈಮುಗಿದು ನಿಂದವಗೆ
ಕಾವಿಗೆಲ್ಲಿ ಕೊರತೆ ?
ಜ್ಞಾನ-ಭಕ್ತಿಗಳ ಸೇತು ಕಟ್ಟಿತೋ
(ಮಿಕ್ಕುದೆಲ್ಲ ಮರೆತೆ.)

ನಮೊ ನಿನಗೆ ಭಿಕ್ಷುಕಿಯೆ !

ಶ್ರೀ. ಕೋ. ಚೆನ್ನಬಸಪ್ಪ, ಬಳ್ಳಾರಿ

ಸಂಕಲ್ಪ ಮಾತ್ರದಿಂ ಲೋಕಲೋಕಂಗಳನು
ಸೃಷ್ಟಿಸುವ ಪಾಲಿಸುವ ಸಂಹರಿಸುವ ಶರ್ವಶಕ್ತಂ;
ನಕಲಿ ಸಿರಿಸಂಪದಕೆ ಶ್ರೀನಜ್ಞಭ ವಿರಕ್ತಂ;
ಜಗದ ಕಣ್ ಕೆಸಿ ಮೂಗು ಕೈಕಾಲು ಮಾನವನು
ಅವ ನೀನೇ ದೇವನೆಂತು ದೈನ್ಯದಿ ಬಂದು---
ಕುರುಡ ಹೇಳಲಂ ಮೂಗ ಕ್ಷುಲ್ಲಕ ಕುರೂಪದಲಿ
ವಿಭವನೇಷಣನಾಂತು ನಿಂತು ನೀ ಬಾಗಲಲಿ
ಬಾಯ್ದೆರೆದು ಬೇಡುತಿಹೆ ಒಂದಗುಳ ನೀಡೆಂಬಿ
ಎನ್ನ ಹಂಕಾರದೆದೆಗೊದ್ದಂತೆ---ಗರುಡ ಹರಿ-
ಯುವ ಹಾವ ! ಓ ದೇವ ಏನಿದೀ ನಿನ್ನಾಟ ?
ಮನುಜರಹಂಕಾರದಲಿ ಕೊಡುವೆಲ್ಲ ಕಾಟ-
ಗಳ ಸಹಿಸುತಿಹೆ---ನಾವ್ ಸಿಗ್ಗಿನಿಂ ಮಣಿವ ತೆರ !
ನಮೊ ನಿನಗೆ ಭಿಕ್ಷುಕಿಯೆ, ನೀನೆನಗೆ ಗುರುಮಾತೆ !
ನೀನವನ ಕಡಿನೆಳಲೆ; ಅವನ ದರ್ಶನದಾತೆ !!

ಈ ಘಟಪ್ರವಾಹ

ಶ್ರೀ ಚೆನ್ನವೀರ ಕಣವಿ, ಧಾರವಾಡ

ಬೆಟ್ಟದುದರದಿ ಹುಟ್ಟಿ ದರಿ-ಕಂದರವ ಮೆಟ್ಟಿ
ಮುಳ್ಳುಕೊಂಪೆಗಳಲ್ಲಿ ಬಂಡೆಗಲ್ಲುಗಳಲ್ಲಿ
ಹರಿಹರಿದು ಸುರಿಸುರಿದು ಮೊರೆಮೊರೆದು ಕರೆಕರೆದು
ಬಂದುದೀ ತೊರೆಗೆ ತ್ವರದಿಂದೊಡ್ಡನೊಡ್ಡಿ
ಜಲಸಂಗ್ರಹವೆನೆಂಬಚ್ಛೆಯಿಂದದರ ಕೊರಲಿ-
ಗುರುಳು ಬಿಗಿದಿದ್ದರಾ ಬಯಕೆ ಬರುಡೊರೆಯಾಗಿ
ಸ್ವಚ್ಛಂದವಹ ಸಲಿಲವಲ್ಲಿಯೆ ಕಲಿತು, ಮಲೆತು
ನಿಲುಗಡೆಯ ತಿರುಗಣೆಯಲುರುಳಿ ಹೊರಳುತಲಿತ್ತು.
ನನ್ನೆದೆಯಂತರಾಳದಂತಃಕರಣವುಕ್ಕಿ
ಬಂಧನವ ಕಡಿದೊಗೆದು ಹೊರಚೆಲ್ಲಿ ಧುಮ್ಮಿಕ್ಕಿ
ಮುಂಬರಿದು ಮುನ್ನೋಟ, ಮುಂದೋಟಗಳ ಗುರಿಯ
ತೆಕ್ಕೆಯಲಿ ಮುನ್ನಿರಿನಾಗರವ ಸೇರಲಿಹ
ಸಹಜ ಜೀವನದಾದಿ-ಮಧ್ಯದಂತರ್ದಾಹ
ಕಣಿಸಿ ತೀರ್ಚಲಿಕಿದೋ, ಈ ಘಟಪ್ರವಾಹ !

ವೃತ್ತಪತ್ರದ ವಿಶ್ವವ್ಯಾಪ್ತಿ

(ಲಲಿತಪ್ರಬಂಧ)

ಶ್ರೀ. ಬಿ. ಆರ್. ವಾಡಪ್ಪಿ, ಎಂ. ಎ. ಧಾರವಾಡ

ಪರಮಾತ್ಮನಂತೆ ಇಂದು ಪತ್ರಿಕೆ ಸರ್ವವ್ಯಾಪಿಯಾಗಿದೆ. ಮಲಗಿ ಎದ್ದೊಡನೆ ಮೊಗದೋರಿಸಿದ ಪತ್ರಿಕೆ, ಮರಳಿ ಮಲಗುವವರೆಗೂ—ಸ್ಥಳಕಾಲಗಳಿನ್ನಿದೆ— ಒಂದಿಲ್ಲೊಂದು ರೂಪದಿಂದ ದರ್ಶನ ಕೊಟ್ಟೇ ಕೊಡುವುದು.

ಯುದ್ಧವು ಜಗತ್ತಿಗೆ ಎಷ್ಟೋ ಹಾನಿಯನ್ನುಂಟುಮಾಡಿದೆ ಎಂದು ಒಪ್ಪುವ ಜನ ನಮ್ಮಲ್ಲಿ ಎಷ್ಟೋ ಇರಬಹುದು; ಆದರೆ ಅದು ಜನರನ್ನು ವರ್ತಮಾನಪತ್ರ ಓದಲು ಪ್ರೇರಿಸಿದೆ ಎಂಬುದನ್ನು ಸಂತೋಷವಾಗಿ ಒಪ್ಪಿಕೊಳ್ಳಬಹುದು! ಮುಂಜಾನೆ ಚಹ ಸೇವನೆಯ ಮೊದಲು, ಕಿಟಕಿಯಲ್ಲಿ ಹಣಿಕಿಕ್ಕಿ ವರ್ತಮಾನಪತ್ರದ ಹಾದಿ ನೋಡುವುದು ಈಗ ನಮ್ಮ ರೂಢಿಯಾಗಿದೆ. ಮುಂಜಾವಿನ Bed-Tea ಗೆ ವರ್ತಮಾನಪತ್ರ, 'ಚೂಡಾ-ಚಕ್ಕಲಿ'ಗಿಂತಲೂ ರುಚಿಕಟ್ಟು! ವೃತ್ತಪತ್ರದ ಮೇಲಿನ ದಪ್ಪವಾದ ಅಕ್ಷರಗಳು ನಮ್ಮ ಕಣ್ಣನ್ನು ಮೊದಲು ಸೆರೆಹಿಡಿಯುವುವು:— "ರಷ್ಯ ಅಮೇರಿಕೆಗಳ ನಡುವೆ ಘರ್ಷಣೆ." "ಇಂದೇ ಬ್ರಿಟಿಶರು ಹೊರಡುವರು" ಹಾಗೆ ಪುಟತಿರುವಿದೊಡನೆ—"ಜಾತೀಯ ಗಲಭೆಗಳು ಬೆಳೆಯುತ್ತಿವೆ" "ಓದುಗರೆ— ಓದಿರಿ— ಅನ್ಯತಸೇವನೆ ಮಾಡಿ ಅಮರರಾಗಿರಿ!" ಇಂತಹ ಭೀಕರವಾದ—ಆಕರ್ಷಕವಾದ—ತಲೆಬರೆಹಗಳೊಂದಿಗೆ ನಮ್ಮ ಮುಖಮಾರ್ಜನೆಯು ಪ್ರಾರಂಭವಾಗುವುದು. ತುಸು ಒಳಗೆ ಹೊರಗೆ ಹೋಗಿ ಬಂದು ವಿರಾಮ ಖುರ್ಚಿಯನ್ನಾಶ್ರಯಿಸಿ, ಮತ್ತೆ ಅಗ್ರಲೇಖನ ಓದಲು ಪ್ರಾರಂಭ: "ಎಲ್ಲೆಲ್ಲಿಯೂ ಕಾಳಿನ ತುಟಾಗ್ರತೆ". ನಾಳೆಯ ಸಾವಿನ ಭೆಟ್ಟಿಯನ್ನು ಇಂದೇ ಮಾಡಿಕೊಳ್ಳುವುದು. ಅಯ್ಯೋ, ಒಂದಾಣೆಯೊ ಎರಡಾಣೆಯೊ ಕೊಟ್ಟು ತಲೆ-ಮೈ ನೋವು ಮಾಡಿಕೊಂಡು, ಸ್ನಾನ ಕರ್ಮಾದಿಗಳನ್ನು ತೀರಿಸಿಕೊಂದು "ರೇಶನ್ ಕೂಳು" ತಿಂದು, ಬೇಸಗೆಯ ಬಿಸಿಲಿನಲ್ಲಿ ಬಳಲುತ್ತಾಗಲಿ, ಮಳೆಗಾಲದಲ್ಲಿ ರೊಜ್ಜು ತುಂಬಿದ ರಸ್ತೆಯಲ್ಲಿ ಜಾರುತ್ತಲಾಗಲಿ—ಹಾದಿ ಹಿಡಿಯುವುದು. ದೂರದಿಂದಲೇ ಅಹಹ! ಸುಸ್ವರ ಮತ್ತೆ ಕೇಳುವುದು: "ಆ.... ಕರ್ನಾಟಕಸ್ಸ" "ಹೊಸಯುಗ" "ಟಾಯಿಮ್ಸ್!" ಎರಡು ಸೆಜ್ಜೆ ಮುಂದೆ ಹೋಗುವುದರೊಳಗಾಗಿ, ಪರಮೇಶ್ವರ ಪಾರ್ವತಿಗೆ ಪ್ರತ್ಯಕ್ಷನಾದಂತೆ ನಿಮ್ಮೆದುರು "ಭೋಂಕೆನೆ" ಬಂದು ನಿಲ್ಲುವ ಯುವಕ ಏಜಂಟ್! "ಬೇಡಾ" ಎಂದು ಬಾಯಿ ಒದರಿದರೂ ನಮ್ಮ ಮನಸ್ಸು "ತುಸು ನೋಡು ಹೊಸಪತ್ರಿಕೆ" ಎಂದು ಸೂಚಿಸುತ್ತದೆ. ವಾರಪತ್ರಿಕೆಗಳ ಹೊದಿಕೆಯ ಮೇಲಿನ ವಾರದ ಭವಿಷ್ಯ ಕಣ್ಣು ಕುಣಿಸುತ್ತದೆ. ಸತ್ಯ ಪ್ರಪಂಚದಲ್ಲಿ ಕಾಣದ್ದನ್ನು ಕನಸಿನ ಪ್ರಪಂಚದಲ್ಲಿಯಾದರೂ ಕಾಣಬೇಕಲ್ಲವೆ? ಆ ಹುಚ್ಚು ನಮ್ಮನ್ನು ಕುಣಿಸದೆ ಬಿಡುವುದಿಲ್ಲ. ಅದಕ್ಕೋಸುಗ ವಾರ ಭವಿಷ್ಯದ ಸಲುವಾಗಿ ಎರಡಾಣೆಗೆ ಬಿತ್ತು ಕತ್ತರಿ!

ಆ....ರಾಶಿ....ಈ ರಾಶಿ ಕೊನೆಗೆ ನಮ್ಮ ರಾಶಿ....."ಶನಿಮಹಾರಾಯನು ನಿಮ್ಮ ರಾಶಿಯಲ್ಲಿಯೇ ನೆಲಸಿದ್ದಾನೆ." ಯಾಕೆ ಬಿಟ್ಟಾನು? ಮುಂದುವರೆದಂತೆ "ದುಡ್ಡನ್ನು ಈ ಪಾರ ಕಾಣೆರಿ, ವೈರಿಗಳು ಹೆಚ್ಚಾಗುವರು." ವೈರಿಗಳಿಗೇನು ಕೊರತೆ ಈಗಿನ ಜಗತ್ತಿನಲ್ಲಿ! ಕದ್ದು ಕಾಳು ತಂದಾಗ ನೆರೆಮನೆಯವರಿಗೆ ಹೊಟ್ಟೆ-ಕಿಚ್ಚು. ಕಚೇರಿಯಲ್ಲಿ ಹೆಚ್ಚಿನ ಸ್ಥಾನ ಸಿಕ್ಕಾಗ ಕೆಳಗಿನವರಿಗೆ ಮತ್ಸರ! ಅವರಿಗೆ ಸುಖವಾದಾಗ ನಮಗೆ ದುಃಖ. ನಮಗೆ ಜಯವಾದಾಗ ಅವರಿಗೆ ದುಃಖ. ಸಾಕು ಈ ರಾಶಿಯ ಭವಿಷ್ಯ. ದೇವರು ನಮ್ಮ ಜನ್ಮಭವಿಷ್ಯವನ್ನು ಬರೆದೇ ನಮ್ಮನ್ನು ಮೃತ್ಯುಲೋಕಕ್ಕೆ ದಬ್ಬಿದ್ದಾನೆ. "ದೇವಲೋಕ ಮೃತ್ಯುಲೋಕ ಬೇರಿಲ್ಲ ಕಾಣಿರೊ" ಎಂದು ಬಸವಣ್ಣನವರು ಸಾರಿದ್ದಾರೆ. ನಮ್ಮಂತಹ ಜನಕ್ಕೆ ಅದು ಹೇಗೆ ಸಾಧಿಸೀತು? ದೇವಲೋಕದಲ್ಲಿಯೂ ಮೃತ್ಯುವನ್ನು ಕಾಣುವ ಮಹಾಪುರುಷರು ನಾವು.

ಹಾಗೂ ಹೀಗೂ ಕಚೇರಿ ಪ್ರವೇಶಿಸಿದಾಗ, ನಮ್ಮ ಮೊದಲ ಪ್ರಶ್ನೆ "ಸಾಹೇಬ ಬಂದಾನೇನು?" ಎಂದು ದ್ವಾರಪಾಲಕನನ್ನು ಕೇಳುವುದು. ಅವನಾದರೋ— ವೈಕುಂಠದಿಂದ ಭೂಲೋಕಕ್ಕೆ ಇಳಿದು ಬಂದವನಂತೆ "ಇಲ್ಲ ರಾವಸಾಬ್, ಫಿರತೀವ್ಯಾಲೆ ಹೋಗ್ಯಾನ. ಪೇಪರನ್ಯಾಗ ಕೊಟ್ಟಿಲ್ಲಲೆ?" ಎಂದು ಮರಳಿ ನಮ್ಮನ್ನೇ ಮಂಕುಮಾಡುವ. 'ಅಹುದು ಮಹಾರಾಯಾ, ಆದೆಲ್ಲಿ ಮೂಲೆಯಲ್ಲಿ ಪ್ರಕಟವಾಗಿತ್ತೋ ನಾನು ನೋಡಲಿಲ್ಲ.' ಎನ್ನಬೇಕಾಗುವುದು. ಪೇಪರಿನ ಪ್ರಪಂಚ ಇಷ್ಟು ವಿರಾಟ ಸ್ವರೂಪ ತಾಳಿಕೊಂಡು ನಮ್ಮೆದುರು ನಿಂತುಕೊಂಡಿದೆ. ಪಾಶ್ಚಿಮಾತ್ಯರು ನಮ್ಮ ದೇಶಕ್ಕೆ ಕೊಟ್ಟ ಮೊದಲನೆಯ ಸುಧಾರಣೆ ಈ ವೃತ್ತಪತ್ರವಲ್ಲವೇ? ಬಡಿದಾಟದ ಬುಗ್ಗೆ ಚಿಮ್ಮಿದ್ದು ಈ ಮಹಾ ಪರ್ವತದಿಂದಲೇ ಸರಿ. ಹೊಸ ಕಾಲಕ್ಕೆ ತಕ್ಕ ಹೊಸ ಸುದ್ದಿಗಳ ಸುರಿಮಳೆಯಾಗಬೇಕು. ಬಹಳ ದಿನಗಳಿಂದ ನಡೆದುಬಂದ ಪತ್ರಿಕೆಗಳು ಈಗ ಕುಂಟುತ್ತಲಿವೆ; ಹೊಸದು ಹಳೆಯದನ್ನು ಹೀಯಾಳಿಸುತ್ತದೆ. "ಹಳೆಯ ಎತ್ತು ಹೊಳೆಯಲ್ಲಿ ಹೂಡು" ಎನ್ನುವ ಗಾದೆಯ ಮಾತು ಸತ್ಯಮಾಡಲೆಂದು, ಹಳೆಯ ವೃತ್ತಪತ್ರಗಳು ತಮ್ಮ ಮಹಿಮೆಯನ್ನು ಒಮ್ಮೊಮ್ಮೆ ಬೀರುವುದುಂಟು. ಸನಾತನ ಧರ್ಮದ ತತ್ತ್ವಗಳನ್ನು ಸಾರಿ, ರಾಕ್ಷಸೀವೃತ್ತಿಗಿಳಿದ ಮನುಜರನ್ನು ಉದ್ಧರಿಸಲೆಂದು ಹಾತೊರೆಯುವ ಅಂತಹ ಪತ್ರಿಕೆಗಳು—ಸಹರಾ ಅರಣ್ಯದಲ್ಲಿ "ಓಯಾಸಿಯಸ್" ಇದ್ದಹಾಗೆ! ಕೆಲವು ಪ್ರಗತಿಪರ ಪತ್ರಿಕೆಗಳು ತರುಣರ ಬುದ್ಧಿಯನ್ನು ಗಾಳಿಗುಂಟ ಹಾರಿಸಿ ಕೈಬಿಡಬಹುದು. ಮುದುಕರ ಮನಸ್ಸನ್ನು ಜಜ್ಜಬಹುದು! ಒಟ್ಟಿಗೆ ಅವರಿಗೂ ಸುಖವಿಲ್ಲ, ಇವರಿಗೂ ಇಲ್ಲ. ಗಾಳಿಯ ಸುದ್ದಿ ಹಾಳಿ-

ಹಾಳಯಲ್ಲಿ ಮೂಡಿ, ಕೊನೆಗೆ ಅನಲಕ್ಕೆ ತಿನ್ನುವ ಸಾಧನವಾದರೆ ಆಶ್ಚರ್ಯವೇನು? ಪತ್ರಿಕೆಗಳಲ್ಲಿಯ ಸುದ್ದಿಗಳನ್ನು ಮನದಲ್ಲಿ ಹತ್ತಿಟ್ಟು ಕೆಲಸಕ್ಕೆ ನೊದಲು ಮಾಡುವುದು. ಮೇಲಿನ ಫೈಲು ಕೆಳಗೆ ಇಳಿಸುವುದು, ಕೆಳಗಿನದನ್ನು ಮೇಲೆ ಇಡುವುದು. ನಡುವೆ ತುಸು ವಿಶ್ರಾಂತಿ ಎಂದು ಖುರ್ಚಿಗಾತು ತೂಕಡಿಸುವುದು. ಹೀಗೆ ಕಾಲಕ್ರಮ ನಡೆದಾಗ, ಹತ್ತಿರದ ಕಾರಕೂನ ಮೈ ಕೈ ಮುರಿದು ಒಮ್ಮೆ ಆಕಳಿಸಿ "ಬರ್ರಿ, ಇಷ್ಟು ಹೊರಗೆ ಹೋಗಿ ಬರೋಣ" ಎಂದು ಕರೆಯುವ. ಕಚೇರಿಯ ಕೆಲಸವೇನು ನಮ್ಮ ಮನೆಯ ಕೆಲಸವೇ? ಮೇಲಾಗಿ "ಸಾಹೇಬ ಟೂರ್ ಮ್ಯಾಲೆ ಹೋಗ್ಯಾನ." ಅಂದಬಳಿಕ, ಕಾಲು ತಾನಾಗಿ ಚಹದ ಅಂಗಡಿಯ ಕಡೆಗೆ ಹೊರಡುವುವು. ಅಂಗಡಿಯನ್ನು ಪ್ರವೇಶಮಾಡಿ ಕೂಡುವುದೊಂದೆ ತಡ; 'ಸುಬ್ಬಯ್ಯ' ಬಹಳ ಆದರದಿಂದ ಎದ್ದು ನಿಂತು, ತನ್ನ ಚಿಕ್ಕಮಾಣಿಗೆ "ರಾಯರಿಗೆ ವರ್ತಮಾನಪತ್ರ ಕೊಡು; ನುತ್ತು ತಿನ್ನುವುದಕ್ಕೇ ಏನು ಬೇಕು ಕೇಳು" ಎಂದು ಗಟ್ಟಿಯಾಗಿ ಕೂಗಿ ಹೇಳುತ್ತಾನೆ. ನೋಡಿರಿ ಹೊಟ್ಟೆ ಹಸಿದಾಗಲೂ ಮೊದಲು ನಮ್ಮ ಕೈಯಲ್ಲಿ ವೃತ್ತಪತ್ರ ಬರಬೇಕು! ಸುಬ್ಬಯ್ಯ ಇಷ್ಟಕ್ಕೆ ಬಿಡುತ್ತಾನೆಯೇ ನಮ್ಮನ್ನು? "ಏನರೀ, ಬಹಳ ಭೀಕರ ಮಳೆಯಿಂದ ಎಷ್ಟೋ ಹಳ್ಳಿಗಳು ಮುಳುಗಿನೆಯಂತೆ; ಪೇಪರಿನಲ್ಲಿ ಬಂದಿದೆ" ಎನ್ನುವ. "ಹೋಗಲಿ ಬಿಡು ಸುಬ್ಬಯ್ಯ, ನಾವು ಮುಳುಗಿಲ್ಲ" ಎಂದು ಪ್ರಶ್ನೆಯನ್ನು ತೊಡೆದುಹಾಕುವುದೊಂದೇ ತಡ; ಹತ್ತಿರವೇ ಕುಳಿತಿರುತಿಲ್ಲವ ಇನ್ನೊಬ್ಬ "ಅದು ಹ್ಯಾಗರಿ. ಅವರಂದರ ನಾವು; ನಾಳೆ ನಮಗೂ ಬಂದೀತು ಅಂಥ ಪ್ರಸಂಗ" ಎಂದೆನ್ನುತ್ತಲೇ ಜೋಂಪಾ ಬಾಯಲ್ಲಿ ಹಾಕುವ. ಅಯ್ಯೋ, ಈ ಜನಗಳಿಗೆ ವೃತ್ತಪತ್ರಿಕೆಯ ಸುದ್ದಿಯನ್ನು ಬಿಟ್ಟು ಬೇರೆ ವ್ಯವಹಾರವೇ ಇಲ್ಲವೇ? ಮಾತಿಗೆ ಮೊದಲು—ಶುದ್ಧ ಹುಂಬ ಕೂಡಾ ರಾಜಕಾರಣಿಯಂತೆ ಮಾತಿಗೆ ಮೊದಲು ಮಾಡಿ—ಪೇಪರಿನ ಸುದ್ದಿ ಹೇಳಿ, ತನ್ನ ಕೆಲವು ಮಾತು ಜೋಡಿಸಿ ಗುರುತು ಇಲ್ಲದವರ ಸಂಗಡ ಹಲ್ಲುಕಿರಿಯುತ್ತಾನೆ.

ಒಮ್ಮೆ ಕುಡುಗನ ಅಭ್ಯಾಸದ ಪ್ರಗತಿ ನೋಡಿಬರೋಣ ಎಂದು ಸ್ಕೂಲಿಗೆ ಹೋದೆ. ಮಧ್ಯಾನ್ಹದ ಬಿಡುವು. ಶಾಲೆಯ ಅಧ್ಯಾಪಕರ ಕೋಣೆಯಲ್ಲಿ ಪಾಗ್ಯಾದ ನಡೆದಿತ್ತು. ಒಬ್ಬ ಬಹಳ ಓದಿದವನೆಂಬ ಬಿಂಕದಿಂದ ಟೀಪ್ಪಿಗೆ ಮುಂದೆ ಸರಿಸಿ "Socialism ನಮ್ಮ ದೇಶಕ್ಕ ಬ್ಯಾಡ; ಅದು ಕೂಲಿಕಾರರು ಹೂಡುವ ಬಂಡು! ದೇಶದ ಹಿಂದಿನ ಗೌರವ ಕಳೆಯುವ ಪಾರ್ಟಿ. ಇವತ್ತ ಅಗ್ರಲೇಖದಲ್ಲಿ ಅದನ್ನೇ ಬರೆವಾನ ನೋಡ್ರಿ!" ಎಂದ. ಮತ್ತೊಂದು ವ್ಯಕ್ತಿ "ಏನರ್ರೀ....ಜನರು ಹುಳುಸತ್ತಾಂಗ ಸಾಯಲಿಕ್ಕೆ ಹತ್ತೀದ.... ಸರಕಾರ ದರಕಾರ ಮಾಡವಲ್ಲತ್ತ..... ಹಿಂದಿನ ಪುಟದಾಗ ಅದನ್ನಽ....ಬರದಾನ ನೋಡ್ರಿ" ಎಂದಿತು. ಈ ಮಾತಿನ ರಭಸ ಮುಗಿಯುವತನಕ ನನ್ನನ್ನು ಮಾತನಾಡಿಸುವ ನಾಗರಿಕತೆ ಕೂಡ ಅವರಿಗೆ ಬರಲಿಲ್ಲ. ಅದು ಅವರ ತಪ್ಪಲ್ಲ; ಪೇಪರಿನ ಸುದ್ದಿ ಅವರನ್ನು ಅಷ್ಟು ಮೈಮರೆಯಿಸಿತ್ತು. "ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತ" ಎಂದು ಸೋಮೇಶ್ವರ ಶತಕದಲ್ಲಿ ಕವಿ ಹೇಳಿಲ್ಲವೇ? ಹಾಗೆ ಒಂದೇ ಪೇಪರಿನ ಸುದ್ದಿ ರುಚಿಕಟ್ಟಾಗಿ ಅನೇಕ ಮುಖಗಳಿಂದ ಬಣ್ಣ ಬಳಿದುಕೊಂಡು ಬಂದಾಗ—ನಿಮಗೆ ಎಷ್ಟೋ ಜ್ಞಾನವಾದೀತು. ಒಟ್ಟು ನಿಮ್ಮಲ್ಲಿ ಸಹಾನುಭೂತಿ ಬೇಕು. ನೀವು ತಿಳಿದವರೆಂಬ ಹೆಮ್ಮೆ ನಿಮಗಿದ್ದರೆ, ಹೆರವರ "ಹಾಡಿದ್ದು ಹಾಡು ಕಿಸಬಾಯಿದಾಸ" ಕೇಳಬಾರದು ಎನಿಸುತ್ತದೆ. ಕೇಳಿದರೂ ಮೋರೆಯ ಮೇಲೆ ಮಂದಹಾಸ ಬಂದು, ಹೇಳುವವರಿಗೆ "ನಿಮ್ಮ ಹುಚ್ಚುಹರಟೆ ಸಾಕು" ಎಂದು ಸೂಚಿಸುತ್ತದೆ. ಏನೇ ಇದ್ದರೂ ವರ್ತಮಾನಪತ್ರ ಓದುವುದು ಒಳಿತಾದದ್ದು ಎಂದು ಹೇಳಲೇಬೇಕು. ಹಾಗೆ ಹೇಳದಿದ್ದಲ್ಲಿ ೨೦ನೆಯ ಶತಮಾನದ ನವನಾಗರಿಕನಿಗೆ ಕಪ್ಪುಕಲೆ ಹತ್ತೀತು! ತಮಗೆ ಓದುಬರಿಪ ಬಾರದಿದ್ದರೂ, ಅಂಗಡಿಯ ವ್ಯಾಪಾರಕ್ಕೇ ಧಕ್ಕೆಬಂದೀತೆಂದು ಪೇಪರನ್ನುಕೊಂಡು, ಬಂದ ಗಿರಾಕಿಗಳಿಂದ ಸುದ್ದಿಸಂಗ್ರಹಿಸುವ ಮಾಲಕನ ಲೀಲಾ ಚಾಲ ನೋಡುವಂತಹದು.

"ಬುದ್ಧಿಗೆ ಅನ್ನವಾಗುವಂತಹ ವಿಚಾರಗಳಿಗಿಂತಲೂ ಹಾಳು ಸುದ್ದಿಗಳೇ ಎದ್ದು ಕುಣಿಯುತ್ತವೆ ಈ ಪತ್ರಿಕೆಗಳಲ್ಲಿ. ಪುಟಗಳ ಬಹುಭಾಗ ಜಾಹೀರಾತಿಗೆ ಮೀಸಲು" ಎಂದು ನನ್ನ ಹಟಮಾರಿ ಗೆಳೆಯ ಒಮ್ಮೆ ನುಡಿದಿದ್ದ. ಆ ಮಾತನ್ನು ನಾನು ಆಗ ಖಂಡಿಸಿದ್ದೆ. ಆದರೆ ಬರುಬರುತ್ತ ಕತ್ತಲೆ ಬಯಲಾಯಿತು. ಮಾಡುವುದೇನು? ಪತ್ರಿಕೆಗಳು ಬಾಳಿ ಬದುಕಿ ಜನಸೇವೆ ಮಾಡಬೇಕಾದರೆ ಜಾಹೀರಾತುಗಳು ಅವಶ್ಯ; ಲೇಖನಗಳಲ್ಲ! ಭಾಷಣಕ್ಕಾಗಿ ಇಟ್ಟುಕೊಂಡ ವಿಷಯ ಬಿಟ್ಟು ಬೇರೊಂದು ವಿಷಯ ಹೇಳುವ ಭಾಷಣಕಾರನ ಗತಿಯಾಗಿದೆ— ನಮ್ಮ ಪತ್ರಿಕೆಗಳ ಗತಿ. ಏನಾದರೂ ಇರಲಿ, ಜಗತ್ತಿನ ವಾರ್ತೆ ತಿಳಿಯಬೇಕು. ಜಗತ್ತಿನಲ್ಲಿಯ ಸತ್ಯವೂ ಸುಳ್ಳಾಗಬೇಕು. ಶಾಂತ ವಾತಾವರಣವು ಕದಡಬೇಕು—ಒಟ್ಟು ಸಮಾಜ ಸುಧಾರಿಸಬೇಕು. ಇದೇ ವೃತ್ತಪತ್ರದ ಗುಟ್ಟು ಅಲ್ಲವೇ? ಮುಂಜಾವಿನಿಂದ ರಾತ್ರಿ ಮಲಗುವವರೆಗೆ ಒಂದಿಲ್ಲೊಂದು ರೀತಿ ನಾವು ವೃತ್ತಪತ್ರವ ಸಂಬಂಧ ಇಟ್ಟುಕೊಂಡಿರುತ್ತೇವೆ. ಕೆಲಸ ಮುಗಿಸಿ ಕಚೇರಿಯಿಂದ ಕಾಲೆಳೆಯುತ್ತ ಮನೆಗೆ ಬಂದಾಗ, ಮಡದಿ ಅಡಿಗೆಯ ಗಡಬಡಿಯಲ್ಲಿರುತ್ತಾಳೆ. ಆಕೆಗೆ ಬಿಡುವು ಹೇಗೆ ಸಿಕ್ಕೀತು? ಮತ್ತೆ ನಡುಮನೆಯಲ್ಲಿ ನಾವು ಕುಳಿತುಕೊಂಡು ಮೇಜಿನ ಮೇಲಿನ ಪತ್ರಿಕೆಗೆ ಕೈಚಾಚಬೇಕು! ಛೀ, ಇದರ ದರುಶನ ಬೇಡ, ಜಗತ್ತಿನಲ್ಲಿ ನಡೆಯುವುದನ್ನು ನಾವೇಕೆ ನಮ್ಮ ಕಣ್ಣೆದುರು ತಂದುಕೊಳ್ಳಬೇಕು? ನಿಶ್ಚಿಂತೆಯು ನಮ್ಮಲ್ಲಿ ನೆಲಸಬೇಕಾದರೆ, ಚಿಂತೆಯ ತವರುಮನೆಯಾದ ವೃತ್ತಪತ್ರಿಕೆ ಓದುವುದನ್ನು ಬಿಡಬೇಕೆಂದು ಒಮ್ಮೊಮ್ಮೆ ಎನಿಸುತ್ತದೆ. ಆದರೆ ಸಮಾಜಜೀವಿ, ಇಪ್ಪತ್ತನೆಯ ಶತಮಾನದಲ್ಲಿ ಅನ್ನ ಬಿಟ್ಟು ಇರಬಹುದು; ಆದರೆ ವೃತ್ತಪತ್ರ ಬಿಟ್ಟು ಇರಲಾರ. ಇದನ್ನು ಮನಸ್ಸು ಒತ್ತಿ ಹೇಳಿದಾಗ— ಇದ್ದಂತಹ ವೃತ್ತಪತ್ರಗಳಿರಲಿ— ಓದಬೇಕೆಂದೆನಿಸಿದರೆ ಓದುವುದು; ಇಲ್ಲವಾದರೆ ಇಲ್ಲ. ತಪ್ಪು ನಮ್ಮದಲ್ಲ!

'ಅಂಬಿಕಾತನಯದತ್ತ'ರ 'ಗರಿ'

(ಪರಿಚಯಾತ್ಮಕ ಉಪನ್ಯಾಸ)*

ಡಾ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

★

~~ಸ್ನೇಹಿತರೆ ಎಳೆಯರೆ ಗೆಳೆಯರೆ,~~

ಇಂದು ನಿಮಗೆಲ್ಲ ಆಧುನಿಕ ಕನ್ನಡ ಕವಿಯೊಬ್ಬನ ಪರಿಚಯ-ವೊಂದಿಗೆ ಆತನದೊಂದು ಕೃತಿಯ ಪರಿಚಯವನ್ನೂ ಮಾಡಿಕೊಡ ಬೇಕೆಂದಿದ್ದೇನೆ. ಆ ಕವಿ ಯಾರು ನಿಮಗೆ ಗೊತ್ತೆ? ಆತನ ಹೆಸರನ್ನು ನೀವೆಲ್ಲರೂ ಕೇಳಿರಬಹುದು. ನಿಮ್ಮಲ್ಲಿಯ ಎಷ್ಟೋ ಜನರು ಅವನನ್ನು ಕಣ್ಣಾರೆ ಕಂಡಿರಬಹುದು. ಆತ ಹೇಳುವ 'ಕುಣಿಯೋಣು ಬಾರಾ ಕುಣಿಯೋಣು ಬಾ!' 'ಪಾತರಗಿತ್ತಿ ಪಕ್ಕಾ' 'ಹಕ್ಕಿ ಹಾರುತಿದೆ ನೋಡಿದಿರಾ?' ಮೊದಲಾದ ಕವನಗಳನ್ನು ಕೇಳಿ, ನಿಮ್ಮಲ್ಲಿಯ ಹಲವು ಜನರು ಮೆಚ್ಚಿ ತಲೆ-ದೂಗಿರಲೂ ಬಹುದು. ಎಷ್ಟೋ ರಸಿಕ ವಿದ್ಯಾರ್ಥಿಗಳಿಗೆ ಅವನ ಆ ಕವನಗಳನ್ನು ಮತ್ತೆ ಮತ್ತೆ ಕೇಳಬೇಕೆಂದು ಆಶೆಯೂ ಉಂಟಾಗಿರಬಹುದು. ಆ ಕವಿಯ ನಿಜವಾದ ಹೆಸರು ದತ್ತಾತ್ರೇಯ ರಾಮಚಂದ್ರ ಬೇಂದ್ರೆ—ಎಂದು. ಕಾವ್ಯನಾಮ 'ಅಂಬಿಕಾತನಯ ದತ್ತ' ಎಂದು.

ಕುಳ್ಳಗಿನ ತೆಳ್ಳಗಿನ ದೇಹ. ನಸುಜೆಳ್ಳಾದ ಮೈಬಣ್ಣ. ಚೆಲುವ-ನೆಂದು ಹೇಳಲು ತಕ್ಕ ಕಣ್ಣು-ಮೂಗುಗಳೇನೂ ಇಲ್ಲ. ಮನಸ್ಸನ್ನು ಸೆಳೆವಂತಹ ಆಡಂಬರದ ಉಡಿಗೆ-ತೊಡಿಗೆಯೂ ಇರುವುದಿಲ್ಲ. ವಿಶ್ವವಿದ್ಯಾನಿಲಯದ ಎಂ.ಎ. ಪದವಿ ಪಡೆದುದರ ಹೊರಗುರುತು-ಗಳಾವುವೂ ಕವಿ ಬೇಂದ್ರೆಯವರಲ್ಲಿ ಕಾಣುವುದಿಲ್ಲ. ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಇದ್ದುದನ್ನು, ಇವರನ್ನು ಬಲ್ಲವರೇ ಒಪ್ಪಿ ಕೊಳ್ಳಬೇಕು. ಹಿಂದೆ ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಇವರು ಅಧ್ಯಾಪಕರಾಗಿ ಇದ್ದಾಗ, ಹೆಚ್ಚಾಗಿ—ಇವರ ಗಡ್ಡದ ಬಳೆದ ಮುಖವನ್ನೆ ನೋಡಬಹುದಾಗಿತ್ತು; ಆದರೆ ಇತ್ತೀಚೆಗೆ ಅದು ಕಾಣುವುದಿಲ್ಲ. ಹರಯದ ಕಾಲದ ತಲೆಯ ತುಂಬುಚಂಡಿಕೆ, ಈಗ ವಯಸ್ಸಾದಂತೆ ಮರೆಯಾಗಿ ಬಿಟ್ಟಿದೆ. ಮುಂದಲೆಯ ಬೆಳೆ ಕಡಿಮೆಯಾಗುತ್ತ ಹೋದಂತೆ ಒಳದಲೆಯ ವಿಚಾರದ ಬೆಳಕು ಹೆಚ್ಚಾಗುತ್ತ ನಡೆದಿದೆ.

ಬೇಂದ್ರೆಯವರು ಎಲ್ಲಿಯೆ ಇರಲಿ; ಒಬ್ಬರೇ ಇದ್ದುದನ್ನು ಕಾಣುವುದು ಅಪರೂಪ. ಯಾವಾಗಲೂ ಗೆಳೆಯರ ಗುಂಪಿನಲ್ಲಿ ಇರುವರು. ಈ ಗೆಳೆಯರಲ್ಲಿ ನೆರೆದಲೆಯ ಹಿರಿಯರೂ ಇರುವರು; ಮಾಸಿ ಮೊಳೆಯದ ಕಿರಿಯರೂ ಇರುವರು. ಒಂದೆ ಒಂದು ಸಲ ಕಂಡ ಅಪರಿಚಿತರನ್ನೂ ಇವರ ಮಾತಿನ ಚಾತುರಿ ಮರುಳು ಗೊಳಿಸಿ, ಅವರನ್ನು ಸಮೀಪಕ್ಕೆ ಸೆಳೆದುಕೊಳ್ಳಬಲ್ಲದು.—

ಸಾಹಿತ್ಯ ಬೇಂದ್ರೆಯವರಿಗೆ ಸಹಜ ವಿಷಯ. ಭಾಷಾಶಾಸ್ತ್ರ-ವನ್ನೆತ್ತಿ ಮಾತನಾಡಿದರೂ ಅದರ ಆಳವಾದ ಅಭ್ಯಾಸ ಒಡೆದು ಕಾಣುವುದು. ಇತಿಹಾಸ-ಸಂಸ್ಕೃತಿಗಳ ಸಂಶೋಧನೆ ಇವರಿಗೆ ಇಷ್ಟವಾದ ಸಂಗತಿ. ಮಾನಸಶಾಸ್ತ್ರ-ಮಾನವಶಾಸ್ತ್ರಗಳೂ ಇವರಿಗೆ ಅ-ಪರಿಚಿತವಲ್ಲ. ಸಮಾಜಶಾಸ್ತ್ರ ಇವರಿಗೆ ತೀರ ಸೇರಿಕೆಯ ವಿಷಯ. ಫಲಜ್ಯೋತಿಷ-ಸಾಮುದ್ರಿಕ-ದಲ್ಲಿಯೂ ಕಣ್ಣು ಹಾಯಿಸಿದ್ದಾರೆ. ಶ್ರೀಅರವಿಂದರ ವೇದಾಂತ ಇವರ ಆದರ್ಶವಾಗಿದ್ದರೂ, ಮಿಕ್ಕ ವೇದಾಂತಗಳ ಮುಖಪರಿಚಯ-ವನ್ನೂ ತಕ್ಕಮಟ್ಟಿಗೆ ಮಾಡಿಕೊಂಡಿದ್ದಾರೆ. ಆದುದರಿಂದ ಬೇಂದ್ರೆಯವರ ಬಳಿಯಲ್ಲಿ ಎಲ್ಲ ಬಗೆಯ ಜನರೂ ಬರುವರು. ಎಲ್ಲರೊಂದಿಗೂ ಇವರು, ಅವರವರ ಪ್ರೀತಿಯ ವಿಷಯಗಳನ್ನು ಕುರಿತು ಚರ್ಚಿಸುತ್ತಿರುವರು.

ಉತ್ತಮ ಸಾಹಿತ್ಯನಿರ್ಮಿತಿಗೆ ಬೇಕಾದ ಹೃದಯಸಿದ್ಧಿ, ಸೂಕ್ಷ್ಮಬುದ್ಧಿಗಳ ಸಮನ್ವಯದ ಅಂತರ್ದೃಷ್ಟಿ ಬೇಂದ್ರೆಯವರಲ್ಲಿ ಚೆನ್ನಾಗಿ ಅರಳಿ ನಿಂತಿದೆ. ದೀರ್ಘವಾದ ಅಭ್ಯಾಸ, ಆಳವಾದ ಅನು-ಭವಗಳ ಸಂಪೂರ್ಣ ಸಹಕಾರ ಇವರ ಕಾವ್ಯನಿರ್ಮಿತಿಗೆ ದೊರೆ-ತಿದೆ. ಆದರ್ಶವಾದಿಗಳಿವರು. ಅದನ್ನು ಸಾಧಿಸಲು ಶ್ರದ್ಧೆ-ನಿಷ್ಠೆ-ಗಳಿಂದ ಪ್ರಯತ್ನಿಸುತ್ತಿರುವರು. ಹಡೆದ ತಾಯಿ, ಕನ್ನಡ ತಾಯಿ, ಭಾರತಮಾತೆ, ಭೂಮಾತೆ, ವಿಶ್ವಮಾತೆ ಇವರೆಲ್ಲರೂ ಈ ಕವಿಯ ಪೂಜೆಯ ಪೀಠದ ಮೇಲೆ, ಉಚಿತಸ್ಥಾನಗಳನ್ನು ಹಿಡಿದು ಕುಳಿ-ತಿರುವರು. ಸೌಂದರ್ಯ—ಅದು ಅಧಿಭೌತಿಕವೆ ಇರಲಿ, ಆಧ್ಯಾತ್ಮಿಕವೇ ಇರಲಿ — ಇವರ ಭಾವನಾಪಟದ ಮೇಲೆ ಸ್ಫುಟವಾಗಿ ಮೂಡುವುದು. ಪ್ರತಿಭೆ ಇವರ ಮಾತುಗಳಲ್ಲಿ ಆ ಸೌಂದರ್ಯವನ್ನು ಅಚ್ಚೊತ್ತಿದಂತೆ ಚಿತ್ರಿಸುವುದು. ಕಂಡ ಸತ್ಯ-ಸೌಂದರ್ಯಗಳನ್ನು ಹೊರಗೆ ತೋರಿಸುವುದಕ್ಕೆ ಬಳಸುವ ಇವರ ಕಲ್ಪನೆ-ಕಣಸುಗಳೂ

---

* ಮುಂಬಯಿ ಆಲ್ ಇಂಡಿಯಾ ರೇಡಿಯೊ ಕೇಂದ್ರದವರು ವಿದ್ಯಾರ್ಥಿ-ಗಳಿಗಾಗಿ ಏರ್ಪಡಿಸಿದ 'ಕವಿಯೂ ಅವನ ಕೃತಿಯೂ' ಎಂಬ ಭಾಷಣ ಮಾಲೆಯಲ್ಲಿ ತಾ|| ೧೧-೧೨-೫೬ನೆಯ ದಿನ ಬಿತ್ತರಿಸಿದ ಭಾಷಣವಿದು. ಎ. ಐ. ಆರ್. ಅಧಿಕಾರಿಗಳ ಒಪ್ಪಿಗೆ ಪಡೆದು ಪ್ರಕಟಿಸಲಾಗಿದೆ.

ಸಂ. ಜ.

ಉಪಮೆ-ರೂಪಕಗಳೂ ಊಹೆ-ಉತ್ಪ್ರೇಕ್ಷೆಗಳೂ ತೀರ ಹೊಸತನದಿಂದ ಕೂಡಿದುವಾಗಿದ್ದು, ಪಂಡಿತ-ಪಾಮರರನ್ನೂ ಬೆರಗುಗೊಳಿಸುವುವು. ಸೌಂದರ್ಯಕ್ಕೆ ಸೋಲುವ ಹೃದಯವಿರುವಂತೆ, ಬದುಕಿಗೆ ಅದನ್ನು ಹೇಗೆ ಸಮನ್ವಯಿಸಿಕೊಳ್ಳಬೇಕೆಂಬುದನ್ನು ನಿಮರ್ಶಿಸಿ, ತಿಳಿದು ತಿಳುಹುವ ಜಾಗೃತ ಬುದ್ಧಿಯೂ ಇದೆ. ಆದುದರಿಂದಲೇ ಇವರ ಸಾಹಿತ್ಯಸೃಷ್ಟಿಯನ್ನು ಆದರ್ಶವಾದಿಗಳೂ ಮೆಚ್ಚುತ್ತಾರೆ; ವಾಸ್ತವವಾದಿಗಳೂ ಒಪ್ಪುತ್ತಾರೆ.

ಕವಿ ಬೇಂದ್ರೆಯವರ ಸಾಹಿತ್ಯಸೃಷ್ಟಿಯಲ್ಲಿ ಕವನ-ಗೀತಗಳಿವೆ. ನಾಟಕ-ಕತೆಗಳಿವೆ, ಹರಟೆ-ಪ್ರಬಂಧಗಳಿವೆ. ವಿಮರ್ಶೆ-ಸಂಶೋಧನಗಳಿವೆ. ಈಗ ಪ್ರಕಟವಾಗಿರುವ ಸ್ವತಂತ್ರ ಕವನಸಂಗ್ರಹಗಳೆಂದರೆ: 'ಗರಿ', 'ಮೂರ್ತಿ ಮತ್ತು ಕಾಮುಕಸ್ತ್ರೀ' 'ನಾದಲೀಲೆ' 'ಉಯ್ಯಾಲೆ' 'ಸಖೀಗೀತ' 'ಹಾಡುಪಾಡು' ಇವು ಆರು. ಇನ್ನೂ ಸಂಗ್ರಹರೂಪವಾಗಿ ಬರಬೇಕಾದ ಹೊಸ ಕವನಗಳು ಸಾಕಷ್ಟು ಇವೆ. ನಾನೀಗ ನಿಮಗೆ, ಇವರ ನೊತ್ತ ನೊದಲನೆಯ ಸಂಗ್ರಹವಾದ 'ಗರಿ'ಯನ್ನು ಕುರಿತು, ಕೆಲವು ಸರಿಚಯದ ಮಾತುಗಳನ್ನು ಹೇಳಬೇಕೆಂದಿದ್ದೇನೆ. ಕಿವಿಗೊಟ್ಟು ಕೇಳಬೇಕು.

ಈ ಸಂಗ್ರಹದ ಕೊನೆಯಲ್ಲಿರುವ 'ಗರಿ' ಎಂಬ ರೂಪಕಗೀತದ ಮೂಲಕ ಇವನ್ನು 'ಗರಿ' ಎಂಬ ಹೆಸರಿನಿಂದ ಕರೆಯಲಾಗಿದೆ. 'ಎಲ್ಲೆ-ಕಟ್ಟು ಇಲ್ಲದ ಬಾನ ಬಟ್ಟೆಯಲ್ಲಿ, ಎಂದೆಂದೂ ಹಾರುವ ಹಕ್ಕಿಗಾಳಿ ಸಾಗಿದೆ— ಇದರ ಹಾಗೆ ಸಾಗಿದ ಆ ಹಾರುವಂಥ ಹಕ್ಕಿಯ ಜಾಡು ಹಿಡಿದು, ಉದುರಿದಂಥ ಗರಿಗಳು ಸಾಗಿವೆ' ಎಂದು ಕವಿ, ಹಕ್ಕಿಯ ಗರಿಗಳ ಹೋಲಿಕೆ ಕೊಟ್ಟು ತನ್ನ ಕವನದ ರೀತಿ-ನೀತಿಗಳನ್ನು ತಿಳುಹಿದ್ದಾನೆ. 'ಉಪ್ಪಿ ತಪ್ಪಿ ನೆಲದಲಿ ಬಂದು ಇಳಿದರೆ, ಇವುಗಳನು ಊದಿ ತೂರಿ ಹಾರಿಸು; ಮತ್ತೆ ಮೇಲೆ ಮುಗಿಲಲಿ!' ಎಂದು ಸಹೃದಯನಲ್ಲಿ ಬಿನ್ನವಿಸಿಕೊಂಡಿದ್ದಾನೆ. 'ಬೆರಗು ಬಟ್ಟು ಬಣ್ಣಕೆ ಮುಚ್ಚಿ ಇಡದಿರಿವುಗಳ; ಕೆಡಕು ಆಗಿ ಕಂಡರೂ ಕೇಳಬೇಡ ರೋಮವ!' ಎಂದು ಸಾಮಾನ್ಯರಲ್ಲಿ ಉಸುರಿಕೊಂಡಿದ್ದಾನೆ. 'ಊದಿ ತೂರಿ ಹಾರಿಸು, ಹಾರಿದಷ್ಟು ಹಾರಲಿ! ಹಾರಲೆಂದು ಪುಟ್ಟದಾ ಹಕ್ಕಿ ನ್ಯೆಯ ಗರಿಗಳು!' 'ಕಂಡು ಇವರ ಆಟವ ನೀನು ನಲಿನೆಯಾದರೆ, ಹಿಗ್ಗಿ ಬೆಂಬತ್ತುತೆ ನವಿಲು ಆಗಿ ಕುಣಿಯುನೆ!' ಎಂಬ ಮಾತುಗಳಿಂದ ರಸಜ್ಞರಲ್ಲಿ ಸಹಾನುಭೂತಿ-ಸೌಹಾರ್ದಗಳನ್ನು ಕೋರಿದ್ದಾನೆ. ಇಲ್ಲಿ ಹೋಲಿಕೆಗಾಗಿ ಹೇಳಿರುವ 'ಗರಿ' ಎಂಬುದನ್ನೇ ಒಟ್ಟು ಸಂಗ್ರಹಕ್ಕೆ ಅಲಂಕಾರಿಕ ನಾಮವನ್ನಾಗಿ ಇರಿಸಿರುವರಲ್ಲಿ ತುಂಬ ಔಚಿತ್ಯವಿದೆ.

ಕವಿಯ ಹೇಳಿಕೆಯಂತೆ ಈ ಸಂಗ್ರಹದಲ್ಲಿರುವ ಕವನಗಳು, ಕ್ರಿ. ಶ. ೧೯೧೮ ರಿಂದ ೧೯೩೨ ರ ನರೆಗಿನ ಅವಧಿಯಲ್ಲಿ ಬರೆದುವುಗಳು. ಎರಡು ಮೂರು ಕವನಗಳನ್ನು ಬಿಟ್ಟರೆ, ಉಳಿದೆಲ್ಲವುಗಳನ್ನೂ ಬರೆದ ಕಾಲಕ್ರಮದಲ್ಲಿಯೆ ಇಡಲಾಗಿದೆ. ಆದುದರಿಂದಲೆ ಪ್ರಾರಂಭದ ಕೆಲವು ಕವನಗಳು — ಭಾವನಿರ್ಭರತೆಯಿಂದ ಕೂಡಿದುವಾಗಿದ್ದರೂ— ನಿಚ್ಚಳವಾಗಿ ತಿಳಿಯುವಂತಹ ಕನ್ನಡತನದಿಂದ (ಪ್ರಸಾದ

ಮಿರಜದಲ್ಲಿಯ ಅನುವಂಶಿಕ **ರಾಜ ವೈದ್ಯರಾದ ಕರಮರಕರ** ಇವರ, ಸತತ ೧೫೫ ವರ್ಷ ಅನುಭವದಿಂದ ಗುಣಕಾರಿಯೆಂದು ಕಂಡುಬಂದ

ಪ್ರಸಿದ್ಧ ಔಷಧಗಳು

ಗೋರಖ ಚೂರ್ಣ

ಹಳೇತರಕ್ಕೆ ಬಿದ್ದ **ಹೊಟ್ಟೆನೋವು, ತಲೆನೋವು, ಅಮ್ಲಪಿತ್ತ,** ಚಕ್ರಬರುವುದು, ಗಂಟಲಿನಲ್ಲಿ ಮತ್ತು ಎದೆಯಲ್ಲಿ ಉರಿಯುವುದು, ಪಿತ್ತವಿಕಾರ, ತೇಗು, ಹೊಟ್ಟೆಯಲ್ಲಿ ವಾಯು ಹುಟ್ಟುವುದು, ಅಪಚನ ಮುಂತಾದವುಗಳ ಮೇಲೆ.

ಡಬ್ಬಿ ಬೆಲೆ ರೂ. ೧೦. ಟಪಾಲು ಮತ್ತು ಪ್ಯಾಕಿಂಗ್ ರೂ. ೨

ಪೌಷ್ಟಿಕ ಪಾಕ

ಯಾವುದೇ ಆಜಾರಿಯ ನಂತರದ ಕ್ಷೀಣತೆ, ಅಗ್ನಿಮಾಂದ್ಯ, ಅರುಚಿ, ಬದ್ಧಕೋಷ್ಠ, **ಜೀರ್ಣಜ್ವರ** ಮುಂತಾದ ವಿಕಾರಗಳನ್ನು ಪೂರ್ಣ ಗುಣಗೊಳಿಸಿ, **ಅಶಕ್ತತೆಯನ್ನು** ಮತ್ತು ಮತ್ತು **ನಿರುತ್ಸಾಹವನ್ನು** ಹೋಗಲಾಡಿಸಿ **ಸತೇಜ** ಮತ್ತು **ಸಾಮರ್ಥ್ಯಸಂಪನ್ನ**ರನ್ನಾಗಿ ಮಾಡುವ "ಪಾಕ".

ಡಬ್ಬಿ ಬೆಲೆ ರೂ. ೧೫. ಟಪಾಲು ಮತ್ತು ಪ್ಯಾಕಿಂಗ್ ರೂ. ೨

ರೋಹಿಣಿ

ಹೆಂಗಸರ **ಗುಪ್ತರೋಗ,** ಅನಿಯಮಿತ ಕಡಿಗೆ, ಹೊಟ್ಟೆಕಡಿತ, ಗರ್ಭಾಶಯದ ಮೇಲಿನ ಬಾವು, **ಗರ್ಭಪಾತವಾಗುವಿಕೆ,** ವಗೈರೆ ರೋಗ ಪೂರ್ಣಗುಣವಾಗಿ, **ಗರ್ಭಧಾರಣವಾಗುವುದು.** ಅದರಂತೆ ಬಸುರಾದ ಹೆಂಗಸರಿಗೆ ಆಗುವ ತ್ರಾಸಗಳು ಕಡಿಮೆ ಆಗಿ ಗರ್ಭವು ಚೆನ್ನಾಗಿ ಪೋಷಿಸಲ್ಪಟ್ಟು ಅದರ ಅಭಿವೃದ್ಧಿಗೆ ಉಪಯೋಗವಾಗುವುದು.

ಬಾಟ್ಲಿ ಬೆಲೆ ರೂ. ೧೮. ಟಪಾಲು ಮತ್ತು ಪ್ಯಾಕಿಂಗ್ ರೂ. ೩

ಅಮೃತ

ಮಧುಮೇಹ (ಡಾಯಬೇಟೀಜ್) ಕ್ಕೆ ಪೂರ್ಣ ಗುಣಕಾರಿ. **ಪಥ್ಯವಿಲ್ಲ.**

ಬಾಟ್ಲಿ ಬೆಲೆ ರೂ.೧೫. ಟಪಾಲು ಮತ್ತು ಪ್ಯಾಕಿಂಗ್ ರೂ.೩

ಆರ್ಡರಿನೊಂದಿಗೆ ರೂ. ೫ ಮುಂಗಡ ಕಳಿಸಿರಿ; ಉಳಿದ ಹಣಕ್ಕೆ ವ್ಹಿ. ಪಿ. ಕಳಿಸುವುದರಲ್ಲಿ ಬರುವುದು.

ವಿಳಾಸ :— ಭಾವೂಸಾಹೇಬ ಕರಮರಕರ
ಆಯುರ್ವೇದ ವಿಶಾರದ,
ಆಯುರ್ವೇದ ಭುವನ, ಮಿರಜ (*S.M.C.*)

ZANDU

PROTOCASEIN

(Whole Casein Hydrolysate)

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH.

Biological Laboratory

The Zundu Pharmaceutical Works, Ltd.
BOMBAY 14.

Sole Agents :—

M/s. Pranlal and Sons
Chemists, Druggists
Station Road, HUBLI
(H. O. Bangalore City)

ಗುಣದಿಂದ) ಕೂಡಿಲ್ಲ; ಆದರೆ ' ಬೆಳಗು ' ಎಂಬ ಮೊತ್ತಮೊದಲನೆಯ ವರ್ಣಕಕವನ ಮಾತ್ರ ನಡಿಗೆ, ನುಡಿ, ನಿರೂಪಣೆ— ಎಲ್ಲ ದೃಷ್ಟಿಯಿಂದಲೂ ಎಲ್ಲರಿಗೂ ಪ್ರಿಯವಾಗುವಂತಿದೆ. ಸದಾನಂದಿಯಾದ ಜಂಗಮನೊಬ್ಬ ಏಕನಾದದಲ್ಲಿ ದನಿಗೂಡಿಸಿ ಹಾಡಿದ ಹಾಡಿದು. ಒಳಗಿನ ಬೆಳಗನ್ನು ಹೊರಗಿನ ಬೆಳಗಿಗೆ ಹೋಲಿಸಿ ಹೇಳಿದುದಾಗಿದೆ. ಬೆಳಕಿನ ಹಬ್ಬುಗೆ, ಹೂವಿನ ಅರಳಿಕೆ, ಇಬ್ಬನಿಯ ಅಮೃತಬಿಂದು, ಪಾಡುವ ಹುಂಬಿ, ಹಾರಾಡುವ ಹಕ್ಕಿ ಇವುಗಳನ್ನೆಲ್ಲ ಲಾವಣಿಯ ಧಾಟಿಯಲ್ಲಿ ಒಂದೊಂದು ನುಡಿಯಲ್ಲಿ ಬಣ್ಣಿಸುತ್ತ ಕೊನೆಗೆ :

' ಅರಿಯದು ಆಳವು ತಿಳಿಯದು ಮನವು,
ಕಾಣದೋ ಬಣ್ಣಾ—
ಕಣ್ಣಿಗೆ— ಕಾಣದೋ ಬಣ್ಣಾ !
ಶಾಂತೀರಸನೇ ಪ್ರೀತೀಯಿಂದಾ
ಮೈದೋರೀತಣ್ಣಾ—
ಇದು ಬರಿ ಬೆಳಗಲ್ಲೋ ಅಣ್ಣಾ ! '

ಎಂಬ ಅಪಹ್ನುತ್ಯಲಂಕಾರದ ಮಾತಿನಿಂದ ಬೆಳಗಿನ ಸ್ವರೂಪವನ್ನು ನಿರ್ವಚನ ಮಾಡಿದ್ದಾರೆ. ಈ ಬೆಳಗಿನೊಂದಿಗೇ ಕವನ ಸಂಗ್ರಹವು ಮೊದಲಾಗುತ್ತದೆ.

ಕವಿಯ ಅನುಭವದ ವಿವಿಧ ಬಗೆಗಳ ಚಿತ್ರಣವು ಇಲ್ಲಿಯ ಕವನಗಳಲ್ಲಿದೆ. ಉತ್ತರ ಕರ್ನಾಟಕದಲ್ಲಿ ಹೊಸ ಮಾರ್ಗದ ಭಾವಗೀತೆಗಳನ್ನು ಬರೆಯಲಾರಂಭಿಸಿದವರು ' ಅಂಬಿಕಾತನಯದತ್ತ 'ರೇ ಎಂದು ಯಾರೂ ಹೇಳಬಹುದಾಗಿದೆ. ೧೯೧೮–೧೯–೨೦ನೆಯ ವರ್ಷಗಳಲ್ಲಿ ಧಾರವಾಡದಲ್ಲಿ ಹೊರಡುತ್ತಿದ್ದ 'ಪ್ರಭಾತ' ಎಂಬ ಪದ್ಯಮಯ ಮಾಸಪತ್ರಿಕೆಯಲ್ಲಿ, ಆ ಕಾಲದ ಅಖಿಲಕರ್ನಾಟಕದ ಹಲವು ಜನ ಕವಿಗಳ ಕವನಗಳು ಪ್ರಕಟವಾಗಿವೆ. ಅವುಗಳನ್ನು ಸೂಕ್ಷ್ಮದೃಷ್ಟಿಯಿಂದ ನೋಡುವವರಿಗೆ— ಅದೇ ಪ್ರಭಾತ ಸಂಚಿಕೆಗಳಲ್ಲಿ ಅಚ್ಚಾಗಿರುವ ' ಅಂಬಿಕಾತನಯದತ್ತ 'ರ ಕವನಗಳಲ್ಲಿ ಕಂಡುಬರುವ ಸರ್ವತೋಮುಖ ನಾವೀನ್ಯವು, ಇನ್ನಾರ ಕವನಗಳಲ್ಲಿಯೂ ಕಂಡುಬರುವುದಿಲ್ಲ.

೧೯೧೮–೧೯ನೆಯ ಸುಮಾರು, ಕರ್ನಾಟಕದ ವಾತಾವರಣದಲ್ಲಿ ಯಾವ ಬಗೆಯ ಹೊಸತನವೂ ನೂಡಿರಲಿಲ್ಲ. ಕನ್ನಡ ನಾಡು-ನುಡಿಗಳ ಅಭಿಮಾನ ಮಾತ್ರ ಅದಾಗ ಜೀತರಿಕೊಳ್ಳಲು ತೊಡಗಿತ್ತು; ಆದರೂ ಸುಶಿಕ್ಷಿತರೆನಿಸಿಕೊಳ್ಳುವವರ ಬುದ್ಧಿ-ಭಾವನೆಗಳೂ ಸಂಪ್ರದಾಯದ ಸೀಮೆಯಿಂದ ಹೊರಗೆ ಅಡಿಯಿಟ್ಟಿರಲಿಲ್ಲ. ಅಂತಹ ಕಾಲದಲ್ಲಿಯೂ ಬೇಂದ್ರೆಯವರು ತಮ್ಮ ಸಾಹಿತ್ಯನಿರ್ಮಿತಿಗೆ ಹೊಸತನವನ್ನು ಅಳವಡಿಸಿಕೊಂಡುದಕ್ಕೆ, ಪುಣೆಯಲ್ಲಿ ಕಳೆದ ಅವರ ಕಾಲೇಜಿನ ಜೀವನವೇ ಪ್ರಾರಂಭಕಾರಣವಾಗಿದೆ. ಆಗ ಮಹಾರಾಷ್ಟ್ರದಲ್ಲಿ ' ಕೇಶವಸುತ ' ' ಗೋವಿಂದಾಗ್ರಜ ' ' ಬಾಲಕವಿ ಠೋಂಬರೆ ' ' ರೆವರಂಡ್ ಟಿಳಕ ' ಮೊದಲಾದ ಆಧುನಿಕ ಕವಿಗಳು, ತಮ್ಮ ಹೊಸ ದಾರಿಯ ಕೃತಿನಿರ್ಮಿತಿಯಿಂದ ಅಲ್ಲಿಯ ಜನಮನವನ್ನು ಆಕರ್ಷಿಸಿದ್ದರು. ಅವರ ಸಾಹಿತ್ಯದ ಪರಿಚಯದ ಮೂಲಕ ಇವರ ಸಾಹಿತ್ಯನಿರ್ಮಾಣವೂ ಹೊಸ ದಾರಿಯನ್ನು ಹಿಡಿದಿರಬಹುದೆಂದು ಭಾವಿಸುವಂತಿದೆ.

ಧಾರವಾಡದಲ್ಲಿ ಹೊಸತಾಗಿ ಮೊಗವೆತ್ತಿದ ಕರ್ನಾಟಕತ್ವದ ಭಾವನೆಯನ್ನು ' ಅಂಬಿಕಾತನಯದತ್ತ 'ರ ಹೊಸ ಸಾಹಿತ್ಯದ ಮಾರ್ಗ ಮುಂದುವರಿಸತೊಡಗಿತು. ಅಂದಿನ — ಕಂದರದಲ್ಲಿ ಬಿದ್ದ — ಕನ್ನಡ ನಾಡನ್ನು ಮರಳಿ ಮೇಲೆತ್ತುವುದು ತರುಣ ಕನ್ನಡಿಗನ ಮೊದಲ ಕರ್ತವ್ಯವೆಂಬುದನ್ನು ' ಹರಕೆ ' ಎಂಬ ಕವನ ಸುಂದರವಾಗಿ ಸಾರಿ ಹೇಳುತ್ತದೆ.

" ಭೋಗಕ್ಕೆ ಮನಸೋತು, ವಿಕಟವಿಟಗಣದಂತೆ !
ಆಗಿರುವುದೀಗ ನಾಡು;
ರೋಗಕ್ಕೆ ಮೈಸೋತು ಕೈಸಾಗದಾಗಿಹುದು, !
ಯೋಗಸ್ಥನಾಗಿ ಹಾಡು !
ಯೋಗಸ್ಥನಾಗಿ ಗಡ ಹಾಡುಗಳ ಹೇಳುತ್ತ !
ಕನ್ನಡಿಗರೊಡನೆ ಆಡು;

ಯೋಗ-ಭೋಗದ ಭೂಮಿಯಾಗಿ ಸಾಗುವ ಹಾಗೆ!
ಕನ್ನಡದ ನಾಡ ಮಾಡು!"

'ಪುನರ್ಯೋಗಾರೂಢ' ಎಂಬ ರೂಪಕಕವನ ಕನ್ನಡ ರಾಷ್ಟ್ರ-ಪುರುಷನ ವರ್ತಮಾನ ದುಃಸ್ಥಿತಿಯನ್ನು ರೂಪಿಸಿ, ಒಳ್ಳೆಯ ಭವಿಷ್ಯ-ವನ್ನು ತರುವ ಆಶೆ-ಉತ್ಸಾಹಗಳನ್ನು ಹುಟ್ಟಿಸುತ್ತದೆ. ಮೇನಕೆಯ ಮಾಟಕ್ಕೆ ಮರುಳಾಗಿ ವಿಶ್ವಾಮಿತ್ರನ ತಪಶ್ಶಕ್ತಿ ಬದ್ದು ಹೋದಾಗ, ಆತ ತೋಡಿಕೊಂಡ ಎದೆಗುದಿಯಿದು:

" ಎಲ್ಲಿರುವೆನೆಲ್ಲಿರುವೆನೆಲ್ಲಿರುವೆ ನಾನೀಗ?
ಕಲ್ಲಿರುವೆನೋ ಏನು ಮಣ್ಣಿರುವೆನೋ?
ಹೀರಿಹೋಯಿತು ಓಜ, ಹಾರಿಹೋಯಿತು ತೇಜ,
ಏರಿರುವೆನೋ ಏನು ಇಳಿದಿರುವೆನೋ?
ಮುನ್ನ ನೋಡಿದ ನಾಡು, ಇನ್ನೂ ಇದೀಗ ನಾ!
ನನ್ನ ಕಣ್ಣುಗಳಿಂದ ಕಂಡ ಕಡೆಯು—
ಕಾಣದಾಯಿತು ವೃಷ್ಟಿ ಬಾಣವಾಯ್ತಾ ಸೃಷ್ಟಿ;
ಹೆಣವಾದ ದೇಹದೊಳು ಬಿದ್ದಿರುವೆನು!"

* * * *

" ಗರಿಗೆದರಿ ಹಾರು, ಗರುಡಾತ್ಮ ಗಗನದೊಳೇರು,
ಜರೆಬೆದರಿ ಕುಳಿತಲ್ಲಿ ಕೂಡಬಹುದೆ?
ಮಾಡು, ಸಾಹಸ ಮಾಡು! ಓಡು, ದಿಕ್ತಟಗಳಿಗೆ
ಓಡು! ನಿನ್ನಯ ಹಾದಿ ನೀನೆ ನೋಡು!
ಬಿದ್ದ ಹಕ್ಕೆಗೆ ಮುಂದೆ ಗೆದ್ದ ಹಕ್ಕಿಯ ಪಟ್ಟ,
ಸಿದ್ಧಿಗೊಯ್ಯುವ ಹಾದಿ ಶುದ್ಧ ಹೀಗೆ!"

* * * *

" ಆಡ್ಡಗಟ್ಟಲಿ ಬಂದು ಪುಂಡ ದೈವದ ಹಿಂಡು,
ಸಡ್ಡೆಯಿಂದಲಿ ಮತ್ತೆ ಮೇಲೆ ಹೊರಟಿ!
ಭಲೆ, ಛಾಪು ಛಾಪು! ಹಿಂಚಾಪು ಕೈತ್ತೆಲೆ ಕಿತ್ತು,
ಭಲೆ, ಸಿದ್ಧಶಿಖರವನ್ನೇರು, ಹತ್ತು!
ಹವಣಿಕೆಯ ಭವಣಿ ಬೇಡೆಂದು ಬಳಲುವರುಂಟೆ?
ಹವಣಿಕೆಯು ಜರುಗುವಿಜ ಗಂಡುಮೆಟ್ಟು!

ಕವಿಯು ಪೌರುಷ್ಕೀತಿ, ಆಶಾವಾದ, ಪ್ರಯತ್ನವಾದಗಳನ್ನು ಸೃಜುಮುದ್ರಿಸುವಂತೆ ಸೂಚಿಸುವ ಕವಿತೆಯಿದು.

" ಉಘೊ ಉಘೋ ಒಳಗಿರುವ ಬೆಳಕೆ ಬೆಳಕೇ!
ಉಘೊ ಉಘೋ ಹೊರಗೆ ಹರಿ, ಏಕೆ ಒಳಕೆ?"

ಎಂದು ಬೆಳಕನ್ನು ಆಹ್ವಾನಿಸುವ 'ತರುಣ ತಪಸ್ವಿ'ಯು, ಜ್ಞಾನ-ಪೂರ್ವಕವಾದ ಕರ್ಮದ ಸಾಧನವನ್ನು ಕಲಿಸಲು ಮುಂದೆ ಬಂದಿರುವನು. ಕನ್ನಡ ತಾಯ ಸೇವೆಯ ಬಗೆಗೆ, ಕನ್ನಡ ತರುಣರು ತೋರುವ ಅಶ್ರದ್ಧೆ, ನಿರುತ್ಸಾಹಗಳನ್ನು ಹೊಡೆದೋಡಿಸಲು 'ಕನಸಿ-ನೊಳಗೊಂದು ಕಣಸು' ಎಂಬ ಕವಿತೆ ತುಂಬ ಸಮರ್ಥವಾಗಿದೆ. ಇದರ ಒಂದೊಂದು ನುಡಿಯೂ ಅಭಿಮಾನಿ ಕನ್ನಡಿಗರ ಕರುಳನ್ನು ಕೊರೆಯುವಂತಿದೆ. ಕನಸಿನಲ್ಲಿ ಕಂಡ ಕನ್ನಡ ದೇವಿಯೊಂದಿಗೆ ಕನ್ನಡ ತರುಣನೊಬ್ಬ ಸಂವಾದ ನಡೆಯಿಸುವನು. ಕನ್ನಡ ತಾಯ ಧ್ವನಿಯುಕ್ತ ಮಾತುಗಳಿಂದ ತನ್ನ ಅಳಲನ್ನೂ ಆಶೆಯನ್ನೂ ತೋಡಿಕೊಳ್ಳುವಳು. ಕೊನೆಗೆ ತರುಣ, ದೇವಿಯನ್ನು ಕೇಳುವನು:

" ಬೇಡಬಂದಿಹೆಯೇನು ಏನಾದರೊಂದು?"

ಇದಕ್ಕೆ ಪ್ರತಿಯಾಗಿ ಕನ್ನಡತಾಯಿ ಕೇಳುತ್ತಾಳೆ:

" ಬೇಡಿದರೆ ಬೇಡಿದುದ ಕೊಡುವೆಯಾ ಇಂದು?"

ಮುಂದೆ ಅವರಿಬ್ಬರಲ್ಲಿ ಹೀಗೆ ಸಂವಾದ ಸಾಗುವುದು:

" ಅಹುದು, ಕೊಡುವೆನು—ಎಂದು ನಾನೆನ್ನಬಹುದೆ?"
" ಬಹುದು-ಗಿಹುದಿನ ಶಂಕೆ ವೀರನಹುದೆ?"
" ಹಿಂಜರಿವ ಅಂಜಿಕೆಯು ಹಿಡಿದಿಹುದು ಕೈಯ."
" ಮುಂಜರಿವ ಹುರುಪಿನೊಡ ಮುಂದೆ ಬಾರಯ್ಯ!"
"ಇಲ್ಲೆನ್ನಲಾರೆ, ನಾನಹುದೆನ್ನಲಮ್ಮೆ!"
" ಬಲ್ಲವರು ದೈವವನು ಪರಿಕಿಸುವರೊಮ್ಮೆ!"

ರೇಗು-ಈರ್ಷೆಗಳಿಂದ ತರುಣ ಕೇಳುವನು:

" ಚಂಡಿ, ಚಾಮುಂಡಿ, ಪೇಳ್,—ಬೇಕಾದುದೇನು?"
" ಗಂಡುಸಾದರೆ ನಿನ್ನ ಬಲಿಕೊಡುವೆಯೇನು?"

ಭೋಗಕ್ಕೆ ಮನಸೋತ ತರುಣ ಬೆಚ್ಚಿ ಬಿದ್ದ.

" ಮನವು ನಡುಗಿತು, ತನುವು ನವಿರಿಗೊಳಗಾಯ್ತು!"

ಈ ನಡುಗುವ ಮನಸ್ಸು 'ಆದಿ ಅಂತ್ಯವು ಇಲ್ಲದಂಥ ತ್ಯಾಗ'ಕ್ಕೆ ಹೇಗೆ ಸಿದ್ಧವಾಗಬೇಕು? ತ್ಯಾಗವಿಲ್ಲದೆ ಹೋದರೆ ಕನ್ನಡನಾಡಿನ ರೋಗ ಹೇಗೆ ಹೋಗಬೇಕು? ಇಂದಿನ ಕನ್ನಡ ತರುಣರ ತ್ಯಾಗ-ರಹಿತವಾದ ಬಾಯಿಮಾತಿನ ಬಯಲು ದೇಶಾಭಿಮಾನಕ್ಕೆ ಈ ಕವಿತೆ ಸರಿಯಾದ ಏಟನ್ನು ಹಾಕಬಲ್ಲದು. ಇದರಂತೆಯೆ ಭಾರತದ ಪರಾಧೀನ ಜೀವನದ ದುಷ್ಪರಿಣಾಮವನ್ನು ಬಿಡಿಬಿಡಿಯಾಗಿ ಚಿತ್ರಿಸಿ, 'ಮೂವತ್ತು ಮೂರು ಕೋಟಿ' ಎಂಬ ಕವನ, ಶೋಕ-ಕ್ರೋಧ-ಉತ್ಸಾಹ ಭಾವಗಳನ್ನು ಯಥೋಚಿತವಾಗಿ ಪರಿ-ಪೋಷಿಸುತ್ತದೆ.

ವೈಯಕ್ತಿಕ ಸ್ವಾರ್ಥ-ಲೋಭಗಳ ಬೆನ್ನುಹತ್ತಿ ಮಾನವತೆಯನ್ನು ಮರೆತುಬಿಟ್ಟ ಪ್ರಪಂಚದ ಪರಿಸ್ಥಿತಿಯೂ ಕವಿಯ ಭಾವನೆ-ಬುದ್ಧಿ-ಗಳನ್ನು ಕೆಣಕಿ ಕೆರಳಿಸಿದುದುಂಟು. ಇದರ ಪರಿಣಾಮವಾಗಿ ಹೊರಟ ಕೆಲವು ವಿಚಾರಪ್ರಚೋದಕ ಕವನಗಳೂ ಈ ಸಂಗ್ರಹದಲ್ಲಿ ಬಂದಿವೆ. 'ಸಿನೋಲ್ಲಂಘನ' ಎಂಬ ಕವಿತೆಯಲ್ಲಿ ಪ್ರತಿಪದ್ಯದ ಕೊನೆಯಲ್ಲಿಯೂ ಕಾಣುವ 'ಹೋಗೋಣ ಬಾ ಇನ್ನು ಸೀಮೆ-ಯನು ದಾಟ' ಎಂಬ ಮಾತು, ಕವಿಯ ವಿಚಾರಕ್ರಾಂತಿಯ ಬಯಕೆಯನ್ನು ಉಗ್ಗಡಿಸುತ್ತದೆ. ಈ ಕ್ರಾಂತಿ, ಕವಿಯ ಒಂದು ಆದರ್ಶ ಸಾಧನೆಗಾಗಿ ಬೇಕಾಗಿದೆ:

" ಪಡುವಣದ ಶಕ್ತಿಯಲಿ ಮೂಡಣದ ಭಕ್ತಿ
ಬಡಗಣದ ಭುಕ್ತಿಯಲಿ ತೆಂಕಣದ ಮುಕ್ತಿ—
ಒಡನೊಡನೆ ನೆರೆಬೆರೆತು ಹೊಸತಾಯ್ತು ಯುಕ್ತಿ,
ಹೀಗೆ ಇಡಿಯಾಗೋಣ ಸೀಮೆಯನು ದಾಟ!"

ಮಾನವಕುಲವೆಲ್ಲ ಒಂದಾಗುವುದಕ್ಕೆ ಬೇಲಿಯಾಗಿ ಇರುವುದನ್ನೆಲ್ಲಾ ಮುರಿದು ಮುಂದಾಗಬೇಕೆಂಬುದು ಕವಿಯ ಸಂದೇಶ. 'ದೈವುಳ್ಳವರಿಗೆ ದಯವೇ ಇಲ್ಲದ' ಮೂಲಕ, ಕೂಳಿನ ಕೋಟೆ ತಿತ್ತಿರಿ ತುಂಬಿದ್ದರೂ 'ಬಡವರ ಬಗ್ಗರ ತುತ್ತಿನ ಚೀಲ' ಮಾತ್ರ 'ಬರಿದೋ ಬರಿದು! ತೆರವೋ ತೆರವು!' ಎಂಬ ಸತ್ಯವನ್ನು 'ತುತ್ತಿನ ಚೀಲ' ಎಂಬ ಕವಿತೆಯಲ್ಲಿ ಪರಿಣಾಮಕಾರಿಯಾಗಿ ಹೇಳಿದ್ದಾರಲ್ಲದೆ, ಇದರಿಂದುಂಟಾಗುವ ದುಷ್ಫಲವನ್ನೂ ಅಷ್ಟೇ ಸತ್ತ್ವಶಾಲಿಯಾದ ಮಾತುಗಳಲ್ಲಿ ಹೀಗೆ ಮೂಡಿಸಿದ್ದಾರೆ :

" ದೇವರದೊಂದು ಗೋರಿಯ ಗಟ್ಟಿ,
ಧರ್ಮದ ಧೂಪಕೆ ಬೆಂಕಿಯನಿಕ್ಕಿ,
ಗಣಗಣ ಬಾರಿಸಿ ಪ್ರಾಣದ ಗಂಟೆಯ,
ಸಾವಿನ ನೋವಿಗೆ ಕಲಮಲವೆದ್ದು,
ನೆಲವನ್ನೆಲ್ಲಾ ತುತ್ತುವೆನೆಂದು
ಗವರುತ್ತಿಹುದು---ಗರ್ಜಿಸುತಿಹುದು---
ಬಡವರ ಬಗ್ಗರ ತುತ್ತಿನ ಚೀಲದ
ಒಳಗಿನ ಒಳಗಿನ ಒಳದನಿಯೊಂದು ! "

ರಾಜ್ಯ-ಸಾಮ್ರಾಜ್ಯಗಳ ದಾಹದಿಂದ ಜರುಗುವ ಯುದ್ಧ-ಮಹಾಯುದ್ಧಗಳಲ್ಲಿ ನಡೆವ ಮಾನವಹಿಂಸೆಯನ್ನು 'ನರಬಲಿ' ಎಂಬ ಕವಿತೆ ರೌದ್ರ-ಮನೋಹಾರಿಯಾಗಿ ವರ್ಣಿಸಿದೆ. 'ಇದುವೇ ಕಾಳಿಯ ಪೂಜೆಯು ಶುದ್ಧ, ಇದಕ್ಕೆ ಹುಂಬರು ಎಂಬರು ಯುದ್ಧ!' ಎಂಬ ಇದರ ಪಲ್ಲವಿ, ಕವಿಯ ವಿಡಂಬನಾಧ್ವನಿಯನ್ನು ಸರಿಯಾಗಿ ಸ್ಫುಟಗೊಳಿಸುತ್ತದೆ. ಈ ಕಾಳಿಯ ಪೂಜೆಯ ನರಬಲಿಯ ಕಾಲದಲ್ಲಿ, ಡೊಳ್ಳ ಬಾರಿಸುವವರು ಮಕ್ಕಳನ್ನು ಕಳೆದುಕೊಂಡ ಮುಪ್ಪಿನ ತಾಯ್ಗಳು. ಕೈ ಕೈ ತಾಳ ಬಾರಿಸುವವರು ಮುದಿತಂದೆಗಳು. ಚಿಕ್ಕಮಕ್ಕಳು ಚೀರುಸನಾದಿಯನ್ನೂ ಅಕ್ಕ-ತಂಗಿಯರು ಅಳಲಿನ ಕೊಳಲನ್ನೂ ಊದುವರು. ಮಂಡೆಮೋಚಿದ ಆ ಹೆಂಡಿರ ತಂಡವೆ, ಏವಿಧಾಲಾಪ-ಪ್ರಚಂಡಪ್ರಲಾಪದ ಓಲಗ ಬಾರಿಸುವುದು. ಇದನ್ನೆಲ್ಲ ನೋಡಿ, ಕವಿಯು ರೋಸಿ, ಕರುಣೆಗಳ ಅರಸನನ್ನು ಸಂತಾಸದಿಂದ ಆಹ್ವಾನಿಸಿ, 'ಮಾನವನೆಂಬ ನಿನ್ನೀ ಕುನ್ನಿಯು ಮಾಡಿದ ಮಾಟಕ್ಕೆ ಬೊಬ್ಬೆಯ ಕುಟ್ಟು' ಎಂದು ಕೂಗುವನು. ಈ ನೀಳ್ಗವನದ ಒಂದೊಂದು ನುಡಿಯೂ ಕಿಡಿಕಿಡಿಗಳನ್ನು ಹಾರಿಸುವುದು. 'ಕೋಳಿಯ ಕೊಯ್ದರೆ ಕೆರಳುವರುಂಟು, ಕುರಿಯನು ಕೊಂದರೆ ಕೇಳುವರುಂಟು, ಕೋಣನ ಕಡಿದರು ಕಾಯುವರುಂಟು!' ಆದರೆ 'ಗುಬ್ಬಿ ಮಾನವನ ಕೊಯ್ದರೆ ಕಡಿದರೆ ಕೊಂದರೆ ಏನು? ಕೊಂದನು ಅತನು ತನ್ನನೆ ತಾನು! ಸ್ವಾರ್ಥತ್ಯಾಗವಿದು, ಆತ್ಮಾಹುತಿಯಿದು! ನರಬಲಿ---ನರಮೇಧವು ಕೇಳು! ಅಶ್ವಮೇಧಕೂ ಸರಿಮಿಗಿಲು!' ಎಂಬ ಅಕ್ಕಸದ ಅಣಕವ ಮಾತಿನಲ್ಲಿಯೆ ಕವಿತೆ ಕೊನೆಗೊಂಡು, ವಿಚಾರಿಗಳಾದ ಮಾನವರ ಕರುಳನ್ನು ಕೆವುಚುವುದು; ಮೆದುಳನ್ನು ಮೀಂಟುವುದು! 'ಕರಿಮರಿ ನಾಯಿ' ಎಂಬ ಕವನದಲ್ಲಿಯೂ, ಮಾನವನ ಸ್ವಾರ್ಥ, ದಯೆ-ಸಹಾನುಭೂತಿಗಳನ್ನು ತುಳಿದುನಿಂತುದರ ಕತೆಯನ್ನು ಕಟ್ಟಿ ಹೇಳಲಾಗಿದೆ.

'ಮಾನವ ಜನ್ಮ ದೊಡ್ಡದು' ಎಂಬ ದಾಸರ ವಚನವನ್ನು, ಸತ್ತ್ವಯುಕ್ತವಾದ ಭಾಷೆ-ಛಂದಸ್ಸುಗಳಲ್ಲಿ 'ಬಾಳ ಕರವಾಳ' ಎಂಬ ಕವಿತೆ ವಿಸ್ತರಿಸಿ ತೋರಿಸುವುದು. ಬಾಳು ಒಂದು ಕತ್ತಿಯಿದ್ದಂತೆ. 'ಇದರ ಇದಿರು ಮಿಂಚು ಹಿಂಚು! ಇದರ ನುಡಿಗೆ ಸಿಡಿಲು ಸಡಿಲು; ಗುಡುಗು ನಡುಗು ಇದರ ಬದಿಗೆ! ರಾಮ ಜಾಪ ಏನು ಪಾಪ! ನರನ ಬಿಲ್ಲು ಇದಕೆ ಹುಲ್ಲು!' ಇನ್ನೂ ಎಂತೆಂತಹದೋ ಇದರ ಪವಾಡ. 'ಈ ಬಾಳ ಕರವಾಳ ಹಿಡಿವ ಗಂಡು. ಹುಟ್ಟುವಂದು ಮುಗಿಲು ಭುಗಿಲು, ನೆಲಕೆ ದಿಗಿಲು! ಇರುಳು ಮರುಳು! ಜೀವ ದೇವ! ಹಗಲೇ ಹಗಲು!'

ಬದುಕಿನ ರಹಸ್ಯವನ್ನು ಕಂಡ ಯೋಗೀಶ್ವರನನ್ನು ಯಾವ ದ್ವಂದ್ವವೂ ಹಂಗು ಏನು ಮಾಡೀತು? ಮಾನವಜೀವನದ ಇನ್ನೊಂದು ಇಂದಿನ ಮುಖ್ಯ ಸಮಸ್ಯೆಯಾದ— ನಿರುದ್ಯೋಗ ಜೀವಿಗಳ ನಿರಾಹಾರದ ಭೀಕರತೆ, 'ಕೆಲಸವಿಲ್ಲವದವರ ಹಾಡು' ಎಂಬುದರಲ್ಲಿ ಕಳೆಪೆತ್ತು ನಿಂತಿದೆ. 'ನಮ್ಮ ಕವಿಗಳು ಸಾಮಾಜಿಕ ಸಮಸ್ಯೆಗಳನ್ನೇ ಮುಟ್ಟಲ್ಲ' ಎಂದು, ಅರಿಯದೆ ಕಿರಿಚುವ ನಮ್ಮಲ್ಲಿಯ ಸ್ವಯಂ-

೫೦-೫೨ ವರ್ಷಗಳಿಂದಲೂ ಸಾವಿರಾರು ಜನರನ್ನು ರೋಗಮುಕ್ತಗೊಳಿಸಿ ಅನುಭವಪಡೆದುಕೊಂಡ

ಶಕ್ತಿವರ್ಧಕ ಧಾತುಪೌಷ್ಟಿಕ ಪಾಕ

ಕಾವಿನಿಂದ ಮೂತ್ರದೊಂದಿಗೆ—ಸ್ವಪ್ನದಲ್ಲಿ—ವೀರ್ಯಸ್ಖಲನವಾಗುವುದು, ಸ್ಮರಣೆಯ ದುರ್ಬಳಕೆಯಿಂದ ಉಂಟಾದ ಅಶಕ್ತತೆ, ನಪುಂಸಕತ್ವ, ಇಂದ್ರಿಯಶೈಥಿಲ್ಯ ಇವುಗಳನ್ನೆಲ್ಲ ಹೊಡೆದುಹಾಕಿ, ವೀರ್ಯವನ್ನು ಸತ್ತ್ವಯುಕ್ತವಾಗಿಸುವುದು. ಮಲಶುದ್ಧಿಯಾಗಿ ತುಂಬ ಹಸಿವೆಯಾಗುವುದು. ತರುಣರು ಇದರ ಪ್ರಯೋಜನ ಪಡೆಯುವುದಿಷ್ಟೆ ಅಲ್ಲ; ೭೯-೮೦ ವಯಸ್ಸಿನ ವಯೋವೃದ್ಧರೂ ಇದರ ಸೇವನೆಯಿಂದ ನವಚೈತನ್ಯದ ಉತ್ಸಾಹ ಹೊಂದುವುದರಲ್ಲಿ ಸಂದೇಹವಿಲ್ಲ. ಹೆಣ್ಣುಮಕ್ಕಳ ರಕ್ತಪ್ರದರ, ಶ್ವೇತಪ್ರದರ, ಬಂಜೆತನ ಅಥವಾ ಅದ ಮಕ್ಕಳು ಕೂಡಲೆ ಸಾಯುವುದು, ಹೊದಲಾದುವುಗಳ ಮೇಲೆ ಇದು ರಾಮಬಾಣೋಪಾಯ. ಇದರಲ್ಲಿ ಹಲವು ಗಿಡಮೂಲಿಕೆ, ಭಸ್ಮ, ಸುವರ್ಣಮಾಲಿನೀವಸಂತ ಮೊದಲಾದ ಬೆಲೆಯುಳ್ಳ ಔಷಧಿಗಳನ್ನು ಕೂಡಿಸಲಾಗಿದೆ.

೧ಡಬ್ಬಿಯ ಬೆಲೆ ೧೦ ರೂ. ೬ ದಿನಗಳಲ್ಲಿ ಗುಣ. ೨ ಡಬ್ಬಿ ಬೆಲೆ ೫ ರೂ. ೧೫ ದಿನಗಳಲ್ಲಿ ಗುಣ. ಶ್ರೀಸಾಮಾನ್ಯ ಸೆಟ್ಟು-ಸಾಧಾರಣ ಸಲುವಾಗಿ ಸ್ಪೇಷಲ್ ಡಬ್ಬಿಗೆ ೧೫ ರೂ. ೩೪ ತಾಸುಗಳಲ್ಲಿ ಗುಣ. ಇದರಲ್ಲಿ ಹಲವು ಬಲಕಾರಿಯಾದ ಬಹುಮೂಲ್ಯ ಔಷಧಿಗಳು ಕೂಡಿವೆ. ಕಷ್ಟವೇನೂ ಇಲ್ಲ. ೧ಡಬ್ಬಿ ೨೦ ದಿನಕ್ಕೆ ಸಾಲುವುದು. ೨ಡಬ್ಬಿ ತೆಗೆದುಕೊಳ್ಳುವವರಿಗೆ ಅಂಚೆಯಂ ವೆಚ್ಚವಿಲ್ಲ. ೪ ಡಬ್ಬಿ ಕೊಳ್ಳುವವರಿಗೆ ೧೫ಡಬ್ಬಿ ಬಫ್ಲೀಸು. ಗುಣದ ಬಗ್ಗೆ ಅಸಂಖ್ಯ ಸರ್ಟಿಫಿಕೇಟುಗಳು ಬಂದಿವೆ.

ವಿಳಾಸ:— **ವ್ಯಾ. ಡಿ. ಎಸ್: ಆ್ಯಂಡ್ ಕೊ. ಔಷಧಾಲಯ**

ಮು. ಪೋ. ಮಿರಜ (ಎಸ್. ಎಂ. ಸಿ.)

WHILE AT DHARWAR—
For Clean & Tasty Meals
THE CITY CENTRAL LODGE
OPP. REGAL TALKIES,
DHARWAR
Will be the right Selection
VISIT ONCE...AND...BE SATISFIED.

ಸ್ವಚ್ಛ ಮತ್ತು ಆರೋಗ್ಯಕರವಾದ ಊಟ–ತಿಂಡಿ
ಗಳಿಗಾಗಿ ಅತ್ಯುತ್ತಮ ಏರ್ಪಾಡು!
ದಿ ಸಿಟಿ ಸೆಂಟ್ರಲ್ ಲಾಜ್,
(ರೀಗಲ್ ಟಾಕೀಜಿನ ಎದುರು)
ಧಾರವಾಡ
ವಿದ್ಯಾರ್ಥಿಗಳೇ ಆಗಲಿ, ಪ್ರವಾಸಿಕರೇ ಆಗಲಿ ಊಟಕ್ಕಾಗಿ
ತೊಂದರೆ ಪಡಬೇಕಾಗಿಲ್ಲ. ತೃಪ್ತಿಕರವಾದ
ಏರ್ಪಾಡು; ಒಮ್ಮೆ ಬಂದು ಒಳ್ಳೆಯ
ಅನುಭವ ಪಡೆಯಿರಿ.

ಮನ್ನಣೆ ಕೆಲವರು, ಗರಿಯಲ್ಲಿಯ ಈ ಕವನಗಳನ್ನು ಕಂದೆರೆದು ನೋಡಬೇಕು.

ಸಾಂಸಾರಿಕ ಜೀವನದ ಸುಖ-ದುಃಖಗಳೂ ಸಂಯೋಗ-ವಿಯೋಗಗಳೂ, ಕಷ್ಟ-ಕಾರ್ಪಣ್ಯಗಳೂ ಈ ಕವಿಯಿಂದ ಹಲವು ಸುಂದರ ಕವನಗಳನ್ನು ಬರೆಯಿಸಿರುವುವು. ವ್ಯಣಯ ಗೀತಗಳಾದ 'ರಸಿಕಾ-ಪೇಕ್ಷೋ!' 'ನಗೀನಪಿಲು' 'ರಾಗರತಿ' 'ಯಾರವ್ವ ಇವ ಜೊತೆಯ' 'ಕುಣಿಯೋಣು ಬಾರಾ!' ಇತ್ಯಾದಿ ಕವನಗಳು, ಈಗಾಗಲೇ ಕನ್ನಡ ಜನತೆಯಲ್ಲಿ ಬೀದಿಪಾಡಾಗಿ ಬಳಕೆಯಲ್ಲಿವೆ. ಇವುಗಳನ್ನು ಹಾಡಿ ಕೇಳಿದ ಕನ್ನಡ ತರುಣ-ತರುಣಿಯರು ಅಪರೂಪ.

'ಹುಡುಗಲಾರದ ದುಃಖ' 'ಬಿಸಿಲುಗುದುರೆ' 'ನಿನ್ನ ಕೈಯ ಹಿಡಿದಾಕೆ' 'ಗಿಳಿಯು ಪಂಜರದೊಳಿಲ್ಲ' ಇವೆಲ್ಲ ಕವನಗಳು ಸಾಂಸಾರಿಕ ಸುಖದ ಸತ್ಯಚಿತ್ರಗಳಾಗಿವೆ. ಪ್ರತಿಯೊಬ್ಬ ಸಂಸಾರಿಯೂ ಈ ಕವನಗಳಲ್ಲಿ ತನ್ನ ಅನುಭವಗಳನ್ನು ಕಾಣಬಹುದಾಗಿದೆ. ಮಗುವು ತೀರಿದಾಗ ದುಃಖಿಸುವ ತಾಯಿಯನ್ನು ಕುರಿತ ಸಂದರ್ಭಗಳು ನಮ್ಮ ಹಳೆಯ ಕಾವ್ಯಗಳಲ್ಲಿ ಹಲವಾರು ಇವೆ. ಅಂತಹ ಸಂದರ್ಭವೊಂದನ್ನೇ ಎತ್ತಿ ಬರೆದ 'ಗಿಳಿಯು ಪಂಜರದೊಳಿಲ್ಲ' ಎಂಬ ಕವನವೊಂದು ಈ ಸಂಗ್ರಹದಲ್ಲಿದೆ. ಹಳೆಯ ಕಾವ್ಯಗಳಲ್ಲಿಯ 'ಹಾಡಿದುದನ್ನೇ ಹಾಡುವ' ಸಾಂಪ್ರದಾಯಿಕ ರೀತಿ ತೀರ ಕೃತ್ರಿಮವೆನಿಸಿ, ಭಾವದ ಆಭಾಸವಾಗುವುದು. ಆದರೆ ಗರಿಯಲ್ಲಿಯ ಈ ಶೋಕಗೀತದಲ್ಲಿಯ ಔಚಿತ್ಯ, ಕಲ್ಲೆದೆಯವರಿಂದಲೂ ಕಣ್ಣೀರ ಕಾಣಿಕೆ ಪಡೆಯುತ್ತದೆ. 'ನನ್ನ ಕಿನ್ನರಿ' 'ರುದ್ರವೀಣೆ' 'ಯುಗಾದಿ' ಇವೆಲ್ಲ ಬೇರೆ ಬೇರೆ ನಿರಾಶೆಯ ಕ್ಷಣಗಳ ನಿಟ್ಟು-ಸಿರುಗಳು :

'ಆಡಾಡ್ತ ಆಯುಷ್ಯ ನೋಡ್ನೋಡ್ತ ದಿನಮಾನಾ
ನಡದಂವ ನಡದಂದ ನಡದಂವ—
ಕಾಣದ ಕಡಲ್ಹಾದೀ ಹಿಡದಂದ!
ಮುಳುಗಾಂವ ಬೆಂಡೀಗೆ ತೆಕಿಮುಕ್ಕಿ ಬಿದ್ದಾಂಗ
ನನ್ನ ಕಿನ್ನರಿ ನಿನ್ನ ಹಿಡದೇನ!"

ಜೀವನದ ಸಫಲತೆಯ ವಿಷಯಕವಾದ ಶ್ರದ್ಧೆಯೇ ಇಲ್ಲಿ ಕವಿಯು ಹಿಡಿದ ಕಿನ್ನರಿ.

"ಯಾಕೊ ಕಾಣೆ ರುದ್ರವೀಣೆ ಮಿಡಿಯುತಿರುವುದು;
ಜೀವದಾಣೆಯಂತೆ ತಾನೆ ನುಡಿಯುತಿರುವುದು!"

ಸಮಾಜದ ಕ್ರಾಂತಿಕಾರಕ ಕಳವಳದ ಮೊರೆತವೇ ಕವಿಗೆ ರುದ್ರವೀಣೆಯಾಗಿ ತೋರಿದೆ.

"ಯುಗ-ಯುಗಾದಿ ಕಳೆದರೂ। ಯುಗಾದಿ ಮರಳಿ ಬರುತಿದೆ;
ಹೊಸ ವರುಷಕೆ ಹೊಸ ಹರುಷವ। ಹೊಸದು ಹೊಸದು
ತರುತಿದೆ—ನಮ್ಮನಷ್ಟೆ ಮರೆತಿದೆ!"

ಎಂದು ನೈಸರ್ಗಿಕ ಜೀವನದಿಂದ ಹೊರತಾದ ಮಾನವನ ಸಾಂಪ್ರದಾಯಿಕ ಜೀವನದ ನೀರಸತನವನ್ನು ಕುರಿತು ಕವಿ ನಿಟ್ಟುಸಿರಿಟ್ಟಿದ್ದಾನೆ.

ಇವಲ್ಲದೆ ಸೃಷ್ಟಿಯ ನಿತ್ಯ-ನೈಮಿತ್ತಿಕ ಸೌಂದರ್ಯದ ವಾಸ್ತವತೆಯನ್ನು, ಕಣ್ಣಿಗೆ ಕಟ್ಟುವಂತೆ— ಮನಸ್ಸಿಗೆ ಮುಟ್ಟುವಂತೆ ಬಣ್ಣಿಸಿದ ಕೆಲವು ಕವನಗಳೂ ಈ ಸಂಗ್ರಹದಲ್ಲಿ ಉಂಟು. ಅವುಗಳನ್ನೆಲ್ಲ ವಿವರಿಸಿ ಹೇಳಲಿಕ್ಕೆ ಈಗ ಸಮಯ ಸಾಲುವಂತಿಲ್ಲ. ಕೊನೆಯಲ್ಲಿ ಈ ಕವಿಯ ಕವಿತೆಗಳ ಜೀವನಸಾರದಂತಿರುವ 'ನನ್ನ ಹಾಡು' ಎಂಬ ಕವನವನ್ನು ಹೇಳಿ, ನನ್ನ ಈ ಉಪನ್ಯಾಸವನ್ನು ಮುಗಿಸುತ್ತೇನೆ:

"ನನ್ನ ಹರಣ ನಿನಗೆ ಶರಣ, ಸಕಲ ಕಾರ್ಯ ಕಾರಣಾ!
ನಿನ್ನ ಮನನದಿಂದ 'ತನನ' ಎನುತಿವೆ ತನು ಪಾವನಾ!
ಸುಖದ ಮಿಷವು ದುಃಖ ವಿಷವು ಹಿಗ್ಗಿ ಪ್ರಾಣಪೂರಣಾ—
ಪಂಚಕರಣಗಳೇ ಗಡಣ ಕಟ್ಟಿತು ಗುಡಿ-ತೋರಣಾ!
ಹರುಷ ರಸವೆ, ಕರುಣದಸುವೆ ಜೀವಧರ್ಮಧಾರಣಾ
ರಸವೆ ಜನನ, ವಿರಸ ಮರಣ, ಸಮರಸವೇ ಜೀವನಾ!

ವಂದೇಮಾತರಂ.

ರಣರಂಗದಲ್ಲಿ

(ಸಣ್ಣಕತೆ)

ಶ್ರೀ. ಜಿ. ಟಿ. ನಾರಾಯಣರಾವ್, ಎಂ. ಎ., ಮಡಿಕೆರಿ

ನಮ್ಮ ಪುರಾಣ-ಇತಿಹಾಸಗಳಲ್ಲಿಯ ವೀರರ ವೀರಕೃತಿಗಳು, ನಮ್ಮ ಭೋಗಾಸಕ್ತಿಯ ಅಶಕ್ತ ಮನಸ್ಸಿಗೆ ಪವಾಡಗಳಾಗಿ ತೋರುತ್ತವೆ. ಆದರೆ ರಷ್ಯದ ವಿಜಯಕ್ಕೆ ಸುವರಾವನಂತಹ ವೀರರ ವೀರಕೃತಿಗಳೇ ಕಾರಣವಾದುದು ಕಣ್ಣಾರೆ ಕಂಡ ಸಂಗತಿ.

★

ವೋಲ್ಗಾ ನದಿ. ರಶ್ಯನರಿಗೆ ಅದರ ಹೆಸರೆಂದರೇ ಒಂದು ನಿಮಿಷ ನೈ ಮರೆಯುವುದು. ಅವರಿಗೆ ಆ ನದಿ ಒಂದು ಅಪೂರ್ವ ನಿಧಿಯಾಗಿದೆ. ಅವರ ಎಲ್ಲಾ ಚರಿತ್ರೆ, ಕತೆ-ಕಾದಂಬರಿಗಳಲ್ಲಿ ವೋಲ್ಗಾ ನದಿ ಪ್ರಮುಖಸ್ಥಾನವನ್ನು ಪಡೆಯದೆ ಇಲ್ಲ. ಮಹಾಯುದ್ಧ, ದಕ್ಷಿಣ ರಶ್ಯಾದಲ್ಲಿ ನಡೆಯುತ್ತಿದೆ. ಜರ್ಮನರು ದಿನದಿಂದ ದಿನಕ್ಕೆ ಮುನ್ನುಗ್ಗುತ್ತಲಿದ್ದಾರೆ. ಈ ದಿನ ಆ ಹಳ್ಳಿ ಬಿತ್ತು, ಈ ದಿನ ಆ ಪಟ್ಟಣ ಬಿತ್ತು— ಎಂಬ ಭಯಂಕರ ವಾರ್ತೆಗಳ ಒಂದು ಪ್ರವಾಹವೇ ಬರುತ್ತಿದೆ. ರಶ್ಯನರ ವಿಜಯದ ವಿಷಯ ಎಲ್ಲಿಯೂ ಕೇಳಿಸುವುದಿಲ್ಲ. ಇದೇನು? ಅವರು ಪವಿತ್ರ ವೋಲ್ಗಾ ನದಿಯ ದಂಡೆಯಲ್ಲಿ ಹುಟ್ಟಿ ಬೆಳೆದು ಅದರಿಂದ ಪೋಷಿತರಾದರೂ ಜರ್ಮನರ ಮುಂದೆ ಧೈರ್ಯಗೆಟ್ಟರೇ? ಇಲ್ಲ, ರಶ್ಯನರು ಧೃತಿಗೆಡಲಿಲ್ಲ. ಒಬ್ಬ ರಶ್ಯನು ಸತ್ತಲ್ಲಿ ನೂರು ಜನ ತಯಾರಾದರು. ಹುಡುಗರು ಹುಡುಗಿಯರು ಅಮಿತ ಉತ್ಸಾಹದಿಂದ, ರಣರಂಗಕ್ಕೆ ಜೀವದ ಹೋಮ ಮಾಡಲು ಓಡಿದರು. ಜರ್ಮನರ ಬೆಂಕಿಗೆ ಇವರು ತಮ್ಮ ಬೆಂಕಿಯನ್ನೂ, ರಕ್ತವನ್ನೂ ಎರೆಯಲು ಸಿದ್ಧರಾದರು--- ಆ ಬೆಂಕಿ ಇವುಗಳಿಂದ ನಾಶವಾಗುವವರೆಗೂ 'ಒಬ್ಬ ಜರ್ಮನನನ್ನು ಕೊಂದರೆ ನೂರು ಯಾಗ ಮಾಡಿದ ಫಲ!' ಎಂಬುದು ಅವರ ನೀತಿಯಾಯಿತು. ಜರ್ಮನರ ಮುನ್ನುಗ್ಗುವ ವೇಗಕ್ಕೆ ರಶ್ಯನರ ಪ್ರವಾಹದಿಂದ ಸ್ವಲ್ಪ ತಡೆಗಟ್ಟಿದಂತಾಯ್ತು.

ಚಿರಶಾಂತಿಯಿಂದ ಹರಿಯುತ್ತಿದ್ದ ವೋಲ್ಗಾ ನದಿಯು ಆಗ ಹಡಗುಗಳಿಂದ ತುಂಬಿಹೋಯಿತು. ಎಲ್ಲವೂ ಸಿಪಾಯಿಗಳನ್ನು ತುಂಬಿಸಿಕೊಂಡು, ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗುವವುಗಳಾಗಿದ್ದುವು. ಎಲ್ಲಾ ಹಡಗುಗಳೂ ಸೈನಿಕರ ವೀರೋಷದಿಂದ ತೊಳಗುತ್ತಿದ್ದುವು. ನದಿಯಿಡೀ ಜೀವಕಳೆಯಿಂದ ತುಂಬಿ ಹರಿಯುತ್ತಿದ್ದಿತು. **ಲೆಟ್ಟಿನಾವ**ನೂ ಒಂದು ಹಡಗದಲ್ಲಿ ನೆಲೆತನು. ಅವನು ೧೮ ವರುಷದ ತರುಣ. ಬಿಸಿರಕ್ತದವನು. ಕಾಲೇಜಿನಲ್ಲಿ ಓದುತ್ತಿದ್ದನು. ಅವನು ಮುಂದೆ ಮಹಾ ವಿಜ್ಞಾನಿಯಾಗುವನೆಂದು ಅವನ ತಾಯಿ **ಲೋರಾಳು** ಬಗೆದಿದ್ದಳು— ವನು ಅಂತಹ ಮೇಧಾವಿಯಾಗಿದ್ದನು. ಆದರೆ ಹಠಾತ್ತಾಗಿ ಯುದ್ಧವು ಬಂದಿತು. ಪ್ರತಿಯೊಂದು ಮನೆಯಿಂದಲೂ ಯುದ್ಧಕ್ಕೆ ಹೋಗದವರು ರಶಿಯದಲ್ಲಿ ಇರಲೇ ಇಲ್ಲ. ಲೆಟ್ಟಿನಾವನೂ ಸಂತೋಷದಿಂದ ಕುಣಿದನು ರಣರಂಗಕ್ಕೆ ಹೋಗಲು. ತಾನು ಎಷ್ಟು ಜರ್ಮನರನ್ನು ಕೊಲ್ಲುವುದು, ಹೇಗೆ ಕೊಲ್ಲುವುದು?—ಇದೇ ಅವನ ಯೋಚನೆಯಾಗಿತ್ತು. ಲೋರಾಳು ತಾಯಿ; ಅವಳ ಹೆಣ್ಣು ಹೃದಯ ಹೊಟ್ಟೆಯ ಮಗನು ಯುದ್ಧಕ್ಕೆ ಹೋಗುವುದನ್ನು ಬಯಸುವುದೇ? ಆದರೆ ಎಲ್ಲಾ ರಶ್ಯನ್ ಪೆಂಗಸುರಂತೆ ಅವಳೂ ಧೀರಹೃದಯಿನಿಯು. ಅವಳ ಮನಸ್ಸು ಅಳುಕಿರಬಹುದು; ಹೃದಯವು ಒಡೆದು ಚೂರಾಗಿರಬಹುದು. ಆದರೆ ಅವಳ ಮಾತು, ದೃಢವಾಗಿದ್ದುವು. ತನ್ನ ಮಗನ ಮೇಲ್ಮೈ ನೋಡಿದರೆ— ನಿಜವಾಗಿಯೂ ಅವನ ಮೇಲ್ಮೈಯಲ್ಲ ಅದು— ಇಡೀ ಪಿತೃಭೂಮಿಯ ಹಿತ ಬಯಸಬೇಡವೇ? ಅವಳ ಮನಸ್ಸಿನಲ್ಲಿ ಪುತ್ರಪ್ರೇಮ, ದೇಶವಾತ್ಸಲ್ಯ ಇವುಗಳ ಒಂದು ಕಾದಾಟವೇ ಆಗಿರಬೇಕು. ತಾಯಿಯು ದೇಶವೇ ಮೇಲೆಂದು ನಿಶ್ಚಯಿಸಿದಳು.

ಲೋರಾಳೂ ಅವಳ ಎರಡನೆಯ ಮಗ ಸುವರಾವನೂ ಒಂದು ಪ್ರಾತಃಕಾಲ ಲೆಟ್ಟಿನಾವನೊಡಗೂಡಿ, ವೋಲ್ಗಾ ದಂಡೆಗೆ ಅವರ ಹಳ್ಳಿಯಿಂದ ಬಂದರು. ಆ ದಿನ ಲೆಟ್ಟಿನಾವನು ಯುದ್ಧಕ್ಕೆ ಹೋಗುವುದಾಗಿತ್ತು. ಅಂದಿನ ಬೆಳಗು ಅತ್ಯಂತ ಸುಸೋಹರವಾಗಿತ್ತು. ಲೆಟ್ಟಿನಾವನು ಸಂತೋಷದಿಂದ ಆಕಾಶದಲ್ಲಿಯೇ ನಡೆಯುತ್ತಿದ್ದಂತೆ ಭಾವಿಸಿದನು. ಅಂತಹ ಮಗನ ತಾಯಿಗೆ ತಕ್ಕ ಧೃತಿ ತನ್ನಲ್ಲಿರಲಿ -- ಎಂದು ಲೋರಾಳು ಪ್ರಾರ್ಥಿಸುತ್ತಿದ್ದಳು. ಮಗನು ತಾಯಿಯನ್ನು ತುಂಬಾ ಪೂತನಾಡಿಸಿದನು. ತಾನು ಸಾಯುವುದೇ ಆದರೆ, ಅದಕ್ಕೆ ಮೊದಲು ಕನಿಷ್ಠಪಕ್ಷ ನೂರು ಜರ್ಮನ್ ನರಘಾತಕಿಗಳ ಪ್ರಾಣ ಹೀರಬೆ ಬಿಡೆನು— ಎಂದು ಅವನು ಹೇಳುತ್ತಿದ್ದನು. "ಈ ಧರ್ಮಲಂಡ, ಕುಲಗೇಡಿ ಜರ್ಮನರಿಗೆ ರಶ್ಯನ್ ರಕ್ತದ ಬಿಸಿ ಇನ್ನೂ ತಿಳಿದಿರುವುದಿಲ್ಲ. ಅವರ ಸಂಪೂರ್ಣ ಪುಟ್ಟು ಅಳಿಸದಿದ್ದರೆ ನನಗೆ ತೃಪ್ತಿಯೆ ಇಲ್ಲ," ಎಂದು ವೀರಾವೇಶದಿಂದ ಹೇಳುತ್ತಿದ್ದನು. ಹದಿನಾಲ್ಕು ವರುಷದ ಸುವರಾವನಿಗೆ ಅಣ್ಣನ ವೀರವಾಕ್ಯುಗಳು ಸ್ಫೂರ್ತಿಯನ್ನು ನೀಡುತ್ತಿದ್ದುವು.

ತಾನೂ ಏಕೆ ಯುದ್ಧಕ್ಕೆ ಹೋಗಬಾರದೆಂದು ಅವನು ಯೋಚಿಸುತ್ತಿದ್ದನು. ಯುದ್ಧವೆಂದರೆ, ದೊಡ್ಡ ದೊಡ್ಡ ಬಲಿಷ್ಠ ಜರ್ಮನರನ್ನು,—ಹಿಂದಿನಿಂದ ಹೋಗಿ ಉಪಾಯದಿಂದ ಕೊಲ್ಲುವುದು. ಇದು ಎಂತಹ ವಿನೋದಕರವಾದ ಆಟವೆಂದು ಅವನು ಭಾವಿಸುತ್ತಿದ್ದನು. ವೋಲ್ಗಾ ನದಿಯನ್ನು, ಅವರ ಸಕಲೈಶ್ವರ್ಯದ ಕಾಲುವೆಯನ್ನು—ಶಲುಸಿದರು.

ಅದೇ ದಾರಿಯಿಂದ ಲೋರಾಳು, ಅವಳ ಗಂಡನೊಡನೆ ಎಷ್ಟೋ ಸಲ, ನೆರೆಯಗ್ರಾಮಕ್ಕೆ ಹೋಗಲಿಕ್ಕೆ ಹಡಗು ಹತ್ತಲು ಬಂದಿದ್ದಳು. ಆಗ ಲೆಪ್ಪಿನಾವನು ಸಣ್ಣವನಾಗಿದ್ದನು. ಸುವರಾವನು ಇನ್ನೂ ಕೈಗೂಸು. ಅವರಿಬ್ಬರನ್ನೂ ಕರೆದುಕೊಂಡು ಗಂಡನೊಡನೆ ಸಂತೋಷದಿಂದ ಆ ದಾರಿಯಲ್ಲಿ ಹೋದ ದಿನಗಳ ನೆನಪು ಆಕೆಗೆ ಬಂತು. ಆದರೆ ಈಗ ಅವನಿಲ್ಲ—ಒಂದು ಅಕಾಲವ್ಯಾಧಿಗೆ ತುತ್ತಾದನು. ಅವಳ ಕಣ್ಣಿಂದ ಬಿಸಿಯಾದ ಬಿಂದುಗಳುರುಳಿದುವು. ಅಂದಿನಿಂದ ಈ ಎರಡು ಮಕ್ಕಳ ಸರಿವಾಲನೆಯೇ, ಇವರ ಅಭಿವೃದ್ಧಿಯೇ ತನ್ನ ಜೀವನದ ಗುರಿಯೆಂದು ತಿಳಿದಿದ್ದಳು. ಅಂತೆಯೇ ಈ ಮಕ್ಕಳಾದರೂ ಅವಳ ಆಶೆಯನ್ನು ನೆರವೇರಿಸುವಂತೆ ದಿನದಿಂದ ದಿನಕ್ಕೆ ಪ್ರವರ್ಧಮಾನಕ್ಕೆ ಬರುತ್ತಿದ್ದರು. ಈಗ ಘೋರ ಯುದ್ಧ. ಲೆಪ್ಪಿನಾವನು ಹೋದರೆ ಮರಳುವುದು ತೀರ ಅಸಂಭವನೀಯ—ಹಾಗಿತ್ತು ಆಗಿನ ಭೀಕರ ಪರಿಸ್ಥಿತಿ. ಆದರೆ ಎಲ್ಲರೂ ನತ್ತರೂ ತನ್ನ ಮಗ ಉಳಿದು ಬಂದಾನು....ಎಂಬುದು ತಾಯಿಯ ಯೋಚನೆ. ಆದರೆ ಜೀವಕ್ಕಾಗಿ ಅವನು ಖಂಡಿತ ಓಡಿ ಬರುವುದು ಬೇಡ— ವೀರ ಲೆಪ್ಪಿನಾವನ ವಿಷಯದಲ್ಲಿ ಇದನ್ನು ಊಹಿಸುವಂತೆಯೂ ಇರಲಿಲ್ಲ. ಅವನ ತಾಯಿ ತಾನೆಂದು ಹೆಮ್ಮೆ ಪಡುವಂತೆಯೇ ಆ ತರುಣನು ಇರುವನು—ಎಂದವಳು ಯೋಚಿಸಿದಳು.

ಹಡಗು ಬಂದಿತು. ಲೆಪ್ಪಿನಾವನು. "ಇದೊ! ಜರ್ಮನರ ರಕ್ತ ಹೀರಲು ಹೊರಡುವೆನು. ನಮಗೆ ಜಯ ಖಂಡಿತ, ಬರುತ್ತೀನೆ ತಾಯೇ!' ಎಂದು ಆವೇಶಪೂರ್ಣಕವಾಗಿ ನುಡಿದು ಹಡಗನ್ನು ಹತ್ತಿದನು. ಲೋರಳು ಮಗನನ್ನು ಮೈದಡವಿ ಮೌನಾಶೀರ್ವಾದದಿಂದ ಕಳಿಸಿದಳು.

ಹಡಗು ಹೊರಟಿತು. ಸೈನಿಕರು ರಣಗೀತಗಳನ್ನು ಹಾಡಿದರು. ದಂಡೆಯ ಮೇಲೆ ನಿಂತಿದ್ದ ತಾಯಿ, ಮಗ, ಇಬ್ಬರೂ ಹಡಗು ಮರೆಯಾಗುವವರೆಗೂ ಅವನ್ನು ನೋಡಿದರು. ದೂರದ ಒಂದು ತಿರುಗಿನಲ್ಲಿ ಅದು ಕಾಣದಾಯಿತು. ಆದರೂ ಆ ಸೈನಿಕರ ರಣಗೀತಗಳು ಮಾತ್ರ ಲೋರಾ, ಸುವರಾವರ ಕಿವಿಗಳಲ್ಲಿ, ಪ್ರತಿಧ್ವನಿತವಾಗುತ್ತಿದ್ದುವು. ಲೋರಳೂ ಸುವರಾವನೂ ಮಾತನಾಡದೇ ಹಿಂದಿರುಗಿದರು. ಅದೇ ದಾರಿ—ಸುಂದರವಾಗಿದೆ, ಶಾಂತವಾಗಿದೆ. ಆದರೆ ಆಗ ಲೆಪ್ಪಿನಾವನು ಜತೆಯಲ್ಲಿದ್ದನು; ಈಗ ಅವನಿಲ್ಲ. ಆಗ ಅವನ ಮಾತಿನಿಂದ ಇಡಿಯ ಕಾಡೇ ಶ್ರುತಿತವಾಗಿತ್ತು. ಈಗ ಬಿಸಿಲು ಏರಿದ್ದರೂ ತೇಜೋಹೀನವಾದಂತೆ ತೋರುವುದು. ಇನ್ನು ಅವನು ಬರುವನೋ—ಬಾರನೋ—ತಾಯಿಯ ಹೃದಯ ನಡುಗಿತು.

ಆದರೆ ಲೋರಳು ಧೀರೆಯಾದ ರಶ್ಯನ್ ಹೆಂಗುಸಾಗಿದ್ದಳು. ಲೆಪ್ಪಿನಾವನಂತೆ ಅನೇಕ ಸಹಸ್ರ ತರುಣ-ತರುಣಿಯರು ಅವರ ಉದ್ಯಮಗಳನ್ನು ಬಿಟ್ಟು ರಣರಂಗಕ್ಕೆ ಧಾವಿಸಿದ್ದರು. ಹಿಂದೆ ಉಳಿದವರ ಕೆಲಸ, ಮುಂದೆ ಹೋದವರಿಗೆ ಎಲ್ಲಾ ವಿಧಗಳಲ್ಲಿಯೂ ಸೌಕರ್ಯಗಳನ್ನು ಒದಗಿಸಿಕೊಡುವುದು. ಲೋರಳು ಬೇರೆ ಹೆಂಗುಸರಂತೆ ಗದ್ದೆಯ ಕೆಲಸ ಮತ್ತು ಇತರ ಸಾಮೂಹಿಕ ಕಾರ್ಯಗಳನ್ನೂ ಅಧಿಕ ಆಸ್ಥೆ ವಹಿಸಿ ಮಾಡತೊಡಗಿದಳು. ಒಂದು ಹಿಡಿ ಗೋಧಿ ಹೆಚ್ಚು ಪೊರೆಕಿಸಿದರೆ, ಅದು ಒಬ್ಬ ರಶ್ಯನ್ ಸೈನಿಕನ ಜೀವ ಉಳಿಸಬಹುದು.....ಈ ದೃಷ್ಟಿಯಿಂದ ಅವರೆಲ್ಲರೂ ದುಡಿದರು. ದಿನಗಳು ರಭಸದಿಂದ ಉರುಳುತ್ತಿದ್ದುವು. ಪ್ರತಿದಿನವೂ ರೇಡಿಯೋದಲ್ಲಿ ಯುದ್ಧವಾರ್ತೆ ಬರುತ್ತಿದ್ದಿತು. ರಶ್ಯದ ರೇಡಿಯೋದಲ್ಲಿ ಯಥಾಸ್ಥಿತಿಯನ್ನು ಮರೆಮಾಚದೆ ಹೇಳುತ್ತಿದ್ದರು. ಎಲ್ಲಿಯೂ ಆಶಾದಾಯಕ ಸುದ್ದಿಗಳು ಇರಲಿಲ್ಲ. ಆದರೆ ಪ್ರತಿದಿನವೂ ಮುಂದಾಳುಗಳಿಂದ ಆವೇಶಪೂರಿತವಾದ ಭಾಷಣಗಳು ಇರುತ್ತಿದ್ದುವು. ತಮ್ಮ ಈಗಿನ ಸೋಲೇ ಮುಂದಿನ ಮಹಾ ವಿಜಯದ ಸೋಪಾನವೆಂದು ಎಲ್ಲರೂ ನಂಬಿ, ಕರ್ತವ್ಯೋನ್ಮುಖರಾದರು. ಜರ್ಮನರು ಹೆಚ್ಚೆಚ್ಚು ಮುಂದೆ ಬಂದಂತೆ, ಅವರ ಮೇಲಿನ ದ್ವೇಷ-ಕ್ರೋಧಗಳು ರಶ್ಯನರಿಗೆ ಹೆಚ್ಚಾದುವು. ರಶ್ಯದ ವೀರರ ಅದ್ಭುತ ಸಾಹಸಗಳು ಅವರೆಲ್ಲರಿಗೂ ಕೀರ್ತಿಯನ್ನು ತರುವಂತಹವಾಗಿದ್ದುವು. ಪ್ರತಿಯೊಬ್ಬ ಸಾಯುವ ರಶ್ಯನನೂ, ಏನಾದರೊಂದು ಸಾಹಸಕಾರ್ಯ ಮಾಡದೆ ಸಾಯುತ್ತಿರಲಿಲ್ಲ. ಈ ವಿಷಯಗಳೆಲ್ಲ ರೇಡಿಯೋದಲ್ಲಿ ವಿಶದವಾಗಿ ಬರುತ್ತಿದ್ದುವು. ಪ್ರತಿಯೊಬ್ಬ ರಶ್ಯನಿಗೂ ಈ ಘೋರ—ಆದರೆ ವೀರವಾರ್ತೆಗಳನ್ನು ಕೇಳಿ ಹೃದಯ ತುಂಬಿ ಬರುತ್ತಿತ್ತು. "ಅಯ್ಯೋ, ರಣರಂಗಕ್ಕೆ ಹೋಗುವ ಚೈತನ್ಯ ನಮಗಿಲ್ಲವಲ್ಲಾ" ಎಂದು ನೊಂದರು ಹಿಂದುಳಿದ ಮುದುಕರು. ಆದರೂ, ಅವರೂ ತಮ್ಮ ಕೈಲಾದ ಕೆಲಸಗಳನ್ನು ಮನಃಪೂರ್ವಕವಾಗಿ ಮಾಡುತ್ತಿದ್ದರು. "ಪಿತೃಭೂಮಿಯನ್ನು ಉಳಿಸಲು ಒಂದು ಇರುವೆಯ ಸಹಾಯನ್ನೂ ಬಿಡೆವು" ಎಂದು ಅವರ ಪ್ರೀತಿಯ ಮುಂದಾಳು ಸ್ಟಾಲಿನ್ ಹೇಳಲಿಲ್ಲವೇ?

ಅವನು ಹೋಗಿ ಒಂದುವರೆ ತಿಂಗಳನಂತರ ಲೆಪ್ಪಿನಾವನಿಂದ ಒಂದು ಕಾಗದ ಬಂದಿತು. ಆದರಲ್ಲಿ ವಿವರವೇನೂ ಇರಲಿಲ್ಲ.—ವಿವರ ಬರೆಯುವುದು ಸಾಧ್ಯವೂ ಇರಲಿಲ್ಲ. ಅವನು ರಣರಂಗದಲ್ಲಿ, ಕಾಲಭೈರವನು ತಾಂಡವವಾಡುತ್ತಿದ್ದಲ್ಲಿ ಇದ್ದನು. ತಾನು ಕ್ಷೇಮದಲ್ಲಿದ್ದೇನೆ, ಆನಂದವಾಗಿದ್ದೇನೆ. ಪ್ರತಿಕ್ಷಣವೂ ತಮ್ಮ ಸತ್ತ್ವಪರೀಕ್ಷೆಯಾಗುವಂತೆ ಇದೆ—ಎಂದು ಮಾತ್ರವೇ ಅವನು ಬರೆದಿದ್ದನು. ಸುವರಾವನೂ, ಲೋರಳೂ ಆ ಕಾಗದವನ್ನು ನೋಡಿ ಬಿಗ್ಗಿದರು. ಲೋರಳು ತಮಗೆ ವಿಜಯ ದೊರೆಯಲಿ, ಮಗನು ಜಯಶಾಲಿಯಾಗಿ ಹಿಂದಿರುಗಲಿ—ಎಂದು ದೇವರಲ್ಲಿ ಪ್ರಾರ್ಥಿಸು

ತ್ತಿದ್ದಳು. ಸುವರಾವನು ಅವನ ಪ್ರಪಂಚದಲ್ಲಿಯೆ ಇದ್ದನು. ಅಣ್ಣನು ಎಂತಹ ಭಾಗ್ಯಶಾಲಿ! ತಾನು ಯಾವಾಗ ಹೊರಡುವೆನೋ ಯುದ್ಧಕ್ಕೆ—ಎಂದೇ ಅವನ ಯೋಚನೆ. ಗೊರಿಲ್ಲಾ ಪಡೆ ಸೇರಿ, ಜರ್ಮನರ ಕಾಲಕೆಳಗಿನ ನೆಲವನ್ನೇ ಇಲ್ಲದಂತೆ ಮಾಡಬೇಕೆಂಬುದು ಅವನ ಯೋಚನೆಯಾಗಿತ್ತು. ಆದರೆ ಅವನಿನ್ನೂ ಹುಡುಗ. ಆ ಮಹಾ ಸಮರದಲ್ಲಿ ಹುಡುಗ, ಮುದುಕ, ಎಂದಿದೆಯೇ? ಜರ್ಮನಿಯವರ ಒಂದು ಎಣ್ಣೆಯ ಪಿಪಾಯಿಗೆ ಬೆಂಕಿ ಕೊಡಲು, ಅವರ ಮದ್ದು-ಗುಂಡಿನ ಮನೆಯನ್ನು ಸ್ಫೋಟಿಸಲು ದೊಡ್ಡವರೇ ಆಗಬೇಕೇ? ತಾನು ಗೋರಿಲ್ಲಾ ಪಡೆಯನ್ನು ಸೇರಲೇಬೇಕೆಂದು ತಾಯಿಯೊಡನೆ ಹಟ ಹಿಡಿದನು.

ಹೀಗೆ ಮೂರು-ನಾಲ್ಕು ತಿಂಗಳುಗಳು ಕಳೆದುವು. ಲೆಟ್ವೆನಾವನಿಂದ ಮೊದಲು ಬಂದ ಕಾಗದದ ಹೊರತು ಮುತ್ತೇನೂ ಬಂದಿರಲಿಲ್ಲ. ಲೋರಳು ಚಿಂತಿಸುತ್ತಿದ್ದಳು, ಅವಳ ಮನಸ್ಸು ಕೆಟ್ಟದ್ದನ್ನೇ ಊಹಿಸುತ್ತಿತ್ತು: ತನ್ನ ಮಗನು ಹತನಾಗಿರಬಹುದೇ? ರಣರಂಗಕ್ಕೆ ಹೋದವರಿಂದ ಒಂದು ತಿಂಗಳಿಗೊಮ್ಮೆಯಾದರೂ ಕಾಗದ ಬರದಿದ್ದರೆ ಹಾಗೆಯೇ ಊಹಿಸಬೇಕಾಗುತ್ತಿತ್ತು. ಆದರೆ ತನ್ನ ಮಗನು ಬದುಕಿ ಜಯಶೀಲನಾಗಿ ಹಿಂದೆ ಬಂದಾನೆಂಬುದೇ ಅವಳ ನಂಬಿಕೆಯಾಗಿತ್ತು.

ಸುವರಾವನಿಗೆ ಅವನ ಉತ್ಸಾಹ ತಡೆಯಲಾಗಲಿಲ್ಲ. ಆದರೆ ತಾಯಿಯನ್ನು ಕೇಳಿದರೆ ಆ ಹುಡುಗನನ್ನು ಅವಳು ಮನಸಾರೆ ಕಳಿಸಿಯಾಳೇ? ಆದರೂ ಅವನಿಗೆ ಹೋಗಲೇ ಬೇಕು. ನೀಚ ಜರ್ಮನರ ಶಕ್ತಿಯು ಕಡಿಮೆಯಾಗಿರಲಿಲ್ಲ. ರಣಚೇವಿಗೆ ಇನ್ನೂ ಎಷ್ಟು ರಶ್ಯನ್ ರಕ್ತವನ್ನು ಕುಡಿಸಬೇಕೋ? ಇನ್ನೂ ಜರ್ಮನ್ನರು ನಿಧಾನವಾಗಿಯಾದರೂ ಮುಂದುವರಿಯುತ್ತಲೇ ಇದ್ದರು. ಸುವರಾಯನಿಗೆ ಪ್ರತಿದಿನವೂ ಯುಗದಂತೆ ಆಗುತ್ತಿತ್ತು—ಅವನಿಗೆ ಯುದ್ಧಕ್ಕೆ ಹೋಗಲೇಬೇಕು, ಹೋಗಲೇಬೇಕು, ಹೋಗಲೇಬೇಕು! ಅವನು ಒಂದುದಿನ ಆ ಹಳ್ಳಿಯಲ್ಲಿದ್ದ ಸೈನ್ಯದ ಇಲಾಖೆಗೆ ಓಡಿದನು.

"ನನ್ನನ್ನು ಸೈನ್ಯಕ್ಕೆ ಸೇರಿಸಿಕೊಳ್ಳಬೇಕು."

"ನೀನಿನ್ನೂ ಹುಡುಗ; ನೀನೇನು ಮಾಡುವೆ?"

"ಗೋರಿಲ್ಲಾ ಪಡೆ ಸೇರಿ ಆದಷ್ಟು ಜರ್ಮನರನ್ನು ಹತಮಾಡುವೆನು."

"ಅಲ್ಲಿಯ ಜೀವನ ಪರಿಸ್ಥಿತಿಯ ಅರಿವು ನಿನಗುಂಟೋ? ಅಲ್ಲಿ ಮನೆಯಂತೆ ನಿನಗಾವ ಸುಖಸೌಕರ್ಯವೂ ದೊರೆಯದು. ಕಾಲಕಾಲಕ್ಕೆ ಆಹಾರ ಸಿಗದು? ವಾಸಕ್ಕೆ ಕಾಡೇ ಗತಿ...."

"ಅವುಗಳಿಗೆಲ್ಲ ತಯಾರಾಗಿಯೇ ಬಂದಿದ್ದೇನೆ."

"ಒಂದುವೇಳೆ ಜರ್ಮನರು ನಿನ್ನನ್ನು ಸೆರೆಹಿಡಿದು, ನಮ್ಮ ಗುಟ್ಟು ಹೊರಬಿಡಬೇಕೆಂದು ನಾನಾವಿಧವಾಗಿ ಹಿಂಸಿಸಿದರೆ, ನೀನೇನು ಮಾಡುವೆ?"

"ನನ್ನನ್ನು ಎಂತಹ ಕ್ರೂರ ರೀತಿಯಲ್ಲಿ ಕೊಂದರೂ ದೇಶದ್ರೋಹದ ಒಂದು ಚಕಾರವೂ ನನ್ನ ಬಾಯಿಂದ ಹೊರಡದು. ಆದರೆ ನಾನು ಜರ್ಮನರಿಗೆ ಸೆರೆಸಿಕ್ಕಿಯೇನೆಂಬ ಸಂಶಯವೇ ನನ್ನ ಮನಸ್ಸಿಗೆ ಬರುವುದಿಲ್ಲ."

ಹುಡುಗನು ಉತ್ಸಾಹದಿಂದ ಕುಣಿಯುತ್ತಿದ್ದನು; ಜರ್ಮನರ ವಿರುದ್ಧ ವೈರದಿಂದ ಕುದಿಯುತ್ತಿದ್ದನು. ಹುಡುಗನ ಮಾತಿಗೆ ಮೆಚ್ಚಿ ಅಧಿಕಾರಿಯು ಅವನನ್ನು ಗೊರಿಲ್ಲಾ ಪಡೆಗಳಿಗೆ ತೆಗೆದುಕೊಳ್ಳುವುದಾಗಿ ಒಪ್ಪಿದನು.

ಸಂತೋಷದಿಂದ ನಲಿಯುತ್ತಾ ಸುವರಾವನು ಮನೆಗೆ ಓಡಿದನು. ಗದ್ದಿಯಿಂದ ತಾಯಿಯಿನ್ನೂ ಬಂದಿರಲಿಲ್ಲ. ಅಲ್ಲಿಗೇ ಓಡಿದನು. ಮೇರೆ ಮೀರುವ ಸ್ಫೂರ್ತಿಯಿಂದ ತಾಯಿಯನ್ನು ಕೂಗಿ, ಈ ವಿಷಯವನ್ನು ತಿಳಿಸಿದನು. ಲೋರಳು ರಶ್ಯನ್ ಹೆಂಗುಸು, ವೀರಮಾತೆ. ಆದರೂ ಅವಳ ಹೃದಯ ಕುಗ್ಗಿತು. ಆದರೆ ಧೈರ್ಯ ತಂದುಕೊಂಡಳು. ಪಿತೃಭೂಮಿಗಾಗಿ ಎಂತಹ ತ್ಯಾಗವನ್ನು ಮಾಡಲೂ ಅವರು ಸಿದ್ಧರಿರಬೇಕಾಗಿತ್ತು. ಲೆಟ್ವೆನಾವನನ್ನು ಕಳಿಸಿದ ಆ ಮಾತೆ ಸುವರಾವನನ್ನೂ ಬೀಳ್ಕೊಟ್ಟಳು. ರಶ್ಯದಲ್ಲಿ ಈ ರೀತಿಮಾಡಿದ ಹೆಂಗುಸು ಅವಳೊಬ್ಬಳೇ ಆಗಿರಲಿಲ್ಲ. ಉಳಿದ ಹೆಂಗುಸರೊಡನೆ ಈ ವಿಷಯ ಪ್ರಸ್ತಾಪಿಸುತ್ತ ಸಮಾಧಾನ ತಂದುಕೊಳ್ಳುತ್ತಿದ್ದಳು. ಎಲ್ಲರೂ ಅಂತ್ಯದಲ್ಲಿ, "ಏನೇ ಆಗಲಿ; ಈ ಖೂಳ ಜರ್ಮನ್ನರ ರಕ್ತ ಮಾತ್ರ ಹೀರಲೇಬೇಕು" ಎಂದು ದೃಢವಾಣಿಯಿಂದ ಘೋಷಿಸುತ್ತಿದ್ದರು.

ಸುವರಾವನು ಗೊರಿಲ್ಲಾಪಡೆಸೇರಿ ರಣರಂಗಕ್ಕೆ ತೆರಳಿದನು. ಅದೊಂದು ಮೂವತ್ತು ಜನರಷ್ಟು ಹುಡುಗರೇ ಇದ್ದ ಗೊರಿಲ್ಲಾಪಡೆಯಾಗಿತ್ತು. ಎಲ್ಲರೂ ೨೦ ವರ್ಷಗಳಿಗಿಂತಲೂ ಕಡಿಮೆಯವರೇ! ಆದರೆ ಶೌರ್ಯದಲ್ಲಿ, ಧೈರ್ಯದಲ್ಲಿ, ಉತ್ಸಾಹದಲ್ಲಿ, ಯಾವ ಮಹಾ ಸಾಹಸಿ ಸೈನಿಕನಿಗೂ ಅವರಾರೂ ಕಡಿಮೆ ಇರಲಿಲ್ಲ. ಜರ್ಮನರು ಆಕ್ರಮಿಸಿದ ರಶ್ಯನ್ ಗ್ರಾಮಗಳ ಹೊರವಲಯದ ಕಾಡುಗಳೇ ಅವರ ನಿವಾಸಗಳು. ಅವರದೇ ಊರಾದುದರಿಂದ, ಆ ಸ್ಥಳಗಳೆಲ್ಲಾ ಈ ಹುಡುಗರಿಗೆ ಚೆನ್ನಾಗಿ ತಿಳಿದಿದ್ದುವು. ಆದರೆ ಹೊಸಬರಾದ ಜರ್ಮನರಿಗೆ ಅಷ್ಟು ಸುಲಭವಾಗಿರಲಿಲ್ಲ. ಅಲ್ಲದೆ ಅಲ್ಲಿನ ನುಸಿಗಳೂ ವಾತಾವರಣವೂ ಜರ್ಮನರಿಗೆ ಬಹಳ ತ್ರಾಸದಾಯಕವಾಗಿದ್ದುವು. ಆದರೆ ಗೆದ್ದವರು ಅವರು—ಹೇಗೂ ಅಲ್ಲಿ ಮುಂದುವರೆಯುತ್ತಿದ್ದರು. ಈ ಗೊರಿಲ್ಲಾ ಪಡೆ (ಇದರಂತೆ ಇತರ ಎಲ್ಲಾ ಗೊರಿಲ್ಲಾ ಪಡೆಗಳೂ) ಆ ಕಾಡಿನಲ್ಲಿ ಗುಹೆಗಳಲ್ಲಿಯೊ, ಮರಗಳ ಮೇಲೆಯೊ ಹಗಲನ್ನು ಕಳೆಯುವರು. ಅವರ ಉಡುಪು ಆ ಕಾಡಿನ ಬಣ್ಣಕ್ಕೆ ಸರಿಯಾಗಿ ಹೊಂದುವಂತೆ ಇದ್ದುದರಿಂದ, ಹಗಲೆಲ್ಲಿಯಾದರೂ ಜರ್ಮನ್ ಸೈನಿಕರು ಆ ಕಡೆಗೆ ಬಂದರೂ, ಇವರ ಇರವು ತಿಳಿಯುವ ಮೊದಲೇ ಅವರ ಅಳಿವು ಆಗುತ್ತಿತ್ತು. ಈ ತರದ ಪ್ರಸಂಗಗಳಿಗೆ ಬಹುವಾಗಿ ಹೆದರುತ್ತಿದ್ದ ಜರ್ಮನರು, ಆ ಕಾಡಿಗೇ ಸಾಧಾರಣವಾಗಿ ಪ್ರವೇಶಿಸುತ್ತಿರಲಿಲ್ಲ. ಬದಲು, ತಾವು ಗೆದ್ದ ಸ್ಥಳಗಳನ್ನು ಬಹಳ ದಕ್ಷತೆಯಿಂದಲೂ ಜಾಗರೂಕತೆಯಿಂದಲೂ

ಕಾಯುತ್ತಿದ್ದರು. ಪ್ರತಿಯೊಂದು ಗ್ರಾಮದಲ್ಲಿಯೂ ತಮ್ಮ ಸೈನ್ಯ, ಎಣ್ಣೆ, ತೋಪು ಮುಂತಾದುವುಗಳನ್ನೂ ಇನ್ನೂ ಬಲಪಡಿಸುತ್ತಿದ್ದರು. ಗೊರಿಲ್ಲಾ ಪಡೆಯವರು ರಾತ್ರಿಯಾದೊಡನೆಯೇ ಹೊರಹೊರಟು ಆ ಗ್ರಾಮಗಳೊಳಗೆ ಗುಟ್ಟಾಗಿ ನುಗ್ಗುವರು. ರಶ್ಯನರೇ ಆದ ಗ್ರಾಮಸ್ಥರು ಸಾಧ್ಯವಾದಾಗಲೆಲ್ಲಾ ಈ ಪಡೆಗಳವರಿಗೆ ಗುಟ್ಟಾಗಿ ಸಹಾಯ ಮಾಡುತ್ತಿದ್ದರು. ಜರ್ಮನ್ ಕಾವಲುಗಾರರ ಗೃಧ್ರ-ದೃಷ್ಟಿಯನ್ನೂ ತಪ್ಪಿಸಿ, ಅವರ ಗುಟ್ಟುಗಳನ್ನು ಅರಿತು ಹಿಂದಿರುಗುತ್ತಿದ್ದರು. ಮರುರಾತ್ರಿ ಜರ್ಮನರ ಎಣ್ಣೆಯ ಗುಡಾಣಗಳು, ಸಿಡಿಮದ್ದುಗಳು ಎಲ್ಲಾ ಹುಡಿ ಹುಡಿ. ಇದು ಎಲ್ಲಾ ಸಮಯಗಳಲ್ಲಿಯೂ ಹೀಗೇ ಆಗುತ್ತಿತ್ತು ಎನ್ನಲಾಗುವುದಿಲ್ಲ. ಎಲ್ಲಿಯಾದರೂ ಗುಟ್ಟಾಗಿ ಹಳ್ಳಿಗೆ ಪ್ರವೇಶಿಸುವಾಗ ಅಥವಾ ಬೆಂಕಿಯನ್ನು ಕೊಡುವಾಗ, ಜರ್ಮನರು ಇವರನ್ನು ಸೆರೆಹಿಡಿದರೆ—ಎಷ್ಟೋ ಸಲ ಹೀಗಾಗಿದೆ—ಕೂಡಲೇ ಕೈಗುಂಡುಗಳನ್ನು ಅವರ ಮೇಲೆ ಬಿಸುಡುವರು. ಇಲ್ಲಿ ಆ ಜರ್ಮನರು ಸತ್ತುಹೋದರೆ, ಹುಡುಗರು ಓಡಿ ಬಂದು ಪಡೆಯನ್ನು ಸೇರುವರು. ಏನೂ ಸಾಧ್ಯವಾಗದೆ ಸೆರೆಸಿಕ್ಕಿದರೆ— ವೀರ ಮರಣ. ಸೆರೆಸಿಕ್ಕಿದಂತಹ ಹುಡುಗರನ್ನು ಅತಿ ಅಮಾನುಷ, ಕ್ರೂರ ರೀತಿಗಳಿಂದ ಜರ್ಮನ್ನರು ಕೊಂದರು.—ಉಳಿದವರಿಗೆ ಜೆದರಿಕೆಯಾಗಲೆಂದು. ಆದರೆ ಇದರಿಂದ ಉಳಿದವರಿಗೆ ಉತ್ಸಾಹ ಇಮ್ಮಡಿಯಾಗುತ್ತಿತ್ತು. ಸುವರಾವನು ಸ್ವತಃ ಮೂರು ಎಣ್ಣೆಯ ಉಗ್ರಾಣಗಳಿಗೆ ಬೆಂಕಿಯನ್ನು ಕೊಟ್ಟು, ಜರ್ಮನರಿಗೆ ಅಪಾರ ನಷ್ಟ ಮಾಡಿದ್ದನು. ಒಂದು ಸಲ ಸೆರೆಸಿಕ್ಕುವಂತಿದ್ದಾಗ ಕೈಗುಂಡು ಬಿಸುಟಿ ಅಲ್ಲಿಂದ ಓಡಿ ಬಂದಿದ್ದನು. ಸುವರಾವನು, ಅವನ ಧೈರ್ಯ-ಸಾಹಸಗಳಿಂದ ತುಂಬಾ ಪ್ರಖ್ಯಾತನಾದನು—ಆ ಪಡೆಯ ಮುಂದಾಳೇ ಅವನಾದನು. ಜರ್ಮನರನ್ನು ಆ ಗ್ರಾಮದಿಂದ ಓಡಿಸಿದ ಕೀರ್ತಿ ಸುವರಾವನ ಗೊರಿಲ್ಲಾ ಪಡೆಗೆ ಮುಖ್ಯವಾಗಿ ಸಂದಿತು. ಅವನ ಪಡೆಯಲ್ಲಿಯ ೧೦-೧೨ ಜನರು ಏನಾದರೆಂದು ಹೇಳಬರುವಂತಿರಲಿಲ್ಲ. ಬಹುಶಃ ಅವರು ಜರ್ಮನ್ನರ ಕೈಯಲ್ಲಿ ಸತ್ತಿರಬೇಕು.

ಸುವರಾವನು ಮೂರು ನಾಲ್ಕು ತಿಂಗಳುಗಳಷ್ಟು ಸಮಯ ಈ ಪಡೆಯಲ್ಲಿದ್ದನು. ಆಹಾರ-ವಿಶ್ರಾಂತಿ ಸರಿಯಾಗಿ ಇಲ್ಲದೆ, ಅವನ ಆರೋಗ್ಯವು ಬಹುವಾಗಿ ಕೆಟ್ಟಿತು. ಠಾಗಾಗಿ ಅವನು ಹಿಂದಿರುಗಿದನು. ಲೋರಾಳಿಗೆ ತುಂಬ ಸಂತೋಷ, ಸಂಭ್ರಮವಾದುವು. ಲೆಟ್ವಿನಾವನಿಂದ ಹೊಪಲು ಬಂದ ಕಾಗದದ ಹೊರತು ಮತ್ತೇನೂ ಬಂದಿರಲಿಲ್ಲ. ಈಗ ಎರಡನೆಯ ಮಗನಾದರೂ ಮನೆಗೆ ಬಂದುದಕ್ಕೆ ಅವಳಿಗೆ ಆತ್ಯಾನಂದವಾಯಿತು. ಲೆಟ್ವಿನಾವನ ನಾಶವೇ ಆಗಿರಬೇಕು—ಎಂದು ಇಬ್ಬರೂ ಊಹಿಸಿರು. ಸುವರಾವನ ಕೀರ್ತಿಯನ್ನು ರೇಡಿಯೋದಲ್ಲಿ ಕೇಳಿ ಲೋರಳು ಹೆಮ್ಮೆಪಟ್ಟದ್ದಳು. ಅಂತಹವನ ಅಣ್ಣ ಇನ್ನೆಂತಹ ಶೂರನಾಗಿರಬೇಡ? ಕಾಲಾಂತರದಲ್ಲಿ ಅವನ ಸಾಹಸ ಖಂಡಿತವಾಗಿಯೂ ಬೆಳಕಿಗೆ ಬರುವುದೆಂದು ಅವಳು ಬಗೆದಳು. ಒಂದು ತಿಂಗಳ ವಿಶ್ರಾಂತಿಯಲ್ಲಿಯೆ ಸುವರಾವನು ಸುಧಾರಿಸಿದನು. ಪ್ರತಿದಿನವೂ ಒಂದೊಂದು ವರ್ಷದಂತೆ ಅವನಿಗೆ ಆಗುತ್ತಿತ್ತು — ಅವನಿಂದ ನಡೆಯಬಹುದಾಗಿದ್ದಂತಹ ಎಷ್ಟೋ ಮಹಾಕಾರ್ಯಗಳು ಹಿಂದೆ ನಿಂತಿವೆ. ಕೊನೆಗೂ ಹುಷಾರಾದನು. ಲೋರಳ ಮನಸ್ಸು ಮಾತ್ರ ಭಾರವಾಗತೊಡಗಿತ್ತು—ನುಂದಿನದನ್ನು ಯೋಚಿಸಿ. ಮೊದಲಿನ ಮಗನ ಸುದ್ದಿಯೇ ಇಲ್ಲ: ಇನ್ನು ಇವನೂ ಹೊರಡುವನಲ್ಲ ಎಂದು. ಆದರೆ ' ದೇವನಿದ್ದಾನೆ. ಮಗನು ಚಿರಧನಳ ಕೀರ್ತಿ ಗಳಿಸಲಿ ! ' ಎಂದು ಹಾರೈಸಿದಳು.

ಸುವರಾವನು ಪುನಃ ರಣರಂಗಕ್ಕೆ ಹೋದನು. ಆದರೆ ಈ ಸಲ ಅವನನ್ನು ಗೊರಿಲ್ಲಾ ದಳಕ್ಕೆ ಕಳಿಸಲಿಲ್ಲ; ಅವನ ಸಾಹಸವನ್ನು ಮೆಚ್ಚಿ, ಸೈನ್ಯದಲ್ಲಿ ಒಂದು ಸಣ್ಣ ಪಡೆಯ ನಾಯಕನನ್ನಾಗಿ ಮಾಡಿ ಕಳಿಸಿದರು. ಅವನ ಕಾರ್ಯ ಮತ್ತು ಜವಾಬ್ದಾರಿಕೆ ಇನ್ನೂ ಕಠಿನವಾಯಿತು, ಅಷ್ಟೇ ಉತ್ಸಾಹವೂ ಅವನಿಗೆ ಹೆಚ್ಚಾಯಿತು. ಮೊದಲಾಗಿದ್ದರೆ ಉಪಾಯದಿಂದ ಜರ್ಮನರನ್ನು ಬಲೆಯಲ್ಲಿ ಕೆಡವಿ ನಾಶ ಮಾಡುವುದಾಗಿತ್ತು. ಅಲ್ಲಿ ಎಷ್ಟು ಕಷ್ಟವಿದ್ದರೂ, ಅಷ್ಟೇ ಹೊಸತನ ಸಂತೋಷಗಳು ಇರುತ್ತಿದ್ದುವು. ಅಲ್ಲಿ ಶಕ್ತಿಗಿಂತಲೂ ಯುಕ್ತಿಯೇ ಪ್ರಧಾನ. ಇಲ್ಲಿ ಉಪಾಯವೂ ಬೇಕು; ಆದರೆ ಶಕ್ತಿ, ದೃಢತೆಗಳು ಮುಖ್ಯ. ಯಾವ ಕಾರ್ಯಕ್ಕೂ ಧೈರ್ಯದಿಂದ ಕೈಯ್ಯೊಡ್ಡತಕ್ಕ ಸ್ವಭಾವ ಸುವರಾವನದು. ಅವನು ಪವಿತ್ರ ರಶ್ಯದ ವೀರ ಪುತ್ರನಲ್ಲನೇ? ಲೋರಳ ಪ್ರೀತಿಯ ಮಗನಲ್ಲನೇ? ವೀರ ಲೆಟ್ವಿನಾವನ ಧೀರ ಸಹೋದರನಲ್ಲವೇ ?

ಇಷ್ಟರಲ್ಲೇ ಯುದ್ಧಭೂಮಿಯಲ್ಲಿ ವಿಶೇಷ ಬದಲಾವಣೆಗಳಾಗಿದ್ದುವು. ಸ್ಟಾಲಿನ್‌ಗ್ರಾಡಿಗೆ ಜರ್ಮನ್ನರು ಬಂದಿದ್ದರು. ಚರಿತ್ರೆಯಲ್ಲಿ ಸ್ಟಾಲಿನ್‌ಗ್ರಾಡ್ ಕದನಕ್ಕೆ ಒಂದು ಮುಖ್ಯಸ್ಥಾನ ದೊರೆಯುವುದು. ಜರ್ಮನರು ಅವರ ಸಕಲ ಜನ, ಶಸ್ತ್ರ, ವಿಮಾನ ಸಾಮರ್ಥ್ಯಗಳನ್ನು ಈ ಕದನದಲ್ಲಿ ತೋರಿಸಿದರು. ಯಾವ ಒಂದು ಹೊಸ ಅಸ್ತ್ರವನ್ನು ಕಂಡು ಹಿಡಿದರೂ, ಅದನ್ನು ಕೂಡಲೆ ಸ್ಟಾಲಿನ್‌ಗ್ರಾಡಿನ ಮೇಲೆ ಪ್ರಯೋಗಿಸಿದರು. ಹೆಣಗಳ ರಾಶಿಗಳು ಬಿದ್ದುವು. ಸುಂದರ ನಗರ ಸ್ಮಶಾನಸದೃಶವಾಯಿತು. ಅದೊಂದು ರುದ್ರ, ಭಯಂಕರ ದೃಶ್ಯವಾಗಿತ್ತು. ನಿಜವಾಗಿಯೂ ವಿಲಯರುದ್ರನ ಪ್ರಳಯತಾಂಡವವೇ ಅಲ್ಲಿ ನಡೆಯಿತು. ಆದರೆ ರಶ್ಯನರು ಧೃತಿಗೆಡಲಿಲ್ಲ. ಸ್ಟಾಲಿನ್‌ಗ್ರಾಡ್ ಬಿದ್ದು ಹೋಯಿತೆಂದೇ ಜರ್ಮನ್ನರು ಸುಳ್ಳು ಸುದ್ದಿ ಹಬ್ಬಿಸಿದರು. ಲೋಕದ ದೃಷ್ಟಿಯೆಲ್ಲಾ ಆ ವೀರ-ಪಟ್ಟಣದ ಮೇಲೆ ಕೇಂದ್ರೀಕೃತವಾಗಿತ್ತು. ಸ್ಟಾಲಿನ್‌ಗ್ರಾಡಿನ ಜಯ-ಪತನಗಳೊಂದಿಗೆ ರಶ್ಯದ ಜಯ-ಪತನಗಳು ನಿಕಟವಾಗಿ ಹೆಣೆಯಲ್ಪಟ್ಟಿವೆಯೆಂದು ಎಲ್ಲರಿಗೂ ತಿಳಿದಿದ್ದಿತು. ಅಂತೆಯೆ ಹಿಟ್ಲರನ ಅಷ್ಟೊಂದು ಪ್ರಯತ್ನ—ಅದನ್ನು ಗೆಲ್ಲಲು; ಅಂತೆಯೇ ರಶ್ಯನ್ನರ ಆ ಅದ್ಭುತ ಸಾಹಸಪ್ರದರ್ಶನ—ಅದನ್ನುಳಿಸಲು. ಇವರು ಮನುಷ್ಯರೇ ಅಲ್ಲ, ಮಹಾ ಬಲಶಾಲಿಗಳು....ಎಂಬಂತೆ ರಶ್ಯನ್ನರು ಅಲ್ಲಿ ಕಾದಾಡಿದರು. ಸುವರಾವನನ್ನೂ ಆ ರಂಗಕ್ಕೆ ಕಳಿಸಿದ್ದರು.

ಅವನ ಸಾಹಸ-ಧೈರ್ಯಗಳಿಗೆ ಅದು ನಿಜವಾದ ಒರೆಗಲ್ಲಾಗಿತ್ತು. ಅವನಂತಹ ಅನೇಕ ವೀರರ ಸಮುದ್ರವೇ ಸ್ಟಾಲಿನ್‌ಗ್ರಾಡ್ ರಂಗವಾಗಿತ್ತು. ಇಲ್ಲವಾದರೆ ಸ್ಟಾಲಿನ್‌ಗ್ರಾಡ್ ಖಂಡಿತವಾಗಿಯೂ, ಅದರೊಂದಿಗೆ ರಶ್ಯವೂ, ಸೋಲುತ್ತಿದ್ದಿತು.

ಕೈ ಕೈ ಯುದ್ಧ, ಬಂದೂಕುಗಳ ಯುದ್ಧ, ಟ್ಯಾಂಕುಗಳ ಯುದ್ಧ, ವಿಮಾನಗಳ ಯುದ್ಧ ಎಲ್ಲವೂ— ತೀರ ಹೊಸ ಕ್ರಮದ ಯುದ್ಧ ಮತ್ತು ತೀರ ಪುರಾತನ ಯುದ್ಧ ಎರಡೂ—ಅಲ್ಲಿ ನಡೆದುವು. ಜರ್ಮನ್ನರು ಸ್ಟಾಲಿನ್‌ಗ್ರಾಡನ್ನು ಸುತ್ತುಹಾಕಲು ನೋಡಿದರು, ಆದರೆ ವಿಫಲರಾದರು. ಒಂದು ಕಡೆ ಸುವರಾವನ ಪಡೆಗೂ, ಜರ್ಮನ್ನರ ಒಂದು ಪಡೆಗೂ ಕೈ ಕೈ ಯುದ್ಧ ಪ್ರಾರಂಭವಾಯಿತು. ಬಂದೂಕುಗಳಿಂದ ಫಿರಂಗಿಗಳಿಂದ ಗುಂಡುಗಳ ಸುರಿಮಳೆ ಕರೆದರು. ಟ್ಯಾಂಕುಗಳು ಚೀತ್ಕಾರ ಮಾಡುತ್ತ ಆ ಹೆಣಮಯರಂಗದಲ್ಲಿ ಕಾದಾಡುತ್ತಿದ್ದುವು. ವಿಮಾನಗಳಂತೂ ಇಡಿ ಆಕಾಶವನ್ನೇ ವ್ಯಾಪಿಸಿದ್ದುವು. ಈ ಎಲ್ಲಾ ಶಬ್ದದಿಂದ ಕಿವಿಯೇ ಒಡೆಯುವಂತಿದ್ದಿತು. ಜೆಂಕೆಯು ನಾಲ್ಕು ದಿಕ್ಕಿಗೂ ನಾಲಗೆ ಚಾಚುತ್ತ ಹೊತ್ತುತ್ತಿದ್ದಿತು. ಆಕಾಶವಿಡೀ ಧೂಮಮಯವಾಯಿತು. ನೆಲವೆಲ್ಲಾ ಬಿದ್ದವರ ದೇಹಗಳಿಂದ, ಬಿದ್ದ ಟ್ಯಾಂಕುಗಳಿಂದ ಏರುತಗ್ಗಾಯಿತು. ರಕ್ತದ ಪ್ರವಾಹವೇ ಹರಿಯಿತು: ದುರ್ವಾಸನೆ ತಡೆಯಕೂಡದು. ಆದರೂ ನಡೆಯಿತು ಸಂಗ್ರಾಮ. ಸುವರಾವನ ಮುಂದಾಳುತನದಲ್ಲಿ,ಆ ಪಡೆಯವರು ಇತರ ಪಡೆಯವರೊಡಗೂಡಿ ಬಹು ಚೆನ್ನಾಗಿ ಕಾದಾಡಿದರು. ಜರ್ಮನ್ನರು ಇಪಕ್ಕೆರಡು ಶಕ್ತಿಯಿಂದ ಯುದ್ಧ ಮಾಡಿದರು. ಆದರೆ ಅನ್ಯಾಯಗಾರರಿಗೆ ಬಹುಹೊತ್ತು ಮೇಲುಕೈಯಾಗಿ ಇರಲು ಸಾಧ್ಯವಾಗಲಿಲ್ಲ. ಸುವರಾವನು ಗೆದ್ದನು. ಜರ್ಮನ್ನರ ಆ ಪಡೆಯ ನಾಯಕನು ಗುಂಡು ತಾಗಿ ಬಿದ್ದನು, ಜರ್ಮನರು ಸತ್ತರು, ಉಳಿದವರು ಓಡಿಹೋದರು ಅಥವಾ ಸೆರೆಸಿಕ್ಕಿದರು. ಸಾಯಂಕಾಲ ಆಕಾಶದ ಕೆಂಪಿನ ನಾಲ್ಕು ಮಡಿ ಕೆಂಪು ರಣರಂಗವಿತ್ತು. ಆ ಕದನವು ಆಗ ಕೊನೆಗೊಂಡಂತೆ ತೋರಿತು.

ಬಿದ್ದ ಸೈನಿಕರಿಂದ ಅವರ ಆಯುಧ, ವಸ್ತ್ರ ಎಲ್ಲಾ ಶೇಖರಿಸುವ ಪದ್ಧತಿ. ಸುವರಾವನು ತಾನೇ ಸ್ವತಃ ಬಿದ್ದ ಜನರನ್ನು ನೋಡಲು ಮುಂದೆ ಹೋದನು. ಹೆಣಗಳ ರಾಶಿಯಲ್ಲಿ ಅವನಿಗೆ ಸರಿಯಾಗಿ ನಡೆಯಲಾಗಲಿಲ್ಲ. ಜೀವ ಹೋಗದೆ ನರಳುತ್ತಿದ್ದ ರಶ್ಯನರನ್ನೂ ಜರ್ಮನರನ್ನೂ ರಶ್ಯನರು ತಮ್ಮ ಆಸ್ಪತ್ರೆಗೆ ಸಾಗಿಸುತ್ತಿದ್ದರು. ಅಲ್ಲೇ ಒಂದು ಪಕ್ಕದಲ್ಲಿ ಪಕ್ಕೆಗೆ (ಹೊಟ್ಟೆಯ ಹತ್ತಿರ) ಗುಂಡು ತಾಗಿ ಜರ್ಮನ್ನರ ಕ್ಯಾಪ್ಟನನು ಬಿದ್ದಿದ್ದನು. ಅವನು ನಿಮಿಷ ಎಣಿಸುತ್ತಿದ್ದನು. ಅವನ ಪರ್ಜೆ (ರ್ಯಾಂಕ್) ಏನೆಂದು ನೋಡೋಣವೆಂದು ಸುವರಾವನು ಅವನ ಸಮೀಪಕ್ಕೆ ಹೋದನು. ಜರ್ಮನ್ನನು ಏನೋ ಗೊಣಗುತ್ತಿದ್ದನು. ರಕ್ತವು ಪಕ್ಕದಿಂದ ಒಸರುತ್ತಿದ್ದಿತು. ಅವನಿಂದ ಶತ್ರುವಿನ ಗುಟ್ಟೇನಾದರೂ ತಿಳಿಯಬಹುದೋ ಎಂದು ಸುವರಾವನು ಯೋಚಿಸಿದನು. ಆ ನಾಯಕನನ್ನು ಸ್ಪಷ್ಟವಾಗಿ ನೋಡಲು ಮತ್ತು ಅವನನ್ನು ಮಾತನಾಡಿಸಲು ಎಂದು, ಸುವರಾವನು ಶತ್ರುವಿನ ಮುಖವಾಡವನ್ನು ಕಳಚಿದನು.

ಕೂಡಲೆ ಸುವರಾವನು ದಿಗ್ಭ್ರಾಂತನಾಗಿ ಹಿಂದೆ ಹಾರಿದನು. ಮುಖವಾಡ ಕಳಚಿದ ಕೂಡಲೆ ಸ್ವಲ್ಪ ಚೆನ್ನಾಗಿ ಉಸಿರಾಡಿಸುವಂತೆ ಆ ಕ್ಯಾಪ್ಟನ್ನನಿಗಾಯಿತು. ನೋವಿನಿಂದ ಕಣ್ಣು ಮುಚ್ಚಿದ್ದ ಅವನು ಆಗ ಸರಿಯಾಗಿ ಕಣ್ತೆರೆದನು.

"ಅಯ್ಯೋ! ನನ್ನ ತಮ್ಮ ಸುವರಾವ್!" ಎಂದು ಅವನು ಗಟ್ಟಿಯಾಗಿ ಕಿರುಚಿದನು.

ಸುವರಾವ್ ದ್ವೇಷದಿಂದ ಅಪಮಾನದಿಂದ ಕುದಿಯುತ್ತಿದ್ದನು. ಲೆಟ್ವೀನಾವನು ಪಶ್ಚಾತ್ತಾಪದಿಂದ ಬೇಯುತ್ತಿದ್ದನು.

"ತಮ್ಮಾ, ನಾನು ಸಾಯುತ್ತಿದ್ದೇನೆ. ಆದರೆ ನನ್ನ ಸಾವು ಯಾರಿಗೂ ಬೇಡ. ತಾಯಿ ಲೋರಳಿಗೆ ಏನೆಂದು ಹೇಳುವೆ? ಪಿತೃಭೂಮಿಗೆ ಕೇಡು ಬಗೆದೆನು. ನನಗೆ ಸರಿಯಾಯಿತು ಪ್ರಾಯಶ್ಚಿತ್ತ. ನಿನ್ನಂತಹ ತಮ್ಮನ ಅಣ್ಣನಾಗುವ ಯೋಗ್ಯತೆ ನನ್ನ ಹಣೆಯಲ್ಲಿ ಬರೆಯಲಿಲ್ಲ. ಪಣದಾಸೆ, ಅಧಿಕಾರ ಲಾಲಸೆಗಾಗಿ ನನ್ನನ್ನು ಮಾರಿಕೊಂಡೆನು. ನನ್ನನ್ನು ಕ್ಷಮಿಸುವೆಯಾ? ಇಲ್ಲ, ಇನ್ನೆಲ್ಲಿಯ ಕ್ಷಮೆ ನನಗೆ! ತಾಯೇ ಲೋರಾ!" ಎಂದು ನೋವು ತಡೆಯಲಾರದೆ ಕ್ಯಾಪ್ಟನ್ನನು ಕಣ್ಣು ಮುಚ್ಚಿದನು. ಅವನ ಕಣ್ಣುಗಳಿಂದ ನೀರು ಸುರಿಯುತ್ತಿತ್ತು.

ಅಷ್ಟರಲ್ಲಿಯೆ ಢಂ ಎಂದು ಕೇಳಿತು. ರಶ್ಯನ್ ಸೈನಿಕರು ಆ ಕಡೆಗೆ ಓಡಿದರು. ಆದರೆ ತಲೆಗೇ ಗುಂಡಿನೇಟು ಬಿದ್ದ ಸುವರಾವನು ನೆಲದ ಮೇಲೆ ಸತ್ತು ಬಿದ್ದನು. ಸಾಯುತ್ತಾ ಬಿದ್ದಿದ್ದ ಜರ್ಮನ್ ಯೋಧನೊಬ್ಬನು, ಅಲ್ಲಿಂದಲೇ ತನ್ನ ಪಿಸ್ತೂಲಿನಿಂದ ಸುವರಾವನ ತಲೆಗೆ ಗುಂಡು ಹೊಡೆದಿದ್ದನು.

ಈ ಘೋರ ದೃಶ್ಯವನ್ನು ಲೆಟ್ವೀನಾವನು ನೋಡಲಾರದೆ ನೋಡಿ, ಕಣ್ಣು ಮುಚ್ಚಿದನು.

ಗೋವಾಯಾತ್ರೆ

(ಹನ್ನೊಂದು ಹರಟೆಗಳ ಸಂಕಲನ)

ಹಲವು ಜನ ವಿಮರ್ಶಕರು ಈ ಹರಟೆಗಳ ಹೊಸತನವನ್ನು ಮುಕ್ತಕಂಠದಿಂದ ಹೊಗಳಿದ್ದಾರೆ.

ಪ್ರಿನ್ಸಿಪಾಲ್ **ಗೋಕಾಕರು** ತುಂಬ ಒಳ್ಳೆಯ ಅಭಿಪ್ರಾಯಪಟ್ಟಿದ್ದಾರೆ.

ಕ್ರೌ. ೞ ದ ೞಂ ಪುಟಗಳು ೞಾ ಬೆಲೆ ಒಂದು ರೂಪಾಯಿ

ಭಾರತ ಬುಕ್‌ಡಿಪೊ, ಗಾಂಧಿಚೌಕ, ಧಾರವಾಡ.

ಅವಸರದ ವಿಚಾರಗಳು: — ೨

ಬುದ್ಧಿ ಮತ್ತು ಮನ

ಶ್ರೀ. ಸೋಮಶೇಖರ ಪಾರ್ವತೇಯ, ಬನಾರಸ

★

ಜೀವನದಲ್ಲಿ ಬುದ್ಧಿಗೂ ಮತ್ತು ಮನಸ್ಸಿಗೂ—ಇವೆರಡರ ಮಧ್ಯೆ ಒಂದು ಹೋರಾಟವಿದೆ. ಇವೆರಡರ ವಿವರಣೆ ಮತ್ತು ವಿಭೇದವು ಅಷ್ಟು ಸುಲಭವಲ್ಲ. ಆದರೂ ಎರಡು ಬೇರೆ ಬೇರೆ—ಅವು ತಮ್ಮ ತಮ್ಮ—ಸ್ವಂತದ ಶಕ್ತಿಗಳನ್ನು ಇಟ್ಟುಕೊಂಡಿವೆ. ಬುದ್ಧಿಯು ಆಂತರಿಕ ಸೌಂದರ್ಯವನ್ನು ವಿಚಾರಿಸುತ್ತದೆ; ಮನವು ಬಾಹ್ಯ ಸೌಂದರ್ಯವನ್ನು ನೋಡಿ ಸೋಲುತ್ತದೆ. ಮನವು ಪಾರ್ಥಿವ ಪದಾರ್ಥಗಳನ್ನೇ ಮೆಚ್ಚುತ್ತಿದ್ದು, ಅವುಗಳನ್ನು ಅನುಭವಿಸುವುದರಲ್ಲಿಯೆ ಜೀವನದ ಇತಿಕರ್ತವ್ಯವೆಂದು ತಿಳಿಹೇಳುತ್ತದೆ. ಮನಃಶಕ್ತಿಯನ್ನು ವಿಚಾರಿಸುವಾಗ ಅದು ಶಾಶ್ವತವೆಂದು ಹೇಳಬರುವಂತಿಲ್ಲ. ಬುದ್ಧಿಶಕ್ತಿಯು ಸೃಷ್ಟಿಯ ಪೃಷ್ಟಿಯಲ್ಲಿ ಅದು ಸ್ಥಿರ. ಅದು ಶಾಶ್ವತ ಪದಾರ್ಥಗಳನ್ನು ತೋರಿಸುತ್ತದೆ, ಅಲೌಕಿಕ ವಿಚಾರಗಳನ್ನು ವಿಚಾರಿಸಲು ಮುಂದುವರೆಯುತ್ತದೆ. ಅಂದವನ್ನು ಕಂಡು ಕೇವಲ ಸೋಲುವ ಮನಸ್ಸು, ಒಳ್ಳೆಯದನ್ನು ತೋರಿಸುವ ಕೇವಲ ವಿವೇಚನೆಯ ಬುದ್ಧಿಯು—ಇವೆರಡೂ ಜೀವನದಲ್ಲಿ, ಅದು ಎಷ್ಟೇ ಚಿಕ್ಕದಾಗಿರಲಿ, ಹೋರಾಡುತ್ತವೆ. ಹೋರಾಡಬೇಕು.

ಇದೊಂದು ತತ್ತ್ವ, ಎಲ್ಲರೂ ವಿಚಾರಿಸಬೇಕಾದ ತತ್ತ್ವ.

ಮನವಿದ್ದವನು ಸುಂದರ ಪದಾರ್ಥಗಳನ್ನು ಕಂಡು ಆಕರ್ಷಿತನಾಗುತ್ತಾನೆ. ಬುದ್ಧಿಯಿದ್ದವನು ಅವುಗಳನ್ನು ವಿವೇಚಿಸುತ್ತಾನೆ. ಇವೆರಡು ಶಕ್ತಿಗಳು ಎಲ್ಲರಲ್ಲಿಯೂ ಇವೆ. ಆದರೆ ಇರುವಿಕೆಯಲ್ಲಿ ತಾರತಮ್ಯ ಮಾತ್ರ. ಒಂದು ಕಡೆ ಮನವು ಬುದ್ಧಿಯನ್ನು ಅನುಸರಿಸುತ್ತಿದ್ದರೆ, ಇನ್ನೊಂದು ಕಡೆ ಬುದ್ಧಿಯು ಮನವನ್ನು ಅನುಸರಿಸುತ್ತದೆ. ಇವೆರಡರ ಸಮುಪ್ರಾಧಾನ್ಯವಿರಲಾರದೆಂದೇ ತಿಳಿಯುತ್ತಿದ್ದೇನೆ. ಹಾಗೆ ಸಮವಾಗಿದ್ದಲ್ಲಿ ಅಂಥವನು ಹುಚ್ಚನಾಗುವನೋ ಏನೋ ?— ಮನವು ಬುದ್ಧಿಯನ್ನು ಅನುಸರಿಸುವಲ್ಲಿ ವಿಷಯ ವಾಸನೆಗಳು (ಪಾಪಯೋಜನೆಗಳು), ವಿಚಾರದಲ್ಲಿ ಬಂದರೂ ಕಾರ್ಯರೂಪಕ್ಕೆ ಬರುವುದಿಲ್ಲ. ಆದರೆ ಬುದ್ಧಿಯು ಮನವನ್ನು ಅನುಸರಿಸುವಲ್ಲಿ ವಿವೇಚನೆಯಿದ್ದರೂ ಆ ರೀತಿಯ ಕಾರ್ಯಗಳು ಜರುಗಿ ಹೋಗುತ್ತವೆ. ಇದು ಖಂಡಿತ.

ಇವೆರಡು ತತ್ತ್ವಗಳು—ಮನಸ್ ತತ್ತ್ವ ಮತ್ತು ಬುದ್ಧಿತತ್ತ್ವ—ಒಂದನ್ನು ಇನ್ನೊಂದು ಆಳಿ, ಜೀವನವನ್ನು ಸಾಗಿಸುತ್ತವೆ. ಈ ವಿಚಾರಕ್ಕೆ ಪ್ರಾಚೀನ ಸಿದ್ಧಾಂತಗಳೂ ಅನುಕೂಲಗಳಾಗಿವೆ. ಯಾವ ತತ್ತ್ವಸಿದ್ಧಾಂತಗಳನ್ನೂ ಓದದವನು ಆದರ್ಶಕಾರ್ಯಗಳನ್ನು—ಆದರ್ಶಜೀವನ—ಮಾಡುತ್ತಿದ್ದರೆ, ಅವನ ಬುದ್ಧಿಶಕ್ತಿ ಜಾಗೃತವಿರುತ್ತದೆ, ಮನಃಶಕ್ತಿಯು ಅದರ ಅಂಕಿತದಲ್ಲಿರುತ್ತದೆ ತತ್ತ್ವಸಿದ್ಧಾಂತಗಳನ್ನು ಪ್ರತಿಪಾದಿಸುವವನು ಅಥವಾ ಧಾರ್ಮಿಕ ಆಚಾರಗಳನ್ನು ಕೂಲಂಕಷವಾಗಿ ವಿವೇಚಿಸುವವನು ನಿಂದನೀಯ ಕಾರ್ಯಗಳನ್ನು ಮಾಡುತ್ತಿದ್ದರೆ, ಅವನ ಮನಃಶಕ್ತಿಯು ಜಾಗೃತವಿರುತ್ತದೆ, ಬುದ್ಧಿಶಕ್ತಿಯು ಅದರ ಅಂಕಿತದಲ್ಲಿರುತ್ತದೆ.

ಮನಸ್ಸಿನ ಸಹಾಯದಿಂದ ಬುದ್ಧಿಯನ್ನು ಜಯಿಸುವುದು ಸುಲಭ ಇದನ್ನು ಎಲ್ಲರೂ ಮಾಡುತ್ತಾರೆ. ಆದರೆ ಬುದ್ಧಿಯ ಸಹಾಯದಿಂದ ಮನಸ್ಸನ್ನು ಜಯಿಸುವುದು ಅಷ್ಟು ಸುಲಭವಲ್ಲ—ಅದೊಂದು ಮುಳ್ಳಿನ ಮಾರ್ಗವಿದ್ದಂತೆ !

ಮನುಷ್ಯನು ಹೆಚ್ಚಾಗಿ ಬುದ್ಧಿಯಿಂದಲೋ, ಮನಸ್ಸಿನಿಂದಲೋ ಬಾಳುತ್ತಾನೆ. ಕೇವಲ ಬುದ್ಧಿಯಿಂದ ಬಾಳಬೇಕೆನ್ನುವುದು ಕೆಡುಕು. ಕೇವಲ ಮನದಿಂದ ಜೀವಿಸುವುದೂ ಕೆಡುಕು. ಒಂದನ್ನು ಇನ್ನೊಂದು ಹಿಂಬಾಲಿಸಬೇಕು, ಅದರಲ್ಲಿಯೂ ಬುದ್ಧಿಯನ್ನು ಮನವು. ಅದು ಶುದ್ಧಜೀವನವು.

"ಲಕಾಕಿ" ಬ್ರ್ಯಾಂಡ್ ಡಿಸ್ಟೆಂಪರ್:
Lakaki
DRY DISTEMPER
ಮನೆ ಮತ್ತು ಬಂಗಲೆಗಳಿಗೆ ಸುಂದರವಾದ ಬಣ್ಣ ಹಾಕಲಿಕ್ಕೆ.
"ಓಟೋ ಸಿಂಥೆಟಿಕ್" ಎನ್ಯಾಮಲ್ಸ್:
ಮೋಟಾರುಗಳಿಗೂ ಫರ್ನಿಚರುಗಳಿಗೂ ಬಣ್ಣ ಹಾಕಲಿಕ್ಕೆ.
"ಪ್ರಿಂಟಿಂಗ್" ಇಂಕ್ಸ್:
ಸೊಬಗಿನ ಮುದ್ರಣಕ್ಕಾಗಿ ಕಪ್ಪು ಮತ್ತು ಬೇರೆ ಬಣ್ಣದುವು.
ತಯಾರ್ ಮಾಡುವವರು:
ಇಂಡಸ್ಟ್ರಿಯಲ್ ಕೆಮಿಕಲ್ ವರ್ಕ್ಸ್,
ಕಿರ್ಲೋಸ್ಕರವಾಡಿ.
ದೊರೆಯುವ ಸ್ಥಳ:
ಧಾರವಾಡ:— ಶ್ರೀ. ವ್ಹಿ. ಪಿ. ಪುಣೇಕರ
ಬೆಳಗಾಂವಿ:— ಕುಲಕರ್ಣಿ ಮತ್ತು ಕಂಪನಿ



೧೮೮. ಸರ

[ಕವನ ಸಂಕಲನ]

ಬರೆದವರು: ಶ್ರೀ. ಅಮ್ಮೆಂಬಳ ಶಂಕರನಾರಾಯಣ 'ವಿದ್ವಾನ್' ಮಂಗಳೂರು. ' ಸಾಹಿತ್ಯಾಂಜಲಿ ' ಪುಷ್ಪ— ಎರಡು.

ಈ ಸಂಕಲನಕ್ಕೆ ಶ್ರೀಮಾನ್ ವ. ರಾ. ಬೇಂದ್ರೆಯವರು ವಿಮರ್ಶೆಯ ತೂಕದ ಮುನ್ನುಡಿ ಬರೆದಿದ್ದಾರೆ. ಮಂಗಳೂರಿನ ಸಹೃದಯರಾದ ಶ್ರೀ. ಕಯ್ಯಾರ. ಕಿಂಯಣ್ಣ ರೈ ಅವರು ಕವಿ-ಕಾವ್ಯ ಪರಿಚಯ ಮಾಡಿಕೊಟ್ಟಿದ್ದಾರೆ. ಆದರೂ ನಾಡಿನ ಸಾಹಿತ್ಯ-ರಸಾಸ್ವಾದಿಗಳಿಗೆ, ತಂತಮ್ಮ ವಿಮರ್ಶಾತ್ಮಕ ಅಭಿಪ್ರಾಯವನ್ನು ಕೊಡಲು ಯಾವ ಅಡೆ-ತಡೆಯೂ ಇರದೆಂದು ನನ್ನೆಣಿಕೆ.

ಇದರಲ್ಲಿ ೫೧ ಕವನಗಳು ಸಂಕಲಿತವಾಗಿದ್ದು ಅವು ಐದು 'ಎಳೆ'ಗಳಲ್ಲಿ ವಿಭಾಗಿತವಾಗಿವೆ. ೧ನೆಯ ಎಳೆಯಲ್ಲಿ ೧೨ ' ಪ್ರಕೃತಿಪರ ' ಕವಿತೆಗಳಿವೆ. ೨ನೆಯ ಎಳೆಯಲ್ಲಿ ೨೨ ' ಭಾವಾತ್ಮಕ ' ಕವಿತೆಗಳಿವೆ. ೩ನೆಯ ಎಳೆಯಲ್ಲಿ ೮ ' ಶೃಂಗಾರಾತ್ಮಕ ' ಕವಿತೆಗಳಿವೆ. ೪ನೆಯ ಎಳೆ, ೮ 'ಕವಿಸ್ಮೃತಿ'ಗಳಿಂದ ಕೂಡಿದೆ. ೫ನೆಯ ಎಳೆಯು, ಕವಿಯ ' ಜೀವನಸ್ಮೃತಿ 'ಯಿಂದ ಕೂಡಿದೆ.

ಕವಿಗೆ ಮಿಕ್ಕಿತರರಂತೆಯೆ ಹೊರಗಣ್ಣುಗಳಿರುತ್ತವೆ. ಮಿಕ್ಕವರು ನೋಡುವಂತೆಯೆ ಲೋಕವನ್ನು ನೋಡುತ್ತಾನೆ. ಆದರೆ ನೋಡಿದ ನೋಟದಲ್ಲಿ ಮಿಕ್ಕವರು ಕಾಣದ ಅರ್ಥವನ್ನು ಕಾಣುವ ಬುದ್ಧಿ ಅವನಿಗಿರುತ್ತದೆ; ಮಿಕ್ಕವರು ಕಾಣದ ಜೀವನವನ್ನು ಕಾಣುವ ಹೃದಯ ಅವನಿಗಿರುತ್ತದೆ; ಅಲ್ಲದೆ ಮಿಕ್ಕವರಿಗೆ ಬಣ್ಣಿಸಿ ಹೇಳಲಿಕ್ಕೆ ಬಾರದಂತಹ ವೈಖರೀವಾಣಿಯೂ ಅವನಿಗಿರುತ್ತದೆ. ಎಂತಲೆ ಕವಿ ಜನಸಾಮಾನ್ಯರಿಂದ ' ಋಷಿ ' ಎಂದು ಹೊಗಳಿಸಿಕೊಳ್ಳುತ್ತಾನೆ.

ಬುದ್ಧಿಪ್ರಧಾನವಾದ ಕವಿಯ ಕೃತಿ ' ಶಾಸ್ತ್ರದ ಒಣಮಾಪು ' ಗಳೆಂದು ಹೇಳಿಸಿಕೊಂಡರೂ, ವಿಚಾರನಿವರು ಅವುಗಳನ್ನು ಪುರಸ್ಕರಿಸುವರು; ಅದರಂತೆಯೆ ಭಾವನಾಪ್ರಧಾನನಾದ ಕವಿಯ ಕೃತಿ ' ಅವ್ಯವಹಾರ್ಯ ' ಎಂದು ಹೇಳಿಸಿಕೊಂಡರೂ, ಭಾವನಾಜೀವಿಗಳು ಅದನ್ನು ಮೆಚ್ಚುವರು. ಆದರೆ ಬುದ್ಧಿ-ಭಾವನೆಗಳ ಮಧುರ ಸಂಯೋಗದಿಂದ ಹೊರಟ ಕವಿಕೃತಿಗಳು ಸರ್ವದೇಶ, ಸರ್ವಕಾಲ, ಸರ್ವಜನ ಮಾನ್ಯವಾಗುವುವು. ಇನ್ನು ಬುದ್ಧಿ-ಭಾವನೆಗಳೆರಡರ ಬಲವೂ ಇಲ್ಲದವರ ಕೃತಿಗಳು ' ಬರಿ ತಾರಗ ಬೀರಗ, ಎಕ್ಕಸಕ್ಕ '.

ಇಲ್ಲಿ ಕವಿತೆ ಬರೆಯಬೇಕೆಂಬ ಹುಚ್ಚುಹಂಬಲದ ಬಲದ ಹೊರತು ಕೃತಿಕಾರನಿಗೆ ಇನ್ನಾವ ಬಲವೂ ಇರುವುದಿಲ್ಲ.

' ಸರ'ದ ಕವಿಗಳು ' ಗೀರ್ವಾಣವಾಣಿ ಹಳಗನ್ನಡದ ಸಾಹಿತ್ಯಸಾಗರದ ಶಿಕ್ಷಣಪ್ರೌಢತೆಯನಾಂತು, ಮದ್ರಾಸು ವಿಶ್ವವಿದ್ಯಾನಿಲಯದವರಿಂದ ಮೊತ್ತಮೊದಲಾಗಿ ವಿದ್ವತ್ ಪದವಿ ' ಪಡೆದವರು. ' ಹರಯ ಹವಿನೆಂಟರ ಸುಮಾರಿನಲಿ ಕಾವ್ಯ ವನಿತೆಯು ಬಂದು ಮಾಲೆ ಸೂಡಿದಳು ' ಎಂದು ಹೇಳುವವರು. ತಾರುಣ್ಯದಲ್ಲಿ ' ಕವನಕಾಮಿನಿ'ಗಾಗಿ ಹಂಬಲಿಸುತ್ತ:

' ಮೊದಲು ತೊದಲುನುಡಿಯೊಳಾದರೇನು ಭಾವವೆರೆದೆ ನೀ;
ಸಹಜ ಕಲ್ಪನಾವಿಲಾಸ ಹಾಸವಿತ್ತು ಪಡಿದನಿ.
ಆದರೀಗ ನಿನ್ನ ಸುಳಿವು ವಿರಳವಿರುವುದೀ ಕಡೆ,
ನೆಲಸಲೆಂದು ನನ್ನ ಮನದೊಳಿಲ್ಲವೇನು ನಿನಗೆಡೆ? '

ಎಂದು ತಮ್ಮ ಸಹಜಭಾವವನ್ನು ತೋಡಿಕೊಂಡಿರುವರು. ಅದರಂತೆಯೆ ಇವರು ಆಹ್ವಾನಿಸಿರುವ ' ಕವಿತಾಕಾಮಿನಿ ' ಎಂತಹಳೆಂಬುದನ್ನು :

' ರಸವಿಶುದ್ಧೆ, ರೀತಿಪೂತೆ, ಗುಣವಿಭೂಷಿತಾಂಗಿಯೆ,
ಧ್ವನ್ಯಲಂಕಾರಯುಕ್ತೆ ಭಾವ-ವೃತ್ತಿ ಸಂಗಿಯೆ! '

ಎಂಬ ಮಾತುಗಳಲ್ಲಿ ಮೂಡಿಸಿದ್ದಾರೆ. ಇಂತಹ ಕವಿತೆ ಆದರ್ಶವಾಗಿದ್ದುದರಿಂದಲೇ ಇಲ್ಲಿಯ ಕವನಗಳು, ಹೊರನೋಟಕ್ಕೆ ಹೊಸಕಾಲದ ಭಾವಗೀತಗಳಂತೆ ಕಂಡರೂ, ವಿಮರ್ಶಕನ ಒಳನೋಟಕ್ಕೆ ಸಾಂಪ್ರದಾಯಿಕ ಮಾರ್ಗದ ಪದ್ಯಗಳಾಗಿ ಕಾಣುವುವು. ಆದರೆ ಆ ಮಾರ್ಗದವರ ಸಮಯ-ಸಂಕೇತಗಳ ಚಮತ್ಕೃತಿ ಮಾತ್ರ ಇದರಲ್ಲಿಲ್ಲ. ಎಲ್ಲೆಲ್ಲಿಯೂ ಸಹಜೋಕ್ತಿಗಳು. ಕಲ್ಪನೆಯ ಕುಸುರುಗಳೂ ಭಾವನೆಯ ಬಣ್ಣವೂ ತೀರ ಕಡಿಮೆ. ' ಧ್ವನ್ಯಲಂಕಾರಯುಕ್ತೆ 'ಯಾಗಿ ಕವಿತೆ ಇಲ್ಲಿ ಹೆಚ್ಚಾಗಿ ಕಾಣುವುದಿಲ್ಲ. ಇವರ ಸಹಜೋಕ್ತಿಗಳಿಗೆ:

' ಸಾವಿರದ ಮುನ್ನೂರು ಮೂವತ್ತಾರನೆಯ ' ಶುಭ '
ಇಸವಿಲಿ
ದೇವರಾಶೀರ್ವಾದದಲಿ ಹೇ ವಿಜಯನಗರವೆ
ನಿನ್ನಲಿ
ಸಾಸಿ ವಿದ್ಯಾರಣ್ಯರು--ಸಿಂ-
ಹಾಸನವ ಸ್ಥಾಪಿಸಿದರು. '

ಇಂತಹ ಎಷ್ಟೋ ಪದ್ಯಗಳನ್ನು ಉದಾಹರಿಸಬಹುದು. ಆಡುವ ಮಾತುಗಳು ಇಲ್ಲಿ ಹಿತವಾದ ರೀತಿಯಲ್ಲಿ ಪದ್ಯಗಳಾಗಿ ಹೆಣಿಕೆಗೊಂಡುದು ವಿಶೇಷ. ಈ ವೈಶಿಷ್ಟ್ಯದ ಮೂಲಕವೆ ' ಹಿಂದಿನ ಕಾಲದ ಒಂದು ಚಿತ್ರ ' ಎಂಬ ಕಥನಕವನವು ಯಶಸ್ವಿಯಾಗಿದೆ; ಈ ವೈಶಿಷ್ಟ್ಯದ ಮೂಲಕನೇ ' ಕವಿಸ್ಮೃತಿ ' ಗಳಾದ ಅಷ್ಟಷಟ್ಪದಿಗಳು ಅ-ಯಶಸ್ವಿಗಳಾಗಿವೆ.

ಕವಿಗಳು ಸಾಹಿತ್ಯಾಭ್ಯಾಸಿಗಳೆಂಬುದನ್ನು ಅವರ ನಿರ್ದುಷ್ಟವಾದ ಛಂದೋರಚನೆ, ಪ್ರಾಸಾದಿಕವಾದ ಪರಿಶುದ್ಧ ಭಾಷೆ, ನುಣುಪಾದ



ಕರ್ನಾಟಕ ಬ್ರಾಂಚ್ :

ಕೊಪ್ಪೀಕರ ರೋಡು, ಹುಬ್ಬಳ್ಳಿ

ಮೂಲಕವಾಗಿಯೇ ಶ್ರೀ. ಅಮ್ಮೆಂಬಳ ಅವರ ಈ ಶೈಲಿಯೇ ಪುಷ್ಟವಾಗಿ, ಹೊಸ ಜೀವನದ ಹುದುವನ್ನು ಪಡೆದು, ಕನ್ನಡಕ್ಕೆ ಉತ್ತಮ ಕವನಗಳನ್ನು ಕೊಡುವುದೆಂದು ನಂಬಿದ್ದೇನೆ...."

—'ಕುಂಜನಿಹಾರಿ'

೨೦೩. ಮರುಭೂಮಿಯ ಅರಬರು

(ದೇಶ-ಜನಗಳ ಪರಿಚಯ ಗ್ರಂಥ)

ಬರೆದವರು : ಶ್ರೀ ಎಂ. ಹರಿದಾಸರಾಯರು.

ಪ್ರಕಾಶಕರು

ಸಿಟಿ ಬುಕ್‌ಸ್ಟಾಲ್, ಹುಬ್ಬಳ್ಳಿ.

ಇಂದು ಪ್ರತಿಯೊಬ್ಬ ನಾಗರಿಕನಿಗೂ ಲೋಕದ ಜನತೆ-ಜನಾಂಗಗಳ ಪರಿಚಯವಿರಬೇಕಾದುದು ಅತ್ಯಗತ್ಯ. ಇಂದಿನ ವಿಜ್ಞಾನಯುಗದಲ್ಲಿ ಯಾರಿಗೂ ಸೇದು ಬಾವಿಯ ಕಪ್ಪೆಯಾಗಿ ಉಳಿಯಲಿಕ್ಕೆ ಸಾಧ್ಯವಿಲ್ಲ. ಜಾತಿ, ಕುಲ, ದೇಶ, ರಾಷ್ಟ್ರಗಳ ಸಂಕುಚಿತ ಎಲ್ಲೆಗಳನ್ನೂ ಮೀರಿ 'ಮಾನವಕುಲವೆಲ್ಲ ಒಂದು' ಎಂಬ ಭಾವನೆ ಜಾಗೃತವಾಗುವುದು, ಲೋಕ ಕಲ್ಯಾಣದ ದೃಷ್ಟಿಯಿಂದ ಅತ್ಯವಶ್ಯವಾಗಿದೆ. ಅದಕ್ಕಾಗಿಯೆ ನಾವಿಂದ ಪ್ರಪಂಚದ ಮೂಲೆಮೂಲೆಗಳಲ್ಲಿಯೂ ಇರುವ ವಿವಿಧ ಜಾತಿ ಜನಾಂಗಗಳ ಜನ

ಹೆಣಿಕೆ ಇವು ಚೆನ್ನಾಗಿ ಸೂಚಿಸುವವು. ಅವರೂ ಅಲ್ಲಲ್ಲಿ ಬಳಸಿದ 'ಪೆಣ್ಣೈ' 'ನಾಮಸ್ತೈ' 'ಉಸೆನೆಳಗು' ಇತ್ಯಾದಿ ಪದಗಳೂ ತಾಯಿಯ ಅಗಲಿಕೆಯ ಕಾಲದಲ್ಲಿ ಬಳಸಿದ 'ವಿರಹಾಗ್ನಿ' ಎಂಬ ಪದವೂ ಉಚಿತವೆನಿಸಿದವು.

'ಸುಖವಿಲ್ಲ' ಎಂಬ ಹೆಂಡತಿಯ ಮಾತಿನಲ್ಲಿ ಸಹಜತೆಯಿದೆ. ಯಾವುದೂ ಕೊನೆಯ ನಾಲ್ಕುಸಾಲುಗಳಲ್ಲಿಯೂ ನೈಷ್ಕರ್ಮ್ಯ ಅಶ್ಲೀಲತೆಯನ್ನು ಸವಿಸಾಸಿಸುತ್ತಿದೆ. 'ಸುಖವುಂಟು' ಎಂದು ಹೇಳುವ ಗಂಡನ ಉತ್ತರದ ಭಾವನಾತ್ಮಕ ಮಾತುಗಳು, ಅಂತಹ ಹೆಂಡತಿಯನ್ನು ಸಂತಯಿಸಲು ಜೇಗೆ ಶಕ್ತವಾಗುವುದೋ ಕಾಣೆವು.

ಮುನ್ನುಡಿಕಾರರಾದ ಶ್ರೀ. ಬೇಂದ್ರೆಯವರು ಇವರ ಕವಿತಾ ಗುಣವನ್ನು ಕುರಿತು ಹೇಳಿದ ಈ ಮಾತುಗಳನ್ನು ನಾವೂ ಒಪ್ಪಿಕೊಳ್ಳುತ್ತೇನೆ :

"....ಶ್ರೀ. ಅಮ್ಮೆಂಬಳ ಅವರ ಶೈಲಿಯಲ್ಲಿ ಬಿಡಗು ಕಡಿಮೆಯಿದ್ದರೂ ಬೇರೊಂದು ನಿರ್ಮಲತೆಯಿದೆ. ಈ ಸೌಲಿಕ ಗುಣದ

ಸ್ಥಿತಿ-ಗತಿಗಳನ್ನೂ, ಆಶೆ-ಅಪೇಕ್ಷೆಗಳನ್ನೂ, ಕಷ್ಟ-ನಷ್ಟಗಳನ್ನೂ ಗೊತ್ತುಮಾಡಿಕೊಳಬೇಕಾದುದು ಅನಿವಾರ್ಯ. ಈ ಅಗತ್ಯವನ್ನು ಕಂಡು ಶ್ರೀ. ಹರಿದಾಸರಾಯರು, ನಮ್ಮ ನೆರೆಯವರೇ ಆದ ಅರಬ ಜನರ ಬದುಕಿನ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಡಲು ಮುಂದೆ ಬಂದುದು, ಅವರ ಕರ್ತವ್ಯಬುದ್ಧಿಗೆ ಸಾಕ್ಷಿಯಾಗಿದೆ.

ಪೂರ್ವದೇಶಗಳ ನಾಗರಿಕತೆಗಳಲ್ಲಿ ಅರಬ ನಾಗರಿಕತೆಯ ಅತ್ಯಂತ ಪುರಾತನವಾದುದು; ಅತಿ ಉಜ್ವಲವಾದುದು. ಆದರೆ ಪೂರ್ವದೇಶದ ಭಾರತ-ಚೀನಾಗಳಿಗಿಂತ ಹೆಚ್ಚಿನ ಬಂಧನವನ್ನೇ ಸಿಕ್ಕಿಸಿಕೊಂಡು, ಇಂದಿನ ಅರಬಜನತೆ ತಳಮಳಿಸುತ್ತಲಿದೆ ಎಲ್ಲೆಲ್ಲಿಯೂ ಸಾಮ್ರಾಜ್ಯವಾದಿಗಳಾದ ಬ್ರಿಟಿಷ್, ಅಮೇರಿಕನ್ ಫ್ರೆಂಚ್, ಸ್ಪಾನಿಶ್ ಜನರ ಕೈಚಳಕ, ಅಲ್ಲಲ್ಲಿಯ ಸ್ವಾರ್ಥಿಗಳಾದ ಸಿರಿವಂತ ಜಮೀನುದಾರರ ಸಹಾಯ ಪಡೆದುಕೊಂಡು, ಜನಸಾಮಾನ್ಯರ ರಕ್ತ-ಶಕ್ತಿಗಳನ್ನೂ ಧನ-ಧಾನ್ಯಗಳನ್ನೂ ಶೋಷಿಸುತ್ತಲಿದೆ. ಬಹುಜನರನ್ನಾವರಿಸಿದ್ದ ಅಜ್ಞಾನದ ನಿದ್ದೆ ಇದೀಗ ಹರಿದು

ಸ್ವಸ್ವರೂಪಜ್ಞಾನ ಉಂಟಾಗುತ್ತಲಿದೆ. ಇಂದು ಇಜಿಪ್ತ್, ಇರಾಕ, ಸಿರಿಯಾ, ಪಾಲಿಸ್ತೈನ್, ಲಿಬಿಯಾ, ಮೊರೊಕ್ಕೊ ಮೊದಲಾದ ಅರಬ ದೇಶಗಳಲ್ಲಿ ಸ್ವಾತಂತ್ರ್ಯ ಚಟುವಟಿಕೆಗಳು ರಭಸದಿಂದ ನಡೆದಿರುವುದು ಈ ಎಚ್ಚರಿಕೆಯ ಪರಿಣಾಮವಾಗಿದೆ. ಶ್ರೀ. ಹರಿದಾಸರಾಯರು ಈ ಎಲ್ಲ ಅರಬ ದೇಶಗಳ ಹಿಂದಿನ ಇಂದಿನ ಚರಿತ್ರೆಯನ್ನೆಲ್ಲ ಸಂಗ್ರಹಿಸಿ, ಈ ಪುಸ್ತಕದಲ್ಲಿ ಕೊಟ್ಟು ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ.

—ಬಿ. ಪಿ. ಎಸ್. ರಾವ್.

೧೯೨. ಋಗ್ವೇದ ಸೂಕ್ತಗಳು

(೩೦ ಸೂಕ್ತಭಾಗಗಳ ಸಾರ್ಥಸಂಗ್ರಹ)

ಸಂಗ್ರಹಕಾರರು : ಶ್ರಿ. ಜಿ. ಹನುಮಂತರಾವ್, ಮೈಸೂರು. ವಿಶ್ವಸಾಹಿತ್ಯಮಾಲೆಯ ಮೂರನೆಯ ಗ್ರಂಥ.

ಭಾರತದಲ್ಲಿಯ ವೇದಗಳೆಂದರೆ ನಮ್ಮ ಪುರಾತನರ ತಿಳಿವಳಿಕೆಯ ಪ್ರಗತಿಯ ಚರಿತ್ರೆಯೆಂಬುದು ಅದರ ಅಭ್ಯಾಸದಿಂದ ಸ್ಪಷ್ಟವಾಗಿ ಗೊತ್ತಾಗುವುದು. ಇದುವರೆಗೆ ನಮ್ಮ ಸಾಂಪ್ರದಾಯಿಕ ಭಾವನಾತ್ಮಕ ಕಾರಣಗಳಿಂದ—ವೇದಗಳು ನಮ್ಮ ಪವಿತ್ರಗ್ರಂಥಗಳೆಂಬ ತಿಳಿವಳಿಕೆಯಿದ್ದರೂ—ಬಹುಜನರಿಗೆ ಅವು ಕೆವಿಗೆ ಕೂಡ ಬೀಳುತ್ತಿರಲಿಲ್ಲ. ಕೆವಿಗೆ ಬಿದ್ದ ಕೆಲವರಲ್ಲಿ ಬಹುಜನರಿಗೆ ಅವು ಒಡೆಯುವ ಒಗಟಗಳಾಗಿದ್ದುವು. ತಿಳಿದಿದೆಯೆಂಬ ಭಾವನೆಯಿದ್ದ ತೀರ ಸ್ವಲ್ಪ ಜನರಿಗೂ, ಅವು ಬರಿ ಧಾರ್ಮಿಕವಿಚಾರದಿಂದ ಕೂಡಿದ ಮಂತ್ರ-ಪೂತತತ್ತ್ವಗಳ ಸಂಗ್ರಹಗಳಾಗಿದ್ದುವು. ವೇದಗಳು 'ಅಪೌರುಷೇಯ' ಎಂದಿದ್ದ ನಮ್ಮಲ್ಲಿಯ ಭಾವನೆಯು, ಅವುಗಳನ್ನು ಲೌಕಿಕ ವೃಷ್ಟಿಯಿಂದ ವಿಚಾರ-ವಿಮರ್ಶೆಗಳನ್ನು ಮಾಡಲು ಒಪ್ಪಿಗೆಯನ್ನೆ ಕೊಡುತ್ತಿರಲಿಲ್ಲ. ಅದರಲ್ಲಿ ಬರೆದ ಒಂದೊಂದು ಮಾತೂ ನಮ್ಮ ಜೀವನದಲ್ಲಿ ಸತ್ಯಪ್ರಮಾಣವಾಗಿರಬೇಕೆಂದು ನಮ್ಮ ಧಾರ್ಮಿಕ ನಿಯಮವಿದ್ದಿತು.

ಇಂದಿನ ಪೂರ್ವ-ಪಶ್ಚಿಮ ಸಂಸ್ಕೃತಿಗಳ ಸಮ್ಮಿಶ್ರಣದಿಂದ ಪುಟಗೊಂಡ ನಮ್ಮ ಆಧುನಿಕ ವಿದ್ವಾಂಸರ ಬುದ್ಧಿ, ಧಾರ್ಮಿಕ ಭಾವನೆಯ ಕುರುಡುತನವನ್ನು ಕಳೆದುಕೊಂಡಿದೆ. 'ಅಪೌರುಷೇಯ' ಎಂಬ ಮಾತಿಗೆ ಹೊಸ ಅರ್ಥ ಹಚ್ಚಿ, ಲೌಕಿಕ, ಆಧ್ಯಾತ್ಮಿಕ ಎರಡೂ ವೃಷ್ಟಿಗಳಿಂದಲೂ ವಿಚಾರ ಮಾಡಲಿಕ್ಕೆ ಹಚ್ಚಿದೆ. ಇಂತಹ ಕಾಲದಲ್ಲಿ ವೇದಸೂಕ್ತಗಳ ಅರ್ಥ, ಕನ್ನಡಿಗರಿಗೆಲ್ಲ ಗೊತ್ತಾಗಬೇಕಾಮದು ಅನಿವಾರ್ಯ. ಭಾರತದ ಮುಂದುವರಿದ ವ್ಯಾಂತೀಯ ಭಾಷೆಗಳಲ್ಲೆಲ್ಲ ವೇದಸೂಕ್ತಗಳು ಭಾಷಾಂತರಿತವಾಗಿವೆ. ಇಂದಿನ ಮೈಸೂರಿನ ದೊರೆಗಳ ಸಾಂಸ್ಕೃತಿಕ ಪ್ರೇಮಕ್ಕೆ ಸಾಕ್ಷಿಯಾಗಿ, ಕನ್ನಡವಲ್ಲಿಯೂ ಸದ್ಯ ಋಗ್ವೇದವೊಂದು ಮಹಾಗ್ರಂಥವಾಗಿ ಪ್ರಕಟವಾಗುತ್ತಲಿದೆ. ಇಂತಹ ವೇಳೆಯಲ್ಲಿ ವೇದಾಭ್ಯಾಸೇಚ್ಛುಗಳಿಗೆ ಪ್ರವೇಶದ್ವಾರದಂತೆ, ಶ್ರಿ. ಜಿ. ಹನುಮಂತರಾಯರು ಈ ಚಿಕ್ಕ ಪುಸ್ತಕವನ್ನು ಕನ್ನಡಿಗರಿಗೆ ಒದಗಿಸಿಕೊಟ್ಟು ಉಪಕಾರ ಮಾಡಿದ್ದಾರೆ.

ಮೂವತ್ತು ನಾಲ್ಕು ಪುಟಗಳ ಚಿಕ್ಕ ಪೀಠಿಕೆಯಲ್ಲಿ, ಗ್ರಂಥಕಾರರು ವೇದಗಳ ಮುಖಪರಿಚಯವನ್ನು ಸುಲಭಭಾಷೆಯಲ್ಲಿ ಮಾಡಿಕೊಟ್ಟಿದ್ದಾರೆ. ವೇದಸೂಕ್ತಗಳ ಬಹುಭಾಗವು ದೇವರ ವಿಷಯಕ ಮಾತು, ಮಹಿಮೆ, ಸ್ತೋತ್ರಗಳಿಂದ ಕೂಡಿದೆಯಾದರೂ, ಅವುಗಳಲ್ಲಿ ಆ ಆ ಕಾಲದ ಸಮಾಜದ ಚಿತ್ರಗಳೂ ಮೂಡಿಕೊಳ್ಳದೆ ಇಲ್ಲ. ಪೀಠಿಕೆಯಲ್ಲಿ ಈ ಲೌಕಿಕವಿಚಾರಗಳನ್ನೂ ತಿಳುಹಲಾಗಿದೆ.

ಮುಂದೆ ಬೇರೆ ಬೇರೆ ೩೦ ಸೂಕ್ತಭಾಗಗಳನ್ನು ಕೊಡಲಾಗಿದ್ದು, ಒಂದೊಂದು ಋಜೆಯ ಕೆಳಗೆ ಸುಲಭವಾದ ಕನ್ನಡದಲ್ಲಿ ಅರ್ಥ ಬರೆದಿದ್ದಾರೆ. ವೈದಿಕ ದೇವತೆಗಳು, ಯಜ್ಞವಿಧಿ, ಸೋಮಪಾನ, ಏಕದೇವಭಾವನೆ, ಸಮಾಜದೈವ ಭಾವನೆ, ಪಿತೃಗಳು, ಪುರಾಣದ ಕಲ್ಪನೆ, ರಾಜ, ಮುದುವೆ ಮೊದಲಾದ ಮುಖ್ಯ ಮುಖ್ಯ ವಿಷಯಗಳ ಪರಿಚಯವನ್ನು ಇಲ್ಲಿಯ ಸೂಕ್ತಗಳು ಮಾಡಿಕೊಡುವುವು. ಭಾರತೀಯರೆನಿಸಿಕೊಳ್ಳಬೇಕಾಗಿದ್ದವರಿಗೆ ಇಂದು ಭಾರತದ ಸಂಸ್ಕೃತಿಯ ಋನಿಯಾದ ವೇದಗಳ ಪರಿಚಯ ಅತ್ಯಗತ್ಯವಾಗಿದೆ. ಶ್ರೀ. ಜಿ. ಹನುಮಂತರಾಯರೂ ನಮ್ಮಲ್ಲಿಯ ಬೇರೆ ಅನೇಕ ವೇದಾಭ್ಯಾಸಿಗಳೂ ಇಂತಹ ಸುಲಭ ಪುಸ್ತಕಗಳನ್ನು ಜನತೆಗೆ ಹೆಚ್ಚುಹೆಚ್ಚಾಗಿ ಒದಗಿಸಿಕೊಡಬೇಕು.

—ಬಿ. ಪಿ. ಎಸ್. ರಾವ್.

೧೯೯. ಕಾಮಶಿಕ್ಷಣ

ಬರೆದವರು : ಡಾ. ದೊಡ್ಡೇರಿ ವೆಂಕಟಗಿರಿರಾವ್. ಪ್ರಕಾಶಕರು, ಸಾಧನ ಪ್ರಕಟನಾಲಯ, ಸಾಗರ. ಪುಟಗಳು ೬೬. ಬೆಲೆ ೧ರೂ.

ಭಾರತದಲ್ಲಿ ನಾಗರಿಕತೆಯು ಬೆಳೆಯುತ್ತ ದೋದಹಾಗೆ, ಕಾಮಜೀವನದ ಸಮಸ್ಯೆಗಳೂ ತೊದಕಾಗುತ್ತ ದೊರಟಿವೆ. ಆ ತೊಡಕುಗಳನ್ನು ಸಕಾಲದಲ್ಲಿ ಬಿಡಿಸದಿದ್ದರೆ ಮುಂದೆ ಅವು ವಿಕೃತಕಾಮಕ್ಕೆ ದಾರಿಯಾಗುತ್ತವೆ. ಆದ್ದರಿಂದ ಹುಡುಗ-ಹುಡುಗಿಯರಲ್ಲಿ ಕಾಮೋದಯವಾಗುವ ಪೂರ್ವದಲ್ಲಿಯೆ, ಅವರಿಗೆ ತಕ್ಕ ಕಾಮಶಿಕ್ಷಣವನ್ನು ತಕ್ಕವರಿಂದ ಕೊಡಿಸುವ ಆವಶ್ಯಕತೆಯನ್ನು ಈ ಪುಸ್ತಕವು ಸಯುಕ್ತಿಕವಾಗಿ ವಿವೇಚಿಸುತ್ತದೆ. ಮಕ್ಕಳ ಕಾಮುಜೀವನದ ಸುಖಶಾಂತಿಗಳನ್ನು ಬಯಸುವ ತಂದೆ-ತಾಯಿಗಳು ಇದನ್ನು ಅವಶ್ಯವಾಗಿ ಓದಬೇಕು. ಪುಸ್ತಕದ ಕೊನೆಯ ಭಾಗದ ಕೆಲವು ಲೇಖನಗಳು ಕಾಮಶಿಕ್ಷಣಕ್ಕೆ ಸಂಬಂಧಿಸಿಲ್ಲ.

—ಎಮ್. ಜಿ. ರಾವ್.

ರಾಜಕೀಯ ಲೋಕದ ಅವಲೋಕನ

'ರಾಯರ ಅಪ್ಪಾಜಿ'ಯಿಂದ

★

ಸ್ವಾತಂತ್ರ್ಯದ ಆಸ್ವಾದ

ಅಪಾರ ಭೂಸಂಪತ್ತಿದ್ದರೂ ಫಲವತ್ತಾದ ಭೂಮಿಯಿದ್ದರೂ ಹಿಂದುಸ್ತಾನದ ಎಲ್ಲ ಪ್ರಾಂತಗಳಿಗಿಂತ ಹಿಂದುಳಿದ ಓಡಿಸಾ ಪ್ರಾಂತದಲ್ಲಿ, ಹಿರಾಕುಡದ ಹತ್ತಿರ ಒಂದು ದೊಡ್ಡ ಅಣೆಕಟ್ಟಿನ ಶಂಕುಸ್ಥಾಪನೆಯು, ಮುಖ್ಯಮಂತ್ರಿ ಪಂ. ಜವಾಹರರ ಹಸ್ತದಿಂದ ನೆರವೇರಿತು. ೩ ಮೈಲು ಉದ್ದ ೧೫೦ ಫೂಟು ಎತ್ತರವಾಗಲಿರುವ ಈ ದೊಡ್ಡ ಅಣೆಕಟ್ಟಿಗೆ ೪೭ ಕೋಟಿ ೮೦ ಲಕ್ಷರೂ. ವೆಚ್ಚ ತಗಲುವುದೆಂದು ಅಂದಾಜಿದೆ. ಆದರೆ ಲಾಭದ ದೃಷ್ಟಿಯಿಂದ ನೋಡಿದರೆ ಈ ವೆಚ್ಚವೇನೂ ಹೆಚ್ಚಲ್ಲ. ಈ ಅಣೆಕಟ್ಟಿನ ಸಹಾಯದಿಂದ ೧೧ ಲಕ್ಷ ಎಕರೆ ಭೂಮಿಯು ನೀರುಣ್ಣುವುದು. ಅಲ್ಲದೆ ಇದರ ಸಹಾಯದಿಂದ ತಯಾರಾಗುವ ೪೫೦ ಸಾವಿರ ಕಿ. ವ್ಯಾ. ವಿದ್ಯುಚ್ಛಕ್ತಿಯಿಂದ ಅಲ್ಯುಮಿನಿಯಂ, ಕಾಗದ, ಸಿಮೆಂಟ್ ಹಾಗೂ ಇತರೆ ದೊಡ್ಡ ಕಾರ್ಖಾನೆಗಳು ನಡೆದು, ಹತ್ತಿಪ್ಪತ್ತು ಲಕ್ಷ ಜನರಿಗೆ ಕೆಲಸವು ದೊರೆಯುವುದು. ಮೇಲಿಂದ ಮೇಲೆ ಓಡಿಸಾ ಪ್ರಾಂತವನ್ನು ಪಾಳು ಮಾಡುತ್ತಿದ್ದ ಪ್ರವಾಹಪೂರಗಳು ಇದರಿಂದ ಹಿಡಿತವಲ್ಲಿ ಬರುವುವು. ಅಲ್ಲದೆ ಸಮುದ್ರದಿಂದ ಹಿರಾಕುಡದ ವರೆಗೆ ಜಲಮಾರ್ಗವಾಗಿ ಹಡಗುಗಳು ಓಡಾಡುವಂತಾಗುವುದು. ತೀರ ಅಗ್ಗದರದಿಂದ ಸಾಗಾಟದ ವ್ಯವಸ್ಥೆಯಾಗುವುದು. ಓಡಿಸಾದ ಮುಖ್ಯಮಂತ್ರಿಗಳು ಹೇಳುವಂತೆ, ಈ ಅಣೆಕಟ್ಟಿನಿಂದ ಮಹಾನದಿಯು, ಸೊಕ್ಕೇರಿದ ವಶುವಾಗಿ ಜನರನ್ನು ತುಳಿದಾಡುವುದನ್ನು ನಿಲ್ಲಿಸಿ, ಕಾಮಧೇನುವಾಗಿ ಜನರಿಗೆ ಇಚ್ಛಿತ ಫಲವನ್ನು ಕೊಡುವುದು.

ಮೆಲ್ಲಮೆಲ್ಲನೆ ಏಳಾಗಲೊಲ್ಲದು; ಹಿಂದುಸ್ತಾನವು ಸ್ವಾತಂತ್ರ್ಯದ ಆಸ್ವಾದವನ್ನು ಪ್ರಾರಂಭಿಸಿದೆಯೆನ್ನುವುದಕ್ಕೆ ಈ ಯೋಜನೆಯೆ ಸಾಕ್ಷಿ. ಕೇಂದ್ರ ನಿರಾವರಿ ಮತ್ತು ಸಾರಿಗೆ ಸಮಿತಿಯ ಅಧ್ಯಕ್ಷರಾದ ಶ್ರೀ.ಎ.ಎನ್. ಮೋಸಲಾ ಅವರು ಹಾರಯಿಸಿದಂತೆ, ಹಿರಾಕುಡದ ಅಣೆಕಟ್ಟಿನ ಅಡಿಗಲ್ಲು ಇಂತಹ ಅನೇಕ ಯೋಜನೆಗಳ ಅಡಿಗಲ್ಲಾಗಲಿ.

ಕರ್ತವ್ಯವರಿಯದ ಜನಸಾಮಾನ್ಯರು

ಸದ್ಯ ಸ್ವಾತಂತ್ರ್ಯದ ಆಸ್ವಾದನೆಗಿಂತ, ಸ್ವಾತಂತ್ರ್ಯ ರಕ್ಷಣೆಗಾಗಿ ಹೆಚ್ಚು ಶ್ರಮಿಸಬೇಕಾಗಿದೆ; ಹೆಚ್ಚು ಲಕ್ಷ್ಯ ಹಾಕಬೇಕಾಗಿದೆ. ಈ ತಿಂಗಳಲ್ಲಂತೂ ಪರಚಕ್ರಗಳ ಭಯವು ಮತ್ತಿಷ್ಟು ಹೆಚ್ಚಾಗಿದೆ. ಆಂತರಿಕ ಅಶಾಂತತೆಯೂ ಬಲಿಯತೊಡಗಿದೆ. ಹಿಂದುಸ್ತಾನ ಸರಕಾರವು ತೀರ ವಿಚಿತ್ರ ಪರಿಸ್ಥಿತಿಯಲ್ಲಿದೆ. ಇತ್ತ ಸ್ವಾತಂತ್ರ್ಯ ರಕ್ಷಣೆಯ ಕಡೆಗೆ ಲಕ್ಷ್ಯಹಾಕಿದರೆ, ಅಭಿವೃದ್ಧಿಯ ಕಾರ್ಯಗಳು ಹಾಗೆಯೆ ಉಳಿಯತೊಡಗುವುವು. ಅದನ್ನು ಕಂಡು ಜನಸಾಮಾನ್ಯರು, 'ನೋಡಿರಿ ನಮ್ಮ ಸರಕಾರ! ಅದರ ಆಡಳಿತ!' ಎಂದು ಕೋಲಾಹಲವನ್ನು ಪ್ರಾರಂಭಿಸುವರು. ಅಗ್ಗದ ದರದ ಅಂಗಡಿಗಳಲ್ಲಿ ಗೋವಿನ ಜೋಳವನ್ನು ಕೊಡತೊಡಗಿದರೂ, 'ನೋಡಿರಿ ಹಿಂದಿನ ಸರಕಾರವು ಸೀದಾ ಅಂಗಡಿಗಳಲ್ಲಿ ಅಕ್ಕಿ, ಗೋದಿ, ಜೋಳ ಪೂರಯಿಸಿತು; ಈ ಸರಕಾರವು "ಒಂಟಿಯ ಹಲ್ಲಿನಂಥ" (ಈ ವಿಶೇಷಣವನ್ನು ಒಂದು ಕನ್ನಡ ಪತ್ರಿಕೆಯಿಂದ ಆಯ್ದಿದ್ದೇನೆ) ಗೋವಿನ ಜೋಳವನ್ನು ಕೊಡತೊಡಗಿದೆ'—ಎಂದು ಕೂಗಾಡುವರು. ಇತ್ತ ಹೀಗೆ; ಅತ್ತ ಪರಚಕ್ರಗಳು ತಾಂಡವ ನಡೆಯಿಸಿವೆ. ಸರಕಾರವು ಏನು ಮಾಡಬೇಕು?

ಸರಕಾರದ ಕರ್ತವ್ಯ

ಪರಿಸ್ಥಿತಿ ಕಠಿನವಿದೆಯೆಂಬುದೇನೊ ನಿಜ, ಆದರೆ ಅದನ್ನು ನೀಗುವ ಸಾಮರ್ಥ್ಯವೂ ಜನರಲ್ಲಿದೆ. ಆದುದರಿಂದ ಒಂದೇ ಒಂದು ತಾರಕ ಉಪಾಯವೆಂದರೆ, ಸರಕಾರವು ಜನತೆಯ ವಿಶ್ವಾಸವನ್ನು ಗಳಿಸಿಕೊಳ್ಳಬೇಕು. ಇದು ಶಕ್ಯವಾಗಬೇಕಾದರೆ ತಾತ್ತ್ವಿಕ ಆಡಂಬರವನ್ನು ಬಿಟ್ಟುಕೊಟ್ಟು, ವಸ್ತುಸ್ಥಿತಿಯನ್ನು ವ್ಯಾವಹಾರಿಕ ಕೌಶಲ್ಯದಿಂದ ಎದುರಿಸಬೇಕು. ದುರ್ದೈವದಿಂದ, ಸರಕಾರವು ನಮ್ಮದೆಂದು ಜನತೆಯಲ್ಲಿ ಆತ್ಮೀಯತೆಯುಂಟಾಗಿಲ್ಲವೆಂದು ಹೇಳಬೇಕಾಗುತ್ತಿದೆ.

ದೃಢಧೋರಣವು ಒಂದೇ ಒಂದು ಹಾದಿ. ಹಿಂದುಸ್ತಾನವು ಜಾತ್ಯತೀತ ರಾಷ್ಟ್ರವೆಂದು ತಿಳಿದು ಹೈದ್ರಾಬಾದಿನ ಹಿಂದುಗಳ ರಕ್ಷಣೆಯ ಹೊಣೆಯು ಅದರದಲ್ಲವೆಂದು ವಾದಿಸಬಹುದು. ಈ ವಾದವು ಸದೋಷವಿದೆ. ಹೈದ್ರಾಬಾದಿನ ಜನರಿಗೂ ಹಿಂದುಸ್ತಾನದಲ್ಲಿಯ ಜನರಿಗೂ ಹರಿಯಲಾರದ ರಕ್ತಸಂಬಂಧವಿದೆ, ಹೈದ್ರಾಬಾದಿನ ಶಾಂತತೆಯ ಮೇಲೆ ಇಡೀ ದಕ್ಷಿಣ ಹಿಂದುಸ್ತಾನದ ಶಾಂತತೆಯು ಅವಲಂಬಿಸಿದೆ, ಹೈದ್ರಾಬಾದಿನ ನಿರಾಶ್ರಿತರು ಗುಳೆ ಎತ್ತಿಕೊಂಡು ಹಿಂದುಸ್ತಾನ ಪ್ರದೇಶದಲ್ಲಿ ಬರತೊಡಗಿದರೆ, ಇಲ್ಲಿಯ ಆರ್ಥಿಕ ಪರಿಸ್ಥಿತಿಯೂ, ರಾಜಕೀಯ ಪರಿಸ್ಥಿತಿಯೂ ಹದಗೆಡುವು-

ದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಆದರೂ ವಾದಕ್ಕೆಂದು—ಹೈದ್ರಾಬಾದಿನ ಹಿಂದುಗಳಿಗೂ ಹಿಂದುಸ್ತಾನ್ ಸರಕಾರಕ್ಕೂ ಸಂಬಂಧವಿಲ್ಲೆಂದು ಒಪ್ಪಿದರೂ, ಹಿಂದುಸ್ತಾನದ ಗಡಿಯ ಮೇಲೆ ರಜಕಾರರು, ನಿಜಾಮ ಸೈನಿಕರು, ಅರಬರು ನಡೆಯಿಸಿದ ದಾಳಿ, ಲೂಟಿ, ಕೊಲೆ, ಸುಲಿಗೆ, ಸ್ತ್ರೀಯರ ಮಾನಭಂಗ ಇವು ಯಾವ ತತ್ತ್ವದ ಕುಣಿಸಾಟದಿಂದ ಕ್ಷಮ್ಯವಾಗಬಹುದು? ಇತ್ತೀಹಾದವು ಮುಸಲ್ಮಾನ್ ರಾಷ್ಟ್ರವನ್ನು—ದಕ್ಷಿಣ ಪಾಕಿಸ್ತಾನವನ್ನು—ನಿರ್ಮಿಸುವ ಎಂದರೆ ಸಾರ್ವಭೌಮತ್ವವನ್ನು ಕಾಯುವುದಾಗಿ, ಮೇಲಿಂದ ಮೇಲೆ ಸಾರುತ್ತಿದೆ; ಮತ್ತು ತನ್ನ ಈ ನಿರ್ಧಾರಕ್ಕನುರೂಪವಾಗಿ ಕಾರ್ಯ ನಡೆಯಿಸಿರುತ್ತದೆ. ಬರುಬರುತ್ತ ಅವರ ಮಹತ್ತ್ವಾಕಾಂಕ್ಷೆಯು ವಿಶಾಲವಾಗತೊಡಗಿದೆ. ನಿಜಾಮರ ಪೂರ್ವಜರ ಅಂಕಿತದಲ್ಲಿದ್ದ ಪ್ರದೇಶಗಳನ್ನು ಗೆಲ್ಲುವುದು, ಬಂಗಾಲ ಉಪಸಾಗರವು ನಿಜಾಮರ ಪಾದಪೂಜೆಯನ್ನು ಮಾಡುವಂತೆ ಮಾಡುವುದು—ನೊಪಲಾದುವುಗಳು ಅವರ ಕಣ್ಣುಗಳ ಮುಂದೆ ಕಾಣತೊಡಗಿವೆ. ನಿಜವಾಗಿ ನೋಡಿದರೆ ಹಿಂದುಸ್ತಾನ್ ಸರಕಾರವು ಗಡಿಪ್ರದೇಶಗಳ ಮೇಲಾದ ದಾಳಿಯ ವಿಷಯವನ್ನೆತ್ತಿ ಯುದ್ಧದ ಅಂಜಿಕೆಯನ್ನು ಹಾಕಬೇಕಾಗಿತ್ತು. ಅದರ ಬದಲು ಅದು ಕೇವಲ ಪತ್ರವ್ಯವಹಾರ ನಡೆಯಿಸಿದೆ. ಪತ್ರವ್ಯವಹಾರ ಮತ್ತು ಸಂಧಾನದ ಮಾತು-ಕತೆಗಳಲ್ಲಿ ಆಗುತ್ತಿದ್ದ ಕಾಲಹರಣದ ಪುರ್ಲಾಭ ಪಡೆದು, ಹೈದ್ರಾಬಾದಿನ ಜಾತೀಯ ಸಂಘವೂ ನಿಜಾಮರೂ ಸೈನ್ಯಸಿದ್ಧತೆ ನಡೆಯಿದ್ದಾರೆ. ಹೈದ್ರಾಬಾದಿನಲ್ಲಿ ಒಂದು ಮದ್ದು-ಗುಂಡಿನ ಕಾರ್ಖಾನೆಯಿದೆಯೆಂದೂ ಅರಬಸ್ತಾನದಿಂದ ಅರಬರನ್ನು ತರಿಸಲಾಗುತ್ತಿದೆಯೆಂದೂ ಪತ್ರಿಕೆಗಳಲ್ಲಿ ವರದಿಯಾಗಿದೆ.

ಹೈದ್ರಾಬಾದಿನ ವಿಷಯದಲ್ಲಿ ಹಿಂದುಸ್ತಾನವು ತಣ್ಣಗೆ ಕೈಮುಚ್ಚಿಕೊಂಡು ಕೂಡ್ರುವುದಕ್ಕೆ ಕಾರಣವಿಲ್ಲದೆ ಇಲ್ಲ. ಹಿಂದುಸ್ತಾನದಲ್ಲಿ ಮುಸಲ್ಮಾನರಿಗೆ ಯೋಗ್ಯ ಸಂರಕ್ಷಣೆ ದೊರೆಯುವುದೆಂದು ಮನದಟ್ಟಾದರೆ ಮಾತ್ರ ಕಾಶ್ಮೀರ ಮುಸಲ್ಮಾನರು ಹಿಂದುಸ್ತಾನದಲ್ಲಿ ಸೇರ್ಪಡೆಗೆ ಒಪ್ಪಿಗೆಕೊಡಬಹುದೆಂದು ಶೇಖ ಅಬ್ದುಲ್ಲಾರವರು ಒತ್ತಿ ಒತ್ತಿ ಹೇಳಿದ್ದಾರೆ. ಒಂದು ವೇಳೆ ಹೈದ್ರಾಬಾದಿನ ಮೇಲೆ ಏರಿಹೋದರೆ, ಕಾಶ್ಮೀರವು ಕೈಬಿಟ್ಟೀತೆಂದು ಬೆದರಿ, ಹಿಂದುಸ್ತಾನವು ನಿಜಾಮರ ಗೋಜಿಗೆ ಹೋಗಲೊಲ್ಲದೇನೊ! ಇಲ್ಲಿ ದೃಢಘೋರಣದ ಅಭಾವವು ಕಂಡುಬರುವುದು. ಕಾಶ್ಮೀರವನ್ನು ಪ್ರಜೆಗಳ ಅಭಿಪ್ರಾಯದ ವಿರುದ್ಧ ಸೇರ್ಪಡೆಮಾಡಿಕೊಳ್ಳುವ ಇಚ್ಛೆಯಿಲ್ಲವೆಂದು ಹಿಂದುಸ್ತಾನವು ಮೊದಲೇ ಸಾರಿದೆ; ಮತ್ತು ಭದ್ರತಾಮಂಡಳದಲ್ಲಿಯೂ ಈ ಮಾತನ್ನು ಎತ್ತಿ ಹೇಳಿದೆ. ಹಾಗಾದರೆ ಪ್ರಜೆಗಳ ಮನವೊಲಿಸಲು ತಿಪ್ಪರಲಾಗವೇಕೆ? ತನ್ನ ಪ್ರದೇಶವನ್ನು ರಕ್ಷಿಸುವುದು ಪ್ರತಿಯೊಂದು ರಾಷ್ಟ್ರದ ಪ್ರಾಥಮಿಕ ಕರ್ತವ್ಯವು. ಹೀಗಾದರೂ ಹಿಂದುಸ್ತಾನದ ಪ್ರದೇಶದಲ್ಲಿಯೆ ಹೊಕ್ಕು ರಜಕಾರರು ಕೊಲೆ-ಸುಲಿಗೆಗಳನ್ನು ನಡೆಯಿಸಿದರೆ, ರಾಷ್ಟ್ರದ ಗೌರವಕ್ಕೆ ಕುಂದುಬರುವುದಲ್ಲದೆ ಪ್ರಜೆಗಳ ವಿಶ್ವಾಸವೂ ಹಾರಿಹೋಗುವುದು.

ಕಾಶ್ಮೀರ ಕೈಗೆ ಹತ್ತುವುದೆ?

ಇಷ್ಟೆಲ್ಲ ಆದರೂ ಕೂಡ ಕಾಶ್ಮೀರವು ಕೈಗೆ ಹತ್ತುವುದೋ ಇಲ್ಲವೋ ಎಂಬುದು ಸಂಶಯದ ಮಾತೇ ಆಗಿದೆ. ಜಾತ್ಯಂಧತೆಯ ವಿಷವು ಹಿಂದುಸ್ತಾನದ ಜನರಲ್ಲಿ ಎಷ್ಟರಮಟ್ಟಿಗೆ ಬೇರೂರಿದೆಯೆಂಬುದು, ನಡೆದಿರುವ ಅನೇಕ ದುರ್ಘಟನೆಗಳಿಂದ ಸ್ಪಷ್ಟವಾಗಿದೆ. 'ನೀವು ಹಿಂದುಸ್ತಾನಕ್ಕೆ ಸೇರಬಯಸುವಿರೊ ಅಥವಾ ಪಾಕಿಸ್ತಾನಕ್ಕೊ?' ಎಂದು ಕೇಳಿ, ಗಡಿಪ್ರಾಂತದಲ್ಲಿ ಏರ್ಪಡಿಸಿದಂತೆ ಹಸಿರು-ಕೆಂಪು ಪೆಟ್ಟಿಗೆಗಳ ಸಾರ್ವತ್ರಿಕ ಮತಗಣನೆ ನಡೆದರೆ, ಕಾಶ್ಮೀರಿಗಳ ಕೌಲು ಜಾತೀಯ ವಿಚಾರಗಳನ್ನು ಮೀರೀತೆಂದು ಎನಿಸುವುದಿಲ್ಲ. ಹಿಂದುಸ್ತಾನದಲ್ಲಿ ಮುಸಲ್ಮಾನರಿಗೆ ಹಿತ ಸಂರಕ್ಷಣೆ ಸಿಕ್ಕರೆ, ಕಾಶ್ಮೀರಿಗಳು ನಿಜವಾಗಿಯೂ ಹಿಂದುಸ್ತಾನದತ್ತ ಒಲೆಯುವರೆಂದು ಶೇಖ ಅಬ್ದುಲ್ಲಾರು ಪ್ರಚಾರ ನಡೆಯಿಸಿದ್ದಾರೆ. ಎಂದರೆ: ನಾಳೆ ಒಂದು ವೇಳೆ, ಕಾಶ್ಮೀರಿಗಳು ವಿರುದ್ಧ ಮತ ಕೊಟ್ಟರೂ, ಅದರ ದೋಷವನ್ನು ಹಿಂದುಸ್ತಾನದ ತಲೆಯ ಮೇಲೆ ಹೇರಬಹುದು— 'ಗೋಧ್ರಾದಲ್ಲಿ ದುರ್ಘಟನೆಗಳು ನಡೆದುವು, ಮುಸಲ್ಮಾನರ ವಿತ್ತ-ಜೀವಿತಗಳಿಗೆ ಹಾನಿಶಟ್ಟಿತು, ಹೈದ್ರಾಬಾದ ನಿಜಾಮರಿಗೆ ಬೆದರಿಕೆ ಹಾಕಿದಿರಿ!' ಇತ್ಯಾದಿ ಆರೋಪಗಳನ್ನು ಅವರು ಮುಂದೆಮಾಡಬಹುದು. ಕಾಶ್ಮೀರದಲ್ಲಿ ಅಡ್ಡಾಡಿ ಬಂದ ಮಿತ್ರರೊಬ್ಬರು ಅಲ್ಲಿಯ ಮುಸಲ್ಮಾನರ ಒಲವು ಹಿಂದುಸ್ತಾನದ ಕಡೆಗೆ ಅಗಬೇಕಾದರೆ, ಇನ್ನೂ ಕನಿಷ್ಠ. ಐದು ವರ್ಷಗಳ ಪ್ರಚಾರ ಬೇಕೆಂದು ಹೇಳಿದರು.

ಭದ್ರತಾ ಮಂಡಲದ ಅಭದ್ರತೆ

ಭದ್ರತಾ ಮಂಡಳವಾದರೂ ಕಾಶ್ಮೀರಪ್ರಶ್ನೆಯೊಡನೆ ಚೆಲ್ಲಾಟ ನಡೆಯಿಸಿದೆ. ಭದ್ರತಾಮಂಡಳವೆಂದರೇನು? ದೊಡ್ಡ ದೊಡ್ಡ ರಾಷ್ಟ್ರಗಳ ಕುಸ್ತಿಯ ಕಣ. ಜಗತ್ತಿನಲ್ಲಿ ಕಮ್ಯುನಿಸ್ಟುಂತತ್ತ್ವವನ್ನು ಪುರಸ್ಕರಿಸುವ ರಶಿಯಾ ಹಾಗೂ ಬಂಡವಳವಾದಿತ್ವಕ್ಕೆ ಜೀವದಾನಕೊಡುವ ಪ್ರಜಾಪ್ರಭುತ್ವವಾದಿತ್ವವನ್ನು ಪ್ರತಿಪಾದಿಸುವ ಇಂಗ್ಲಂಡ್-ಅಮೇರಿಕಾ-ಫ್ರಾನ್ಸ್ ಇತ್ಯಾದಿ ರಾಷ್ಟ್ರಗಳ ನಡುವೆ ತಿಕ್ಕಾಟ ನಡೆದಿದ್ದು, ಕಾಶ್ಮೀರಪ್ರಶ್ನೆಯ ಮೇಲೆ ಇದರ ಪರಿಣಾಮವಾಗದೆ ಉಳಿದಿಲ್ಲ. ಹಾಗೆ ಪರಿಣಾಮವಾಗದಿರುವುದು ಅಶಕ್ಯ. ಪಾಕಿಸ್ತಾನ ಹಾಗೂ ಮಧ್ಯಪೂರ್ವರಾಷ್ಟ್ರಗಳು ಬಂಡವಳವಾದಿತ್ವವನ್ನು ಉಳಿಸಿಕೊಳ್ಳಲು ಮತ್ತು ಕಮ್ಯುನಿಸ್ಟುಂ ಎದುರಿಸಲು ಶಕ್ಯವಿದ್ದುದನ್ನೆಲ್ಲ ಮಾಡುವುವೆಂದು ಇಂಗ್ಲಂಡ್-ಅಮೇರಿಕೆಗಳ ಮನವರಿಕೆಯಾಗಿದೆ. ಮಧ್ಯಪೂರ್ವ ರಾಷ್ಟ್ರಗಳಲ್ಲಿಯ ಅರಸೋತ್ತಿಗೆಗಳ ಮೇಲೆ ರಶಿಯವು ತನ್ನ ಮೂರನೆಯ; ಕಣ್ಣನ್ನು ಎಂದು ತೆರೆದೀನೊ ಎಂದು ಹವಣಿಸುತ್ತಿದೆ. ಕಮ್ಯುನಿಸ್ಟುಂನ ಪ್ರಭಾವವು ಹೆಚ್ಚಿಚ್ಚು ಅದಂತೆ, ಪ್ರಜಾಪ್ರಭುತ್ವದ ಮಿತ್ರರಾಷ್ಟ್ರಗಳು ಹಿಂದುಸ್ತಾನದ ಕೈಬಿಟ್ಟು ಪಾಕಿಸ್ತಾನದ ಕಡೆಗೆ ಒಲಿಯು

೫೪ ವರ್ಷಗಳಿಂದ ಅನುಭವಸಟ್ಟ

ಕರ್ಕ ಮತ್ತು ಕಂಪನಿಯ

ಜ್ವರದ ಗುಳಿಗೆ.

ಬಾಟ್ಲಿಗೆ ೧-೮-೦

ಎಲ್ಲ ಬಗೆಯ ಜ್ವರಗಳ ಮೇಲೆ ದಿವ್ಯೌಷಧ.

ವಿಳಾಸ:—

ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ

ಗಿರಗಾಂವ, ಮುಂಬಯಿ.

ತ್ತಿವೆ. ಈ ಸುತ್ತು ೬ ರಾಷ್ಟ್ರಗಳು, ಭದ್ರತಾ ಮಂಡಳದ ಮುಂದಿರಿಸಿದ ಜೊಸ ಗೊತ್ತುವಳಿಯ ನೋಲಿಂದ ಸುಸ್ಪಷ್ಟವಾಗುವುದು. ಕಾಶ್ಮೀರದಲ್ಲಿ ಅತ್ಯಂತ ಆಧುನಿಕ ರಸ್ತ್ರಾಸ್ತ್ರಗಳಿಂದ ಯುಕ್ತರಾಗಿ ಬಂದು ಕೊಲೆ-ಸುಲಿಗೆ-ಲೂಟಿ-ಮಾನಭಂಗಗಳನ್ನು ನಡೆಯಿಸಿದ ದಾಳಿಗಾರರಿಗೆ. ಪಾಕಿಸ್ತಾನವು ಪ್ರತ್ಯಕ್ಷ ಸಹಾಯಸಲ್ಲಿಸಿ, ಆಂತರ ರಾಷ್ಟ್ರೀಯ ಕಾನೂನನ್ನು ಭಂಗಿಸಿದೆಯೆಂದು ಹಿಂದುಸ್ತಾನವ ನೂರಿದೆ. ಅದನ್ನು ನಿಲ್ಲಿಸಬೇಕೆಂದು ಹಿಂದುಸ್ತಾನವು ಕೇಳಿ ಕೊಂಡಿದೆ. ಆದರೂ ಈ ಜೊಸ ಗೊತ್ತುವಳಿಯಲ್ಲಿ ಆಂತರ ರಾಷ್ಟ್ರೀಯ ಕಾನೂನಿನ ಭಂಗದ ಬಗ್ಗೆ ಚಕಾರ ಶಬ್ದವೂ ಇಲ್ಲ. ಮೂಲ ಮಾತನ್ನು ಮೂಲೆಗೊತ್ತಿ, ಭದ್ರತಾ ಮಂಡಳವು ತನ್ನ ಎಲ್ಲ ಲಕ್ಷ್ಯವನ್ನು ಸಾರ್ವತ್ರಿಕ ಮತಗಣನೆಯ ಮೇಲೆ ಹಾಕಿದೆ. ಕಾಶ್ಮೀರದಲ್ಲಿಯ ನಮ್ಮವ ಜೊಣೆಗಾರ ಸರಕಾರದಲ್ಲಿ ಪಾಕಿಸ್ತಾನದ ಹಸ್ತಕರಿಗೆ ಆಸ್ಪದವಿರಬೇಕು, ಸಾರ್ವತ್ರಿಕ ಮತಗಣನೆ ನಡೆಯುವಾಗ ಹಿಂದುಸ್ತಾನವು ಕಾಶ್ಮೀರದಲ್ಲಿ ಕೇವಲ ಶಾಂತಿ-ಸುವ್ಯವಸ್ಥೆ ಕಾಯಲು ಸಾಕಷ್ಟು (ಎಂದರೆ ಆಕ್ರಮಣ ಎದುರಿಸಲು ಬೇಕಾಗುವಷ್ಟು ಸೈನ್ಯ ಬೇಡವೆಂದು) ಸೈನ್ಯವನ್ನಿಡಬೇಕೆಂದು ಕೇಳಲಾಗಿದೆ. ಎಂದರೆ ಈ ಪಾಕಿಸ್ತಾನಕ್ಕೆ ಕಾಶ್ಮೀರದಲ್ಲಿ ಪ್ರವೇಶ ಸಿಕ್ಕರೆ ಸಾಕು ಮೊದಲೆ ಹದಗೆಟ್ಟ ಕಾಶ್ಮೀರ ಪರಿಸ್ಥಿತಿಯು ಮತ್ತಿಷ್ಟು ಹದಗೆಡುವುದಲ್ಲದೆ, ಸಾರ್ವತ್ರಿಕ ಮತಗಣನೆಯ ಮೊದಲೇ ಕಾಶ್ಮೀರದ ರಾಜ್ಯ-ಸೂತ್ರಗಳು ಪಾಕಿಸ್ತಾನಿಗಳ ಕೈಯಲ್ಲಿ ಬೀಳುವ ಸಂಭವವೂ ಉಂಟಾಗುವುದು. ಮತ್ತು ಕಾಶ್ಮೀರ ಸಂರಕ್ಷಣೆಯ ಬಗೆಗೆ ಇಲ್ಲಿಯವರೆಗೆ ಆದ ವೆಚ್ಚವು ಹೊಳೆಯಲ್ಲಿ ಹೋಮಮಾಡಿದಂತಾಗುವುದು. ರಷಿಯದ ಸ್ನೇಹವನ್ನು ಸಂಪಾದಿಸಲಿಲ್ಲ; ಇಂಗ್ಲಂಡ್ ಅಮೇರಿಕಾಗಳ ಸ್ನೇಹವನ್ನು ಕಾಯ್ದುಕೊಳ್ಳಲಿಲ್ಲ—ಹೀಗಾಗಿ ಹಿಂದುಸ್ತಾನಕ್ಕೆ ಆಂತರರಾಷ್ಟ್ರೀಯ ಕ್ಷೇತ್ರದಲ್ಲಿ ಈ ಪರಿಸ್ಥಿತಿ ಉಂಟಾಗಿದೆ.

ಕಮ್ಯುನಿಝಂನ ಪ್ರಭಾವ

ಕಮ್ಯುನಿಝಂ ತತ್ತ್ವಪ್ರಣಾಲಿಯು ರಷಿಯಾಪ್ರಣೀತವಿರುವುದರಿಂದ, ಮತ್ತು ರಷಿಯವು ಬಲಾಢ್ಯ ರಾಷ್ಟ್ರವಿರುವುದರಿಂದ, ಕಮ್ಯುನಿಝಂಕ್ಕೆ ತಲೆಬಾಗಿಸಿದ ರಾಷ್ಟ್ರಗಳು ರಷಿಯಕ್ಕೂ ತಲೆಬಾಗಿಸಿದಂತಾಗುವುದು; ಮತ್ತು ಅದು ಕುಣಿಸಿದಂತೆ ಕುಣಿಯಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದರೆ, ದೊರೆತ ಸ್ವಾತಂತ್ರ್ಯವನ್ನು ಇಟ್ಟುಕೊಳ್ಳಬೇಕಾದರೆ, ಕಮ್ಯುನಿಝಂಕ್ಕೆ ತಡೆಹಾಕಬೇಕೆಂದು ಸ್ಪಷ್ಟವಾಗುವುದು. ಆದರೆ ಹಿಂದುಸ್ತಾನದಲ್ಲಿ ಮತ್ತು ಇತರತ್ರ ಕಮ್ಯುನಿಝಂನ ಪ್ರಭಾವವು ಹೆಚ್ಚಾಗುತ್ತಿರುವುದನ್ನು ಕಡೆಗಣಿಸಲು ಶಕ್ಯವಿಲ್ಲ. ಕಮ್ಯುನಿಝಂನ ದಾಳಿಯೆಂದರೆ ಪರಚಕ್ರಗಳ ದಾಳಿಯಲ್ಲ. ಅದೇ ದೇಶದವರೇ ದೇಶದ ಸರಕಾರದ ವಿರುದ್ಧ ಎದ್ದು ಕೊಲೆ, ರಕ್ತಪಾತ ಮುಂತಾದ—ಬೇಕಾದ ಅಲ್ಲದ ಸಲ್ಲದ—ಮಾರ್ಗಗಳಿಂದ ಸರಕಾರವನ್ನು ಉರುಳಿಸಿ ಹಾಕುವುದು. ಹೀಗೆ ಮಾಡಬೇಕಾದರೆ, ಅಯಾ ದೇಶದವರು ಅವರ ಪ್ರಭಾವಕ್ಕೊಳಗಾಗಬೇಕಾದರೆ, ಕಾರಣವಿಲ್ಲದೆ ಇಲ್ಲ. ಕೂಲಿಕಾರ-ರೈತರ ರಾಜ್ಯವೆಂದೊಡನೆ, ನಿರ್ದಯ ಮತ್ತು ಕೇವಲ ಲಾಭಬಡಕ ಮೂಲಕರ ಕೈಕೆಳಗೆ ತೊಳಲಾಡುವ ಕೂಲಿಕಾರರಿಗೂ ಹೊಲವಲ್ಲಿ ಬೆಳೆದುದನ್ನೆಲ್ಲ ಮೂಲಕನ ಮನೆಗೆ ತುಂಬಿ ತಾವು ಹೊಟ್ಟೆಗೆ ಕೇರು ಹುಡುಕುತ್ತ ಅಡ್ಡಾಡುವ ರೈತರಿಗೂ, ತಮ್ಮ ಹಿತಚಿಂತಕರಾರಾದರೂ ಇರುವರೆಂದು ಆನಂದವಾಗುತ್ತದೆ. ಅವರು ಕಮ್ಯುನಿಸ್ಟರು ಹೇಳಿದಂತೆ ಕೇಳತೊಡಗುವರು. ಆದುದರಿಂದ ಕಮ್ಯುನಿಝಂಕ್ಕೆ ತಡೆಹಾಕಬೇಕೆಂದಿದ್ದರೆ ಸರಕಾರವು ಬಡಕೂಲಿಕಾರರ ರೈತರ ಮತ್ತು ಮಧ್ಯಮವರ್ಗದವರ ಯೋಗಕ್ಷೇಮವ ಕಡೆಗೆ ವಿಶೇಷ ಲಕ್ಷ್ಯ ಹಾಕಲೆ ಬೇಕು. ಕೂಲಿಕಾರರ ಒಂದು ಅಸ್ತ್ರವೆಂದರೆ ಸಂಪು. ಹಿಂದುಸ್ತಾನ್ ಸರಕಾರವು ಔದ್ಯೋಗಿಕ ಶಾಂತಿಯ ಒಡಂಬಡಿಕೆ ಮಾಡಿಕೊಂಡು, ಈ ಅಸ್ತ್ರವನ್ನು ಹೊರತೆಗೆಯಬಾರದೆಂದು ಕೂಲಿಕಾರರಿಗೆ ಹೇಳಿದೆ. ಆದರೆ ಈ ಅಸ್ತ್ರವಿಲ್ಲದೆ ಕೂಲಿಕಾರರ ಹಿತದ ಕಡೆಗೆ ಲಕ್ಷ್ಯಹಾಕಲಾಗುತ್ತಿದೆಯೆ? ಗದುಗಿನ ಒಂದು ಗಿರಣಿಯ ಕಾರಕೂನರು ತಿಂಗಳಿಗೆ ೨೨ ರೂ. ಮೇಲೆ ದುಡಿಯುತ್ತಿರುವರೆಂಬುದು, ಅವರು ಸಂಪು ಹೂಡಿದ ಮೇಲೆಯೆ ಸರಕಾರಕ್ಕೆ ಗೊತ್ತಾಯಿತಲ್ಲವೆ? ಹೀಗಾಗಬಾರದು. ಸರಕಾರದ ಆಸ್ಥೆಯು ಒಮ್ಮೆಲೆ ಕಂಡುಬರುವಂತಹ ಕೆಲವು ಯೋಜನೆಗಳಾಗಬೇಕು. ಉದಾಹರಣಾರ್ಥವಾಗಿ ಕೈಮೇಲೆ ಹೊಟ್ಟೆಯನ್ನು ಸಾಗಿಸುವವರಿಗೆ ವೃದ್ಧಾವಸ್ಥೆಯಲ್ಲಿ ಅಥವಾ ಅಸ್ವಾಸ್ಥ್ಯದ ಇಲ್ಲವೆ ಅಪಘಾತಕ್ಕೀಡಾದ ಕಾಲದಲ್ಲಿ, ಸಹಾಯಕೊಡುವ ಯೋಜನೆಯಾಗಬೇಕು. ಹಾಗೆ ನೋಡಿದರೆ ಪ್ರತಿಯೊಬ್ಬ ವೃದ್ಧನಿಗೂ ಅಲ್ಪಸ್ವಲ್ಪ ಪೆನ್‌ಶನ್ ಯಾಕೆ ದೊರೆಯಬಾರದು? ಹಣವಿಲ್ಲವೆಂದು ಸರಕಾರವು ಹೇಳಬಹುದು. ಆದರೆ ಹಣವು ನಿಶಿಷ್ಟರ ಕೈಯಲ್ಲಿ ಸಂಚಿತವಾಗಿದೆಯೆಂಬುದನ್ನು ಅದು ಮರೆಯಲಾಗದು. ಕಮ್ಯುನಿಝಂಕ್ಕೆ ತಡೆಹಾಕಬೇಕಾದರೆ ಸಮತಾವಾದವೇ ಮುಂದೆ ಬರಬೇಕು. ಇತ್ತ

ಬಂಡವಲವಾದಿತ್ವಕ್ಕೂ ಜೀವದಾನ, ಅತ್ತ ಕಮ್ಯುನಿಝಂ ತಡೆಯಲು ಯತ್ನಿಸುವುದು--ಹೀಗೆ ಒಂದೇ ಕಲ್ಲಿನಿಂದ ಎರಡೂ ಕಾಯಿಗಳನ್ನು ಒಗೆಯಹೋದರೆ, ಒಂದೂ ಕಾಯಿ ಕೈಗೆ ಹತ್ತುವುದಿಲ್ಲ.

ಕಮ್ಯೂನಿಸ್ಟರ ಕೈಚಳಕ

ಆಂತರರಾಷ್ಟ್ರೀಯ ಕ್ಷೇತ್ರದಲ್ಲಿ ಕಮ್ಯುನಿಝಂನ ಕೈ ಮೇಲಾಗಿದ್ದರೂ ಅದರ ಪ್ರಭಾವ ಬೆಳೆಯುತ್ತಿದೆಯೆಂಬುದು ಸ್ಪಷ್ಟವಿದೆ. ಚೀನದಲ್ಲಿ ಕಮ್ಯುನಿಝಂದ ಪ್ರಭಾವವು ಮೊದಲನೆಯ ವರ್ಗದ ಯಾದವಿಗೆ ಕಾರಣವಾಗಿದೆ. ಕಮ್ಯುನಿಝಂಕ್ಕೆ ತಡೆಹಾಕಲು ಸೇರಿದ ನಿಖಿಲ ಅಮೇರಿಕಾದ ಪರಿಷತ್ತು, ಕೋಲಂಬಿಯಾದಲ್ಲಿ ಕಮ್ಯುನಿಸ್ಟರು ಎಬ್ಬಿಸಿದ ಕ್ರಾಂತಿಯಿಂದ ಅಯಶಸ್ವಿಯಾಯಿತು. ಝೆಕೊಸ್ಲೊವಾಕಿಯಾದಂತೆ ಫಿನ್‌ಲಂಡಪಾದರೂ ಕಮ್ಯುನಿಸ್ಟರ ಉಡಿಯಲ್ಲಿ ಬಂದಿತು. ಇರಾಣವೂ ಬರಬಹುದು. ಹಿಂದುಸ್ತಾನದಲ್ಲಿ ನಾಗರಿಕ ಸ್ವಾತಂತ್ರ್ಯವನ್ನು ಲೆಕ್ಕಿಸದೆ ಕಮ್ಯುನಿಸ್ಟರ ಮೇಲೆ ಉಗ್ರಕ್ರಮ ತೆಗೆದುಕೊಳ್ಳಬೇಕಾಗುವಷ್ಟು ಕಮ್ಯುನಿಝಂದ ಪ್ರಭಾವ ಹೆಚ್ಚಾಯಿತು. ಇಂಗ್ಲಂಡಿನಲ್ಲಿ ಕೂಡ ಕಮ್ಯುನಿಸ್ಟ್ ಸರಕಾರೀ ನೌಕರರನ್ನು ಕೆಲಸದಿಂದ ಹೊರಗೆ ಹಾಕಬೇಕಾಯಿತು. ಫಾಲಿಸ್ತಾನದಲ್ಲಿಯೂ ಅದು ಕಾಲಿಟ್ಟಿದೆ. ಯಹೂದಿಯರಿಗೆ ರಹಿಯಾದ ಸಹಾಯ ಹೊರೆಯುತ್ತಿದೆಯೆಂದು ಅರಬ್ಬೀ ವರಿಷ್ಠಶಾಣ್ಯದಿಂದ ಸಾರಲಾಗಿದೆ.

ಸಾಂದರ್ಭಿಕ ಟಪ್ಪಣಿಗಳು

ಹಿಂದುಸ್ತಾನದ ವಿಭಜನೆಯ ಕಾಲದಲ್ಲಿ ಕಾಂಗ್ರೆಸ್‌ಮುಖಂಡರು, ಹಿಂದುಸ್ತಾನ-ಪಾಕಿಸ್ತಾನಗಳು ಒಂದಿಲ್ಲೊಂದು ದಿನ ಒಂದಾಗಿಯೇ ಆಗುವುವು, ಅವುಗಳಲ್ಲಿ ಅನಿವಾರ್ಯವಾದ ಸಾಂಸ್ಕೃತಿಕ ಐತಿಹಾಸಿಕ ಭೌಗೋಲಿಕ ಸಂಬಂಧವಿದೆಯೆಂದು ಸಮಾಧಾನ ಪೇಳಿದ್ದರು. ಆದರೆ ಕಲಕತ್ತೆಯಲ್ಲಿ ಕೂಡಿದ ಹಿಂದುಸ್ತಾನ ಪಾಕಿಸ್ತಾನ ಪರಿಷತ್ತಿನಲ್ಲಿ, ಎರಡೂ ದೇಶಗಳ ಏಕೀಕರಣ ಆಂದೋಲನಕ್ಕೆ ತಡೆಹಾಕಬೇಕೆಂದು ತೀರ್ಮಾನಿಸಲಾಗಿದೆ. ಅಂತೂ ನಿಭಜನೆಯು 'ಕಾಯಂ' ಆದಂತಾಯಿತು.

* * *

ಹಿಂದುಸ್ತಾನವು ಜಾತ್ಯತೀತ ರಾಷ್ಟ್ರವಾಗಬೇಕಾದರೆ ಹಿಂದು, ಮುಸಲ್ಮಾನ್, ಪಾರ್ಸಿ, ಕ್ರಿಶ್ಚನ್ ಎಲ್ಲರಿಗೂ ಒಂದೇ ಒಂದು ಸಾಮಾನ್ಯಕಾಯಿದೆ ಅನ್ವಯಿಸಬೇಕು ಎಂಬುದು ಸುಸ್ಪಷ್ಟವಿದ್ದರೂ, ಹಿಂದುಸ್ತಾನಸರಕಾರದವರು ಕೇವಲಹಿಂದುಗಳಿಗೆ ಅನ್ವಯಿಸುವಂತೆ ಹಿಂದು ಕಾಯದೆಯನ್ನು ಕ್ರೋಡೀಕರಿಸಿ ಸಿದ್ಧಪಡಿಸಿದ್ದಾರೆ. ಇದರಲ್ಲಿ, ಹಿಂದುಗಳು ಏಕಪತ್ನಿತ್ವಕ್ಕೆಅಂಟಿಕೊಳ್ಳಬೇಕೆಂದೂ, ಬೇಕಾದವರು ಬೇಕಾದವರನ್ನು (ಎಂದರೆ ಬೇರೆ ಜಾತಿಯವರನ್ನು ಕೂಡ) ದತ್ತಕ ತೆಗೆದುಕೊಳ್ಳಬಹುದೆಂದೂ ಹೆಂಗುಸರಿಗೆ ಆಸ್ತಿಯಲ್ಲಿ ಪಾಲು ದೊರೆಯಬೇಕೆಂದೂ, ಕೆಲವು ಕ್ರಾಂತಿಕಾರಕ ಆದರೆ ವ್ಯಾವಹಾರಿಕ ದೃಷ್ಟಿಯಿಂದ ನಿರುಪಯುಕ್ತವಾದ ಕೆಲವು ಕಲಮುಗಳಿವೆ. ಸದ್ಯಕ್ಕೆ ಇದು ತಜ್ಞಸಮಿತಿಗೆ ಒಪ್ಪಿಸಲ್ಪಟ್ಟಿದೆ. ಜಾತೀಯತೆಗೂ ಧರ್ಮಕ್ಕೂ ಭೇದವಿದೆ. ಜಾತೀಯ ರಾಷ್ಟ್ರನಿರ್ಮಾಣ ಮಾಡಹೊರಟವರು ಬೇಕಾದ ಧರ್ಮದಲ್ಲಿ ಬೇಕಾದ ಹಾಗೆ ಕೈಹಾಕಲು 'ಲೈಸನ್ಸನ್ನು' ಪಡೆಯಲಾರರು. ದತ್ತಕವನ್ನು ಪಿತೃಋಣ ಮುಟ್ಟಿಸಲು ಆಧ್ಯಾತ್ಮಿಕ ಶಾಂತಿಹೊಂದಲು ತೆಗೆದುಕೊಳ್ಳುತ್ತಾರೆಂಬುದನ್ನು ಕಾಯಿದೆ ಪಂಡಿತರು ಮರೆತಿದ್ದಾರೆ. ಅದರಂತೆ ಏಕಪತ್ನಿತ್ವಕ್ಕೆ ಮಾತ್ರ ಆಸ್ಪದ ಕೊಟ್ಟರೆ, ವಿವಾಹವಿಚ್ಛೇದ ಕಾಯಿದೆಯನ್ನೂ ಮಾಡಬೇಕಾಗುವುದು. ಇಂಗ್ಲಂಡ್-ಅಮೇರಿಕೆಗಳು ಏತಕ್ಕೆ ಜೀಸತ್ತಿವೆಯೊ ಅವನ್ನೇ ನಾವು ಈಗ ಪ್ರಾರಂಭಿಸಿದಂತಾಗಿದೆ.

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜಿಯ ವೈದ್ಯ

ವಿ. ಎಸ್. ಕಾಹಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ಮರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟೆನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ--- ಇವೆಲ್ಲ ನಷ್ಟವಾಗಿ, ಜೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿ-ವಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧ ಮಾಡುವವರಿಗೆ ೧೦೦೦ ರೂಪಾಯಿ-ಬಹುಮಾನ.

೫೧ ದಿನಗಳಿಗೆ ಸಾಲಬಹುದಾದ ಲಳ ತೊಲೆಯ ಒಂದು ಡಬ್ಬಿಗೆ ೫-೪-೦; ಅಂಚೆಯ ವೆಚ್ಚ ೧-೧-೦. ಶೀಘ್ರಗುಣಕಾರಿಯಾದ ಸ್ಪೆಶಲ್ ಡಬ್ಬಿಗೆ ೧೦-೦-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ೩ ಡಬ್ಬಿಗೆ ೧೪-೪-೦ ಅಂಚೆಯ ವೆಚ್ಚ ೨-೫೩-೦. ಒಮ್ಮೆಲೇ ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಮಾಲಕ : **ವಿ. ಎಸ್. ಕಾಹಸೇ** ಮು. ಪೊ. ಮಿರಜ

ಸಾದರ ಸ್ವೀಕಾರ

★

೧೨೧. **ಸುಲಭಚಿಕಿತ್ಸೆ ಅಥವಾ ಚಿಕಿತ್ಸಾ ವಿಜ್ಞಾನದ ಮೂಲಸೂತ್ರ** (ವೈದ್ಯಕಗ್ರಂಥ). ದಿವಂಗತ ಪಂಡಿತ ತಾರಾಥಜೀಯವರ ವೈದ್ಯಕೀಯ ಲೇಖನಗಳ ಸಂಕಲನ. ಸಂಪಾದಕರು ಮತ್ತು ಪ್ರಕಾಶಕರು: ಡಾ. ಅಮೃತರಾವ್, ಪ್ರೇಮಸಾಹಿತ್ಯ ಗ್ರಂಥಮಾಲೆ, ತುಂಗಭದ್ರಾ (ಎಂ. ಎಸ್. ಎಂ. ರೇ.) ಕ್ರೌ. ೧೦೬ ಪುಟ; ಬೆಲೆ ೨—೦—೦.

ಶ್ರೀ. ದ. ಕೃ. ಭಾರದ್ವಾಜರು ಪಂ. ತಾರಾನಾಥರಾಯರ ಪರಿಚಯವನ್ನು ೧೪ ಪುಟದ ತಮ್ಮ ಮುನ್ನುಡಿಯಲ್ಲಿ ಚೆನ್ನಾಗಿ ಮಾಡಿಕೊಟ್ಟಿದ್ದಾರೆ.

ಭಾರತೀಯರ ಬಡತನದ ಜೀವನದಲ್ಲಿ, ಇಂದಿನ ಪಾಶ್ಚಾತ್ಯ ಪದ್ಧತಿಯ ಚಿಕಿತ್ಸಾಕ್ರಮವೆಂದರೆ ಯೋಗ್ಯತೆಯನ್ನು ಮೀರಿದುದಾಗಿದೆ. ಸಾಮಾನ್ಯರೋಗಗಳಿಗೂ ಈ ಪದ್ಧತಿಯಿಂದ ಮಾಡುವ ಚಿಕಿತ್ಸೆ ತುಂಬ ವೆಚ್ಚದ ಹೊರೆಯದಾಗಿದೆ. ಅಲ್ಲದೆ ಎಲ್ಲ ಕಡೆಯಲ್ಲಿಯೂ ಈ ಬಗೆಯ ಚಿಕಿತ್ಸೆಯ ಅನುಕೂಲತೆಯಿರುವುದಿಲ್ಲ. ರೋಗ ಬಂದಾಗ ಕಂಗೆಟ್ಟು ತಿರುಗಬೇಕಾಗಿರುವ ನಮ್ಮಲ್ಲಿಯ ಹಳ್ಳಿಗರು, ಈ ಪುಸ್ತಕದಲ್ಲಿಯ ಚಿಕಿತ್ಸಾಕ್ರಮಗಳನ್ನು ಅರಿತುಕೊಂಡು ಪ್ರಯೋಗಿಸುತ್ತಲಿದ್ದರೆ, ಎಷ್ಟೋ ಪ್ರಯೋಜನ, ಸಿಕ್ಕೀತು.

೨೧೩. **ಧರ್ಮಸಂಭವ ಅಥವಾ ಧರ್ಮದ ಮೂಲ ತತ್ತ್ವಗಳು** (ವಿಚಾರಪ್ರಚೋದಕ ಗ್ರಂಥ—೨ನೆಯ ಆವೃತ್ತಿ). ಬರೆದವರು ದಿವಂಗತ ಪಂಡಿತ ತಾರಾನಾಥರು. ಸಂಪಾದಕರು ಮತ್ತು ಪ್ರಕಾಶಕರು ಮೇಲೆ ಹೇಳಿದ ಡಾ. ಅಮೃತರಾಯರು. ಕ್ರೌ. ಅ. ೧೨೦ ಪುಟಗಳು. ಬೆಲೆ ೨—೦—೦.

ಈ ಪುಸ್ತಕದ ಮೊದಲನೆಯ ಆವೃತ್ತಿ ಬಹಳ ದಿನಗಳ ಹಿಂದೆ, ಶ್ರೀಮಾನ್ ಆಲೂರ ವೆಂಕಟರಾಯರ 'ಜನಜೀವನ' ಗ್ರಂಥಮಾಲೆಯಲ್ಲಿ ಪ್ರಕಟವಾಗಿದ್ದು, ಹಲವು ಜನ ಕನ್ನಡಿಗರಿಗೆ ಇದರಲ್ಲಿಯ ವಿಚಾರ-ವಿವೇಚನೆಗಳ ಹೊಸತನದ ಪರಿಚಯ ಚೆನ್ನಾಗಿ ಆಗಿದೆ. ಇಂದಿನ ಸ್ವತಂತ್ರಭಾರತದಲ್ಲಿ ಧರ್ಮ-ಜಾತಿಗಳನ್ನು ಮೂಲದಿಂದ ನೋಡುತ್ತ ಬರುವುದು, ಸಮಾಜದ ಸಂಘಟನೆಯ ದೃಷ್ಟಿಯಿಂದ ಅತ್ಯಾವಶ್ಯಕವಾಗಿದೆ. ಎಲ್ಲರೂ ಲಕ್ಷ್ಯಪೂರ್ವಕವಾಗಿ ಈ ಪುಸ್ತಕ ಓದಿಕೊಳ್ಳಬೇಕು.

೨೧೪. **ಕನ್ನಡ ನುಡಿ:—** (ವಿಶೇಷ ಸಂಚಿಕೆ ೧೯೪೭). ಸಂಪಾದಕರು ಆಸ್ಥಾನವಿದ್ವಾನ್ ಶ್ರೀ. ವೋ. ಶಂ. ಸುಬ್ರಹ್ಮಣ್ಯ ಶಾಸ್ತ್ರಿಗಳು. ಪ್ರಕಾಶಕರು: ಕನ್ನಡ ಸಾಹಿತ್ಯಪರಿಷತ್ತು—ಬೆಂಗಳೂರು ನಗರ. ಫೂ. ಕ್ಯಾ. ಫೋಲಿಯೊ ೬೪ ಪುಟಗಳು. ಬೆಲೆ ೧—೦—೦.

ವಿವಿಧ ವಿಷಯಗಳನ್ನು ಕುರಿತು ಬರೆದ ಲೇಖನಗಳೂ ಕವನಗಳೂ, ಶ್ರೀ. ಎಲ್. ಎಸ್. ಶೇಷಗಿರಿರಾಯರ ಒಂದು ಸಣ್ಣ ಕತೆಯೂ ಇದರಲ್ಲಿ ಬಂದಿವೆ. ಸಂಗ್ರಹ ಯೋಗ್ಯವಾದ ಸಂಚಿಕೆ.

೨೧೫. **ವಿಜ್ಞಾನದ ವಿಚಿತ್ರಗಳು:—** (ಸಚಿತ್ರ ವಿಜ್ಞಾನ-ಪರಿಚಯಾತ್ಮಕ ಗ್ರಂಥ). ಬರೆದವರು ಶ್ರೀ. ಕೆ. ವಿಠ್ಠಲ ಶೆಣೈ ಬಿ. ಎ., ಎಲ್. ಟಿ. ಉಡುಪಿ. ಪ್ರಕಾಶಕರು: ಕೆ. ಆರ್. ಶೆಣೈ, ಕೋರ್ಟ್‌ರೋಡ್, ಉಡುಪಿ. ಕ್ರೌ. ಅ. ೧೪೮ ಪುಟಗಳು. ಬೆಲೆ ೨—೪—೦.

೨೧೬. **ನಾಡನುಡಿ:—** (ಉಪನ್ಯಾಸ ಸಂಕಲನ) ಬಾಗಿಲು ಕೋಟೆಯಲ್ಲಿ, ಕಳೆದ ಸಲದ ನಾಡಹಬ್ಬದಲ್ಲಿ ಜರುಗಿದ—ಜರುಗಬೇಕಾಗಿದ್ದ— ಬೇರೆಬೇರೆ ಉಪನ್ಯಾಸಗಳನ್ನು, ನಾಡಹಬ್ಬ ಉತ್ಸವ ಸಮಿತಿ— ಸಕ್ರಿಹೈಸ್ಕೂಲ್ ಬಾಗಲಕೋಟೆ ಅವರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಕ್ರೌ. ಅ. ೬೮ ಪುಟಗಳು. ಬೆಲೆ ೧—೦—೦.

೨೧೭. **ನವಿಲು:—** (ಕವನಸಂಗ್ರಹ). ಬರೆದವರು: 'ಕುವೆಂಪು' ಅವರು. ಮೈಸೂರಿನ ಕಾವ್ಯಾಲಯದ ಕನ್ನಡ ಕಾವ್ಯಮಾಲೆ ೫೯. ಕ್ರೌ. ಅ. ೪೪ ಪುಟಗಳು. ಬೆಲೆ ೧—೪—೦.

೨೧೮. **ಕಲಾಸುಂದರಿ:—** (ಕವನಸಂಗ್ರಹ). ಬರೆದವರು 'ಕುವೆಂಪು' ಅವರು. ಮೈಸೂರಿನ ಕಾವ್ಯಾಲಯದ ಕನ್ನಡ ಕಾವ್ಯಮಾಲೆ ೬೦. ಕ್ರೌ. ಅ. ೧೪+೭೬ ಪುಟಗಳು. ಬೆಲೆ ೧—೮—೦.

೨೧೯. **ವಸ್ತ್ರಸ್ವಾವಲಂಬನ ಮಾರ್ಗದರ್ಶಿಕೆ:—**(ಖಾದಿಯ ಉತ್ಪಾದನಕ್ಕೆ ಸಂಬಂಧಿಸಿದ ಗ್ರಂಥ.) ಮೂಲ ಹಿಂದೀ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದವರು: ಶ್ರೀಮಾನ್ ಶ್ರೀ. ರಾ. ಸಾವುಕಾರ ಅವರು. ಪ್ರಕಾಶಕರು ಶ್ರೀ. ರಾಮಚಂದ್ರ ವಡವಿ, ಮಂತ್ರಿ ಕರ್ನಾಟಕ ಚರಕಾಸಂಘದ ಕಚೇರಿ, ಹಳೆಯ ಹುಬ್ಬಳ್ಳಿ. ಕ್ರೌ. ಅ. ೬೦ ಪುಟಗಳು. ಬೆಲೆ ೦—೧೦—೦.

ಇದರಲ್ಲಿ ಹತ್ತಿ-ಅರಳಿಗಳನ್ನು ಸ್ವಚ್ಛಮಾಡುವುದರಿಂದ ಮೊದಲು ಮಾಡಿ, ಅದನ್ನು ಹಿಂಜಿ ಹಂಜಿಮಾಡುವುದು, ನೂಲುವುದು, ತೋಡಿ ಚಿಟುಕು ಮಾಡುವುದು, ನೂಲಿನ ನಂಬರು ತೆಗೆಯುವುದು, ನೂಲಿನ ಶಕ್ತಿ-ಪುರಿಗಳನ್ನು ಅರಿಯುವುದು, ಗಂಜಿಮಾಡುವುದು ಇವೆಲ್ಲ ಸಂಗತಿಗಳನ್ನು ಶಾಸ್ತ್ರೀಯರೀತಿಯಿಂದ ವಿವೇಚನೆ ಮಾಡಿ ಬರೆಯಲಾಗಿದೆ. ವಸ್ತ್ರಸ್ವಾವಲಂಬಿಗಳಾಗಬೇಕೆನ್ನುವವರೆಲ್ಲರೂ ಅವಶ್ಯವಾಗಿ ಅಭ್ಯಸಿಸಬೇಕಾದ ಗ್ರಂಥ.

೨೨೦. **ವಸ್ತ್ರಸ್ವಾವಲಂಬನ ಕೈಪಿಡಿ:—** (ಖಾದಿಯ ಉತ್ಪಾದನೆಗೆ ಸಂಬಂಧಿಸಿದ ಗ್ರಂಥ). ಅನುವಾದಕರು ಮತ್ತು ಪ್ರಕಾಶಕರು ಮೇಲೆ ಬರೆದಿರುವವರೆ. ಡೆ. ಅ. ೧೦೨ ಪುಟಗಳು. ಬೆಲೆ ೧—೪—೦.

ಕೈನೂಲಿನ ಕೈನೇಗೆಯಬಟ್ಟೆಯ ತಂತ್ರಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಪ್ರಶ್ನೋತ್ತರ ರೂಪದಿಂದ ವಿವರವಾಗಿ ಇದರಲ್ಲಿ ವಿವರಿಸಲಾಗಿದೆ. ತುಂಬ ಉಪಯುಕ್ತವಾದ ಪುಸ್ತಕ.

೨೨೧. **ಸಂಘಟನೆಯ ಗುಟ್ಟು** (ವಿಚಾರ ಪ್ರಚಾರಾತ್ಮಕ ಗ್ರಂಥ). ಬರೆದವರು ಡಾ. ಜಿ. ಸು. ಹರಡೀಕರರು. ಪ್ರಕಾಶಕರು ಶ್ರೀ. ಶಂ. ಬಾ. ಮನಗೂಳಿ ಆದರ್ಶ ಮುದ್ರಕ, ದಾಜೀಬಾನಪೇಟೆ ಹುಬ್ಬಳ್ಳಿ. ಕ್ರೌ. ಅ. ೬೨ ಪುಟಗಳು; ಬೆಲೆ ೦–೧೨–೦.

ಇಂದು ನಮ್ಮ ನಾಡಿನ ಗತಿಗೆ ಏನಾದರೂ ಆವಶ್ಯಕತೆಯಿದ್ದರೆ ಅದು ಸಂಘಟನೆ. ನಮ್ಮ ಸಾಮಾಜಿಕ ರೋಗಗಳಿಗೆಲ್ಲ ಒಂದೆ ಒಂದು ರಾಮಬಾಣದಂತಹ ಔಷಧವಿದ್ದಾಗಿರುವುದೆಂದರೆ ಅದು ನಮ್ಮಲ್ಲಿಯ ಸಂಘಟನೆ. ಇಂತ ಸಂಘಟನೆಯುಂಟಾಗಬೇಕಾದರೆ ಸಮಾಜದಲ್ಲಿಯ ವ್ಯಕ್ತಿಗಳು ಸಂಸ್ಥೆಗಳೂ ಯಾವ ರೀತಿಯಲ್ಲಿ ತಂತಮ್ಮ ಕಾರ್ಯಗಳನ್ನು ನಡಾಯಿಸುತ್ತಿರಬೇಕೆಂಬುದರ ವಿವರಣೆ ಈ ಚಿಕ್ಕ ಪುಸ್ತಿಕೆಯಲ್ಲಿ ಇದೆ. ಸಾಮಾಜಿಕ ಕಾರ್ಯಕರ್ತರಲ್ಲಿ ಈ ಪುಸ್ತಕ ಕೈಪಿಡಿಯಂತಿದೆ.

೨೨೨. **ಪ್ರತಿಜ್ಞೆ** (ಅನಾದಿತ ಕಾದಂಬರಿ). ಮೂಲ ಹಿಂದೀ ಲೇಖಕರು: ಪ್ರೇಮಚಂದರು. ಅನುವಾದಕರು ಶ್ರೀ. ರಾಮಲಿಂಗಯ್ಯನವರು. ಪ್ರಕಾಶಕರು: ವಸಂತ ಮಾಲಿಕೆ, ವಸಂತ ಪ್ರೆಸ್ ಮಂಡಲಿ, ಬೆಸೆಂಟ್ ಬಾಲಿಕಾ ಪಾಠಶಾಲೆ ಮಂಗಳೂರು. ಕ್ರೌ. ಅ. ೧೭೪ ಪುಟಗಳು. ಬೆಲೆ ೧–೬–೦.

೨೨೩. **ಕಿರಣ** (ಲೇಖನ ಸಂಚಯನ). ಸಂಪಾದಕರು: ಶ್ರೀ. ವಿರೇಶ ಅಮೃತ ಬಿ.ಎ., ಬಿ. ಟಿ. ಮತ್ತು ಶ್ರೀ. ಚೆನ್ನಬಸವಲಿಂಗಪ್ಪ ಪಾವಟೆ ಧಾರವಾಡ ಅವರು. ಪ್ರಕಾಶಕರು: ಶ್ರೀ. ಎಸ್. ಬಿ. ಪಾವಟೆ, ಪದಬಯಲು, ಹುಬ್ಬಳ್ಳಿ. ಕ್ರೌ. ಅ. ೧೫೨ ಪುಟಗಳು. ಬೆಲೆ ೧–೮–೦.

೨೨೪. **ಗ್ರಂಥವಿಜ್ಞಾನ** (ಗ್ರಂಥಾಲಯ ವಿಷಯಕ ಗ್ರಂಥ). ಸಂಪಾದಕರು: ಶ್ರೀ. ಸಾಂಗಲಿ ವೆಂಕಟೇಶ, ಮುಂಬಯಿ. ಪ್ರಕಾಶಕರು: ಕರ್ನಾಟಕ ಸಂಘ, ಸಂಯುಗಿರಿ ಸ್ಟ್ರೀಟ್, ಮುಂಬೈ ೪. ಕ್ರೌ. ಅ. ೧೫೪ ಪುಟಗಳು. ಬೆಲೆ ೨–೦–೦.

೨೨೫. **ಶಕ್ತಿ** (ಕೈಬರಹದ ಪತ್ರಿಕೆ) ಶಿಗ್ಗಾಂವಿಯ ಕನ್ನಡ ಸಂಘದಿಂದ ನಡೆಯುವುದು. ಸಂಪಾದಕರು ಶ್ರೀಮಾನ್ ವೀರ ಸಿಗ್ಗಾಂವಿ, ಸಂಚಾಲಕ ಶ್ರೀ. ದತ್ತಾತ್ರೇಯ ಲಕರ್ಣಿ. ಫೂ. ಫ್ಲೋ. ೧೨ ಪುಟಗಳು.

ನಮ್ಮ ಕಡೆಗೆ ಬಂದುದಿದು ೧ನೆಯ ಸಂಪುಟದ ೩ನೆಯ ಸಂಚಿಕೆ. ಕವಿತೆಗಳು, ಕತೆ-ಪ್ರಬಂಧ-ಪ್ರಾಸಂಗಿಕ ಲೇಖನಗಳು ಇದರಲ್ಲಿ ಬಂದಿವೆ. ಉತ್ಸಾಹಿ ತರುಣರು ಉತ್ಸಾಹದಿಂದಲೆ ಇದನ್ನು ಪ್ರಾರಂಭಿಸಿದ್ದಾರೆ. ಸದ್ಯ ಸೈಕ್ಲೊಸ್ಟೈಲ್ ಯಂತ್ರದ ನೆರವಿನಿಂದ ಹೊರಡುತ್ತಿರುವ ಈ ಪತ್ರಿಕೆ, ಬೇಗನೆ ಅಚ್ಚಾಗಿ ಕನ್ನಡಿಗರೆಲ್ಲರ ಕೈಗೂ ಸಿಕ್ಕುವಂತಾಗಲಿ.

೨೨೬. **ಗಾಂಧೀ ದರ್ಶನ** (ಸಮಾಜ ಮಾಸಪತ್ರಿಕೆಯ ವಿಶೇಷ ಸಂಚಿಕೆ). ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ಭಾಲಚಂದ್ರ ಘಾಣೇಕರರು, ಸಮಾಜ ಕಾರ್ಯಾಲಯ, ಧಾರವಾಡ. ಡೆ. ಅ. ೪೦ ಪುಟಗಳು, ಬೆಲೆ ೧–೦–೦.



ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿ. ಧಾರವಾಡ

ಹೆಡ್ ಆಫೀಸ್ ಧಾರವಾಡ

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಭರದಿಂದ ಬೆಳೆಯುತ್ತಿರುವ ಈ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ಮ್ಯಾನೇಜಿಂಗ್ ಡಾಯರೆಕ್ಟರ್
ಎ. ಎಸ್. ಕಿಣಿ

ಮ್ಯಾನೇಜರ್
ಎಮ್. ಗೋವರ್ಧನರಾವ

ರೀಟಾ: ತಲೆಯ ಕೂದಲನ್ನು ಬೆಳೆಸುವುದು.

ರೀಟಾ ಮೆದುಳಿಗೆ ಶಕ್ತಿಯನ್ನು ಕೊಟ್ಟು, ಮಿರುಮಿರು ನೀಳವಾದ ಕೂದಲನ್ನು ಬೆಳಸಲು ಅದ್ಭುತವಾದ ಟೋನಿಕ್.

ರೀ ಟಾ

ತಲೆಯ ಕೂದಲು ಉದುರುವುದು, ನೆರೆಯುವುದು, ಹೊಟ್ಟು, ಉದುರುವುದು, ಪಟ್ಟೆತಲೆ, ಹೇನಿನ ಬಾಧೆ, ಇವೇ ಮೊದಲಾದ ತಲೆಯ ಕೂದಲಿಗೆ ಸಂಬಂಧಿಸಿದ ಸಮಸ್ತ ವ್ಯಾಧಿಗಳಿಗೂ ರೀಟಾ ಅತ್ಯುತ್ತಮವಾದ ಗುಣಕಾರಿ.

ಈಗಾಗಲೆ ಸಾವಿರಾರು ಜನ ಉಪಯೋಗಿಸಿ ಗುಣವನ್ನು ಹೊಂದಿದ್ದಾರೆ. ನೀವು ಕೂಡ ಇಂದಿನಿಂದಲೆ ರೀಟಾವನ್ನು ಉಪಯೋಗಿಸಿರಿ.

RITA
HAIR TONIC

ರೀಟಾ ಹಿಂದುಸ್ತಾನದಲ್ಲೆಲ್ಲಾ ದೊರಕುವುದು. ಬೆಲೆ:— ಸೀಸೆ ಗಕ್ಕೆ ೧೫ ಆಣೆ.

Printed by Mr. V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar.—879-48.